ನವೋದಯ ಕಾದಂಬರಿಗಳಲ್ಲಿ ಪಯಣದ ಪರಿಕಲ್ಪನೆ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ವೆಂಕಟೇಶ್ ಬಿ.ಟಿ.

ಮಾರ್ಗದರ್ಶಕರು

ಡಾ.ರಹಮತ್ ತರೀಕೆರೆ

ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೪

ನವೋದಯ ಕಾದಂಬರಿಗಳಲ್ಲಿ ಪಯಣದ ಪರಿಕಲ್ಪನೆ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ವೆಂಕಟೇಶ್ ಬಿ.ಟಿ.

ಮಾರ್ಗದರ್ಶಕರು
ಡಾ.ರಹಮತ್ ತರೀಕೆರೆ
ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೫

ಘೋಷಣಾ ಪತ್ರ

ಡಾ.ರಹಮತ್ ತರೀಕೆರೆ ಅವರ ಮಾರ್ಗದರ್ಶನದಲ್ಲಿ **ನವೋದಯ ಕಾದಂಬರಿಗಳಲ್ಲಿ ಪಯಣದ ಪರಿಕಲ್ಪನೆ** ಎಂಬ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ **ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಸಾದರಪಡಿಸುತ್ತಿದ್ದೇನೆ. ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಗೊಳಿಸಿಲ್ಲ. ಇದು ನನ್ನ ಸ್ವತಂತ್ರವಾದ ಸಂಶೋಧನ ಅಧ್ಯಯನವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

Venkatesh BT.

ವೆಂಕಟೇಶ್ ಬಿ.ಟಿ.
ಸಂಶೋಧಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ : 06/8/18

ಮಾರ್ಗದರ್ಶಕರ ಪ್ರಮಾಣ ಪತ್ರ

ವೆಂಕಟೇಶ್ ಬಿ.ಟಿ. ಅವರು ನನ್ನ ಮಾರ್ಗದರ್ಶನದಲ್ಲಿ **ನವೋದಯ ಕಾದಂಬರಿಗಳಲ್ಲಿ ಪಯಣದ ಪರಿಕಲ್ಪನೆ** ಎಂಬ ಸಂಶೋಧನ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಪಿಎಚ್.ಡಿ.ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ರಹಮತ್ ತರೀಕೆರೆ
ಮಾರ್ಗದರ್ಶಕರು ಹಾಗೂ ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ : 6/8/15

ಪರಿವಿಡಿ

ಅಧ್ಯಾಯ ಒಂದು

ಪ್ರಸ್ತಾವನೆ

೧.೧. ಪೀಠಿಕೆ

೧.೨. ಅಧ್ಯಯನದ ಉದ್ದೇಶ ಮತ್ತು ಮಹತ್ವ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ವಿಧಾನ

ಅಧ್ಯಾಯ ಒಂದು

ಪ್ರಸ್ತಾವನೆ

೧.೧. ಪೀಠಿಕೆ

ಆಧುನಿಕ ಕನ್ನಡ ಸಾಹಿತ್ಯವು ಕಾವ್ಯ, ಸಣ್ಣಕಥೆ, ನಾಟಕ, ಲಲಿತ ಪ್ರಬಂಧ, ಪ್ರವಾಸ ಕಥನ, ಸಾಹಿತ್ಯ ವಿಮರ್ಶೆ ಮುಂತಾದ ಹಲವಾರು ಪ್ರಕಾರಗಳಿಂದ ಕೂಡಿದ್ದು, ಭಾರತೀಯ ಭಾಷೆಗಳಲ್ಲೇ ಸಮೃದ್ಧವಾದ ಸಾಹಿತ್ಯ ಸೃಷ್ಟಿಗೆ ಹೆಸರಾಗಿದೆ. ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಓದುಗರ ನೆಲೆಯಿಂದ ಜನಪ್ರಿಯವೂ, ಚಾರಿತ್ರಿಕವಾಗಿ ಮಹತ್ವವೂ ಸಾಂಸ್ಕೃತಿಕವಾಗಿ ಸೂಕ್ಷ್ಮವೂ ಆದ ಪ್ರಕಾರಗಳಲ್ಲಿ ಕಾದಂಬರಿಯೂ ಒಂದಾಗಿದೆ. ಆಧುನಿಕ ಸಾಹಿತ್ಯದ ಮುಖ್ಯ ಪಂಥಗಳಾದ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಕಾಲಘಟ್ಟದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆದ ಪ್ರಕಾರಗಳಲ್ಲಿ ಕಾದಂಬರಿಯೂ ಒಂದು. ಗುಲ್ವಾಡಿ ವೆಂಕಟರಾವ್, ಕೆರೂರು ವಾಸುದೇವಾಚಾರ್ಯ, ಎಂ.ಎಸ್.ಪುಟ್ಟಣ್ಣ, ಕುವೆಂಪು, ಶಿವರಾಮ ಕಾರಂತ, ಮಾಸ್ತಿ, ರಾವಬಹದ್ದೂರ ಮುಂತಾದ ಕಾದಂಬರಿಕಾರರಿಂದ ಆರಂಭಿಸಿ, ನಂತರ ಬಂದ ತ್ರಿವೇಣಿ, ನಿರಂಜನ, ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ಶ್ರೀಕೃಷ್ಣ ಆಲನಹಳ್ಳಿ, ಸಾರಾ ಅಬೂಬಕರ್, ಪೂರ್ಣಚಂದ್ರ ತೇಜಸ್ವಿ, ದೇವನೂರ ಮಹಾದೇವ ಮತ್ತು ಶ್ರೀನಿವಾಸ ವೈದ್ಯ ಮುಂತಾದವರ ಮೂಲಕ ಕನ್ನಡ ಕಾದಂಬರಿ ಲೋಕವು ತನ್ನ ಎತ್ತರವನ್ನು ಮುಟ್ಟಿದೆ.

ಕಾವ್ಯಕ್ಕೆ ಹೋಲಿಸಿದರೆ, ಕಾದಂಬರಿಯು ಮಾನವ ಸಮಾಜದ ಹಲವಾರು ಸಂಗತಿಗಳನ್ನು ಒಳಗೊಳ್ಳುವ ಪ್ರಕಾರವಾಗಿದೆ. ಈ ಅರ್ಥದಲ್ಲಿ ಇದನ್ನು ಸಮಾಜದಲ್ಲಿ ನಡೆಯುವ ಚಾರಿತ್ರಿಕ ಪಲ್ಲಟಗಳನ್ನು ಪ್ರತಿಬಿಂಬಿಸುವ ಕನ್ನಡಿ ಎನ್ನಬಹುದು. ಕನ್ನಡದ ಅತ್ಯುತ್ತಮ ಕಾದಂಬರಿಗಳಲ್ಲಿ ಜನ ಸಮುದಾಯಗಳ ಬದುಕಿನ ಸೂಕ್ಷ್ಮ ಚಿತ್ರಗಳಿವೆ. ಮಾನವ ಬದುಕಿನ ಅರ್ಥಶೋಧದ ಕೆಲಸವನ್ನು ಕನ್ನಡದಲ್ಲಿ ಸಣ್ಣಕತೆ ಹೊರತುಪಡಿಸಿದರೆ, ಸಮರ್ಥವಾಗಿ ಮಾಡಿರುವ ಪ್ರಕಾರವೆಂದರೆ ಕಾದಂಬರಿ ಎನ್ನಬಹುದು. ಆರಂಭದ ಘಟ್ಟದಲ್ಲಿ ಕಾದಂಬರಿ ರಚಿಸಿದ ಗುಲ್ವಾಡಿ ವೆಂಕಟರಾಯ,

ಕೆರೂರು ವಾಸುದೇವಾಚಾರ್ಯ, ಎಂ.ಎಸ್.ಪುಟ್ಟಣ್ಣ ಅವರಿಂದ ಆರಂಭಿಸಿ, ನಂತರ ಬಂದ ಕುವೆಂಪು, ಶಿವರಾಮ ಕಾರಂತ, ಮಾಸ್ತಿ, ರಾವಬಹದ್ದೂರ ಮುಂತಾದ ಕಾದಂಬರಿಕಾರರು, ಬದುಕಿನ ವಿವಿಧ ಮುಖಗಳನ್ನು ಅನಾವರಣ ಮಾಡುವ ಕಾದಂಬರಿಗಳನ್ನು ರಚಿಸಿದರು. ಈ ಕಾದಂಬರಿಗಳು ಶೋಷಣೆ, ಪ್ರೇಮ, ವ್ಯಕ್ತಿಯ ಸಾಧನೆ, ಯುದ್ಧ, ಸಾಮಾಜಿಕ ಸಂಘರ್ಷ, ರಾಜಕೀಯ ಏಳುಬೀಳು, ಸಾವು, ಆಧ್ಯಾತ್ಮ ಮುಂತಾದ ವಿವಿಧ ವಸ್ತುಗಳ ಮೇಲೆ ರಚನೆಯಾಗಿವೆ. ಮಹತ್ವದ ಕಾದಂಬರಿಗಳು ಆಧರಿಸಿರುವ ವಸ್ತುಗಳು ಮತ್ತು ಅವು ಒಳಗೊಂಡಿರುವ ವಿವಿಧ ಆಯಾಮಗಳು, ಬಹುಮುಖಿಯಾಗಿವೆ. ಅವುಗಳಲ್ಲಿ ಪಯಣದ ಆಯಾಮವೂ ಒಂದು.

ಇಂತಹ ಸಮೃದ್ಧ ಹಿನ್ನೆಲೆ ಮತ್ತು ಪರಂಪರೆ ಇರುವ ಕಾದಂಬರಿ ಪ್ರಕಾರವು ಮಾನವ ಜೀವನಕ್ಕೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ನಿರ್ವಹಿಸಿರುವ ಬಗೆ ಕುತೂಹಲಕರವಾಗಿದೆ. ಇವುಗಳಲ್ಲಿ ಪಯಣದಂತಹ ಪರಿಕಲ್ಪನೆಯನ್ನು ಅದು ನಿರ್ವಹಿಸಿರುವ ಕ್ರಮವೂ ವಿಶಿಷ್ಟವಾಗಿದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪಯಣದ ಪರಿಕಲ್ಪನೆಯು ಆಯಾ ಲೇಖಕರ ತಾತ್ವಿಕ ಹಿನ್ನೆಲೆಯಿಂದ ಬೇರೆಬೇರೆ ರೂಪದಲ್ಲಿ ಶೋಧನೆಗೆ ಒಳಗಾಗಿದೆ. ಅದರಲ್ಲಿಯೂ ನವೋದಯ ಕಾದಂಬರಿಗಳಲ್ಲಿ ಪಯಣದ ಕುರಿತ ಹಲವು ವಿನ್ಯಾಸಗಳಿವೆ. ಅವುಗಳ ಹುಡುಕಾಟ ಮತ್ತು ವಿಶ್ಲೇಷಣೆಯು ಕನ್ನಡ ಕಾದಂಬರಿಗಳ ಅಧ್ಯಯನದಲ್ಲಿ ಸ್ವಾರಸ್ಯಕರ ನೋಟಗಳನ್ನು ಕಾಣಿಸಬಲ್ಲದು.

೧.೨. ಉದ್ದೇಶ ಮತ್ತು ಮಹತ್ವ

೧. ನವೋದಯ ಕಾಲಘಟ್ಟದ ಕನ್ನಡ ಕಾದಂಬರಿಗಳಲ್ಲಿ ಮೂಡಿಬಂದಿರುವ ಪಯಣದ ವಿನ್ಯಾಸಗಳನ್ನು ವಿಶ್ಲೇಷಿಸುವುದು ಪ್ರಸ್ತುತ ನಿಬಂಧದ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶ ಇಟ್ಟುಕೊಂಡು ನವೋದಯ ಕಾಲಘಟ್ಟದಲ್ಲಿ ಬರುವ ನಾಲ್ಕು ಪ್ರಮುಖ ಕಾದಂಬರಿಕಾರರ ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸಾಮಾನ್ಯವಾಗಿ ಒಂದು ಕಾದಂಬರಿಯನ್ನು ಆಧರಿಸಿ, ಅದರ ಹಲವು ಮಗ್ಗುಲುಗಳನ್ನು ಕುರಿತು ಚರ್ಚೆ ಮಾಡುವ ಸಂಶೋಧನೆಗಳು ಕನ್ನಡದಲ್ಲಿ ಹೆಚ್ಚು ನಡೆದಿವೆ. ಆದರೆ ಒಂದು ಕಾಲಘಟ್ಟದ ಕಾದಂಬರಿಗಳನ್ನು ಇಟ್ಟುಕೊಂಡು, ನಿರ್ದಿಷ್ಟ ಪರಿಕಲ್ಪನೆಯ ಮೂಲಕ ಪ್ರವೇಶಿಸಿ ಚರ್ಚೆ ಮಾಡುವ ಸಂಶೋಧನೆ ಕಡಿಮೆ ನಡೆದಿವೆ. ಈ ಹಿನ್ನೆಲೆಯಲ್ಲಿ ಪಯಣವನ್ನು ಒಂದು ಪರಿಕಲ್ಪನಾತ್ಮಕ ನೆಲೆಯಲ್ಲಿ ಪರಿಭಾವಿಸಿ ಅಧ್ಯಯನ ಮಾಡುವುದಕ್ಕೆ ಇಲ್ಲಿ ಯತ್ನಿಸಲಾಗುವುದು.

೨. ಕನ್ನಡ ಕಾದಂಬರಿಗಳಲ್ಲಿ ಪಯಣವು ಏಕರೂಪಿ ಆಯಾಮದಲ್ಲಿ ಚಿತ್ರಣಗೊಂಡಿಲ್ಲ. ಅದು ವ್ಯಕ್ತಿ ಬದುಕಿನ ಸೋಲು ಮತ್ತು ಗೆಲುವಿನ, ಸಮಾಜವೊಂದರ ಸಾಮರಸ್ಯ ಮತ್ತು ಸಂಘರ್ಷದ, ರಾಜಪ್ರಭುತ್ವವೊಂದರ ರಾಜಕೀಯ ಏರುವಿಕೆ ಮತ್ತು ಪತನದ ಆಯಾಮಗಳನ್ನು ಒಳಗೊಂಡಿದೆ. ಹೀಗೆ ಅದು ಬಹುರೂಪಿಯಾಗಿದೆ. ಪಯಣದ ಈ ಪರಿಕಲ್ಪನೆಯು

ಕಾದಂಬರಿಗಳಲ್ಲಿ ವರ್ಗದಿಂದ ವರ್ಗಕ್ಕೆ, ತಲೆಮಾರಿನಿಂದ ತಲೆಮಾರಿಗೆ, ಸಾಮಾಜಿಕ ಸ್ತರದಿಂದ ಸ್ತರಕ್ಕೆ ಹಾಗೂ ಗಂಡಿನಿಂದ ಹೆಣ್ಣಿಗೆ ಭಿನ್ನತೆಯನ್ನು ಪಡೆದಿದೆ. ಹೀಗೆ ಪಾತ್ರಗಳ ಜಾತಿ-ವರ್ಗದ, ಪುರುಷ-ಸ್ತ್ರೀಯರ, ಅಧಿಕಾರಸ್ಥರ-ಅಧಿಕಾರರಹಿತರ ಹಾಗೂ ಗ್ರಾಮ-ನಗರ ಬದುಕಿನ ಹಲವು ನೆಲೆಗಳನ್ನು ಚರ್ಚಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

೩. ಕಾದಂಬರಿಗಳಲ್ಲಿ ಪಯಣವು ವಿವಿಧ ಪಾತ್ರಗಳ ಜೀವನದಲ್ಲಿ ಒದಗಿ ಬರುವ ಬಗೆ, ಅದು ಅವರ ಅನುಭವ ಮತ್ತು ಆಲೋಚನ ಕ್ರಮದಲ್ಲಿ ಉಂಟುಮಾಡುವ ಬದಲಾವಣೆ ಮತ್ತು ತಲ್ಲಣಗಳನ್ನು ಅರಿಯುವುದು ಈ ಅಧ್ಯಯನದ ಉದ್ದೇಶವಾಗಿದೆ.

೪. ಸಾಮಾನ್ಯವಾಗಿ ಯಾವುದೇ ಪಯಣಕ್ಕೆ ಮೂರು ಆಯಾಮ ಅಥವಾ ಘಟ್ಟಗಳು ಇರುತ್ತವೆ. ಅವೆಂದರೆ ಪಯಣಕ್ಕೆ ಮಾಡಿಕೊಳ್ಳುವ ಸಿದ್ಧತೆ, ಪಯಣದ ನಡುವೆ ಹಾದಿಯಲ್ಲಾಗುವ ಅನುಭವಗಳು ಹಾಗೂ ಪಯಣ ಮುಗಿದು ಮುಟ್ಟುವ ಗುರಿ. ಈ ಮೂರು ನೆಲೆಯೊಳಗೆ ಪಯಣದ ಅನುಭವವನ್ನು ಸ್ವೀಕರಿಸುವ, ಅರಿವನ್ನು ವಿಸ್ತರಿಸಿಕೊಳ್ಳುವ ಮತ್ತು ಈ ಅನುಭವ -ಅರಿವುಗಳನ್ನು ಮರು ಮೌಲ್ಯಮಾಪನಕ್ಕೆ ಒಳಪಡಿಸುವ ಮೂರು ಹಂತಗಳಿರುತ್ತವೆ. ಈ ಹಂತಗಳನ್ನು ವಿವಿಧ ಪಾತ್ರಗಳ ಮೂಲಕ ಶೋಧಿಸುವುದು ಇಲ್ಲಿನ ಉದ್ದೇಶವಾಗಿದೆ.

೫. ಪಯಣವಿರುವುದು ಗುರಿಯನ್ನು ಮುಟ್ಟಿ ಅಲ್ಲಿ ಅನುಭವ ಪಡೆಯುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ಪಯಣದ ಪ್ರಕ್ರಿಯೆಯಲ್ಲಿ ಸಿಗುವ ಎಲ್ಲ ಹಂತದ ಅನುಭವಗಳನ್ನು ಶೋಧ ಮಾಡುವುದು ಕೂಡ ಆಗಿದೆ. ಈ ಹಿನ್ನೆಲೆಯಲ್ಲಿ ಕಾದಂಬರಿಗಳಲ್ಲಿ ಬಂದಿರುವ ಪಯಣದ ಈ ಮೂರೂ ಮಜಲುಗಳನ್ನು ವಿಶ್ಲೇಷಿಸುವುದು ಇಲ್ಲಿನ ಉದ್ದೇಶವಾಗಿದೆ.

೬. ಪಯಣ ಮಾಡುವ ಹಲವಾರು ವಿಧಾನಗಳಿವೆ. ಕಾಲ್ನಡಿಗೆ, ಕುದುರೆ ಇತ್ಯಾದಿ ಪ್ರಾಣಿಗಳ ಮೇಲೆ, ಗಾಡಿ, ಬಸ್ಸು, ರೈಲು, ವಿಮಾನ, ದೋಣಿ ಇತ್ಯಾದಿ ವಾಹನಗಳ ಮೂಲಕ ಪಯಣ ಸಾಧ್ಯವಾಗಿದೆ. ಪ್ರತಿಯೊಂದು ವಾಹನದ ಮೂಲಕ ಮಾಡುವ ಪಯಣವೂ ಒಂದು ಇನ್ನೊಂದಕ್ಕೆ ಭಿನ್ನವಾಗುತ್ತದೆ. ಪ್ರತಿ ಪಯಣದಲ್ಲಿ ಮುಖಾಮುಖಿಯಾಗುವ ಜನ, ಕಾಣುವ ದೃಶ್ಯ ಹಾಗೂ ಸಿಗುವ ಅನುಭವಗಳು ಕೂಡ ಭಿನ್ನವಾಗಿರುತ್ತವೆ. ಈ ವಿಭಿನ್ನ ಪಯಣದ ಮಾದರಿಗಳು ಮನುಷ್ಯರ ಅನುಭವಕ್ಕೆ ಒದಗಿಸುವ ವಿಶಿಷ್ಟ ತಿಳುವಳಿಕೆಯನ್ನು ಕಾದಂಬರಿಗಳು ಶೋಧಿಸಿವೆ. ಅವು ಶೋಧಿಸಿರುವ ಬಗೆಯನ್ನು ಹುಡುಕುವುದಕ್ಕೆ ಈ ಅಧ್ಯಯನವು ಯತ್ನಿಸುತ್ತದೆ.

೭. ಈ ಅಧ್ಯಯನವು ಪಯಣವನ್ನು ದಾರ್ಶನಿಕ ಪರಿಕಲ್ಪನೆಯಾಗಿಯೂ ಗ್ರಹಿಸಿದೆ. ನಮ್ಮ ಅನುಭವ, ತಿಳುವಳಿಕೆ, ಲೋಕ ನೋಡುವ ದೃಷ್ಟಿಕೋನಕ್ಕೆ ಸಂಬಂಧಿಸಿದ್ದಾಗಿದೆ. ಅದು

ಕೇವಲ ದೈಹಿಕವಲ್ಲ, ಮಾನಸಿಕವೂ ಹೌದು. ಎರಡರಲ್ಲೂ ಒಂದು ಆಂತರಿಕ ಸಂಬಂಧವಿದೆ. ಮೂಲತಃ ಪಯಣ ಲೋಕವನ್ನು ನೋಡುವ ದೃಷ್ಟಿಕೋನಕ್ಕೆ ಸಂಬಂಧಿಸಿದ್ದಾಗಿದೆ. ಆ ಕಾರಣಕ್ಕಾಗಿ ದಾರ್ಶನಿಕವಾಗಿರುವ ಪಯಣಕ್ಕೆ ಒಂದು ಆಧ್ಯಾತ್ಮಿಕ ಆಯಾಮವೂ ಇದೆ. ಕಾದಂಬರಿಗಳಲ್ಲಿ ಬರುವ ಪಯಣವನ್ನು ಕಾದಂಬರಿಗಳ ಒಂದು ಪಾತ್ರವು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ದೈಹಿಕವಾಗಿ ಚಲಿಸುವ ಸರಳ ವಿನ್ಯಾಸದಲ್ಲಿ ಮಾತ್ರ ಶೋಧನೆ ಮಾಡಿಲ್ಲ. ಪಯಣವೆಂಬುದು ವ್ಯಕ್ತಿಯ ವ್ಯಕ್ತಿತ್ವದಲ್ಲಿ ಆಂತರಿಕವಾಗಿ ಸಂಭವಿಸುವ ಬದಲಾವಣೆಗೆ ಸಂಬಂಧಿಸಿದೆ. ಇದಕ್ಕೆ ಪೂರಕವಾಗಿ ನವೋದಯ ಕಾದಂಬರಿಕಾರರು ಮೂಲತಃ ದಾರ್ಶನಿಕ ಲೇಖಕರೂ ಆಗಿದ್ದು, ಇವರ ಕಾದಂಬರಿಗಳಲ್ಲಿ ಪಯಣದ ಪರಿಕಲ್ಪನೆ ಕೇವಲ ದೈಹಿಕ ಚಲನೆಗೆ ಸಂಬಂಧಿಸಿಲ್ಲ. ಹೀಗಾಗಿ ಈ ಅಧ್ಯಯನದಲ್ಲಿ ಕಾದಂಬರಿ ಪಾತ್ರಗಳಲ್ಲಿ ದಾರ್ಶನಿಕ ವಾಗಿ, ನೈತಿಕವಾಗಿ, ಆಧ್ಯಾತ್ಮಿಕ ನೆಲೆಯಲ್ಲಿ ಸಂಭವಿಸುವ ಬದಲಾವಣೆಗಳನ್ನೂ ಚರ್ಚಿಸಲು ಯತ್ನಿಸಲಾಗಿದೆ.

೮. ಪಯಣವು ಕಾದಂಬರಿಗಳಲ್ಲಿ ವರ್ಗದ, ಸಾಮಾಜಿಕವಾದ ಮತ್ತು ಗಂಡು-ಹೆಣ್ಣಿನ ನಡುವಿನ ಸಂಘರ್ಷಾತ್ಮಕ ಸಂಬಂಧಗಳನ್ನು ಅನಾವರಣ ಮಾಡುವ ಒಂದು ನೆಪವಾಗಿ ಅಥವಾ ವಿನ್ಯಾಸವಾಗಿ ಬಂದಿದೆ. ಈ ಹಿನ್ನೆಲೆಯಲ್ಲಿ ಪಯಣದ ಮೂಲವು ಕಾದಂಬರಿಗಳಲ್ಲಿ ಅನಾವರಣಗೊಳ್ಳುವ ಬೇರೆ ಬೇರೆ ಬಗೆಯ ಸಾಮಾಜಿಕ ವ್ಯಕ್ತಿತ್ವದ ಹಾಗೂ ತಾತ್ವಿಕ ಸಂಘರ್ಷಗಳನ್ನು ಹುಡುಕುವುದಕ್ಕೆ ಯತ್ನಿಸಲಾಗಿದೆ.

೯. ಕಾದಂಬರಿಗಳಲ್ಲಿ ಪಾತ್ರಚಿತ್ರಣ, ಜೀವನಕ್ರಮ, ಚರಿತ್ರೆ ಹಾಗೂ ಮನುಷ್ಯ ಸಂಬಂಧಗಳನ್ನು ಹೇಗೆ ಅಲ್ಲಿ ನಿರ್ವಹಿಸಲಾಗಿದೆ, ನಿಸರ್ಗದ ವರ್ಣನೆಗಳು ಹೇಗೆ ಬಂದಿವೆ ಎಂಬ ಸಂಗತಿಗಳನ್ನು ಪಯಣ ಆಶಯದ ಮೂಲಕ ಪ್ರವೇಶಿಸಿ ಚರ್ಚಿಸುವುದು ಅಧ್ಯಯನದ ಆಶಯವಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ನಿಬಂಧದಲ್ಲಿ 'ನವೋದಯ ಕಾದಂಬರಿಗಳಲ್ಲಿ ಪಯಣದ ಪರಿಕಲ್ಪನೆ' ಎಂಬ ವಿಷಯದ ಆಕರಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟವಾದ ಚೌಕಟ್ಟನ್ನು ಹಾಕಿಕೊಳ್ಳಲಾಗಿದೆ. ನವೋದಯ ಕಾಲಘಟ್ಟದಲ್ಲಿ ಅನೇಕ ಕಾದಂಬರಿಕಾರರಿದ್ದು, ಪ್ರಸ್ತುತ ನಿಬಂಧದಲ್ಲಿ ಅಧ್ಯಯನದ ದೃಷ್ಟಿಯಿಂದ ನಾಲ್ಕು ಜನ ಪ್ರಮುಖ ಕಾದಂಬರಿಕಾರರ ತಲಾ ಎರಡು ಕಾದಂಬರಿಗಳನ್ನು ಆಯ್ದುಕೊಳ್ಳಲಾಗಿದೆ. ಅವೆಂದರೆ-

೧. ಕುವೆಂಪುರವರ 'ಕಾನೂರು ಹೆಗ್ಗಡಿತಿ' ಹಾಗೂ 'ಮಲೆಗಳಲ್ಲಿ ಮದುಮಗಳು'.

೨. ಶಿವರಾಮ ಕಾರಂತರ 'ಬೆಟ್ಟದ ಜೀವ' ಹಾಗೂ 'ಅಳಿದ ಮೇಲೆ'.

೩. ಮಾಸ್ತಿ ವೆಂಕಟೇಶ ಅಯ್ಯಂಗಾರರ 'ಚೆನ್ನಬಸವ ನಾಯಕ' ಹಾಗೂ 'ಚಿಕವೀರ ರಾಜೇಂದ್ರ'.

೪. ರಾವಬಹದ್ದೂರರ 'ಗ್ರಾಮಾಯಣ' ಹಾಗೂ 'ಬಿತ್ತಿ ಬೆಳೆದವರು'.

ಈ ಮೇಲ್ಕಂಡ ಕಾದಂಬರಿಕಾರರನ್ನು ಆರಿಸಿಕೊಳ್ಳಲು ಕಾರಣವೆಂದರೆ, ಇವರು ತಮ್ಮದೇ ಆದ ತಾತ್ವಿಕ ಮತ್ತು ಸಾಹಿತ್ಯಕ ನೆಲೆಗಳನ್ನು ಹೊಂದಿರುವವರು. ಕುವೆಂಪು ಕೃತಿಗಳಲ್ಲಿ ಸಾಮಾಜಿಕ ಸಂಘರ್ಷ, ಆಧ್ಯಾತ್ಮ, ಪ್ರಕೃತಿ, ಪೇಮ ವೈಚಾರಿಕತೆ ಮುಂತಾಗಿ ನಾನಾ ವಿಷಯಗಳು ವಸ್ತುವಾಗಿವೆ. ಅವರ ಸೃಜನಶೀಲತೆಯ ಮುಖ್ಯ ಜೀವಾಳ ಶೂದ್ರ ಪ್ರಜ್ಞೆಯ ವಿಚಾರವಾದ ಮತ್ತು ವೈಜ್ಞಾನಿಕ ಮನೋಭಾವ. ಶಿವರಾಮ ಕಾರಂತರ ಕಾದಂಬರಿಗಳು ಸಮಾಜ ಬದುಕಿನ ವಿವಿಧ ಮುಖಗಳನ್ನು ಪರಿಚಯಿಸುತ್ತವೆ. ಮಾಸ್ತಿಯವರ ಕೃತಿಗಳಲ್ಲಿ ನೈತಿಕ ನೆಲೆಗಟ್ಟಿನಲ್ಲಿ ಜೀವನದ ಅರ್ಥಶೋಧ ಮುಖ್ಯವಾಗಿದೆ. ರಾವಬಹದ್ದೂರರ 'ಗ್ರಾಮಾಯಣ', 'ಬಿತ್ತಿ ಬೆಳೆದವರು' ಕೃತಿಗಳು ಉತ್ತರ ಕರ್ನಾಟಕದ ಜಮೀನ್ದಾರಿ ವ್ಯವಸ್ಥೆ, ಅದು ಹುಟ್ಟಿಸುವ ಕ್ರೌರ್ಯ, ಜನರ ವೇದನೆ ಹಾಗೂ ಪ್ರತಿರೋಧಗಳನ್ನು ಚಿತ್ರಿಸುತ್ತವೆ. ಹೀಗೆ ಪ್ರತಿಯೊಬ್ಬ ಕಾದಂಬರಿಕಾರರು ಭಿನ್ನ ಭಿನ್ನ ನೆಲೆಗಳಲ್ಲಿ ಕಾದಂಬರಿಯ ವಸ್ತುವಿನ ಜೊತೆಗೆ ಪಯಣದ ಪರಿಕಲ್ಪನೆಯನ್ನು ಒಂದು ವಿನ್ಯಾಸವಾಗಿ ತರುತ್ತಾರೆ. ಹೀಗಾಗಿ ಇವರ ಕಾದಂಬರಿಗಳಲ್ಲಿರುವ ಜೀವನ ದೃಷ್ಟಿಯನ್ನು ಪಯಣದ ಪರಿಕಲ್ಪನೆಯ ಜತೆಗಿಟ್ಟು ಚರ್ಚಿಸುವುದಕ್ಕೆ ಹಾಗೂ ತೌಲನಿಕವಾಗಿ ಅಧ್ಯಯನ ಮಾಡುವುದಕ್ಕೆ ಈ ನಿಬಂಧದಲ್ಲಿ ಯತ್ನಿಸಲಾಗಿದೆ.

ಮೇಲ್ಕಾಣಿಸಿದ ನಾಲ್ಕು ಕಾದಂಬರಿಕಾರರು ಚಾರಿತ್ರಿಕ ಚೌಕಟ್ಟುಗಳನ್ನು ಮೀರಿ ವರ್ತಮಾನದ ಬದುಕನ್ನು ಮತ್ತು ಬದುಕಿನೊಳಗಿರುವ ಅನೇಕ ಬಗೆಯ ತಾಕಲಾಟಗಳನ್ನು ಸಮರ್ಥವಾಗಿ ಅಭಿವ್ಯಕ್ತಿ ಮಾಡಿದವರು. ಮಾಸ್ತಿಯವರನ್ನು ಹೊರತು ಪಡಿಸಿದರೆ ಉಳಿದ ಮೂವರು ಕರ್ನಾಟಕದ ಮೂರು ಪ್ರಾದೇಶಿಕ ನೆಲೆಗಳ ಅನುಭವ ಲೋಕಗಳನ್ನು ತಮ್ಮ ಕಾದಂಬರಿಗಳಲ್ಲಿ ಚೆನ್ನಾಗಿ ದುಡಿಸಿಕೊಂಡವರು. ಈ ನಾಲ್ವರೂ ಕಾದಂಬರಿಕಾರರು ಪಾತ್ರಗಳು ತಮ್ಮ ಅಸ್ತಿತ್ವಕ್ಕಾಗಿ ಮಾಡುವ ಹೋರಾಟಗಳನ್ನು ವಾಸ್ತವವಾದಿ ನೆಲೆಯಲ್ಲಿ ಕಾಣಿಸಬಲ್ಲ ದಾರ್ಶನಿಕ ಲೇಖಕರು. ಕಾರಂತರನ್ನು ಹೊರತು ಪಡಿಸಿದರೆ ಉಳಿದ ಮೂವರು ಕಾದಂಬರಿಕಾರರು ಆಸ್ತಿ, ಸಂಪತ್ತು, ಜಾತಿ ಮತ್ತು ಅಧಿಕಾರಗಳಿಂದ ವ್ಯಕ್ತಿಗೆ ಸಿಗುವ ಅಧಿಕಾರದ ಪರಿಣಾಮವನ್ನು ಚಿತ್ರಿಸುವವರು. ಮಾಸ್ತಿಯವರಲ್ಲಿ ರಾಜಕೀಯ ಅಧಿಕಾರ, ಕುವೆಂಪುರವರಲ್ಲಿ ಸಾಮಾಜಿಕ, ಆರ್ಥಿಕ ಯಜಮಾನಿಕೆ ಮತ್ತು ರಾವಬಹದ್ದೂರರಲ್ಲಿ ಜಾತಿ, ಆಸ್ತಿ ಮತ್ತು ಕಾನೂನಿನ ಅಧಿಕಾರಗಳು, ದಮನಿತರಲ್ಲಿ ಉಂಟುಮಾಡುವ ತಲ್ಲಣಗಳ ಚಿತ್ರಣ ಮಾತ್ರ ಇಲ್ಲ; ದಮನಕ್ಕೆ ದಮನಿತರು ಪ್ರತಿಯಾಗಿ ಕೊಡುವ ಉತ್ತರದ ಆಯಾಮಗಳೂ ಇವೆ. ಈ ಎಲ್ಲ ಆಯಾಮಗಳಲ್ಲಿ ಪಯಣವು ಅನೇಕ ವಿನ್ಯಾಸಗಳಲ್ಲಿ ಪ್ರಕಟಗೊಳ್ಳುತ್ತದೆ.

೧.೪. ಅಧ್ಯಯನದ ವಿಧಾನ

೧. ಪ್ರತಿಯೊಂದು ಕಾದಂಬರಿಗಳಲ್ಲೂ ಪಯಣದ ಬೇರೆಬೇರೆ ಆಯಾಮಗಳಿವೆ. ಈ ವಿವಿಧ ಆಯಾಮಗಳು ಹೇಗೆ ಪ್ರಕಟವಾಗಿವೆ ಮತ್ತು ಯಾಕೆ ಹಾಗೆ ಪ್ರಕಟವಾಗಿವೆ ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲು ಯತ್ನಿಸಲಾಗಿದೆ.

೨. ಪಯಣವು ಒಂದು ಪರಿಕಲ್ಪನಾತ್ಮಕ ಆಶಯವಾಗಿದ್ದು, ಪ್ರಸ್ತುತ ಅಧ್ಯಯನವು ಸಹಜವಾಗಿಯೇ ಆಶಯ ಕೇಂದ್ರಿತವಾಗಿದೆ. ಈ ಆಶಯವನ್ನು ನಾಲ್ಕೂ ಕಾದಂಬರಿಕಾರರು ಬೇರೆಬೇರೆ ಬಗೆಯಲ್ಲಿ ನಿರ್ವಹಣೆ ಮಾಡಿದ್ದಾರೆ. ಈ ನಿರ್ವಹಣೆಯಲ್ಲಿರುವ ವಿಶಿಷ್ಟತೆಯನ್ನು ಗುರುತಿಸಲು ತೌಲನಿಕವಾಗಿ ಯತ್ನಿಸಲಾಗಿದೆ.

೩. ಪಯಣವು ಮೂಲತಃ ಒಂದು ದೈಹಿಕ ಚಲನೆಗೆ ಸಂಬಂಧಿಸಿದ ಚಟುವಟಿಕೆ. ಆದರೆ ಈ ದೈಹಿಕ ಚಲನೆಗೆ ಮಾನಸಿಕ, ತಾತ್ವಿಕ, ದಾರ್ಶನಿಕ ಗುಣಗಳೂ ಇವೆ. ಕಾದಂಬರಿಗಳಲ್ಲಿ ಪ್ರಕಟವಾಗುವ ಈ ಮಾನಸಿಕ, ತಾತ್ವಿಕ, ದಾರ್ಶನಿಕ ಗುಣಗಳನ್ನು ಮತ್ತು ಅವುಗಳ ಮೂಲಕ ವ್ಯಕ್ತವಾಗುವ ಜೀವನದೃಷ್ಟಿಗಳನ್ನು ಈ ಅಧ್ಯಯನದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ.

೪. ಕಾದಂಬರಿಗಳಲ್ಲಿ ಮೂರ್ತರೂಪದಲ್ಲಿ ಬರುವ ಪಯಣದ ವಿಶ್ಲೇಷಣೆ ಮಾಡುವ ಒಂದು ಕ್ರಮವಿದೆ. ಆದರೆ ಈ ಪಯಣಕ್ಕೆ ನೇರ ಸಂಬಂಧವಿಲ್ಲದಂತೆ ತೋರುವ ಮತ್ತು ಚೆಲ್ಲಿಕೊಂಡಿರುವಂತಹ ವಿವರಗಳಿಗೂ ಪಯಣಕ್ಕೂ ಒಂದು ಆಂತರಿಕವಾದ ಸಂಬಂಧವಿದೆ. ಈ ಹಿನ್ನೆಲೆಯಲ್ಲಿ ಕಾದಂಬರಿಗಳಲ್ಲಿ ಬರುವ ಸೂಕ್ಷ್ಮ ಮತ್ತು ಸಣ್ಣದೆಂದು ಕಾಣುವ ವಿವರಗಳ ಮೂಲಕವೂ ಪಯಣದ ಪರಿಕಲ್ಪನೆಯನ್ನು ಇಲ್ಲಿ ಚರ್ಚಿಸಲಾಗಿದೆ.

೫. ಪಯಣ ಎಂದರೆ ಗುರಿ ತಲುಪುವುದು ಮತ್ತು ತಲುಪಿದ ಗುರಿಯ ಜಾಗದಲ್ಲಿ ಪಡೆಯುವ ಅನುಭವ ಮಾತ್ರವೆಂಬ ಕಲ್ಪನೆ ಸಾಮಾನ್ಯವಾಗಿದೆ. ಆದರೆ ಪಯಣದ ಸಿದ್ಧತೆ ಮತ್ತು ಹಾದಿಯಲ್ಲಿ ಸಿಗುವ ಅನುಭವದ ವಿವರಗಳು ಗುರಿಯಷ್ಟೇ ಮುಖ್ಯವಾದವು. ಈ ಪಯಣದ ಈ ಎರಡು ಸ್ತರಗಳು ಕೊನೆಯ ಸ್ತರವಾದ ಗುರಿಯ ಜೊತೆ ಸಂಬಂಧ ಹೊಂದಿದೆ. ಆದ್ದರಿಂದ ಪಯಣದ ಸಿದ್ಧತೆ, ಪಯಣದ ಹಾದಿ, ಮುಟ್ಟುವ ಗುರಿ– ಈ ಮೂರು ಸ್ತರಗಳ ನಡುವೆ ಆಂತರಿಕವಾದ ಸಂಬಂಧವಿದೆ ಎಂಬ ಗ್ರಹಿಕೆಯಲ್ಲಿ ಇಲ್ಲಿ ಅಧ್ಯಯನ ಮಾಡಲಾಗಿದೆ.

೬. ಕಾದಂಬರಿಗಳಲ್ಲಿ ವ್ಯಕ್ತಿ, ಕುಟುಂಬ, ಊರು, ಪ್ರದೇಶ ಹಾಗೂ ರಾಜ್ಯಗಳ ಒಳಗೆ ನಡೆದಿರುವ ಪಲ್ಲಟಗಳನ್ನು ಕುರಿತು ಜಿಜ್ಞಾಸೆಯಿದೆ. ಈ ಜಿಜ್ಞಾಸೆಯು ಪಯಣದ ಭಾಗವಾಗಿ ಪ್ರಕಟವಾಗುತ್ತದೆ. ಇದನ್ನು ಗುರುತಿಸಿ ಪ್ರಸ್ತುತ ನಿಬಂಧದಲ್ಲಿ ಅಧ್ಯಯನ ಮಾಡಲಾಗಿದೆ.

೭. ಕಾದಂಬರಿಗಳಲ್ಲಿ ಪಯಣವು ಮನುಷ್ಯರ ಬೇರೆ ಬೇರೆ ಆದರ್ಶ, ಔದಾರ್ಯ, ಸಣ್ಣತನದ ಸ್ವಭಾವಗಳನ್ನು ದರ್ಶನ ಮಾಡುವುದಕ್ಕೆ ಒಂದು ನೆಪವಾಗಿ ಬರುವಂತೆ ರೂಪುಗೊಂಡಿವೆ.

ಈ ಪಯಣದ ಜೊತೆಗೆ ಜೋಡಣೆಗೊಂಡಿರುವ ಮಾನವ ಸಂಬಂಧಗಳು ಪಯಣದ ಭಾಗವಾಗಿ ಅರಳಿಕೊಳ್ಳುತ್ತವೆ. ಹಾಗೆಯೇ ಅವು ಹಿಂಸೆ ಮತ್ತು ಕ್ರೌರ್ಯಗಳಿಂದ ನಲುಗುತ್ತವೆ. ಪಯಣದ ಭಾಗವಾಗಿ ಕಾಣಿಸಿಕೊಳ್ಳುವ ಈ ಮನುಷ್ಯ ಸಂಬಂಧದ ಎರಡೂ ಮುಖಗಳನ್ನು ಗುರುತಿಸಿ ಪ್ರಸ್ತುತ ನಿಬಂಧದಲ್ಲಿ ಅಧ್ಯಯನ ಮಾಡಲಾಗಿದೆ.

೮. ಕಾದಂಬರಿಗಳಲ್ಲಿ ಪಯಣವು ಯಾಂತ್ರಿಕ ವಿವರಗಳಲ್ಲಿ ಮಾತ್ರ ಚಿತ್ರಣವಾಗಿಲ್ಲ. ಹರಳುಗಟ್ಟಿದ ವಿವಿಧ ರೂಪಕ, ಪ್ರತಿಮೆ, ಸಂಕೇತಗಳಲ್ಲಿ ಅದು ಚಿತ್ರಣಗೊಂಡಿದೆ. ಈ ಕಾರಣಕ್ಕಾಗಿಯೇ ಪಯಣವು ಕಾದಂಬರಿಗಳಲ್ಲಿ ಒಂದು ದಾರ್ಶನಿಕ ಆಯಾಮವನ್ನು ಸಹ ಪಡೆದಿದೆ. ಈ ಹಿನ್ನೆಲೆಯಲ್ಲಿ ಪಯಣವನ್ನು ಕಾದಂಬರಿಗಳಲ್ಲಿ ಬಂದಿರುವ ರೂಪಕ ಪ್ರತಿಮೆ ಸಂಕೇತಗಳ ಮೂಲಕ ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

೯. ಕಾದಂಬರಿಗಳಲ್ಲಿ ಪಯಣದ ವಿನ್ಯಾಸವು ಗ್ರಾಮ ಮತ್ತು ನಗರಗಳ ನಡುವಿನ ಸಂಚಲನಗಳಲ್ಲಿದೆ. ಈ ಸಂಚಲನದಲ್ಲಿ ಯಾರು ಪಯಣಿಸುತ್ತಿದ್ದಾರೆ, ಯಾಕಾಗಿ ಪಯಣಿಸುತ್ತಿದ್ದಾರೆ ಎಂಬ ಹಿನ್ನೆಲೆಯಿಂದ ಅದರ ನೇತ್ಯಾತ್ಮಕ ಮತ್ತು ಧನಾತ್ಮಕವಾಗಿ ಮೌಲ್ಯನಿರ್ಣಯ ಆಗುತ್ತದೆ. ಈ ಹಿನ್ನೆಲೆಯಲ್ಲಿ ಪಯಣದ ಈ ಎರಡೂ ಮುಖಗಳನ್ನು ಕಾದಂಬರಿಕಾರರು ಹೇಗೆ ನಿರ್ವಹಣೆ ಮಾಡಿದ್ದಾರೆ ಎಂದು ತಿಳಿಯುವ ವಿಧಾನವನ್ನು ಇಲ್ಲಿ ಅನುಸರಿಸಲಾಗಿದೆ.

೧೦. ಈ ಅಧ್ಯಯನದಲ್ಲಿ ಮೇಲ್ಕಾಣಿಸಿದ ನಾಲ್ಕು ಜನ ಕಾದಂಬರಿಕಾರರ ಪ್ರಾತಿನಿಧಿಕವಾದ ತಲಾ ಎರಡು ಕಾದಂಬರಿಗಳನ್ನು ಅಧ್ಯಯನಕ್ಕೆ ಪ್ರಮುಖ ಆಕರವನ್ನಾಗಿ ಇಟ್ಟುಕೊಳ್ಳಲಾಗಿದೆ. ಜತೆಗೆ ಈ ನಾಲ್ಕು ಜನ ಕಾದಂಬರಿಕಾರರ ಉಳಿದ ಕಾದಂಬರಿಗಳಲ್ಲಿ ಪಯಣದ ಆಶಯವು ಹೇಗೆ ಬಂದಿದೆ ಎಂಬುದನ್ನು ಗಮನಿಸಲಾಗಿದೆ. ಇದೇ ಸಂದರ್ಭದಲ್ಲಿ ಪಯಣದ ಆಶಯವನ್ನು ಒಳಗೊಂಡಿರುವ ಕನ್ನಡದ ಇತರೇ ಕಾದಂಬರಿಕಾರರನ್ನು ಪ್ರಾಸಂಗಿಕವಾಗಿ ಇಲ್ಲಿ ಚರ್ಚಿಸಲಾಗಿದೆ.

೧೧. ಪ್ರಸ್ತುತ ಅಧ್ಯಯನವು ಪಯಣ ಎಂಬ ಆಶಯವನ್ನು ಇಟ್ಟುಕೊಂಡು ಮಾಡಿರುವ ಆಶಯ ಪ್ರಧಾನ ಅಧ್ಯಯನವಾಗಿದೆ. ಪಯಣದ ಆಶಯವು ಕಾದಂಬರಿಗಳಲ್ಲಿ ಯಾವ ಯಾವ ರೂಪದಲ್ಲಿ ವ್ಯಕ್ತವಾಗಿದೆ ಎಂಬ ಸಂಗತಿಯನ್ನು ಅಂದರೆ, ಪಯಣದ ಆಶಯವು ಪ್ರಕಟವಾಗಿರುವ ಭಾಷಿಕ ವಿನ್ಯಾಸ, ಸಾಂಕೇತಿಕ ರೂಪಾತ್ಮಕ ವಿನ್ಯಾಸಗಳನ್ನು ಕೂಡ ಈ ಅಧ್ಯಯನದಲ್ಲಿ ಚರ್ಚೆ ಮಾಡಲಾಗಿದೆ.

೧೨. ಈ ಅಧ್ಯಯನದಲ್ಲಿ ಪಯಣದ ಆಶಯದ ಚರ್ಚೆಗೆ ಪೂರಕವಾಗಿ ಬಂದಿರುವ ಕಾದಂಬರಿ ವಿಮರ್ಶೆಗಳಲ್ಲಿನ ಅಭಿಪ್ರಾಯಗಳನ್ನು ಬಳಸಿಕೊಳ್ಳಲಾಗಿದೆ. ಈ ಮೇಲ್ಕಾಣಿಸಿದ ನಾಲ್ಕು ಜನ ಕಾದಂಬರಿಕಾರರು ನವೋದಯವೆಂದು ಕರೆಯಲಾಗುವ ಪಂಥಕ್ಕೆ ಸೇರಿದವರಾಗಿದ್ದರು

ಕೂಡ ಅದೊಂದು ತಾತ್ವಿಕವಾಗಿ ಏಕರೂಪಿಯಾದಂತಹ ಒಂದು ಸಾಹಿತ್ಯಕ ಪಂಥವಲ್ಲ. ಮೇಲ್ಕಾಣಿಸಿದ ನಾಲ್ಕು ಜನ ಕಾದಂಬರಿಕಾರರು ಭಿನ್ನಭಿನ್ನ ತಾತ್ವಿಕ ನೆಲೆ ಉಳ್ಳವರು; ಲೋಕದೃಷ್ಟಿಯುಳ್ಳವರು. ಈ ಹಿನ್ನೆಲೆಯಲ್ಲಿ ಪಯಣದ ಪರಿಕಲ್ಪನೆಯೂ ಈ ಮೇಲ್ಕಾಣಿಸಿದ ನಾಲ್ಕು ಕಾದಂಬರಿಕಾರರಲ್ಲಿ ಹೇಗೆ ಭಿನ್ನ ಭಿನ್ನವಾಗಿ ಪ್ರಕಟವಾಗಿದೆ ಎಂಬುದನ್ನು ತೌಲನಿಕವಾಗಿ ಅಧ್ಯಯನ ಮಾಡಲು ಯತ್ನಿಸಲಾಗಿದೆ.

ಅಧ್ಯಾಯ ಎರಡು

ಪಯಣ ಪರಿಕಲ್ಪನೆ: ತಾತ್ವಿಕ ಚರ್ಚೆ

ಅಧ್ಯಾಯ ಎರಡು

ಪಯಣ ಪರಿಕಲ್ಪನೆ: ತಾತ್ವಿಕ ಚರ್ಚೆ

೧

ಖಗೋಳ ವಿಜ್ಞಾನವು ನಾವು ವಾಸಿಸುತ್ತಿರುವ ಭೂಮಿ ಕೂಡ ಸ್ವತಃ ತನ್ನ ಅಕ್ಷದ ಸುತ್ತ ಹಾಗೂ ಸೂರ್ಯನ ಸುತ್ತ ತಿರುಗುವ ಕೆಲಸವನ್ನು ಮಾಡುತ್ತಿದೆ. ನಮ್ಮ ಭೂಗ್ರಹವನ್ನು ಒಳಗೊಂಡಂತೆ ಇಡೀ ಬ್ರಹ್ಮಾಂಡವೇ ದೊಡ್ಡದೊಂದು ಪಯಣದಲ್ಲಿ ತೊಡಗಿದೆ ಎಂಬ ಕಥನವನ್ನು ನಮಗೆ ಕಟ್ಟಿಕೊಟ್ಟಿದೆ. ಈ ಅರ್ಥದಲ್ಲಿ ಲೋಕಸೃಷ್ಟಿಯ ಒಳಗಡೆಯೇ ಪಯಣವು ಸಹಜ ಲಯವಾಗಿ ಹುದುಗಿದ ಹಾಗೇ ಕಾಣುತ್ತದೆ. ಉದಾಹರಣೆಗೆ, ಬ್ರಹ್ಮಾಂಡದ ಸೃಷ್ಟಿಯಲ್ಲಿ ಸೂರ್ಯನೆಂಬ ನಕ್ಷತ್ರದ ಸುತ್ತ ಗ್ರಹಗಳು ತಿರುಗುವುದು, ಗ್ರಹಗಳ ಸುತ್ತ ಉಪಗ್ರಹಗಳು ಸುತ್ತುವುದು, ಗೆಲಾಕ್ಸಿಯ ಒಳಗೆ ನಕ್ಷತ್ರ, ಗ್ರಹ, ಉಪಗ್ರಹಗಳು ಕೂಡಿದ ಅನೇಕ 'ಸೂರ್ಯಸಂಸಾರ'ಗಳು ಸುತ್ತುವುದು. ಆದರೆ ಈ ಮಹಾಪಯಣವು ಎಲ್ಲಿಗೆ ಮತ್ತು ಯಾಕಾಗಿ ಎಂಬುದರ ಕುರಿತ ಸಂಗತಿಗಳು ವಿಜ್ಞಾನಕ್ಕೂ ನಿಗೂಢವಾಗಿಯೇ ಇವೆ.

ಭೂಮಿಯ ಮೇಲೆ ನಡೆದ ಕೋಟ್ಯಂತರ ವರ್ಷಗಳ ವಿದ್ಯಮಾನಗಳನ್ನು ಗಮನಿಸಿ ಜೀವಶಾಸ್ತ್ರಜ್ಞರು ಇನ್ನೊಂದು ಜೀವವಿಕಾಸದ ಮಹಾಪಯಣದ ಕಥನವನ್ನು ಕಟ್ಟಿಕೊಟ್ಟಿದ್ದಾರೆ. ಅವರ ಪ್ರಕಾರ, ಯಾವ ಜೀವಿಗಳೂ ಇಲ್ಲದ ಒಂದು ಕಾಲಘಟ್ಟದಲ್ಲಿ ಪ್ರಪ್ರಥಮವಾಗಿ ಒಂದು ಸೂಕ್ಷ್ಮಾಣು ಜೀವಿ ಹುಟ್ಟಿತು. ಮುಂದೆ ಅದು ವಿಕಾಸವನ್ನು ಪಡೆಯುತ್ತಾ ಬೇರೆಬೇರೆ ರೂಪಗಳನ್ನು ಧಾರಣೆ ಮಾಡುತ್ತಾ ಹೋಯಿತು. ಇದರ ಫಲವಾಗಿ ಈ ಭೂಮಿ ಕಂಡ ಕ್ರಿಮಿ, ಕೀಟ, ಪಕ್ಷಿ, ಪ್ರಾಣಿ, ಮನುಷ್ಯರೆಲ್ಲರ ಜನ್ಮವಾಯಿತು. ಈ ಜೀವಿಗಳು ವಿಕಾಸದ ಹಾದಿಯಲ್ಲಿ ಮಹಾಪಯಣವನ್ನು ಮಾಡಿದವು. ಈಗ ನಮ್ಮ ಎದುರಿಗಿರುವ ಮತ್ತು ನಶಿಸಿಹೋಗಿರುವ ಕೀಟ, ಸಸ್ಯ, ಪ್ರಾಣಿ, ಪಕ್ಷಿ, ಮನುಷ್ಯ ಜೀವಿಗಳೆಲ್ಲವೂ ಈ ಮಹಾಪಯಣದ ಪ್ರತಿಫಲ ಎಂಬುದೇ ಆ ಕಥನವಾಗಿದೆ. ಈ ಜೀವವಿಕಾಸದ ಪಯಣದಲ್ಲಿ ಮನುಷ್ಯ ಜೀವಿಗಳು ಯಾವುದೊ ಕಾಲಘಟ್ಟದಲ್ಲಿ ಪ್ರವೇಶ ಮಾಡಿ ಅಲ್ಲಿಂದ ಈ ಮಹಾಪಯಣವನ್ನು ಸೇರಿಕೊಂಡಿದ್ದಾರೆ. ಇವತ್ತಿಗೂ ಈ ಪಯಣವು ಬೇರೆ

ಬಗೆಯಲ್ಲಿ ಮುಂದುವರೆದಿದೆ. ಅಂದರೆ ಪಯಣದ ಪ್ರಕ್ರಿಯೆಯ ನೆರವಿಲ್ಲದೆ ಈ ಭೂಮಿಯ ಮೇಲಿನ ಜೀವಸೃಷ್ಟಿಯನ್ನು ಹಾಗೂ ಅವುಗಳ ಒಳಗೆ ನಡೆಯುತ್ತಿರುವ ನಾಶ ಮತ್ತು ಮರುಹುಟ್ಟಿನ ಪ್ರಕ್ರಿಯೆಯನ್ನು ಅರಿಯಲು ಸಾಧ್ಯವಿಲ್ಲ. ಮನುಷ್ಯರು ಉಳಿದ ಜೀವಿಗಳಿಗೆ ಹೋಲಿಸಿದರೆ ಬುದ್ಧಿವಂತ ಜೀವಿಯಾಗಿದ್ದು, ನಾಗರಿಕತೆಗಳನ್ನು ಕಟ್ಟಿದರು. ಅವರು ಗೆಡ್ಡೆ–ಗೆಣಸು ಅಗೆದು ತಿನ್ನುವ ಮತ್ತು ಮರದಿಂದ ಉದುರಿಬಿದ್ದ ಹಣ್ಣು ಹಂಪಲನ್ನು ಹೆಕ್ಕಿ ತಿನ್ನುವ ಹಂತದಿಂದ ಆರಂಭಿಸಿ, ಆಯುಧಗಳನ್ನು ಕಂಡುಹಿಡಿದು ಬೇಟೆ ಮಾಡುವ, ಉಪಕರಣವನ್ನು ಶೋಧಿಸಿ ಕೃಷಿ ಮಾಡುವ, ಹೆಚ್ಚಿನ ಉತ್ಪನ್ನವನ್ನು ಮತ್ತೊಬ್ಬರಿಗೆ ವಿನಿಮಯ ಮಾಡುವ ಮೂಲಕ ವ್ಯಾಪಾರ ಮಾಡುವ, ತಂತ್ರಜ್ಞಾನ ಬಳಸಿ ಬೃಹತ್ ಪ್ರಮಾಣದ ಉತ್ಪಾದನೆ ಮಾಡುವ ಉದ್ದಿಮೆಗಳನ್ನು ಕಟ್ಟುವ, ರಾಜ್ಯ ಮತ್ತು ಸಾಮ್ರಾಜ್ಯಗಳ ಹುಟ್ಟುಹಾಕುವ ತನಕ ಚಲಿಸಿದರು. ಬ್ರಹ್ಮಾಂಡದಲ್ಲಿ ಒಂದು ಬಗೆಯ ಪಯಣದ ಸ್ವರೂಪವಿದ್ದರೆ, ಜೀವವಿಕಾಸದ ಕಥನದಲ್ಲಿ ಮತ್ತೊಂದು ಬಗೆಯ ಪಯಣದ ಸ್ವರೂಪವಿದೆ. ಇವೆರಡಕ್ಕೆ ಹೋಲಿಸಿದರೆ ನಾಗರಿಕತೆಯ ಕಟ್ಟುವಿಕೆಯಲ್ಲಿ ಮನುಷ್ಯರು ಮಾಡಿದ ಇನ್ನೊಂದು ಬಗೆಯ ಪಯಣವಿದೆ. ಈ ಮೂರು ಬಗೆಯ ಪಯಣಗಳು ಹೊರನೋಟಕ್ಕೆ ಬೇರೆಬೇರೆಯಾಗಿದ್ದರೂ, ಆಳದಲ್ಲಿ ಪರಸ್ಪರ ಸಂಬಂಧವನ್ನು ಪಡೆದುಕೊಂಡಿವೆ.

೨

ಪಯಣವನ್ನು ಇಂಗ್ಲಿಷಿನಲ್ಲಿ 'ಜರ್ನಿ' ಎಂದೂ ತೆಲುಗಿನಲ್ಲಿ ಯಾತ್ರಮು ಎಂದೂ, ಹಿಂದಿಯಲ್ಲಿ ಪ್ರವಾಸ್ ಎಂದೂ ಕರೆಯುತ್ತಾರೆ. ಪಯಣಕ್ಕೆ ಯಾನ, ಯಾತ್ರೆ, ಪ್ರವಾಸ, ಸಂಚಾರ, ಪ್ರಸ್ಥಾನ, ಪರ್ಯಟನೆ, ಅಟನ, ವಲಸೆ, ತಿರುಗಾಟ ಮುಂತಾದ ಪರ್ಯಾಯ ಶಬ್ದಗಳು ಕನ್ನಡದಲ್ಲಿ ಬಳಕೆಯಲ್ಲಿವೆ. ಹೆಚ್ಚಿನವು ಸಂಸ್ಕೃತ ಮೂಲದವಾಗಿದ್ದು ಕೊನೆಯಲ್ಲಿರುವ 'ತಿರುಗಾಟ' ಮಾತ್ರ ಕನ್ನಡದ್ದಾಗಿದೆ. ಈ ಎಲ್ಲಾ ಶಬ್ದಗಳು ಒಂದೇ ಅರ್ಥವನ್ನು ಒಳಗೊಂಡಿಲ್ಲ. ಇವಕ್ಕೆ ಬೇರೆಬೇರೆ ಅರ್ಥಛಾಯೆಗಳಿವೆ. ನಿದರ್ಶನಕ್ಕೆ 'ಯಾತ್ರೆ'ಯಲ್ಲಿ ಭಕ್ತರಾದವರು ತೀರ್ಥಕ್ಷೇತ್ರಗಳಿಗೆ ಹೋಗುವ ಧಾರ್ಮಿಕ ಪಯಣದ ಆಯಾಮವಿದೆ. 'ಯಾನ' ಶಬ್ದವು ಒಂದು ಬಗೆಯ ಆಧ್ಯಾತ್ಮಿಕ, ಯೋಗಿಕ ಸಾಧನೆಯ ವಿಭಿನ್ನ ಹಂತಗಳನ್ನು ಹಾದು ಪರಿಪೂರ್ಣ ಸ್ಥಿತಿಗೆ ಹೋಗುವ ಅರ್ಥವನ್ನು ಒಳಗೊಂಡಿದೆ. ಯಾನದಿಂದ ಹುಟ್ಟಿದ ವಜ್ರಯಾನ, ಹೀನಾಯಾನ, ಮಹಾಯಾನ ಪದಗಳನ್ನು ಗಮನಿಸಬೇಕು; 'ಪ್ರವಾಸ'ದಲ್ಲಿ ಹೊಸಪ್ರದೇಶಗಳಿಗೆ ಹೋಗಿ ತಿರುಗಾಡಿ ಅಲ್ಲಿಂದ ತಿಳುವಳಿಕೆ ಮತ್ತು ಮನೋರಂಜನೆಯನ್ನು ಪಡೆಯುವ ಆಯಾಮವಿದೆ. ಈ ಹಿನ್ನೆಲೆಯಲ್ಲಿ ವಿದೇಶಿ ಪ್ರವಾಸ ಎಂಬ ಪರಿಕಲ್ಪನೆಯನ್ನು ಗಮನಿಸಬಹುದು. 'ಪ್ರಸ್ಥಾನ'ವು ನಿರ್ದಿಷ್ಟ ಸ್ಥಾನದಿಂದ ಮಹತ್ತರವಾದ ಕಾರಣಕ್ಕಾಗಿ ಚಲನೆ ವ್ಯಕ್ತಿ ಅಥವಾ ಗುಂಪು ಮಾಡುವುದಾಗಿದೆ. ಉದಾಹರಣೆಗೆ, ಪಾಂಡವರು ರಾಜ್ಯ ಹಂಚಿಕೆಯಾದ ಬಳಿಕ ಹೊಸ ರಾಜಧಾನಿಯಾದ ಇಂದ್ರಪ್ರಸ್ಥಕ್ಕೆ ಪ್ರಸ್ಥಾನ ಮಾಡುವರು. ಗಣ್ಯ ವ್ಯಕ್ತಿಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಚಲಿಸುವುದಕ್ಕೂ ಪ್ರಸ್ಥಾನ ಮಾಡುವುದು

ಎನ್ನಲಾಗುತ್ತದೆ. ಪರ್ಯಟನೆಯೆನ್ನುವುದು ಸಾಮಾನ್ಯವಾಗಿ ಹೆಚ್ಚು ಮುಕ್ತವಾಗಿ ತಿರುಗುವುದಕ್ಕೆ ಬಳಕೆಯಾಗುತ್ತದೆ. ಇದನ್ನು ನಿರ್ದಿಷ್ಟ ಗುರಿಯನ್ನು ಇಟ್ಟುಕೊಂಡು ಮಾತ್ರವೇ ತಿರುಗುವುದನ್ನು ಒಪ್ಪದೆ, ಆಕರ್ಷಣೆ ಕಂಡ ಜಾಗಗಳಿಗೆ ಹೋಗುವ ಪ್ರವಾಸಗಳಿಗೂ ಅನ್ವಯಿಸಬಹುದು. ಆದರೆ ಇದು ವಾಸ್ತವವಾಗಿ ಯತಿಗಳು ಸವಣರು ಮಾಡುವ ದೇಶಾಟನೆಗೆ ಹೆಚ್ಚು ಅನ್ವಯವಾಗುತ್ತದೆ. ಇದನ್ನು ವಿಹಾರವೆಂದೂ ಕರೆಯುವರು. ಉದಾಹರಣೆಗೆ ಶಿವಕೋಟ್ಯಾಚಾರ್ಯನ 'ವಡ್ಡಾರಾಧನೆ'ಯಲ್ಲಿ ದಯಾಭದ್ರನೆಂಬ ಋಷಿಯು ಮಾಡುವ ವಿಹಾರವನ್ನು ಕತೆಯು "ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪರ್" ಎಂದು ಬಣ್ಣಿಸುತ್ತದೆ. ಯಾತ್ರೆಯು ಭಕ್ತರು ಮಾಡುವ ತಿರುಗಾಟವಾದರೆ, ವಿಹಾರವು ಧಾರ್ಮಿಕ ಗುರುಗಳು ಮಾಡುವ ಪಯಣವಾಗಿದೆ.

ಹೀಗೆ ಪಯಣಕ್ಕೆ ಪರ್ಯಾಯವಾಗಿ ಬಳಕೆಯಾಗುತ್ತಿರುವ ಪ್ರತಿ ಶಬ್ದವೂ ತನ್ನದೇ ಆದ ಅರ್ಥಛಾಯೆಯನ್ನು ಪಡೆದಿದೆ. ಈ ನಿಬಂಧದ ಶೀರ್ಷಿಕೆಯಲ್ಲಿ ಬಳಕೆಯಾಗಿರುವ 'ಪಯಣ' ಎಂಬ ಶಬ್ದವು ಮೂಲತಃ ಸಂಸ್ಕೃತದ ಪ್ರಯಾಣದ ತದ್ಭವವಾಗಿದೆ. ಪಯಣವೆನ್ನುವುದಕ್ಕೆ ಲಗತ್ತಾಗಿ ಪಥ, ಪಥಿಕರು, ಚಲನೆ, ಹಾದಿ, ಗುರಿ, ಮಾರ್ಗದರ್ಶಕ ಮುಂತಾದ ಸಂಗತಿಗಳು ಬರುತ್ತವೆ. ಇವೆಲ್ಲವೂ ಒಟ್ಟು ಪಯಣದ ಭಾಗವಾಗಿವೆ.

೩

ಸರಳ ಅರ್ಥದಲ್ಲಿ 'ಪಯಣ'ವೆಂದರೆ ಭೌತಿಕವಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಜೀವಿಗಳು ಮಾಡುವ ಚಲನೆ ಎಂದು ಹೇಳಬಹುದು. ಆದರೆ ಸೂಕ್ಷ್ಮವಾಗಿ ವಿಚಾರ ಮಾಡಿದರೆ ಇದು ಇಷ್ಟು ಸರಳವಾದ ಪರಿಕಲ್ಪನೆಯಾಗಿಲ್ಲ; ಬದಲಾಗಿ ಇದು ವಿಶಾಲವೂ ಗಹನವೂ ಆದ ತಾತ್ವಿಕ ಅರ್ಥಗಳುಳ್ಳ ಪರಿಕಲ್ಪನೆಯಾಗಿದೆ ಎಂದು ಅನಿಸುವುದು. ಇದರ ಹಲವು ಆಯಾಮಗಳನ್ನು ಹೀಗೆ ವಿಂಗಡಿಸಬಹುದಾಗಿದೆ. ೧. ಜೈವಿಕ ಅಥವಾ ಜೀವವಿಕಾಸದ ಪಯಣ ೨. ಚಾರಿತ್ರಿಕ ಅಥವಾ ನಾಗರಿಕತೆಯ ಪಯಣ. ೩. ಭೌತಿಕ ಅಥವಾ ದೈಹಿಕ ಪಯಣ ೪. ಮಾನಸಿಕ ಅಥವಾ ನೆನಪುಗಳಿಗೆ ಹೋಗುವ ಪಯಣ ೫. ಆಧ್ಯಾತ್ಮಿಕ ಅಥವಾ ಆಲೋಚನ ಕ್ರಮದಲ್ಲಾಗುವ ಪಲ್ಲಟದ ಪಯಣ. ಇದನ್ನು ಸ್ಥೂಲವಾಗಿ ಹೀಗೆ ವಿವರಿಸಬಹುದು:

೧. ಚಾರಿತ್ರಿಕ ಪಯಣವು ಜೀವವಿಕಾಸದಲ್ಲಿ ಸಕಲ ಜೀವಿಗಳು ಹಾಗೂ ಸಸ್ಯಗಳು ಸುದೀರ್ಘವಾದ ಕಾಲಮಾನದಲ್ಲಿ ಪಯಣ ಮಾಡುತ್ತಾ, ಈ ಪಯಣದಲ್ಲಿ ವಿಕಸನಗೊಳ್ಳುತ್ತಾ ಮತ್ತು ನಾಶಗೊಳ್ಳುತ್ತಾ ಸಾಗುತ್ತವೆ. ಇದೊಂದು ಸುದೀರ್ಘ ಪ್ರಕ್ರಿಯೆಯಾಗಿದೆ. ಇದರಲ್ಲಿ ಜೀವಿಗಳ ವೈಯಕ್ತಿಕ ಇಷ್ಟಾನಿಷ್ಟಗಳಿಗಿಂತ ಪರಿಸರದ ಒತ್ತಡದಲ್ಲಿ ಅನಿವಾರ್ಯವಾಗಿ ಪಡೆದುಕೊಳ್ಳುವ ರೂಪಾಂತರ ಮುಖ್ಯವಾದುದು. ಉದಾಹರಣೆಗೆ ವಾನರ ಅವಸ್ಥೆಯಿಂದ ಆಧುನಿಕ ಮನುಷ್ಯರ ತನಕ ನಡೆದಿರುವ ಪಯಣ.

೨. ಒಂದು ಪ್ರದೇಶ/ದೇಶಗಳು ಅಥವಾ ನಾಗರಿಕತೆಯು ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ಪಡೆದುಕೊಂಡು ಬಂದ ವಿವಿಧ ಅವಸ್ಥೆಗಳನ್ನು ಸೂಚಿಸುವ ಪಯಣ. ಉದಾಹರಣೆಗೆ, ದೇಶವೊಂದರ ರಾಜಕೀಯ ವ್ಯವಸ್ಥೆಯ ಚರಿತ್ರೆಯನ್ನು ಗಮನಿಸಿದರೆ, ಅದು ಆದಿಮ ಗಣವ್ಯವಸ್ಥೆ, ಪಾಳೇಪಟ್ಟು, ದೊಡ್ಡ ರಾಜಪ್ರಭುತ್ವ, ವಸಾಹತುಶಾಹಿ ಆಳ್ವಿಕೆ, ಸ್ವತಂತ್ರವಾಗಿ ದೇಶೀಯರ ಪ್ರಜಾಪ್ರಭುತ್ವ ಹೀಗೆ ಹಲವು ಅವಸ್ಥೆಗಳನ್ನು ದಾಟಿಬಂದಿರಬಹುದು. ಇದೇ ರೀತಿ ಮಲೆನಾಡು ಅಥವಾ ಕರಾವಳಿಯಂತಹ ಪ್ರದೇಶಗಳು ಹಲವು ರಾಜಕೀಯ ಸಾಮಾಜಿಕ ಆರ್ಥಿಕ ಅವಸ್ಥೆಗಳನ್ನು ದಾಟಿ ಬಂದಿರಬಹುದು. ಇದು ಆ ಪ್ರದೇಶ ಮಾಡಿದ ಪಯಣವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡ ಕಾದಂಬರಿಗಳು ಕೇವಲ ವ್ಯಕ್ತಿಗಳ ಕಥನವಲ್ಲ. ಅವು ದೇಶ/ಪ್ರದೇಶಗಳ ಚಾರಿತ್ರಿಕ ಪಯಣದ ಕಥನವೂ ಆಗಿವೆ.

೩. ಭೌತಿಕ ಚಲನೆಯಲ್ಲಿ ಮನುಷ್ಯರ ಅಥವಾ ಯಾವುದೇ ಜೀವಿಯ ದೇಹವು ಭೌತಿಕವಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಚಲಿಸುವ ಪ್ರಕ್ರಿಯೆಯಿರುತ್ತದೆ. ಈ ಭೌತಿಕ ಚಲನೆಯ ಹಿಂದೆ ಎರಡು ಬಗೆಯ ಪ್ರೇರಣೆಗಳಿರುತ್ತವೆ. ಒಂದನೆಯದು–ವ್ಯಕ್ತಿಯು ಇಷ್ಟಪಟ್ಟು ಅಥವಾ ನಿರ್ಧರಿಸಿ ಮಾಡುವ ಪಯಣ. ಮನರಂಜನೆಯ ಪ್ರವಾಸ, ತೀರ್ಥಯಾತ್ರೆಯ ಪ್ರವಾಸ ಶಿಕ್ಷಣಕ್ಕಾಗಿ ಮಾಡುವ ಪ್ರವಾಸಗಳಿರಬಹುದು. ಎರಡನೆಯದು–ಪರಿಸ್ಥಿತಿಯ ಒತ್ತಡಗಳಿಗೆ ಅನಿವಾರ್ಯವಾಗಿ ಮಾಡುವ ಪಯಣ. ಉದ್ಯೋಗ, ದೇಶವಿಭಜನೆ, ಮತೀಯ ಸಂಘರ್ಷ, ಪ್ರಾಕೃತಿಕ ವಿಕೋಪಗಳಿಗೆ ಸಿಕ್ಕು ಸಮುದಾಯಗಳು ಮಾಡುವ ವಲಸೆ ಇಂತಹುದು.

೪. ಮಾನಸಿಕ ಪಯಣವು ಮನೋವೈಜ್ಞಾನಿಕವಾದುದು. ಒಬ್ಬ ವ್ಯಕ್ತಿಯು ಅಥವಾ ಆಲೋಚನ ಶಕ್ತಿಯುಳ್ಳ ಯಾವುದೇ ಜೀವಿಯು, ಭೌತಿಕವಾಗಿ ಒಂದೆಡೆ ಚಲಿಸದೆ ಇರುವಾಗಲೂ ಅದರ ಮನಸ್ಸು ಬೇರೆಬೇರೆ ವಿಷಯಗಳಿಗೆ ಅಥವಾ ನೆನಪುಗಳಿಗೆ ತೀವ್ರವಾದ ವೇಗದಿಂದ ಚಲಿಸುವುದು. ಈ ಚಲನೆಯು ಕಾಲದ ದೃಷ್ಟಿಯಿಂದ ಹಿಂದಕ್ಕೂ ಇರಬಹುದು. ಮುಂದಕ್ಕೂ ಇರಬಹುದು. ಉದಾಹರಣೆಗೆ, ವ್ಯಕ್ತಿಗಳು ಕಾಲಮಾನದಲ್ಲಿ ಹಿಂದೆ ಹೋಗಿ ತನ್ನ ಬಾಲ್ಯ, ತಾರುಣ್ಯವನ್ನು ಮೆಲುಕು ಹಾಕಬಹುದು; ಭವಿಷ್ಯದಲ್ಲಿ ತಮಗೆ ಬರಲಿರುವ ವೈವಾಹಿಕ ಇಲ್ಲವೇ ಮುಪ್ಪಿನ ದಿನಗಳನ್ನು ಈಗಲೇ ಪರಿಕಲ್ಪಿಸಿಕೊಳ್ಳಬಹುದು; ಹಿಂದೆಲ್ಲೋ ನೋಡಿದ ಸ್ಥಳದ ಅಥವಾ ವ್ಯಕ್ತಿಯ ನೆನಪನ್ನು ಮಾಡಿಕೊಳ್ಳಬಹುದು. ಆತ್ಮಚರಿತ್ರೆಗಳು ಒಂದು ಬಗೆಯಲ್ಲಿ ಮಾನಸಿಕ ಪಯಣ ನೆನಪುಗಳ ಪ್ರತಿಫಲವಾಗಿ ಮೂಡಿವೆ.

೫. ಇದು ಅನುಭವ ಮತ್ತು ಆಲೋಚನ ಕ್ರಮಕ್ಕೆ ಸಂಬಂಧಿಸಿದುದು. ಒಂದು ಹಂತದಲ್ಲಿ ಇದ್ದ ವ್ಯಕ್ತಿಗಳ ಅನುಭವ ಲೋಕ ಮತ್ತು ದೃಷ್ಟಿಕೋನಗಳು, ದೈಹಿಕ ಮಾನಸಿಕ ಪಯಣಗಳಿಂದ ಬದಲಾಗುವುದು. ಇದನ್ನು ರೂಪಾಂತರ ಎಂದೂ ಕರೆಯಬಹುದು. ಮಲೆನಾಡಿನ ಕೃಷಿಕ ಕುಟುಂಬದಲ್ಲಿ ಹುಟ್ಟಿದ ಪುಟ್ಟಪ್ಪನವರು ಮೈಸೂರಿಗೆ ವಿದ್ಯಾಭ್ಯಾಸಕ್ಕೆಂದು ಬಂದು, ರಾಮಕೃಷ್ಣಾಶ್ರಮದ ಸಂಪರ್ಕಕ್ಕೆ ಸಿಕ್ಕು, ತಮ್ಮ ಅಪಾರ ಓದು, ಚಿಂತನೆ ಮತ್ತು ಬರೆಹಗಳ ಮೂಲಕ ಕುವೆಂಪು

ಆಗುವ ಈ ರೂಪಾಂತರ ಇದಕ್ಕೆ ಸಾಕ್ಷಿ. ಗುರುಮಾರ್ಗಗಳಲ್ಲಿ ಸಾಧಕರಾದವರು ಗುರುವಿನ ಮಾರ್ಗದರ್ಶನದಲ್ಲಿ ಸಾಧನೆ ಮಾಡುತ್ತಾ ಹೊಸ ಅರಿವು ಮತ್ತು ಅನುಭವವನ್ನು ಪಡೆಯುತ್ತಾ ಒಂದು ಉನ್ನತ ಅವಸ್ಥೆಗೆ ತಲುಪುವ ಚಲನೆಯನ್ನು ಇಲ್ಲಿ ಉದಾಹರಿಸಬಹುದು. ಇದನ್ನು ಆಧ್ಯಾತ್ಮಿಕ ಪಯಣ ಎನ್ನಬಹುದು.

ಮೇಲ್ಕಾಣಿಸಿದ ಐದು-ಆರು ಬಗೆಯ ಪಯಣಗಳು ಪರಸ್ಪರ ಬೇರೆಯಾಗಿ ಕಂಡರೂ ಅವುಗಳ ಒಳಗೆ ಒಳಸಂಬಂಧವಿದೆ. ಈ ಪಯಣಗಳು ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಮುಂತಾದ ಆಯಾಮಗಳನ್ನು ಒಳಗೊಂಡಿದೆ. ಮನುಷ್ಯ ಬದುಕನ್ನು ಕಟ್ಟಿರುವ ಸಮಾಜ, ರಾಜಕಾರಣ, ಧರ್ಮ, ಶಿಕ್ಷಣ ಇವೆಲ್ಲವುಗಳ ಜೊತೆಗೆ ಈ ಆಯಾಮಗಳಿಗೆ ಸಂಬಂಧವಿದೆ. ಇದರಲ್ಲಿ ಜನರು ನಾನಾ ಕಾರಣಗಳಿಗೆ ಮಾಡುವ ಪಯಣವನ್ನು ಗುರುತಿಸಬಹುದು. ಆರ್ಥಿಕ ನೆಲೆಯ ಪಯಣದಲ್ಲಿ ಆರ್ಥಿಕ ಚಟುವಟಿಕೆಗಳಿಗಾಗಿ ಮನುಷ್ಯರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಮಾಡುವ ಚಲನೆಯನ್ನು ಕಾಣಬಹುದು; ಕೃಷಿ ಭೂಮಿಯನ್ನು ಹುಡುಕಿಕೊಂಡು ಕೃಷಿಕರು ಫಲವತ್ತಾದ ಭೂಮಿಯ ಕಡೆಗೆ ಪಯಣ ಮಾಡಬಹುದು. ಕುಶಲಕರ್ಮಿಗಳು ತಮ್ಮ ಶ್ರಮಕ್ಕೆ, ಕಲೆಗೆ ಹೆಚ್ಚು ಬೆಲೆ, ಮೌಲ್ಯ ಸಿಗುವ ಕಡೆಗೆ ಚಲನೆ ಮಾಡಬಹುದು. ಈ ಹಿನ್ನೆಲೆಯಲ್ಲಿ ಇಂದಿಗೂ ಹಳ್ಳಿ-ನಗರಗಳ ನಡುವೆ ಸಾಗುತ್ತಿರುವ ಚಲನೆಯನ್ನು ಗಮನಿಸಬಹುದು. ಶ್ರಮಿಕರ ಚಲನೆ ದೇಶಾಂತರದ ನೆಲೆಯಲ್ಲೂ ನಡೆದಿದೆ. ವ್ಯಾಪಾರಿಗಳು ಸರಕು ಉತ್ಪಾದನೆಯಾದ ಜಾಗದಲ್ಲಿ ಸಿಗದ ಬೆಲೆ ಆ ಸರಕಿನ ಅಭಾವವಿರುವ ಪ್ರದೇಶದಲ್ಲಿ ಸಿಗುತ್ತದೆ ಎಂಬ ಕಾರಣಕ್ಕಾಗಿ ಚಲನೆ ಮಾಡುತ್ತಾರೆ. ವಲಸೆ ಅಥವಾ ಪಯಣವಿಲ್ಲದೇ ವ್ಯಾಪಾರದ ಕಲ್ಪನೆಯೇ ಸಾಧ್ಯವಿಲ್ಲ. ವ್ಯಾಪಾರಕ್ಕಾಗಿಯೇ ಮಾನವ ಕುಲವು ಭೂಮಂಡಲ ವಿಭಿನ್ನ ಪ್ರದೇಶಗಳ ಖಂಡಗಳ ಶೋಧನೆಯನ್ನು ಮಾಡಿದೆ. ಬ್ರಿಟಿಷರು ಫ್ರೆಂಚರು, ಡಚ್ಚರು ವ್ಯಾಪಾರಕ್ಕಾಗಿ ಭಾರತಕ್ಕೆ ಬಂದು ನಂತರ ಅಧಿಕಾರಕ್ಕಾಗಿ, ಅಧಿಕಾರ ವಿಸ್ತರಣೆಗಾಗಿ ಹೋರಾಟಗಳನ್ನು ನಡೆಸಿದ ಚರಿತ್ರೆಯ ಹಿಂದೆ ಪಯಣವಿದೆ. ವಸಾಹತುಶಾಹಿಯ ಕಲ್ಪನೆಯೂ ಈ ಪಯಣದ ಪ್ರಕ್ರಿಯೆಯಲ್ಲಿಯೇ ಜನ್ಮತಾಳಿದೆ.

ಪ್ರತಿಯೊಂದು ದೇಶದಲ್ಲೂ ಧಾರ್ಮಿಕ ಪ್ರವೃತ್ತಿಯ ಜನರು ತಮ್ಮತಮ್ಮ ಪವಿತ್ರ ಕ್ಷೇತ್ರಗಳಿಗೆ ಪಯಣ ಮಾಡುವುದಿದೆ. ಈ ಧಾರ್ಮಿಕ ಯಾತ್ರೆಗಳಿಗೆ ಶತಮಾನಗಳ ಇತಿಹಾಸವಿದೆ. ಕಾಶಿ, ಮೆಕ್ಕಾ, ಜೆರುಸಲೆಮ್, ವ್ಯಾಟಿಕನ್, ತಿರುಪತಿ, ಶ್ರೀಶೈಲ, ಪಂಢರಪುರದ ಯಾತ್ರೆಗಳು ಬಹಳ ದೊಡ್ಡ ಪಯಣಗಳಿಗೆ ಕಾರಣವಾಗಿವೆ. ಜನ ಜ್ಞಾನಕ್ಕಾಗಿ, ಶಿಕ್ಷಣಕ್ಕಾಗಿ, ಅನುಭವಕ್ಕಾಗಿ ಪಯಣಗಳನ್ನು ಮಾಡಿದ್ದಾರೆ. ಪ್ರಸ್ತುತ ದಿನಮಾನದಲ್ಲೂ ವಿದ್ಯಾಭ್ಯಾಸಕ್ಕಾಗಿ ಬೇರೆ ಬೇರೆ ರಾಜ್ಯ ಮತ್ತು ದೇಶಗಳಿಗೆ ಜನ ಪಯಣ ಮಾಡುವುದು ಕಂಡುಬರುತ್ತದೆ. ಈ ವಿದ್ಯಾಭ್ಯಾಸದ ಭಾಗವಾಗಿ ಪಯಣ ಮಾಡಿದ ಅನುಭವಗಳನ್ನು ಲೇಖಕರು ಬರೆಯುತ್ತಿದ್ದಾರೆ. ವಿ.ಕೃ.ಗೋಕಾಕ್, ಯು.ಆರ್.ಅನಂತಮೂರ್ತಿ, ಗಿರೀಶ್ ಕಾರ್ನಾಡರ ಆತ್ಮಚರಿತ್ರೆಗಳಲ್ಲಿ ಇದನ್ನು ಗಮನಿಸಬಹುದು. ವೃತ್ತಿಯ ಕಾರಣಕ್ಕಾಗಿ

ಮಾಡಿದ ಪಯಣದ ಅನುಭವಗಳನ್ನು ಕೃಷ್ಣಾನಂದ ಕಾಮತ್, ಹೊ.ವೆ.ಶ್ರೀನಿವಾಸಯ್ಯ ಮುಂತಾದವರ ಪ್ರವಾಸ ಕಥನಗಳಲ್ಲಿ ಕಾಣಬಹುದು.

ಗುರುಗಳನ್ನು ಹುಡುಕಿಕೊಂಡು ಆಧ್ಯಾತ್ಮಿಕ ಸಾಧನೆ ಮತ್ತು ಅರಿವಿಗಾಗಿ ಮಾಡುವ ಪಯಣದಲ್ಲಿ ನಾಥಪಂಥ, ಸೂಫಿಪಂಥಗಳು ಹುಟ್ಟಿವೆ. ಇದೆ ಗುರುಪಂಥದ ಭಾಗವಾಗಿರುವ ಮಂಟೇಸ್ವಾಮಿ ಕಾವ್ಯದಲ್ಲಿ ಬಹುದೀರ್ಘ ಪಯಣ ಮಾಡುವ ವಿವರಗಳಿವೆ. ಎಲ್ಲಾ ಗುರು-ಶಿಷ್ಯ ಪಂಥಗಳಲ್ಲಿ ಜ್ಞಾನಕ್ಕಾಗಿ ದೀರ್ಘ ಪಯಣ ಮಾಡುವುದು ಸಾಮಾನ್ಯವಾಗಿದೆ. ಗುರುಪಂಥದಲ್ಲಿ ಕಾಣಿಸುವ ರಾಮಕೃಷ್ಣ ಪರಮಹಂಸರು, ಕುವೆಂಪುರವರು ಗುರುತಿಸಿರುವಂತೆ ಬಹೂದಕ ಮತ್ತು ಕುಟೀಚಕ ಎಂಬ ಎರಡು ಪರಿಕಲ್ಪನೆ ಬಳಸುವರು. ಬಹೂದಕ ಎಂದರೆ ನೀರಿನಲ್ಲಿ ಸ್ನಾನ ಮಾಡುವ ತೀರ್ಥ ಕ್ಷೇತ್ರಗಳನ್ನು ತಿರುಗುವವರು ಎಂದರ್ಥ. ಕುಟೀಚಕ ಎಂದರೆ ಧ್ಯಾನಕ್ಕಾಗಿ ಗುಡಿಸಿಲಿನಲ್ಲಿ ವಾಸಿಸುವವರು ಎಂದರ್ಥ. ಯೋಗಿಗಳು, ದಾಸರು, ವಚನಕಾರರು, ಕಬೀರರು ಪುಣ್ಯಕ್ಕಾಗಿ ತೀರ್ಥಯಾತ್ರೆ ಮಾಡುವ, ನದಿಯಲ್ಲಿ ಮುಳುಗುವ ಬಹೂದಕರ ಮೌಢ್ಯತೆಯನ್ನು ವಿಡಂಬನೆ ಮಾಡುತ್ತಾರೆ. ಕುವೆಂಪುರವರ 'ಕುಟೀಚಕ' ಪದ್ಯವು ಅವರ ಪಯಣ ವಿರೋಧಿ ವ್ಯಕ್ತಿತ್ವದ ಭಾಗವಾಗಿದ್ದು ಅದರ ಮೇಲೆ ಕುಟೀಚಕರಾಗಿದ್ದ ರಾಮಕೃಷ್ಣ ಪರಮಹಂಸರ ಪ್ರಭಾವವಿರುವುದನ್ನು ಗಮನಿಸಬಹುದು.

ಪಯಣದಲ್ಲಿ ಕಲೆಗಾಗಿ ಮತ್ತು ರಾಜಕೀಯಕ್ಕಾಗಿ ಮಾಡುವ ತಿರುಗಾಟದ ಆಯಾಮವು ಇದೆ. ಕಲೆಗಾಗಿ ಚಾರಣ ಮಾಡುವ ಚಾರಣ ಕಲಾವಿದರು ಪಯಣ ಮಾಡಿ ತಮ್ಮ ಕಲೆಯನ್ನು ಪ್ರದರ್ಶಿಸುವರು. ಕರಡಿ ಕುಣಿತ, ದೊಂಬರಾಟ, ಯಕ್ಷಗಾನ ಮುಂತಾದ ಕಲೆಗಳ ಕಲಾವಿದರು ಇದಕ್ಕೆ ಸಾಕ್ಷಿ. ಕಲೆಗಾಗಿ ಚಾರಣ ಮಾಡುವ ಕಲಾವಿದರು ಒಂದೆಡೆ ಕಂಡರೆ, ಕಲೆ ಇರುವ ಕಡೆಗೆ ಚಲಿಸಿ ಕಲೆಯನ್ನು ನೋಡುವ ಇನ್ನೊಂದು ಆಯಾಮವೂ ಇದೆ. ಸಂಗೀತಗಾರರಲ್ಲೂ ಸಂಗೀತ ಪಡೆಯಲು ಮತ್ತು ಹರಡಲು ಹಲವಾರು ಸಂಗೀತಗಾರರು ಬೇರೆ ಬೇರೆ ಪ್ರದೇಶಗಳಿಗೆ ಪಯಣ ಬೆಳೆಸುತ್ತಾರೆ. ಮಲ್ಲಿಕಾರ್ಜುನ ಮನಸೂರ್, ಎಂ.ಎಸ್.ಸುಬ್ಬುಲಕ್ಷ್ಮಿ, ಭೀಮಸೇನ ಜೋಷಿ ಮುಂತಾದವರು ಇಂತಹ ತಿರುಗಾಟವನ್ನು ನಡೆಸಿದ್ದಾರೆ. ಸಂಗೀತಗಾರರು ತಾವು ರಚಿಸುವ ಆತ್ಮಕತೆಯಲ್ಲಿ ತಮ್ಮ ಪಯಣದ ಅನುಭವಗಳನ್ನು ದಾಖಲಿಸಿದ್ದಾರೆ.

ರಾಜಕೀಯ ಮಹತ್ವಾಕಾಂಕ್ಷೆಯುಳ್ಳ ದೊರೆಗಳು ಮಾಡುವ ಪಯಣಗಳಿಗೆ ಇನ್ನೊಂದು ಆಯಾಮವಿದೆ. ಅಲ್ಲಿ ರಾಜ್ಯವಿಸ್ತರಣೆ ಮತ್ತು ಸಂಪತ್ತಿನ ಲೂಟಿ ಮುಖ್ಯ ಸಂಗತಿಗಳಾಗಿರುತ್ತವೆ. ಭಾರತದ ರಾಜಕೀಯ ಚರಿತ್ರೆಯಲ್ಲಿ ಯುದ್ಧಕ್ಕಾಗಿ ರಾಜರು ಸೈನಿಕರ ಜೊತೆ ಬಹು ದೀರ್ಘ ಪಯಣ ಮಾಡಿರುವ ಕಥನವಿದೆ. ಇಡೀ ರಾಜಕೀಯ ಚರಿತ್ರೆಯೆ ಇಂತಹ ಪಯಣಗಳಿಂದ ಕೂಡಿದೆ. ವಲಸೆಯ ಪಯಣವು ಒಂದು ನೋವಿನ ಆಯಾಮವನ್ನು ಪಡೆದಿದೆ. ಯುದ್ಧದ ಸಂದರ್ಭದಲ್ಲಿ ಜನರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಥವಾ ದೇಶ

ವಿಭಜನೆಯಾದಾಗ ದೇಶಭ್ರಷ್ಟಗೊಂಡ ಸಮುದಾಯದವರು ಇಂತಹ ನೋವಿನ ಪಯಣವನ್ನು ಮಾಡಿದ್ದಾರೆ. ಇದನ್ನು ಇಂಡೊ-ಪಾಕ್ ಗಡಿಯ ಬರೆಹಗಾರರಲ್ಲಿ ಕಾಣಬಹುದು.

ಅಸ್ತಿತ್ವಕ್ಕಾಗಿಯೂ ಜನರು ಅಲೆದಾಟವನ್ನು ಮಾಡುತ್ತಾರೆ. ಕೂಲಿಗಳು ಅಥವಾ ತಳ ಸಮುದಾಯದ ಜನರು ಬರಗಾಲ, ಕ್ಷಾಮ, ನೆರೆಹಾವಳಿ ಮುಂತಾದ ಅವಘಡಗಳು ಸಂಭವಿಸಿದಾಗ ಬದುಕಿಗಾಗಿ ರಾಜ್ಯ ಮತ್ತು ದೇಶದ ಗಡಿಗಳಾಚೆ ಪಯಣ ಬೆಳೆಸಿದ್ದಾರೆ. ನೇಪಾಳದ ಗೂರ್ಖಾಗಳ, ಇತ್ತೀಚೆಗೆ ವಲಸೆ ಹೋಗುತ್ತಿರುವ ಕರ್ನಾಟಕದ ಲಂಬಾಣಿಗರು ಇದಕ್ಕೊಂದು ಉತ್ತಮ ಉದಾಹರಣೆಯಾಗಿದ್ದಾರೆ. ಈ ರೀತಿಯಾಗಿ ಜನ ಮಾಡುವ ತಿರುಗಾಟವು ಅವರ ನಡೆನುಡಿಯಲ್ಲಿ, ವೇಷಭೂಷಣದಲ್ಲಿ, ಸಂಸ್ಕೃತಿಯಲ್ಲಿ, ಕಲಿಯುವಿಕೆಯಲ್ಲಿ, ಭಾಷೆಯಲ್ಲಿ ಬದಲಾವಣೆಗೆ ಕಾರಣವಾಗುತ್ತದೆ. ಈ ಬಗೆಯ ಕಥನವನ್ನು ಗೋಪಾಲ ಕೃಷ್ಣ ಪೈಯವರ 'ಸ್ವಪ್ನಸಾರಸ್ವತ' ಕಾದಂಬರಿ ಕಟ್ಟಿಕೊಡುತ್ತದೆ.

೪

ಭೌಗೋಳಿಕ ನೆಲೆಯಲ್ಲಿ ರಾಜ್ಯದ ಒಳಗಡೆ ಮತ್ತು ಹೊರಗಡೆ, ದೇಶದ ಒಳಗಡೆ ಮತ್ತು ಹೊರಗಡೆ, ಖಂಡದ ಒಳಗಡೆ ಮತ್ತು ಹೊರಗಡೆ ನಡೆಯುವ ಭಿನ್ನವಾದ ಪಯಣಗಳಿವೆ. ಇವು ಇತಿಹಾಸಕಾರರ ಕೃತಿಗಳಲ್ಲಿ ದಾಖಲಾಗಿವೆ. ಉದಾಹರಣೆ, ಬಾಣನ 'ಹರ್ಷಚರಿತ್ರೆ', ಕಲ್ಹಣನ 'ರಾಜತರಂಗಿಣಿ' ಬಾಬರ್‌ನ 'ಬಾಬರನಾಮಾ', ಅಲ್ಬೆರೂನಿಯ 'ಕಿತಾಬ್-ಅಲ್-ಹಿಂದ್', ಹ್ಯೂಯಾನ್‌ತ್ಸಾಂಗನ 'ಸಿಯೂಕಿ'. ಪಯಣ ಮಾಡುವುದಕ್ಕೂ ಭೌಗೋಳಿಕ ಪ್ರದೇಶದ ವಿಸ್ತಾರಕ್ಕೂ ಒಂದು ಬಗೆಯ ಸಂಬಂಧವಿದೆ. ಪಯಣ ಮಾಡುವ ವಿಧಾನಗಳು ಕೂಡ ನಮ್ಮ ಪಯಣದಲ್ಲಿ ಅನುಭವಗಳ ಸ್ವರೂಪವನ್ನು ನಿರ್ಧರಿಸುತ್ತವೆ. ಕಡಲ ಮೇಲೆ ಪಯಣ ಮಾಡಿದ ವ್ಯಕ್ತಿಗಳು ಬರೆದ ಪ್ರವಾಸ ಕಥನಗಳು ಬೇರೆ ಇವೆ. ಉದಾಹರಣೆಗೆ, ವಿ.ಕೃ.ಗೋಕಾಕರ 'ಸಮುದ್ರದಾಚೆಯಿಂದ'. ಒಳನಾಡಿನಲ್ಲಿ ನಡೆದುಕೊಂಡು ಅಥವಾ ವಾಹನದಲ್ಲಿ ಪಯಣ ಮಾಡಿದವರ ಅಥವಾ ವಾಯುಯಾನ ಮಾಡಿದವರ ಅನುಭವದ ಕಥನಗಳು ಬೇರೆಯಾಗಿವೆ. ಉದಾಹರಣೆಗೆ, ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ 'ಅಲೆಮಾರಿ ಅಂಡಮಾನ್ ಮತ್ತು ಮಹಾನದಿ ನೈಲ್' ಅಥವಾ ಜಿ.ಎಸ್.ಶಿವರುದ್ರಪ್ಪನವರ 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ'. ಮುಖ್ಯವಾಗಿ ನಮ್ಮ ಸಾಮಾಜಿಕ, ಧಾರ್ಮಿಕವೆನ್ನಬಹುದಾದ ಸಂಗತಿಗಳು ಕೂಡ ಪಯಣದ ಸ್ವರೂಪ ಮತ್ತು ಅನುಭವದಲ್ಲಿ ವಿಭಿನ್ನ ಪರಿಣಾಮಗಳನ್ನು ಉಂಟುಮಾಡಿವೆ.

ಪಯಣ ಮಾಡುವವರ ಜಾತಿ, ವಯಸ್ಸು, ಲಿಂಗ, ಧರ್ಮ, ದೇಶ, ದೈಹಿಕ ಚಹರೆಗಳು ಕೂಡ ಅವರ ಪಯಣದ ಸ್ವರೂಪವನ್ನು ಮತ್ತು ಅವರು ಪಡೆಯುವ ಅನುಭವಗಳನ್ನು ನಿರ್ಧರಿಸುತ್ತವೆ. ಮೇಲ್ಜಾತಿಗೆ ಸೇರಿದ ಜನರು ಪಯಣ ಮಾಡುವಾಗ ಪಡೆಯುವ ಅನುಭವಕ್ಕೂ, ದಲಿತರು,

ಮಹಿಳೆಯರು ಮಾಡುವ ಪಯಣದಲ್ಲಿ ಪಡೆಯುವ ಅನುಭವಕ್ಕೂ ಬಹಳ ವ್ಯತ್ಯಾಸಗಳಿವೆ. ಇದನ್ನು ಕುವೆಂಪು-ಕಾರಂತರ ಕಾದಂಬರಿಗಳು ಚಿತ್ರಿಸುತ್ತವೆ. ಪಯಣವು ಬೇರೆ ಬೇರೆ ಬಗೆಯಲ್ಲಿ ಉತ್ತೇಜಿಸುವ, ನಿಷೇಧಿಸುವ ಕೆಲಸವನ್ನು ಮಾಡಿವೆ. ಭಾರತೀಯ ಉಚ್ಚ ಜಾತಿಗಳಲ್ಲಿ ಸಮುದ್ರ ಪಯಣವನ್ನು ನಿಷೇಧಿಸಿರುವುದಿದೆ. ಪಯಣವು ಹೊಸ ಹೊಸ ಅನುಭವಕ್ಕೆ ಕಾರಣವಾದರೂ ಪಯಣ ರಹಿತವಾದ ಸ್ಥಿತಿ ಅಥವಾ ಧ್ಯಾನವು ಸಹ ಪಯಣಕ್ಕೆ ಹೊಸ ಹೊಸ ಆಯಾಮಗಳನ್ನು ಕೊಡುತ್ತದೆ.

೫

ಈ ಮೇಲಿನ ಎಲ್ಲಾ ಬಗೆಯ ಪಯಣಗಳು ಸಾಹಿತ್ಯದ ಒಳಗೆ ವಿವಿಧ ರೀತಿಯಲ್ಲಿ ಶೋಧಕ್ಕೆ ಒಳಗಾಗಿವೆ. ಪಯಣದಿಂದಲೇ ಹುಟ್ಟುವ ಪ್ರವಾಸ ಕಥನವಂತೂ ಕನ್ನಡ ಸಾಹಿತ್ಯದ ಮುಖ್ಯಭಾಗವೇ ಆಗಿದೆ. ಕೆಲವು ಲೇಖಕರು ಸಾಹಿತ್ಯದ ವಸ್ತುವಿಗಾಗಿ ಪ್ರವಾಸವನ್ನು ಮಾಡುವುದುಂಟು. ಅನೇಕ ಲೇಖಕರು ತಮ್ಮ ಪ್ರವಾಸದಲ್ಲಿ ದೊರೆತ ಅನುಭವಗಳ ಮೂಲಕವೇ ಪ್ರವಾಸ ಸಾಹಿತ್ಯದ ರಚನೆ ಮಾಡುವರು. ಎಸ್.ಎಲ್.ಭೈರಪ್ಪ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ ಮುಂತಾದ ಸಾಹಿತಿಗಳು ತಮ್ಮ ಕೃತಿಯ ವಸ್ತುವಿಗಾಗಿ ಪಯಣ ಬೆಳೆಸಿರುವುದನ್ನು ಕಾಣಬಹುದಾಗಿದೆ.

ಆದರೆ ಕತೆ ಕಾದಂಬರಿಗಳಲ್ಲಿ ಬೇರೆಯದೇ ಆದ ಪಯಣದ ಚಿತ್ರವಿರುತ್ತದೆ. ಪಯಣದ ಆಯಾಮವಿಲ್ಲದ ಕತೆ, ಕಾದಂಬರಿಗಳು ಇಲ್ಲವೆಂದೇ ಹೇಳಬಹುದು. ಕನ್ನಡ ಕಥನ ಸಾಹಿತ್ಯವನ್ನು ಗಮನಿಸಿದರೆ ಅದೊಂದು ಬಗೆಯ ಪಯಣಗಳಿಂದ ಕೂಡಿದೆ. ಪಯಣವು ಪ್ರಾಚೀನ ಮಹಾಕಾವ್ಯಗಳ ಹದಿನೆಂಟು ವರ್ಣನೆಗಳಲ್ಲಿ ಒಂದಾಗಿದೆ. ಅದು ಕಾವ್ಯ ಲಕ್ಷಣಗಳಲ್ಲಿ ಒಂದಾಗಿದ್ದು ಓದುಗರಿಗೆ ವಿಶಿಷ್ಟ ಅನುಭವವನ್ನುಂಟು ಮಾಡುತ್ತ ಬಂದಿದೆ. ಪಯಣವು ಭಾರತದ ಪುರಾಣ ಮತ್ತು ಮಹಾಕಾವ್ಯಗಳಲ್ಲಿ ಅಂತರ್ಗತವಾಗಿದೆ. ರಾಮಾಯಣ ಮತ್ತು ಮಹಾಭಾರತ ಕಾವ್ಯಗಳು ಪಯಣದ ಒಂದು ಭಾಗವಾಗಿಯೇ ಮೂಡಿವೆ. ರಾಮಾಯಣ ಕತೆಯು ರಾಮ ಲಕ್ಷ್ಮಣರು ನಾಡಿನಿಂದ ಕಾಡಿಗೆ ಪಯಣಿಸಿದ ಕಥನವಾಗಿದೆ. ಮಹಾಭಾರತದಲ್ಲಿಯೂ ಪಾಂಡವರ ಪಯಣದ ವರ್ಣನೆ ಪ್ರಮುಖವಾಗಿದೆ. ಪಯಣವು ಈ ಕಾವ್ಯಗಳ ನಾಯಕರ ಜೀವನದಲ್ಲಿ ಬರುವ ಸಾಹಸ, ಕ್ರೌರ್ಯ, ಮಾನವೀಯ ಉದಾರತೆಗಳನ್ನು ಕಾಣಿಸುವ ಕೆಲಸ ಮಾಡುತ್ತದೆ. ಈ ಮಹಾಕಾವ್ಯಗಳ ನಾಯಕರ ಪಯಣವು ನಾಡುಗಳಿಂದ ಕಾಡಿಗೆ ಮತ್ತು ಕಾಡಿನಿಂದ ನಾಡಿಗೆ ಲಾಳಿಯಾಡುತ್ತದೆ. ಕುಮಾರವ್ಯಾಸ ಭಾರತದ ಉದ್ಯೋಗಪರ್ವದ'ಕೃಷ್ಣ ಸಂಧಾನ'ಭಾಗದಲ್ಲಿ ಬರುವ ಪಯಣದ ಸನ್ನಿವೇಶ ಹೀಗಿದೆ:

ಸಿರಿಮೊಗದ ಕಿರುಬೆಮರ
ತೇಜಿಯ ಖುರಪುಟದ ಕೆಂಧೂಳಿ ಸೋಂಕಿದ ಸಿರಿಮುಡಿಯ
ಕುಡಿ ಮೀಸೆಯಲಿ ಕೆಂಪಡರ್ದ ರೇಣುಗಳ

ಖರ ಮರೀಚಿಯ ಜಳಕೆ ಬಾಡಿದ
ತರುಣ ತುಲಸಿಯ ದಂಡೆಯೊಪ್ಪುವ
ಗರುವದೇವನ ಬರಹ ಕಂಡನು ಬಾಗಿಲಲಿ ವಿದುರ

ಕೃಷ್ಣ ಪಾಂಡವರು ಮತ್ತು ಕೌರವರ ನಡುವಿನ ಸಂಧಾನಕ್ಕಾಗಿ ಹಸ್ತಿನಾವತಿಗೆ ಪಯಣ ಮಾಡುವಾಗಿನ ಸಂದರ್ಭದಲ್ಲಿ ಕಂಡ ಚಿತ್ರಣ ಇದಾಗಿದೆ. ಮಹಾಭಾರತದಲ್ಲಿ ಚಲನಶೀಲ ಪಾತ್ರಗಳಲ್ಲಿ ಕೃಷ್ಣನ ಪಾತ್ರವೂ ಒಂದಾಗಿದೆ. ದೇವಮಾನವನಾದ ಕೃಷ್ಣ ಪಾಂಡವರ ಪರವಾಗಿ ಕೌರವರೊಡನೆ ಸಂಧಾನಕ್ಕಾಗಿ ಹಸ್ತಿನಾವತಿಗೆ ಪಯಣ ಮಾಡುತ್ತಾನೆ. ಆಗ ಸಿರಿಮೊಗದ ಕೃಷ್ಣನು ಪಯಣದಲ್ಲಿ ಸಾಮಾನ್ಯ ಮನುಷ್ಯನಂತೆ ಬಿಸಿಲಿನ ಜಳಕ್ಕೆ ಬಾಡಿದ, ಕುದುರೆಯ ಓಟಕ್ಕೆ ಎದ್ದ ಧೂಳು ಮೀಸೆಯ ಮೇಲೆ ಕೆಂಧೂಳಿಯ ಸ್ಪರ್ಶಕ್ಕೆ ಒಳಗಾಗುತ್ತಾನೆ. ಹೀಗೆ ಬರುವ ಕೃಷ್ಣನ ಪಯಣವನ್ನು ವಿದುರನೂ ಕಾಣುವನು. ಹೀಗೆ ರಥ, ಕುದುರೆ, ಬಿಸಿಲು, ಕೆಂಧೂಳಿ ಇವುಗಳ ಮೂಲಕ ಕವಿ ಕೃಷ್ಣನ ಪಯಣವನ್ನು ವರ್ಣಿಸಿದ್ದಾನೆ. 'ಶೂನ್ಯ ಸಂಪಾದನೆ'ಯಲ್ಲಿಯೂ ಅಲ್ಲಮನ ತಿರುಗಾಟದ ಚಿತ್ರವು ಬರುತ್ತಿದ್ದು ಅದು ಹೀಗಿದೆ:

ಕೆದರಿದ ತಲೆಯ ಮುಕ್ತಕೇಶದ ನಡೆವ ತೊನೆಯ ಹಣೆಯ ಬುಗುಟಿನ
ಕರಸ್ಥಲದ ಅನಿಮಿಷದಿಂ ಬಹಿರಂಗದವಧಾನ ತಪ್ಪಿ, ಇದಿರುಗೊಯಿಲು
ತಾಗಿ ಪುರ್ಬೊಡೆದು ಕಣ್ದೆರೆದು ಕಿವಿಹರೆದು ಜೋಲುವ, ರಕ್ತದಾರೆಯ,
ಗಾಳಿನ ಧೂಳಿನ ಮಳೆಯ ಜಾರೆನ, ಬೆನ್ನಬಾಸುಳದ, ಎಡಬಲದ
ಬರೆಯ, ತಟ್ಟಿನ ಮುಳ್ಳು ತರಹಿನ, ಕಂಕುಳಸೀಳ ಕಂಡುನೋಡುವ ಜನರು
ಬೆರೆಗಾಗೆ, ಪೊರವಾರೆನ ಮಸಿಯ ದಿಗಂಬರದಲ್ಲಿ ಬಣಗುಸುರಿವುತ್ತ
ಆಪ್ಯಾಯವನರತು, ಬಿದ್ದು ಮೊಳಕಾಲೊಡೆದು ಹೊಸಹುಣ್ಣಿನ ರಕ್ತದ
ಜೋರ, ಹಳೆಯ ಮುಂಗಾಲು ಕಳೆ ಹೊಳೆದು, ಕಣೆಕಾಲ ಸಂದುತಪ್ಪಿದ
ಬಿರುಬೇನೆಯ ಎಡಹಿ ಬೊಟ್ಬೊಡೆದ ಗಾಯದ ಉರುಗು ಟೊಂಕದ
ಪಿರುಪುಗುಂಟನ ನೋಡಾ ಚೆನ್ನಬಸವಣ್ಣ, ಅತ್ಯಂತ ಮಲಿನ
ಕೂಡಲಸಂಗಮನ ಸುಳುಹು ವಿಪರೀತ! ನೋಡುವರೆ ಭಯಂಕರವಾಗಿದೆ ಅಯ್ಯ

ಹೀಗೆ ಅಲ್ಲಮ ಕೇದಾರದಿಂದ ಪಯಣ ಮಾಡಿ ಮರಳಿ ಬಂದ ಬಗೆಯನ್ನು ಶಿವಗಣಪ್ರಸಾದಿ ಕಂಡ ಬಗೆಯನ್ನು ಹೀಗೆ ವರ್ಣಿಸಿರುವನು. ೧೫–೧೬ನೇ ಶತಮಾನದಲ್ಲಿ ರಚನೆಯಾದ ಅಲ್ಲಮ ಪ್ರಭುವನ್ನು ಕುರಿತ ಕೃತಿಗಳು, ಅಲ್ಲಮನು ಕಲ್ಯಾಣ ಪ್ರವೇಶ ಮಾಡುವ ಮತ್ತು ಜಂಗಮರನ್ನು ಪರೀಕ್ಷಿಸುವ ಪ್ರಸಂಗಗಳನ್ನು ಹೀಗೆ ಚಿತ್ರಿಸಿವೆ. ಚಾಮರಸನ 'ಪ್ರಭುಲಿಂಗ ಲೀಲೆ'ಯಲ್ಲೂ, 'ಮಂಟೇಸ್ವಾಮಿ ಕಾವ್ಯ'ದಲ್ಲೂ ಇದನ್ನು ಕಾಣಬಹುದು. ಬಸವಣ್ಣ ಈ ತಿರುಗಾಟದಲ್ಲಿ ಅಲ್ಲಮನಾದಿಯಾಗಿ ಅನೇಕ ಶರಣರನ್ನು ಹುಡುಕಿ ತಂದು ಅನುಭವ ಮಂಟಪಕ್ಕೆ ಸೇರಿಸುತ್ತಾರೆ.

ಅಲ್ಲಮನ ತಿರುಗಾಟದಲ್ಲಿ ಕಂಡುಕೊಂಡ ಅನುಭವದ ಆಧ್ಯಾತ್ಮಿಕ ಜ್ಞಾನವನ್ನು ವಚನಗಳ ಮುಖೇನ ಸಮಾಜ ತಿದ್ದುವ ಕೆಲಸವನ್ನು ಮಾಡುತ್ತಾರೆ.

ಜನಪದ ಸಾಹಿತ್ಯದ ಭಾಗವಾದ ಜನಪದ ಕತೆ, ಜನಪದ ಗೀತೆ, ಗದ್ಯಕಥನ, ಪುರಾಣ, ಐತಿಹ್ಯಗಳಲ್ಲಿ ಪಯಣವು ಒಂದು ಆಶಯವಾಗಿ ಕೆಲಸ ಮಾಡಿದೆ. ನಿದರ್ಶನಕ್ಕೆ ಮಗಳು ತವರಿಗೆ ಪಯಣ ಮಾಡುವ "ತೊಟ್ಟಿಲ ಹೊತ್ಕೊಂಡು ತವರುಬಣ್ಣ ಉಟ್ಕೊಂಡು, ಅಪ್ಪ ಕೊಟ್ಟೆಮ್ಮೆ ಹೊಡಕೊಂಡು ತೌರೂರ ತಿಟ್ಟತ್ತಿ ನಿಂದು ನೋಡ್ಯಾಳು" ಎಂಬ ಚಿತ್ರವನ್ನು ಇಲ್ಲಿ ಗಮನಿಸಬಹುದು ಇಲ್ಲಿ. ತಾಯಿಯ ಮನೆಯಿಂದ ಗಂಡನ ಮನೆಗೆ ಪಯಣ ಮಾಡುವಾಗ ತವರೂರು ಮತ್ತು ತಾಯಿಯನ್ನು ನೆನೆಯುವ ಸಂದರ್ಭ ಕಂಡುಬರುತ್ತದೆ. ಗಾದೆ, ಒಗಟುಗಳಲ್ಲೂ ಪಯಣದ ಅಂಶವು ಅಂತರ್ಗತವಾಗಿರುವುದನ್ನು ಗಮನಿಸಬಹುದು. ಉದಾಹರಣೆಗೆ "ಹೆಣ್ಣು ತಿರುಗಿ ಕೆಟ್ಲು ಗಂಡು ಕೂತು ಕೆಟ್ಟ" ಎಂಬ ಗಾದೆ. ಈ ಗಾದೆಯಲ್ಲಿ ಒಂದೇ ಕ್ರಿಯೆಯಾದ ತಿರುಗಾಟ ಅಥವಾ ಪಯಣವು ಗಂಡು ಮತ್ತು ಹೆಣ್ಣುಗಳಿಗೆ ಬೇರೆಬೇರೆಯಾಗಿ ಲಿಂಗಭೇದದಲ್ಲಿ ಅನ್ವಯವಾಗುತ್ತಿರುವುದನ್ನು ಗಮನಿಸಬಹುದು. ಗಂಡಿಗೆ ಪಯಣವು ಅವನ ಕ್ರಿಯಾಶೀಲತೆಗೆ ಕಾರಣವಾದರೆ, ಮಹಿಳೆಗೆ ಅದು ಅವಳ ಶೀಲನಾಶಕ್ಕೆ ಕಾರಣವಾಗುತ್ತದೆ ಎಂದು ಜನಪದರು ಭಾವಿಸಿದಂತಿದೆ. ಇದು ಪರೋಕ್ಷವಾಗಿ ಮಹಿಳೆಯರ ಸಾರ್ವಜನಿಕ ಬದುಕಿನಲ್ಲಿ ಚಲನೆಯನ್ನು ಶೀಲದ ಹೆಸರಲ್ಲಿ ನಿಯಂತ್ರಿಸುತ್ತಿರುವುದರ ಸಂಕೇತವಾಗಿದೆ. ಜನಪದ ಕಾವ್ಯಗಳಾದ 'ಮಲೆಮಾದೇಶ್ವರ ಕಾವ್ಯ' ಮತ್ತು 'ಮಂಟೇಸ್ವಾಮಿ ಕಾವ್ಯ'ದ ನಾಯಕರ ಬದುಕಿನಲ್ಲಿ, ಅವರ ಸಾಹಸ, ಪವಾಡಗಳು ಅವರ ಪಯಣದಿಂದ ಬೇರೆಮಾಡಿ ನೋಡಲಾಗದಷ್ಟು ಅಭಿನ್ನವಾಗಿವೆ. ಪಯಣದಲ್ಲೇ ಪವಾಡಗಳು ಅವರ ಬದುಕಿನ ಭಾಗವಾಗಿ ಬೆಸೆದುಕೊಂಡಿವೆ. ಹೀಗೆ ಅನೇಕ ಬಗೆಯ ಪಯಣದ ಆಶಯ ಮತ್ತು ಆಯಾಮಗಳಿಂದ ಕನ್ನಡ ಸಾಹಿತ್ಯವು ತುಂಬಿ ಹೋಗಿದೆ. ಅದು ಕಥನದ ಭಾಗವಾಗಿಯೂ ಸಂಕೇತವಾಗಿಯೂ ಕಂಡುಬರುತ್ತದೆ.

ಕುವೆಂಪು ಹಾಗೂ ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಕಥನದ ಭಾಗವಾಗಿ ಪಯಣ ಬಂದರೆ, ಕುವೆಂಪು ಬೇಂದ್ರೆ ಪುತಿನ ಅವರ ಕವಿತೆಗಳಲ್ಲಿ ಪ್ರತಿಮೆಯ ಭಾಗವಾಗಿ ಪಯಣ ಬರುತ್ತದೆ. ಉದಾ, ಪು.ತಿ.ನ ಅವರ 'ನೆರಳು', ಕುವೆಂಪುರವರ 'ದೇವರು ರುಜು ಮಾಡಿದನು', ದ.ರಾ.ಬೇಂದ್ರೆಯವರ 'ಹಕ್ಕಿ ಹಾರುತಿದೆ ನೋಡಿದಿರಾ?' ಕವನಗಳು. ನೆರಳು, ನಿಸರ್ಗ, ಪಕ್ಷಿ ಪಯಣದ ಸಂಕೇತವಾಗಿ ಮೇಲಿನ ಕವಿತೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಹೀಗೆ ಪಯಣವನ್ನು ಸಂಕೇತವಾಗಿ ಗ್ರಹಿಸುವ ಆಯಾಮವನ್ನು ಆಧುನಿಕ ಸಾಹಿತ್ಯದಲ್ಲಿಯೂ ಗಮನಿಸಬಹುದು. ಪ್ರಾಚೀನ ಸಾಹಿತ್ಯದಲ್ಲಿ ದೇವರಿಂದ ಶಾಪಗ್ರಸ್ತರಾಗಿ ವ್ಯಕ್ತಿಗಳು ಭೂಲೋಕಕ್ಕೆ ಪಯಣ ಮಾಡುವ, ಭೂಲೋಕದಲ್ಲಿ ಬಾಳಿ ಕೊನೆಗೆ ಕೈಲಾಸಕ್ಕೆ ಹೋಗುವ ಬಗೆ ಬಗೆಯ ಪಯಣಗಳನ್ನು ನೋಡಬಹುದು. ಹರಿಹರನ 'ಬಸವರಾಜದೇವರ ರಗಳೆ'ಯಲ್ಲಿ ವೃಷಭ ಭೂಲೋಕದಲ್ಲಿ ಬಸವನಾಗಿ

ಜನ್ಮವೆತ್ತುವ ಪ್ರಸಂಗವು ಲೋಕದಿಂದ ಲೋಕಕ್ಕೆ ಮಾಡುವ ಪಯಣದಿಂದ ಕೂಡಿದೆ. ಡಿ.ವಿ.ಜಿ.ಯವರ ಆಯ್ದಲೇಖನಗಳಲ್ಲಿ ಒಂದಾದ 'ಹಕ್ಕಿಯ ಪಯಣ'ದಲ್ಲಿ "ಹಕ್ಕಿ ಹಕ್ಕಿ ಎಲ್ಲಿಗೆ? ಪಯಣವೆಲ್ಲಿಗೆ? ಎಲ್ಲಿಗೆಂದರಲ್ಲಿಗೆ ಹಳ್ಳದಿಂದ ತಿಟ್ಟಿಗೆ ಹಳ್ಳಿಯಿಂದ ದಿಳ್ಳಿಗೆ ಅಲ್ಲಿಗಿಲ್ಲಿಗೆ" ಎಂಬ ಮಾತು ಬರುತ್ತದೆ. ಸಿದ್ಧಲಿಂಗಯ್ಯನವರ 'ಸಾವಿರಾರು ನದಿಗಳು' ಕವಿತೆಯಲ್ಲಿನ "ನೆನ್ನೆದಿನ ನನ್ನಜನ ಬೆಟ್ಟದಂತೆ ಬಂದರು" ಎಂಬ ಸಾಲಿದ್ದು ಅಲ್ಲಿ ಪಯಣದ ಪರಿಕಲ್ಪನೆ ಬೇರೆಯೇ ಇದೆ. ಮನುಷ್ಯರು ಪೂರ್ವದಿಂದಲೂ ಸಮಾಜದಲ್ಲಿ ಬೇರುಬಿಟ್ಟಿರುವ ಜಾತಿಗಳ ನಡುವಿನ ಶ್ರೇಷ್ಠ-ಕನಿಷ್ಠ ತಾರತಮ್ಯದ ಅಸಮಾನತೆಗೆ ಒಳಗಾಗಿದ್ದಾರೆ. ಹಾಗೆಯೇ ತುಳಿತಕ್ಕೆ ಒಳಗಾದ ಜನರೆಲ್ಲರೂ ಕೆಟ್ಟಪ್ರಭುತ್ವದ ವಿರುದ್ಧ ಹೋರಾಡಬೇಕು. ದಮನಿತ ಜನರು ಚಲನೆಗೆ ಒಳಗಾಗದೇ ಬದಲಾವಣೆ ಸಾಧ್ಯವಿಲ್ಲ ಎಂಬ ಆಕ್ರೋಶದ ನೆಲೆಗಳಲ್ಲಿ ಅಡಗಿರುವ ನೋವು ಚಲನಶೀಲತೆ ಕಾರಣವಾಗಿರುವುದನ್ನು ಈ ಕವಿತೆಯಲ್ಲಿ ಗಮನಿಸಬಹುದು.

ಗಾಂಧೀಜಿಯವರು ಜನರನ್ನು ಬ್ರಿಟಿಷರ ಎದುರು ಸಂಘಟಿಸಲು ದೇಶದ ಉದ್ದಗಲಕ್ಕೂ ಪಯಣ ಮಾಡಿದರು. ಬಿ.ಎಂ.ಶ್ರೀಯವರು ಒಡೆದ ನಾಡನ್ನು ಏಕೀಕರಣ ಮಾಡಲು ಪ್ರವಾಸ ಮಾಡಿದರು. ಅವರು ರಚಿಸಿದ ನಾಡು-ನುಡಿಗೆ ಸಂಬಂಧಿಸಿದ ಕವಿತೆಗಳ ಸಂಪಾದನ ಕೃತಿ 'ಕನ್ನಡ ಬಾವುಟ'ದಲ್ಲಿ ಸ್ವಾತಂತ್ರ್ಯಕ್ಕಾಗಿ ಜನರನ್ನು ಒಗ್ಗೂಡಿಸುವ ಕಾಳಜಿ ಪ್ರಕಟವಾಗಿದೆ. ಕಿರಂ ನಾಗರಾಜ ಅವರು ಜ್ಞಾನವನ್ನು ಹಂಚುವುದಕ್ಕಾಗಿ ಹಲವಾರು ಕಡೆ ಪಯಣ ಮಾಡಿ ವಿದ್ಯಾರ್ಥಿ ಸಮೂಹವನ್ನು ಜಾಗೃತಗೊಳಿಸಿದರು. ಕಲೆಗಾಗಿ ಜೋಳದರಾಶಿ ದೊಡ್ಡನಗೌಡ ಅವರು ತಿರುಗಾಟವನ್ನು ರಾಜ್ಯದ ಬಹುಭಾಗದಲ್ಲಿ ನಡೆಸಿದರು. ಎಸ್.ಎಲ್.ಭೈರಪ್ಪನವರು ತಮ್ಮ ಬಲಪಂಥೀಯ ಸಿದ್ಧಾಂತದ ಸಮರ್ಥನೆಗಾಗಿ ಸಾಕ್ಷ್ಯ ಸಂಗ್ರಹಿಸಿ ಕೃತಿ ರಚಿಸಲು ತಿರುಗಾಟ ಮಾಡಿದರು. ಅವರು ಬರೆದಿರುವ 'ಸಾರ್ಥ', 'ಪರ್ವ', 'ಆವರಣ' 'ಯಾನ' ಮುಂತಾದ ಕಾದಂಬರಿಗಳನ್ನು ರಚಿಸುವ ಪೂರ್ವದಲ್ಲಿ ವಸ್ತುವಿಗಾಗಿ ಹುಡುಕಾಟವನ್ನು ನಡೆಸಿ ಸಾಕ್ಷ್ಯವನ್ನು ಸಂಗ್ರಹಿಸಿರುವರು. ಇದೇ ಮಾದರಿಯಲ್ಲಿ ದಲಿತಕೇರಿಗಳಲ್ಲಿ ಪ್ರವಾಸ ಮಾಡಿ ಪಡೆದ ಅನುಭವದ ಮೂಲಕ ಚೋಮನನ್ನು ಸೃಷ್ಟಿಸಿದ ಶಿವರಾಮ ಕಾರಂತರು, ಅನುಭವ ಶೋಧದ ನೆಲೆಯಲ್ಲಿ ತಮ್ಮನ್ನೂ ಗುರುತಿಸಿಕೊಂಡಿದ್ದಾರೆ. ಹೀಗೆ ಕನ್ನಡ ಸಾಹಿತ್ಯ ಲೋಕದಲ್ಲಿ ಹಲವು ಬಗೆಯ ತಿರುಗಾಟಗಳಿವೆ.

ಸಂಶೋಧಕರು ಸಮುದಾಯಗಳ ಜೀವನ ಕ್ರಮವನ್ನು ಅರಿಯುವ ಮತ್ತು ದಾಖಲಿಸುವ ಸಲುವಾಗಿ ತಿರುಗಾಟವನ್ನು ಮಾಡುತ್ತಾರೆ. ಯಾವಾಗಲೂ ತಿರುಗಾಟವು ನಿರ್ದಿಷ್ಟ ಜ್ಞಾನ ಕ್ಷೇತ್ರಕ್ಕಾಗಿ ಮಾಡುವ ಕ್ಷೇತ್ರಕಾರ್ಯವಲ್ಲ; ಭಿನ್ನ ಸಮುದಾಯಗಳ ಜೀವನಕ್ರಮ, ಭಾಷೆ, ಉಡುಗೆ, ಹೋರಾಟ, ಆರ್ಥಿಕತೆಯನ್ನು ಅರಿಯುವುದರ ಜೊತೆಗೆ ಅವನ್ನು ಬದಲಿಸುವ ಉದ್ದೇಶಕ್ಕಾಗಿ ಕೂಡ ಚಿಂತಕರು ಪಯಣವನ್ನು ಮಾಡುತ್ತಾರೆ.

ಹೀಗೆ ಪಯಣವು ಲೋಕದ ಅನೇಕ ಕಾರ್ಯ ಕ್ಷೇತ್ರಗಳಲ್ಲಿ ಅಡಗಿರುವ ಒಂದು ಮಹಾ ಚಲನೆಯಾಗಿದೆ; ಕೋಟ್ಯಂತರ ವರ್ಷಗಳ ಜೀವವಿಕಾಸದಲ್ಲಿ ಅದು ಬಹು ದೊಡ್ಡ ಪಾತ್ರವನ್ನು ನಿರ್ವಹಿಸಿದೆ. ಅದರಂತೆಯೇ ಮಾನವರ ಬದುಕಿನಲ್ಲಿಯೂ ಅದರ ಪಾತ್ರವಿದೆ. ಇಂತಹ ಮಾನವರ ಕಥನವಾಗಿರುವ ಸಾಹಿತ್ಯದಲ್ಲಿ ಸಹಜವಾಗಿಯೇ ಅದರ ವಿಭಿನ್ನ ಆಯಾಮಗಳು ಅಡಗಿವೆ. ಪಾಶ್ಚಿಮಾತ್ಯ ಸಂಸ್ಕೃತಿ ಮತ್ತು ಆಧುನಿಕತೆಗಳ ಚಾರಿತ್ರಿಕ ಒತ್ತಾಸೆಯಿಂದ ಬದಲಾದ ಬದುಕನ್ನು ಚಿತ್ರಿಸುವ ಕನ್ನಡ ಕಾದಂಬರಿಗಳ ಮಟ್ಟಿಗೆ ಹೇಳುವುದಾದರೆ, ಪಯಣವು ಅವುಗಳ ಆಳದಲ್ಲಿ ಹುದುಗಿರುವ ಒಂದು ಮಹತ್ವದ ಸಂಗತಿಯಾಗಿದೆ. ಅದು ಕಾದಂಬರಿಗಳಲ್ಲಿ ಅನಂತರೂಪಗಳಲ್ಲಿ ವ್ಯಕ್ತವಾಗಿದ್ದು ತನ್ನನ್ನೂ ಶೋಧ ಮಾಡಲು ಆಹ್ವಾನಿಸುವಂತಿದೆ. ಈ ಕಾದಂಬರಿಗಳಲ್ಲಿ ಪಯಣವು ಒಬ್ಬ ವ್ಯಕ್ತಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಚಲಿಸುವ ಸರಳ ನೆಲೆಯಲ್ಲಿ ಮಾತ್ರ ವ್ಯಕ್ತವಾಗಿಲ್ಲ; ಅದು ವ್ಯಕ್ತಿಗಳ ಬಾಳಿನಲ್ಲಿ ಅವರು ಮಾಡುವ ಜೀವನ ಪಯಣದ ಭಾಗವಾಗಿದೆ. ಈ ಜೀವನದ ಪಯಣದಲ್ಲಿ ವ್ಯಕ್ತಿಗಳ ಚಿಂತನೆಯಲ್ಲಿ ಸಂಭವಿಸುವ ಪಲ್ಲಟಗಳ ಜತೆ ಅದು ತಳುಕು ಗೊಂಡಿದೆ. ಹೀಗೆ ಪಯಣವು ಏಕಕಾಲಕ್ಕೆ ಭೌತಿಕವೂ, ಮಾನಸಿಕವೂ ಮತ್ತು ದಾರ್ಶನಿಕವೂ ಆಗಿ ರೂಪು ಗೊಂಡಿದೆ.

ಅಧ್ಯಾಯ ಮೂರು

ಕುವೆಂಪು ಕಾದಂಬರಿಗಳಲ್ಲಿ ಪಯಣದ ವಿನ್ಯಾಸಗಳು

೩.೧. ಪ್ರವೇಶ

೩.೨. ಪಯಣ: ಗಂಡು–ಹೆಣ್ಣು

೩.೩. ಪಯಣ: ಸಂಘರ್ಷ

೩.೪. ಪಯಣ: ಆಲೋಚನಾ ಕ್ರಮ

೩.೫. ಪಯಣ: ವೈಚಾರಿಕತೆ ಮತ್ತು ಆಧುನಿಕ ಸಂಕೇತಗಳು

೩.೬. ಪಯಣ: ನೈತಿಕತೆ

೩.೭. ಪಯಣ: ಪ್ರತಿಭೆ

೩.೮. ಪಯಣ: ದಾರ್ಶನಿಕ ಆಯಾಮ

೩.೯. ಪಯಣ: ಕಥನತಂತ್ರ

ಅಧ್ಯಾಯ ಮೂರು

ಕುವೆಂಪು ಕಾದಂಬರಿಗಳಲ್ಲಿ ಪಯಣದ ವಿನ್ಯಾಸಗಳು

೩.೧. ಪ್ರವೇಶ

ಕನ್ನಡ ನವೋದಯ ಕಾಲಘಟ್ಟದ ಪ್ರಮುಖ ಲೇಖಕರಲ್ಲಿ ಕುವೆಂಪು ಸಹ ಒಬ್ಬರು. ಸಮೃದ್ಧ ಸಾಹಿತ್ಯವನ್ನು ರಚಿಸಿರುವ ಕುವೆಂಪು ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಿಗೆ ವಿಶಿಷ್ಟ ಕಾಣಿಕೆಯನ್ನು ನೀಡಿದವರು; ಹದಿಮೂರಕ್ಕೂ ಹೆಚ್ಚು ಪ್ರಕಾರಗಳಲ್ಲಿ ಗುರುತಿಸಿಕೊಂಡಿರುವ ಅವರು ಎಂಬತ್ತಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಅವರ ಸಾಹಿತ್ಯವನ್ನು ಕುರಿತಂತೆ ಬಂದಿರುವ ಪರಿಚಯಾತ್ಮಕ, ವಿವರಣಾತ್ಮಕ, ವಿಮರ್ಶಾತ್ಮಕ ಬರಹದ ಪ್ರಮಾಣವು ವಿಸ್ತಾರವಾಗಿದೆ. ಅವರ ಸಾಹಿತ್ಯದ ತಾತ್ವಿಕತೆಯಲ್ಲಿ ಪಯಣದ ಪರಿಕಲ್ಪನೆ ಮತ್ತು ವಿನ್ಯಾಸಗಳು ಮುಖ್ಯವಾಗಿವೆ. ಕುವೆಂಪು ಸಾಹಿತ್ಯವನ್ನು ಪಯಣದ ಪರಿಕಲ್ಪನೆಯಿಲ್ಲದೆ ಚರ್ಚಿಸುವುದು ಸಾಧ್ಯವಿಲ್ಲ ಎನಿಸುವಷ್ಟು ಪ್ರಮಾಣದಲ್ಲಿ ಅವು ಇವೆ. ಪಯಣವು ವ್ಯಕ್ತಿಯ ವ್ಯಕ್ತಿತ್ವದ ಬೆಳವಣಿಗೆಯ ಜೊತೆಗೆ ವಿಕಾಸಕ್ಕೂ ಕಾರಣವಾಗುತ್ತದೆ ಮತ್ತು ಸಮಾಜವು ಚಲನಶೀಲತೆಯಲ್ಲಿ ಇರುವಾಗಲೇ ಹೆಚ್ಚು ಜೀವಂತವಿರುತ್ತದೆ ಎಂಬುದು ಅವರ ಸಾಹಿತ್ಯದ ಪ್ರಮುಖ ಆಶಯವಾಗಿದೆ. ಚಲನೆ ಅಥವಾ ಪಯಣ ಎನ್ನುವುದು ಕುವೆಂಪು ಸಾಹಿತ್ಯದ ಹಿಂದಿರುವ ಅದ್ವೈತ ದರ್ಶನದ ಮುಖ್ಯ ಸಾರವಾಗಿವೆ. ಪರಸ್ಪರ ಬೇರೆಯಂತೆ ಹಾಗೂ ಅಗಲಿದಂತೆ ಕಾಣುವ ಸಂಗತಿಗಳು ಏಕೀಭವಿಸುವುದು ಅದ್ವೈತ ದರ್ಶನದ ಮುಖ್ಯ ಚಹರೆಯಾಗಿದೆ.

ಕುವೆಂಪು ತಾವು ಹುಟ್ಟಿ ಬೆಳೆದ ಪ್ರದೇಶದಿಂದ ವಿದ್ಯಾಭ್ಯಾಸಕ್ಕಾಗಿ ಒಂದು ಕಡೆಯಿಂದ ಮತ್ತೊಂದು ಕಡೆ ಪಯಣ ಬೆಳೆಸಿದವರು; ತಾವು ವಲಸೆ ಬಂದ ಊರನ್ನೇ ತಮ್ಮ ಹೊಸ ನೆಲೆಯನ್ನಾಗಿ ಮಾಡಿಕೊಂಡು, ತಾವು ತೆಗೆದುಕೊಂಡು ಬಂದ ನೆನಪುಗಳನ್ನೇ ವಲಸೆ ಬಂದ ಊರಲ್ಲಿಯೂ ಬರೆದವರು. ಕುವೆಂಪು ಬರೆಹದಲ್ಲಿ ಮಾತ್ರವಲ್ಲದೆ; ಬದುಕಿನಲ್ಲಿಯು ವಲಸೆ ಅಥವಾ ಪಯಣವು ವಿಶಿಷ್ಟ ಪಾತ್ರವಹಿಸಿದೆ. ಶಿಕ್ಷಣಕ್ಕಾಗಿ ಮೈಸೂರಿಗೆ ಬಂದ ಕುವೆಂಪು ತಮ್ಮ ಕತೆ ಕಾದಂಬರಿಗಳಲ್ಲಿ ಅಲ್ಲಿಯ ಜೀವನ ಕುರಿತು ಬರೆಯದೆ, ತಾವು ಬಿಟ್ಟು ಬಂದ ಮಲೆನಾಡಿನ

ಬದುಕಿನ ಬಗ್ಗೆಯೇ ಬರೆಯುತ್ತಾರೆ. ಇದಕ್ಕಾಗಿ ಅವರು ಮಲೆನಾಡಿಗೆ ಭೌತಿಕ ಪಯಣಗಳನ್ನು ಮಾಡಿದರೂ, ಅದಕ್ಕಿಂತ ಹೆಚ್ಚಾಗಿ ಮಾನಸಿಕವಾಗಿ ಪಯಣ ಮಾಡಿ ಅಲ್ಲಿನ ನೆನಪುಗಳಿಗೆ ಆಕಾರ ಕೊಡುತ್ತಾರೆ. 'ಕಾನೂರು ಹೆಗ್ಗಡಿತಿ' ಕಾದಂಬರಿಯು ಅದರ ನಾಯಕನಾದ ಹೂವಯ್ಯನು ಮೈಸೂರಿನಿಂದ ಮಲೆನಾಡಿಗೆ ಮರಳುವ ಮೂಲಕ ಆರಂಭವಾಗುತ್ತದೆ. ಆದರೆ ಅವನ ಮನಸ್ಸು ಮತ್ತೆಮತ್ತೆ ಮೈಸೂರಿನಲ್ಲಿ ಕಲಿತ ಕಾವ್ಯಗಳತ್ತ ವಿಹಾರ ಹೊರಡುತ್ತದೆ. ಇದಕ್ಕೆ ಪ್ರತಿಯಾಗಿ ಕುವೆಂಪು ಕವನಗಳ ನಾಯಕರು ಭಾವನಾತ್ಮಕವಾಗಿ ಮತ್ತೆಮತ್ತೆ ಮಲೆನಾಡಿಗೆ ಮಾನಸಿಕವಾಗಿ ಪಯಣ ಮಾಡುತ್ತಾರೆ. ಇದಕ್ಕೆ 'ಪಕ್ಷಿಕಾಶಿ' ಕವನ ಸಂಕಲನದಲ್ಲಿನ 'ಹೋಗುವೆನು ನಾ' ಎನ್ನುವ ಕವನ ಸಾಕ್ಷಿಯಾಗಿದೆ.

> ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ;
> ಮಲೆಯ ನಾಡಿಗೆ, ಮಳೆಯ ಬೀಡಿಗೆ, ಸಿರಿಯ ಚಲುವಿನ ರೂಢಿಗೆ.
> ಬೇಸರಾಗಿದೆ ಬಯಲು, ಹೋಗುವೆ ಮಲೆಯ ಕಣಿವೆಯ ಕಾಡಿಗೆ:
> ಹಸುರು ಸೊಂಪಿನ ಬಿಸಿಲು ತಂಪಿನ ಗಾನದಿಂಪಿನ ಕೂಡಿಗೆ[7]

ಇಲ್ಲಿ ಕವನದ ನಾಯಕನು ಹುಟ್ಟಿಬೆಳೆದ ಊರಿಗೆ ಹೋಗುವ ಆಶಯಗಳನ್ನು ಭಾವನಾತ್ಮಕ ಚಲನೆಯ ಆಶಯವಾಗಿ ಹೇಳುತ್ತಿದ್ದಾನೆ. ಉನ್ನತ ವಿದ್ಯಾಭ್ಯಾಸದ ಕಾರಣಕ್ಕೆ ಮಲೆನಾಡನ್ನು ಬಿಟ್ಟು ಬಂದ ಕುವೆಂಪು ತಮ್ಮ ಬಾಲ್ಯದ ಅನುಭವ ಲೋಕಕ್ಕೆ ಮತ್ತೆ ಮತ್ತೆ ಸೃಜನಶೀಲ ಕಾರಣಕ್ಕಾಗಿ ಹಿಂಪಯಣ ಮಾಡುತ್ತಾರೆ. ಪಂಪನು "ಆರಂಕುಶಮಿಟ್ಟೊಡಂ ನೆನವುದೆನ್ನ ಮನಂ ಬನವಾಸಿ ದೇಶಮಂ" ಎನ್ನುವ ಮೂಲಕ ತನ್ನ ಪ್ರದೇಶದ ಬಗ್ಗೆ ಪ್ರೀತಿ ವ್ಯಕ್ತಪಡಿಸುವುದನ್ನು ಇಲ್ಲಿಯೇ ನೆನೆಯಬೇಕು. ಇಲ್ಲಿ ಕಾಣಿಸಿಕೊಳ್ಳುವ ಕುವೆಂಪು ಮತ್ತು ಪಂಪರ ಆಶಯಗಳು ಅವರು ಹುಟ್ಟಿ ಬೆಳೆದ ಪ್ರದೇಶಕ್ಕೆ ಅವರ ಭಾವನಾತ್ಮಕವಾಗಿ ಮಾಡುವ ಹಿಂಪಯಣದ ಸಂಕೇತವಾಗಿವೆ. ಇಬ್ಬರಲ್ಲಿಯೂ ತಮ್ಮ ಪ್ರಿಯವಾದ ಪ್ರದೇಶವನ್ನು ಬಿಟ್ಟು ಇನ್ನೊಂದು ಕಡೆಗೆ ವಲಸೆ ಬಂದಿರುವುದು ಭೌತಿಕ ಪಯಣವಾಗಿದ್ದರೆ, ತಮ್ಮ ಒಳಗಿನ ಸೆಳೆತಕ್ಕಾಗಿ ಹುಟ್ಟಿ ಬೆಳೆದ ಊರುಗಳನ್ನು ನೆನೆಯುವುದು ಮಾನಸಿಕ ಪಯಣವಾಗಿದೆ. ಕುವೆಂಪು ಅವರು ವೈಯಕ್ತಿಕವಾಗಿ ವಿದ್ಯಾಭ್ಯಾಸಕ್ಕಾಗಿ ಮಲೆನಾಡಿನ ಹಳ್ಳಿಯಿಂದ ಮೈಸೂರಿನ ನಗರಕ್ಕೆ ಪಯಣ ಬೆಳೆಸಿದರೆ, ಅವರ ಕಾದಂಬರಿಯಲ್ಲಿನ ಪಾತ್ರಗಳು ನಗರದಲ್ಲಿ ವಿದ್ಯಾಭ್ಯಾಸ ಪಡೆದು ಹುಟ್ಟಿದೂರಿಗೆ ಹಿಮ್ಮುಖವಾಗಿ ಪಯಣಿಸುತ್ತವೆ.

ಕುವೆಂಪು ಸಾಹಿತ್ಯದಲ್ಲಿ ಒಂದು ವಿನ್ಯಾಸವಾಗಿ ಪಯಣವು ಹಲವು ಬಗೆಯಾಗಿ ಕಾಣಿಸಿಕೊಳ್ಳುತ್ತದೆ. ಅವರ ಪ್ರಮುಖ ಕೃತಿಯಾದ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಶೀರ್ಷಿಕೆ ಸೂಚಿಸುವಂತೆ ಅದು ಮಲೆನಾಡಿನ ಕಾಡಿನಲ್ಲಿ ನಡೆದಾಡುವ ಇಬ್ಬರು ಮದುವಣಗಿತ್ತಿಯರ ಚಲನೆಯ ಕತೆಯಾಗಿದೆ. ಅವರ ಪ್ರಮುಖ ಕವಿತೆಗಳಾದ 'ಬಾ ಪಾಲ್ಗುಣ ರವಿದರ್ಶನಕೆ',

'ಆಷಾಢ ಸೂರ್ಯೋದಯ', 'ಚಂದ್ರೋದಯವಾಯ್ತು', 'ರೈಲುಗಾಡಿಯ ಕಿಟಕಿ', 'ರೈಲ್‌ರಸ್ತೆ' ಮುಂತಾದವುಗಳಲ್ಲಿ ಕೂಡ ಚಲನೆಯ ಮೂಲಕ ಬದಲಾವಣೆ ಸಂಭವಿಸುವ ಆಶಯಗಳ ಚಿತ್ರಣವಿದೆ. ಹೆಚ್ಚಾಗಿ ಅವರ ಸೂರ್ಯೋದಯ ಕುರಿತ ಪದ್ಯಗಳಲ್ಲಿ ಸೂರ್ಯ ಉದಯಿಸುವ ಕ್ರಿಯೆಯಿಂದ ಅಸ್ತಮಿಸುವ ಕ್ರಿಯೆಯವರೆಗೂ ಆಗಸದ ಪಥದಲ್ಲಿ ಆತ ಮಾಡುವ ಪಯಣದ ಚಿತ್ರಗಳಿವೆ. ಸೂರ್ಯನ ಏರುಪಯಣದ ಬಗ್ಗೆ ಕವಿಯ ಸೆಳೆತವು, ಶೂದ್ರರ ದಲಿತರ ಸಾಮಾಜಿಕ ಆಧ್ಯಾತ್ಮಿಕ ಮೇಲ್ಚನೆಯ ಆಶಯದೊಂದಿಗೆ ಸಂಬಂಧ ಹೊಂದಿದೆ ಎಂದೂ ಕೂಡ ಅನಿಸುತ್ತದೆ. ಅವರ 'ದೇವರು ರುಜು ಮಾಡಿದನು' ಕವಿತೆಯಲ್ಲಿ ಪಕ್ಷಿಗಳ ಹಾರಾಟವು ನದಿಗಳ ಹರಿದಾಟವು ಚಲನೆಯ ರೂಪಕವಾಗಿ ಕಾಣಿಸಿಕೊಂಡಿದೆ. ಪುತಿನ ಅವರ 'ನೆರಳು' ಕವಿತೆಯಲ್ಲಿ ಹದ್ದಿನ ಹಾರಾಟವು ವ್ಯಕ್ತಿಯಾಗಿ ಗಾಂಧೀಜಿಯವರ ಇಡೀ ತಾತ್ವಿಕ ಪಯಣದ ಪ್ರತಿಮೆಯಾಗಿ ಬಂದಿದೆ. ಆದರೆ ಕುವೆಂಪು ಅವರಲ್ಲಿ ನಿಸರ್ಗದಲ್ಲಿ ಆಕಾಶಕಾಯಗಳು, ಪಕ್ಷಿಗಳು, ನದಿಗಳು ಮಾಡುವ ಚಲನೆಯು ಕೆಳಸ್ತರದಲ್ಲಿರುವ ಜನರ ಆಧ್ಯಾತ್ಮಿಕ ಸಾಧನೆ ಮತ್ತು ಏರುವಿಕೆಯ ಸಂಕೇತಗಳಾಗಿ ಬರುತ್ತವೆ.

ಪಯಣವು ಹೀಗೆ ಕುವೆಂಪುರವರ ಕೃತಿಗಳಲ್ಲಿ ವಿಭಿನ್ನ ಆಶಯಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅವರ 'ಶಿಲಾತಪಸ್ವಿ' ಕವಿತೆಯಲ್ಲಿ ಶಿಲೆಯು ತಾನೊಂದು ಮೂರ್ತಿಯಾಗುವ ಕನಸನ್ನು ಕಾಣುತ್ತದೆ. ಅದೊಂದು ಬಗೆಯ ರೂಪಾಂತರದ ಚಲನೆಯಾಗಿದ್ದು, ಜಡವು ಚೇತನವಾಗಲು ಬಯಸುವ ಪಯಣದ ಸಂಕೇತವಾಗಿದೆ. 'ಶೂದ್ರ ತಪಸ್ವಿ' ನಾಟಕದಲ್ಲಿ ಶೂದ್ರನು ಮೇಲುವರ್ಣದವರಿಗೆ ಮಾತ್ರ ಸೀಮಿತವಾಗಿದ್ದ ತಪಸ್ಸನ್ನು ಆಚರಿಸುವ ಮೂಲಕ, ಒಂದು ಅವಸ್ಥೆಯಿಂದ ಇನ್ನೊಂದು ಅವಸ್ಥೆಗಾಗಿ ಮಾನಸಿಕ ಪಯಣ ಮಾಡುತ್ತಾನೆ. ಈ ಎರಡೂ ಕೃತಿಗಳಲ್ಲಿ ಇರುವ ಚಲನೆ ದೈಹಿಕವಾದುದಲ್ಲ ವೈಚಾರಿಕವಾದುದು, ಆಧ್ಯಾತ್ಮಿಕವಾದುದು. ಒಬ್ಬ ವ್ಯಕ್ತಿ ತನ್ನ ಆಧ್ಯಾತ್ಮಿಕ ಗುರಿಸಾಧನೆಗಾಗಿ ಮಾಡುವ ಪ್ರಯತ್ನಗಳೇ ಇಲ್ಲಿ ಚಲನೆಗೆ ಪ್ರೇರಕವಾಗಿವೆ. ಈ ಬಗೆಯ ಚಲನೆ ಅಥವಾ ಪಯಣಗಳು ಕುವೆಂಪು ಸಾಹಿತ್ಯದಲ್ಲಿ ಹೇರಳವಾಗಿ ಕಾಣಿಸಿಕೊಳ್ಳುತ್ತವೆ. ಕನ್ನಡದಲ್ಲಿ ಕುವೆಂಪು ಪಯಣವನ್ನು ಚಲನಶೀಲತೆಯ ರೂಪಕವಾಗಿ ದುಡಿಸಿಕೊಂಡಿರುವ ಪ್ರಮುಖ ಕವಿಯಾಗಿದ್ದಾರೆ. ಅವರ 'ಆತ್ಮಶೀಗಾಗಿ ನಿರಂಕುಶ ಮತಿಗಳಾಗಿ' ಎನ್ನುವ ಲೇಖನದ ಶೀರ್ಷಿಕೆಯಲ್ಲಿಯೇ ವ್ಯಕ್ತಿಯ ವೈಚಾರಿಕವಾಗಿ ಆಧ್ಯಾತ್ಮಿಕವಾಗಿ ಪರಿವರ್ತನೆಯಾಗುವ ಚಲನಶೀಲತೆಯ ಆಶಯವಿದೆ. ಈ ಹಿನ್ನೆಲೆಯಲ್ಲಿ ವ್ಯಕ್ತಿಯು ಸಾಧನೆಯ ಮೂಲಕ ಆಂತರಿಕವಾಗಿ ಮಾಡುವ ಆಧ್ಯಾತ್ಮಿಕ ಪಯಣವನ್ನು ದಾರ್ಶನಿಕವಾಗಿ 'ಅನಿಕೇತನ' ಕವನವು ಅಭಿವ್ಯಕ್ತಿಸುತ್ತದೆ.

ಎಲ್ಲಿಯೂ ನಿಲ್ಲದಿರು;
ಮನೆಯನೆಂದೂ ಕಟ್ಟದಿರು;
ಕೊನೆಯನೆಂದೂ ಮುಟ್ಟದಿರು;

ಓ ಅನಂತವಾಗಿರು!

ಓ ನನ್ನ ಚೇತನ,

ಆಗು ನೀ ಅನಿಕೇತನ![೨]

ಈ ಕವನದಲ್ಲಿ ವ್ಯಕ್ತಿಯ ಆಧ್ಯಾತ್ಮಿಕ ಸಾಧನೆಯ ಹಾದಿಯಲ್ಲಿ ನಿರಂತರ ಪಯಣ ಮಾಡುವ ಆಶೋತ್ತರವು ಪ್ರಕಟವಾಗಿದೆ. ಇದು ಬಸವಣ್ಣನವರ "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ!" ಎಂಬ ಹೇಳಿಕೆಯನ್ನು ನೆನಪಿಸುತ್ತದೆ. ಎರಡೂ ಕಡೆ ವ್ಯಕ್ತಿಗಳು ಸಾಧನೆಯ ಹಾದಿಯಲ್ಲಿ ಜಂಗಮರಾಗಿ ಪಯಣಿಸುವ ಪರಿಕಲ್ಪನೆಯಿದೆ.

ಕುವೆಂಪು ಅವರಂತಹ ದೈತ್ಯಪ್ರತಿಭೆಗೆ ಸಾಹಿತ್ಯದಲ್ಲಿ ಚಲನೆಯ ಅನೇಕ ಸ್ತರಗಳನ್ನು ತರಲು ಸಾಧ್ಯವಾಯಿತು. ಚಲನೆಯು ಅಲ್ಲಿ ಪ್ರಗತಿಯ ದ್ಯೋತಕ. ಆದರೆ ಎಸ್.ಎಲ್.ಭೈರಪ್ಪನವರ ಸಾಹಿತ್ಯದಲ್ಲಿ ಅನೇಕ ಸಲ ಸಾಮಾಜಿಕವಾದ ಕಟ್ಟುಪಾಡುಗಳನ್ನು ಉಲ್ಲಂಘಿಸಿ ವ್ಯಕ್ತಿಗಳು ಅದರಲ್ಲೂ ಮಹಿಳೆಯರು ಮತ್ತು ಶೂದ್ರರು ಮಾಡುವ ಚಲನೆಗಳು ಪತನದ ಸಂಕೇತವಾಗಿ ಬರುತ್ತವೆ. ಆದರೆ ಶೂದ್ರ ಸಮುದಾಯಕ್ಕೆ ಸೇರಿದ ಮತ್ತು ಆಧ್ಯಾತ್ಮಿಕ ಹಕ್ಕುಗಳಿಂದ ವಂಚಿತರಾದ ಕುವೆಂಪು ಸಾಹಿತ್ಯದಲ್ಲಿ ಸಾಮಾಜಿಕವಾದ ಸೀಮೋಲ್ಲಂಘನೆ ಮಾಡುವುದು, ಮೇಲ್ಮುಖವಾಗಿ ಚಲನೆ ಮಾಡುವುದು, ಸ್ಥಾವರ ಅವಸ್ಥೆಯನ್ನು ಮೀರುವ ಸಂಗತಿಯಾಗುತ್ತದೆ. ಬದಲಾವಣೆಯನ್ನು ತರುವ ಪ್ರಗತಿಪರ ಚಲನೆಯಾಗುತ್ತದೆ. ಈ ದೃಷ್ಟಿಯಿಂದ ಸಾಮಾಜಿಕವಾಗಿ ಮೇಲುಸ್ತರಕ್ಕೆ ಸೇರಿದ ದ.ರಾ.ಬೇಂದ್ರೆಯವರಿಗೆ ಮೇಲ್ಮುಖ ಚಲನೆಗಿಂತ ಕೆಳಮುಖ ಚಲನೆ ಮಾಡುವುದು ಮುಖ್ಯವಾಗುತ್ತದೆ. ಉದಾಹರಣೆಗೆ, 'ಇಳಿದು ಬಾ ತಾಯಿ' ಕವಿತೆಯನ್ನು ನೋಡಬಹುದು. ಇಲ್ಲಿ ಗಂಗೆಯು ಆಗಸದಿಂದ ನೆಲಕ್ಕೆ ಪ್ರವಹಿಸುತ್ತಾಳೆ. ಕುವೆಂಪು ಅವರ ಮೇಲ್ಮುಖ ಚಲನೆಗಳ ಆಶಯಗಳಿಗೆ ಹೋಲಿಸಿದರೆ ಬೇಂದ್ರೆಯವರ ಕಾವ್ಯದಲ್ಲಿರುವ ಈ ಕೆಳಮುಖ ಚಲನೆಗಳು ಸಾಂಕೇತಿಕವಾಗಿವೆ. ಕೆಳಕ್ಕೆ ಇಳಿಯದೆ ಮೇಲ್ವರ್ಗದಲ್ಲಿ ಹುಟ್ಟಿದವರಿಗೆ ಲೋಕಬದುಕಿನ ಸಮೃದ್ಧಿ ವಿವರಗಳು ಸಿಗುವುದಿಲ್ಲ. ಹೀಗಾಗಿಯೇ ಬೇಂದ್ರೆ ಕಾವ್ಯದಲ್ಲಿ ಕುವೆಂಪು ಕಾವ್ಯದಲ್ಲಿ ಅಷ್ಟಾಗಿ ಬಾರದ ಜನಪದ ಸಂಸ್ಕೃತಿಯ ವಿವರಗಳು ದಟ್ಟವಾಗಿ ಬರುತ್ತವೆ. ಸ್ಥಗಿತ ಸ್ಥಿತಿಯನ್ನು ಒಡೆದು, ಇನ್ನೊಂದು ಚಲನೆಗೆ ಹೋಗುವುದೇ ಕುವೆಂಪು ಅವರಿಗೆ ಬಿಡುಗಡೆಯಾಗಿದೆ. ಹೀಗಾಗಿ ಚಲನೆಯ ರೂಪಕಗಳು ಅವರ ಸಾಹಿತ್ಯದಲ್ಲಿ ಮತ್ತೆಮತ್ತೆ ಕಾಣಿಸಿಕೊಳ್ಳುತ್ತವೆ. ಸಂಕೇತ ಮತ್ತು ರೂಪಕಗಳಲ್ಲಿರುವ ಈ ಚಲನೆ ಅಥವಾ ಪಯಣದ ವಿನ್ಯಾಸಗಳನ್ನು ಹಿಡಿಯಲು ಮುಂದಿನ ಉಪಅಧ್ಯಾಯಗಳಲ್ಲಿ ಯತ್ನಿಸಲಾಗಿದೆ.

'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಕುವೆಂಪುರವರ ಎರಡು ಕಾದಂಬರಿಗಳು. ಈ ಎರಡು ಕಾದಂಬರಿಗಳಲ್ಲಿ ಮಲೆನಾಡಿನ ಬದುಕಿನ ಪಯಣದ ಹಾದಿಯ ಹಲವು ಮುಖಗಳ ಅನಾವರಣವಿದೆ.

ಕಾನೂರು ಹೆಗ್ಗಡಿತಿ(೧೯೩೬): ಈ ಹಿಂದೆ ಸೂಚಿಸಿದಂತೆ ಈ ಕಾದಂಬರಿಯು ಬೇಸಿಗೆಯ

ರಜೆಗಾಗಿ ಹುಟ್ಟಿದೂರಾದ ಕಾನೂರಿಗೆ ಹಿಂದಿರುಗುತ್ತಿರುವ ಹೂವಯ್ಯ ಮತು ರಾಮಯ್ಯ ಎಂಬ ತರುಣರಿಬ್ಬರು ತೀರ್ಥಹಳ್ಳಿಯ ಬಳಿಕ ತುಂಗಾನದಿಯ ಕಲ್ಲುಸಾರವನ್ನು ದಾಟುವ ವರ್ಣನೆಯೊಂದಿಗೆ ಆರಂಭವಾಗುತ್ತದೆ. ಹೀಗೆ ದೈಹಿಕ ಪಯಣದಿಂದ ಆರಂಭವಾಗುವ ಕಾದಂಬರಿಯು ಮುಂದೆ ಈ ತರುಣರು ಅದರಲ್ಲೂ ಹೂವಯ್ಯನು ಆಧ್ಯಾತ್ಮಿಕವಾಗಿ ಮಾಡುವ ಅನೇಕ ಬಗೆಯ ಪಯಣಗಳ ಕಥನವನ್ನು ಒಳಗೊಳ್ಳುತ್ತದೆ. ಕಾದಂಬರಿಯಲ್ಲಿ ಮುಖ್ಯವಾಗಿ ಎರಡು ತಲೆಮಾರುಗಳ ಜೀವನದ ಚಿತ್ರಣವಿದೆ. ಚಂದ್ರಯ್ಯಗೌಡ, ಸಿಂಗಪ್ಪಗೌಡ, ಶಾಮಯ್ಯಗೌಡ, ಅಣ್ಣಯ್ಯಗೌಡ, ಪೆದ್ದೇಗೌಡ, ಸುಬ್ಬಯ್ಯಗೌಡ, ವೆಂಕಪ್ಪಯ್ಯ, ಸೇರೆಗಾರ ಹಾಗೂ ಗೌರಮ್ಮ, ನಾಗಮ್ಮ ಮೊದಲಾದವರು ಒಂದು ತಲೆಮಾರಿಗೆ ಸೇರಿದವರಾದರೆ, ಹೂವಯ್ಯ, ರಾಮಯ್ಯ, ಸೀತೆ, ಚಿನ್ನಪ್ಪ ಇನ್ನೊಂದು ತಲೆಮಾರಿಗೆ ಸೇರಿದವರು. ಕಾದಂಬರಿಯಲ್ಲಿ ಹೂವಯ್ಯನ ಜೀವನದ ಪಯಣದ ಕಥೆಯು ಕೇಂದ್ರದಲ್ಲಿದ್ದರೂ, ಉಳಿದ ಪಾತ್ರಗಳ ಬದುಕಿನ ಕಥೆಯೂ ಇದೆ. ಎಳೆಯ ವಯಸ್ಸಿನ ಸುಬ್ಬಮ್ಮನನ್ನು ಮದುವೆಯಾದ ವಯಸ್ಸಾದ ಚಂದ್ರಯ್ಯಗೌಡರು ಮದುವೆಯಾಗಿ, ಅವರ ಮತ್ತು ಆಕೆಯ ಜೀವನ ದುರಂತದಲ್ಲಿ ಪರ್ಯಾವಸಾನ ಗೊಳ್ಳುತ್ತದೆ. ಮುದುಕನ ಪತ್ನಿಯಾಗಿ ಸುಬ್ಬಮ್ಮ ಬರುವ ಸುಬ್ಬಮ್ಮ ಚಂದ್ರಯ್ಯಗೌಡರ ಸಾವಿನ ಬಳಿಕ ಸೇರೆಗಾರನ ಕುಟಿಲೋಪಾಯಗಳಿಗೆ ಒಳಗಾಗಿ ಗರ್ಭಿಣಿಯಾಗುತ್ತಾಳೆ. ಆ ಅಪಮಾನದಿಂದ ಪಾರಾಗಲು ಗರ್ಭಪಾತದ ಪ್ರಯತ್ನದಲ್ಲಿ ಸಾವನ್ನಪ್ಪುತ್ತಾಳೆ. ರಾಮಯ್ಯನದು ಅಫೀಮಿನ ಚಟಕ್ಕೆ ಬಲಿಯಾಗುವ ಮತ್ತು ಕೃಷ್ಣಪ್ಪನದು ಬೇಟೆಯ ದುಸ್ಸಾಹಸಕ್ಕೆ ಬಲಿಯಾಗುವ ದುರಂತಗಳಾಗಿವೆ. ಹೂವಯ್ಯನನ್ನು ಇಷ್ಟಪಡುವ ಸೀತೆ ವ್ಯಕ್ತಿಗಳ ಜಿದ್ದಿಗೆ ಸಿಕ್ಕು ರಾಮಯ್ಯನನ್ನು ಮದುವೆಯಾಗುತ್ತಾಳೆ. ಚಂದ್ರಯ್ಯಗೌಡರಿಂದ ಹಿಂಸೆಗೆ ಒಳಗಾಗಿ ಕೊನೆಯಲ್ಲಿ ಹೂವಯ್ಯನನ್ನು ಸೇರುವಲ್ಲಿ ಸಫಲವಾಗುತ್ತಾಳೆ. ಹೀಗೆ ಎಲ್ಲ ಪ್ರಮುಖ ಪಾತ್ರಗಳು ತಮ್ಮ ಜೀವನದ ಪಯಣದಲ್ಲಿ ಎಲ್ಲಿಗೋ ಹೊರಟು ಇನ್ನೆಲ್ಲಿಗೋ ಸೇರುತ್ತಾರೆ. ತಾವು ಬಯಸಿದಂತೆ ಜೀವನದ ಪಥದಲ್ಲಿ ಪಯಣ ಮಾಡದೆ ಇರುವುದೇ ಇಲ್ಲಿನ ಅನೇಕರ ದುರಂತವಾಗಿದೆ.

ನಾಗಮ್ಮ, ಹೂವಯ್ಯರ ಮೇಲಿನ ಮನಸ್ತಾಪದ ಸಲುವಾಗಿ ಚಂದ್ರಯ್ಯಗೌಡರು ಮನೆಯ ಆಸ್ತಿಯನ್ನು ಇಬ್ಭಾಗ ಮಾಡುತ್ತಾರೆ. ಇದರ ಹಿಂದೆ ಸುಬ್ಬಮ್ಮನ ಶೀಲದ ಬಗೆಗಿನ ಅನುಮಾನವೂ ಒಂದು ಕಾರಣವಾಗಿದೆ. ಆದರೆ ಚಿನ್ನಯ್ಯ ಮತ್ತು ಪುಟ್ಟಮ್ಮನಂಥವರ ಬಾಳುವೆ ಮಾತ್ರ ಅವರು ಇಚ್ಛಿಸಿದಂತೆ ನಡೆಯುತ್ತದೆ. ಅವರದೊಂದು ಆದರ್ಶಮಯ ದಾಂಪತ್ಯವಾಗಿ ಚಿತ್ರಿತಗೊಂಡಿದೆ. ಕಾದಂಬರಿಯಲ್ಲಿ ಕೇವಲ ಪ್ರಮುಖ ವರ್ಗಕ್ಕೆ ಸೇರಿದ ಪಾತ್ರಗಳ ಜೀವನ ಚಿತ್ರವಿಲ್ಲ. ಸೇವಕ ವರ್ಗಕ್ಕೆ ಸೇರಿದ ಓಬಯ್ಯ, ಗಾಡಿಯ ನಿಂಗ, ಮುತ್ತಳ್ಳಿಯ ನಂಜ, ಬೇಲರ ಬೈರ, ಬಾಡುಗಳ್ಳ ಸೋಮ, ಕಿಲಿಸ್ತರ ಜಾಕಿ, ಬೇಲರ ಸೇಸಿ, ಬೆಲೆವೆಣ್ಣು ಗಂಗೆಯಂಥವರ ಜೀವನವೂ ಇದೆ. ಟೈಗರ್, ರೋಜಿ, ಕೊತ್ವಾಲ, ಪಾಟ್‌ರೈಟ್ ಮೊದಲಾದ ನಾಯಿಗಳೂ, ನಂದಿ, ಲಚ್ಚ ಕೌಲಿ ಮೊದಲಾದ ದನಗಳೂ ಬಲೀಂದ್ರನಂಥ ಹೋತವೂ ತಮ್ಮ ಜೀವನ ಮಾಡುವುದನ್ನು ಕಾದಂಬರಿ

ಚಿತ್ರಿಸುತ್ತದೆ. ಹೀಗೆ ವ್ಯಕ್ತಿ ಮತ್ತು ಪ್ರಾಣಿಗಳ ಪ್ರತಿಯೊಂದು ಪಾತ್ರಗಳ ಬದುಕೂ ಒಂದರೊಳಗೊಂದು ಚಲನಶೀಲವಾಗಿ ಸೇರಿಕೊಂಡು ಸಾಗುತ್ತದೆ. ಇದು ಒಬ್ಬರ ಬದುಕು ಇನ್ನೊಬ್ಬರ ಬದುಕಿನ ಜತೆಗೆ ಸೇರಿಕೊಂಡಿದೆ ಎಂಬ ದರ್ಶನವನ್ನು ಧ್ವನಿಸುತ್ತದೆ.

ಮಲೆಗಳಲ್ಲಿ ಮದುಮಗಳು(೧೯೬೭): ಕುವೆಂಪು ಅವರ ಮೊದಲ ಕಾದಂಬರಿ 'ಕಾನೂರು ಹೆಗ್ಗಡಿತಿ' ಮೊದಲು ಪ್ರಕಟವಾಗಿದ್ದು ೧೯೩೭ರಲ್ಲಿ. ಅದಾದ ಮೂವತ್ತು ವರ್ಷಗಳ ನಂತರ ಅವರ ಎರಡನೆಯ ಕಾದಂಬರಿ 'ಮಲೆಗಳಲ್ಲಿ ಮದುಮಗಳು' ಪ್ರಕಟವಾಯಿತು. ವಿಶೇಷ ಸಂಗತಿ ಎಂದರೆ ಎರಡನೆಯ ಕಾದಂಬರಿಯಲ್ಲಿ ಘಟನೆಗಳು ಸಂಭವಿಸುವ ಕಾಲಾವಧಿ, ಮೊದಲ ಕಾದಂಬರಿಯಲ್ಲಿ ಕಥೆ ನಡೆಯುವ ಕಾಲಾವಧಿಗಿಂತ ಮೂವತ್ತು ನಲವತ್ತು ವರುಷಗಳಷ್ಟು ಹಿಂದಿರುವುದು. ಆದರೆ ಎರಡೂ ಕಾದಂಬರಿಗಳು ಒಂದುಗೂಡಿ ಮಲೆನಾಡಿನ ಜೀವನದ ಒಂದು ಅಥೆಂಟಿಕ್ ದಾಖಲೆಯನ್ನೇ ರಚಿಸಿವೆ. ಮೇಲ್ನೋಟಕ್ಕೆ 'ಕಾನೂರು ಹೆಗ್ಗಡಿತಿ' 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳಲ್ಲಿ ಮಲೆನಾಡಿನ ಜೀವನದ ಚಿತ್ರಗಳೇ ಇದ್ದರೂ ಪಯಣದ ಪರಿಕಲ್ಪನೆಯ ದೃಷ್ಟಿಯಿಂದ ಅವುಗಳ ನಡುವೆ ವ್ಯತ್ಯಾಸಗಳಿವೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಹರವು 'ಕಾನೂರು ಹೆಗ್ಗಡಿತಿ'ಗಿಂತ ವಿಶಾಲವಾಗಿದೆ. ಮಲೆನಾಡಿನ ಜೀವನದ ವಿವರಗಳು ಇಲ್ಲಿ ಇನ್ನೂ ಹೆಚ್ಚು ಸಮೃದ್ಧವಾಗಿವೆ. 'ಕಾನೂರು ಹೆಗ್ಗಡಿತಿ'ಯಲ್ಲಿ ಹೂವಯ್ಯ ಎಲ್ಲರಿಗಿಂತ ಮುಖ್ಯ ಪಾತ್ರವಾಗಿದ್ದರೆ, 'ಮಲೆಗಳಲ್ಲಿ ಮದುಮಗಳು' ಕಾದಂಬರಿಗೆ ಹಾಗೆ ಒಂದು ಮುಖ್ಯ ಪಾತ್ರವಾಗಲಿ, ಒಂದು ಕೇಂದ್ರವೆಂಬುದಾಗಲೀ ಇಲ್ಲ. ಅಲ್ಲಿ ಮುಕುಂದಯ್ಯನಿಗೆ ಇರುವಷ್ಟೇ ಪ್ರಾಮುಖ್ಯ ಗುತ್ತಿ, ಐತ, ಚೀಂಕ್ರ, ಸುಬ್ಬಣ್ಣ ಹೆಗಡೆ, ದೇವಯ್ಯರಿಗೂ ಇದೆ. ಚಿನ್ನಮ್ಮನಿಗಿರುವಷ್ಟೇ ಪ್ರಾಮುಖ್ಯ ಪೀಂಚಲು, ತಿಮ್ಮಿ, ಕಾವೇರಿ ಮುಂತಾದವರಿಗೂ ಇದೆ. ಕಾದಂಬರಿಯ ಪ್ರಾರಂಭದಲ್ಲೇ "ಇಲ್ಲಿ ಯಾರೂ ಮುಖ್ಯರಲ್ಲ: ಯಾರೂ ಅಮುಖ್ಯರಲ್ಲ; ಯಾವುದೂ ಯಃಕಶ್ಚಿತವಲ್ಲ! ಯಾವುದೂ ಎಲ್ಲಿಯೂ ನಿಲ್ಲುವುದೂ ಇಲ್ಲ; ಕೊನೆ ಮುಟ್ಟುವುದೂ ಇಲ್ಲ! ಇಲ್ಲಿ ಅವಸರವೂ ಸಾವಧಾನದ ಬೆನ್ನೇರಿದೆ! ಇಲ್ಲಿ ಎಲ್ಲಕ್ಕೂ ಇದೆ ಅರ್ಥ; ಯಾವುದೂ ಅಲ್ಲ ವ್ಯರ್ಥ; ನೀರೆಲ್ಲ ಊ ತೀರ್ಥ" ಎಂದೂ ಘೋಷವಾಕ್ಯವಿದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಪಾತ್ರಗಳು ಪ್ರಕೃತಿಗೆ ಸಮೀಪವಾಗಿರುವುದಷ್ಟೇ ಅಲ್ಲ, ಪ್ರಕೃತಿಯ ಒಂದು ಅಂಶವೆಂಬಂತೆಯೇ ನಿರ್ವಹಣೆಗೆ ಒಳಗಾಗಿವೆ. 'ಮಲೆಗಳಲ್ಲಿ ಮದುಮಗಳು' ಎಂಬ ಶೀರ್ಷಿಕೆಯಲ್ಲಿಯೇ ಕಾದಂಬರಿಯ ಕೇಂದ್ರದ ಸೂಚನೆಯಿದೆ. 'ಮದುಮಗಳು' ಎಂಬ ಪದವು ಚಿನ್ನಮ್ಮನಿಗೆ ಸಂಬಂಧಿಸಿದಂತೆ ಕಾದಂಬರಿಯಲ್ಲಿ ಬರುತ್ತದೆಯಾದರೂ ಗುತ್ತಿ ಮದುವೆಯಾಗುವ ತಿಮ್ಮಿಯೂ ಮದುವಣಗಿತ್ತಿಯೇ ಆಗಿದ್ದಾಳೆ. ಹೀಗಾಗಿ ಗುತ್ತಿ-ತಿಮ್ಮಿ, ಐತ-ಪೀಂಚಲು, ಮುಕುಂದಯ್ಯ-ಚಿನ್ನಮ್ಮ ಈ ಮೂವರ ಜೀವನದ ಪಯಣಗಳೂ ಕಾದಂಬರಿಯ ಕೇಂದ್ರಕ್ಕೆ ಸಮಾನವಾಗಿ ಮುಖ್ಯವಾಗಿವೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯು ಸಿಂಬಾವಿ ಭರಮೈ ಹೆಗ್ಗಡೆಯವರ ಜೀತದಾಳಾದ ನಾಯಿಗುತ್ತಿಯು ತನ್ನ ಪ್ರಿಯತಮೆಯಾದ ತಿಮ್ಮಿಯನ್ನು ಹಾರಿಸಿಕೊಂಡು ಬರುವುದಕ್ಕಾಗಿ ಸಿಂಬಾವಿಯಿಂದ ಬೆಟ್ಟಳ್ಳಿಗೆ ಪಯಣ ಹೊರಡುವುದರೊಂದಿಗೆ ಪ್ರಾರಂಭವಾಗುತ್ತದೆ. ಆದರೆ ಅದು ಅವನ ಹಾಗೂ ತಿಮ್ಮಿಯ ವಲಸೆಯ ಪಯಣದಲ್ಲಿ ಕೊನೆಗೊಳ್ಳುತ್ತದೆ. ಒಂದು ಪಯಣದ ಎಳೆ ಕಾದಂಬರಿಯ ಎಲ್ಲ ಅಧ್ಯಾಯಗಳಲ್ಲಿ ಸುರಳಿಯಾಗಿ ಹರಿದು ಬರುತ್ತದೆ. ಎಲ್ಲ ಪಯದ ಎಳೆಗಳೂ ಒಂದರೊಳಗೊಂದು ಹೊಸೆದುಕೊಳ್ಳುತ್ತವೆ. ಕಾದಂಬರಿಯಲ್ಲಿ 'ಹುಲಿಕಲ್ಲು ನೆತ್ತಿ'ಯು ಮದುಮಕ್ಕಳಾಗಿ ಪ್ರಣಯ ಸಾಹಸದ ಪಯಣವನ್ನು ಮಾಡಿ ಬರುವ ಮುಕುಂದಯ್ಯ-ಚಿನ್ನಮ್ಮ, ಗುತ್ತಿ-ತಿಮ್ಮಿಯರು ಒಂದಾಗುವುದಕ್ಕೆ ವೇದಿಕೆಯಾಗುತ್ತದೆ. ಮಹಿಳೆಯರಿಗೆ ಅವರ ಮನೆಗಳಲ್ಲಿ ಅನೇಕ ಸಾಮಾಜಿಕ ಕೌಟುಂಬಿಕ ಕಾರಣಗಳಿಂದ ಅವರಿಗೆ ವಿರುದ್ಧವಾದ ಪುರುಷರಿಗೆ ಕೊಟ್ಟು ಮದುವೆಯಾಗುವ ಒತ್ತಡವೇ ಈ ಹುಡುಗಿಯರ ಪ್ರಣಯ ಸಾಹಸದ ಪಯಣಕ್ಕೆ ನಾಂದಿ ಹಾಡುತ್ತದೆ.

ತಿಮ್ಮಿ-ಗುತ್ತಿ, ಚಿನ್ನಮ್ಮ-ಮುಕುಂದಯ್ಯ ಇವರ ಕತೆಗಳಲ್ಲದೆ ಹಲವಾರು ಬೇರೆ ಕತೆಗಳ ಎಳೆಗಳೂ ಕಾದಂಬರಿಯ ವಸ್ತುಜಾಲದಲ್ಲಿ ಸೇರಿಕೊಂಡಿವೆ. ಇವುಗಳ ವಿನ್ಯಾಸಕ್ರಮ ಹೆಚ್ಚಾಗಿ ಗುತ್ತಿಯ ಪಯಣ, ಮರುಪಯಣಗಳ ಕ್ರಮವನ್ನು ಅನುಸರಿಸಿ ಬರುವುದು ಬಂಧದ ದೃಷ್ಟಿಯಿಂದ ಗಮನಾರ್ಹವಾಗಿದೆ. ಗುತ್ತಿಯು ಲಕ್ಕುಂದಕ್ಕೆ ಬಂದಾಗ ಸೇಸನಾಯ್ಕ-ಕಾಡಿಯರ ಕತೆಯು ಕೇಳಿಸಿಕೊಳ್ಳುತ್ತಾನೆ. ಆತ ಮೇಗರವಳ್ಳಿ ತಲುಪಿದಾಗ ಅಂತಕ್ಕ-ಕಾವೇರಿಯರ ಕತೆ ಕೇಳಬೇಕಾಗುತ್ತದೆ. ಆತ ಹಳೆಮನೆಯನ್ನು ಸೇರಿದಾಗ ಸುಬ್ಬಣ್ಣ ಹೆಗಡೆಯವರ ಕುಟುಂಬದ ವಿವರಗಳಿಗೆ ಸಾಕ್ಷಿಯಾಗುತ್ತಾನೆ. ಆತ ಬೆಟ್ಟಳ್ಳಿಯನ್ನು ಮುಟ್ಟಿದಾಗ ದೇವಯ್ಯನ ಕತೆ ಬಿಚ್ಚಿಕೊಳ್ಳುತ್ತದೆ. ಹೀಗೆ ಕಾದಂಬರಿಯ ವಸ್ತು ಹಲವಾರು ಪಾತ್ರಗಳ ಕುಟುಂಬಗಳ ಜೋಡಿಗಳ ಕತೆಗಳಾಗಿ ಹರಡುತ್ತ ಹೋಗುತ್ತದೆ. ಇದೊಂದು ಬಗೆಯಲ್ಲಿ ಕತೆಗಳು ಮಾಡುವ ಪಯಣವೂ ಆಗಿದೆ. ಗುತ್ತಿಯ ಪಯಣದ ಹೆಜ್ಜೆಗಳನ್ನು ಕೇಂದ್ರಗಳೆಂದು ಪರಿಗಣಿಸಿದರೆ ಈ ಕಥೆಗಳು ಆ ಕೇಂದ್ರದ ಸುತ್ತ ಹಬ್ಬಿಕೊಳ್ಳುವ ವರ್ತುಲಗಳಾಗಿ ಕಾಣಿಸಿಕೊಳ್ಳುತ್ತವೆ. ಸಣ್ಣಪುಟ್ಟ ತೊರೆಗಳು ಸೇರಿ ದೊಡ್ಡ ನದಿಯಾಗಿ ಹರಿಯುವಂತೆ, ಕಾದಂಬರಿಯಲ್ಲಿ ಹಲವಾರು ಜನರ ಪ್ರಾಣಿಗಳ ಪಕ್ಷಿಗಳ ಕೀಟಗಳ ಜೀವನದ ಪಯಣದ ಧಾರೆಗಳು ಒಗ್ಗೂಡಿ ಹರಿಯುತ್ತವೆ. ಅವುಗಳಿಗೆ ಗುತ್ತಿಯು ಸಾಕ್ಷಿಪ್ರಜ್ಞೆಯಾಗುತ್ತ ಹೋಗುತ್ತಾನೆ.

ಕುವೆಂಪುರವರ ಎರಡು ಕೃತಿಗಳಲ್ಲೂ ಗಂಡು-ಗಂಡುಗಳ ನಡುವೆ, ಹೆಣ್ಣು-ಹೆಣ್ಣುಗಳ ನಡುವೆ, ಗಂಡು-ಹೆಣ್ಣಿನ ನಡುವೆ, ಮನುಷ್ಯ-ಪ್ರಕೃತಿಯ ನಡುವೆ, ವರ್ಗ-ವರ್ಗಗಳ ನಡುವೆ, ಜಾತಿಗಳ ನಡುವೆ, ಆಲೋಚನಕ್ರಮಗಳ ನಡುವೆ ಸಂಘರ್ಷಗಳು ಬರುತ್ತವೆ. ಅಂತಹ ಎಲ್ಲ ಸಂಘರ್ಷಗಳಲ್ಲಿ ಪಯಣದ ಆಯಾಮವಿಲ್ಲ. ಆದರೆ ಅನೇಕ ಸಂಘರ್ಷಗಳನ್ನು ಪಯಣದ ಪರಿಕಲ್ಪನೆಯಿಲ್ಲದೆ ಚರ್ಚಿಸಲು ಸಾಧ್ಯವಿಲ್ಲ.

೩.೨. ಪಯಣ: ಗಂಡು-ಹೆಣ್ಣು

ಪಯಣವಿಲ್ಲದೆ ವ್ಯಕ್ತಿಗಳು ಬದುಕಲಾರರು. ಜೀವಿತದಲ್ಲಿ ಪ್ರತಿಯೊಬ್ಬರು ಒಂದಲ್ಲಾ ಒಂದು ರೀತಿಯಲ್ಲಿ ಬದುಕನ್ನು ಕಂಡುಕೊಳ್ಳಲು ಪಯಣ ಮಾಡುತ್ತಾರೆ. ಸಸ್ಯ, ಪ್ರಾಣಿ, ಪಕ್ಷಿ, ಮನುಷ್ಯ ಪ್ರತಿಯೊಂದು ಜೀವಿಗೂ ತನ್ನದೆ ಆದ ಚಲನೆಗಳಿವೆ. ಮನುಷ್ಯರಲ್ಲಿ ಮುಖ್ಯವಾಗಿ ಗಂಡು-ಹೆಣ್ಣುಗಳ ನಡುವೆ ಭಿನ್ನ ಚಲನೆಗಳಿವೆ. ಸಮಾಜದಲ್ಲಿ ಜೀವಿಸುವ ಪ್ರತಿಯೊಬ್ಬರ ಬದುಕಿನ ಪಯಣವೂ ಭಿನ್ನತೆಯನ್ನು ಪಡೆದಿರುತ್ತದೆ. ಮಗು, ಯುವಕ, ಯುವತಿ, ಗೃಹಿಣಿ, ಮುದುಕ ಮುಂತಾದವರು ಹಲವು ನೆಲೆಗಳಲ್ಲಿ ಪಯಣ ಮಾಡುವ ಸಂದರ್ಭ, ಸ್ಥಳ, ಕಾಲಗಳು, ಪಯಣಕ್ಕೆ ಬೇರೆ ಬೇರೆ ರೀತಿಯ ಅರ್ಥಗಳನ್ನು ಹುಟ್ಟಿಸುತ್ತವೆ. ದುಡಿಯುವ ವರ್ಗಕ್ಕೂ ಕೆಳಜಾತಿಗೂ ಸೇರಿದ ಮಹಿಳೆಯರಿಗೆ ಹೋಲಿಸಿದರೆ ಮೇಲುವರ್ಗ ಹಾಗೂ ಮೇಲುಜಾತಿಯ ಕುಟುಂಬಗಳಿಗೆ ಸೇರಿದ ಮಹಿಳೆಯರ ಚಲನೆಗಳನ್ನು ಸಾಂಪ್ರದಾಯಿಕ ಹಾಗೂ ಪುರುಷವಾದಿ ಸಮಾಜವು ನಿಯಂತ್ರಿಸಿರುವುದು ಗಮನಕ್ಕೆ ಬರುತ್ತದೆ. ಈ ಹಿನ್ನೆಲೆಯಲ್ಲಿ ಕುವೆಂಪು ಕಾದಂಬರಿಗಳಲ್ಲಿ ಗಂಡು-ಹೆಣ್ಣಿನ ಪಯಣದ ವಿನ್ಯಾಸಗಳನ್ನು ಗಮನಿಸಬಹುದು.

'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ನೆಲ್ಲುಹಳ್ಳಿಯಿಂದ ಮದುಮಗಳಾಗಿ ಬರುವ ಸುಬ್ಬಮ್ಮ ಚಂದ್ರಯ್ಯಗೌಡರ ಹೆಂಡತಿಯಾದ ಮೇಲೆ ಕಾನೂರು ಸುಬ್ಬಮ್ಮ ಹೆಗ್ಗಡಿತಿಯಾಗಿ ಪರಿವರ್ತನೆಯಾಗುವಳು. ನೆಲ್ಲುಹಳ್ಳಿ ಮತ್ತು ಕಾನೂರಿನ ನಡುವಿನ ಸುಬ್ಬಮ್ಮಳ ಒಂದು ವಿಲಕ್ಷಣ ಪಯಣವು ಅವಳನ್ನು ಕಾನೂರಿನ ಒಡತಿಯನ್ನಾಗಿಸುತ್ತದೆ. ಸಾಮಾನ್ಯ ಬಡತನದ ಕುಟುಂಬದಲ್ಲಿ ಹುಟ್ಟಿ ಬೆಳೆದ ಸುಬ್ಬಮ್ಮನಿಗೆ ಅವಳು ಮದುಮಗಳಾಗಿ ಮಾಡುವ ಮೊದಲ ಪಯಣವು ಅವಳ ಮನದ ದಿಗಂತದಲ್ಲಿ ಹೊಸ ಕನಸೊಂದನ್ನು ಹುಟ್ಟುಹಾಕುತ್ತದೆ. ಆದರೆ ಸಿರಿವಂತಳಾಗಿ ಮೆರೆಯುವ ಅವಳ ಕನಸೇ ಅವಳ ಜೀವನ ಪಯಣವು ದುರಂತದಲ್ಲಿ ಮುಗಿಯಲು ಪೀಠಿಕೆಯಾಗುತ್ತದೆ. ಆದರೆ ಸೀತೆ ಸುಬ್ಬಮ್ಮನಂತೆ ತನ್ನ ಹುಟ್ಟಿದ ಮನೆಯನ್ನು ತೊರೆದು ಗಂಡನ ಮನೆಗೆ ಪಯಣವನ್ನು ಮಾಡುವ ಸನ್ನಿವೇಶವು ಬರುವುದಿಲ್ಲ. ಆದರೂ ಅವಳು ತನ್ನ ಪ್ರಿಯತಮನಾದ ಹೂವಯ್ಯನನ್ನು ಪಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಜೋಡಿಗೆ ಹೋಲಿಸಿದರೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಪ್ರೇಮಿಗಳಾದ ಗುತ್ತಿ-ತಿಮ್ಮಿ, ಮುಕುಂದಯ್ಯ-ಚಿನ್ನಮ್ಮರ ಜೋಡಿಗಳು ಮನೆಯನ್ನು ಬಿಟ್ಟು ಪಯಣ ಮಾಡುವುದರಿಂದ ಒಂದಾಗಲು ಸಾಧ್ಯವಾಗುತ್ತದೆ. ಪಯಣವನ್ನು ಮಾಡದೆ ಯಶಸ್ಸನ್ನು ಪಡೆಯಲು ಸಾಧ್ಯವಾಗದೆ ಹೋಗುತ್ತದೆ. ಇಲ್ಲಿ ಪಯಣವು ಸಾಮಾಜಿಕವಾದ ಕೌಟುಂಬಿಕವಾದ ನಿರ್ಬಂಧಗಳನ್ನು ಮೀರಿಹೋಗುವ ಸಾಹಸವಾಗುತ್ತದೆ. ಅದು ತನ್ನಿಚ್ಛೆಯಂತೆ ಬದುಕನ್ನು ಕಟ್ಟಿಕೊಳ್ಳಲು ಪ್ರೇಮಿಗಳು ಮಾಡುವ ಸೀಮೋಲ್ಲಂಘನೆಯಾಗುತ್ತದೆ.

ಹೂವಯ್ಯ ಮತ್ತು ರಾಮಯ್ಯ ಶಿಕ್ಷಣದ ಸಲುವಾಗಿ ಮೈಸೂರು–ಕಾನೂರು ನಡುವೆ ಪಯಣ ಮಾಡಿ ಮರಳುವ ಸನ್ನಿವೇಶವು ಕಾದಂಬರಿಯ ಮೊದಲ ಭಾಗದಲ್ಲಿ ಬಂತಷ್ಟೆ. ಆದರೆ ಕಾದಂಬರಿಯಲ್ಲಿ ಎಲ್ಲಿಯೂ ಸ್ತ್ರೀಯರು ಶಿಕ್ಷಣವನ್ನು ಪಡೆಯುವುದಕ್ಕಾಗಿ ತಮ್ಮ ಊರುಗಳನ್ನು ಬಿಟ್ಟು ಹೋರಗೆ ಹೋದ ವಿವರಗಳು ಕಾದಂಬರಿಯಲ್ಲಿ ಇಲ್ಲ. ಇದಕ್ಕೆ ಕಾರಣ, ಹಾಗೆ ಹೊರಗೆ ಚಲಿಸುವ ಅವಕಾಶವನ್ನು ಅವರಿಗೆ ಕೊಡುವ ಕಾಲಘಟ್ಟದ ಬದುಕು ಕಾದಂಬರಿಯಲ್ಲಿ ಇಲ್ಲದಿರುವುದು. ಮಹಿಳೆಯರ ಮೇಲೆ ಸಾಂಪ್ರದಾಯಿಕ ಮೌಲ್ಯವ್ಯವಸ್ಥೆಯು ಪಯಣದ ಮೇಲೆ ಹೇರಿರುವ ನಿರ್ಬಂಧವೇ ಪುರುಷ–ಸ್ತ್ರೀಯರ ನಡುವಿರುವ ಶಿಕ್ಷಣದ ತಾರತಮ್ಯ ವ್ಯವಸ್ಥೆಗೆ ಸಂಕೇತವಾಗಿದೆ. ದೂರದ ಊರಿಗೆ ಹೋಗಿ ವಿದ್ಯಾಭ್ಯಾಸ ಪಡೆದು ಬಂದಿರುವ ಪುರುಷನಾದ ಹೂವಯ್ಯನ ಅನುಭವ ಹಾಗೂ ಅವನು ಅಲ್ಲಿ ಪಡೆದಿರುವ ಚಿಂತನೆಗಳನ್ನು ಮನೆಯನ್ನು ಬಿಟ್ಟು ಹೆಚ್ಚು ದೂರ ಅಡ್ಡಾಡಿರದ ಸೀತೆ ಮುಗ್ಧವಾಗಿ ವಿಸ್ಮಿತಳಾಗಿ ಕೇಳುತ್ತಾಳೆ. ಅದನ್ನು ಕೇಳುವಾಗ ತಾನೂ ಹೂವಯ್ಯನಂತೆ ಶಿಕ್ಷಣ ಪಡೆಯಬೇಕಿತ್ತು ಎಂಬ ಆಸೆಯು ಅವಳಲ್ಲಿ ವ್ಯಕ್ತವಾಗುವುದನ್ನು ಕಾದಂಬರಿ ಸೂಕ್ಷ್ಮವಾಗಿ ಕಾಣಿಸುತ್ತದೆ. ಹೆಣ್ಣು ಕೇವಲ ಮನೆಗೆ ಸೀಮಿತಳಾಗಿ ಕೆಲಸ ಕಾರ್ಯಗಳಲ್ಲಿ ತನ್ನ ಬದುಕನ್ನು ಸವೆಸುವ ಸಾಂಪ್ರದಾಯಿಕ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯು ಆಕೆಯ ಚಲನೆಯನ್ನು ಮಾತ್ರವಲ್ಲ, ಚಲನೆಯ ಭಾಗವಾಗಿ ಸಿಗುವ ಉನ್ನತ ಶಿಕ್ಷಣದ ಹಕ್ಕನ್ನೂ ಕಸಿದುಕೊಂಡಿದೆ. 'ಬೆಟ್ಟದ ಜೀವ' ಕಾದಂಬರಿಯ ಶಂಕರಿ ಪಾತ್ರವು ಮೇಲ್ಜಾತಿಗೆ ಸಂಬಂಧಿಸಿದ್ದು, ಅದು ಕೂಡ ಮನೆಯಾಚೆ ಪಯಣ ಮಾಡುವ ವಿವರಗಳು ಬರುವುದಿಲ್ಲ. ಇದಕ್ಕೆ ಹೋಲಿಸಿದರೆ ದುಡಿಯುವ ವರ್ಗದ ಕೆಳಜಾತಿಯ ಮಹಿಳೆಯರು ಹೆಚ್ಚಿನ ಚಲನೆಯ ಸ್ವಾತಂತ್ರ್ಯವನ್ನು ಪಡೆದಿದ್ದಾರೆ. ಅವರ ಒಳನಾಡಿನ ಅನೇಕ ಪಯಣಗಳನ್ನು ಕುವೆಂಪು ಹಾಗೂ ಕಾರಂತರ ಕಾದಂಬರಿಗಳು ಸೂಚಿಸುತ್ತವೆ. ಕಾರಂತರ 'ಮರಳಿಮಣ್ಣಿಗೆ'ಯಲ್ಲಿ ರಾಮೈತಾಳರ ಕುಟುಂಬವು ಮೇಲುಜಾತಿಗೆ ಸೇರಿದ್ದರೂ, ಆರ್ಥಿಕವಾಗಿ ಬಡಕುಟುಂಬವಾದ ಕಾರಣ, ಅಲ್ಲಿನ ಮಹಿಳೆಯರು ಹೆಚ್ಚಿನ ಹೊರಚಲನೆಯ ಸ್ವಾತಂತ್ರ್ಯವನ್ನು ಅನುಭವಿಸುತ್ತಾರೆ. ಆದರೆ ದುಡಿಯುವ ವರ್ಗದ ಮಹಿಳೆಯರೂ ತಮ್ಮ ಸ್ವತಂತ್ರ ಚಲನೆಯ ವಿಷಯದಲ್ಲಿ ಭೂಮಾಲೀಕ ವ್ಯವಸ್ಥೆಯಲ್ಲಿ ಅನೇಕ ಬಿಕ್ಕಟ್ಟುಗಳನ್ನು ಅನುಭವಿಸುತ್ತಿದ್ದಾರೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಕಾವೇರಿಯ ತಾಯಿ ಅಂತಕ್ಕ ಗುತ್ತಿಯನ್ನು ನೋಡುತ್ತಾ ದೊಡ್ಡಬೀರನ ಮಗಳ ವಿಚಾರವನ್ನು ಪ್ರಸ್ತಾಪಿಸುತ್ತಾಳೆ: "ಅವನ ಮಗಳನ್ನು ನೀನು ಕೇಳುತ್ತಿದ್ದಿಯಂತೆ. ನಿಮ್ಮ ಹೆಗ್ಗಡೇರೂ ನಿನ್ನ ಹಿಂದುಗಡೆ ನಿಂತುಕೊಂಡು ಹುನಾರು ಮಾಡುತ್ತಿದ್ದಾರಂತೆ. 'ಅವರಿಗೇನು? ದುಡಿಯುವುದಕ್ಕೆ ಒಂದು ಹೆಣ್ಣಾಳು ಸಿಗುತ್ತದೆಯಲ್ಲಾ? ಅಷ್ಟೇ!'"(ಪು.೫೪) ಕೆಳವರ್ಗದವರ ಬದುಕು ಮೇಲ್ವರ್ಗದವರಿಗೆ ತಮ್ಮ ಆರ್ಥಿಕತೆಯನ್ನು ರಕ್ಷಿಸಿಕೊಳ್ಳುವ ಉಪಕರಣವಾಗಿ ಕಾಣುತ್ತದೆ. ದುಡಿಯುವ ಕೈಗಳು ಬದುಕನ್ನು ಕಟ್ಟಿಕೊಳ್ಳಲು ಬೇರೆಡೆಗೆ ಪಯಣ ಮಾಡುವಂತಿಲ್ಲ, ಸಾಯುವವರೆಗೆ ಅಲ್ಲಿಯೇ ದುಡಿಯ ಬೇಕೆಂಬುದು ಆ

ವರ್ಗದ ಮನೋಧರ್ಮವಾಗಿದೆ. ಇಲ್ಲಿ ವ್ಯಕ್ತಿಗಳ ಪ್ರೇಮ ಪ್ರೀತಿಗಿಂತಲೂ ಮಾಲೀಕರ ಅಂತಸ್ತು, ಅಧಿಕಾರಶಾಹಿ ಮನೋಭಾವ ಮೇಲುಗೈ ಸಾಧಿಸುತ್ತದೆ. ಆರ್ಥಿಕವಾಗಿ ದುರ್ಬಲವಾಗಿರುವ ಸಮುದಾಯಕ್ಕೆ ಸೇರಿರುವ ಗುತ್ತಿ-ತಿಮ್ಮಿಯರ ನಡುವೆಯ ಚಲನೆಯನ್ನು ನಿಯಂತ್ರಿಸುವ ಹಿಂದೆ ಭೂಮಾಲೀಕ ವ್ಯವಸ್ಥೆಯ ಅಧಿಕಾರಶಾಹಿ ಮನೋಭಾವವಿದೆ. ಚಿನ್ನಮ್ಮ-ಮುಕುಂದಯ್ಯರ ನಡುವಿನ ಪ್ರೇಮದಲ್ಲಿ ಆರ್ಥಿಕ ಅಂತಸ್ತುಗಳು ಗಂಡುಹೆಣ್ಣುಗಳ ಪ್ರೇಮದ ಹಕ್ಕನ್ನು ಮಾತ್ರವಲ್ಲ, ಅವರ ಚಲನವಲನಗಳನ್ನು ಕೂಡ ಕಸಿದುಕೊಂಡಿವೆ. ಆಗ ಅವರು ಮನೆ ಬಿಟ್ಟು ಹೊರನಡೆದು ಒಂದಾಗುವುದು ಅನಿವಾರ್ಯವಾಗುತ್ತದೆ. ಅವರ ಪಯಣಗಳನ್ನು ಕಾದಂಬರಿಯು ಜಾತಿವ್ಯವಸ್ಥೆಯನ್ನು ಮುರಿಯುವ ಕ್ರಮವಾಗಿ ಸಂಭ್ರಮದಲ್ಲಿ ಚಿತ್ರಿಸುತ್ತದೆ.

ಬಿ. ಕೃಷ್ಣಪ್ಪನವರ ತಮ್ಮ 'ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ ಚಿತ್ರ' ಲೇಖನದಲ್ಲಿ "ಗೌಡರು ಆಸ್ತಿಯನ್ನು ಭಾಗ ಮಾಡಿಕೊಳ್ಳುವಂತೆ ದಲಿತರನ್ನೂ ಭಾಗ ಮಾಡಿಕೊಳ್ಳುತ್ತಿದ್ದರು. ಬ್ರಾಹ್ಮಣ ಬೌದ್ಧಿಕ ಶೋಷಣೆಯ ಒಂದು ಮುಖವಾದರೆ ಗೌಡ ಆರ್ಥಿಕ ಶೋಷಣೆಯ ಇನ್ನೊಂದು ಮುಖ" ಎಂದು ಗುರುತಿಸಿದ್ದಾರೆ.[೩] ಇದು ಎಲ್ಲಾ ನೆಲೆಗಳಲ್ಲೂ ತುಳಿತಕ್ಕೆ ಒಳಗಾಗಿರುವ ಕೆಳವರ್ಗದ ಅವಸ್ಥೆಯನ್ನು ಸೂಚಿಸುತ್ತದೆ. ಆದರೆ ಅವರ ಈ ದುರವಸ್ಥೆಯೇ ಅವರ ಪ್ರತಿಭಟನೆಯತ್ತ ಚಲನೆಗೆ ಕಾರಣವಾಗುತ್ತವೆ. ಪುರೋಹಿತಶಾಹಿ ಮತ್ತು ಊಳಿಗಮಾನ್ಯ ವ್ಯವಸ್ಥೆಯು ದುಡಿಯುವ ವರ್ಗವನ್ನು ಹಾಗೂ ದಲಿತರನ್ನು ಶೋಷಣೆಗೆ ಒಳಪಡಿಸಿರುವುದು ಈ ಕಾದಂಬರಿಯಲ್ಲಿ ಚಿತ್ರಣಗೊಳ್ಳುತ್ತದೆ. ಈ ಶೋಷಣೆಯ ಚೌಕಟ್ಟು ಮಾಡಿರುವ ಚಲನೆಯ ನಿರ್ಬಂಧಗಳನ್ನು ಮೀರಿ ದಾಟಿ ಗುತ್ತಿ-ತಿಮ್ಮಿ ಪಯಣ ಮಾಡುತ್ತಾರೆ ಮತ್ತು ಒಂದಾಗುತ್ತಾರೆ. ಅವರು ಪಯಣ ಮಾಡದೆ ಒಂದಾಗಲೂ ಸಾಧ್ಯವಿಲ್ಲ. ಪಯಣವು ಅವರ ಪ್ರೇಮದ ಸೇತುವೆಯಾಗಿ ಕೆಲಸಮಾಡುತ್ತದೆ. ಅದು ಅವರ ಬಿಡುಗಡೆಯ ಹಾದಿಯಾಗಿ ಪಾತ್ರ ನಿರ್ವಹಿಸುತ್ತದೆ.

ಸ್ತ್ರೀ-ಸ್ತ್ರೀಯರ ನಡುವೆ, ಸ್ತ್ರೀ-ಪುರುಷರ ನಡುವೆ ಪಯಣ ಮಾಡುವ ವಿಷಯದಲ್ಲಿ ಇರುವ ಅಂತರವನ್ನು ಕುವೆಂಪು ಕಾದಂಬರಿಗಳು ಅನೇಕ ಸಲ ಸೂಚಿಸುತ್ತವೆ. ಕೆಲವೊಮ್ಮೆ ಜಾತಿಯೂ ಸಹ ವ್ಯಕ್ತಿಗಳ ಪಯಣದ ಸ್ವರೂಪವನ್ನು ನಿಯಂತ್ರಿಸುತ್ತದೆ. ಇದಕ್ಕೆ ಮೇಲ್ಜಾತಿಗೆ ಸೇರಿದ ನಾಗತ್ತೆ ತನ್ನ ಪಯಣದ ಹಾದಿಯಲ್ಲಿ ಕಾಣಿಸಿಕೊಳ್ಳುವ ಗುತ್ತಿಯನ್ನು ಕುರಿತು ಆಡುವ ಮಾತು ಉದಾಹರಣೆಯಾಗಿದೆ, "ಹುಲಿಕಲ್ ನೆತ್ತಿಕಾಡು ದಾಟೋದು ಹ್ಯಾಂಗಪ್ಪಾ ಅಂತಿದ್ದೆ. ನಮ್ಮನ್ನೊಂದಿಷ್ಟು ಕೋಣೂರುವರೆಗೆ ಮುಟ್ಟಿಸಿ ಹೋಗ್ತಿಯೇನೋ ಗುತ್ತಿ?" ಎಂದು ಆಕೆ ಅನಿವಾರ್ಯವಾಗಿ ಪಯಣದಲ್ಲಿ ದಲಿತನ ಸಹಾಯವನ್ನು ಬೇಡುತ್ತಾಳೆ. ಆದರೆ ಅವಳು ಹೊಲೆಯನ ಜತೆ ತನ್ನ ಜಾತಿಯ ಕಾರಣಕ್ಕಾಗಿರುವ ಮಡಿವಂತಿಕೆಯನ್ನು ಮಾತ್ರ ಬಿಟ್ಟುಕೊಡುವುದಿಲ್ಲ. ಇದನ್ನು ಕಾದಂಬರಿಯ ನಿರೂಪಣೆಯು "ಹೊಲೆಯನಾದವನಿಗೆ ಹಿಂದೆ ಸ್ವಲ್ಪ ದೂರದಲ್ಲಿಯೇ ಇದ್ದುಕೊಂಡು ಅನುಸರಿಸುವುದು ಮೇಲು ಜಾತಿಯವರಿಗೆ ಅವನು ತೋರಿಸಬೇಕಾದ ಮರ್ಯಾದೆಯಲ್ಲವೆ?" ಎಂದು

ವ್ಯಂಗ್ಯ ಮಾಡುತ್ತದೆ.(ಪು.೬೩) ಮೇಲ್ವರ್ಗದ ಸ್ತ್ರೀಯರು ಕೂಡ ಕೆಳವರ್ಗದವರನ್ನು ನೋಡುವ ಪರಿಯಲ್ಲಿರುವ ಮಾನಸಿಕತೆಯನ್ನು ಸೂಕ್ಷ್ಮವಾಗಿ ಕಾದಂಬರಿ ತೆರೆದಿಡುತ್ತದೆ. ನಾಗಕ್ಕ ನಾಗತ್ತೆಯರ ಪಯಣವು ನಿರ್ಜನವಾದ ಮಲೆನಾಡಿನ ಕಾಡಿನಲ್ಲಿ ಸಾಗುವುದರಿಂದ ಕಾಡುಮೃಗಗಳಿಂದ ರಕ್ಷಣೆ ಪಡೆಯಲು ಅವರಿಗೆ ಒಬ್ಬ ವ್ಯಕ್ತಿಯ ಸಹಾಯ ಬೇಕಾಗಿದೆ. ಆದರೆ ಸಹಾಯವನ್ನು ಮಾಡುವವರು ಕಾದಂಬರಿಯಲ್ಲಿ ಯಾವಾಗಲೂ ಕೆಳವರ್ಗದ ಇಲ್ಲವೇ ಕೆಳಜಾತಿಯ ಜನಗಳೇ ಆಗಿದ್ದಾರೆ. 'ಕಾನೂರು ಹೆಗ್ಗಡಿತಿ'ಯಲ್ಲಿ ಬೇಟೆಯಾಡುವಾಗ ಕೆಲಸದ ಆಳುಗಳು ಒಡೆಯರ ಜತೆ ಪಯಣ ಮಾಡುತ್ತಾರೆ. ಆದರೆ ಅಲ್ಲಿ ಸ್ವತಃ ಪಯಣ ಮಾಡುವ ದಲಿತರಿಗೆ ಕೆಲಸದಾಳುಗಳಿಗೆ ಬೇಟೆಯ ಸಂಭ್ರಮ ಸಿಗುತ್ತದೆ. ಆದರೆ ದಾರಿಯಲ್ಲಿ ಹೋಗುವ ಭೂಮಾಲೀಕ ಜಾತಿಯವರಿಗೆ ನೆರವಾಗುವುದು ಮಾತ್ರ ಅವರ ಬಿಟ್ಟಿ ಕೆಲಸವಾಗಿದೆ.

ಕುವೆಂಪು ರಚಿತ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಹಿರಿಯರ ಅಪ್ಪಣೆಯಿಲ್ಲದೆ ಕಿರಿಯರು ಪಯಣ ಬೆಳೆಸುವಂತಿಲ್ಲ ಎಂಬ ಸಂಪ್ರದಾಯಕ್ಕೆ ಅನೇಕ ನಿದರ್ಶನಗಳು ಸಿಗುತ್ತವೆ. ಚಿನ್ನಮ್ಮ ತಾನು ವರಿಸಲಿರುವ ಮುಕುಂದಯ್ಯನ ಮನೆಗೆ ಹೋಗಲು ಅಪೇಕ್ಷಿಸಿದಾಗ, ಅವಳ ಅಜ್ಜಿ ಅವಳ ಪಯಣಕ್ಕಿರುವ ನಿರ್ಬಂಧಗಳನ್ನು ಸೂಚಿಸುವ ಸನ್ನಿವೇಶವು ಇದಕ್ಕೆ ಉದಾಹರಣೆ ಯಾಗಿದೆ, "ನಾಳೆ ನಿನ್ನ ಅಪ್ಪಯ್ಯನ್ನ ಕೇಳಿ, ನಾನು ನೀನೂ ಮುಕುಂದ ಬಾವನ ಮನೆಗೆ ಹೋಗಾನ... ನಿನ್ನ ಅಪ್ಪಯ್ಯನ ಕೇಳದೆ ನೀ ಹೋದ್ರೆ, ನಿನ್ನ ಚಮಡ ಸುಲ್ದು ಬಿಡ್ತಾನೆ."(ಪು.೭೩) ಇಲ್ಲಿ ಅಪ್ಪಯ್ಯ ಅಥವಾ ಕುಟುಂಬದ ಯಜಮಾನರು ಸಾಮಾನ್ಯವಾಗಿ ಪುರುಷರು, ಕುಟುಂಬದ ಇತರ ಸದಸ್ಯರ ಅದರಲ್ಲೂ ಮಹಿಳೆಯರ ಪಯಣಗಳನ್ನು ನಿರ್ಧರಿಸುವ ಸಾಮಾಜಿಕ ಪದ್ಧತಿಯ ಬಗ್ಗೆ ಸೂಚನೆ ಸಿಗುತ್ತದೆ. ವಿಶೇಷವೆಂದರೆ, ಪುರುಷರ, ಒಡೆಯರ ಇಷ್ಟೊಂದು ಲಕ್ಷ್ಮಣರೇಖೆಗಳ ನಡುವೆಯೂ ಇಲ್ಲಿನ ಮಹಿಳೆಯರು ಅವನ್ನು ಉಲ್ಲಂಘಿಸಿ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸುತ್ತಾರೆ ಮತ್ತು ತಮ್ಮ ಚೈತನ್ಯಶೀಲತೆ ಪ್ರತಿರೋಧಗುಣವನ್ನು ಸಾಬೀತು ಪಡಿಸುತ್ತಾರೆ. ಕುವೆಂಪು ಕಾದಂಬರಿಗಳ ವಿಶಿಷ್ಟತೆ ಇರುವುದೇ ಸಾಮಾಜಿಕ ನಿರ್ಬಂಧಗಳನ್ನು ವಿಧಿಸುವ ಶಕ್ತಿಗಳ ಎದುರು ದುರ್ಬಲರು ಸಾಮಾಜಿಕ ನಿರ್ಬಂಧಗಳನ್ನು ಭಗ್ನಮಾಡುವುದನ್ನು ಸಂಭ್ರಮದಲ್ಲಿ ಚಿತ್ರಿಸುವುದರಲ್ಲಿ. ಈ ಸಾಮಾಜಿಕ ನಿರ್ಬಂಧಗಳು ಮತ್ತು ಭಗ್ನಪಡಿಸುವಿಕೆಗಳು ಪಯಣದ ಜತೆ ಲಗತ್ತಾಗಿವೆ.

ಸಮಾಜದಲ್ಲಿ ಜನ ಹೊಸಬದುಕಿಗಾಗಿ, ವಿದ್ಯಾಭ್ಯಾಸಕ್ಕಾಗಿ, ಧಾರ್ಮಿಕ ಯಾತ್ರೆಗಾಗಿ ಪ್ರವಾಸದ ಮನರಂಜನೆಗಾಗಿ ಪಯಣ ಕೈಗೊಳ್ಳುತ್ತಾರೆ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಮನೆಯ ಹಿರಿಯರಾದ ತಂದೆ-ತಾಯಿಯರ ಒಪ್ಪಿಗೆ ಮತ್ತು ಮಾರ್ಗದರ್ಶನವಿಲ್ಲದೆ ಪಯಣ ಆರಂಭವಾಗುವುದಿಲ್ಲ. ಹಿರಿಯರ ಅಧಿಕಾರ ಮತ್ತು ಜವಾಬ್ದಾರಿತನವು ಕಿರಿಯರ ತಲೆಮಾರಿನ ಅದರಲ್ಲೂ ಮಕ್ಕಳ ಮತ್ತು ಮಹಿಳೆಯರ ಪಯಣ ಸ್ವರೂಪವನ್ನು ನಿಯಂತ್ರಿಸುತ್ತದೆ. 'ಮರಳಿ ಮಣ್ಣಿಗೆ'ಯಲ್ಲಿನ

ಲಚ್ಚ, 'ಕಾನೂರು ಹೆಗ್ಗಡಿತಿ'ಯ ಹೂವಯ್ಯ ಮುಂತಾದ ಪಾತ್ರಗಳು ಮನೆಯ ಯಜಮಾನರ ಒಪ್ಪಿಗೆಯಿಂದಲೇ ವಿದ್ಯಾಭ್ಯಾಸಕ್ಕಾಗಿ ನಗರಗಳಿಗೆ ಪಯಣ ಬೆಳೆಸುತ್ತವೆ. ವಿಚಿತ್ರವೆಂದರೆ ಅವು ಯಜಮಾನರ ಅಪ್ಪಣೆಯಿಂದಲೇ ತಮ್ಮ ಶಿಕ್ಷಣವನ್ನು ಮೊಟಕುಗೊಳಿಸಿ ಮತ್ತೆ ನಗರಕ್ಕೆ ಹೋಗದಂತೆ ಹುಟ್ಟಿದೂರಲ್ಲಿ ಉಳಿಯಬೇಕಾಗುತ್ತದೆ. ಇದು ಹೂವಯ್ಯ ಮತ್ತು ರಾಮಯ್ಯರ ಬದುಕಿನಲ್ಲಿ ಸಂಭವಿಸುತ್ತದೆ. ಮನೆಯ ಹಿರಿಯರ ಮೂಲಕ ಹೀಗೆ ಕಿರಿಯರ ಪಯಣಗಳೂ ನಿಯಂತ್ರಣಕ್ಕೆ ಒಳಪಡುತ್ತವೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮುಕುಂದಯ್ಯ-ಐತರ ಬಗ್ಗೆ ಬರುವ ಒಂದು ವಿವರಣೆಯನ್ನು ಗಮನಿಸಬೇಕು: "ಮುಕುಂದಯ್ಯ ದೊಡ್ಡವನಾದಂತೆಲ್ಲಾ ಇವರ ಸಾಹಸದ ಸ್ವರೂಪಗಳೂ ಬದಲಾಯಿಸಿದ್ದವು. ಹಕ್ಕಿಗೂಡು ಕಂಡುಹಿಡಿಯುವುದು, ಜೇನು ಕೀಳುವುದು, ಗಾಳ ಹಾಕಿ ಮೀನು ಹಿಡಿಯುವುದು, ಹೊಂಡ ತೋಣಕುವುದು, ಸೆಬೆ ಒಡ್ಡಿ ಕಾಡುಕೋಳಿ, ಚಿಟ್ಟುಕೋಳಿ ಹಿಡಿಯುವುದು ಇತ್ಯಾದಿ ಇತ್ಯಾದಿ."(ಪು.೭೯) ಹೀಗೆ ವ್ಯಕ್ತಿಯ ಬೆಳವಣಿಗೆಯು ಜೀವನದ ಪಥದಲ್ಲಿ ಅವನ ದೇಹ ಮತ್ತು ಮನಸ್ಸು ಪಯಣ ಮಾಡುತ್ತ ಪಡೆಯುತ್ತಿರುವ ವಿವಿಧ ಅವಸ್ಥೆಗಳಾಗುತ್ತವೆ. ವ್ಯಕ್ತಿ ಬೆಳೆದಂತೆಲ್ಲಾ ಅವನು ಮಾಡುವ ಕೆಲಸಗಳಲ್ಲೂ ಬದಲಾವಣೆಯಾಗುತ್ತ ಹೋಗುತ್ತದೆ. ವ್ಯಕ್ತಿಯ ದೈಹಿಕ ವಿಕಾಸವು ಆತ ಮಾಡುವ ಕೆಲಸಗಳನ್ನೂ ನಿರ್ಧರಿಸುತ್ತ ಆತನನ್ನು ಮೇಲುಸ್ತರಕ್ಕೆ ಏರಿಸುತ್ತದೆ. ವ್ಯಕ್ತಿಯು ಬಾಲ್ಯದಿಂದ ಯೌವ್ವನದೆಡೆಗೆ ಸಾಗುವ ಜೀವದ ಪಯಣದ ವಿವರಗಳು ಬೇಂದ್ರೆಯವರ ಹಾಗೂ ಅಡಿಗರ ಕವಿತೆಗಳಲ್ಲಿ ಬರುತ್ತವೆ. ಅಡಿಗರ 'ಭೂಮಿಗೀತ' 'ವರ್ಧಮಾನ' ಕವನಗಳಲ್ಲಿ ಒಬ್ಬ ವ್ಯಕ್ತಿಯು ಚಿಕ್ಕ ವಯಸ್ಸಿನಿಂದ ಸಾವಿನ ತನಕ ಪಡೆಯುವ ದೇಹದ ಹಾಗೂ ಮನಸ್ಸಿನ ವಿವಿಧ ಅವಸ್ಥೆಗಳ ಚಿತ್ರವು ಬಾಳಿನ ಪಥದಲ್ಲಿ ಜೀವ ನಡೆಸುವ ಪಯಣದ ಸಂಕೇತವಾಗಿ ಬರುತ್ತದೆ. ಅಡಿಗರ ಕವಿತೆಗಳು ಕ್ರಿಯಾಪದಗಳಿಂದ ತುಂಬಿಹೋಗಿವೆ. ಈ ಕ್ರಿಯಾಪದಗಳು ವ್ಯಕಿತ್ವದ ಒಳಗಡೆಯೇ ಚಲನೆಯೆಂಬುದು ಏರಿಳಿತಗಳಲ್ಲಿ ಸಾಗುವ ಬಗೆಯನ್ನು ಚಿತ್ರಿಸುತ್ತದೆ. ವ್ಯಕ್ತಿಯ ಜೀವನದಲ್ಲಿ ಆಗುವ ವಿಕಾಸ ಕೇವಲ ಏರುಮುಖವಾಗಿ ಮಾತ್ರವಿರುವುದಿಲ್ಲ, ಇಳಿಮುಖವಾಗಿಯೂ ಇರುತ್ತದೆ. ಅವರ ಕವನಗಳಲ್ಲಿರುವ ವಿವಿಧ ಘಟ್ಟಗಳು, ವ್ಯಕ್ತಿಯ ಬಾಳಿನ ವಿವಿಧ ಹಂತಗಳ ಜತೆ ಸಮೀಕರಣ ಪಡೆಯುತ್ತವೆ. ಅಡಿಗರ ಮೇಲ್ಕಾಣಿಸಿದ ಕವನಗಳಲ್ಲಿ ಮೊದಲನೆಯ ಘಟ್ಟ ವ್ಯಕ್ತಿಯ ಎಳೆತನದಿಂದ ಕೂಡಿದ್ದರೆ, ನಂತರದಲ್ಲಿ ಯೌವ್ವನದ ದುಡುಕಿಗೂ, ಕೊನೆಯ ಘಟ್ಟ ಮಧ್ಯವಯಸ್ಸಿನ ಕಂಗಾಲಾದ ಮಾಗುವಿಕೆಗೂ ಸಂಕೇತವಾಗಿದೆ. ವ್ಯಕ್ತಿತ್ವದ ವಿಕಾಸದಲ್ಲಿ ಹಲವಾರು ಕಷ್ಟಗಳನ್ನು ಎದುರಿಸಿ ಜೀವ ಪಯಣಿಸಿದ್ದರೆ ಸಿದ್ಧಿ ಸಾಧ್ಯವಿಲ್ಲ ಎಂಬುದು ಅಡಿಗರ ಕವನಗಳ ನಿಲುವಾಗಿದೆ.

ಮಡಿಮೈಲಿಗೆ ಹೆಸರಿನಲ್ಲಿ ಪುರುಷರು ಸ್ತ್ರೀಯನ್ನು ಕೆಲವು ಪ್ರದೇಶಗಳಿಗೆ ಪಯಣ ಮಾಡದಂತೆ ನಿಷೇಧಿಸುವ ಕೆಲಸಗಳೂ ಇಂದಿಗೂ ನಡೆಯುತ್ತಿದೆ. ಸ್ತ್ರೀಯರು ಮುಟ್ಟಾದಾಗ ಗೊಲ್ಲ

ಸಮುದಾಯದವರು ಮನೆಯಿಂದ ಮಹಿಳೆಯರನ್ನು ದೂರವಿಡುವ ಪದ್ಧತಿ ಇಂದಿಗೂ ಬಳಕೆಯಲ್ಲಿದೆ. ಹಾಗೇ ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ಕೆಲವು ದೈವಿಕ ಜಾಗಗಳಿಗೆ ಮುಟ್ಟಾದ ಹೆಂಗಸರು ಹೋಗುವಂತಿಲ್ಲ ಎಂಬ ನಿಷೇಧವಿರುವ ಪ್ರಸ್ತಾಪ ಬರುತ್ತದೆ: "ಮುಟ್ಟಾದ ಹೆಂಗಸರು, ಮರೆತಾದರೂದ ಸರಿ, ಆ ಮಡಿ ನೆಲಕ್ಕೆ ಪ್ರವೇಶಿಸಿದರೆ ಅವರು ರಕ್ತಕಾರಿ ಸಾಯುತ್ತಾರೆ" (ಪು.೧೩೫) ಎಂಬ ನಂಬಿಕೆಯ ಮಾತನ್ನು ಒಂದು ಪಾತ್ರವು ಆಡುತ್ತದೆ. ಆದರೆ ಈ ನಿರ್ಬಂಧಗಳು ಕೆಳಜಾತಿಯವರಿಗೆ ಬೇರೆ ರೀತಿಯಲ್ಲಿ ಅನ್ವಯವಾಗುತ್ತವೆ. ಪಯಣ ಮಾಡುವಾಗ ಕೆಳಜಾತಿಗೆ ಸೇರಿದ ಐತ-ಪೀಂಚಲು ಭೂತದ ಬನದ ದಾರಿಯಲ್ಲಿ ಪಯಣ ಮಾಡುವುದಕ್ಕೆ ನಿಷೇಧವಿರುತ್ತದೆ. ಜಾತಿಪದ್ಧತಿಯ ಸಮಾಜದಲ್ಲಿ ಅಧಿಕಾರಸ್ಥ ವ್ಯವಸ್ಥೆ ನಿರ್ದಿಷ್ಟ ಧಾರ್ಮಿಕ ಜಾಗಗಳಿಗೆ ಮಹಿಳೆಯರನ್ನು ಮತ್ತು ಕೆಳಜಾತಿಯವರನ್ನು ಮಡಿ-ಮೈಲಿಗೆ ಹೆಸರಿನಲ್ಲಿ ನಿಯಂತ್ರಿಸುತ್ತದೆ. ಅದರಲ್ಲಿಯೂ ಮುಟ್ಟಾದ ಹೆಂಗಸರು ಭೂತದ ಬನಕ್ಕೆ ಬರುವಂತಿರಲಿಲ್ಲ. ಮಾತ್ರವಲ್ಲ ಮನೆಯಿಂದ ಹೊರಗೆ ಚಲಿಸುವ ನಿರ್ಬಂಧವೂ ಅವರ ಮೇಲೆ ಇರುತ್ತದೆ. 'ಮದುಮಗಳು' ಕಾದಂಬರಿಯ ಕೃತಿಯಲ್ಲಿ ಚಿನ್ನಮ್ಮ ಮುಟ್ಟಾಗಿ ಮನೆಯಿಂದ ಹೊರಗೆ ಕೂರುವ ಆದರೆ ಮನೆಬಿಟ್ಟು ಎಲ್ಲಿಯೂ ಹೊರಗೆ ಹೋಗದ ಸನ್ನಿವೇಶದಲ್ಲಿ ಕಾದಂಬರಿ ಮುಗಿಯತ್ತದೆ.

ಜನರು ಯಾವುದಾದರೂ ದೀರ್ಘ ಪಯಣ ಅಥವಾ ತೀರ್ಥಯಾತ್ರೆ ಕೈಗೊಂಡಾಗ ಸಂಬಂಧಿಕರನ್ನು ಕರೆದು ಊಟ ಹಾಕಿಸುವುದು ವಾಡಿಕೆಯಾಗಿದೆ. ಪಯಣಗಳಿಗೂ ಆಹಾರ ಸಂಸ್ಕೃತಿಗೂ ಹೀಗೆ ಸಂಬಂಧವಿದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಇದಕ್ಕೆ ಪೂರಕವಾದ ಒಂದು ಸಂದರ್ಭವಿದೆ: "ನಂಗೆ ಚೆನ್ನಾಗಿ ಬುದ್ಧಿ ಬಂದ ಮೇಲೆ ಅಲ್ಲೇನು ಅವರು ತಿರುಪತಿಗೆ ಹೋಗಿದ್ದು? ಅವರು ಹೋಗಾಕೆ ಮುಂಚೆ ನಂಟರು ಇಷ್ಟರು ಎಲ್ಲರ್ನೂ ಕರೆದು ಜೌಂತ್ಲ ಮಾಡಿಸಿದ್ರು ನಿಮ್ಮ ಮನೇಲಿ. ನಾನೂ ಗಡದ್ದಾಗಿ ಉಂಡಿದ್ದೆ.."(ಪು.೨೫೫) ಈ ಮಾತನ್ನು ಐತನು ಧರ್ಮುವಿನ ತಂದೆಯನ್ನು ಕುರಿತು ಹೇಳುತ್ತಾನೆ. ಪಯಣಕ್ಕೂ ಆಹಾರ ಸಂಸ್ಕೃತಿಗೂ ಇರುವ ಈ ಸಂಬಂಧವು ಈಗಲೂ ಇದೆ. ಅಯ್ಯಪ್ಪ ಸ್ವಾಮಿಯ ಭಕ್ತರು ಮಾಲೆ ಹಾಕಿದಾಗ ಯಾತ್ರೆ ಹೋಗುವ ಮುನ್ನ ಜನರಿಗೆ ಊಟ ಹಾಕಿಸಿ ಪಯಣ ಆರಂಭಿಸುವ ಪದ್ಧತಿಯಿದೆ. ಮುಸ್ಲಿಂ ಸಮುದಾಯದಲ್ಲೂ ಮೆಕ್ಕಾ, ಮದೀನಾಕ್ಕೆ ಯಾತ್ರೆ ಬೆಳೆಸುವ ಮುನ್ನ ತಮ್ಮ ಸಂಬಂಧಿಕರನ್ನು ಕರೆದು ಊಟ ಹಾಕಿಸುವುದು ವಾಡಿಕೆಯಿದೆ. ಮತ್ತೆ ಕೆಲವು ಕಡೆ ತೀರ್ಥಯಾತ್ರೆ ಮಾಡುವವರನ್ನೇ ಜನ ತಮ್ಮ ಮನೆಗೆ ಕರೆದು ಊಟಹಾಕಿಸಿ ಕಳಿಸುವುದೂ ಇದೆ. ಇದೆಲ್ಲದರ ಹಿಂದೆ ಯಾತ್ರೆಯನ್ನು ಕೈಗೊಳ್ಳುವ ವ್ಯಕ್ತಿ ಸುರಕ್ಷಿತವಾಗಿ ಮರಳಿ ಬರುವುದರ ಜೊತೆಗೆ ಪುಣ್ಯ, ಅನ್ನದಾನ ಶ್ರೇಷ್ಠವೆನ್ನುವ ಭಾವನೆಯಿದೆ. ಅನೇಕ ಸಲ ಬಹುದೂರದ ಪಯಣಗಳಿಗೆ ಹೋದವರು ಮರಳಿ ಬರುವ ಸಾಧ್ಯತೆ ಕಡಿಮೆಯಿರುತ್ತದೆ. ಅದು ಅವರ ಬಂಧುಗಳ ಕೊನೆಯ ದರ್ಶನವೂ ಆಗಿರುತ್ತದೆ. ಹೀಗಾಗಿ ಪಯಣದ ಮುನ್ನ ನಡೆಯುವ ಈ ಆಹಾರದ ಆಚರಣೆಯು ತನ್ನ ಪರಿಸರಕ್ಕೆ ವ್ಯಕ್ತಿಯು

ತೋರುವ ಕೃತಜ್ಞತೆ ಇಲ್ಲವೇ ಋಣಸಂದಾಯವೂ ಆಗಿದೆ. ತೀರ್ಥಯಾತ್ರೆಯಂತಹ ದೀರ್ಘ ಪಯಣ ಮಾಡುವ ವ್ಯಕ್ತಿಯು ತನ್ನ ಪರಿಚಯದ ವ್ಯಕ್ತಿಗಳಲ್ಲಿ ತಾನು ತಪ್ಪೇನಾದರೂ ಮಾಡಿದ್ದರೆ ಕ್ಷಮೆಕೇಳುವ ಪದ್ಧತಿಯೂ ಇದೆ. ಹೀಗೆ ಪಯಣವು ಅನೇಕ ಬಗೆಯ ಮಾನವೀಯ ಸಂಬಂಧಗಳನ್ನು ನಿರ್ವಹಿಸುವ ಆಚರಣೆಗಳನ್ನು ರೂಢಿಸಿದೆ. ಅವುಗಳನ್ನು ಕುವೆಂಪು ಕಾದಂಬರಿಗಳು ದುಡಿಸಿಕೊಳ್ಳುತ್ತವೆ.

ಹಿಂದೂ ಸಮಾಜದ ಸಂಪ್ರದಾಯ ಮತ್ತು ಮೌಢ್ಯತೆಯ ಹೆಸರಲ್ಲಿ ಗಂಡ ಸತ್ತ ಹೆಂಗಸರನ್ನು ನಿಕೃಷ್ಟವಾಗಿ ಕಾಣುವುದಿದೆ. ಆಧುನಿಕ ಶಿಕ್ಷಣ ಈ ಅಂತರವನ್ನು ಕಡಿಮೆ ಮಾಡಿದ್ದರೂ ವಿಧವೆಯನ್ನು ಕೀಳಾಗಿ ಕಾಣುವ ಸಂಸ್ಕೃತಿ ಇಂದಿಗೂ ಇದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಧರ್ಮು ತನ್ನ ತಾಯಿಯ ಸ್ಥಿತಿಯನ್ನು ಕಂಡು ಹೇಳುವ ಮಾತುಗಳು ಹೀಗಿವೆ: "ಸದ್ಯ ನಾನೂ ನನ್ನವ್ವನೂ ಬಿರಾಂಬ್ರ ಜಾತೀಲಿ ಹುಟ್ಟದೆ ಗೌಡರ ಜಾತೀಲಿ ಹುಟ್ಟಿದ್ದೀವಲ್ಲಾ!"(ಪು.೪೨೭) ಆದರೆ ಗೌಡರ ಜಾತಿಯಲ್ಲೂ ಪುರುಷ ಪ್ರಧಾನ ಸಮಾಜದ ನಿಯಮಗಳು ಗಂಡ ಸತ್ತ ಹೆಂಡತಿಯನ್ನು ನಿಕೃಷ್ಟವಾಗಿಯೇ ನೋಡುತ್ತದೆ. ಮುಖ್ಯವಾಗಿ ವಿಧವೆಯರ ಓಡಾಟದ ಮೇಲೆ ನಿರ್ಬಂಧಗಳಿರುತ್ತವೆ. ಧರ್ಮುವಿನ ತಾಯಿ ಮನೆಗೆ ಅಂಟಿಕೊಂಡೇ ತನ್ನ ಬದುಕನ್ನು ನಡೆಸುತ್ತಾಳೆ. ಆಕೆಗೆ ವಿಧವೆಯೆಂಬ ಕಾರಣದಿಂದಲೇ ಅನೇಕ ಸಲ ಶುಭಕಾರ್ಯಗಳಿಗೆ ಪಯಣ ಮಾಡುವುದು ಸಾಧ್ಯವಾಗುವುದಿಲ್ಲ. ಆದರೆ ವಿಧುರರಿಗೆ ಈ ನಿಯಮ ಅನ್ವಯವಾಗುವುದಿಲ್ಲ. ಪುರುಷ ಮತ್ತು ಸ್ತ್ರೀಯರಿಗೆ ಪಯಣದ ವಿಷಯದಲ್ಲಿ ಸಾಂಪ್ರದಾಯಿಕ ಸಮಾಜ ತರತಮ ಮಾಡುತ್ತದೆ. ಗುಲ್ವಾಡಿ ವೆಂಕಟರಾಯರು ಬರೆದಿರುವ 'ಇಂದಿರಾಬಾಯಿ' ಕಾದಂಬರಿಯಲ್ಲಿನ ಕಥಾವಸ್ತು ವಿಧವಾ ಜೀವನದ ತಳಮಳಗಳನ್ನು ಒಳಗೊಂಡಿದೆ. ಕಾದಂಬರಿಯ ನಾಯಕಿ ಇಂದಿರಾಬಾಯಿ ವೈಧವ್ಯದಲ್ಲಿ ನಾನಾ ಬಗೆಯ ಸಂಕಟ ಅನುಭವಿಸುತ್ತಾಳೆ. ಅವುಗಳಲ್ಲಿ ಅವಳ ಮುಕ್ತ ಚಲನೆಯನ್ನು ಅನುಭವಿಸುವ ಸ್ವಾತಂತ್ರ್ಯ ಇಲ್ಲದಿರುವುದೂ ಒಂದು. ಕುವೆಂಪು ಕಾದಂಬರಿಯಲ್ಲಿ ಧರ್ಮು ಮುಂತಾದ ಮಕ್ಕಳ ಮೂಲಕ ವಿಧವೆಯರ ಸಂಕಟಗಳನ್ನು ಪ್ರಕಟಿಸುತ್ತಾರೆ. ವಿಚಿತ್ರವೆಂದರೆ, ಧರ್ಮುವಿನ ತಾಯಿಯು ವಿಧವೆಯಾಗಿರುವುದಿಲ್ಲ. ದೂರ ಪಯಣಕ್ಕೆ ಹೋದ ಗಂಡನು ಬಾರದೆಹೋಗಿರುವ ಕಾರಣದಿಂದ, ಆತ ಸತ್ತಿದ್ದಾನೆಂದು ಊಹಿಸಿ ಆಕೆ ವಿಧವೆಯಂತೆ ಬಾಳುವ ಒತ್ತಡವನ್ನು ಸಮಾಜ ನಿರ್ಮಿಸಿರುತ್ತದೆ.

ಕುವೆಂಪು ತಮ್ಮ ಕಾದಂಬರಿಯಲ್ಲಿ ಸೃಷ್ಟಿಸಿರುವ ಬಹುತೇಕ ಪಾತ್ರಗಳು ಚಲಿಸುವ ಪಾತ್ರಗಳು. ತಾವು ಮೆಚ್ಚಿದ ಹೆಣ್ಣನ್ನು ಪಡೆಯಲು ಹುಡುಕಾಟ ನಡೆಸುವ ಹೂವಯ್ಯ, ನಾಯಿ ಗುತ್ತಿ, ಮುಕುಂದಯ್ಯನಂತಹ ಪುರುಷ ಪಾತ್ರಗಳು ಇಲ್ಲಿವೆ. ತಾವು ಮೆಚ್ಚಿದ ಗಂಡುಗಳನ್ನು ಕೂಡಲು ಪಯಣ ಮಾಡುವ ತಿಮ್ಮಿ ಚಿನ್ನಮ್ಮ ಮುಂತಾದ ಸ್ತ್ರೀಪಾತ್ರಗಳೂ ಇವೆ. ನಾಗಮ್ಮನನ್ನು ಒಬ್ಬ ಗಂಡಿನ ಜತೆ ಕೂಡಿಸಿ ಹೊಸಬಾಳನ್ನು ಆರಂಭಿಸುವ ನಾಗತ್ತೆಯು ಮಾಡುವ ಪಯಣದ ವಿವರಗಳಿವೆ. ಹೀಗೆ ಕುವೆಂಪು ಕಾದಂಬರಿಗಳಲ್ಲಿ ಅನೇಕ ಚಲನಶೀಲ ಪಯಣಗಳ ಹಿಂದೆ

ಹೆಣ್ಣಿದ್ದಾಳೆ. ಕಾಮ ಪ್ರೇಮ ಸಂತಾನೋತ್ಪತ್ತಿಯಿದೆ. ಸಾಮಾಜಿಕ ಉಲ್ಲಂಘನೆಗಳಿವೆ. ಗಂಡುಹೆಣ್ಣುಗಳ ಈ ಓಡಾಟವು ಜಮೀನ್ದಾರಿ ಪದ್ಧತಿಯ ಸ್ಥಗಿತತೆಯನ್ನು ಒಡೆಯುವ ಯತ್ನವೂ ಆಗಿದೆ. ಬದುಕು ಸದಾ ಕ್ರಿಯಾತ್ಮಕವಾಗಿದೆ. ಅದನ್ನು ಜೀವಂತವಾದ ವ್ಯಕ್ತಿಗಳು ತಮ್ಮ ಚೈತನ್ಯಶೀಲತೆಯಿಂದ ಜೀವಂತವಿಟ್ಟಿದ್ದಾರೆ ಎಂಬುದು ಕುವೆಂಪು ಕಾದಂಬರಿಗಳ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಕಾದಂಬರಿಗಳ ಉದ್ದಕ್ಕೂ ಕಂಡು ಬರುವ ವಿವಿಧ ಪಯಣದ ನೆಲೆಗಳು ವಿನ್ಯಾಸಗೊಂಡಿವೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಗಂಡು ಹೆಣ್ಣುಗಳ ಸಂಬಂಧದಲ್ಲಿ ಬಹಳ ಸಾಂಕೇತಿಕವಾದ ಪ್ರಸಂಗವೆಂದರೆ ಉಂಗುರದ ಸನ್ನಿವೇಶ. ದೇವಯ್ಯನು ತನ್ನ ಪ್ರಿಯತಮೆಯಾದ ಕಾವೇರಿಗೆ ಉಡುಗೊರೆಯಾಗಿ ಕೊಡುವ ಆ ಉಂಗುರವು ಅವಳ ಸಾವಿನೊಂದಿಗೆ ದುರಂತ ಮರಣದೊಂದಿಗೆ ಮುಗಿಯುತ್ತದೆ. ಆದರೆ ಕಾವೇರಿಯ ಕೈಗೆ ಈ ಉಂಗುರವು ಬರುವವರೆಗೆ ಅದು ಮಾಡಿರುವ ಪಯಣದ ಕಥೆಯು ಇಷ್ಟೇ ದಾರುಣವಾಗಿದೆ. ಜಡ ವಸ್ತುವಾದ ಉಂಗುರವನ್ನು ತಾನೂ ಪಯಣ ಮಾಡುತ್ತದೆ ಮತ್ತು ಜನರ ಪಯಣದ ಜತೆಗೆ ಸಂಬಂಧವನ್ನು ಪಡೆಯುತ್ತದೆ. ದೇವಯ್ಯ ಮತ್ತು ಕಾವೇರಿಯ ಸಂಬಂಧಕ್ಕೆ ಸಾಕ್ಷಿಯಾಗಿದ್ದ ಅದನ್ನು ಕಾದಂಬರಿ 'ಅಕ್ರಮಾತಿಕ್ರಮದ ಪ್ರಣಯ ಪ್ರಪಂಚದ ಗೋಪ್ಯ ವಲಯಕ್ಕೆ ಸೇರಿದ ಉಂಗುರ'ವೆಂದು ಬಣ್ಣಿಸುತ್ತದೆ. ಮೂಲತಃ ಈ ಉಂಗುರವು ಘಟ್ಟದಿಂದ ಕೆಳಗೆ ಇಳಿಯುವ ಪಯಣಿಕರ ತಲೆಹೊಡೆದು ದೋಚಿ ತರಲಾಗಿರುತ್ತದೆ. ಇದನ್ನು ದೇವಯ್ಯ ಕೊಂಡುಕೊಂಡು ಕಾವೇರಿಗೆ ಕೊಟ್ಟಿರುತ್ತಾನೆ. ಕಾವೇರಿಯ ಮೂಲಕ ಸೇರೆಗಾರ ಚೀಂಕ್ರನಿಗೆ, ಸೇರೆಗಾರ ಚೀಂಕ್ರನಿಂದ ಕರ್ಮೀನ್ ಸಾಬಿಯ ಕೈಗೆ ಇದು ಪಯಣ ಮಾಡುತ್ತದೆ. ಮೂಲತಃ ಪಯಣಿಗರ ಸಾವಿನಿಂದ ಸಿಕ್ಕು ಹಲವು ವ್ಯಕ್ತಿಗಳ ಕೈಬೆರಳುಗಳನ್ನು ಅಲಂಕರಿಸುವ ಈ ಅನಿಷ್ಟ ಉಂಗುರ ಅಂತಿಮವಾಗಿ ಕಾವೇರಿಗೆ ಬಂದು ಕಳುವಾಗಿ ಅವಳ ಸಾವಿಗೂ ಕಾರಣವಾಗುತ್ತದೆ. ಇದೇ ಉಂಗುರದ ಪಯಣದ ವಸ್ತುವನ್ನು ಇಟ್ಟುಕೊಂಡು ಕಾಳಿದಾಸ ಬರೆದಿರುವ 'ಅಭಿಜ್ಞಾನ ಶಾಕುಂತಲ' ನಾಟಕವು ನೆನಪಾಗುತ್ತದೆ. ಅಲ್ಲಿಯೂ ಗಂಡುಹೆಣ್ಣಿನ ಸಂಬಂಧವಿದೆ. ಶಕುಂತಲೆ ಮತ್ತು ದುಶ್ಯಂತರ ಭೇಟಿಗೆ ಸಾಕ್ಷಿಯಾಗಿದ್ದ ಈ ಅಭಿಜ್ಞಾನ (ಗುರುತು) ಉಂಗುರವು ನಾಡಿನಿಂದ ಕಾಡಿಗೂ ಕಾಡಿನಿಂದ ನಾಡಿಗೂ ಗಂಡುಹೆಣ್ಣುಗಳು ಮಾಡುವ ಪಯಣಕ್ಕೆ ಸಾಕ್ಷಿಯಾಗುತ್ತದೆ. ಶಕುಂತಲೆ ಕೈಯಿಂದ ನೀರಿನಲ್ಲಿ ಕಳೆದುಹೋಗಿ ಮತ್ತೆ ಸಿಗುವ ಈ ಉಂಗುರ ಕಾಡಿನಿಂದ ನಾಡಿಗೆ ಪಯಣ ಮಾಡುತ್ತದೆ. ಆದರೆ ನಾಡು ಅವಳ ಕಾಡಿನ ಲೋಕದ ನೆನಪುಗಳ ಯಾವ ಸಂಕೇತಗಳನ್ನು ಗುರುತಿಸುವುದಿಲ್ಲ. ಅವಳು ನೆನಪಿನ ಮೂಲಕ ಹೇಳುವ ಪ್ರಯತ್ನಗಳೆಲ್ಲ ವಿಫಲವಾಗಿ ಮತ್ತೆ ಕಾಡಿಗೆ ಪಯಣ ಮಾಡುವ ದುರಂತ ಚಿತ್ರಣವಿದೆ. ಆದರೆ ಕಡೆಗೆ ಅನೇಕ ಕೈಗಳನ್ನು ದಾಟಿ ಬರುವ ಉಂಗುರವು ಅವಳ ದುರಂತಕ್ಕೆ ಕೊನೆ ಹಾಡುತ್ತದೆ. ಪ್ರೇಮಕಾವ್ಯವಾದ 'ಅಭಿಜ್ಞಾನ ಶಾಕುಂತಲಾ'ದ ಕಥೆಯನ್ನು ಹೋಲುವ ಈ ಉಂಗುರದ ಪಯಣವು, ಗಂಡುಹೆಣ್ಣುಗಳ

ಸಂಬಂಧಗಳನ್ನು ಬೆಸೆಯುವ ಮತ್ತು ಒಡೆಯುವ ಕಾರ್ಯವನ್ನು ಮಾಡುತ್ತದೆ. ಕುವೆಂಪು ಅದನ್ನು ಒಂದು ಸಂಕೇತವಾಗಿ ಸಮರ್ಥವಾಗಿ ಬಳಸುತ್ತಾರೆ.

೩.೩. ಪಯಣ: ಸಂಘರ್ಷ

ಕುವೆಂಪು ಕಾದಂಬರಿಗಳಲ್ಲಿ ಪಯಣವು ಅನೇಕ ಬಗೆಯ ಸಂಘರ್ಷಗಳ ಆಯಾಮಗಳ ಜತೆ ಜೋಡಣೆಗೊಂಡಿದೆ. ಅವರ ಕಾದಂಬರಿಗಳು ಚಿತ್ರಿಸುವ ಮಲೆನಾಡು ಮೂಲತಃ ಸಾಂಸ್ಕೃತಿಕವಾಗಿ ಬ್ರಾಹ್ಮಣರ, ಆರ್ಥಿಕವಾಗಿ ಗೌಡರುಗಳಿಂದ, ಮತೀಯವಾಗಿ ಕ್ರೈಸ್ತರ ಯಜಮಾನಿಕೆ ಮತ್ತು ಶೋಷಣೆಗೆ ಈಡಾಗಿದ್ದ ಸಮಾಜವಾಗಿದೆ. ಗಂಡುಪ್ರಧಾನ ಮೌಲ್ಯಗಳ ಊಳಿಗಮಾನ್ಯ ವ್ಯವಸ್ಥೆಯ ಭೂಮಿಯಂತೆ ಹೆಣ್ಣನ್ನು ಖಾಸಗಿ ಆಸ್ತಿಯಾಗಿರಿಸಿಕೊಂಡಿರುವ ಸಮಾಜವಾಗಿದೆ. ಜಮೀನು ತೋಟ ಇರುವ ಜಮೀನ್ದಾರಿ ವ್ಯವಸ್ಥೆಯು ದುಡಿಯುವ ವರ್ಗಗಳನ್ನು ಅದುಮಿಟ್ಟಿರುವ ಸಮಾಜವಾಗಿದೆ. ಇಂತಹ ಉಸಿರುಗಟ್ಟಿರುವ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ವ್ಯವಸ್ಥೆಯ ಒಳಗೆ ಸಹಜವಾಗಿಯೇ ಅತೀವವಾದ ಸಂಘರ್ಷಗಳು ಸಹ ಇವೆ. ಪುರುಷರ ಕ್ರೌರ್ಯ, ದೌರ್ಜನ್ಯ, ದಬ್ಬಾಳಿಕೆ, ಶೋಷಣೆಗಳು ಕಾದಂಬರಿಯ ನೆಲೆಯಲ್ಲಿ ಪಯಣವನ್ನು ನಿರ್ವಹಿಸಿರುವ ಬಗೆ ವಿಶಿಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಕಾದಂಬರಿಯಲ್ಲಿ ಧರ್ಮ, ಜಾತಿ, ವರ್ಗ ಹಾಗೂ ಲಿಂಗ ಮುಂತಾದ ನೆಲೆಗಳಲ್ಲಿ ಪಯಣವು ಸಂಘರ್ಷದ ವಿನ್ಯಾಸಗಳನ್ನು ರೂಪಿಸುವುದನ್ನು ಅರಿಯುವುದಕ್ಕೆ ಯತ್ನಿಸಬಹುದು.

'ಕಾನೂರು ಹೆಗ್ಗಡಿತಿ'ಯಲ್ಲಿ ಸಾಮಾಜಿಕ ಜಾತಿ ವ್ಯವಸ್ಥೆ ಹಾಗೂ ವರ್ಗವ್ಯವಸ್ಥೆ ಬಹಳ ಜಿಗುಟಾಗಿರುವ ಚಿತ್ರಗಳಿವೆ. ಜಾತಿ ವ್ಯವಸ್ಥೆಯು ಮನೆಯಲ್ಲಿ ಮಾತ್ರವಲ್ಲ ಪಯಣದಲ್ಲಿಯೂ ಜನರ ವರ್ತನೆಗಳನ್ನು ನಿಯಂತ್ರಿಸುತ್ತದೆ. ಒಬ್ಬ ಗೌಡರ ಹುಡುಗನಾದ ವಾಸು ವೈಯಕ್ತಿಕವಾಗಿ ಮುಗ್ಧನೂ ಜಾತಿಯ ವಿಷಯದಲ್ಲಿ ಮುಕ್ತನೂ ಆಗಿರುವನು. ಆದರೆ ಅವನನ್ನು ಸಮಾಜದಲ್ಲಿ ಇರುವ ಜಾತಿಮೌಲ್ಯಗಳು ಅಸ್ಪೃಶ್ಯತೆ ಆಚರಿಸುವಂತೆ ಒತ್ತಾಯಿಸುತ್ತವೆ. ಆತ "ದಾರಿಯಲ್ಲಿ ಬೇಲರವನನ್ನು ಮುಟ್ಟಿದ್ದಕ್ಕೆ ಪ್ರಾಯಶ್ಚಿತ ರೂಪವಾಗಿ ಹಟ್ಟಿಗೆ ಹೋಗಿ ಸೆಗಣಿಯನ್ನು ಮುಟ್ಟಿ, ಹಿತ್ತಲು ಕಡೆಯ ಬಾಗಿಲಿನಿಂದ ಮನೆಯನ್ನು ಪ್ರವೇಶಿಸುವ" ಚಿತ್ರಗಳನ್ನು ಕಾದಂಬರಿ ಕೊಡುತ್ತದೆ(ಪು.೬೧). ಪಯಣದಲ್ಲಿ ಆಚರಣೆಯಾಗುವ ಈ ಜಾತಿಭೇದದ ಮೌಢ್ಯ ಕಂದಾಚಾರಗಳು ಹಿರಿಯರ ತಲೆಮಾರಿನಿಂದ ಕಿರಿಯ ತಲೆಮಾರಿಗೂ ಪಿತ್ರಾರ್ಜಿತ ಆಸ್ತಿಯಂತೆ ವರ್ಗಾವಣೆಯಾಗಿವೆ. ಅವು ಆಧುನಿಕತೆ ಮಲೆನಾಡಿಗೆ ಪ್ರವೇಶಿಸಿದರೂ ಕ್ರಿಯಾಶೀಲವಾಗಿವೆ ಎಂಬುದರ ಪ್ರತೀಕವಾಗಿ ವಾಸು ಕಾಣಿಸಿಕೊಳ್ಳುತ್ತಾನೆ. ಆದರೆ ಇದಕ್ಕೆ ಬೇಲರ ಜಾತಿಗೆ ಸೇರಿದ ಗಂಗನಂತಹ ಕೆಳವರ್ಗಕ್ಕೆ ಕೆಳಜಾತಿಗೆ ಸೇರಿದ ಮಕ್ಕಳು ಅನುಭವಿಸುತ್ತಿರುವ ತಳಮಳಗಳನ್ನು ಕೃತಿ ಪರೋಕ್ಷವಾಗಿ ದಾಖಲಿಸುತ್ತದೆ ಹಾಗೂ ವ್ಯಂಗ್ಯವಾಗಿ ವಿಮರ್ಶೆ ಮಾಡುತ್ತದೆ. ವೆಂಕಟಪ್ಪನವರ ಮನೆಯ ಅಂಗಳದಲ್ಲಿ ಮಕ್ಕಳು

ಕೆಳಜಾತಿಯ ಓಬಯ್ಯನನ್ನು ಉಪಚರಿಸುವ ರೀತಿಯೂ ಸಹ ಸಮುದಾಯದೊಳಗೆ ಜೀವಂತವಾಗಿರುವ ವರ್ಗ-ಜಾತಿಯ ಸಂಘರ್ಷಗಳನ್ನು ಕಾಣಿಸುತ್ತದೆ.

ಆದರೆ ಮನೆ ಬೀದಿಗಳ ನೆಲೆಯಲ್ಲಿ ಹೆಚ್ಚು ಜಾಗೃತವಾಗಿರುವ ಜಾತಿ ಮತ್ತು ಅಸ್ಪೃಶ್ಯತೆಯ ಮನೋಧರ್ಮವು ಪಯಣದಲ್ಲಿ ಸಡಿಲಗೊಳ್ಳುವುದುಂಟು. ಯಾಕೆಂದರೆ ಅಲ್ಲಿ ಸಮಾಜದ ಕಣ್ಗಾವಲು ಇರುವುದಿಲ್ಲ. ಪಯಣವು ಪಯಣಿಗರ ನಡುವೆ ಪರಸ್ಪರ ಸಹಾಯ ಭಾವವನ್ನು ನಿರೀಕ್ಷೆ ಮಾಡುವುದರಿಂದಲೂ ಈ ಜಾತಿಭೇದದ ಮನೋಭಾವ ಸಡಿಲಗೊಳ್ಳುತ್ತದೆ. ಇದನ್ನು ಕನ್ನಡದ ವಿಮರ್ಶಕರಾದ ಬಸವರಾಜ ಕಲ್ಗುಡಿಯವರು ಕುವೆಂಪು ಕಾದಂಬರಿಗಳನ್ನು ವಿಶ್ಲೇಷಿಸುತ್ತ ಹೀಗೆ ಗುರುತಿಸಿದ್ದಾರೆ. "ಚಿನ್ನಮ್ಮ, ಮುಕುಂದಯ್ಯನ ಜೊತೆಗೆ ತಪ್ಪಿಸಿಕೊಂಡು ಹೋಗುವಾಗ ದಾರಿಯಲ್ಲಿ ಬಾಯಾರಿಕೆಯಾಗಲು, ಯೆಂಕಿಯ ಮನೆಗೆ ಬಂದಾಗ ಅಡುಗೆ ಮನೆ ಹೂವಳ್ಳಿ ವೆಂಕಪ್ಪನಾಯಕರ ಮಗಳಿಗೆ ಪ್ರವೇಶಿಸಲು ನಿಷಿದ್ಧ ಪ್ರದೇಶವಾಗಿದ್ದರೂ, ಅದರ ಮಿಶ್ರವಾಸನೆ ಅಸಹನೀಯವಾಗಿದ್ದರೂ ಯೆಂಕಿ ಚಿನ್ನಮ್ಮನನ್ನು ಒಳಗೆ ಕರೆಯೊಯ್ದು ಒಲೆಯ ಬೆಂಕಿಯಲ್ಲಿ ಒದ್ದೆಯಾರಿಸಿಕೊಳ್ಳುವಂತೆ ಮಾಡುತ್ತಾಳೆ. ಜಾತಿ-ವರ್ಗ ತಾರತಮ್ಯದಿಂದ ನಿಷಿದ್ಧವಾದರೂ ಪೀಂಚಲು-ಚಿನ್ನಮ್ಮ ಇವರು ತಮ್ಮ ಗಾಢ ಸಂಬಂಧಗಳನ್ನೇ ಮೌಲ್ಯವನ್ನಾಗಿಸಿಕೊಳ್ಳುವ ಬೆಳವಣಿಗೆಯೂ ಕಾದಂಬರಿಯಲ್ಲಿ ಹೊಸ ಮಾನವ ಸಂಬಂಧ ಸ್ವರೂಪವನ್ನೇ ತೋರುತ್ತದೆ. ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಪರಸ್ಪರ ಮುಟ್ಟುವ, ಗಾಢವಾದ ವೈಯಕ್ತಿಕ ಭಾವನೆಗಳನ್ನು ಅಭಿವ್ಯಕ್ತಿಸುವ ನೆಲೆಗೆ ಈ ಸಂಬಂಧ ಬೆಳೆಯುತ್ತದೆ."[೪]

ಪಯಣ ಅಥವಾ ತಿರುಗಾಟಗಳು ಜಾತೀಯ ಮನೋಧರ್ಮದಲ್ಲಿ ಉಂಟು ಮಾಡುವ ಪರಿಣಾಮಗಳನ್ನು ಕಾರಂತರ ಕಾದಂಬರಿಗಳೂ ತರುತ್ತವೆ. 'ಬೆಟ್ಟದಜೀವ' ಕಾದಂಬರಿಯಲ್ಲಿ ಶಂಕರಿಯೂ ಕೆಳವರ್ಗದ ಮನೆಗಳಿಗೆ ಹೋಗಿ ಬಂದಾಗ ಶುಚಿಯಾಗಿ ಮನೆಗೆ ಪ್ರವೇಶಿಸುವ ಸನ್ನಿವೇಶವನ್ನು ಇಲ್ಲಿ ನೆನೆಯಬಹುದು. ಬ್ರಾಹ್ಮಣರು ಕೆಳಜಾತಿಯವರ ಬೀದಿ ಇಲ್ಲವೇ ಮನೆಗಳಿಗೆ, ಕೆಳಜಾತಿಯವರು ಮೇಲುಜಾತಿಯವರ ಮನೆಗೆ ಹೋಗಿಬರುವ ಅನೇಕ ಸನ್ನಿವೇಶಗಳನ್ನು ಕಾದಂಬರಿಗಳು ಚಿತ್ರಿಸುತ್ತವೆ. ಈ ಸನ್ನಿವೇಶಗಳಲ್ಲಿ ಮೇಲುಜಾತಿಯ ಜನರು ಮಡಿ-ಮೈಲಿಗೆ ಹೆಸರಿನಲ್ಲಿ ತಮ್ಮ ಜತೆ ಬದುಕುವ ಇತರೆ ಜನರನ್ನು ಕೀಳಾಗಿ ಕಾಣುವ ಮನೋಧರ್ಮವನ್ನು ಕುವೆಂಪು ಕಾದಂಬರಿಗಳು ವಿಮರ್ಶಾತ್ಮಕ ವಿಡಂಬನೆಯೊಂದಿಗೆ ಚಿತ್ರಿಸುತ್ತವೆ. ಈ ಕೀಳಾಗಿ ಕಾಣುವ ಮನೋಧರ್ಮವು ಹೆಚ್ಚಾಗಿ ಕಾಣಸಿಗುವುದು ಪಯಣದಲ್ಲಿ. ಈ ಭೇದವು ಜಾತಿಗಳ ನಡುವೆ ಸಂಘರ್ಷಗಳಿಗೆ ಅಲ್ಲವಾದರೂ ವೈಮನಸ್ಸುಗಳಿಗೆ ಕಾರಣವಾಗುವುದನ್ನು ಕಾದಂಬರಿಗಳು ಚಿತ್ರಿಸುತ್ತವೆ. ಅದರಲ್ಲೂ ದೇವಸ್ಥಾನಕ್ಕೆ ಗೌಡರು ಪಯಣ ಮಾಡಿಕೊಂಡು ಅಗ್ರಹಾರಕ್ಕೆ ಹೋದಾಗ, ಅಲ್ಲಿರುವ ಬ್ರಾಹ್ಮಣರು ಆಚರಿಸುವ ಮಡಿವಂತಿಕೆಯನ್ನು ವಿಚಾರವಂತ ಪಾತ್ರಗಳಾದ ಮುಕುಂದಯ್ಯ ಮುಂತಾದವರ ಮೂಲಕ ಕಾದಂಬರಿ ತೀಕ್ಷ್ಣವಾಗಿ ವಿಡಂಬಿಸುತ್ತದೆ.

ಕುವೆಂಪು ಕಾದಂಬರಿಗಳು ಚಿತ್ರಿಸುವ ಮಲೆನಾಡಿನ ಸಮಾಜದಲ್ಲಿನ ಪ್ರತಿಯೊಂದು ಜಾತಿ ಮತ್ತು ಸಮುದಾಯದ ಜನರು ತಮ್ಮ ಜೀವನ ನಿರ್ವಹಿಸಲು ಕುಲಕಸುಬುಗಳನ್ನು ಮಾಡುವ ಸನ್ನಿವೇಶಗಳಿವೆ: "ತಿಮ್ಮನಂತೆ ಯಾರಿಗೂ ಬಗನಿ ಕಟ್ಟಿ ಕಳ್ಳು ಇಳಿಸಲು ತಿಳಿದಿರಲಿಲ್ಲ ಅದು ಅವರ ಜಾತಿಯ ಗುಟ್ಟಾಗಿತ್ತು. ಬೇಲರು, ಕುಂಬಾರರು, ಮರಾಟಿಗರು, ಸೆಟ್ಟರು, ಒಕ್ಕಲಿಗರು ಇವರು ಯಾರಿಗೂ ಜಾತಿ ಪದ್ಧತಿಯಂತೆ ಬಗನಿ ಕಟ್ಟುವ ಹಕ್ಕಿಲ್ಲ. ಆ ಹಕ್ಕು ಹಳೆಪೈಕರದು"(ಪು.೯೬). ಎಂದು ಕುವೆಂಪು ಆ ಜಾತಿಗಳ ಕುಲಕಸುಬುಗಳ ಬಗ್ಗೆ ಮಾನವಶಾಸ್ತ್ರೀಯವಾದ ವಿವರಣೆಗಳನ್ನು ಕೊಡುತ್ತಾರೆ. ಬಗನಿ ಕಟ್ಟುವಾಗ ಮರಗಳನ್ನು ಆರಿಸಿ ನೋಡಿ ಕಟ್ಟುವ ಜಾಣ್ಮೆ ಎಲ್ಲರಿಗೂ ಬರುವುದಿಲ್ಲ. ಆಯಾ ಸಮುದಾಯದವರಿಗೆ ಮಾತ್ರ ಪಾರಂಪರಿಕವಾಗಿ ಅದು ಸಾಗಿ ಬಂದಿದೆ. ಆದರೆ ಈ ಕಸುಬುಗಳನ್ನು ಆಯ ಜಾತಿಯವರೇ ಮಾಡಬೇಕೆಂಬ ಕಡ್ಡಾಯವು ಕೆಳಜಾತಿ ಸಮುದಾಯಗಳನ್ನು ಕೀಳಾಗಿ ಕಾಣುವ ವ್ಯವಸ್ಥೆಗೂ ಕಾರಣವಾಗಿದೆ. ತಳಜಾತಿಯ ಸಮುದಾಯಗಳು ಮೇಲಸ್ತರಕ್ಕೇ ಚಲಿಸದಂತೆ ಮೇಲ್ವರ್ಗದ ವ್ಯವಸ್ಥೆ ನಿಯಂತ್ರಿಸಿರುವ ಕ್ರಮವಿದು. ಈ ಬಗೆಯ ಸಾಮಾಜಿಕ ವ್ಯವಸ್ಥೆಯು ಊರಿನ ದೈನಿಕ ವ್ಯವಹಾರಗಳಲ್ಲಿ ಮಾತ್ರವಲ್ಲದೆ, ಪಯಣದ ಸನ್ನಿವೇಶಗಳಲ್ಲಿಯೂ ಕ್ರಿಯಾಶೀಲವಾಗುತ್ತದೆ. ಧಾರ್ಮಿಕ ಯಾತ್ರೆಗಳಲ್ಲಿ, ಮದುವೆಗೆ ಮಾಡುವ ಪಯಣಗಳಲ್ಲಿ ಇದು ಕಾಣಸಿಗುತ್ತದೆ. ಇಂತಹ ಸನ್ನಿವೇಶಗಳು ಬಂದಾಗಲೆಲ್ಲ ಕುವೆಂಪು ತಮ್ಮ ಸಮಾಜವಾದಿ ಪ್ರಜ್ಞೆಯಿಂದ ಅವುಗಳ ಮೇಲೆ ಮಾಡುವ ಟೀಕೆಗಳು, ಕಾದಂಬರಿಯ ನಿರೂಪಣೆಯಲ್ಲಿ ವ್ಯಕ್ತವಾಗುತ್ತವೆ.

ಕಾಲ ಬದಲಾದರೂ ಜಾತಿ ಮತ್ತು ಮೇಲುಕೀಳು ಎಂಬ ಭಾವನೆ ಭಾರತೀಯ ಸಮಾಜದಲ್ಲಿ ಹೆಚ್ಚು ಬದಲಾಗದೆ ಉಳಿದುಕೊಂಡು ಬಂದಿದೆ. ಮನುಷ್ಯರು ನಾಗರಿಕರಾಗಿ ವಿಕಾಸವಾದರೂ ಜಾತಿ ಸಮಾಜದಲ್ಲಿನ ತಾರತಮ್ಯಗಳು ಜೀವಂತವಾಗಿ ಉಳಿದಿವೆ. ಇವು ಪಯಣದಲ್ಲಿ ಮಾತ್ರವಲ್ಲ, ಆಹಾರ ಸೇವನೆಯಲ್ಲಿಯೂ ಕ್ರಿಯಾಶೀಲವಾಗಿವೆ. 'ಕಾನೂರು ಹೆಗ್ಗಡಿತಿ'ಯಲ್ಲಿ ವರ್ಗ ಮತ್ತು ಜಾತಿಗೆ ಸಂಬಂಧಿಸಿದ ಭೋಜನ ಪದ್ಧತಿಯ ಕುರಿತಂತೆ ಒಂದು ಸನ್ನಿವೇಶ ಬರುತ್ತದೆ: "ಶೂದ್ರ ಅತಿಥಿಗಳಿಗೆ ಸಂಪ್ರದಾಯದಂತೆ ಕಿರು ಜಗಲಿಯಲ್ಲಿ ಎಲೆ ಹಾಕಿ ಬಡಿಸಿದರು. ಆದರೆ ಬ್ರಾಹ್ಮಣರ ಮನೆಯಲ್ಲಿ ಗಂಡಸರೊಡನೆ ಊಟಕ್ಕೆ ಕುಳಿತಿದ್ದ ಶೂದ್ರ ಮಹಿಳೆಯರು ನಾಚಿಕೆ ದಾಕ್ಷಿಣ್ಯಗಳಿಂದ ಚೆನ್ನಾಗಿ ಊಟ ಮಾಡಲಾಗಲಿಲ್ಲ" ಎಂದು ಕಾದಂಬರಿ ನಿರೂಪಣೆ ಮಾಡುತ್ತದೆ(ಪು.೪೬೬). ಆಹಾರ ಸಂಸ್ಕೃತಿಯು ಸಮಾಜದಲ್ಲಿ ಜನರ ಮುಕ್ತವಾದ ಚಲನೆ ಮತ್ತು ಪಯಣಗಳನ್ನು ನಿರ್ಬಂಧಮಾಡಿದೆ. ದಲಿತರ ಮನೆಗಳಿಗೆ ಬ್ರಾಹ್ಮಣರು ಪ್ರವೇಶ ಮಾಡುವಂತಿಲ್ಲ, ಅವರು ಮಾಡಿದ ಆಹಾರ ಸೇವಿಸುವಂತಿಲ್ಲ. ಆದರೆ ಬ್ರಾಹ್ಮಣರ ಮನೆಗೆ ದಲಿತರು ಬಂದಾಗ ಅವರನ್ನು ಕೀಳಾಗಿ ಕಾಣುವ, ಮನೆಯ ಹೊರಗಡೆ ಊಟಕ್ಕೆ ಹಾಕುವ ಮನೋಭಾವ ಮಲೆನಾಡಲ್ಲಿ ಜೀವಂತವಾಗಿದೆ. ಬಯಲು ಸೀಮೆಯ ಹಳ್ಳಿಗಳ ಹೋಟೆಲ್‌ಗಳಿಗೆ ದಲಿತರು ಹೋಗುವುದನ್ನು ನಿಷೇಧಿಸಿರುವ

ಪದ್ಧತಿ ಈಗಲೂ ಜೀವಂತವಾಗಿದೆ. ಶ್ರೀಕೃಷ್ಣ ಆಲನಹಳ್ಳಿಯವರ 'ಭುಜಂಗಯ್ಯನ ದಶಾವತಾರ' ಕೃತಿಯು ಜಾತಿ ವಿಷಯದಲ್ಲಿ ಉದಾರವಾದಿಯಾಗಿರುವ ಭುಜಂಗಯ್ಯನ ಹೋಟೆಲ್‌ನಲ್ಲಿ ನಡೆಯುವ ದಲಿತರ-ಮೇಲ್ವರ್ಗದವರ ನಡುವಿನ ತಾಕಲಾಟಗಳ ಚಿತ್ರಣವನ್ನು ತರುತ್ತದೆ. ಭುಜಂಗಯ್ಯ ದಲಿತರಿಗೆ ಹೋಟೆಲ್‌ನಲ್ಲಿ ಪ್ರವೇಶಕ್ಕೆ ಅನುಮತಿ ನೀಡಿದ್ದರಿಂದಲೇ ಎರಡು ಕೋಮಿನ ನಡುವೆ ವೈಷಮ್ಯ ಏರ್ಪಡುತ್ತದೆ.

ಪಯಣವು ಧರ್ಮದಿಂದ ಧರ್ಮಕ್ಕೆ ಜನರು ಚಲಿಸುವ ವಿಧಾನದಲ್ಲಿಯೂ ಇದೆ. ಮತಾಂತರವು ಒಂದು ಬಗೆಯ ಧಾರ್ಮಿಕ ಪಯಣವಾಗಿದೆ. 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ಬಚ್ಚ ಹೊಲೇರವನಾದರೂ, ಕ್ರೈಸ್ತಜಾತಿಗೆ ಮತಾಂತರ ಹೊಂದಿದವನು. ಈ ಕಾರಣದಿಂದಾಗಿಯೇ ಅವನು ಗೌಡರ ಮನೆಯಲ್ಲಿ ಮುಕ್ತವಾದ ಚಲನೆಯ ಹಕ್ಕನ್ನು ಪಡೆದವನು. ಆದರೆ ಅದನ್ನು ಸಂಪ್ರದಾಯವಾದಿಗಳು ಸಹಿಸುವುದಿಲ್ಲ. ಅದರಲ್ಲಿಯೂ ಧಾರ್ಮಿಕ ಯಾತ್ರೆ ಮಾಡುವಾಗ ಅಂತಹ ಧರ್ಮಾಂತರವಾಗಿರುವ ಕೆಳಜಾತಿಯವರನ್ನು ಅವರು ಮನ್ನಿಸುವುದಿಲ್ಲ. ಬಚ್ಚನು ಗೌಡರ ಮನೆಯ ಗಾಡಿ ಹೊಡೆಯುವವನಾಗಿ ತನ್ನ ಒಡೆಯರ ಕುಟುಂಬವನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗುವುದಕ್ಕೆ ಶಂಕರಯ್ಯ ಹೆಗ್ಗಡೆ ಮಾಡುವ ಟೀಕೆ ಹೀಗಿದೆ: "ಅಲ್ಲಾ...ಅದೆಲ್ಲಾ ಸರಿ. ಆದರೆ ಗಾಡಿ ಹೊಡೆಯೋಕೆ ಆ ಬಚ್ಚನ್ನ ಇಟ್ಕೊಂಡಿದಾರಂತಲ್ಲೋ ಗೌಡರ ಮನೇಲಿ ಹೊಲೇರನ್ನ ಒಳಂಗಳಕ್ಕೆ ಕಾಲಿಡೋಕೆ ಬಿಡಾದಿಲ್ಲ. ಅಂತಲ್ಲ ಅವರು ಅವನ್ನ ಗಾಡಿ ಹೊಡೆಯೋಕೆ ಇಟ್ಟು ಕೊಂಡು, ಅವನ ಕೈಲಿ ಮುಟ್ಟಿಸ್ಕೊಂಡು...ಥೂಥೂಥೂ ಕಿಲಿಸ್ತರು ಮಾಡಿದ್ದಾಂಗೆ ಮಾಡ್ತೀದಾರಲ್ಲೋ.."(ಪು.೧೫೧) ಜಾತಿಗಳೊಳಗೆ ಚಲನಶೀಲವಾಗಿ ಸಂಘರ್ಷ ಹೊಗೆಯಾಡುತ್ತಲೇ ಇದೆ. ಬ್ರಾಹ್ಮಣ-ಶೂದ್ರ-ದಲಿತ-ಮುಸ್ಲಿಂ-ಕ್ರೈಸ್ತ ಹೀಗೆ ಕಾದಂಬರಿಯ ಚಲನೆಯಲ್ಲಿ ಪ್ರತಿಭಟನೆ ಕಾಣಿಸಿಕೊಳ್ಳುತ್ತದೆ. ಈ ಮೇಲಿನ ವ್ಯಾಖ್ಯೆಯಲ್ಲಿ ಶೂದ್ರರ ಮನೆಯಲ್ಲಿ ದಲಿತನೊಬ್ಬ ಸ್ವೇಚ್ಛೆಯಾಗಿ ತಿರುಗಾಡುವುದು ಕೆಲವರಿಗೆ ಸಹಿಸಲು ಅಸಾಧ್ಯವಾಗಿರುವುದು ವ್ಯಕ್ತವಾಗಿದೆ. ಬಚ್ಚ ಹೊಲೆಯನಾಗಿರುವುದರಿಂದ ಅವನನ್ನು ಮುಟ್ಟುವುದು ಮೈಲಿಗೆಯೆಂದು ನಿರ್ಧರಿಸಿರುವ ಕ್ರಮವು ಮೌಢ್ಯ ಮತ್ತು ಶೋಷಣೆಯ ರೂಪವಾಗಿದೆ. ಬಚ್ಚನ ಈ ಮುಕ್ತತೆಗೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವು ಕಾರಣವಾಗಿದೆ. ಕಾರಂತರ 'ಚೋಮನ ದುಡಿ'ಯಲ್ಲಿ ಗುರುವ ಕ್ರೈಸ್ತ ಧರ್ಮದೆಡೆಗೆ ಸಾಗಿ ಬದುಕನ್ನು ಕಟ್ಟಿಕೊಂಡರೆ, ಚೋಮ ತನ್ನ ಜಾತಿಯಲ್ಲೇ ಉಳಿದು ಭೂಮಿಯ ಆಸೆಯಲ್ಲೇ ಸಾಯುವ ಕ್ರಮವಿದೆ. ವ್ಯಕ್ತಿ ಜಾತಿ, ಧರ್ಮವನ್ನು ಮೀರಿ ಪಯಣಿಸುವುದನ್ನು ನಿಯಂತ್ರಿಸುವ, ಶೋಷಿಸುವ ಕ್ರಮ ಸಮಾಜದಲ್ಲಿ ಇಂದಿಗೂ ಚಲನಶೀಲವಾಗಿಯೇ ಇದೆ. ಕಾರಂತರಲ್ಲಿ ವ್ಯಕ್ತಿಯ ಬದಲಾವಣೆ ಮುಖ್ಯವಾಗಿ ಕಂಡರೆ, ಕುವೆಂಪುರಲ್ಲಿ ವ್ಯಕ್ತಿಯ ಬದಲಾವಣೆ ಇನ್ನೊಂದು ಸಮುದಾಯದ ಅಸಮಾಧಾನಕ್ಕೆ ಕಾರಣವಾಗುತ್ತದೆ. ಹೀಗೆ ಚಲನಾಶೀಲವಾಗಿರುವ ವ್ಯಕ್ತಿ ಜಾತಿ, ವರ್ಗ, ಧರ್ಮಗಳನ್ನು ಮೀರಿ ಮುಕ್ತವಾಗಿ ಚಲಿಸುವ, ಹೊಸ ಆಲೋಚನ ಕ್ರಮಕ್ಕೆ ಕಾರಣವಾಗುವ

ತುರ್ತನ್ನು ಹೇಳುತ್ತದೆ. ಇದೇ ಸಂದರ್ಭದಲ್ಲಿ ಡಿ.ಆರ್.ನಾಗರಾಜ್ ಅವರು ಕುವೆಂಪು ದರ್ಶನದಲ್ಲಿ ಇರುವ ಸಂಘರ್ಷ ಮತ್ತು ವಿಕಾಸದ ಅಂತರ್ ಸಂಬಂಧ ಕುರಿತು ಹೇಳುವ ಮಾತೊಂದು ಮುಖ್ಯವಾಗಿದೆ: "ಕುವೆಂಪುವಿಗೆ ವರ್ಗ ಸಂಘರ್ಷದ ವಾಸ್ತವ ಸ್ವರೂಪದಲ್ಲಿ ಆಸಕ್ತಿಯಿಲ್ಲ. ಬದಲಾಗಿ ಇದು ಒಂದು ವಿಕಾಸದ ಕಥನ; ನವೋದಯ, ಆಧ್ಯಾತ್ಮಿಕ ಮಾನವೀಯತೆಯ ವಿಕಾಸದ ಕಥನ. ಈ ಸಾರ್ವತ್ರಿಕ ಮಾನವೀಯತೆಯ ದೃಷ್ಟಿಕೋನ ಯಾವಾಗಲೂ ವರ್ಗ ಸಂಬಂಧಗಳ ನಿಜ ಸ್ವರೂಪವನ್ನು ಅದರಾಳದ ಘರ್ಷಣೆಯನ್ನು ಯಾವಾಗಲೂ ಮಸುಕಾಗಿಸುತ್ತದೆ."[೫] ಡಿ.ಆರ್. ಹೇಳುವುದರಲ್ಲಿ ನಿಜವಿದೆ. ಆದರೂ ಸಂಘರ್ಷದ ಆಯಾಮವನ್ನು ಕುವೆಂಪು ಪೂರ್ಣವಾಗಿ ಬಿಟ್ಟುಕೊಡುತ್ತಾರೆ ಅನಿಸುವುದಿಲ್ಲ. ಆದರೆ ಈ ಸಂಘರ್ಷಕ್ಕಿಂತಲೂ ಎಲ್ಲ ಮನುಷ್ಯರಿಗೆ ತಮ್ಮ ತಮ್ಮ ಬಾಳಿನ ಪಥದಲ್ಲಿ ಚಲಿಸುತ್ತ ತಮ್ಮ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳುವ ಸಾಧ್ಯತೆಯ ಬಗ್ಗೆ ಅವರಿಗೆ ಹೆಚ್ಚು ಆಸಕ್ತಿ. ಹೀಗಾಗಿಯೇ ಅವರು ದುಡಿಯುವ ವರ್ಗದ ಬವಣೆಗಳನ್ನು ಮಾತ್ರ ಚಿತ್ರಿಸುವುದಿಲ್ಲ. ಅವರು ಹೊಸಬದುಕಿನ ಹುಡುಕಾಟಕ್ಕಾಗಿ ಅವರು ಮಾಡುವ ಹೋರಾಟವನ್ನೂ ಚಿತ್ರಿಸುವರು. ಈ ದೃಷ್ಟಿಯಿಂದ ಗುತ್ತಿಯು ಮಾಡುವ ಕೊನೆಯ ಘಟ್ಟದ ಪಯಣವನ್ನು ಇಲ್ಲಿ ಗಮನಿಸಬೇಕಾಗಿದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ದೊಡ್ಡಬೀರನ ಮಗಳು ತಿಮ್ಮಿ ಗುತ್ತಿಯೊಂದಿಗೆ ಕದ್ದು ಪಯಣ ಮಾಡಿದಳು. ಇದು ಬೆಟ್ಟಳ್ಳಿಯ ಕಲ್ಲಯ್ಯ ಗೌಡರಿಗೆ ಸಹಿಸಲು ಅಸಾಧ್ಯವಾಗಿ ಒಬ್ಬ ಜೀತದಾಳು ಕಡಿಮೆಯಾಗಿದ್ದಕ್ಕೆ ಮುಯ್ಯಿ ತೀರಿಸಿಕೊಳ್ಳಲು ಹೊನ್ನಾಳಿ ಪ್ರಯೋಗ ಮಾಡಿದರು. ಆ ಸಂದರ್ಭಕ್ಕೂ ಮುನ್ನ ದೊಡ್ಡಬೀರ ಮತ್ತು ಮಗನಿಂದ ಸಾಬಿಯನ್ನು ಪ್ರತಿಭಟಿಸುವ ಪ್ರಸಂಗ ಹೀಗಿದೆ: "ನೀವು ಕೇರಿ ಒಳಗೆಲ್ಲ ಬರಬಾರದು ನಮಗೂ ದೇವರು ದಿಂಡರೂ ಇದಾವೆ. ನಮ್ಮ ಜಾತಿ ಕೆಟ್ಟು ಹೋಗ್ತದೆ. ಅಂತಾ ಏನೇನೂ ಬೊಗಳಿ ಬಿಟ್ಟ.. ಇವತ್ತು ಇವನ, ಇವನ ಮಗನ ಸೊಕ್ಕನೆಲ್ಲ ಇಳಿಸಿ ಬಿಡ್ತೀನಿ: ಗೌಡರು ಬೆತ್ತ ತಗೋ ಅನ್ನಲಿ!."(ಪು.೩೩೩) ದಲಿತರನ್ನು ಆರ್ಥಿಕತೆಯ ಸಂಕೇತವಾಗಿ ಜಮೀನ್ದಾರರು ಕಂಡಿರುವುದಿದೆ. ಅವರನ್ನು ನಿಯಂತ್ರಿಸುವ ಸಲುವಾಗಿ ಮುಸ್ಲಿಂ ಸಾಬಿಗಳನ್ನು ಬಳಸಿಕೊಂಡು ಹೊನ್ನಾಳಿ ಹೊಡೆತ ಪ್ರಯೋಗಿಸುವ ಕ್ರಮ ಅಮಾನವೀಯವಾಗಿದೆ. ಇಜಾರ ಸಾಬಿಯು ಒಮ್ಮೆ ದೊಡ್ಡಬೀರನ ಕೇರಿಗೆ ಪಯಣ ಬೆಳೆಸಿದಾಗ ಮಾಡಿದ ತಿರಸ್ಕಾರ ದ್ವೇಷಕ್ಕೆ ಕಾರಣವಾಗುತ್ತದೆ. 'ಬಡವನ ಕೋಪ ದವಡೆಗೆ ಮೂಲ' ಎಂಬ ಗಾದೆಯಂತೆ ತಳಸಮುದಾಯಗಳನ್ನು ಮೇಲ್ವರ್ಗದವರು ದಿನ ನಿತ್ಯದ ಬದುಕಿನ ಸಂಚಾರದಲ್ಲಿ ಹತ್ತಿಕ್ಕುವ ಕ್ರಮ ಇಲ್ಲಿದೆ.

ದೇವರ ಹೆಸರಿನಲ್ಲಿ ಪಯಣ ಬೆಳೆಸಿದಾಗ ಕೆಳಜಾತಿಯವರನ್ನು ಕೀಳಾಗಿ ಕಾಣುವದು, ಮಡಿಮೈಲಿಗೆ ಹೆಸರಲ್ಲಿ ಶೋಷಣೆ ಮಾಡುವುದಿದೆ. ಬಚ್ಚ ಹೊಲೆಯವನಾಗಿದ್ದರಿಂದ ಗಾಡಿ ಹೊಡೆಯುವುದನ್ನು, ಗಾಡಿಯಲ್ಲಿ ಕುರುವುದನ್ನು ಶಂಕರ ಹೆಗ್ಗಡೆಯವರು ತಮ್ಮ ಅಸಮಾಧಾನವನ್ನು

ಹೀಗೆ ವ್ಯಕ್ತ ಪಡಿಸಿದ್ದಾರೆ: "ದೇವಸ್ಥಾನಕ್ಕೆ ಹೋಗ್ತಾರಂತೆ, ದೇವಸ್ಥಾನಕ್ಕೆ! ಮು! ಹೊಲೇರವನ್ನ ಗಾಡಿ ಹೊಡೆಯಾಕೆ ಕುರಿಸಿಕೊಂಡು ಏನು ಮಡಿಯಾಗಿ ಹೋಗ್ತಾರೋ ದೇವರ ಸೇವೆಗೆ? ನಮ್ಮನ್ನೂ ಬೇರೆ ಗಾಡಿ ಹತ್ತಿ ಅಂತಾರೆ!."(ಪು.೪೨೩) ದೊಡ್ಡಮ್ಮ ಹೆಗ್ಗಡಿತಿಯವರು ಕಲ್ಲೂರಿಗೆ ಗಾಡಿಯಲ್ಲಿ ಪಯಣ ಮಾಡುವಾಗ ಬರಿಗಾಲಲ್ಲಿ ನಡೆದುಕೊಂಡು ಹೋಗುತ್ತಿದ್ದ ಶಂಕರ ಹೆಗ್ಗಡೆಯವರನ್ನು ನೋಡುತ್ತಾರೆ. ಆಗ ಗಾಡಿಯಲ್ಲೇ ಕೂತು ಪಯಣ ಮಾಡುವಂತೆ ಅವರನ್ನ ಕೇಳಿಕೊಳ್ಳುತ್ತಾರೆ. ಆಗ ಶಂಕರಹೆಗ್ಗಡೆ ಮೇಲಿನ ಮಾತನ್ನು ಆಡುತ್ತಾರೆ. ಬಚ್ಚ ಹೊಲೇರವನಾಗಿದ್ದು ಗಾಡಿ ಓಡಿಸುವುದರಿಂದ ಗಾಡಿಯಲ್ಲಿ ಕೂತು ಪಯಣ ಬೆಳೆಸಿದರೆ ಮೈಲಿಗೆಯಾಗುತ್ತದೆ ಎಂಬುದು ಅವರ ಆತಂಕವಾಗಿದೆ. ಶಂಕರ ಹೆಗ್ಗಡೆ ಮಡಿ–ಮೈಲಿಗೆಯಾಗುತ್ತದೆ ಎಂದು ಹೆಂಡತಿ ಸೀತಮ್ಮ ಮತ್ತು ಮಗ ಗಾಡಿಯಲ್ಲಿ ಹೋಗುವುದನ್ನು ತಡೆಯುತ್ತಾರೆ. ದಲಿತರನ್ನು ದೇವರ ಹೆಸರಿನಲ್ಲಿ ಇಂದಿಗೂ ಕೀಳಾಗಿ ಕಾಣುವ ಮನೋಧರ್ಮ ಸಾಂಪ್ರದಾಯಿಕ ಸಮಾಜದಲ್ಲಿದೆ. ಬೇರೆ ಧರ್ಮ ಮತ್ತು ಕೆಳಜಾತಿಯವರು ದೇವಾಲಯದೊಳಗೆ ಪ್ರವೇಶ ಮಾಡಿದರು ಎಂಬ ಕಾರಣಕ್ಕೆ ದೇವಾಲಯವನ್ನು ಗೋಮೂತ್ರದಿಂದ ಶುದ್ಧೀಕರಿಸಿದ ಘಟನೆಗಳು ಇತ್ತೀಚೆಗೆ ನಡೆಯುತ್ತಿವೆ.[೬]

ಜಾತಿಯ ಕಾರಣಕ್ಕಾಗಿ ಸಮಾಜದಲ್ಲಿ ಶ್ರೇಣೀಕರಣದ ಅಂತಸ್ತು ನಿರ್ಮಾಣವಾಗುತ್ತದೆ. ಆ ಅಂತಸ್ತಿನ ಕೆಳಹಂತದಲ್ಲಿರುವವರು ಬದುಕಿಗಾಗಿ ಹೋರಾಟ ಮಾಡಬೇಕಾಗುತ್ತದೆ. ತಮ್ಮ ವೈಯಕ್ತಿಕ ಪ್ರೀತಿ ಪ್ರೇಮಗಳನ್ನು ಸಹ ಇನ್ನೊಬ್ಬರ ಹಂಗಿನಲ್ಲಿ ವ್ಯಕ್ತಪಡಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನಾಯಿಗುತ್ತಿ ಹೊಲೇರವನಾಗಿದ್ದರಿಂದಲೇ ತಿಮ್ಮಿಯನ್ನು ಸಹಜವಾಗಿ ಪಡೆಯಲಾಗುವುದಿಲ್ಲ. ಇಂತಹ ಸನ್ನಿವೇಶದಲ್ಲಿ ಅಪರಾಧಿಯಂತೆ ಕಾಡಿನಲ್ಲಿ ಅಲೆದಾಡುತ್ತಿರುವಾಗ ಗುತ್ತಿಗೆ ವಿಚಿತ್ರವಾದ ಅಸಹಾಯಕತೆ ಹುಟ್ಟುತ್ತದೆ. ಆಗ ಅವನು: "ನಾನು ಹೊಲೇರವನಲ್ಲದೆ ಬ್ಯಾರೆ ಜಾತಿಗೆ ಸೇರಿದವನಾಗಿದ್ದರೆ ಹೀಂಗಾಗ್ತಿತ್ತೇ? ಗೌಡರ ಜಾತಿಗೆ? ಸೆಟ್ಟರ ಜಾತಿಗೆ? ಬಿರಾಂಬರ ಜಾತಿಗೆ? ಉಂಹ್ಞೂ ಈ ಜಲ್ಮದಾಗೆ ಅದೆಲ್ಲಿ ಸಾಧ್ಯ? ..ಸಾಬರ ಜಾತಿಗೆ? ಕಿಲಸ್ತರ ಜಾತಿಗೆ?..ಥೂಥೂಥೂ!." ಎಂದು ಆಲೋಚಿಸುತ್ತಾನೆ.(ಪು.೪೮೫) ಪೋಲಿಸರ ಭಯದಿಂದ ಕಾಡಿಗೆ ಬಿದ್ದು ದಿಕ್ಕೆಟ್ಟು ತಿಮ್ಮಿಯನ್ನು ಕಳೆದುಕೊಂಡು ಕಾಡಿನಲ್ಲಿ ಅಲೆಯುವಾಗ ಗುತ್ತಿಗೆ ತನ್ನ ಸಾಮಾಜಿಕ ಸಂದರ್ಭದ ದಾರುಣ ಅರಿವು ಮತ್ತು ತಾಕಲಾಟಗಳು ಅನುಭವಕ್ಕೆ ಬರುತ್ತವೆ. ಕಾರಂತರ ಚೋಮನಿಗೂ ಇಂಥದೇ ಆಲೋಚನೆಗಳು ಸುಳಿದುಹೋಗುತ್ತವೆ. ನೆರೆದ ಜನರೆಲ್ಲರ ಎದುರಿನಲ್ಲಿಯೇ ತನ್ನ ಮಗ ನೀಲ ಹೊಳೆಯಲ್ಲಿ ಮುಳುಗಿ ಸತ್ತಾಗ ಚೋಮನಿಗೆ ತನ್ನ ಸಾಮಾಜಿಕ ಸ್ಥಿತಿಯ ಕಠೋರ ವಾಸ್ತವಿಕತೆ ಹೊಳೆಯುತ್ತದೆ. ಈ ಹಿನ್ನೆಲೆಯಲ್ಲಿ "ಕುವೆಂಪು ದಲಿತರ ನೋವಿನ ಪರಿಸ್ಥಿಯನ್ನು ವರ್ಣಿಸುತ್ತಾರಾದರೂ ಅವರ ಅಂತಃಕರಣವೆಲ್ಲ ಊಳಿಗಮಾನ್ಯ ಜಮೀನುದಾರರ, ಗೌಡರ ಪರವಾಗಿದ್ದು ಬ್ರಾಹ್ಮಣ ವಿರೋಧಿಯಾಗಿದೆಯೇ ಹೊರತು ದಲಿತಪರವಾಗಿಲ್ಲ" ಎಂಬ ಬಿ.ಕೃಷ್ಣಪ್ಪನವರ ಹೇಳಿಕೆ ಒಪ್ಪುವುದು ಕಷ್ಟವೆನಿಸುತ್ತದೆ.[೭] ಬ್ರಾಹ್ಮಣ–ಒಕ್ಕಲಿಗ ಮುಖಾಮುಖಿ ಸಂದರ್ಭದಲ್ಲಿ ಕುವೆಂಪು

ಶೂದ್ರರಾದ ಒಕ್ಕಲಿಗರ ಪರವಾಗಿರುತ್ತಾರೆ ಎನ್ನುವ ಬಿ.ಕೃಷ್ಣಪ್ಪನವರ ವ್ಯಾಖ್ಯಾನದಲ್ಲಿ ಕೆಲಮಟ್ಟಿಗೆ ನಿಜವಿದೆ. ಆದರೆ ಒಕ್ಕಲಿಗ-ದಲಿತರ ಸಂದರ್ಭದಲ್ಲಿ ಅವರ ಧೋರಣೆಗಳು ಶೂದ್ರರ ಪರವಾಗಿರುತ್ತವೆ ಎಂದು ಒಪ್ಪುವುದು ಕಷ್ಟ. ಅವರ ಧೋರಣೆಗಳು ಇಂತಹ ಸನ್ನಿವೇಶದಲ್ಲಿ ಸಾಮಾನ್ಯವಾಗಿ ಸಾಮಾಜಿಕವಾಗಿ ತಬ್ಬಲಿಗಳಾದ ದಲಿತಪರವಾಗಿ ಇರುತ್ತವೆ ಎನ್ನುವುದು ತಿಳಿಯುತ್ತದೆ. 'ಮದುಮಗಳು' ಕಾದಂಬರಿಯು ಮಂಜಭಟ್ಟನಂಥವರ ಕ್ರೌರ್ಯ-ಕುತಂತ್ರಗಳನ್ನು ಬೈಲಿಗೆಳೆದಂತೆ ಕಲ್ಲಯ್ಯಗೌಡ-ರಂಗಪ್ಪಗೌಡ ಮೊದಲಾದ ಒಕ್ಕಲಿಗರಿಂದ ನಡೆಯುವ ಶೋಷಣೆಗಳನ್ನು ಅನಾವರಣ ಮಾಡುತ್ತದೆ. ಗುತ್ತಿ-ತಿಮ್ಮಿಯಿಂದ ದೂರವಾಗಿದ್ದಾನೆ. ಇಜಾರಸಾಬಿಯೊಂದಿಗಿನ ಹೊಡೆದಾಟದಿಂದ ಪೋಲೀಸರು ಬಂಧಿಸುವ ಭೀತಿಯಿಂದ ಕಂಗಾಲಾಗಿದ್ದಾನೆ. ತಿಮ್ಮಿಯನ್ನು ಉಪಾಯದಿಂದ ಬಚ್ಚನೊಂದಿಗೆ ಮದುವೆ ಮಾಡುವುದನ್ನು ತಡೆಯಲು ಬೆಟ್ಟಳ್ಳಿಗೆ ಪಯಣ ಮಾಡಿದರೆ ಆಗಬಹುದಾದ ಅನಾಹುತ ಕುರಿತು ಆಲೋಚಿಸುತ್ತ ಈ ಮೇಲಿನಂತೆ ಮನಸ್ಸಿನಲ್ಲಿ ಆಲೋಚನೆ ಮಾಡುತ್ತಾನೆ. ಇದು ಕೇವಲ ಗುತ್ತಿಯೊಬ್ಬನ ಆಲೋಚನೆಯಲ್ಲ; ಕೀಳುಜಾತಿಯೆಂದು ಹಣೆಪಟ್ಟಿ ಹಾಕಿಸಿಕೊಂಡಿರುವ ಎಲ್ಲ ದಲಿತರ ನೋವಿನ ಧ್ವನಿ. ಕೆಳಸ್ತರದ ಗಂಡು-ಹೆಣ್ಣು ಆರ್ಥಿಕತೆಯ ಸಂಕೇತವಾಗಿ ಕಂಡಿರುವ ಜಮೀನ್ದಾರಿ ವ್ಯವಸ್ಥೆ ಒಂದೆಡೆ ಇದೆ. ಮತ್ತೊಂದೆಡೆ ಕೆಳಜಾತಿಯವನಾಗಿರುವ ಕಾರಣ ಶೋಷಣೆಗೆ ಬಲಿಯಾಗಿರುವುದು ಇದೆ. ಆದರೆ ಈ ಸಮಸ್ಯೆ ಮುಕುಂದಯ್ಯನಂತಹ ಮೇಲ್ಜಾತಿಯ ಮೇಲ್ವರ್ಗದ ವ್ಯಕ್ತಿಗೆ ಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಗುತ್ತಿ ಕಾಡಿನಲ್ಲಿ ಮಾಡುವ ದಿಕ್ಕೆಟ್ಟ ದಾರಿತಪ್ಪಿದ ಪಯಣವನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಆದರೆ ಗುತ್ತಿ ತನ್ನೆಲ್ಲ ಕಷ್ಟಗಳನ್ನು ತನ್ನ ಸುದೀರ್ಘವಾದ ತಿರುಗಾಟದ ಶಕ್ತಿಯ ಮೂಲಕವೇ ಗೆಲ್ಲುತ್ತಾನೆ ಎಂಬುದು ಮುಖ್ಯವಾಗಿದೆ.

ಮಲೆನಾಡಿನಲ್ಲಿ ಗಂಡು ತಾನು ಇಷ್ಟಪಟ್ಟ ಹೆಣ್ಣನ್ನು ಹಾರಿಸಿಕೊಂಡು ಹೋಗಿ ಮದುವೆಯಾಗುವುದಿದೆ. ಈ ಮದುವೆ ಪದ್ಧತಿಯು ಪಯಣದೊಂದಿಗೆ ಲಗತ್ತಾಗಿದೆ. ಈ ರೀತಿ ನಡೆಯುವ ಮದುವೆಗಳು ಕೆಲವೊಮ್ಮೆ ಅಂತಸ್ತುಗಳ ನಡುವಿನ ವ್ಯತ್ಯಾಸಕ್ಕೂ ಕಾರಣವಾಗುತ್ತದೆ. 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ರಂಗಪ್ಪ ಮುಕುಂದಯ್ಯ ಮಾಡಿದ ಅಪಹರಣ ಕಾರ್ಯವನ್ನು ಟೀಕಿಸುತ್ತಾನೆ. ಅವನ ಟೀಕೆಯ ಹಿಂದೆ ಮನೆತನಗಳ ಸಂಘರ್ಷದ ಸುಳಿವುಗಳಿವೆ. ಇದನ್ನು ಕಾದಂಬರಿ ಹೀಗೆ ನಿರೂಪಿಸುತ್ತದೆ: "ಕೋಣೂರು ರಂಗಪ್ಪಗೌಡರು, ಮುಕುಂದಯ್ಯ ತಮ್ಮ ಮನೆತನಕ್ಕೆ ಕೆಟ್ಟ ಹೆಸರು ತಂದಿಟ್ಟನೆಂದು ಕುಪಿತರಾದರು. ಹಾಗೆ ಹೆಣ್ಣನ್ನು ಹಾರಿಸಿ ಕೊಂಡು ಹೋಗುವುದು. ಹೊಲೇಯರ, ಘಟ್ಟದ ತಗ್ಗಿನವರಿಗೆ ಮೊದಲಾದ ಕೀಳು ಜನಕ್ಕೆ ಹೇಳಿಸಿದ್ದಲ್ಲದೆ, ತಮ್ಮಂಥ ಉತ್ತಮ ಜಾತಿಯ ಶ್ರೇಷ್ಠ ಕುಲದವರಿಗೆ ಅತ್ಯಂತ ಅವಮಾನಕರವಾದ ಹೇಯ್ಯಕಾರ್ಯ"(ಪು.೬೫೫). ಗಂಡು-ಹೆಣ್ಣು ಓಡಿ ಹೋಗಿ ಮದುವೆಯಾಗುವುದು ಕೀಳುವರ್ಗದವರ ಸಂಸ್ಕೃತಿಯೆಂದೂ, ಮೇಲ್ವರ್ಗದವರು ಮೇಲ್ಜಾತಿಯವರು ಹೆಣ್ಣನ್ನು ಓಡಿಸಿಕೊಂಡು ಹೋಗಿ ಮದುವೆಯಾಗುವುದರಿಂದ ತಾವೂ ಕೀಳಾಗುತ್ತವೆಯೆಂದೂ ಇಲ್ಲಿನ ಗ್ರಹಿಕೆಯಾಗಿದೆ. ಇಲ್ಲಿ ಅಡಗಿರುವ

ವರ್ಗಸಂಘರ್ಷದ ಸಂಗತಿಗಳು ಪಯಣದ ಜತೆ ವಿಚಿತ್ರವಾಗಿ ಜೋಡಣೆಗೊಂಡಿವೆ. ಡಿ.ಆರ್.ನಾಗರಾಜ್ ತಮ್ಮ 'ಕುವೆಂಪು ಕೃತಿಗಳಲ್ಲಿ ವರ್ಣ-ವರ್ಗ-ಸಂಘರ್ಷ' ಲೇಖನದಲ್ಲಿ ಕುವೆಂಪು ಅವರ ವರ್ಗಸಂಘರ್ಷ ಪರಿಕಲ್ಪನೆಯನ್ನು ವಿವರಿಸುತ್ತಾರೆ. ಅವರ ಪ್ರಕಾರ "ಕಾದಂಬರಿಯ ತತ್ವಜ್ಞಾನಿ ಕುವೆಂಪುವಿಗೆ ವರ್ಗ ಸಂಘರ್ಷಗಳು ಮುಖ್ಯವಲ್ಲ; ಆದರೆ ಕಲಾವಿದ ಕುವೆಂಪು ತತ್ವಜ್ಞಾನಿಯ ದಿವ್ಯ ನಿರ್ಲಕ್ಷ್ಯವನ್ನು ಮೀರಿ ಜೀವನದ ವಾಸ್ತವಗಳನ್ನು ತಮ್ಮ ಕೃತಿಯಲ್ಲಿ ಕೊಟ್ಟಿದ್ದಾರೆ."[೮] ಇದರರ್ಥ ಕುವೆಂಪು ಒಳಗಿನ ತತ್ವಜ್ಞಾನಿಗೆ ಅಗಲಿದ ಸಂಗತಿಗಳು ಕೂಡುವ ಅದ್ವೈತವು ಮುಖ್ಯವಾಗಿದೆ. ಆದರೆ ಕುವೆಂಪು ಅವರೊಳಗಿನ ಸಮಾಜವಿಜ್ಞಾನಿಗೆ ಸಾಮಾಜಿಕ ಸಂಘರ್ಷಗಳು ಮುಖ್ಯವಾಗಿವೆ. 'ಮದುಮಗಳು' ಕಾದಂಬರಿಗೆ ಹೋಲಿಸಿದರೆ, 'ಹೆಗ್ಗಡಿತಿ' ಕಾದಂಬರಿಯ ಬಂಧದ ಮುಖ್ಯ ಕೇಂದ್ರದಲ್ಲಿ ಈ ರೀತಿಯ ಸಾಮಾಜಿಕ ಸಂಘರ್ಷಗಳು ಕಡಿಮೆಯಿವೆ. ಇಲ್ಲಿಯ ಮುಖ್ಯ ಕೇಂದ್ರಪಾತ್ರ ಹೂವಯ್ಯ. ಮೂಲತಃ ಈತ ಮಲೆನಾಡಿನ ವಿದ್ಯಮಾನಗಳಿಗೆ ಒಂದು ಸಾಕ್ಷಿಪ್ರಜ್ಞೆ ಕೂಡ. ಈತನ ಸಾಕ್ಷಿಪ್ರಜ್ಞೆಯಲ್ಲಿ ಮಲೆನಾಡಿನ ಅನೇಕ ಸಂಘರ್ಷಗಳು ದಾಖಲಾಗುತ್ತ ಹೋಗುತ್ತವೆ. ಅವು ಪಯಣದ ಜತೆಗೂ ಲಗತ್ತಾಗಿವೆ.

೩.೪. ಪಯಣ: ಆಲೋಚನ ಕ್ರಮ

ಮನುಷ್ಯ ತನ್ನ ಜೀವನದಲ್ಲಿ ಹಲವು ಕಾರಣಗಳಿಗಾಗಿ ಮಾಡುವ ಪಯಣವು ಅವನಿಗೆ ಹೊಸ ಅನುಭವಗಳಿಗೂ ಹೊಸ ಚಿಂತನೆಗೂ ಕಾರಣವಾಗುತ್ತದೆ. ಈಗಾಗಲೇ ಮನಸ್ಸಿನಲ್ಲಿ ಅಡಗಿರುವ ವಿಚಾರಗಳು ಪಯಣದ ಪ್ರಕ್ರಿಯೆಯಲ್ಲಿ ಬದಲಾವಣೆಯನ್ನು ಪಡೆಯುತ್ತವೆ. ಕುವೆಂಪು ರಚಿಸಿರುವ 'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಪಾತ್ರಗಳ ವಿಷಯದಲ್ಲಿಯೂ ಇದು ನಿಜ. ಇಲ್ಲಿನ ಪಾತ್ರಗಳು ಮಾಡುವ ಪಯಣವು ಅವರೊಳಗೆ ಹೊಸತನವನ್ನು ತರುವುದಲ್ಲದೆ, ಅವರ ಆಲೋಚನ ಕ್ರಮದಲ್ಲೂ ಚಲನಶೀಲತೆಯನ್ನು ತರುತ್ತದೆ. ವ್ಯಕ್ತಿಗಳ ಆಲೋಚನ ಕ್ರಮದಲ್ಲಿ ವ್ಯತ್ಯಾಸಗಳು ಕಾಣಲು ಇನ್ನೊಂದು ಕಾರಣ, ಅವರ ಪ್ರಜ್ಞೆಯ ವಿಕಸನದ ಸ್ವರೂಪದಲ್ಲಿದೆ. ಈ ದೃಷ್ಟಿಯಿಂದ ಹೂವಯ್ಯ ಮತ್ತು ಗುತ್ತಿಯರು ಎರಡು ಮಾದರಿಗಳು. ಅವರ ಪ್ರಜ್ಞೆಯ ಸ್ವರೂಪಕ್ಕೂ ಅವರ ತಿರುಗಾಟಗಳಿಗೂ ಹೀಗೆ ಸಂಬಂಧವಿದೆ. ಗುತ್ತಿಯ ತಿರುಗಾಟಗಳು ಮಲೆನಾಡಿನ ದುರ್ಗಮವಾದ ಹಳ್ಳಿಗಳಲ್ಲಿದ್ದರೆ, ಹೂವಯ್ಯನ ತಿರುಗಾಟಗಳು ಮಲೆನಾಡಿನ ಆಚೆಗೂ ಇವೆ. ಈ ದೃಷ್ಟಿಯಿಂದ "ಗುತ್ತಿ-ಹೂವಯ್ಯ ಎರಡು ಪಾತ್ರಗಳು ಒಂದು ಸಂಸ್ಕೃತಿಯ ಪ್ರಜ್ಞೆ ವಿಕಾಸಗೊಳ್ಳುವ ಎರಡು ವಿಭಿನ್ನ ಹಂತಗಳಲ್ಲಿ ಕಾಣಿಸಿಕೊಳ್ಳುವ ಪಾತ್ರಗಳು. ಒಂದು ಅಂತಃಪ್ರವೃತ್ತಿ ಮೂಲವಾದ ಅಭಿವ್ಯಕ್ತಿ ಕ್ರಮದಲ್ಲಿ ವಿನ್ಯಾಸಗೊಂಡಿದ್ದರೆ, ಇನ್ನೊಂದು ವಿಚಾರ, ವಿಶ್ಲೇಷಣೆ, ಅರಿವು ಒತ್ತಾಯಿಸುವ ಅಭಿವ್ಯಕ್ತಿ ಕ್ರಮದಲ್ಲಿ ವಿನ್ಯಾಸಗೊಂಡಿದೆ."[೯]

ಪಯಣಕ್ಕೆ ಸಾಮಾಜಿಕ ನಡವಳಿಗಳಲ್ಲಿ ಬೇರೆಬೇರೆ ಅರ್ಥಗಳಿವೆ. ಉದಾಹರಣೆಗೆ, ಆಪ್ತಬಂಧುಗಳಿಗೆ ಸುದ್ದಿಯನ್ನು ಕಳಿಸುವುದಕ್ಕೂ ಸ್ವತಃ ಅವರ ಮನೆಗೆ ಹೋಗಿ ಆಹ್ವಾನ ಕಳಿಸುವುದಕ್ಕೂ

ಬೇರೆ ಅರ್ಥಗಳು ಇವೆ. ಅದರಲ್ಲೂ ಮದುವೆಯ ಆಹ್ವಾನ ಪತ್ರಿಕೆಗಳನ್ನು ಕೊಡುವುದರ ಜೊತೆಗೆ ಸಮೀಪದ ಬಂಧುಗಳನ್ನು ಕರೆಯುವ ಪದ್ಧತಿಯಿದೆ. 'ಕಾನೂರು ಹೆಗ್ಗಡಿತಿ'ಯಲ್ಲಿ ಪುಟ್ಟಮ್ಮಳ ಮದುವೆಯ ಸನ್ನಿವೇಶದಲ್ಲಿ ಮನೆಗೆ ಜನ ಕರೆಯಲು ಬಾರದೆ ಲಗ್ನಪತ್ರಿಕೆಯನ್ನಷ್ಟೇ ಕಳಿಸಿದ ಬಗ್ಗೆ ನಾಗಮ್ಮ ದುಗುಡದಿಂದ ಹೇಳುವ ಮಾತುಗಳು, ಈ ದೃಷ್ಟಿಯಿಂದ ಗಮನಾರ್ಹವಾಗಿವೆ: "ಬಿಳೀ ಕಾಗದದ ಮೇಲೆ ಕರೀ ಗೀಟು ಗೀಚಿ ಗೀಚಿ ಕೊಟ್ಟು ಬಿಟ್ಟರೆ ಕರೆ ಬಂದ ಹಾಂಗಾಯ್ತೇನು? ನಿನ್ನಂಥಾ ಬರಾವು ಬಂದವರಿಗೆ ಅದೇ ಸಾಕಾಗಬೈದು. ನನ್ನಂಥಾ ಬರಾವು ಸರಾವು ಇಲ್ದವಳಿಗೆ?."(ಪು.೪೩೨) ಹೂವಯ್ಯನು ನಗರ ಸಂಸ್ಕೃತಿಗೆ ತೆರೆದುಕೊಂಡವನೂ, ದೂರದ ಮೈಸೂರಿಗೆ ಹೋಗಿ ಶಿಕ್ಷಣ ಪಡೆದು ಆಧುನಿಕ ಚಿಂತನೆಗೆ ಒಳಗಾದವನೂ ಆಗಿರುವುದರಿಂದ, ಆತನಿಗೆ ಮದುವೆಗೆ ಬೀಗರು ಪಯಣ ಮಾಡಿ ಬಂದು ಕರೆಯದೆ ಇರುವುದು ಮುಖ್ಯ ವಿಚಾರವಾಗುವುದಿಲ್ಲ; ಆದರೆ ನಾಗಮ್ಮಳಿಗೆ ಸಂಬಂಧಿಕರು ಬಂದು ಕರೆಯದೆ ಮದುವೆ ಪತ್ರ ಕಳಿಸಿರುವುದು ಅಸಮಾಧಾನಕ್ಕೆ ಕಾರಣವಾಗುತ್ತದೆ. ಇದು ಹಳೆಯ ಮತ್ತು ಹೊಸ ತಲೆಮಾರುಗಳ ನಡುವಿನ ಆಲೋಚನ ಕ್ರಮದಲ್ಲಿನ ವ್ಯತ್ಯಾಸಗಳನ್ನು ಸಹ ಸೂಕ್ಷ್ಮವಾಗಿ ದಾಖಲಿಸುತ್ತದೆ. ಇಂದಿಗೂ ಕೆಲವು ಹಳ್ಳಿಗಳಲ್ಲಿ ಮದುವೆಗೆಂದು ಮನೆಗೆ ಬಂದು ಕರೆಯದೆ ಹೋದಾಗ ಮದುವೆಗೆ ಹೋಗುವುದಿಲ್ಲ. ಮದುವೆಯ ಸಂದರ್ಭದಲ್ಲಿ ಬಂಧುಗಳನ್ನು ಸ್ವತಃ ಹೋಗಿ ಕರೆಯುವುದು ಹೆಚ್ಚಿನ ಪ್ರೀತಿ, ಗೌರವಗಳ ಸಂಕೇತವೆಂದು ಭಾವಿಸಲಾಗುತ್ತದೆ. ಇಲ್ಲಿ ಸಾಮಾಜಿಕ ನಂಬಿಕೆ ಮತ್ತು ಆಚರಣೆಗಳ ಜತೆ ಪಯಣ ಅಥವಾ ಚಲನೆಯು ಸಂಬಂಧ ಪಡೆದುಕೊಂಡಿದೆ.

ಪ್ರವಾಸ ವ್ಯಕ್ತಿಯಲ್ಲಿ ಹೊಸತನವನ್ನು ತರುತ್ತದೆ. ಹಾಗಾಗಿಯೇ ಮದುವೆಯಾದ ಹೊಸತರಲ್ಲಿ ದಂಪತಿಗಳನ್ನು ಪ್ರವಾಸಕ್ಕೆ ಕಳುಹಿಸುತ್ತಾರೆ. ಹೀಗೆ ಹೋಗುವ ಪದ್ಧತಿ ಅನೇಕ ಸಮುದಾಯಗಳಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ದಾಂಪತ್ಯ ಜೀವನದ ಮೊದಲ ಘಟ್ಟದಲ್ಲಿ ಹೊಸ ವಿಭಿನ್ನ ಹಿನ್ನೆಲೆಗಳಿಂದ ಬಂದಿರುವ ಗಂಡುಹೆಣ್ಣು ಪರಸ್ಪರ ಭಾವನೆ ಆಲೋಚನೆ ಹಂಚಿಕೊಳ್ಳುವುದು ಸಾಧ್ಯವಾಗಲಿ ಎಂಬುದು ಕೂಡ ಈ ಪದ್ಧತಿಯ ಹಿಂದೆ ಕೆಲಸ ಮಾಡಿದೆ. ಇದು ದಾಂಪತ್ಯದ ಪರಿಕಲ್ಪನೆಯಲ್ಲಿ ಪಯಣಕ್ಕಿರುವ ಮಹತ್ವವನ್ನು ತಿಳಿಸುತ್ತದೆ. ಈ ಹಿನ್ನೆಲೆಯಲ್ಲಿ 'ಕಾನೂರು ಹೆಗ್ಗಡಿತಿ'ಯಲ್ಲಿ ರಾಮಯ್ಯ ಸೀತೆಯರು ನವವಿವಾಹಿತರಾಗಿ ಮಾಡುವ ಪಯಣ ಅಥವಾ ಯಾತ್ರೆಯನ್ನು ಗಮನಿಸಬಹುದು. ಕಾದಂಬರಿಯು "ರಾಮಯ್ಯನೂ ಹೋಗಿ ಬಂದ ಮೇಲೆ ಹಸನ್ಮುಖಿಯಾಗಿಯೂ ಆರೋಗ್ಯಶಾಲಿಯಾಗಿಯೂ ಕರ್ತೃತ್ವಶಾಲಿಯಾಗಿಯೂ ಆಗಿದ್ದನು" ಎಂದು ನಿರೂಪಿಸುತ್ತದೆ.(ಪು.೫೦೫) ರಾಮಯ್ಯ ಮತ್ತು ಸೀತೆ ಯಾತ್ರೆ ಹೋಗಿ ಬಂದಾಗ ಅವರಲ್ಲಿ ಅನೇಕ ರೀತಿಯಲ್ಲಿ ಬದಲಾವಣೆ ಕಾಣುತ್ತದೆ. ವ್ಯಕ್ತಿ ಮಾನಸಿಕವಾಗಿ ಅಥವಾ ದೈಹಿಕವಾಗಿ ಅಸ್ವಸ್ಥನಾಗಿದ್ದಾಗ ಸ್ಥಳ ಬದಲಾಯಿಸುವ ನಂಬಿಕೆ ಜನಪದರಲ್ಲಿದೆ. ಕೆಲವು ಕಾಲ ಆ ವ್ಯಕ್ತಿಯನ್ನು ಹವೆ ಬದಲಿಸಿ, ಬೇರೆ ಸ್ಥಳಗಳಿಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡುವ ಪದ್ಧತಿಯೂ ಇದೆ.

ಕಾದಂಬರಿಯಲ್ಲಿ ಹೂವಯ್ಯನ ಪ್ರೇಯಸಿಯನ್ನು ಮದುವೆಯಾಗಿ ವಿಶ್ವಾಸಘಾತ ಮಾಡಿದ ಖಿನ್ನತೆಯಲ್ಲಿ ನರಳುವ ರಾಮಯ್ಯನು ಈ ಯಾತ್ರೆಯ ನಂತರ ದೈಹಿಕವಾಗಿ ಮತ್ತು ಮಾನಸಿಕವಾಗಿ ಎರಡು ನೆಲೆಗಳಲ್ಲೂ ಪರಿವರ್ತನೆ ಪಡೆಯುತ್ತಾನೆ.

ಪಯಣ ಎನ್ನುವುದನ್ನು ಸಮಾಜದ ವಿವಿಧ ಸಮುದಾಯಗಳಲ್ಲಿ ನಡೆಯುವ ಅಂತರ್ ಚಲನೆ ಎಂದು ತಿಳಿಯುವುದಾದರೆ, ಕುವೆಂಪು ಚಿತ್ರಿಸುವ ಮಲೆನಾಡಿನ ಸಮಾಜದಲ್ಲಿ ಇಂತಹ ಅಂತರ್‌ಚಲನೆಗಳು ಸ್ಥಗಿತವಾಗಿರುವ ಸನ್ನಿವೇಶವಿದೆ. ಅಗ್ರಹಾರದೊಳಗೆ ಶೂದ್ರರೂ, ದಲಿತ ಕೇರಿಯಲ್ಲಿ ಗೌಡರು ಸರಾಗವಾಗಿ ಚಲನೆ ಮಾಡದಂತಹ ನಿರ್ಬಂಧಗಳಿವೆ. ಆದರೆ ಈ ಸ್ಥಗಿತತೆಗಳು ಭಗ್ನಗೊಳ್ಳುವ ಸನ್ನಿವೇಶಗಳು ಸಹ ಇವೆ. 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ಅಸ್ಪೃಶ್ಯತೆಯ ಚಲನೆಯ ನಿರ್ಬಂಧವನ್ನು ತಿಮ್ಮಪ್ಪ ಹೆಗಡೆಯು ತನ್ನ ಕಾಮ ಮತ್ತು ಜಮೀನ್ದಾರಿ ದರ್ಪದ ಮೂಲಕ ಮುರಿಯುವ ಪ್ರಸಂಗಗಳಿವೆ. "ಅಸ್ಪೃಶ್ಯರಾಗಿದ್ದ ಹೊಲೆಯರ ಕೇರಿಯೊಳಗೆ ಒಡೆಯರ ಮನೆಯವರಾರೂ ಕಾಲಿಡುವುದಿಲ್ಲ ಎಂಬುದು ಹೊಲೆಯರೆಲ್ಲರ ದೃಢನಂಬುಗೆಯಾಗಿದ್ದರೂ ತಿಮ್ಮಪ್ಪ ಹೆಗಡೆಯ ವಿಚಾರದಲ್ಲಿ ಯಾವ ಜಾತಿ ಮತ ಸಂಪ್ರದಾಯದ ಕಟ್ಟೂ ನಡೆಯುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿದ್ದ ವಿಷಯವಾಗಿತ್ತು" ಎಂದು ಕಾದಂಬರಿ ನಿರೂಪಿಸುತ್ತದೆ.(ಪು.೯೩) ತಿಮ್ಮಪ್ಪ ಹೆಗಡೆ ಮಾತ್ರ ಯಾವುದೇ ಮಡಿ-ಮೈಲಿಗೆಯಿಲ್ಲದೆ ಕೆಳಜಾತಿಯವರ ಮನೆಗಳಿಗೆ ಪ್ರವೇಶಿಸುವುದು ಸ್ವಾರ್ಥಕ್ಕಾಗಿಯೇ ಹೊರತು ಜಾತ್ಯತೀತ ಪ್ರಜ್ಞೆಯಿಂದಲ್ಲ. ಆದರೆ ಇದಕ್ಕೆ ವಿರುದ್ಧವಾದ ನಂಬಿಕೆಗಳೂ ಮಲೆನಾಡಿನ ಸಮಾಜದಲ್ಲಿವೆ. ಮೇಲುಜಾತಿಯವರು ತಮ್ಮ ಮನೆಗಳಿಗೆ ಬರುವುದು ಅಪಶಕುನವೆನ್ನುವ ಮೌಢ್ಯ ಕುಳುವಾಡಿ ಸಣ್ಣನ ಮೂಲಕ ಪ್ರಕಟವಾಗುತ್ತದೆ. ಈಗಲೂ ಅನೇಕ ಬುಡಕಟ್ಟಿನ ಜನರಲ್ಲಿ ಬೇರೆ ಜಾತಿಯವರ ಪ್ರವೇಶದ ಬಗ್ಗೆ ತಾರತಮ್ಯವಾದಿ ನಂಬಿಕೆಗಳಿವೆ. ಕಾಡುಗೊಲ್ಲರ ಹಟ್ಟಿಗಳಲ್ಲಿ ಕೆಳವರ್ಗಕ್ಕೆ ಸೇರಿದ ಹೊಲೆಯ, ಮಾದಿಗ ಮುಂತಾದ ಜನರ ಪ್ರವೇಶವನ್ನು ಈಗಲೂ ನಿರ್ಬಂಧಿಸಲಾಗಿದೆ. ಭೂತದ ಬನದ ಪ್ರವೇಶದ ವಿಷಯದಲ್ಲಿ, ಮುಟ್ಟಾಗಿರುವ ಸ್ತ್ರೀಯರಿಗೆ ಹಾಗೂ ಅಸ್ಪೃಶ್ಯರಿಗೆ ಪ್ರವೇಶ ಮಾಡದಂತೆ ದೇವರ ಹೆಸರಲ್ಲಿ ಚಲನೆಯನ್ನು ನಿಯಂತ್ರಿಸಿರುವ ಸನ್ನಿವೇಶವು ಕಾದಂಬರಿಯಲ್ಲಿ ಬರುತ್ತದೆ. ಈ ಬಗೆಯ ಅಂತರ್‌ಚಲನೆಗಳ ನಿಷೇಧವಿರುವ ಸಮಾಜದಲ್ಲಿ ಅಂತರ್ ಚಲನೆ ಮಾಡುವ ನಾಯಕರನ್ನು ಕಾದಂಬರಿ ಕಾಣಿಸುತ್ತದೆ.

ಜಾತಿಗಳು ಮಾತ್ರ ಮನುಷ್ಯರ ಅಂತರ್‌ಚಲನೆಯನ್ನು ನಿಯಂತ್ರಿಸಿಲ್ಲ. ಜಾತಿಗೆ ಅಂಟಿಕೊಂಡಿರುವ ಕಸುಬುಗಳು ಸಹ ಈ ಕೆಲಸ ಮಾಡಿವೆ. ಮನುಷ್ಯರು ತಮ್ಮ ಜೀವನ ನಿರ್ವಹಣೆಗಾಗಿ ಕುಲಕಸುಬುಗಳನ್ನು ಆರಂಭಿಸಿದರು. ಈ ಕುಲಕಸುಬುಗಳೇ ಮುಂದೆ ಜಾತಿಯಾಧಾರಿತವಾಗಿ ಬೆಳೆದವು. ಕುಂಬಾರ, ಬಡಗಿ, ಚಮ್ಮಾರ ಮುಂತಾದವರ ಮಕ್ಕಳು ತಂದೆ ಮಾಡುತ್ತಿದ್ದ ಕಸುಬನ್ನೇ ಮುಂದುವರೆಸಿಕೊಂಡು ಹೋಗಬೇಕೆನ್ನುವ ಸಾಮಾಜಿಕ ಮನೋಭಾವ ನಿರ್ಮಾಣವಾಯಿತು. ಇಂತಹ ಮನೋಭಾವ ದಟ್ಟವಾಗಿರುವ ಸಮಾಜ ಜೀವನವನ್ನು ಕುವೆಂಪು ಕಾದಂಬರಿಗಳು

ಕಾಣಿಸುತ್ತವೆ: "ವೇದ ಕಲಿಯುವುದು ಶೂದ್ರರಿಗೆ ಹೇಗೆ ನಿಷಿದ್ಧವೂ ಹಾಗೆಯೇ ಸ್ವಂತ ಜಮೀನು ಮಾಡುವುದು ಹಳೆಪೈಕದವರಿಗೆ ನಿಷಿದ್ಧ ಎಂದು ಒಕ್ಕಲಿಗರಾಗಿದ್ದ ಹೆಗ್ಗಡೆ ಗೌಡ ನಾಯಕರುಗಳೆಲ್ಲ ಸೇರಿ ತೀರ್ಮಾನ ಮಾಡಿದ್ದರು" ಎಂದು ಕಾದಂಬರಿ ನಿರೂಪಣೆ ವ್ಯಂಗ್ಯ ಮಾಡುತ್ತದೆ(ಪು.೪). ಆದರೆ ದೂರದ ಊರಿಗೆ ಹೋಗಿ ಆಧುನಿಕ ಶಿಕ್ಷಣ ಪಡೆದು ಹೊಸ ಬಗೆಯ ಬದುಕನ್ನು ಕಂಡ ಪ್ರಜ್ಞಾವಂತರು ಇಂತಹ ಸಮಾಜದಲ್ಲಿ ಮಧ್ಯಪ್ರವೇಶ ಮಾಡುತ್ತಾರೆ. ಆಗ ಅವರ ಚಿಂತನೆ ಮತ್ತು ಕ್ರಿಯೆಗಳಿಂದ ಪರಿಸರದ ಜನರ ಆಲೋಚನೆಗಳಲ್ಲೂ ಬದಲಾವಣೆ ಕಾಣಿಸಿಕೊಳ್ಳತೊಡಗುತ್ತದೆ. ಕಾದಂಬರಿ ಹೂವಯ್ಯ, ರಾಮಯ್ಯರ ಮೂಲಕ ನಗರಪ್ರಜ್ಞೆಯು ಹಳ್ಳಿಗಾಡಿನಲ್ಲಿದ್ದ ಸಂಪ್ರದಾಯವನ್ನು ಪ್ರಶ್ನಿಸುವ ಮತ್ತು ಬದಲಾವಣೆ ಪ್ರೇರಿಸುವ ಸನ್ನಿವೇಶವನ್ನು ಚಿತ್ರಿಸುತ್ತದೆ. ಇದು ಸ್ಥಳೀಯ ಪರಿಸರವು ಹೊರಗಿನ ಒತ್ತಡದಿಂದ ತನ್ನೊಳಗೆ ಪಡೆದುಕೊಳ್ಳುವ ರೂಪಾಂತರದ ಚಲನೆಯಾಗಿದೆ. ಕಾದಂಬರಿ ಇಂತಹ ಚಲನೆಗಳ ಪರವಾಗಿದೆ. ಹೀಗಾಗಿಯೇ ಕೊನೆಯ ಅಧ್ಯಾಯವು ಹತ್ತುವರ್ಷಗಳ ನಂತರ ಎಂಬ ಶೀರ್ಷಿಕೆಯಲ್ಲಿದ್ದು, ಕಾನೂರಿನ ಬದುಕಿನಲ್ಲಿ ನಡೆದಿರುವ ಪಲ್ಲಟಗಳನ್ನು ಪಟ್ಟಿಮಾಡುತ್ತದೆ. ಇದು ಒಂದು ಪ್ರದೇಶ ತನ್ನೊಳಗೆ ಮಾಡಿರುವ ಪಯಣದ ಸಂಕೇತವಾಗಿದೆ.

ಕುವೆಂಪು ಕಾದಂಬರಿಗಳು ಇಡೀ ಪ್ರದೇಶದ ಬದುಕಿನಲ್ಲಿ ನಡೆಯುವ ಪಲ್ಲಟಗಳ ಜತೆ ವ್ಯಕ್ತಿಯ ಬದುಕಿನಲ್ಲಿ ನಡೆಯುವ ಪಲ್ಲಟಗಳನ್ನು ಒಟ್ಟೊಟ್ಟಿಗೆ ಚಿತ್ರಿಸುತ್ತವೆ. 'ಕಾನೂರು ಹೆಗ್ಗಡಿತಿ'ಯಲ್ಲಿ ಸುಬ್ಬಮ್ಮ ತವರು ಮನೆಗೆ ಪಯಣ ಮಾಡಿದ ನಂತರ ಅಲ್ಲಿನ ಸಮಾಜ ಅವಳನ್ನು ನೋಡುವ ಮತ್ತು ಅವಳ ಮನಸ್ಥಿತಿಗೆ ಸಂಬಂಧಿಸಿದ ವಿವರಗಳು ಸ್ವಾರಸ್ಯಕರವಾಗಿವೆ: "ಇನ್ನೂ ನಡುಹಗಲಾಗಿರದಿದ್ದರೂ ಬಿಸಿಲು ಪ್ರಖರವಾಗಿಯೆ ಇತ್ತು. ಗದ್ದೆಯ ಕೋಗಿನಿಂದ ಮನೆಯ ಕಡೆಗೆ ಮರಗಳ ನಡುನಡುವೆ ತೂರಿಹೋಗುವ ಕಾಲ್ದಾರಿಯಲ್ಲಿ ತುಂಬು ಯೌವ್ವನದ ಗ್ರಾಮ್ಯ ತರುಣಿಯೊಬ್ಬಳು ನೆಲ್ಲುಹುಲ್ಲಿನ ಒಂದು ದೊಡ್ಡ ಹೊರೆಯನ್ನು ಹೊತ್ತು ಸ್ವಲ್ಪ ನಿಧಾನವಾಗಿಯೇ ಎಂಬಂತೆ ಸಾಗುತ್ತಿದ್ದಳು. ಆಕೆ ಮೆಲ್ಲಗೆ ಹೋಗುತ್ತಿದ್ದುದು ಹೊರೆಯ ಭಾರದಿಂದಾಗಿರಲಿಲ್ಲ; ಆಯಾಸದಿಂದಾಗಿರಲಿಲ್ಲ; ಚಿಂತೆಯಿಂದಾಗಿತ್ತು."(ಪು.೫೨೭) ಸುಬ್ಬಮ್ಮನ ನಡಿಗೆಯಲ್ಲಿರುವ ಈ ನಿಧಾನ ಚಲನೆಗೆ ಕಾರಣ, ಅವಳ ದೈಹಿಕ ಅವಸ್ಥೆಯಲ್ಲ. ಗಂಡನ ಮನೆಬಿಟ್ಟು ಬಂದ ಹೆಣ್ಣಿನ ಪರಿಸ್ಥಿತಿ. ದಾರಿಯಲ್ಲಿ ಅವಳು ಮಾಡುತ್ತಿರುವ ನಡಿಗೆಗೂ ಮತ್ತು ಗಂಡಬಿಟ್ಟು ಬಂದ ಯೌವ್ವನದ ಹೆಣ್ಣನ್ನು ಸಮಾಜ ನೋಡುವ ಬಗೆಗೂ ಇಲ್ಲಿ ಸಂಬಂಧವಿದೆ. "ಗಂಡನನ್ನು ಬಿಟ್ಟುಬರುವ ತರುಣಿ ಬಹುಬೇಗ ನಿಂದೆಗೀಡಾಗುತ್ತಾಳೆ. ಸುಬ್ಬಮ್ಮನ ವಿಚಾರವಾಗಿ ಅಲ್ಲಿ ಇಲ್ಲಿ, ಅವರು ಇವರು, ಗುಸುಗುಸು ಕೆಟ್ಟದನ್ನು ಮಾತಾಡಿಕೊಳ್ಳ ತೊಡಗಿದರು. ಕೆಲವರಂತೂ ಸುಬ್ಬಮ್ಮ ಕಾನೂರಿನಲ್ಲಿ ಕೆಟ್ಟ ಕೆಲಸ ಮಾಡಿದುದರಿಂದಲೇ ಗೌಡರು ಅವಳನ್ನು ಓಡಿಸಿಬಿಟ್ಟರೆಂದೂ, ಇಲ್ಲದಿದ್ದರೆ ಅಂತಹ ದೊಡ್ಡ ಮನುಷ್ಯರು ಕೈಹಿಡಿದ ಹೆಂಡತಿಯನ್ನು ಕೈಬಿಟ್ಟು, ಅವಮಾನಕ್ಕೆ ಗುರಿಯಾಗುತ್ತಿದ್ದರೇ ಎಂದೂ, ಇಲ್ಲದ ಸಲ್ಲದ ದುರೂಹೆಗಳನ್ನು ಸಿಕ್ಕಿದ ಕಡೆ ಬಿತ್ತಿಬಿಟ್ಟರು"(ಪು.೫೩೦). ಗಂಡನ ಮನೆಯಿಂದ

ತವರು ಮನೆಗೆ ಮದುವೆಯಾದ ಹೆಣ್ಣು ಬರುವುದಕ್ಕೆ ಸಾಂಪ್ರದಾಯಿಕ ಪುರುಷ ಸಮಾಜ ಹಚ್ಚುವ ಅರ್ಥಗಳಿವು. ಪುರುಷವಾದಿ ಚಿಂತನೆಯ ಪ್ರಕಾರ, ಹೆಣ್ಣು ತವರು ಮನೆ ಸೇರಿದರೆ ಹೆಣ್ಣೆ ಕಾರಣವೆಂದು ಗ್ರಹಿಸುತ್ತದೆ. ಸುಬ್ಬಮ್ಮ ತವರಿಗೆ ಪಯಣ ಮಾಡಿ ಬಂದಿರಲು ಚಂದ್ರಯ್ಯಗೌಡರ ಕೌರ್ಯವೇ ಕಾರಣವಾಗಿದೆ. ಆದರೂ ಅವಳ ಈ ಪ್ರಸ್ಥಾನವನ್ನು ಸಮಾಜ ಸ್ತ್ರೀ ವಿರೋಧಿಯಾಗಿಯೇ ವ್ಯಾಖ್ಯಾನಿಸುತ್ತದೆ. ತನ್ನ ಬಗ್ಗೆ ಸಮಾಜ ಮಾಡುತ್ತಿರುವ ಈ ಆಪಾದನೆಯೇ ಸುಬ್ಬಮ್ಮನ ನಡಿಗೆಯ ನಿಧಾನಗತಿಗೆ ಕಾರಣವಾಗಿದೆ. ಮಾನಸಿಕ ಅವಸ್ಥೆಗೂ ದೈಹಿಕ ಚಲನೆಗೂ ಇರುವ ಆಂತರಿಕ ಸಂಬಂಧವನ್ನು ಕಾದಂಬರಿ ಸುಬ್ಬಮ್ಮನ ನಡಿಗೆಯ ಚಿತ್ರದಲ್ಲಿ ಸೂಚಿಸುತ್ತದೆ. ಅವಳು ಹೊತ್ತಿರುವ ಹುಲ್ಲುಹೊರೆಯು ಅವಳ ಮೇಲಿರುವ ಆಪಾದನೆಯ ಭಾರವೂ ಆಗಿದೆ. ಹುಲ್ಲು ತರುವುದು ಎಂದರೆ ಕನ್ನಡದಲ್ಲಿ ಅಪಕೀರ್ತಿಯನ್ನು ತರುವುದು ಎಂಬರ್ಥವೂ ಇರುವುದನ್ನು ಇಲ್ಲಿ ನೆನೆಯಬಹುದು.

೩.೫. ಪಯಣ: ವೈಚಾರಿಕತೆ

ಪಯಣ ಮಾಡುವುದರಿಂದ ವ್ಯಕ್ತಿಯಲ್ಲಿ ಆಲೋಚನ ಕ್ರಮದಲ್ಲಿ ಹಲವು ರೀತಿಯ ಬದಲಾವಣೆ ಆಗುತ್ತವೆ. ವ್ಯಕ್ತಿಯ ದೈಹಿಕ ಚಲನೆ ವಿಚಾರ ಮಾಡುವಿಕೆಯಲ್ಲಿ ಪಲ್ಲಟ ತರುತ್ತದೆ. ಈ ವಿಚಾರವು ಹೊಸ ಚಿಂತನೆ ಮತ್ತು ಹೊಸ ಕ್ರಿಯೆಗಳಿಗೆ ದಾರಿ ಮಾಡಿಕೊಡುತ್ತದೆ. ಹೀಗೆ ಪಯಣವು ದೈಹಿಕವಾಗಿದ್ದರೂ ಅದು ಮೂಲತಃ ಮಾನಸಿಕವಾಗಿ ನಡೆಯುವ ಕ್ರಿಯೆಯಾಗಿದೆ. ಕುವೆಂಪು ಕಾದಂಬರಿಗಳು ಪಾತ್ರಗಳ ದೈಹಿಕ ಚಲನೆಯ ಭಾಗವಾಗಿ ಅವರ ಮನೋಭೂಮಿಕೆಯಲ್ಲಿ ಸಂಭವಿಸುವ ಬದಲಾವಣೆಗಳನ್ನು ಕೆಲವು ಸಂಕೇತಗಳ ಮೂಲಕ ಚಿತ್ರಿಸುತ್ತವೆ.

ಲೇಖಕ ಶ್ರೀಕೃಷ್ಣ ಆಲನಹಳ್ಳಿ ಅವರು 'ಮದುಮಗಳು' ಕಾದಂಬರಿಯ ಬಗ್ಗೆ ಚರ್ಚಿಸುತ್ತ ಮಾಡುವ ಹೇಳಿಕೆಗಳು ಪಾತ್ರಗಳ ವೈಚಾರಿಕತೆಯ ಬಗ್ಗೆ ಕೆಲವು ಸುಳಿವನ್ನು ಕೊಡುವಂತಿವೆ. "ಮಾನವ ನಾಗರಿಕನಾದಂತೆಲ್ಲ ನಿಸರ್ಗದಿಂದ ದೂರ ಸರಿಯತೊಡಗುತ್ತಾನೆ. ನಿಸರ್ಗದಿಂದ ದೂರ ಸರಿಯುವುದೆಂದರೆ ಸಹಜವಾದ ಬದುಕಿನಿಂದ ದೂರ ಸರಿಯುವುದು. ಯಾವುದೋ ಉದ್ದೇಶಕ್ಕಾಗಿ ರೂಪಿಸಿಕೊಂಡ ಕೃತಕ ಮೌಲ್ಯಗಳು ಅವನು ಹೀಗೆ ದೂರ ಸರಿದಂತೆಲ್ಲ ಜಟಿಲವಾಗಿ ಅವನ ಕ್ರಿಯಾತ್ಮಕ ತುಡಿತವನ್ನೆ ತೊಡೆದು ಹಾಕುತ್ತವೆ."[೧೦] ಈ ದೃಷ್ಟಿಯಿಂದ ಕುವೆಂಪು 'ಕಾನೂರು ಹೆಗ್ಗಡಿತಿ' ಕೃತಿಯಲ್ಲಿ ಸೃಷ್ಟಿಸಿರುವ ಹೂವಯ್ಯನು ನಗರಕ್ಕೆ ಪಯಣಿಸಿ ಆಧುನಿಕ ಶಿಕ್ಷಣ ಪಡೆದು ಹೊಸ ಜ್ಞಾನವನ್ನು ಸಂಪಾದಿಸಿದ್ದಾನೆ. ನಾಗರಿಕನಾಗಿದ್ದಾನೆ. ಅವನಲ್ಲಿ ಒಳ್ಳೆಯ ಜೀವನ ಮೌಲ್ಯಗಳು ಇವೆ. ಆದರೆ ಅವು ನಿಸರ್ಗ ಬದುಕಿನಿಂದ ದೂರವಾಗಿರುವ ಮೈಸೂರಿಗೆ ಹೋಗಿ ಪಡೆದಿರು ವಂತಹವು. ಹೀಗಾಗಿ ಅವನ ವೈಚಾರಿಕತೆಯು ನಿಸರ್ಗದ ಭಾಗವಾಗಿಯೇ ಬದುಕುವ ಮಲೆನಾಡಿನ ಇತರ ಜನರಿಗೆ ಕೂಡಲೇ ಅರ್ಥವಾಗುವುದಿಲ್ಲ. ಇದು ವೈಚಾರಿಕ ಪ್ರಜ್ಞೆಯ ಮಿತಿಯನ್ನು ಸೂಚಿಸುತ್ತಿದೆ.

ಯಾವುದೇ ವೈಚಾರಿಕತೆಯು ಆಯಾ ಬದುಕಿನ ಕ್ರಮದ ಗರ್ಭದಿಂದಲೇ ಹುಟ್ಟುವುದಕ್ಕೂ ಹೊರಗಿನಿಂದ ಪಯಣಿಸಿ ಆಮದಾಗಿ ಬಂದು ಹೇರಲ್ಪಡುವುದಕ್ಕೂ ಇರುವ ವ್ಯತ್ಯಾಸವನ್ನೂ ಹೂವಯ್ಯ ಮತ್ತು ಇತರ ಪಾತ್ರಗಳ ನಡುವಣ ಸಂಬಂಧದ ಬಿರುಕಿನಲ್ಲಿ ಗಮನಿಸಬಹುದು.

ಹೂವಯ್ಯ ಮೈಸೂರಿನಿಂದ ಪಡೆದು ಬಂದ ಹೊಸಜ್ಞಾನವನ್ನು ಸೀತೆಯೊಂದಿಗೆ ಹಂಚಿಕೊಳ್ಳುತ್ತಾನೆ. ಆಗ ಹೂವಯ್ಯನಂತೆ ನಗರಕ್ಕೆ ಪಯಣಿಸದಿದ್ದರೂ, ತನ್ನ ಕಾಡಸೀಮೆಯ ಮನೆಯಲ್ಲೇ ಇರುವ ಸೀತೆಯಲ್ಲಿ ಬದಲಾವಣೆ ತರುತ್ತದೆ. ಅದನ್ನು ಕಾದಂಬರಿ ಪಯಣದ ಪರಿಭಾಷೆಯಲ್ಲಿ ವರ್ಣಿಸುತ್ತದೆ: "ಸೀತೆಗೆ ಕಣ್ಣರಳಿತು. ಮನೋಹರವಾದ ನೂತನ ಪ್ರಪಂಚವನ್ನು ಸಂದರ್ಶಿಸಲು ಪಯಣ ಬೆಳೆಸುವ ಯಾತ್ರಿಕನಿಗಾಗುವ ಉಲ್ಲಾಸದ ಅನುಭವವಾಯಿತು. ಆ ಜಗತ್ತಿನ ವಿಷಯದಲ್ಲಿ ಆಕೆಗಿದ್ದ ಅನಿಶ್ಚಯತೆ ಅಪರಿಚಿತಗಳೇ ಕುತೂಹಲವನ್ನು ಮತ್ತೂ ಉಜ್ವಲಗೈದವು"(ಪು.೧೬೦). ಹೂವಯ್ಯನ ಮೂಲಕ ವೈಚಾರಿಕವಾದ ವಿಷಯಗಳನ್ನು ತಿಳಿದಾಗ ಸೀತೆಯ ಕಣ್ಣುಗಳಲ್ಲಿ ಜ್ಞಾನಪ್ರೇರಿತ ಚಲನೆಗಳು ಗೋಚರವಾಗುತ್ತವೆ. ಗೊತ್ತಿಲ್ಲದ ವಿಷಯಗಳನ್ನು ಅರಿತಾಗ ವ್ಯಕ್ತಿಯ ಮನಸ್ಸು ಹೊಸ ಪಯಣಕ್ಕೆ ಸಿದ್ಧವಾಗುತ್ತದೆ. ಸೀತೆಯ ಮನಃಸ್ಥಿತಿಯನ್ನು ಕೃತಿ ನೂತನ ಪ್ರಪಂಚವನ್ನು ಸಂದರ್ಶಿಸಲು ಪಯಣ ಬೆಳೆಸುವ ಯಾತ್ರಿಕನ ರೂಪಕದಲ್ಲಿ ಚಿತ್ರಿಸುತ್ತದೆ. ಈ ಬಗೆಯ ಮನೋಪಯಣವನ್ನು ಹೂವಯ್ಯನ ಸಹವಾಸಕ್ಕೆ ಸಿಕ್ಕಿ ರಾಮಯ್ಯ ಸೀತೆಮನೆ ಸಿಂಗಪ್ಪಯ್ಯ ಮುಂತಾದವರು ಸಹ ಮಾಡುತ್ತಾರೆ. ಇಲ್ಲಿ ಮನೋಪಯಣ ಎಂದರೆ ಅವರ ವೈಚಾರಿಕ ಮನೋಭಾವ ಬದಲಾದ ಬಗೆಯೇ ಆಗಿದೆ. ಬರಗೂರು ರಾಮಚಂದ್ರಪ್ಪನವರ 'ಶಬರಿ' ಕಾದಂಬರಿಯಲ್ಲೂ ಸೂರ್ಯನ ಚಿಂತನೆಗಳು ಆ ಬುಡಕಟ್ಟಿನ ಜನರನ್ನು ಹೊಸ ಪ್ರಪಂಚವನ್ನು ಸಂದರ್ಶಿಸಲು ಪಯಣ ಬೆಳೆಸುವ ಯಾತ್ರಿಕರನ್ನಾಗಿ ಮಾಡುತ್ತದೆ ಎಂಬುದನ್ನು ನೆನೆಯಬಹುದಾಗಿದೆ. ಅಂದರೆ ಒಬ್ಬ ಪಯಣ ಮಾಡಿ ಪಡೆದುಕೊಂಡ ತಿಳುವಳಿಕೆ ಅನೇಕರ ವೈಚಾರಿಕ ಪಯಣಗಳಿಗೆ ಕಾರಣವಾಗುತ್ತದೆ ಎಂಬುದನ್ನು ಕನ್ನಡ ಕಾದಂಬರಿಗಳು ಉದ್ದಕ್ಕೂ ಮಂಡಿಸುತ್ತ ಬಂದಿವೆ. ಗುಲ್ವಾಡಿಯವರ 'ಇಂದಿರಾಬಾಯಿ'ಯಲ್ಲಿ ಭಾಸ್ಕರರಾಯನು ಇಂಗ್ಲೆಂಡಿಗೆ ಮಾಡುವ ಪಯಣವು ದೈಹಿಕವಾದುದು ಮಾತ್ರವಲ್ಲ. ವೈಚಾರಿಕವಾದುದು ಕೂಡ. ಭಾಸ್ಕರ ಎಂಬ ಹೆಸರಲ್ಲಿ ಜ್ಞಾನದ ಅಥವಾ ಬೆಳಕಿನ ಸಂಕೇತವಾದ ಸೂರ್ಯನ ಸಂಕೇತವಿದೆ ಎಂಬುದು ಗಮನಾರ್ಹ. ಅವನು ಮರಳಿ ಊರಿಗೆ ಬಂದು, ಅವನಂತೆ ಹಡಗಿನ ಪಯಣ ಮಾಡದ ಅನೇಕರನ್ನು ಅವನು ಪಡೆದ ತಿಳಿವಿನಲ್ಲಿ ಯಾತ್ರಿಕರಾಗಿಸುತ್ತಾನೆ. ಆ ಯಾತ್ರಿಕರಲ್ಲಿ ಅವನ ಪ್ರೇಮಿಸಿದ ಇಂದಿರೆಯೂ ಸೇರಿದ್ದಾಳೆ. 'ಕಾನೂರು ಹೆಗ್ಗಡಿತಿ'ಯಲ್ಲಿ ಹೂವಯ್ಯ-ಸೀತೆಯರಂತೆ ಅಲ್ಲಿ ಭಾಸ್ಕರ-ಇಂದಿರೆಯಿದ್ದಾರೆ.

ಆದರೆ ಹೂವಯ್ಯ ಮತ್ತು ರಾಮಯ್ಯ ತಮ್ಮ ಗ್ರಾಮೀಣ ಪರಿಸರದಲ್ಲಿ ತಮ್ಮ ವೈಚಾರಿಕ ಚಿಂತನೆಯ ಮೂಲಕ ಮಾಡುವ ಈ ಪಲ್ಲಟಗಳು ಎಲ್ಲವೂ ಯಶಸ್ವಿ ಆಗುವುದಿಲ್ಲ. ಅವರು

ಬಗನಿ ಕಟ್ಟಿ ಕಳ್ಳು ಕುಡಿಯುವ ವ್ಯವಸ್ಥೆಯನ್ನು ನಿಲ್ಲಿಸಲು ಯತ್ನಿಸುತ್ತಾರೆ: "ಸರ್ಕಾರ ಮಾಡಿದ್ದೆಲ್ಲ ಸತ್ಕಾರ್ಯವೇನು? ಅದಕ್ಕೆ ಬೇಕಾಗಿರುವುದೂ ದುಡ್ಡೇ! ಇಲ್ಲಿ ಇವರೆಲ್ಲ ಕುಡಿದು ಆರೋಗ್ಯ ಕೆಟ್ಟು ಸತ್ತರೇನಂತೆ? ಅಲ್ಲಿ ಪಟ್ಟಣ ಸಿಂಗಾರ ಮಾಡ್ತಾರೆ!"(ಪು.೨೨೦) ಎಂದು ಗ್ರಾಮೀಣ ಜನ ಕುಡಿತ ಮಾಡುವ ಮೂಲಕ ಸರ್ಕಾರಕ್ಕೆ ತೆರಿಗೆ ನೀಡುವ ವ್ಯವಸ್ಥೆಯನ್ನು ವಿರೋಧಿಸುತ್ತಾರೆ. ಈ ತೆರಿಗೆ ವ್ಯವಸ್ಥೆಯ ಭಾಗವಾಗಿ ಸರ್ಕಾರದ ಪ್ರತಿನಿಧಿಯಾದ ಮಾರ್ಕನು ಕಾನೂರಿನೆಡೆಗೆ ಪಯಣ ಬೆಳೆಸಿ ಬರುವ ಚಿತ್ರಗಳನ್ನು ಕಾದಂಬರಿ ನೀಡುತ್ತದೆ. ಆದರೆ ಕುಟುಂಬಗಳು ಕಳ್ಳು ಕುಡಿದು ಆರ್ಥಿಕ ದುಸ್ಥಿತಿಗೆ ಮುಟ್ಟಿರುವ, ಜೀವ ಕಳೆದುಕೊಂಡಿರುವ ವಾಸ್ತವವನ್ನು ಅರಿತ ಸೋದರರು, ತೆರಿಗೆಯ ಮೂಲಕ ಸಾಮಾನ್ಯ ಜನರನ್ನು ಶೋಷಿಸುವ ಸರ್ಕಾರಿ ವ್ಯವಸ್ಥೆಯನ್ನು ವಿರೋಧಿಸುತ್ತಾರೆ. ತಮ್ಮ ಸುತ್ತಲ ಜನರಿಗೆ ವೈಚಾರಿಕ ಜಾಗೃತಿ ಉಂಟುಮಾಡಿ ಅವರ ಜೀವನದಲ್ಲಿ ಬದಲಾವಣೆ ಮಾಡಲು ಪ್ರಯತ್ನಿಸುತ್ತಾರೆ. ಆದರೆ ಅಂತಿಮವಾಗಿ ಅವರಿಗೆ ಈ ಕುಡಿತವನ್ನು ನಿಲ್ಲಿಸಲು ಸಾಧ್ಯವಾಗುವುದಿಲ್ಲ. ಈ ಮೂಲಕ ವೈಚಾರಿಕ ಎಚ್ಚರದ ಯತ್ನಗಳಿಗೆ ಸುಲಭಕ್ಕೆ ಬದಲಾಗದ ಸಾಂಪ್ರದಾಯಿಕ ಸಮಾಜಕ್ಕೂ ಇರುವ ಸಂಘರ್ಷಗಳನ್ನು ಕಾದಂಬರಿ ಕಾಣಿಸುತ್ತದೆ.

ಕುವೆಂಪು ಅವರ ಎರಡೂ ಕಾದಂಬರಿಗಳಲ್ಲಿ ಪಯಣಕ್ಕೆ ಸಂಬಂಧಿಸಿದ ಆಧುನಿಕ ವಾಹನ ಸಂಕೇತಗಳು ಬಳಕೆಯಾಗುತ್ತವೆ. ಅವೆಂದರೆ, ಸೈಕಲ್ಲು, ಬಸ್ಸು, ಎತ್ತಿನಗಾಡಿ ಇತ್ಯಾದಿ. 'ಕಾನೂರು ಹೆಗ್ಗಡಿತಿ'ಯಲ್ಲಿ ಬರುವ ಒಂದು ಸನ್ನಿವೇಶವನ್ನು ಗಮನಿಸಬಹುದು: "ಈಗೇನು ಹನ್ನೆರಡು ಗಂಟೆ. ಎರಡು ಗಂಟೆಗೆ ಮನೆಗೆ ಹೋಗುತ್ತವೆ.. ನಿಂಗಾ ಗಾಡಿ ಜೋರಾಗಿ ಬಿಡಬೇಕು. ಆಗಲಿ ನನ್ನೊಡೆಯ ರೈಲು ಹೋದ್ಹಾಂಗೆ ಹೋದರೆ ಸೈಯಲ್ಲಾ! ನಿಮಗ್ಯಾಕೆ? ಗಾಡಿ ಹತ್ತಿ ನಾಗಾಲೋಟ ಓಡಿಸ್ತೀನಿ"(ಪು.೮). ಇಲ್ಲಿ ಆಧುನಿಕ ವಾಹನವಾದ ರೈಲು ಹಾಗೂ ಸಾಂಪ್ರದಾಯಿಕ ವಾಹನವಾದ ಗಾಡಿ ಒಟ್ಟಿಗೆ ಬಳಕೆಯಾಗಿವೆ. ಇವುಗಳ ನಡುವೆ ಆಧುನಿಕತೆಯ ಸಂಕೇತವಾಗಿರುವ ಪಯಣದ ಸಮಯವನ್ನು ಅಳೆಯುವ ಗಡಿಯಾರವೂ ಬಂದಿದೆ(ಜಿ.ಎಸ್.ಶಿವರುದ್ರಪ್ಪನವರ 'ಮುಂಬಯಿ ಜಾತಕ' ಕವನದಲ್ಲಿ ಕೂಡ ಪಯಣ ಸೂಚಕವಾದ ವಾಹನ ಹಾಗೂ ಸಮಯ ಸೂಚಕವಾದ ಗಡಿಯಾರಗಳು ಸಂಕೇತಗಳಾಗಿ ಒಟ್ಟೊಟ್ಟಿಗೆ ಬರುತ್ತಿವೆ). ಗಡಿಯಾರವು ಸಮಯದ ಬದಲಾವಣೆಯನ್ನು ತೋರಿಸುವ ಸಂಕೇತವಾಗಿದ್ದರೆ, ಗಾಡಿ ಮತ್ತು ರೈಲುಗಳು ಮನುಷ್ಯರ ಓಡಾಟದ ಪ್ರಮುಖ ಸಾಧನಗಳಾಗಿವೆ. ಎತ್ತಿನ ಗಾಡಿಯನ್ನು ರೈಲಿನ ಹಾಗೆ ಓಡಿಸುವ ಇಲ್ಲಿನ ಮಾತು, ಇಡೀ ಮಲೆನಾಡು ಆಧುನಿಕತೆಯ ಅಪೇಕ್ಷೆಗಳ ಜತೆ ಮಾಡುತ್ತಿರುವ ಅನುಸಂಧಾನವನ್ನೂ ಸೂಚಿಸುತ್ತದೆ. ಕುವೆಂಪು ಕಾದಂಬರಿಯಲ್ಲಿ ಸೈಕಲ್ಲು ಗಡಿಯಾರ ಲ್ಯಾಂಟರ್ನು ಆಧುನಿಕತೆಯ ಮುಖ್ಯ ಸಂಕೇತವಾಗಿ ಬರುತ್ತವೆ. ಮಲೆನಾಡು ಆಧುನಿಕತೆಯ ಪ್ರವಾಹದೊಡನೆ ಪಯಣಿಸಲು ಸಜ್ಜಾಗುತ್ತಿರುವ ಸಂಕೇತಗಳಾಗಿ ಬರುತ್ತವೆ. ಈ ದೃಷ್ಟಿಯಿಂದ ಕುವೆಂಪು ಕಾದಂಬರಿಗಳಲ್ಲಿ ಬರುವ ಬೈಸಿಕಲ್ ಪ್ರಕರಣಗಳು ಸಾಂಕೇತಿಕವಾಗಿವೆ. ಮೊದಲನೆಯದು ತೀರ್ಥಹಳ್ಳಿ-ಕೊಪ್ಪದ

ಕೊರಕಲುಬಿದ್ದ ರಸ್ತೆಯಲ್ಲಿ ವೇಗದಲ್ಲಿ ಸೈಕಲ್ಲನ್ನು ಓಡಿಸಿಕೊಂಡು ಹೋಗುತ್ತ ಬೈಸಿಕಲ್ ಸವಾರನು ಬೀಳುವುದು. ಎರಡನೆಯದು ಪಾದ್ರಿ ಜೀವರತ್ನಯ್ಯನು ದೇವಯ್ಯನಿಗೆ ಸೈಕಲ್ಲು ಕಲಿಸುವುದು.

ಎರಡೂ ಕಾದಂಬರಿಗಳಲ್ಲಿ ಬೈಸಿಕಲ್ಲು ಆಧುನಿಕ ನಾಗರಿಕತೆಯ ದೂತನಾಗಿ ಬಂದಿದೆ. ಮಾತ್ರವಲ್ಲದೆ ಅದು ಮಲೆನಾಡಿಗೆ ತನ್ನೊಂದಿಗೆ ಕ್ರೈಸ್ತಧರ್ಮವನ್ನು ಸಹ ಪಯಣ ಮಾಡಿಕೊಂಡು ಬರುವಂತೆ ಮಾಡಿದೆ. ಕಿಲಸ್ತರ ಪಾದ್ರಿ ಜೀವರತ್ನಯ್ಯನು ಬೆಟ್ಟಳ್ಳಿ ಕಲ್ಲಯ್ಯ ಗೌಡರ ಹಿರಿಯ ಮಗ ದೇವಯ್ಯ ಗೌಡರಿಗೆ ಬೈಸಿಕಲ್ ಸವಾರಿಯನ್ನು ಕಲಿಸಿಕೊಡುವ ಮೂಲಕ ಕ್ರೈಸ್ತಧರ್ಮದಲ್ಲಿ ದೇವಯ್ಯ ತಳೆದಿರುವ ಆಸಕ್ತಿಯನ್ನು ಮತಾಂತರಕ್ಕೆ ಒಂದು ಆಮಿಷವಾಗಿ ಬಳಸಿಕೊಳ್ಳುವ ಹುನ್ನಾರ ಮಾಡಿರುತ್ತಾನೆ. ಪಯಣ ಮಾಡಲು ವಾಹನವಾಗುವ ಸೈಕಲ್ಲು ತನ್ನ ಮೇಲೆ ವ್ಯಕ್ತಿಗಳನ್ನಲ್ಲ, ಧರ್ಮವನ್ನೂ ಹೊತ್ತು ತರಲು ಯತ್ನಿಸುತ್ತಿದೆ. ಮಲೆನಾಡಿನ ಜನ ಬೈಸಿಕಲ್ಲು ಕಲಿಸುವಿಕೆಯನ್ನು ಪ್ರಸಂಗವನ್ನು ತಮ್ಮದೇ ಆದ ಮುಗ್ಧತೆಯಲ್ಲಿ "ಬೀಸೆಕಲ್ಲ ಮ್ಯಾಲೆ ಹತ್ತಿ ಕೂತ್ಗೂತಾನಂತೆ. ಗೂಟ ಹಿಡಿದು ನಾವೆಲ್ಲಾ ಬೀಸೋ ಹಾಂಗೆ ಗಿರ್‍ರನೆ ತಿರುಗಿಸ್ತಾನಂತೆ. ಬೀಸೆಕಲ್ಲು ಅನಾಮತ್ತು ಮೇಲೆದ್ದು, ಎಲ್ಲಿಗಂದ್ರೆ ಅಲ್ಲಿಗೆ ಕಣ್ಣು ಮುಚ್ಚಿ ಬಿಡೋದರ ಒಳಗೆ ಹೋಗ್ತದಂತೆ" ಎಂದು ವಿಶ್ಲೇಷಣೆ ಮಾಡುತ್ತಾರೆ(ಪು.೧೫೧). ಜನರು ತಮ್ಮ ಕಲ್ಪನೆಯ ಕೀಲುಕುದುರೆಯ ಪೌರಾಣಿಕ ನೆನಪುಗಳ ಜತೆ ಇಲ್ಲಿ ಸೈಕಲನ್ನು ಸಮೀಕರಿಸಿರುವುದು ಸ್ಪಷ್ಟವಾಗಿದೆ. ಆದರೆ ಆಧುನಿಕತೆಯ ಸಂಕೇತವಾದ ಸೈಕಲ್ಲು ಮತ್ತು ಕ್ರೈಸ್ತಧರ್ಮಗಳು ಮಲೆನಾಡಿಗೆ ವಲಸೆ ಇಲ್ಲಿನ ಅನೇಕ ಕುಟುಂಬಗಳಲ್ಲಿ ತಲ್ಲಣ ಎಬ್ಬಿಸುತ್ತವೆ. ಮಲೆನಾಡಿನ ಮುಗ್ಧಜನರ ಮೇಲೆ ಹೊಸ ಆವಿಷ್ಕಾರದ ಯಂತ್ರಗಳ ಮೂಲಕ ಮತಾಂತರ ಮಾಡುವ ಸೂಕ್ಷ್ಮ ಆಕ್ರಮಣವನ್ನು ಕಾಣಿಸುವುದು ಕಾದಂಬರಿಯ ಉದ್ದೇಶವಾಗಿದೆ. ಆದರೆ ಆಕ್ರಮಣದ ಜತೆ ಆಧುನಿಕ ವಾಹನಗಳಿಗೆ ಜಾತಿಸಮಾಜದಲ್ಲಿ ಮಡಿ–ಮೈಲಿಗೆ ಕಲ್ಪನೆಯನ್ನು ಸಡಿಲವಾಗಿಸುವ ಶಕ್ತಿಯೂ ಇದೆ. ಮಲೆನಾಡಿಗೆ ಹೊರಗಿರುವ ನಾಗರಿಕ ಜಗತ್ತಿನಿಂದ ಪಯಣ ಮಾಡಿ ಬಂದಿರುವ ಆಧುನಿಕತೆಯ ಸಂಕೇತಗಳಲ್ಲಿ ಕಾಫಿಯೂ ಒಂದಾಗಿದೆ. ಪಾಶ್ಚಾತ್ಯರ ಮೂಲಕ ಭಾರತಕ್ಕೆ ಬಂದ ಈ ಪೇಯವು ಮಲೆನಾಡಿನ ಉಚ್ಚವರ್ಗದ ಜನರ ದಿನ ನಿತ್ಯದ ಬದುಕಿನಲ್ಲಿ ಸೇರಲು ಆರಂಭವಾಗಿದೆ. 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ಸುಬ್ಬಣ್ಣ ಹೆಗ್ಗಡೆಯವರಿಗೆ ಗೌರವ ಸೂಚಿಸಲು ಅಂತಕ್ಕ ಕಾಫಿ ಮಾಡಿಕೊಡುತ್ತಾಳೆ. "ಅಯ್ಯೋ ಒಡೆಯಾ, ನಾನೆಂಥಾ ಬಿರುಗು! ಕಾಫಿ ಮಾಡಿಟ್ಟೀನಿ. ನೀವು ಎದ್ದ ಕೂಡ್ಲೆ ಕೊಡೋಕೆ ಹೇಳಿದ್ರೂ ಆ ಪಾದ್ರಿ, ಮರೆತೇ ಹೋಗಿತ್ತು. ಎಂಥೆಂಥದೊ ಮಾತಾಡಿ ಬಿಟ್ಟೆ ನಾನೊಂದು ಮೂಳಿ!."(ಪು.೨೯೮) ಕಾಫಿ ಮಲೆನಾಡಿನ ಹಳೆಯ ತಲೆಮಾರಿನ ಮುದುಕರೊಬ್ಬರಿಗೆ ಚೈತನ್ಯದ ಶಕ್ತಿಯಾಗಲು ಹವಣಿಸುವುದು ಮಾರ್ಮಿಕವಾಗಿದೆ. ಬೈಸಿಕಲ್ಲು ಕಾಫಿ, ಕ್ರೈಸ್ತಧರ್ಮಗಳ ಜತೆ ಇಸ್ಕೂಲು ಮನೆಯೂ ಪಯಣಮಾಡಿ ಬಂದಿವೆ. ಈ ಆಧುನಿಕತೆಯ ಸಂಗತಿಗಳು ಮಲೆನಾಡಿನ ಬದುಕಿನ ವಿಕಾಸದಲ್ಲಿ ಹೊಸ

ವೈಚಾರಿಕತೆಯನ್ನು ತಂದಿವೆ. ತಮ್ಮ ಮನೆಯಲ್ಲಿ ಬಹಳ ನೇಮನಿಷ್ಠೆ ಮಾಡುವ ಸುಬ್ಬಣ್ಣ ಹೆಗ್ಗಡೆಯವರು ಪಯಣ ಮಾಡಿಕೊಂಡು ಮೇಗರವಳ್ಳಿಯ ಅಂತಕ್ಕ ಸೆಟ್ಟಿಯ ಮನೆಗೆ ಬಂದಾಗ ಕಾಫಿಯನ್ನು ಕುಡಿಯುತ್ತಾರೆ. ಅವರು ಕಾಫಿಯನ್ನು ಸಂತೋಷದಿಂದ ಕುಡಿಯುವುದಿಲ್ಲ. ಆದರೆ ಅವರು ಆಧುನಿಕ ನಾಗರಿಕ ಜಗತ್ತಿನ ಪೇಯವೊಂದಕ್ಕೆ ಮುಖಾಮುಖಿ ಆಗುವುದು ಬೇರೊಂದು ಊರಿಗೆ ಬಂದಾಗ ಎನ್ನುವುದು ಗಮನಾರ್ಹ. ಈ ಕುರಿತು ಭಂಡಾರಿಯವರು ಬರೆಯುತ್ತ "ಯಾವ ಸಮಾಜವು ಸ್ಥಗಿತವಾಗಿರುವುದಿಲ್ಲ. ಪರಿವರ್ತನೆ ಹೊಂದುತ್ತಲೇ ಇರುತ್ತದೆ. ಅದಕ್ಕೆ ಭಾರತೀಯ ಸಮಾಜವೇನೂ ಹೊರತಲ್ಲ ಎಂಬುದು ಈಗ ಒಪ್ಪಿತವಾದ ಸಂಗತಿ. ಆದರೆ ಹೊಸದರ ಪ್ರವೇಶವೇನೂ ಸುಲಭವಲ್ಲ. ಅದರ ಸ್ವೀಕಾರ ನಿರಾಕರಣ ಸುಲಭವಲ್ಲ. ಅದು ಕಾದಂಬರಿಯ ಸುಬ್ಬಣ್ಣ ಹೆಗ್ಗಡೆಯವರು ಅಂತಕ್ಕನ ಮನೆಯಲ್ಲಿ ಕಾಫಿ ಕುಡಿದಂತೆ." ಎಂದು ವ್ಯಾಖ್ಯಾನಿಸುತ್ತಾರೆ.[೧೧] ಆದರೆ ಮನೆಬಿಟ್ಟು ಹೊರಜಗತ್ತಿನಲ್ಲಿ ಮಾಡುವ ಪಯಣಗಳು ಎಲ್ಲ ಸನ್ನಿವೇಶದಲ್ಲಿಯೂ ಜನರ ಅಭಿರುಚಿಯಲ್ಲಿ ಬದಲಾವಣೆ ತರುತ್ತವೆ ಎಂದೇನಲ್ಲ. ಸುಬ್ಬಣ್ಣ ಹೆಗ್ಗಡೆಯವರು ಕಾಫಿ ಕುಡಿಯದೆ ಉಗುಳಿ, ಕಶಾಯವನ್ನೇ ಸ್ವೀಕರಿಸುತ್ತಾರೆ.

ಒಟ್ಟಿನಲ್ಲಿ ಇಲ್ಲಿ ಬರುವ ಕಾಫಿ, ಸೈಕಲ್ಲು, ಕ್ರಾಪು ಮುಂತಾದವು ಸ್ಥಳೀಯ ಬದುಕಿನ ಮೇಲೆ ನಾಗರಿಕತೆ ಬೀರಿರುವ ಪ್ರಭಾವವನ್ನು ಸೂಚಿಸುತ್ತವೆ. ಒಟ್ಟಾರೆ ನಾಗರಿಕ ಜಗತ್ತಿನ ವೈಚಾರಿಕತೆ ಮತ್ತು ಆಧುನಿಕತೆಯ ಅನೇಕ ಸಂಗತಿಗಳು ಸಾಂಪ್ರದಾಯಿಕ ಬದುಕಿನ ಮಲೆನಾಡಿನ ಬದುಕಿನೊಳಗೆ ಮೈಸೂರಿನಿಂದ ಹೊಸ ಚಿಂತನೆಯನ್ನು ಹೊತ್ತು ತರುವ ಗೌಡರ ಮಕ್ಕಳಂತೆಯೇ ಪ್ರವೇಶ ಮಾಡಲು ಆರಂಭಿಸಿರುವುದನ್ನು ಕಾದಂಬರಿ ಚಾರಿತ್ರಿಕ ಪ್ರಜ್ಞೆಯಲ್ಲಿ ಚಿತ್ರಿಸುತ್ತದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ದೇವಯ್ಯ ಇಡೀ ಮಲೆನಾಡಿನಲ್ಲಿ ಹೊರಗಿನಿಂದ ಪಯಣ ಮಾಡಿ ಬರುವ ಕಾಫಿ, ಸೈಕಲ್ಲು, ಕ್ರೈಸ್ತಧರ್ಮ, ಲ್ಯಾಂಟರ್ನು ಮುಂತಾದ ಎಲ್ಲ ನಾಗರಿಕತೆಯ ಸೆಳೆತಕ್ಕೆ ಒಳಗಾಗುವ ಪಾತ್ರವಾಗಿದೆ. ದೇವಯ್ಯ ತೀರ್ಥಹಳ್ಳಿಗೆ ಬಂದಾಗಲೆಲ್ಲಾ ಅವನ ನಡವಳಿಕೆಯಲ್ಲಾಗುವ ಬದಲಾವಣೆ ಹಾಗೂ ಅದಕ್ಕೆ ಅವನ ಕುಟುಂಬದವರ ಪ್ರತಿಕ್ರಿಯೆಯನ್ನು ಕಾದಂಬರಿ ವ್ಯಾಖ್ಯಾನಿಸುತ್ತದೆ:

"ದೇವಯ್ಯ ತೀರ್ಥಹಳ್ಳಿಗೆ ಹೋಗಿ ಬಂದಾಗಲೆಲ್ಲ ಏನಾದರೊಂದು ರೀತಿ ಸುಧಾರಿಸಿಯೆ ಬರುತ್ತಿದ್ದನು. ಬಟ್ಟೆಬರೆಗಳಿಗೆ ಅದು ಸೀಮಿತವಾಗಿದ್ದಾಗ ಅವನ ತಾಯಿ ಮತ್ತು ಅವನ ಹೆಂಡತಿ ನಗೆಬೀರಿ ಮೆಚ್ಚಿಗೆ ತೋರಿದ್ದರು. ಹೊಸಹೊಸ ಸಾಮಾನು ತಂದಾಗಲೂ ಯಜಮಾನರು ಹಣದ ದುಂದುಗಾರಿಕೆಯ ವಿಚಾರವಾಗಿ ಭರ್ತ್ಸನೆ ಮಾಡಿದ್ದುಂಟು. ಆದರೆ ಅವನು ಜಗಲಿಯಲ್ಲಿ ತೂಗುಹಾಕಲು ಒಂದು ದೊಡ್ಡ ಗಡಿಯಾರ ತಂದಾಗ, ಆ ನವನಾಗರಿಕತೆಯ ವಸ್ತುವಿಗೆ ಎಲ್ಲರೂ ಅಚ್ಚರಿವೋಗಿ ಬೆರಗಾಗಿದ್ದರು. ಅಂಗಳದ ನೆಳಲನ್ನು ನೋಡಿ ಕಾಲನಿರ್ಣಯ ಮಾಡಿ ಆಳುಗಳನ್ನು ಬೆಳಿಗ್ಗೆ ಮಧ್ಯಾಹ್ನ ಕೆಲಸಕ್ಕೆ ಕರೆಯುವ ಸಂದಿಗ್ಧತೆ ತಪ್ಪಿತಲ್ಲಾ ಎಂದು ಸಂತೋಷ ಪಟ್ಟಿದ್ದರು

ಕಲ್ಲಯ್ಯಗೌಡರು. ತಾಯಿಗೂ ಮತ್ತು ಹೆಂಡತಿಗೂ ತನ್ನ ಮಗ ಮತ್ತು ಗಂಡ ಎಷ್ಟು ಚೆನ್ನಾಗಿ ಕಾಣಿಸುತ್ತಾನೆ ಹೊಸ ರೀತಿಯ ಹೊಸ ಬಟ್ಟೆ ಹಾಕಿಕೊಂಡು ಎಂದು ಆನಂದವಾಗಿತ್ತು. ಆದರೆ ದೇವಯ್ಯನಲ್ಲಿ ಹೊರನೋಟಕ್ಕೆ ಆಗುತ್ತಿದ್ದ ಬದಲಾವಣೆಗಳಿಗಿಂತಲೂ ಗುರುತರವಾದ ಆಂತರಿಕ ಪರಿವರ್ತನೆಗಳು ನಡೆಯುತ್ತಿದ್ದವು ಎಂಬುದನ್ನು ಅವರು ಯಾರೂ ಅರಿಯಲಿಲ್ಲ. ಒಂದು ದಿನ ತೀರ್ಥಹಳ್ಳಿಯಿಂದ ಹಿಂತಿರುಗಿದಾಗ ಜುಟ್ಟು ಬೋಳಿಸಿ ಕಿರಾಪು ಬಿಟ್ಟಿದ್ದನ್ನು ಕಂಡಾಗಲೆ ಅವರಿಗೆ ಹೊರಗಣ ಪರಿವರ್ತನೆಯೂ ಭಯಂಕರವಾಗಿ ಕಾಣಿಸಿದ್ದು!"(ಪು.೨೦೨).

ತೀರ್ಥಹಳ್ಳಿಗೆ ದೇವಯ್ಯ ಪಯಣ ಮಾಡಿಬರುವುದಕ್ಕೂ ಅವನ ವೇಷಭೂಷಣಗಳಲ್ಲಿ ಬದಲಾವಣೆ ಸಂಭವಿಸುವುದಕ್ಕೂ ಸಂಬಂಧವಿದೆ. ಆದರೆ ಅವನ ಈ ಬಾಹ್ಯ ಬದಲಾವಣೆಗಳು ಅವನ ಆಂತರಿಕ ಆಲೋಚನೆಯಲ್ಲಿಯೂ ಪರಿಣಾಮ ತರುತ್ತವೆ. ಅವನು ಮಲೆನಾಡಿನ ಅನೇಕ ಸಂಪ್ರದಾಯಗಳನ್ನು ಮೌಢ್ಯವೆಂದು ಟೀಕಿಸಲು ಆರಂಭಿಸುತ್ತಾನೆ. ದೈವ ದಿಂಡರುಗಳನ್ನು ಎತ್ತಿ ಹೊರಗೆ ಒಗೆಯುತ್ತಾನೆ. ಇದು ಕುಟುಂಬದಲ್ಲಿ ಕ್ಷೋಭೆ ಉಂಟುಮಾಡುತ್ತದೆ. ವಿಶೇಷವೆಂದರೆ, ಕಲ್ಲಯ್ಯಗೌಡರು ಗಡಿಯಾರವನ್ನು ಆಳುಗಳ ಶ್ರಮಶಕ್ತಿಯನ್ನು ಬಳಸಿಕೊಳ್ಳಲು ಅನುಕೂಲವೆಂದು ಭಾವಿಸುವುದು. ಅಂದರೆ ಹೊರಗಿನಿಂದ ಬಂದ ಆಧುನಿಕತೆಯ ಸಂಕೇತವಾಗಿರುವ ಗಡಿಯಾರವು ಜಮೀನ್ದಾರಿ ಪದ್ಧತಿಯನ್ನು ಬಲಗೊಳಿಸುತ್ತಿರುವುದು.

ಸಾಂಪ್ರದಾಯಿಕ ಸಮಾಜದಲ್ಲಿ ಮನೆಮಾಡಿಕೊಂಡಿರುವ ಜಾತಿಭೇದ, ವರ್ಗವೈಷಮ್ಯ, ಶೋಷಣೆ, ಮೌಢ್ಯ, ಅನಾಚಾರಗಳನ್ನು ಕುವೆಂಪು ಕಾದಂಬರಿಗಳು ಜ್ವಲಂತವಾಗಿ ಚಿತ್ರಿಸುತ್ತವೆ. ಅದರಲ್ಲೂ ಸಾಮಾನ್ಯ ಜನತೆಯ ಮೌಢ್ಯವನ್ನು ಪೋಷಿಸಿ, ದೇವರು, ಧರ್ಮಗಳ ಹೆಸರಿನಲ್ಲಿ ಶೋಷಿಸುವ ಸ್ಥಳೀಯವಾದ ಪುರೋಹಿತಶಾಹಿಯ ಹುನ್ನಾರಗಳನ್ನು ವ್ಯಂಗ್ಯವಾಗಿ ವಿಮರ್ಶಾತ್ಮಕವಾಗಿ ಚಿತ್ರಿಸುತ್ತದೆ. ವಿಶೇಷವೆಂದರೆ ಈ ಸ್ಥಳೀಯ ಪುರೋಹಿತಶಾಹಿಯು ಹೊರಗಿನಿಂದ ಹೂವಯ್ಯನಂತಹ ಹೊಸತಲೆಮಾರಿನ ಮೂಲಕ ಮಲೆನಾಡಿಗೆ ಬಂದಿರುವ ಶಿಕ್ಷಣ ಹಾಗೂ ವೈಚಾರಿಕ ಎಚ್ಚರಗಳನ್ನು ವಿರೋಧಿಸುವುದು. ಇದು ವೆಂಕಪ್ಪಯ್ಯ ಜೋಯಿಸರು ಚಂದ್ರಯ್ಯಗೌಡರಿಗೆ ಹೇಳುವ ಬುದ್ಧಿಮಾತುಗಳಲ್ಲಿ ಸ್ಪಷ್ಟವಾಗುತ್ತದೆ:

"ನಾನು ಹೇಳಿದ್ದೆ ನಿನಗೆ ಮೊದಲೇ, ಈಗಿನ ವಿದ್ಯಾಭ್ಯಾಸ ಹುಡುಗರನ್ನು ಹಾಳುಮಾಡಿಬಿಡುತ್ತದೆ ಎಂದು! ದೇವರು ದಿಂಡರು ಭಕ್ತಿ ಗಿಕ್ತಿ ಎಲ್ಲ ನಿರ್ನಾಮ! ಜೊತೆಗೆ ನೂರಾರು ಹವ್ಯಾಸಗಳನ್ನು ಬೇರೆ ಕಲಿತು ಬಿಡುತ್ತಾರೆ. ನಿನ್ನ ಮನೆ ಜಮೀನು ಉಳಿಯಬೇಕಾದರೆ ಅವರ ಓದು ನಿಲ್ಲಿಸಿ, ಮದುವೆ ಗಿದುವೆ ಮಾಡಿ ಕೆಲಸಕ್ಕೆ ಹಚ್ಚು, ಸಂಸಾರ ತಲೆಗೆ ತಾಗಿದರೆ ಆಗ ಬುದ್ಧಿ ಬರುತ್ತದೆ"(ಪು.೬೭).

ಹೀಗೆ ಹೂವಯ್ಯ ಮತ್ತು ರಾಮಯ್ಯರ ಮೂಲಕ ಹೊರಗಿನಿಂದ ಬಂದಿರುವ ವೈಚಾರಿಕ ಪ್ರಜ್ಞೆಯನ್ನು ನಿರಾಕರಿಸುವ ಪುರೋಹಿತಶಾಹಿಯ, ಸಮಾಜವು ಚಲನಶೀಲವಾಗುವುದನ್ನೂ

ನಿರಾಕರಿಸುತ್ತದೆ. ಆದರೆ ಕಾದಂಬರಿ ಹೊರಗಿನ ಪ್ರಭಾವಗಳು ಮಲೆನಾಡಿಗೆ ವಲಸೆ ಬರುವುದನ್ನು ಹಾಗೂ ಮಲೆನಾಡು ಬದಲಾಗುವುದನ್ನು ತಪ್ಪಿಸಲು ಚಾರಿತ್ರಿಕವಾಗಿ ಸಾಧ್ಯವಿಲ್ಲ ಎಂದು ಧ್ವನಿ ಹೊರಡಿಸುತ್ತದೆ. ಹೂವಯ್ಯ ಪಾತ್ರದ ಮೂಲಕ ವೈಚಾರಿಕವಾದ ಪಯಣಕ್ಕೆ ಮಲೆನಾಡಿನ ಬದುಕು ಈಡಾಗುವುದನ್ನು ಕಾದಂಬರಿ ಸಂಭ್ರಮದಿಂದ ಕಾಣಿಸುತ್ತದೆ. ಇದನ್ನು ಹೂವಯ್ಯ ಜೋಯಿಸರಿಗೆ ಕೊಡುವ ಉತ್ತರದಲ್ಲಿ ಕಾಣಬಹುದು: "ನೀವು ತಿಳಿದವರೆಂದುಕೊಂಡು ಹಳ್ಳಿಯವರಿಗೆ ಮೌಢ್ಯವನ್ನೇ ಉಪದೇಶಮಾಡಿ, ನಿಮಿತ್ತ ಹೇಳುವುದು, ವಿಭೂತಿ ಕೊಡುವುದು, ಸತ್ಯ ನಾರಾಯಣ ವ್ರತ ಮಾಡಿಸುವುದು, ದೆವ್ವ ಪಿಶಾಚಿಗಳಿಗೆ ಬಲಿಕೊಡಿಸುವುದು, ಇದರಿಂದ ಹೊಟ್ಟೆ ಹೊರೆದುಕೊಳ್ಳುತ್ತಿದ್ದೀರಿ. ಟ್ರಂಕ ತಗುಲಿ–ಬೆನ್ನು ನೋವಾಗಿದ್ದರೆ ಔಷದಿ ಮಾಡಿ ಎಂದು ಹೇಳುವ ಬದಲು ಬೂದಿ ಕುಂಕುಮ ಹಚ್ಚಿ, ಮಂತ್ರ ಹಾಕಿಸಿ ಎಂದು ಹೇಳುತ್ತಿದ್ದೀರಲ್ಲಾ! ಇದು ಯಾವ ತತ್ವ ಶಾಸ್ತ್ರದಲ್ಲಿ ಹೇಳಿದೆ? ಹಾಗೆ ಹೇಳಿರುವ ಗ್ರಂಥಗಳಿದ್ದರೆ ಅವು ಮನ್ನಣೆಗೆ ಯೋಗ್ಯವಾದುವೆ? ನಿಮ್ಮ ಬೋಧನೆಯಿಂದ ಎಷ್ಟು ಜನರು ರೋಗಕ್ಕೆ ಸರಿಯಾಗಿ ಮದ್ದುಮಾಡದೆ, ಬರಿಯ ಬೂದಿ ವಿಭೂತಿಗಳನ್ನೇ ಹಚ್ಚಿಕೊಂಡು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ"(ಪು.೧೦೪). ಹೀಗೆ ವೈಚಾರಿಕ ದೃಷ್ಟಿಕೋನವು ಹೊರಗಿನಿಂದ ಬಂದಿದ್ದರೂ ಅದು ಮಲೆನಾಡಿನ ಆರೋಗ್ಯವನ್ನು ಸುಧಾರಿಸುವ ಶಕ್ತಿ ಹೊಂದಿದೆ ಎಂಬುದು ಇಲ್ಲಿನ ಸೂಚನೆಯಾಗಿದೆ.

ಬದಲಾವಣೆಯ ಶಕ್ತಿ, ಹೊರಗಿನದೊ ಒಳಗಿನದೊ, ಆದರೆ ಚಲನೆ ಎನ್ನುವುದು ಚಾರಿತ್ರಿಕವಾಗಿ ಯಾರ ನಿಯಂತ್ರಣಕ್ಕೂ ಕಾಯದೆ ಪ್ರವಹಿಸುವ ಶಕ್ತಿಯೆಂದು ಕುವೆಂಪು ಅವರ ಎರಡೂ ಕಾದಂಬರಿಗಳು ಸೂಚಿಸುತ್ತವೆ. 'ಕಾನೂರು ಹೆಗ್ಗಡಿತಿ'ಯ 'ಹತ್ತು ವರ್ಷಗಳಾದ ಮೇಲೆ' ಅಧ್ಯಾಯದಲ್ಲಿ ಮಲೆನಾಡಿನ ಜೀವನಕ್ಕೆ ಪ್ರವೇಶ ಮಾಡಿ ಪ್ರಭಾವ ಮಾಡಿರುವ ಆಧುನಿಕತೆಯ ಸಂಕೇತಗಳನ್ನು ಕಾದಂಬರಿ ವರ್ಣಿಸುತ್ತದೆ. ಅದರಲ್ಲಿ ಪಯಣಕ್ಕೆ ಸಂಬಂಧಿಸಿದ ರಸ್ತೆಗಳು ಮತ್ತು ವಾಹನಗಳು ಇರುವುದು ಗಮನಾರ್ಹ.

"ಕಾನೂರು ಮುತ್ತಳ್ಳಿಗಳಿಗೆ ಮಧ್ಯೆ, ರಸ್ತೆಗೆ ಸಮೀಪವಾಗಿ, ಕಾಡಿನ ನಡುವೆ ಇದ್ದ ಕಳ್ಳಂಗಡಿ ಕುಸಿದುಬಿದ್ದು, ಒರಲೆ ಹಿಡಿದು ಪಾಳಾಗಿತ್ತು. ನಾಲ್ಕಾರು ಗ್ರಾಮಗಳಿಗೆ ಅನುಕೂಲ ವಾಗುವಂತೆ ಒಂದು ಆಸ್ಪತ್ರೆ, ಸ್ಕೂಲು, ಪೋಸ್ಟಾಫೀಸು, ಅಂಗಡಿಗಳು ಮೂಡಿ ವರ್ಧಿಸುತ್ತಿದ್ದುವು. ಹಿಂದೆ ಬೈಸಿಕಲ್ಲಿನ ಪರಿಚಯಕ್ಕೂ ಪರದೇಶಿಯಾಗಿದ್ದ ಆ ರಸ್ತೆ ಮೋಟಾರು ಕಾರು, ಬಸ್ಸುಗಳ ಕೋಟಲೆಯಿಂದ ಬೇಸರಗೊಂಡಿತು; ಸ್ವದೇಶಿ ಖಾದಿಗಳ ಪ್ರಚಾರವೂ ತಕ್ಕಮಟ್ಟಿಗೆ ನಡೆದಿತ್ತು. ಗಾಂಧಿ ಟೋಪಿಗಳೂ ಆಗಾಗ ಬಂದು ಉಪನ್ಯಾಸ ಕೊಡುತ್ತಿದ್ದವು. ಅಕ್ಷರ ಬಲ್ಲವರು ಪತ್ರಿಕೆಗಳನ್ನು ಓದುವ ಅಭ್ಯಾಸಮಾಡಿ, ವಿಶಾಲ ಪ್ರಪಂಚದ ವಿಚಾರಗಳನ್ನು ಕುರಿತು ಮಾತಾಡುತ್ತಿದ್ದರು. ಮಾರಿಯ ಹರಕೆ, ದೆವ್ವದ ಪೂಜೆ ಮೊದಲಾದ ಮೂಢಾಚಾರಗಳಿಗೆ ಬದಲಾಗಿ ಉತ್ಕೃಷ್ಟವಾದ ಮತವಿಧಾನಗಳು ಆಚರಣೆಗೆ ಬರುತ್ತಿದ್ದವು. ಕಾಡಿಗೆ ನಾಗರಿಕತೆ ಕಾಲಿಟ್ಟಿತು"(ಪು.೫೮೭).

ಈ ಪರಿವರ್ತನೆಯ ಹಿಂದೆ ಬದಲಾವಣೆಯ ಗಾಳಿಯೊಂದು ಕೆಲಸ ಮಾಡಿದ್ದು ಅದು ಪಾಶ್ಚಿಮಾತ್ಯ ನಾಗರಿಕತೆ ಅಥವಾ ಆಧುನಿಕತೆಯದಾಗಿದೆ. ಇದು ಭಾರತೀಯ ಹಳ್ಳಿಯ ಬದುಕಿನೊಳಗೆ ಉಂಟುಮಾಡಿದ ಚಲನೆಗಳು ಎಷ್ಟೆಲ್ಲ ವಿನ್ಯಾಸಗಳಲ್ಲಿವೆ ಎಂಬುದನ್ನು ಕಾದಂಬರಿ ಆಸ್ಪತ್ರೆ, ಸ್ಕೂಲು, ಪೋಸ್ಟಾಫೀಸು, ಮೋಟಾರುಕಾರು, ಬಸ್ಸು, ಪತ್ರಿಕೆ ಮುಂತಾಗಿ ಪಟ್ಟಿ ಮಾಡುತ್ತದೆ. ಇವುಗಳಲ್ಲಿ ಪಯಣ ಸಂಬಂಧಿಯಾದ ವಾಹನಗಳು ಇರುವುದು ಗಮನಾರ್ಹವಾಗಿದೆ. ವಾಹನಗಳು ಗ್ರಾಮೀಣ ಬದುಕಿನಲ್ಲಿ ಉಂಟುಮಾಡುವ ಬದಲಾವಣೆಯ ಅಲೆಗಳನ್ನು ಹಿಡಿಯು ವುದಕ್ಕೆ ಯತ್ನಿಸಿದ ಇತರೆ ಕೃತಿಗಳೆಂದರೆ, ಶ್ರೀಕೃಷ್ಣ ಆಲನಹಳ್ಳಿಯವರ 'ಭುಜಂಗಯ್ಯನ ದಶಾವತಾರಗಳು'; ದೇವನೂರ ಮಹಾದೇವರ 'ಕುಸುಮಬಾಲೆ' ಹಾಗೂ 'ಡಾಂಬರು ಬಂದುದು' ಕಥೆ. ಈ ಬದಲಾವಣೆಗಳು ಅಂತಿಮವಾಗಿ ಜನರ ಆಲೋಚನಕ್ರಮದಲ್ಲಿ ಪಲ್ಲಟ ತರುತ್ತವೆ ಎಂಬುದೇ ಇಲ್ಲಿನ ಚರ್ಚೆಯ ಮುಖ್ಯಸಾರ. ಕುವೆಂಪು ಕಾದಂಬರಿಗಳಲ್ಲಿರುವ ವೈಚಾರಿಕತೆಯ ದರ್ಶನವು ಹೀಗೆ ಪಯಣದ ಜತೆ ಸೇರಿಕೊಂಡಿದೆ. ಈ ವೈಚಾರಿಕತೆಯು ಮಲೆನಾಡಿನ ಬದುಕಿನೊಳಗೆ ಆಧುನಿಕತೆಯ ಪಯಣ ಉಂಟುಮಾಡಿರುವ ತಲ್ಲಣಗಳಾಗಿ ವಿಸ್ತರಣೆ ಪಡೆದಿದೆ. ಹೂವಯ್ಯ, ರಾಮಯ್ಯ, ದೇವಯ್ಯ, ಜೀವರತ್ನಯ್ಯ ಮುಂತಾದವರ ವೈಚಾರಿಕ ಮನೋಭಾವಕ್ಕೂ ಇಲ್ಲಿರುವ ಗಾಡಿ, ರೈಲು, ಬೈಸಿಕಲ್, ಕಾಫಿ, ಇಸ್ಕೂಲು, ಶಿಕ್ಷಣ ಮುಂತಾದ ಆಧುನಿಕತೆಯ ಸಂಗತಿಗಳಿಗೂ ಹೀಗೆ ಸಂಬಂಧ ಏರ್ಪಡುತ್ತದೆ. ಈ ವೈಚಾರಿಕತೆ ಜನರಲ್ಲಿ ಸಂಪ್ರದಾಯದಾಚೆಗೆ ಚಿಂತಿಸುವಂತೆ ಪ್ರೇರಿಸುತ್ತದೆ.

೩.೬. ಪಯಣ: ನೈತಿಕತೆ

ನೈತಿಕತೆ ಎಂದರೆ ಜೀವನದಲ್ಲಿ ವ್ಯಕ್ತಿ ಅನುಸರಿಸಬೇಕಾದ ವಿಧಿ ನಿಷೇಧಗಳ ಮೊತ್ತವಾಗಿದೆ. ನೀತಿಗೆ ಮಾರ್ಗದರ್ಶನ, ಒಳ್ಳೆಯ ನಡತೆ, ಶಿಷ್ಟಾಚಾರ, ಉಪದೇಶ, ಹಿತೋಕ್ತಿ, ವಿವೇಚನೆ, ಕಾರ್ಯನೀತಿ ಮುಂತಾದ ಅರ್ಥಗಳಿವೆ. ಪಾಶ್ಚಾತ್ಯರಲ್ಲಿ ಹದಿನೆಂಟನೆಯ ಶತಮಾನದ ಸ್ಯಾಮ್ಯುಯಲ್ ಜಾನ್ಸನ್ ನೈತಿಕ ವ್ಯಾಖ್ಯಾನವಾದದ ವಕ್ತಾರರು ಎನಿಸಿಕೊಂಡಿದ್ದಾರೆ. ಇವರ ಪ್ರಕಾರ ರುದ್ರನಾಟಕಗಳ ನಾಯಕರು ಜನ ಸಾಮಾನ್ಯರಿಗೆ ನೈತಿಕ ನಿದರ್ಶನಗಳಂತೆ ಬರುತ್ತಾರೆ. ಅವರ ನಿದರ್ಶನದಿಂದ ಪ್ರೇಕ್ಷಕರು ಭಾವತೀವ್ರತೆಗೆ ಒಳಗಾಗುವವರು. ಅನೈತಿಕತೆಯಿಂದ ಸಂಭವಿಸುವ ಪರಿಣಾಮಗಳಿಗೆ ಭಯಪಡುವರು. ಅನ್ಯಾಯ ಮಾರ್ಗಗಳಿಂದಲಾದರೂ ಸರಿ, ತನ್ನ ಮಹತ್ವಾಕಾಂಕ್ಷೆಯನ್ನು ತೃಪ್ತಿಗೊಳಿಸಲು ಪ್ರಯತ್ನಿಸುವ ವ್ಯಕ್ತಿಗೆ ಒದಗುವ ಶಿಕ್ಷೆಯಿಂದ ಭೀತಿಯುಂಟಾಗಿ ಅವುಗಳಿಂದ ದೂರವಿರಲು ಪ್ರಯತ್ನಿಸುವರು. ಇದು ಸಾಹಿತ್ಯ ಮತ್ತು ನೈತಿಕತೆ ಬಗ್ಗೆ ಜಾನ್ಸನ್ನನ ವಾದವಾಗಿದೆ.

ಕನ್ನಡದ ಕಾದಂಬರಿಗಳಲ್ಲಿ ಸಾಮಾಜಿಕ ಜೀವನ ಚಿತ್ರವಿದ್ದರೂ, ಅವು ಒಂದು ಬಗೆಯ ನೈತಿಕತೆಯ ಆಯಾಮವನ್ನೂ ಪಡೆದಿವೆ. ಹಾದರ, ಮೋಸ, ಕೊಲೆ, ವಂಚನೆ, ಸುಳ್ಳು ಮುಂತಾದ ಸನ್ನಿವೇಶಗಳಲ್ಲಿ ನೈತಿಕತೆಯನ್ನು ಸಮಾಜ ನಿರ್ಧರಿಸುತ್ತದೆ. ಆದರೆ ಈ ಪುರುಷವಾದಿ ಸಮಾಜ

ನಿರ್ಧರಿಸುವ ಈ ನೈತಿಕತೆಯು ಸ್ತ್ರೀಯರ ಚಲನವಲನದ ಬಗ್ಗೆ ನಿಷ್ಠುರವಾಗಿರುತ್ತದೆ. ನೈತಿಕತೆಯು ಒಳ್ಳೆ ರೀತಿಯ, ನ್ಯಾಯಯುತವಾಗಿ ಬದುಕುವ ಕ್ರಮವಾಗಿದೆ. ಆದರೆ ಈ ಒಳ್ಳೆಯ ನ್ಯಾಯಯುತ ಎನ್ನುವುದು ಜಾತಿ ಪದ್ಧತಿ, ವರ್ಗಭೇದ ಹಾಗೂ ಜೆಂಡರ್ ಅಸಮಾನತೆ ಇರುವ ಸಮಾಜದಲ್ಲಿ ಏಕಪಕ್ಷೀಯವಾಗಿರಬಲ್ಲದು. ಹೀಗಾಗಿ ಮಾನವತಾವಾದದ ದೃಷ್ಟಿಯಿಂದ ನೈತಿಕತೆಯ ನೆಲೆ ಧನಾತ್ಮಕ ಅಥವಾ ಋಣಾತ್ಮಕ ಅರ್ಥಗಳಲ್ಲಿ ಪ್ರಕಟವಾಗಬಹುದು. ಸಾಮಾಜಿಕವಾಗಿ ನೀತಿ ಅನೀತಿಗಳು ಸಾಹಿತ್ಯ ಕೃತಿಯಲ್ಲಿ ಪ್ರಕಟವಾಗುವ ರೀತಿಯು ಭಿನ್ನವಾಗಿದೆ. ಲೇಖಕರು ಪಾತ್ರಚಿತ್ರಣದ ಮೂಲಕ, ಘಟನೆಯ ಚಿತ್ರಣದ ಮೂಲಕ ಈ ನೈತಿಕತೆಯನ್ನು ಕಾಣಿಸುತ್ತಾರೆ. ಈ ಹಿನ್ನೆಲೆಯಿಂದ ಕುವೆಂಪುರವರ ಎರಡೂ ಕಾದಂಬರಿಗಳ ಯಾನದೊಳಗೆ ಅಡಗಿರಬಹುದಾದ ನೈತಿಕತೆಯ ವಿನ್ಯಾಸಗಳನ್ನು ನೋಡಲು ಇಲ್ಲಿ ಯತ್ನಿಸಲಾಗಿದೆ.

ಹೂವಯ್ಯ ಮತ್ತು ಸೀತೆ ಆದರ್ಶಯುತ ವ್ಯಕ್ತಿಗಳಾಗಿ ಕಾಣುತ್ತಾರೆ. ಆಸ್ತಿಯ ಹಂಚಿಕೆಯ ಸಂದರ್ಭದಲ್ಲಿ ತನ್ನವರೇ ಮೋಸ ಮಾಡಿದರೂ ದಕ್ಕಿದನ್ನೇ ಸ್ವೀಕರಿಸುವ ಮನೋಭಾವ ಹೂವಯ್ಯನದು. ಚಂದ್ರಯ್ಯಗೌಡರ ಅನೀತಿ ಮಾರ್ಗ ಒಂದೆಡೆಯಾದರೆ, ಹೂವಯ್ಯನದು ಅದನ್ನು ಮೀರುವ ಆದರ್ಶಯುತ ಮಾರ್ಗ. ಸಮಸ್ಯೆಯೆಂದರೆ, ಆದರ್ಶವಾದಿ ಆಗಿರುವ ಹೂವಯ್ಯನ ನೈತಿಕತೆಯು ಮಲೆನಾಡಿನ ಬದುಕಿನಲ್ಲಿ ಸ್ವೀಕಾರಕ್ಕೆ ಮತ್ತು ನಿರಾಕರಣೆಗೆ ಒಳಗಾಗುವ ಬಗೆ.

ಕುವೆಂಪು ಕಾದಂಬರಿಗಳಲ್ಲಿ ಹಾದರ, ಕಳ್ಳತನ, ಸುಳ್ಳು ವಂಚನೆ ಎನ್ನಬಹುದಾದ ಅನೇಕ ಅನೈತಿಕ ಸಂಗತಿಗಳ ಚಿತ್ರಣವಿದೆ. ಆದರೆ ಕಾದಂಬರಿಯು ದುಡಿಯುವ ವರ್ಗದ ವಿಷಯದಲ್ಲಿ ಈ ಅನೈತಿಕತೆಗಳನ್ನು ಅಪರಾಧವಾಗಿ ಕಾಣಿಸುವುದಿಲ್ಲ. ದೇವನೂರ ಮಹಾದೇವರ 'ಒಡಲಾಳ' ಕೃತಿಯಲ್ಲಿ ಕಡ್ಲೆಕಾಯಿ ಅಥವಾ ಕೋಳಿ ಕಳ್ಳತನದ ಪ್ರಸಂಗವನ್ನು ಈ ಹಿನ್ನೆಲೆಯಿಂದ ನೋಡಬೇಕು. ಆದರೆ ಸಾಕವ್ವನ ಕೋಳಿಯನ್ನು ಅವಳ ಕೇರಿಯವರೇ ಕದ್ದಾಗ ಅದೊಂದು ಹಸಿವಿಗಾಗಿ ಸಹಜವಾಗಿ ಮಾಡಿರುವ ಕೃತ್ಯವೆನಿಸಿದರೆ, ಪೊಲೀಸು ಅಧಿಕಾರಿ ಕೋಳಿಯನ್ನು ಸಾಕವ್ವಳಿಂದ ಕಿತ್ತುಕೊಳ್ಳುವ ಚಿತ್ರವು ಶೋಷಣೆ ಎನಿಸುತ್ತದೆ. ಗುತ್ತಿಯು ತನ್ನ ಒಡೆಯರಿಗೆ ಸುಳ್ಳು ಹೇಳಿ ಪಯಣ ಮಾಡುವುದು, ಒಡೆಯರಿಗೆ ಗೊತ್ತಾಗದಂತೆ ಹೆಣ್ಣನ್ನು ಹಾರಿಸಿಕೊಂಡು ಬರುವುದು ಇವೆಲ್ಲವೂ ನೈತಿಕವಾಗಿ ತಪ್ಪೆನಿಸಿದರೂ, ಅವನ ಬದುಕಿನ ಇಕ್ಕಟ್ಟಿನಲ್ಲಿ ಇಟ್ಟು ನೋಡುವಾಗ ಅವು ಅನೈತಿಕವೆನಿಸುವುದಿಲ್ಲ. ಅವನನ್ನು ತನ್ನ ಪ್ರೇಮಿಯ ಜತೆ ಮದುವೆಯಾಗಲು ಕಷ್ಟವಾಗಿಸಿರುವ ಜಮೀನ್ದಾರಿ ಪದ್ಧತಿಯೇ ಅನೈತಿಕವೆನಿಸುವುದು. ಕುವೆಂಪು ಕಾದಂಬರಿಗಳಲ್ಲಿ ಅನೇಕ ಇಂತಹ ಕಳ್ಳತನ, ಕಳ್ಳಪ್ರೇಮಗಳು ನೀತಿ ಅನೀತಿಯಾಚೆಗಿನ ಚೌಕಟ್ಟಿನಲ್ಲಿ ಚಿತ್ರಿತವಾಗುತ್ತವೆ. ಅವಕ್ಕೆ ಪಯಣವು ಲಗತ್ತಾಗಿದೆ. ಅದನ್ನು ಕೆಳಸ್ತರದ ಸಮಾಜವು ಅಪರಾಧವೆಂದು ಪರಿಗಣಿಸುವುದಿಲ್ಲ. ಆದರೆ ದುಡಿಯುವ ವರ್ಗದ ಕಳ್ಳತನವನ್ನು ಜಮೀನ್ದಾರಿ ವರ್ಗ ಅಪರಾಧವೆಂದು ತಿಳಿಯುತ್ತದೆ. ಕಾದಂಬರಿಯು ಬಡವರು ಮಾಡುವ ಕಳ್ಳತನ ಹೇಳುವ ಸುಳ್ಳುಗಳನ್ನು ಉಚ್ಚವರ್ಗಗಳು ಮಾಡುವ ಕಳ್ಳತನ ಸುಳ್ಳುಗಳನ್ನು

ನೈತಿಕವಾಗಿ ಮುಖಾಮುಖಿ ಮಾಡುತ್ತದೆ. ಭೂಮಾಲೀಕರ ನಡುವಿನ ಜಿದ್ದಿನ ಭಾಗವಾಗಿ ಬರುವ ಇಲ್ಲಿನ ಅನೈತಿಕ ಕೆಲಸಗಳನ್ನು 'ಕಾನೂರು ಹೆಗ್ಗಡಿತಿ' ಕಾಣಿಸುತ್ತದೆ. ಸಿಂಗಪ್ಪಗೌಡರು ಕಾನೂರು ಚಂದ್ರಯ್ಯಗೌಡರು ಕುರಿ ಚೋರಿ ಮಾಡಿದ ಕಥೆಯನ್ನು ಕಂಡಕಂಡವರಿಗೆಲ್ಲಾ ಹೇಳುತ್ತಾ ಹೋಗುವುದು ಇದಕ್ಕೆ ಸಾಕ್ಷಿ. ಇದನ್ನು ಕಾದಂಬರಿ "ಅವರಿಗೆ ಬೇಕಾಗಿದ್ದದ್ದು ಚಂದ್ರಯ್ಯಗೌಡರ ಅಪಕೀರ್ತಿ; ಸತ್ಯ ಪ್ರಚಾರವಲ್ಲ!" ಎಂದು ವ್ಯಂಗ್ಯ ಮಾಡುತ್ತದೆ(ಪು.೩೫೫). ಸಿಂಗಪ್ಪಗೌಡರಿಗೆ ಕಾನೂರಿನ ಚಂದ್ರಯ್ಯಗೌಡರನ್ನು ತುಳಿಯುವುದು ಮುಖ್ಯವಾಗಿತ್ತು. ಅದರ ಮಾರ್ಗ ಯಾವುದಾದರೂ ಸರಿ. ಇದಕ್ಕಾಗಿ ಅವರು ಎಲ್ಲ ಕಡೆ ಹೋಗುತ್ತಾರೆ.

ಕುವೆಂಪು ಕಾದಂಬರಿಗಳಲ್ಲಿ ಅನೇಕ ಇಂತಹ ಅನೈತಿಕ ಎನ್ನಬಹುದಾದ ಸಂಗತಿಗಳ ಜತೆ ಪಯಣವು ಲಗತ್ತಾಗಿದೆ. ಇದರಲ್ಲಿ ನಾಗತ್ತೆಯು ನಾಗಕ್ಕನನ್ನು ಸಾಗಿಸಿಕೊಂಡು ಪಯಣ ಮಾಡುವ ಪ್ರಕರಣವೂ ಒಂದು. ದನಗಳನ್ನು ಮಾರಲು ದನದ ಮಾಲೀಕರು ಸಾಗಿಸಿಕೊಂಡು ಹೋಗುವಂತೆ, ಆಕೆ ನಾಗಕ್ಕನನ್ನು ಸಿರಿವಂತ ಗೌಡರಿಗೆ ಕೂಡಿಕೆ ಮಾಡಲು ಸಾಗಿಸುತ್ತಾಳೆ. ಇದಕ್ಕಾಗಿ ಅವಳು ಅವಳಿಗೆ ನಿದ್ದೆ ಬರುವ ಮದ್ದು ಹಾಕುತ್ತಾಳೆ. ನಾಗತ್ತೆ ತನ್ನ ಸಂಚಿನ ಸಫಲತೆಗಾಗಿ ಸೊಸೆಯಾದ ನಾಗಕ್ಕನನ್ನು ಅನೈತಿಕ ಲೈಂಗಿಕ ಮಾರ್ಗಕ್ಕೆ ದೂಡುತ್ತಾಳೆ. ನಾಗಣ್ಣನ ಸಾವಿನ ನಂತರ ಸೊಸೆಯನ್ನು ಸಿಂಬಾವಿ ಹೆಗ್ಗಡೇರಿಗೆ ಕೂಡಿಕೆ ಮಾಡಿಸಿದರೆ ತಾನು ಸಾಲದಿಂದ ಮುಕ್ತವಾಗಬಹುದೆಂಬ ಸ್ವಾರ್ಥ ನಾಗತ್ತೆಯದು. ಹಾಗಾಗಿಯೇ ಬಾವಿಕೊಪ್ಪದಿಂದ ನಾಗತ್ತೆ ನಾಗಕ್ಕಳನ್ನು ಉಪಾಯವಾಗಿ ಸಿಂಬಾವಿಯೆಡೆಗೆ ಕರೆದುಕೊಂಡು ಬರುತ್ತಾಳೆ. ಈ ಚಲನೆ ನಾಗಕ್ಕಳ ಬದುಕಲ್ಲಿ ದೌರ್ಜನ್ಯವನ್ನು ಉಂಟುಮಾಡುತ್ತದೆ. ನಾಗತ್ತೆ ವೆಂಕಟಣ್ಣನ ಮೂಲಕ ಅವಳನ್ನು ಲೈಂಗಿಕವಾಗಿ ಶೋಷಿಸುತ್ತಾಳೆ. ಕನ್ನಡ ಕಾದಂಬರಿಗಳು ಮಹಿಳೆಯರ ಲೈಂಗಿಕ ಶೋಷಣೆಯನ್ನು ಉದ್ದಕ್ಕೂ ಚಿತ್ರಿಸುತ್ತ ಬಂದಿವೆ. ಈ ಶೋಷಣೆಯು ಧರ್ಮಾತೀತವಾಗಿದೆ. ಎಲ್ಲ ಜಾತಿಯವರಲ್ಲಿಯೂ ಇದೆ. ಬೊಳುವಾರು ಮಹಮ್ಮದ್ ಕುಂಞಯವರ ಕಥಾಸಂಕಲನ 'ದೇವರುಗಳ ರಾಜ್ಯದಲ್ಲಿ' ಬರುವ 'ಮುತ್ತುಚ್ಚೇರ' ಕಥೆಯಲ್ಲಿ ಕರಾವಳಿ ಭಾಗದ ಮುಸ್ಲಿಂ ಮಹಿಳೆಯರನ್ನು ಮೂರು ತಿಂಗಳ ಮಟ್ಟಿಗೆ ನಿಖಾ ಮಾಡಿಸಿ, ತಲಾಖ್ ಕೊಡಿಸುವ ವ್ಯವಸ್ಥೆಯಿದೆ. ಅರಬ್ಬಿಯಿಂದ ವ್ಯಾಪಾರಕ್ಕಾಗಿ ಪಯಣ ಕೈಗೊಂಡಿರುವ, ಪುರುಷರೊಂದಿಗೆ ಸ್ತ್ರೀಯನ್ನು ಮದುವೆ ಮಾಡಿಸಿ ನಂತರ ತಲಾಖ್ ಕೊಡಿಸಿ ಶೋಷಿಸುವ ವ್ಯವಸ್ಥೆಯ ಚಿತ್ರಣವಿದೆ. ಒಂದು ಕಡೆ ಪುರುಷ ವ್ಯವಸ್ಥೆಯಿಂದ ಸ್ತ್ರೀದೌರ್ಜನ್ಯಕ್ಕೆ ಒಳಗಾದರೆ, ಇನ್ನೊಂದೆಡೆ ಸ್ತ್ರೀಯರಿಂದಲೇ ಸ್ತ್ರೀಯರ ದೌರ್ಜನ್ಯ ನಡೆಯುತ್ತದೆ. ಆದರೆ ಈ ಲೈಂಗಿಕ ಸಂಬಂಧಗಳು ಯಾವ ವರ್ಗ–ಜಾತಿಗಳಲ್ಲಿ ನಡೆಯುತ್ತವೆ ಮತ್ತು ಯಾಕಾಗಿ ನಡೆಯುತ್ತವೆ ಎಂಬ ಹಿನ್ನೆಲೆಯನ್ನು ನೋಡಬೇಕು. ಇಲ್ಲದಿದ್ದರೆ, ದುಡಿಯುವ ವರ್ಗದ ಲೈಂಗಿಕ ಸಂಬಂಧಗಳು ಅನೈತಿಕವೆಂದು ಕರೆಯುವ ಅಪಾಯವಿದೆ. ಕೆಳವರ್ಗದ ಜನರಿಗೆ ಗಂಡು ಹೆಣ್ಣಿನ ನಡುವೆ ವಿವಾಹೇತರ ಚೌಕಟ್ಟಿನಲ್ಲಿ ಏರ್ಪಡುವ ಸಂಬಂಧಗಳು ಅನೈತಿಕವೆಂದು ಅನಿಸುವುದಿಲ್ಲ. ಆದರೆ

ಮೇಲ್ವರ್ಗದಲ್ಲಿ ಇವು ಅನೈತಿಕವೆನಿಸುತ್ತದೆ. ಆದರೆ ಮಲೆನಾಡಿನ ಗೌಡರು ಜಮೀನ್ದಾರಿ ಯಜಮಾನಿಕೆಯ ಭಾಗವಾಗಿ ಕೆಳಸ್ತರದ ಹೆಣ್ಣುಗಳ ಜತೆ ಲೈಂಗಿಕ ಸಂಬಂಧ ಏರ್ಪಡಿಸಿಕೊಳ್ಳುತ್ತಾರೆ. ಬಡವರ ಅಸಹಾಯಕತೆ ದುರುಪಯೋಗ ಮಾಡಿಕೊಳ್ಳುತ್ತಾರೆ. ಇದಕ್ಕೆ ಅವರು ಅವರ ಕೇರಿಗೆ ಪಯಣ ಮಾಡುತ್ತಾರೆ. ಆದ್ದರಿಂದಲೇ ಇದು ಶೋಷಣೆ ಅನಿಸುತ್ತದೆ. ಆದರೆ ಗುತ್ತಿಯು ಗೌಡರಿಗೆ ತಿಳಿಸದೆ ರಾತ್ರೋರಾತ್ರಿ ತಿಮ್ಮಿಯನ್ನು ಹಾರಿಸಿಕೊಂಡು ಬರುವುದು ಅನೈತಿಕವಾಗುವುದಿಲ್ಲ. ಅದು ಅವನು ಮಾಡುವ ಸಾಹಸದ ಕಾರ್ಯವಾಗುತ್ತದೆ. ವಿಶೇಷವೆಂದರೆ 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ತಿಮ್ಮಿಯು ಗುತ್ತಿಯ ಜತೆ ಪಯಣ ಮಾಡುವಾಗ ಬಚ್ಚನೊಂದಿಗೆ ತಾನು ಪಡೆದಿದ್ದ ಲೈಂಗಿಕ ಅನುಭವವನ್ನು ನೆನೆಯುವುದು. "ತಿಮ್ಮಿ ತನ್ನ ಸಿಂಬಾವಿ ಬಾವನೂ ಹಿಂದೊಮ್ಮೆ-ತಮ್ಮ ಕೇರಿಯವನೆ ಆಗಿ, ಈಗ ತನ್ನನ್ನು ಮದುವೆಯಾಗಲಿದ್ದ, ಆ ಬಚ್ಚ ಬಾವ ತನಗೆ ಮಾಡಿದಂತೆ ಮಾಡಬಹುದು ಎಂದು ನಿರೀಕ್ಷಿಸುತ್ತಿದ್ದಳು" ಎಂದು ಕಾದಂಬರಿ ನಿರೂಪಿಸುತ್ತದೆ(ಪು.೨೧೯).

ಗುತ್ತಿಗಿಂತ ಮೊದಲೇ ಬಚ್ಚನಿಂದ ಸುಖ ಪಡೆದಿದ್ದ ತಿಮ್ಮಿ ಆ ವಿಚಾರವನ್ನು ಮುಚ್ಚಿಟ್ಟುಕೊಳ್ಳದೆ ಹೇಳಿಬಿಡುತ್ತಾಳೆ. ಗುತ್ತಿಗೆ ಸ್ವಲ್ಪ ಹೊತ್ತು ಕಸಿವಿಸಿಯಾದರೂ ಲಕ್ಕುಂದಕ್ಕೆ ಬರುವಷ್ಟರಲ್ಲೇ ಅವನಿಗೆ ಮರೆತು ಹೋಗುತ್ತದೆ. ಇಲ್ಲಿನ ದಲಿತ ಪಾತ್ರಗಳು, ದುಡಿವ ವರ್ಗದ ಜನರು ನಿತ್ಯ ಬದುಕಿಗಾಗಿ ಮಾಡುವ ಹೋರಾಟ, ಪಯಣಗಳು ಎಷ್ಟು ಸವಾಲಿನವು ಎಂದರೆ, ಅವರಿಗೆ ಮೇಲ್ವರ್ಗಕ್ಕೆ ಮುಖ್ಯವೆನಿಸುವ ನೈತಿಕ ಪ್ರಶ್ನೆಗಳು ದೊಡ್ಡವು ಅನಿಸುವುದೇ ಇಲ್ಲ. 'ಕುಸುಮಬಾಲೆ' ಕಾದಂಬರಿಯಲ್ಲಿ ಈ ಕಳ್ಳತನ ಮತ್ತು ಲೈಂಗಿಕ ಸಂಬಂಧಗಳ ವಿಷಯದಲ್ಲಿ ದುಡಿಯುವ ವರ್ಗದ ದಲಿತ ಸಮುದಾಯದ ನೈತಿಕ ಪರಿಕಲ್ಪನೆ ಹೇಗೆ ಉಚ್ಚಜಾತಿಯವರಿಗಿಂತ ಭಿನ್ನವಾದುದು ಎಂಬುದು ಇನ್ನೂ ಸ್ಪಷ್ಟವಾಗಿ ಚಿತ್ರಿತವಾಗುತ್ತದೆ. ಕುವೆಂಪು ಕಾದಂಬರಿಗಳಲ್ಲಿ ಅಡಿಕೆ ಬಾಳೆ ತೋಟಗಳಿಗೆ ನುಗ್ಗಿ ಕೊಳ್ಳೆ ಹೊಡೆಯುವ, ಕಾವೇರಿಯನ್ನು ಅತ್ಯಾಚಾರ ಮಾಡುವ, ಗುತ್ತಿಯ ಗಬ್ಬದ ಕುರಿಯನ್ನು ಕೊಲ್ಲುವ, ಕಳ್ಳಿಗಾಗಿ ಕದಿಯುವ ಬದುಕಿನ ಪಯಣದಲ್ಲಿ ಅನೇಕ ಪಾತ್ರಗಳು ಕಾದಂಬರಿಯೊದ್ದಕ್ಕೂ ಕ್ರಿಯಾಶೀಲವಾಗಿವೆ. ಕೆಳವರ್ಗದವರನ್ನು ಮುಸ್ಲಿಂ ಸಾಬರ ಮೂಲಕ ಹೊನ್ನಾಳ್ಳಿ ಹೊಡೆತ ಹೊಡೆಸುವ ಮೇಲ್ವರ್ಗದ ದೌರ್ಜನ್ಯಗಳಿವೆ. ಹೀಗೆ ಅನೇಕ ಚಟುವಟಿಕೆಗಳು ಕಾದಂಬರಿಯುದ್ದಕ್ಕೂ ಪ್ರಸ್ತಾಪವಾಗುತ್ತವೆ. ನ್ಯಾಯಯುತವಾಗಿ, ಶೀಲಯುತವಾಗಿ ಬದುಕುವ ಕೆಲವು ಪಾತ್ರಗಳು, ಬದುಕಲಾಗದ ಕೆಲವು ಪಾತ್ರಗಳ ನಡುವಿನ ತಾಕಲಾಟದ ಯಾನದಲ್ಲಿ ಎಲ್ಲವೂ ಬಯಲಾಗುತ್ತವೆ. ಕಳ್ಳತನ, ಮೋಸ, ಕೊಲೆ, ಲೈಂಗಿಕ ದೌರ್ಜನ್ಯ ಮುಂತಾದ ಒತ್ತಡಗಳು ವ್ಯಕ್ತಿಗಳನ್ನು ಜಾಗದಿಂದ ಜಾಗಕ್ಕೆ ಚಲಿಸುವಂತೆ ಮಾಡುತ್ತದೆ. ಆದರೆ ಪಯಣವು ದುರ್ಬಲರ ಬದುಕಿನಲ್ಲಿ ಅವರ ಚೈತನ್ಯ ಪ್ರಕಟಣೆಯ ಭಾಗವಾದರೆ, ಲುಂಗೀಸಾಬು, ಸೇರೆಗಾರ, ಚೀಂಕ್ರ ಮುಂತಾದ ದುಷ್ಟಪಾತ್ರಗಳ ಬದುಕಿನಲ್ಲಿ ವಂಚನೆಯ ಭಾಗವಾಗಿ ಪ್ರಕಟವಾಗುತ್ತವೆ. ದುರ್ಬಲರು ಮಾಡುವ ಪಯಣಗಳು ಅವರು ಬದುಕಿ ಉಳಿಯುವುದಕ್ಕೆ ತಮ್ಮ ಲೈಂಗಿಕ ಹಕ್ಕನ್ನು ಉಳಿಸಿಕೊಳ್ಳುವುದಕ್ಕೆ ಸಾಧನಗಳಾದರೆ, ಸಬಲರು ಮಾಡುವ ಪಯಣಗಳು

ಅವರ ಸ್ವಾರ್ಥಸಾಧನೆಗೆ ಮಾಡುವ ಸಾಧನೆಗಳಾಗುತ್ತವೆ. 'ಕಾನೂರು ಹೆಗ್ಗಡಿತಿ' ಕೃತಿಯಲ್ಲಿ ಅಣ್ಣಯ್ಯ ಗೌಡರು ಮಾಡಿದ ಸಾಲವನ್ನು ತೀರಿಸಲಾರದೆ ರಾತ್ರೋರಾತ್ರಿ ಊರು ಬಿಟ್ಟುಹೋಗುವ ಪ್ರಸಂಗವನ್ನು ಇಲ್ಲಿ ನೆನೆಯುಬಹುದು. ಕಾರಂತರ 'ಚೋಮನ ದುಡಿ'ಯಲ್ಲಿ ಸಾಲತೀರಿಸುವ ಸಲುವಾಗಿಯೇ ಚೋಮನ ಮಕ್ಕಳು ಘಟ್ಟಗಳಿಗೆ ಪಯಣ ಬೆಳೆಸುವ ಚಿತ್ರವಿದ್ದರೆ, ಇಲ್ಲಿ ಸಾಲಕೊಟ್ಟ ಚಂದ್ರೇಗೌಡರ ದೌರ್ಜನ್ಯ ಸಹಿಸಲಾಗದೆ ಬಡವರಾದ ಅಣ್ಣಯ್ಯಗೌಡರು ಕದ್ದು ಪಯಣ ಮಾಡುತ್ತಾರೆ.

೩.೭. ಪಯಣ: ಪ್ರತಿಭೆ

ಪ್ರತಿಭೆ ಮತ್ತು ಶಕ್ತಿ ಎಂಬ ಪದಗಳನ್ನು ಆಲಂಕಾರಿಕರು ಸಮಾನಾರ್ಥಕವಾಗಿ ಬಳಸುತ್ತಾರೆ. ಪ್ರತಿಭೆಯನ್ನು ಇಮ್ಯಾಜಿನೇಶನ್‌ಗೆ ಸಮಾನಾರ್ಥಕವಾಗಿ ಆಧುನಿಕ ವಿದ್ವಾಂಸರು ಗುರುತಿಸುತ್ತಾರೆ. ಇಮ್ಯಾಜಿನೇಶನ್‌ಗೆ ಸಂವಾದಿಯಾಗಿ ಬಳಕೆಯಾಗುವ ಪ್ರತಿಭೆ ಎಂಬ ಪದಕ್ಕೆ ನಿಘಂಟಿನಲ್ಲಿ ಹೊಳಹು ಎಂಬ ಅರ್ಥವಿದೆ. ಹೊಸ ಹೊಸ ಭಾವಗಳನ್ನು ಸತತವಾಗಿ ಕಾಣುವ, ಕಟ್ಟುವ ಪ್ರಜ್ಞೆಯೇ ಪ್ರತಿಭೆಯಾಗಿದೆ. ಇದು ಒಂದು ಪ್ರಜ್ಞೆಯ ಸ್ಥಿತಿ. ನೆನಪು, ಎಚ್ಚರ, ಆಲೋಚನೆ ಈ ಮೂರನ್ನೂ ಒಳಗೊಂಡು ಪ್ರಪಂಚದ ಸಂಗತಿ ಮತ್ತು ಅನುಭವಗಳನ್ನು ನೋಡುವ ವಿಶಿಷ್ಟ ದೃಷ್ಟಿಕೋನ. ಕುವೆಂಪು ತಮ್ಮ ಬಾಲ್ಯದ ಓಡಾಟದಲ್ಲಿ ಕಂಡ ಅನುಭವಗಳನ್ನು ತಮ್ಮ ಪ್ರತಿಭೆಯ ಮೂಲಕ ಕೃತಿಯೊಳಗೆ ಪ್ರಕಟಿಸಿದ್ದಾರೆ. ತಿಳಿಸಬೇಕಾಗಿರುವ ವಿಷಯವನ್ನು ದರ್ಶಿಸುವ ಜಾಣ್ಮೆಯೇ ವಿಶಿಷ್ಟವಾದುದಾಗಿದೆ. ಪ್ರತಿಭೆ, ಹೊಳಹುಗಳು ವಿಕಾಸ ಹೊಂದಲು ಅನುಭವದ ಜೊತೆಗೆ ವ್ಯಕ್ತಿಯ ತಿರುಗಾಟವು ಮುಖ್ಯವಾಗುತ್ತದೆ. ವಿಕಾಸವಾಗದೇ ಚಲನೆಗೆ ಒಳಪಡದೆ ಜ್ಞಾನದ ಚಲನೆ ಸಾಗಲು ಸಾಧ್ಯವಿಲ್ಲ. ಕುವೆಂಪುರವರ ಕಾದಂಬರಿಯೊಳಗೆ ಈ ರೀತಿಯ ಪ್ರತಿಭೆ ಪ್ರಕಟವಾಗಿರುವ ಕೆಲವು ಸಂದರ್ಭಗಳನ್ನು ಪಯಣದ ನೆಲೆಯಲ್ಲಿ ಗಮನಿಸುವುದು ಮುಖ್ಯವಾಗಿದೆ.

ಹೂವಯ್ಯ ಮತ್ತು ರಾಮಯ್ಯ ಮೈಸೂರಿನಿಂದ ಕಾನೂರಿನೆಡೆಗೆ ಪುಟ್ಟಣ್ಣನೊಂದಿಗೆ ಗಾಡಿಯಲ್ಲಿ ಪಯಣವನ್ನು ಮಾಡುತ್ತಾರೆ. ಗಾಡಿಯಿಂದ ಕೆಳಗೆ ಬಿದ್ದು ಹೂವಯ್ಯ ಸೀತೆಯ ಮನೆಯನ್ನು ಸೇರಿದ ಬಳಿಕ ಅವನ ಮತ್ತು ಸೀತೆಯೊಳಗಿನ ಪ್ರೇಮವು ಜಾಗೃತವಾಗುತ್ತದೆ. ಹೂವಯ್ಯ ಸೀತೆಯಮನೆ ಸೇರುವ ಹಿಂದೆ ಗಾಡಿಯ ಪಯಣ ಕೆಲಸ ಮಾಡಿದೆ. ಈ ಪಯಣದ ಮೂಲಕವೇ ಪ್ರೀತಿಯ ಅನಾವರಣವಾಗುತ್ತದೆ. ಆದರೆ ಗಾಡಿಪಯಣದಲ್ಲಿ ಉಂಟಾಗುವ ಈ ದುರಂತವು ಸಾಂಕೇತಿಕವಾಗಿ ಸೀತೆ ಹೂವಯ್ಯರ ಪ್ರೇಮದುರಂತವನ್ನೂ ಸೂಚಿಸುತ್ತದೆ. ಹೀಗೆ ಪಯಣದ ಪ್ರಕರಣಗಳು ಕಾದಂಬರಿಯಲ್ಲಿ ಪಾತ್ರಗಳ ಬದುಕಿನಲ್ಲಾಗುವ ಪಲ್ಲಟಗಳಿಗೆ ಪ್ರೇರಕವೂ ಸಂಕೇತವೂ ಆಗುವ ಹಾಗೆ ಕುವೆಂಪು ಕಾದಂಬರಿಗಳ ಕಥನವಿನ್ಯಾಸವಿದೆ. ಮಲೆನಾಡಿನ ಬದುಕು ಮೂಲತಃ ದುಡಿಯವ ವರ್ಗದ ಜನರ ಚಲನೆಗಳ ಭಾಗವಾಗಿದ್ದು, ಕಾದಂಬರಿಗಳಲ್ಲಿ ಸಹಜವಾಗಿಯೇ ನಾನಾ ಕಾರಣಕ್ಕೆ ಅವರು ಮಾಡುವ ಪಯಣದ ವಿವರಗಳಿಂದ ಕೂಡಿದೆ. ಅದರಲ್ಲೂ ಬೇಟೆಯ ಪ್ರಸಂಗಗಳು ಓಡಾಟದ ವಿವರಗಳನ್ನು ಸಮೃದ್ಧವಾಗಿ ಕೊಡುತ್ತವೆ. ಈ ದೃಷ್ಟಿಯಿಂದ ಕಾಡುಹಂದಿಯ

ಬೇಟೆಯ ಪ್ರಸಂಗವನ್ನು ಇಲ್ಲಿ ನೆನೆಯಬಹುದು. ಚಗಳಿಯಿರುವೆ ಸಂಗ್ರಹಿಸುವ ಪ್ರಸಂಗವನ್ನು ನೆನೆಯಬಹುದು: "ಚಗಳಿಯಿರುವೆಗಳು ಬಳಬಳನೆ ಮೊರಕ್ಕೆ ಉದುರಿದವು. ಅವುಗಳೊಡನೆ ಹರಿದ ಗೂಡಿನಿಂದ ಗೋಧಿಯ ಗಾತ್ರದ ಬಿಳಿಯ ಮೊಟ್ಟೆಗಳೂ ಬಿದ್ದವು. ಇರುವೆಗಳು ಮೊರದಿಂದ ಹರಿದೋಡದಂತೆ ಸೋಮ ಮೊರವನ್ನು ಹಿಂದಕ್ಕೂ ಮುಂದಕ್ಕೂ ಎಡಕ್ಕೂ ಬಲಕ್ಕೂ ಸರಸರನೆ ಅಲುಗಾಡಿಸುತ್ತಿದ್ದನು. ಚಗಳಿಯಿರುವೆಗಳು ಉಪ್ಪಿನ ದೆಸೆಯಿಂದ ಹುಳಿಯನ್ನು ಕಾರಿಕೊಂಡು ನಿಶ್ಚಲವಾಗ ತೊಡಗಿದವು"(ಪು.೨೮೧) ಚಗಳಿ ಇರುವೆಗಳನ್ನು ಹಿಡಿಯಲು ಜಾಣ್ಮೆ ಮುಖ್ಯವಾಗುತ್ತದೆ. ಜನರ ತಿರುಗಾಟಗಳಿಗೂ ಅವರ ಆಹಾರ ಪದ್ಧತಿಗೂ ಆಂತರಿಕ ಸಂಬಂಧವಿದೆ. ಆಹಾರ ಸಂಗ್ರಹ, ಬೇಟೆ ಇತ್ಯಾದಿಗಳು ಜನರ ಅನುಭವ ಮತ್ತು ಜಾಣ್ಮೆಯನ್ನು ಹೊರಹೊಮ್ಮಿಸುವ ಸನ್ನಿವೇಶಗಳಾಗಿದ್ದು, ಅವು ತಿರುಗಾಟಗಳ ಜತೆ ಜೋಡಣೆಗೊಂಡಿವೆ. ವ್ಯಕ್ತಿ ಪರಿಸರದೊಳಗೆ ಅಡ್ಡಾಡದೆ ಅವರ ಪ್ರತಿಭೆ ಮತ್ತು ಬುದ್ಧಿಮತ್ತೆ ಬಳಕೆಯಾಗುವುದಿಲ್ಲ. ಹೀಗೆ ಮಲೆನಾಡಿನ ಜನರ ಕಾಮ, ದ್ವೇಷಸಾಧನೆ, ಸಾಹಸ, ಬೇಟೆ ಎಲ್ಲ ಚಟುವಟಿಕೆಗಳ ಜತೆ ಅವರ ಓಡಾಟಗಳು ಕೂಡಿಕೊಂಡಿವೆ.

'ಕಾನೂರು ಹೆಗ್ಗಡಿತಿ'ಯಲ್ಲಿ ಸೀತೆ ಮುತ್ತಳ್ಳಿಯಿಂದ ಹೂವಯ್ಯನನ್ನು ನೋಡಲು ಕಾನೂರಿಗೆ ಬಂದು ಮರಳಿ ತನ್ನೂರಿಗೆ ಪಯಣ ಮಾಡುವಾಗ ಅವಳ ಮನಸ್ಥಿತಿಯನ್ನು ಕಾದಂಬರಿ ಹೂವು ಮತ್ತು ದುಂಬಿಯ ರೂಪಕದ ಮೂಲಕ ನಿರೂಪಿಸುತ್ತದೆ: "ಆ ದಿನ ಬೆಳಿಗ್ಗೆ ತಾನೆ ಹೂವಯ್ಯ ಬಾವನ ಬಳಿಗೆ ಬಂದಿದ್ದ ಅವಳು ಅದೇ ದಿನ ಮಧ್ಯಾಹ್ನ ಹಿಂತಿರುಗಬೇಕು ಎಂದರೆ ಹೇಗೆ ಸಾಧ್ಯವಾದೀತು? ಹಸಿದ ದುಂಬಿ ಹೂವಿನ ಮೇಲೆ ಕೂತೊಡನೆಯೆ ಮಕರಂದ ಪಾನ ಮಾಡಿದ್ದು ಸಾಕು, ಇನ್ನೂ ಹಾರಿ ಹೋಗು ಎಂದರೆ ಅದು ಹೋಗುತ್ತದೆಯೆ?"(ಪು.೩೪೩) ಸೀತೆಯ ಮನಸ್ಥಿತಿಯನ್ನು ಮಕರಂದ ಹೀರಲು ಬಂದ ದುಂಬಿಗೂ ಹೂವಿಗೂ ಹೋಲಿಸುವಾಗ, ಗಂಡನ್ನು ದುಂಬಿಗೂ ಹೆಣ್ಣನ್ನು ಹೂವಿಗೂ ಹೋಲಿಸುವ ಸಾಂಪ್ರದಾಯಿಕ ಉಪಮೆಯು ಪಲ್ಲಟವಾಗುವುದನ್ನು ಗಮನಿಸಬೇಕು. ಕುವೆಂಪು ಕಾದಂಬರಿಗಳಲ್ಲಿ ಮನುಷ್ಯರ ಸಂಬಂಧಗಳ ವಿವಿಧ ಅವಸ್ಥೆಗಳನ್ನು ಪ್ರಾಣಿ ಹಕ್ಕಿ ಕೀಟಗಳ ಚಲನವಲನಗಳ ರೂಪಕ ಉಪಮೆಗಳಲ್ಲಿಯೇ ಹಿಡಿದುಕೊಡುವ ಕಥನಕ್ರಮವಿದೆ. ಸೀತೆಯನ್ನು ರಾಮಯ್ಯ ಮದುವೆಯಾಗುತ್ತಾನೆ ಎಂಬ ವಿಷಯ ಕಿವಿಗೆ ಬಿದ್ದಾಗ, ವಿಕಾರಕೃತಿಯ ಜೇಡ ಬಂದು ಚಿಟ್ಟೆಯನ್ನು ಹಿಡಿದಂತೆ ಸೀತೆಯ ಬದುಕು ಎಂದು ಕಾದಂಬರಿ ನಿರೂಪಿಸುತ್ತದೆ. ಕೃತಿಯುದ್ದಕ್ಕೂ ಪಾತ್ರಗಳ ಮನೋಲೋಕದಲ್ಲಿ ಸಂಭವಿಸುವ ತಲ್ಲಣಗಳನ್ನು ಕೃತಿಗಳು ಸಂಕೇತ ಮತ್ತು ರೂಪಕಗಳ ಮೂಲಕ ಚಿತ್ರಿಸುತ್ತವೆ. ಈ ರೂಪಕ ಮತ್ತು ಸಂಕೇತಗಳು ಪಯಣದ ಆಯಾಮವನ್ನು ಪಡೆದುಕೊಂಡಿವೆ. ಈ ದೃಷ್ಟಿಯಿಂದ ತನ್ನ ಪ್ರಿಯತಮೆ ತಿಮ್ಮಿಯನ್ನು ಕಾಣಲು ಸಾಧ್ಯವಾದರೆ ಆಕೆಯನ್ನು ಬೆಟ್ಟಳ್ಳಿಯಿಂದ ಹಾರಿಸಿಕೊಂಡು ಬರಲು ನಿರ್ಧರಿಸಿದ ಪಯಣ ಹೊರಟ ಗುತ್ತಿಯು ವಿಚಿತ್ರವಾದ ತಳಮಳದಲ್ಲಿ ಬಿದ್ದಿರುತ್ತಾನೆ. ಆಗ ಅವನು ಕಣ್ಣಾಪಂಡಿತರ

ಮನೆಯ ಮುಂದೆ ಕುಳಿತು, ಸಗಣಿಯ ಅಥವಾ ಓಡುಹುಳು ಸಗಣಿಯ ಉಂಡೆಯನ್ನು ಸಾಗಿಸುವ ಪಯಣದ ಚಿತ್ರವನ್ನು ನೋಡುತ್ತ ಚಿಂತಿಸುತ್ತಾನೆ. ಆ ಸನ್ನಿವೇಶವು ಇಡೀ ಕಾದಂಬರಿಯಲ್ಲೇ ಅತ್ಯಂತ ಪ್ರಭಾವಶಾಲಿಯಾದ ಸನ್ನಿವೇಶವಾಗಿದೆ. 'ಮಲೆಗಳಲ್ಲಿ ಮದುಮಗಳು' ಕೃತಿಯ ಆರಂಭದಲ್ಲಿಯೇ ಈ ಸನ್ನಿವೇಶ ಕಾಣಿಸಿಕೊಳ್ಳುತ್ತದೆ. ಪ್ರಕೃತಿಯ ಭಾಗವಾಗಿರುವ ಒಂದು ಓಡುಹುಳುವಿನ ಸಾಹಸದ ಪಯಣವನ್ನು ಕಂಡು ಅದರ ಮೂಲಕ ಆತ ಸ್ಫೂರ್ತಿ ಪಡೆಯುತ್ತಾನೆ. "ಆ ಉಂಡೆ ಒಂದು ಸಣ್ಣ ದಿಬ್ಬವನ್ನು ಹತ್ತಿ ಅದರ ನೆತ್ತಿಗೆ ಬಂದೊಡನೆ ಮತ್ತೆ ಕೆಳಕ್ಕುರುಳಿತು. ಓಡುಹುಳು ಮತ್ತೆ ಅದನ್ನು ಬಳಿಸಾರಿ ತನ್ನ ಹಿಂಗಾಲುಗಳಿಂದ ತಬ್ಬಿ ಹಿಡಿದು ದಬ್ಬತೊಡಗಿತು" (ಪು.೪೯). ತನ್ನ ಆಹಾರಕ್ಕಾಗಿ ಓಡುಹುಳು ನಡೆಸುತ್ತಿರುವ ಈ ಪ್ರಯತ್ನಗಳ ಹಿಂದೆ ಎರಡು ಬಗೆಯ ಚಲನೆಗಳಿವೆ. ಮೊದಲನೆಯದು ಗುರಿ ಮುಟ್ಟಲು ಮಾಡುವ ಚಲನೆ. ಎರಡನೆಯದು ಗುರಿ ತಪ್ಪಿದಾಗ ಮತ್ತೆ ಬಿಡದೆ ಪ್ರಯತ್ನಿಸುವ ಚಲನೆ. ಓಡುಹುಳುವಿನ ಈ ಸಾಹಸದ ಪಯಣವನ್ನು ಸೂಕ್ಷ್ಮವಾಗಿ ಗಮನಿಸುವ ಗುತ್ತಿಯ ಪಯಣಕ್ಕೆ ಒಂದು ಗುರಿ ಮತ್ತು ಶಕ್ತಿ ಸಿಗುತ್ತದೆ. ಮುಂದೆ ಓಡುಹುಳುವಿನಂತೆ ತನ್ನ ಪಯಣದಲ್ಲಿ ಅಡ್ಡಿಯಾಗುವ ಸನ್ನಿವೇಶಗಳನ್ನು ದಾಟುವ ಮೂಲಕ ಗುತ್ತಿ ತಿಮ್ಮಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಇಲ್ಲಿ ಕಷ್ಟದ ಸನ್ನಿವೇಶದಲ್ಲಿ ಪ್ರಕೃತಿ ಜೀವನದ ಭಾಗವಾಗಿರುವ ಓಡುಹುಳು ಎಂಬ ಪುಟ್ಟಜೀವಿ ತನ್ನ ಪ್ರತಿಭೆ ಪ್ರಕಟಿಸಿದರೆ, ಸಮಾಜ ಜೀವನದ ಭಾಗವಾಗಿರುವ ಗುತ್ತಿ ತನ್ನ ಪ್ರತಿಭೆ ಪ್ರಕಟಿಸುತ್ತಾನೆ. ಕಾದಂಬರಿ ಈ ಕೀಟ ಮತ್ತು ಮಾನವರ ಪಾತ್ರಗಳ ಮೂಲಕ, ಅವರ ಬದುಕಿನ ಸನ್ನಿವೇಶದ ಕಷ್ಟವನ್ನೂ ಅದರಿಂದ ಅವು ಪಾರಾಗುವ ವಿಧಾನದಲ್ಲಿ ತೋರುವ ಪ್ರತಿಭೆಯನ್ನೂ ಕಾಣಿಸುತ್ತದೆ. ಕುವೆಂಪು ಕಾದಂಬರಿಗಳಲ್ಲಿ ಹೀಗೆ ಮನುಷ್ಯರ ಬದುಕಿನ ಭಾಗವಾಗಿ ಪ್ರಾಣಿ ಮತ್ತು ಕೀಟ ಜಗತ್ತಿನ ಚಲನೆಗಳು ಬಹಳ ಬರುತ್ತವೆ. ಈ ವಿವರಗಳಿಗೆ ಕಾದಂಬರಿಗಳು ಸಾಂಕೇತಿಕ ಅರ್ಥಗಳನ್ನು ನೀಡಿ ಬಳಸಿಕೊಳ್ಳುತ್ತದೆ. ಕಾನೂರಿನ ಸುಬ್ಬಮ್ಮ ಮನೆಯ ಜಗುಲಿಯ ಮೇಲೆ ಕುಳಿತಿಕೊಂಡಿದ್ದಾಗ, ಅಂಗಳದಲ್ಲಿ ನಡೆಯುವ ಪ್ರಾಣಿಜಗತ್ತಿನ ವಿದ್ಯಮಾನಗಳನ್ನು ಕಾದಂಬರಿ ವಿವರಿಸುವ ಪರಿಯಿದು:

"ಅದರ ಜಂಗಮ ಸ್ಥಿತಿಯೂ ಸಾಧಾರಣವಾಗಿ ಕುತೂಹಲಕಾರಿಯಾಗಿಯೇ ಇರುತ್ತಿತ್ತು. ಏಳೆಂಟು ನಾಯಿಗಳು. ಕೆಲವು ಚೀನಿ, ಕೆಲವು ಕಂತ್ರಿ, ಕೆಲವು ಬಿಳಿ, ಕೆಲವು ಕಪ್ಪು, ಕೆಲವು ಬಣ್ಣ ಬಣ್ಣ. ಕೆಲವು ಮಲಗಿದ್ದರೆ, ಕೆಲವು ಒಳಗೆ ಹೊರಗೆ ಸುತ್ತುವುದು. ಆಗಾಗ ಗೌಡರ ಹತ್ತಿರಕ್ಕೆ ಕಾರ್ಯಾರ್ಥವಾಗಿ ಬಿಳಿಬಟ್ಟೆಯವರೂ ಆಳುಕಾಳುಗಳೂ ಬಂದು ಹೋಗುತ್ತಿರುವುದು. ಹಿತ್ತಲು ಕಡೆಯ ತಮ್ಮ ಪ್ರಪಂಚವನ್ನು ಅತಿಕ್ರಮಿಸಿಬಂದ ಕೋಳಿಗಳು–ಹುಂಜ, ಹೇಂಟೆ, ಮರಿ ಇತ್ಯಾದಿ.. ಅಲ್ಲಲ್ಲಿ ಸುತ್ತಿ ಮೇಯುತ್ತಿದ್ದು, ಅನಿವಾರ್ಯವಾಗಿ ಅಸಹ್ಯಮಾಡಿ, ಯಾರಾದರೂ ಮನುಷ್ಯರಾಗಲಿ ನಾಯಿಗಳಾಗಲಿ ಅಟ್ಟಿದಾಗ ಮಾತ್ರವೇ ಕುಕ್ಕುಟನಾದದೊಡನೆ ಹೊರಗೆ ಧಾವಿಸುವುದು. ಮನೆಗೆ ಹತ್ತಿಕೊಂಡೇ ಇದ್ದ ಕರೆಯುವ ಕೊಟ್ಟಿಗೆಯಿಂದ ವಿಶೃಂಖಲವಾದ ದನಕರುಗಳು ಒಮ್ಮೊಮ್ಮೆ

ಸ್ಪಷ್ಟವಾದ ತಮ್ಮ ಖುರಪುಟ ಧ್ವನಿಗಳಿಂದ ಅಲ್ಲಿದ್ದವರಿಗೆ ತಮ್ಮನ್ನು ಅಟ್ಟುವಂತೆ ಎಚ್ಚರಿಕೆ ಹೇಳುತ್ತ ಬರುವುದು..ಇತ್ಯಾದಿ"(ಪು.೩೩). ಮನುಷ್ಯ ಬದುಕಿನ ಜೊತೆಯಲ್ಲೇ ಪ್ರಾಣಿ, ಪಕ್ಷಿ, ಕೀಟ ಜಗತ್ತನ್ನು ಸಮ್ಮಿಳಿತಗೊಳಿಸುತ್ತಾ ಅವುಗಳೊಳಗಿನ ಸಣ್ಣ ಸಣ್ಣ ಚಲನೆಗಳನ್ನು ಗುರುತಿಸುವುದು ಕುವೆಂಪು ಪ್ರತಿಭೆಯ ವಿಶಿಷ್ಟತೆಯಾಗಿದೆ.

೩.೮. ಪಯಣ: ದಾರ್ಶನಿಕ ಆಯಾಮ

ಎಲ್ಲಾ ಮಹತ್ವದ ಲೇಖಕರು ಒಂದು ಜೀವನತತ್ವವನ್ನು ಅಥವಾ ಲೋಕದೃಷ್ಟಿಯನ್ನು ತಮ್ಮ ಜೀವನ ಮತ್ತು ಬರಹಕ್ಕೆ ರೂಪಿಸಿಕೊಂಡಿರುತ್ತಾರೆ. ಇದನ್ನು ದರ್ಶನ ಎಂದು ಕರೆಯಬಹುದು. ಕನ್ನಡದಲ್ಲಿ ದರ್ಶನ ಎಂದರೆ (ಫಿಲಾಸಫಿ) ಲೋಕವನ್ನು ಕುರಿತ ಮೂಲಭೂತವಾದ ಸತ್ಯವನ್ನು ಇಂದ್ರಿಯಗಳ ನೆರವಿರದೆ, ಅಮೂರ್ತವಾದ ತಾತ್ವಿಕ ಚಿಂತನೆಗಳ ಮೂಲಕ ಕಂಡುಕೊಳ್ಳುವುದು. ದರ್ಶನ ಶಬ್ದವು ನೋಡುವುದು, ಅರಿತುಕೊಳ್ಳುವುದು, ಅನುಭವಕ್ಕೆ ತಂದುಕೊಳ್ಳುವುದು ಎಂಬರ್ಥವುಳ್ಳ 'ದೃಗ್' ಎಂಬ ಧಾತುವಿನಿಂದಾದ ಪದ ಇದು. ಇಲ್ಲದೇ ಇರುವುದನ್ನು ಉಂಟುಮಾಡುವುದಲ್ಲ, ಇದ್ದುದನ್ನು ಅರಿತುಕೊಳ್ಳುವುದು. ಆದರೆ ಈ ಅಮೂರ್ತ ರೂಪದ ಚಿಂತನೆಗೆ ಮೂರ್ತವಾದ ಲೋಕಾನುಭವಗಳೇ ಬುನಾದಿಯಾಗಿರುತ್ತವೆ. ಎರಡನೆಯದಾಗಿ ದರ್ಶನ ಎಂದರೆ ಮುಂದೆ ಸಂಭವಿಸುವುದನ್ನು ಈಗಲೇ ಕಾಣುವ ಮುಂಗಾಣ್ಕೆ (ವಿಶನ್) ಎಂಬ ಅರ್ಥವೂ ಕನ್ನಡದಲ್ಲಿದೆ. ದರ್ಶನದಲ್ಲಿ ಭವಿಷ್ಯದಲ್ಲಿ ರೂಪು ತಳೆಯುವ ವಿದ್ಯಮಾನವನ್ನು ವರ್ತಮಾನದಲ್ಲಿ ಕಲ್ಪಿಸಿಕೊಳ್ಳಲಾಗುತ್ತದೆ. ಕುವೆಂಪು ಕಾದಂಬರಿಗಳ ಚರ್ಚೆಯಲ್ಲಿ ದರ್ಶನಕ್ಕೆ ಇರುವ ಈ ಎರಡೂ ಅರ್ಥಗಳು ಅನ್ವಯವಾಗುತ್ತದೆ. ಕುವೆಂಪು ಮೂಲತಃ ಒಬ್ಬ ತತ್ವಶಾಸ್ತ್ರಜ್ಞರು. ಆದರೆ ಈ ತತ್ವಶಾಸ್ತ್ರೀಯತೆಯು ಸಿದ್ಧಾಂತವಾಗಿ ಬರುವುದಕ್ಕಿಂತಲೂ ಸೃಜನಶೀಲ ಕೃತಿಗಳ ಮೂಲಕ ಹೊರಹೊಮ್ಮುತ್ತದೆ. ಅವರು ಸಮಾಜವನ್ನು ಸುಧಾರಿಸಬೇಕು ಹೊಸ ಸಮಾಜ ಕಟ್ಟಬೇಕು ಎಂಬ ಮುಂಗಾಣ್ಕೆ ಸಹ ಹೊಂದಿದವರು. ಮುಖ್ಯವಾಗಿ ಮನುಷ್ಯರನ್ನು ಬೇರೆಬೇರೆ ಮಾಡುವ ಮನುಷ್ಯರಲ್ಲಿ ತರತಮ ಮಾಡುವ ಧರ್ಮ, ಜಾತಿ, ಸಂಪ್ರದಾಯಗಳಿಗೆ ವಿರೋಧವನ್ನು ಮಾಡುವವರು. ಅವರು ಹುಟ್ಟಿ ಬೆಳೆದಿದ್ದು ಮಲೆನಾಡಿನ ಪರಿಸರದಲ್ಲಿ. ಅಲ್ಲಿನ ಗಾಢ ಅನುಭವ ಲೋಕ ಅವರಿತ್ತು. ಇದಕ್ಕೆ ಪೂರಕವಾಗಿ ಮಹಾಪುರುಷರಾದ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಸ್ವಾಮಿ ಸಿದ್ದೇಶ್ವರಾನಂದ ಮುಂತಾದ ಯೋಗಿಗಳ ಚಿಂತನೆಯು ಅವರಿಗೆ ದೊರಕಿತು. ಸಾಹಿತ್ಯಕವಾಗಿ ಟಾಲ್‌ಸ್ಟಾಯ್, ವರ್ಡ್ಸ್‌ವರ್ತ್, ಶೆಲ್ಲಿ ಮುಂತಾದ ದಾರ್ಶನಿಕ ಲೇಖಕರ ಪ್ರಭಾವವೂ ಅವರ ಮೇಲಾಯಿತು. ಹೀಗಾಗಿ ದಾರ್ಶನಿಕತೆಯ ಆಯಾಮವು ಕುವೆಂಪು ಸಾಹಿತ್ಯದ ಅಂತಃಸತ್ತ್ವವೇ ಆಗಿದೆ.

ಕುವೆಂಪು ತತ್ತ್ವಶಾಸ್ತ್ರವನ್ನು ಆಸಕ್ತಿಯಿಂದ ಅಧ್ಯಯನ ಮಾಡಿದವರಾದರೂ ಅಭಿವ್ಯಕ್ತಿ ಮಾಧ್ಯಮವಾಗಿಸಿಕೊಂಡದ್ದು ಕಾವ್ಯವನ್ನು. ಅವರ ಪ್ರಕಾರ ಕಾವ್ಯವು ತತ್ವಜ್ಞಾನದ ಭಾಗವೇ ಆಗಿದೆ. ತತ್ವಜ್ಞಾನಿಯಾದ ಋಷಿಯು ಕವಿಯಾಗುತ್ತಾನೆ ಎಂಬ ಸಾಹಿತ್ಯ ಮೀಮಾಂಸೆ ಅವರದು. 'ಆನಂದಮಯ ಈ ಜಗ ಹೃದಯ' ಎಂದು ಪರಿಭಾವಿಸಿದ ಕವಿ, 'ಶಿವ ಕಾಣದೆ ಕವಿ ಕುರುಡನೊ:ಶಿವ ಕಾವ್ಯದ ಕಣ್ಣೋ!' ಎಂದು ನಂಬಿದವರು. ಲೋಕದ ಸೌಂದರ್ಯವನ್ನು ಮಾನವ ಹೃದಯದಲ್ಲಿ ಶಾಶ್ವತಗೊಳಿಸುವ ಚೈತನ್ಯದ ವಿಕಾಸದ ಮೂಲಧಾತುವಾಗಿ ಅವರಲ್ಲಿ ದರ್ಶನ ಬರುತ್ತದೆ. ಕರ್ಮಜೀವಿಯಾದ ರೈತ ಅವರಲ್ಲಿ ಚಲನಶೀಲ ಯೋಗಿಯಾಗುವುದನ್ನು ಗಮನಿಸಬೇಕು. ಇಲ್ಲಿರುವ ಯೋಗಿ ಬದುಕನ್ನು ನಿರಾಕರಿಸಿಲ್ಲ. ಬದಲಾಗಿ ದುಡಿಮೆಯ ಜೀವನವನ್ನಾಧರಿಸಿದ್ದಾನೆ. ಜಲಗಾರ, ಬೇಡ, ಶೂದ್ರರ ಪಾತ್ರಗಳನ್ನ ಇಟ್ಟುಕೊಂಡು ನಾಟಕ ಬರೆದ ಕುವೆಂಪು, ತಳಸ್ತರದ ಜನರು ಸಾಧಕರಾಗಿ ದೊಡ್ಡವರಾಗಬಹುದು ಎಂಬ ಚಲನಶೀಲತೆಯಲ್ಲಿ, ರೂಪಾಂತರದ ಪಯಣದಲ್ಲಿ ಶ್ರದ್ಧೆಯಿಟ್ಟವರು. ಪಾಪಿ ತನ್ನ ಪಾಪದ ಮೂಲವನ್ನರಿತು ಪಶ್ಚಾತ್ತಾಪದಿಂದ ಮುಕ್ತನಾಗುವ ಅವಕಾಶ ಅವರ ಪಾತ್ರಗಳಲ್ಲಿ ತುಂಬಿದೆ. 'ಕಾನೂರು ಹೆಗ್ಗಡಿತಿ'ಯಲ್ಲಿನ ಚಂದ್ರಯ್ಯ ಗೌಡ ಇದಕ್ಕೆ ನಿದರ್ಶನ. ಕುವೆಂಪು ಅವರಲ್ಲಿ ಜಡವು ಚೇತನಶೀಲವಾಗಿ ಬದಲಾಗುತ್ತದೆ. ಅವರ ಎಲ್ಲ ಕಾದಂಬರಿಗಳ ರಚನೆಯ ಹಿಂದೆ ಕೆಲಸ ಮಾಡಿರುವುದು ಈ ಪರಿವರ್ತನೆಯ ತತ್ವವೇ. ಈ ತತ್ವವು ಆಳದಲ್ಲಿ ಪಯಣವನ್ನು ಒಂದು ಚಲನಶೀಲ ಕ್ರಿಯೆಯಾಗಿ ನಂಬುತ್ತದೆ. ಜಗತ್ತಿನಲ್ಲಿ ಎಲ್ಲವೂ ಚಲನಶೀಲ ಸ್ಥಿತಿಯಲ್ಲಿರುವ ದಾರ್ಶನಿಕ ನೋಟದಲ್ಲಿ ಅವರು ಪ್ರಕೃತಿಯನ್ನು ಮನುಷ್ಯರ ಬದುಕನ್ನು ಅಲ್ಲಿನ ಪಾತ್ರಗಳನ್ನು, ಘಟನೆಗಳನ್ನು, ಪ್ರಾಣಿ–ಪಕ್ಷಿಗಳನ್ನು, ಗಿಡ–ಮರಗಳನ್ನು ಚಿತ್ರಿಸುತ್ತಾರೆ. ಚಲನೆಯೆಂಬುದು ಕೇವಲ ಘಟನೆ, ಪಾತ್ರಗಳ ಚಿತ್ರಣಕ್ಕೆ ಸೀಮಿತವಲ್ಲ. ಆ ಚಲನಶೀಲ ಸ್ಥಿತಿಯಲ್ಲಿರುವಾಗ ಇಲ್ಲಿ ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ; ಯಾವುದು ಯ:ಕಶ್ಚಿತವಲ್ಲ!. ಕಾದಂಬರಿಯಲ್ಲಿ ಕಾಣಿಸಿಕೊಳ್ಳುವ ಗುತ್ತಿ, ಮುಕುಂದಯ್ಯ, ಸುಬ್ಬಮ್ಮ, ಗಂಗೆ, ನಾಯಿ, ಓಡುಹುಳು, ಕಲ್ಲು, ಸೂರ್ಯ, ಕಾಡೆಮ್ಮೆ, ಪೀಂಚಲು ಪ್ರತಿಯೊಂದು ಪಾತ್ರವು ಮುಖ್ಯವೆಂಬ ಭಾವ ಇಲ್ಲಿನದು. ಈ ಲೋಕದಲ್ಲಿ ಬ್ರಹಾಂಡದ ಚೈತನ್ಯವು ಪಿಂಡಾಂಡದ ಚೈತನ್ಯದ ಜತೆ ಬೆರೆಯಲು ಸಾಧ್ಯವಿಲ್ಲ ಎಂದು ದ್ವೈತ ಸಿದ್ಧಾಂತ ಹೇಳಿದರೆ, ಅದ್ವೈತವು ಒಂದೇ ಚೈತನ್ಯದ ಮೂಲದಿಂದ ಬಂದ ಎರಡು ವಸ್ತುಗಳು ಮತ್ತೆ ಪರಸ್ಪರ ಕೂಡುತ್ತವೆ ಎಂದು ಹೇಳುತ್ತದೆ. ಹೀಗಾಗಿಯೇ ಕುವೆಂಪು ದರ್ಶನದಲ್ಲಿ ಮಿಲನ ಕೂಡುವಿಕೆ ವಿಕಾಸ ಇವು ಮುಖ್ಯ ತತ್ವಗಳಾಗಿವೆ. ಈ ಮಿಲನಕ್ಕೆ ಎರಡು ವಸ್ತು ಅಥವಾ ಸಂಗತಿಗಳು ಪರಸ್ಪರ ಹತ್ತಿರಕ್ಕೆ ಚಲಿಸಬೇಕು. ಇಲ್ಲಿಯೇ ಸೂಕ್ಷ್ಮವಾಗಿ ಪಯಣ ತತ್ವವಿದೆ. ಈ ಚಲನಶೀಲ ಅದ್ವೈತ ದರ್ಶನವೇ ಕುವೆಂಪು ಸಮಾಜ ಸುಧಾರಕರಾಗಲೂ ಕಾರಣವಾಯಿತು. ಭಾರತದ ಬಹುತೇಕ ಸಮಾಜ ಸುಧಾರಕರು ಅದ್ವೈತಿಗಳು ಎಂಬುದು ಗಮನಾರ್ಹ. ಸುಧಾರಣೆ ಅಥವಾ ಬದಲಾವಣೆಯಲ್ಲಿ ನಂಬಿಕೆಯಿಟ್ಟವರು. ಹಾಗಾಗಿ ಕುವೆಂಪುರವರು ಆಳದಲ್ಲಿ ನಂಬಿದ್ದ ಅದ್ವೈತ

ತತ್ವಶಾಸ್ತ್ರದ ಒಳಗೆ ಚಲನೆಯ ತತ್ವ ಅಡಗಿದೆ. ಮಾರ್ಕ್ಸ್‌ವಾದದ ಬಗ್ಗೆ ಕುವೆಂಪುರವರಿಗೆ ಒಲವಿರುವುದಕ್ಕೆ ಕಾರಣವಾದರೂ ಅದು ಸಂಘರ್ಷ ಮತ್ತು ಬದಲಾವಣೆಯ ತತ್ವದಲ್ಲಿ ನಂಬಿಕೆ ಇಟ್ಟಿದ್ದುದು. "ಕುವೆಂಪು ಚಿಂತನೆಯ ಮುಖ್ಯ ಲಕ್ಷಣ ಎಂದರೆ ಒಂದು ವಸ್ತು, ಚಿಂತನೆ ಅಥವಾ ವ್ಯಕ್ತಿಯು ಚಲನೆಗೆ ಒಳಪಡುವುದು. ಕಾಯುವಿಕೆ, ಮಾಗುವಿಕೆ, ಸಾಧನೆಯೆಂದರೆ ಬದಲಾಗುವುದು. ರೂಪಾಂತರವಾಗುವುದು; ಬರೆಹದಲ್ಲಿ ಈ ರೂಪಾಂತರವು, ಚಿಟ್ಟೆಯಲ್ಲಿ ಇರುವಂತೆ ಒಂದು ಜೈವಿಕ ಕ್ರಿಯೆಯಲ್ಲ. ಮಾನವರು ಇದಕ್ಕಾಗಿ ಪ್ರಯತ್ನ ಮಾಡಬೇಕಾಗುತ್ತದೆ."[೧೨]

ಕುವೆಂಪು ಅದ್ವೈತಿಯಾಗಿರುವುದಕ್ಕೂ ಸಮಾಜವಾದಿಯಾಗಿರುವುದಕ್ಕೂ ಹೀಗೆ ಸಂಬಂಧವಿದೆ. ಅವರು ರಶಿಯನ್ ಮಹಾಕ್ರಾಂತಿಯ ವರ್ಷದಲ್ಲಿ ಹುಟ್ಟಿದರು ಎಂಬುದು ಆಕಸ್ಮಿಕವಾಗಿದೆ. ಸಮಾಜವಾದ ಆರ್ಥಿಕ ಬದುಕಿನಲ್ಲಿ ಬದಲಾವಣೆ ತರಬಯಸಿದರೆ, ಕುವೆಂಪು ಅದಕ್ಕೆ ಆಧ್ಯಾತ್ಮಿಕ ಕ್ರಾಂತಿಯನ್ನು ಜೋಡಿಸಿದರು. ಕುವೆಂಪುರವರ ಒಟ್ಟು ದರ್ಶನದಲ್ಲೇ ಈ ಲೋಕದ ಎಲ್ಲವೂ ಚಲನಶೀಲ ಸ್ಥಿತಿಯಲ್ಲಿವೆ, ಬದಲಾಗದೆ ನಿಂತ ಎಲ್ಲವೂ ನಾಶವಾಗುತ್ತದೆ ಎನ್ನುವುದು ಆಶಯವಾಗಿ ಬೇರೂರಿದೆ. 'ಅನಿಕೇತನ' ಪದ್ಯದಲ್ಲಿ "ಎಲ್ಲಿಯೂ ನಿಲ್ಲದಿರು;ಮನೆಯನೆಂದೂ ಕಟ್ಟದಿರು; ಕೊನೆಯನೆಂದೂ ಮುಟ್ಟದಿರು; ಓ ಅನಂತವಾಗಿರು! ಓ ನನ್ನ ಚೇತನ, ಆಗು ನೀ ಅನಿಕೇತನ! ಆಗು ಆಗು" ಎಂಬಲ್ಲಿ ಈ ಬದಲಾವಣೆಯ ಧ್ವನಿ ವ್ಯಕ್ತವಾಗಿದೆ.[೧೩]

ಕುವೆಂಪು ಶೂದ್ರ ನಾಯಕನಾಗಿ ಸಮಾಜದ ಬದಲಾವಣೆಗೆ ಒಂದು ತತ್ವದರ್ಶನವನ್ನು ಕೊಟ್ಟ ಸಾಮಾಜಿಕ ನಾಯಕರು. ಅವರ ಆರಂಭದ ಲೇಖನ/ಭಾಷಣಗಳಲ್ಲಿ ಮಲೆನಾಡಿನ ಜನ ಸಾಮಾನ್ಯರ ಬಿಡುಗಡೆ ಕುರಿತ ಮಿಡಿತವಿದೆ. ಕುವೆಂಪು ಸಾಮಾಜಿಕ ನಾಯಕನಾಗಿ ತಾನೇ ಕ್ರಿಯಾಶೀಲನಾಗಿ ಬೀದಿಯಲ್ಲಿ ನಿಂತುಕೊಂಡು ಬದಲಾವಣೆಗಾಗಿ ಹೋರಾಡದೆ ಹೋದರೂ, ಅಂತಹ ಹೋರಾಟಗಳಿಗೆ ಬೇಕಾದ ಚಿಂತನೆಗಳನ್ನು ಒದಗಿಸಿದವರು. ಅವರ ಕಾದಂಬರಿಗಳು ಮೂಲತಃ ಕಲಾಕೃತಿಗಳಾದರೂ ಅವುಗಳಲ್ಲಿ ಇಂತಹ ಬದಲಾವಣೆಯ ತುಡಿತವೊಂದು ಕೆಲಸ ಮಾಡಿದೆ. ಈ ತುಡಿತವು ಪಯಣದ ವಿನ್ಯಾಸದೊಂದಿಗೆ ಜೋಡಣೆಯಾಗಿದೆ.

೩.೯. ಪಯಣ: ಕಥನತಂತ್ರ

ಕುವೆಂಪು ತಾವು ಬರೆದ ಎರಡು ಕಾದಂಬರಿಗಳಲ್ಲಿ ಮಲೆನಾಡಿನ ತಮ್ಮೆಲ್ಲ ಜೀವನಾನುಭವವನ್ನು ಧಾರೆಯೆರೆದಿದ್ದರಿಂದ ಅವು ಬಹಳ ಪರಿಣಾಮಕಾರಿಯಾಗಿ ಅಭಿವ್ಯಕ್ತಿಗೊಂಡು ಹುಟ್ಟಿದವು. ಅವರು ಮಲೆನಾಡಿನ ಜಮೀನ್ದಾರಿ ಮತ್ತು ಪುರುಷವಾದಿ ಸಮಾಜದಲ್ಲಿ, ಶೋಷಣೆ ಮೌಢ್ಯಾಚಾರ ಅನಕ್ಷರತೆಯ ಫಲವಾಗಿ ನಿರ್ಮಿತವಾಗಿದ್ದ ಬದುಕು ವಸಾಹತುಶಾಹಿ ಆಧುನಿಕತೆಯ ಪ್ರಭಾವದಿಂದ ಹೇಗೆಲ್ಲ ಸಂಚಲನೆಗೆ ಒಳಗಾಯಿತು ಎಂಬುದನ್ನು ಶೋಧಿಸಿದರು. ವಿಶೇಷವಾಗಿ ಬ್ರಿಟಿಷರ ಆಗಮನ ಹಾಗೂ ಅವರು ತಂದ ಶಿಕ್ಷಣ ಕ್ರಮದಿಂದ ಮಲೆನಾಡಿನ ಸ್ಥಗಿತ ಬದುಕು ಹೊಸಪ್ರಯಾಣಕ್ಕೆ

ಸಿದ್ಧವಾಗುವ ಚಲನಾತ್ಮಕ ಬಗೆಯನ್ನು ಶೋಧಿಸಿದರು. ಕಾದಂಬರಿಯಲ್ಲಿ ಗುತ್ತಿ ಹೂವಯ್ಯ ಮುಂತಾದ ಪಾತ್ರಗಳು ಮಾತ್ರ ಪಯಣ ಮಾಡುವುದಿಲ್ಲ. ಇಲ್ಲಿ ಧರ್ಮಗಳು ಪಯಣಿಸುತ್ತವೆ. ಮಲೆನಾಡಿನ ಸಾಂಪ್ರದಾಯಿಕ ಬದುಕು ಪಯಣಿಸುತ್ತದೆ. ಕುವೆಂಪು ಹೂವಯ್ಯ ಎಂಬ ಪಾತ್ರವನ್ನು ಸೃಷ್ಟಿಸಿ ಅದನ್ನು ಈ ಮಲೆನಾಡಿನ ಹೊಸ ಪಯಣಕ್ಕೆ ಸಾಕ್ಷಿ ಪ್ರಜ್ಞೆಯಾಗಿಸಿದ್ದಾರೆ. ಅವರು ಚಿತ್ರಿಸಿರುವ ಮಲೆನಾಡಿನ ಕಾಲಘಟ್ಟವು, ಭಾರತವು ವಸಾಹತುಶಾಹಿ ಆಳ್ವಿಕೆಗೆ ಒಳಗಾಗುವ ಹಾಗು ಸ್ವಾತಂತ್ರ್ಯ ಚಳುವಳಿಗಳ ಮೂಲಕ ಹೊರಬರುವ ಪಯಣವನ್ನು ಆರಂಭಿಸಿದ ಕಾಲವೂ ಆಗಿದೆ. ಇಲ್ಲಿ ಸ್ತ್ರೀಯರ ಬದುಕು ಸಹ ಚಲನಶೀಲತೆ ಒಳಗಾಗುತ್ತದೆ. ಇದೇ ಸಂದರ್ಭದಲ್ಲಿ ಕುವೆಂಪು ಕಾದಂಬರಿಗಳ ಮೇಲೆ ಚಿಂತನೆ ಮಾಡಿರುವ ವಿಮರ್ಶಕರಾದ ಗುರುಪಾದ ಮರಿಗುದ್ದಿಯವರ ಅಭಿಪ್ರಾಯ ಉಲ್ಲೇಖನೀಯವಾಗಿದೆ."ಹೆಗ್ಗಡಿತಿ'ಯ ಪ್ರಮುಖ ಘಟನೆಗಳೆಲ್ಲ ಮನೆಯ ಒಳಗಡೆ ನಡೆದು ಹೋದರೆ, 'ಮದುಮಗಳು'ವಿನ ಪ್ರಮುಖ ಘಟನೆಗಳೆಲ್ಲ ಮನೆಯ ಹೊರಗೆ, ಎಂದರೆ ಕಾಡು, ಬಯಲುಗಳಲ್ಲಿ, ಅದೂ ಪ್ರಯಾಣ ಸಂದರ್ಭಗಳಲ್ಲಿ ನಡೆದು ಹೋಗುತ್ತದೆ. ಆರಂಭದ ಗುತ್ತಿಯ ಪ್ರಯಾಣದಲ್ಲಿಯೇ ಕಾದಂಬರಿಯ ಮಹತ್ವದ ಬೀಜಗಳಿವೆ."[೧೪] ಈ ಗಮನಿಸುವಿಕೆ ಮಹತ್ವದ್ದಾಗಿದೆ. ಕುವೆಂಪು ತಮ್ಮ ಮೊದಲ ಕಾದಂಬರಿಯನ್ನು ಮನೆಕೇಂದ್ರಿತವಾಗಿ ರಚಿಸಿದರು ಹಾಗೂ ಎರಡನೇ ಕಾದಂಬರಿಯನ್ನು ಕಾಡು ಬಯಲು ಕೇಂದ್ರಿತವಾಗಿ ರಚಿಸಿದರು ಎನ್ನುವುದು ನಿಜವಾದರೂ, ಎರಡರಲ್ಲೂ ಪಯಣದ ಆಯಾಮಗಳಿವೆ. ಆದರೆ ಬಯಲು ಮತ್ತು ಕಾಡುಗಳು ಸಹಜವಾಗಿಯೇ ತಿರುಗಾಟಕ್ಕೆ ಹೆಚ್ಚಿನ ಸ್ಪೇಸ್ ಒದಗಿಸುವುದರಿಂದ, ಅಲ್ಲಿ ಹೆಚ್ಚಿನ ತಿರುಗಾಟದ ವಿನ್ಯಾಸಗಳಿವೆ. ಹೀಗಾಗಲು ಇನ್ನೊಂದು ಕಾರಣವೆಂದರೆ, ಮೊದಲನೇ ಕಾದಂಬರಿಯ ನಾಯಕ ಹೂವಯ್ಯ ಅಂತರ್ಮುಖಿಯೂ ಧ್ಯಾನಸ್ಥ ಗುಣದವನೂ ಆಗಿರುವುದು. ಎರಡನೇ ಕಾದಂಬರಿಯ ನಾಯಕ ಗುತ್ತಿಯು ದುಡಿವ ವರ್ಗಕ್ಕೆ ಸೇರಿದ್ದು, ಗೌಡರುಗಳ ದೂತನಾಗಿ ಕೆಲಸ ಮಾಡುವುದು.

'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಎರಡು ಕೃತಿಗಳ ಆರಂಭವು ಪಯಣದ ಮೂಲಕವೇ ಆರಂಭವಾಗುವುದನ್ನು ಈಗಾಗಲೇ ಗಮನಿಸಲಾಗಿದೆ. 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ಗುತ್ತಿಯೊಂದಿಗೆ ಪಯಣ ಆರಂಭವಾದರೆ, 'ಕಾನೂರು ಹೆಗ್ಗಡಿತಿ'ಯಲ್ಲಿ ಹೂವಯ್ಯನ ಮೂಲಕ ಕಾನೂರಿಗೆ ಪಯಣ ಬೆಳೆಸುವ ಮೂಲಕ ಕಥಾವಸ್ತು ಬಿಚ್ಚಿಕೊಳ್ಳುತ್ತದೆ. ಇದು ಪಯಣ ಅಥವಾ ಚಲನೆಯೆ ಕಾದಂಬರಿಗಳ ಜೀವಾಳ ಎಂಬುದನ್ನು ಮೊದಲಿಗೆ ಸೂಚಿಸುವ ಸಂಗತಿ. ಈ ಪಯಣ ಅಥವಾ ಚಲನೆಗಳ ಮೂಲಕ ಪಾತ್ರ, ಘಟನೆ, ಸನ್ನಿವೇಶಗಳಲ್ಲಿ ಪರಿವರ್ತನೆಗಳು ಧನಾತ್ಮಕ ಅಥವಾ ಋಣಾತ್ಮಕವಾಗಿ ಸಾಗುತ್ತ ಹೋಗುತ್ತವೆ. ಪಯಣವು ಭೌತಿಕವಾಗಿ, ಮಾನಸಿಕವಾಗಿ, ಆಧ್ಯಾತ್ಮಿಕವಾಗಿ ಹೀಗೆ ಅನೇಕ ಸ್ತರಗಳಲ್ಲಿ ಅರ್ಥವನ್ನು ಪಡೆದುಕೊಂಡು ಕಾದಂಬರಿಯಲ್ಲಿ ಕ್ರಿಯಾಶೀಲವಾಗುತ್ತದೆ. ಈಗ ನಿರ್ಜೀವ ವಸ್ತುಗಳು ಕೂಡ ತಮ್ಮ ಅನುಭವವನ್ನು ಸಿಂಹಾವಲೋಕನ ಕ್ರಮದಲ್ಲಿ ನೆನೆಯುವ ತಂತ್ರವನ್ನು ಗಮನಿಸಬಹುದು. 'ಕಾನೂರು ಹೆಗ್ಗಡಿತಿ'ಯಲ್ಲಿ 'ಕಡೆಗೋಲು

ಕಂಬದ ಸಾಕ್ಷಿಯಲ್ಲಿ' ಎಂಬ ಅಧ್ಯಾಯವಿದೆ. ಅಲ್ಲಿ ಕಂಡುಬರುವ ಮೊಸರು ಕಡೆಯುವ ಚಲನಶೀಲತೆಯ ಭಾಗವಾಗಿರುವ ಕಡೆಗೋಲು ಕಾನೂರು ಮನೆಯ ಚರಿತ್ರೆಗೆ ಸಾಕ್ಷೀಪ್ರಜ್ಞೆಯ ಪ್ರತೀಕವಾಗಿದೆ. ಅದರ ಮೂಲಕ ಕಾದಂಬರಿ ಆ ಮನೆಯಲ್ಲಿ ಶತಮಾನಗಳ ಕಾಲದಿಂದ ನಡೆದ ಜಗಳ ಪ್ರೇಮ ರಾಜಿ ಇತ್ಯಾದಿ ಮಾನವೀಯ ಸಂಬಂಧಗಳ ನಿಗೂಢ ಸಂಗತಿಗಳನ್ನು ಹಿಂಪಯಣದ ತಂತ್ರದ ಮೂಲಕ ನೆನೆಯಲು ಯತ್ನಿಸುತ್ತದೆ. ಅದು ಕಾನೂರು ಮನೆಯ ವ್ಯಕ್ತಿಗಳ ಚರಿತ್ರೆಯನ್ನು ಪುರಾಣದ ವ್ಯಕ್ತಿಗಳೊಂದಿಗೆ ಬೆಸೆಯುತ್ತದೆ:

"ಅಲ್ಲಿ ಅನೇಕ ತಲೆಮಾರುಗಳು ತಿಂದುಂಡು ಹೋಗಿದ್ದವು. ಆ ಮೂರಡಿಯ ಎತ್ತರದ ಕಡೆಗೋಲು ಕಂಬವು ಶತಮಾನಗಳಿಂದ ಸಾಕ್ಷಿಯಾಗಿ ನಿಂತಿತ್ತು. ಎಷ್ಟು ಜನ ಹೆಣ್ಣುಗಳು ಅದರ ಮುಂದೆ ಕುಳಿತು ಪ್ರಾತಃಕಾಲದಲ್ಲಿ ಮೊಸರು ಕಡೆದಿದ್ದಾರೆ! ಅದಕ್ಕೆ ಎಷ್ಟು ಕೋಮಲ ಕರಗಳ ಸ್ಪರ್ಶವಾಗಿದೆ! ಎಷ್ಟು ಕಂಠಗಳು, ಎಷ್ಟು ರೂಪಗಳು, ಎಷ್ಟು ವಿಧವಾದ ಸಂಭಾಷಣೆಗಳು, ಎಷ್ಟು ಕ್ಷುದ್ರ ಕಲಹಗಳು ಅದಕ್ಕೆ ತಿಳಿದಿವೆ! ವಾಸುವಿನ ತಾಯಿ, ಚಂದ್ರಯ್ಯಗೌಡರ ತಾಯಿ, ಅವರ ಅಜ್ಜನ ತಾಯಿ, ಅವರ ಅಜ್ಜನಜ್ಜನಜ್ಜನ ತಾಯಿ–ಎಲ್ಲರೂ ಪರಿಚಿತರೂ ಆ ಕಡೆಗೋಲು ಕಂಬಕ್ಕೆ! ಆ ಕಡೆಗೋಲು ಕಂಬಕ್ಕೆ ಎಲ್ಲಿಯಾದರೂ ಮಾತಾಡುವ ಶಕ್ತಿ ಬಂದರೆ ಎಷ್ಟು ಗುಟ್ಟುಗಳು ರಟ್ಟಾಗಿಹೋಗುತ್ತವೆ! ಎಷ್ಟು ಸ್ನೇಹ ಪ್ರೇಮಗಳು ನುಚ್ಚುನೂರಾಗಿ ಮಣ್ಣುಗೂಡುತ್ತವೆ! ಎಷ್ಟು ದ್ವೇಷ ಮಾತ್ಸರ್ಯಗಳು ಹಾಳಾಗಿ, ಮತ್ತೆ ಸ್ನೇಹ ಶಾಂತಿಗಳು ಮೂಡುತ್ತವೆ! ಅದಕ್ಕೆಲ್ಲಿಯಾದರೂ ಬಾಯಿ ಬಂದರೆ ದೇವರೆ ಗತಿ! ರಾಮಾಯಣ ಮಹಾಭಾರತಗಳಿಗಿಂತಲೂ ದೊಡ್ಡ ಪುರಾಣವಾಗಿ ಹೋಗುತ್ತದೆ!" (ಪು.೪೭)

ಅಡಿಗೆ ಮನೆಯೊಳಗಿನ ಕಡೆಗೋಲು ಕಂಬದ ಮೂಲಕ ಹಲವಾರು ತಲೆಮಾರುಗಳ ಹಿಂದಕ್ಕೆ ಕಾಲ್ಪನಿಕವಾಗಿ ಚಲಿಸಿ ಅಲ್ಲಿನ ಮಹಿಳೆಯರ ಸುಖದುಃಖಗಳನ್ನು ನೆನೆಯುವ ಕಾದಂಬರಿ ತಂತ್ರವು, ಮಾನಸಿಕ ಪಯಣದ ಸ್ತರದಿಂದ ಕೂಡಿದೆ. ಮಾತಿಲ್ಲದೆ ಮೌನವಾಗಿರುವ ಜಡ ಕಡೆಗೋಲು ಒಂದೊಮ್ಮೆ ಮಾತು ಬಂದರೆ ಹೇಳುವ ಈ ಮನುಷ್ಯರ ಸುಖದುಃಖಗಳ ಕಥನವು ಪುರಾಣ ಮಹಾಕಾವ್ಯಗಳಿಗಿಂತಲೂ ಇತಿಹಾಸದ ಕಥನಕ್ಕಿಂತಲೂ ಮಹತ್ತ್ವವಾದವು ಎಂದು ಕಾದಂಬರಿ ಸೂಚಿಸುತ್ತದೆ. ಇದು ಕಥನವು ಕಾಲದ ದೃಷ್ಟಿಯಿಂದ ವರ್ತಮಾನ ಮತ್ತು ಭೂತಗಳ ನಡುವೆ ಮಾಡುವ ಕಾಲ್ಪನಿಕ ಯಾನವಾಗಿದೆ.

ಕಾಲದ ದೃಷ್ಟಿಯಿಂದ ಕುವೆಂಪು ತಮ್ಮ ಭೂತಕಾಲದ ಅಂದರೆ ಬಾಲ್ಯದ ಅನುಭವವನ್ನು ಸಾಹಿತ್ಯದೊಳಗೆ ಅತ್ಯಂತ ಹೆಚ್ಚು ದುಡಿಸಿಕೊಂಡಿರುವ ಪ್ರಕಾರಗಳಲ್ಲಿ ಆತ್ಮಚರಿತ್ರೆಯೂ ಒಂದು. ಅವರ 'ನೆನಪಿನ ದೋಣಿಯಲ್ಲಿ' ಲೇಖಕರು ತಮ್ಮ ವೃದ್ಧಾಪ್ಯದಲ್ಲಿ ಕಾಲಪ್ರವಾಹದಲ್ಲಿ ಹಿಂದಕ್ಕೆ ಯಾನ ಮಾಡಿ ಅನುಭವಗಳನ್ನು ಹುಡುಕಿ ಶೋಧಿಸುವ ಕೃತಿಯಾಗಿದೆ. ಆದರೆ ಕುವೆಂಪು ಕಥನಕ್ರಮದ ವಿಶಿಷ್ಟತೆ ಇರುವುದು ನಿರ್ಜೀವ ವಸ್ತುವಿನೊಳಗೂ ಚೇತನವನ್ನು ಆವಾಹಿಸಿ, ಅದು

ತನ್ನ ಅನುಭವಗಳನ್ನು ಕಾಲಪ್ರವಾಹದಲ್ಲಿ ಹಿಂದಕ್ಕೆ ಯಾನಮಾಡಿ ಕಂಡುಕೊಳ್ಳುವ ಕಲ್ಪನೆಯನ್ನು ಅಳವಡಿಸಿಕೊಂಡಿರುವುದು. ಅವರಲ್ಲಿ ಜಡವಸ್ತುವೂ ಕೂಡ ಹಲವು ತಲೆಮಾರುಗಳ ಹಿಂದಕ್ಕೆ ಚಲಿಸಿ ತನ್ನ ಇತಿಹಾಸದ ಪುಟಗಳನ್ನು ಹೇಳುವ ಪಾತ್ರವಾಗಿ ಬಿಡುತ್ತದೆ. 'ಶಿಲಾತಪಸ್ವಿ' ಕವನದಲ್ಲಿ ಬಂಡೆಗಲ್ಲು ವರ್ತಮಾನದಲ್ಲಿ ನಿಂತು ತನ್ನ ಭವಿಷ್ಯದ ದಿನಗಳನ್ನು ಕಲ್ಪಿಸಿಕೊಂಡರೆ, ಕಡೆಗೋಲು ವರ್ತಮಾನದಲ್ಲಿ ನಿಂತು ತನ್ನ ಗತಕಾಲದ ದಿನಗಳ ಅನುಭವಗಳನ್ನು ಕಲ್ಪಿಸಿಕೊಳ್ಳುವ ಸಂಗತಿ ಬರುತ್ತದೆ.

ಕುವೆಂಪು ಕಾದಂಬರಿಗಳಲ್ಲಿ ನೈತಿಕ ಎತ್ತರದಲ್ಲಿರುವವರು ನೈತಿಕವಾಗಿ ಪತನವಾಗುವ ಅಥವಾ ನೈತಿಕವಾಗಿ ಪತನದಲ್ಲಿರುವವರು ನೈತಿಕವಾಗಿ ಮೇಲೇಳುವ ಎರಡೂ ಬಗೆಯ ಚಲನೆಗಳು ಪಾತ್ರಗಳಲ್ಲಿ ಕಂಡುಬರುತ್ತದೆ. ಇದು ವ್ಯಕ್ತಿತ್ವದ ಆಲೋಚನಕ್ರಮದಲ್ಲಿ ಆಗುವ ಪಲ್ಲಟದ ಪಯಣದ ವಿನ್ಯಾಸವಾಗಿದೆ. 'ಕಾನೂರು ಹೆಗ್ಗಡಿತಿ'ಯಲ್ಲಿ ತಮ್ಮ ಸಿಟ್ಟು ಸಣ್ಣತನ ಕ್ರೌರ್ಯ ದಬ್ಬಾಳಿಕೆಯ ವರ್ತನೆಗಳಿಂದ ನೈತಿಕ ಪತನಗೊಳ್ಳುವ ಚಂದ್ರಯ್ಯ ಗೌಡರು, ಕಾದಂಬರಿಯ ಕೊನೆಯ ಘಟ್ಟದಲ್ಲಿ ತಮ್ಮೆಲ್ಲ ಸಣ್ಣತನವನ್ನು ಮೀರಿ ವ್ಯಕ್ತಿತ್ವದ ಘನತೆಯನ್ನು ಪಡೆಯುತ್ತಾರೆ. ಆರಂಭದ ಘಟ್ಟದಲ್ಲಿ ಹೂವಯ್ಯನ ಸಂಗದಿಂದ ನೈತಿಕವಾಗಿ ಎತ್ತರವಿರುವ ರಾಮಯ್ಯನ ಪಾತ್ರವು ಸೀತೆಯ ಮದುವೆ ಪ್ರಕರಣದ ಬಳಿಕ ನೈತಿಕ ಕುಸಿತ ಕಾಣುತ್ತದೆ. ಆದರೆ ಈ ಕುಸಿತದಿಂದ ಮತ್ತೆ ಮೇಲೇಳುವ ಯತ್ನವಾಗಿ ಅವನು ಹೂವಯ್ಯನಿಗೆ ಕ್ಷಮೆ ಕೋರುವ ಪತ್ರ ಬರೆದು, ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಸುಬ್ಬಮ್ಮ ಕಾನೂರಿಗೆ ಬಂದು ಒಡತಿಯಾಗಿ ಮೆರೆದವಳು, ಕೊನೆಯಲ್ಲಿ ಸೇರೆಗಾರನ ಸಹವಾಸದಿಂದ 'ನೈತಿಕ'ವೆಂದು ಸಾಂಪ್ರದಾಯಿಕ ಸಮಾಜ ಕರೆಯುವ ಪತನ ಕಾಣುವ ದುರಂತ ಪಾತ್ರವಾಗಿದೆ. ಇದೇ ರೀತಿ ಅನೇಕ ಪಾತ್ರಗಳು ಆರ್ಥಿಕ ದುಸ್ಥಿತಿಯಿಂದ ಸುಸ್ಥಿತಿಗೆ ಮೇಲುಚಲನೆ ಪಡೆಯುತ್ತವೆ. ಕೆಲವು ಕುಟುಂಬಗಳು ಇದಕ್ಕೆ ವಿರುದ್ಧವಾಗಿ ಉಚ್ಚಸ್ಥಿತಿಯಿಂದ ಕೆಳಸ್ಥಿತಿಗೆ ಹೋಗುತ್ತವೆ. ಹೀಗೆ ಪಾತ್ರಗಳು ನಾನಾ ಬಗೆಯಲ್ಲಿ ಬದುಕಿನಲ್ಲಿ ಏರುಪೇರು ಅನುಭವಿಸುವುದು ಕೂಡ ಪಯಣದ ಬಗೆಯಾಗಿದೆ. ಈ ಬಗೆಯನ್ನು ಕುವೆಂಪು ಕಾದಂಬರಿಗಳು ಒಂದು ತಂತ್ರವಾಗಿ ಹಿಡಿದುಕೊಡುತ್ತವೆ.

ಕುವೆಂಪು ಕಾದಂಬರಿಗಳಲ್ಲಿ ಪಯಣಕ್ಕೆ ಪೂರಕವಾದ ಕೆಲವು ಅನೇಕ ಶಬ್ದಗಳನ್ನು ಬಳಕೆಯಾಗಿವೆ. ಅವುಗಳಲ್ಲಿ ಮುಖ್ಯವಾದವು ಪಯಣ, ಪ್ರಯಾಣ, ಚಲನೆ, ಯಾನ, ಯಾತ್ರೆ ಇತ್ಯಾದಿ. ಇವಕ್ಕೆ ಪೂರಕವಾಗಿ ಹಾದಿ, ದಾರಿ, ಮಾರ್ಗ ಮುಂತಾದ ಪಥಸೂಚಕ ಶಬ್ದಗಳಿವೆ. ಪಯಣದ ಕ್ರಿಯಾರೂಪ ಸೂಚಿಸುವ ಹಾರು, ಹೋಗು, ಬರು, ಸಾಗು, ತಲುಪು ಇತ್ಯಾದಿ ಧಾತುಗಳಿವೆ. ಹೀಗೆ ಪಯಣವನ್ನು ಅದಕ್ಕೆ ಪೂರಕವಾದ ಅನೇಕ ಪರಿಭಾಷೆಗಳ ಮೂಲಕ ಕಾದಂಬರಿಗಳು ವಿಸ್ತರಿಸುತ್ತವೆ. ಕುವೆಂಪು ಜನ್ಮಾಂತರ ಮತ್ತು ಟೆಲಿಪತಿ (ದೂರದಲ್ಲಿರುವ ವ್ಯಕ್ತಿಗಳ ಮನಸ್ಸನ್ನು ಓದುವ ಒಂದು ಮನೋವೈಜ್ಞಾನಿಕ ವಿಧಾನ)ಗಳಲ್ಲಿ ನಂಬಿಕೆಯಿದ್ದವರು. ಹೀಗಾಗಿ ಅವರ ಕಾದಂಬರಿಗಳಲ್ಲಿ ಯಾವುದೋ ಜನ್ಮದಲ್ಲಿ ನಿರ್ದಿಷ್ಟ ಸಂಬಂಧ ಪಡೆದಿದ್ದ ವ್ಯಕ್ತಿ ಇನ್ನೊಂದು

ಜನ್ಮದಲ್ಲಿ ಹುಟ್ಟಿಬರುವ ಪ್ರಸಂಗಗಳೂ ಇವೆ. ಸುಬ್ಬಣ್ಣ ಹೆಗ್ಗಡೆಯವರು ದೇವಯ್ಯ-ದೇವಮ್ಮ ದಂಪತಿಗಳಿಗೆ ಹುಟ್ಟಿದ ಮಗುವನ್ನು ಹಿಂದಿನ ಜನ್ಮದ ತಮ್ಮ ಬಂಧುವೊಬ್ಬರ ಮರುಜನ್ಮ ಎಂದು ಹೇಳುವ ಸನ್ನಿವೇಶವಿದೆ. ಕುವೆಂಪು ಅವರಿಗೆ ವಿಭೂತಿ ಪುರುಷರಾದವರು ದೂರದಲ್ಲಿರುವ ವ್ಯಕ್ತಿಗಳ ಮನಸ್ಸನ್ನು ಓದುವ ಮತ್ತು ಅವರ ಸಂಕಟ ಪರಿಹರಿಸುವ ಟೆಲಿಪತಿಯ ಬಗ್ಗೆಯೂ ನಂಬಿಕೆಯಿತ್ತು. ಈ ನಂಬಿಕೆಯ ಭಾಗವಾಗಿ, 'ಮದುಮಗಳು' ಕಾದಂಬರಿಯಲ್ಲಿ ಚಿನ್ನಮ್ಮಳು ಮಲೆನಾಡಿನ ಕಾಡಮೂಲೆಯಲ್ಲಿರುವ ಮಾರಿಗುಡಿಯ ಮುಂದೆ ಆರ್ತಳಾಗಿ ತನ್ನ ಪ್ರಿಯತಮನನ್ನು ಸೇರಲು ಮಾಡುವ ಪ್ರಾರ್ಥನೆಯು ದೂರದ ಬಂಗಾಳದ ದೇಶದ ದಕ್ಷಿಣೇಶ್ವರದಲ್ಲಿರುವ ಒಬ್ಬ ಯೋಗಿಗೆ ತಿಳಿದು ಆತ ಆಕೆಯ ಕಷ್ಟಕ್ಕೆ ಒದಗುವ ಸನ್ನಿವೇಶವು ಬರುತ್ತದೆ.[೧೫] ಈ ಜನ್ಮಾಂತರ ಮತ್ತು ಟೆಲಿಪತಿಗಳ ಕುವೆಂಪು ಅವರ ದಾರ್ಶನಿಕ ನಂಬಿಕೆಯು ಕಥೆಯ ವಿಭಿನ್ನ ಸನ್ನಿವೇಶಗಳಲ್ಲಿ ಜೋಡಿಸುವ ತಂತ್ರವನ್ನು ಕಾದಂಬರಿ ಮಾಡುತ್ತದೆ. ಮೇಲ್ಕಾಣಿಸಿದ ಎರಡೂ ಸನ್ನಿವೇಶಗಳು ಆಳದಲ್ಲಿ ಮನಸ್ಸು ಮತ್ತು ಜೀವಗಳು ಮಾಡುವ ಪಯಣದ ವಿನ್ಯಾಸವನ್ನು ಒಳಗೊಂಡಿವೆ.

ಕುವೆಂಪುರವರ ಎರಡು ಕಾದಂಬರಿಗಳಲ್ಲಿ ಕಂಡುಬರುವ ಗುತ್ತಿ ಮುಕುಂದಯ್ಯ ಮಹಾಚಾರಣಿಗರು. ಇದರಂತೆ ಕಾರಂತರ 'ಬೆಟ್ಟದ ಜೀವ', 'ಅಳಿದ ಮೇಲೆ' ಕೃತಿಗಳಲ್ಲಿ ಬರುವ ಶಿವರಾಮಯ್ಯ, ಕಾರಂತ ಎಂಬ ನಿರೂಪಕ ಪಾತ್ರಗಳು ಹಾಗೂ ಇವುಗಳ ನಾಯಕರಾದ ಗೋಪಾಲಯ್ಯ , ಯಶವಂತರಾಯರು ಸಹ ಚಾರಣಿಗ ಪಾತ್ರಗಳು. ರಾವಬಹದ್ದೂರರ 'ಗ್ರಾಮಾಯಣ' ಕೃತಿಯಲ್ಲಿ ಬರುವ ದಾದಾ ಕೂಡ ಬಹಳ ತಿರುಗಾಟ ಮಾಡುವವನು. ಇವರೆಲ್ಲರೂ ದೈಹಿಕವಾಗಿ ಮತ್ತು ಮಾನಸಿಕವಾಗಿ ಚಲನೆ ಮಾಡುವ ಮೂಲಕ ಹೊಸ ಅನುಭವವನ್ನು ಪಡೆಯುತ್ತಾರೆ. ಕಡೆಗೆ ತಮ್ಮ ಆಲೋಚನಕ್ರಮವನ್ನು ಬದಲಿಸಿಕೊಳ್ಳುವ ತಾತ್ವಿಕ ರೂಪಾಂತರ ಪಡೆಯುತ್ತಾರೆ. ವಿಶೇಷವೆಂದರೆ, ಹೆಚ್ಚು ಹೊರಜಗತ್ತಿನೊಳಗೆ ತಿರುಗಾಟ ಮಾಡದ ಮನೆಗೆ ಸೀಮಿತರಾದ ಮಹಿಳೆಯರಲ್ಲೂ ಈ ಚಾರಣ ಮತ್ತು ಹೊಸ ಅನುಭವದ ಮುಖಾಮುಖಿಯ ಆಯಾಮವಿದೆ. ದೊಡ್ಡಹೆಗ್ಗಡಿತಿ, ದೇವಯ್ಯನ ಹೆಂಡತಿ ದೇವಮ್ಮ, ಅವನ ತಾಯಿ, ಹೂವಯ್ಯನ ತಾಯಿ ನಾಗಮ್ಮ, ಸೀತೆಯ ತಾಯಿ ಇವರ ಹೆಚ್ಚು ಮನೆಗೆ ಸೀಮಿತರಾದವರು. ಆದರೆ ಚಿನ್ನಮ್ಮ, ಸುಬ್ಬಮ್ಮ, ಗಂಗೆ, ತಿಮ್ಮಿ, ಪಿಂಚಲು, ಸೇಸಿ ಇವರು ಮನೆಯಿಂದಾಚೆ ಹೊರಗೆ ಚಲಿಸುವ ಮೂಲಕ ಅನುಭವ ಪಡೆಯುವವರು. ಇದಕ್ಕೆ ಇವರ ವರ್ಗ ಮತ್ತು ವಯಸ್ಸು ಕಾರಣವಾಗಿದೆ. ಹೀಗೆ ಕಥಾವಸ್ತುವಿನೊಳಗೆ ದೈಹಿಕ ಓಡಾಟ ಮಾಡುವ ಅನೇಕ ಪಾತ್ರಗಳ ಮೂಲಕವೇ ಕಥೆ ಬಿಚ್ಚಿಕೊಳ್ಳುವ ತಂತ್ರವು ಕಾದಂಬರಿಯ ಓಟಕ್ಕೆ ಕಾರಣವಾಗಿದೆ. ಈ ತಂತ್ರವು ಪಯಣ ಅಥವಾ ಚಲನೆಗೂ ಅನುಭವಕ್ಕೂ ಇರುವ ಆಂತರಿಕ ಸಂಬಂಧವನ್ನು ಸಾಬೀತುಪಡಿಸುತ್ತದೆ. ವಿಶೇಷವೆಂದರೆ ಈ ತಿರುಗಾಟ ಮಾಡುವ ಹೆಚ್ಚಿನ ಪಾತ್ರಗಳು ಹೊಸಹೊಸ ಅನುಭವಕ್ಕಾಗಿ ತುಡಿಯುತ್ತವೆ. ಹೊಸ ಅನುಭವ ಪಡೆದು ತಮ್ಮ ಆಲೋಚನೆಗಳನ್ನು ಬದಲಾಯಿಸಿಕೊಳ್ಳುತ್ತವೆ. ಒಂದು

ಪಯಣವು ಇನ್ನೊಂದು ಪಯಣಕ್ಕೆ ಪ್ರೇರಣೆ ನೀಡುವ ತಂತ್ರವನ್ನು ಕುವೆಂಪು ಬಳಸುತ್ತಾರೆ. ಒಬ್ಬರ ಪರವಾಗಿ ಇನ್ನೊಬ್ಬರು ಪಯಣ ಮಾಡುವ ತಂತ್ರವೂ ಇಲ್ಲಿದೆ. ಇದರಂತೆ ಕಾರಂತರ 'ಅಳಿದ ಮೇಲೆ' ಕಾದಂಬರಿಯಲ್ಲಿ ಅದರ ನಾಯಕನಾದ ಯಶವಂತರಾಯರ ಡೈರಿಯನ್ನು ಓದುವ ಮೂಲಕ ನಿರೂಪಕ ಪಯಣ ಬೆಳೆಸಿ ಅನುಭವ ಪಡೆಯುವ, ಜೀವನ ದರ್ಶನ ಪಡೆಯುವ ಒಂದು ತಂತ್ರವು ಬಳಕೆಯಾಗಿದೆ. ಹೀಗೆ ಕನ್ನಡದ ಪ್ರಮುಖ ಕಾದಂಬರಿಕಾರರಾದ ಕುವೆಂಪು ಹಾಗೂ ಕಾರಂತರು, ತಮ್ಮ ಕಥನತಂತ್ರದ ಭಾಗವಾಗಿಯೂ ದರ್ಶನದ ಭಾಗವಾಗಿಯೂ ಪಯಣದ ತಂತ್ರವನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ.

ಕುವೆಂಪು ಕಾದಂಬರಿಗಳು ವಿವರ ಸಮೃದ್ಧವಾಗಿವೆ. ಸಾಮಾನ್ಯವೆಂದು ಕಾಣುವ ಆ ವಿವರಗಳ ಮೂಲಕವೇ ಹೊಸ ಅರ್ಥಗಳನ್ನು ಅವು ಹುಟ್ಟಿಸುತ್ತವೆ. 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಗಾಡಿಯ ಪಯಣ ಮಾಡುವಾಗ ಗಾಡಿಯ ಹಿಂಭಾಗದಲ್ಲಿದ್ದ ಪುಟ್ಟಣ್ಣ ತಾಂಬೂಲವನ್ನು ಉಗುಳುವ ಸನ್ನಿವೇಶ ಗಮನಿಸಬೇಕು: "ಅವನು ಎರಡು ಮೂರು ನಿಮಿಷ ಗಳಿಗೊಂದಾವರ್ತಿ ಪಿಚಕ್ಕನೆ ಉಗುಳಲು ಆ ರಕ್ತಾರುಣ ಲಾಲಾಜಲಪಿಂಡವು ಹನಿಹನಿ ಯಾಗದೆ ಧಾರೆಧಾರೆಯಾಗದೆ ಮುದ್ದೆಮುದ್ದೆಯಾಗಿ ನೆಗೆದು ರೆಸ್ತೆಯ ಕೆಂಧೂಳಿಯನ್ನು ತಾಗಿದ ಕೂಡಲೆ ಇಂಗಿಹೋಗಿ ಸಣ್ಣ ಸಣ್ಣ ಕೆಂಪು ಮಣ್ಣಿನ ಉಂಡೆಗಳನ್ನು ರಚಿಸುತ್ತಿತ್ತು. ರಸ್ತೆಯಲ್ಲಿ ಚಕ್ರಗಳ ಸಮದೂರವಾದ ಸ್ಫುಟವಾದ ಅವಿಚ್ಛಿನ್ನ ರೇಖಾಮುದ್ರೆ ಗಾಡಿ ಚಲಿಸಿದಂತೆಲ್ಲ ಅದನ್ನು ಸರ್ಪಗಮನದಿಂದ ಹಿಂಬಾಲಿಸುವಂತಿತ್ತು"(ಪು.೧೨). ಪುಟ್ಟಣ್ಣನ ಪಾತ್ರ ಸ್ವಭಾವವನ್ನು ತಿಳಿಯಲು ಈ ವರ್ಣನೆ ಸಹಾಯ ಮಾಡುವುದಿಲ್ಲ ಅಥವಾ ಕಥಾವಸ್ತು ಮತ್ತು ಕ್ರಿಯೆಗೂ ಪೂರಕವಾಗಿಲ್ಲ. ಆದರೆ ಈ ವರ್ಣನೆ 'ಮುಖ್ಯವಲ್ಲ' ಎಂದು ಕಾಣುವ ವರ್ಣನೆಗಳೂ ಒಟ್ಟಾರೆ ಬದುಕಿನ ಚಿತ್ರಣಕ್ಕೆ ಅಗತ್ಯವಾದವು ಎಂಬ ತಾತ್ವಿಕ ನಂಬಿಕೆಯಿಂದ ಬಂದಿವೆ. ಮನುಷ್ಯ ಮತ್ತು ನಿಸರ್ಗದ ನಡುವಿನ ಸಂಬಂಧದ ಭಾಗವಾಗಿಯೂ ಇವು ಬಂದಿವೆ. ಪಯಣದ ಭಾಗವಾಗಿ ಬರುವ ಸಾಮಾನ್ಯ ಎನಿಸುವ ಈ ವರ್ಣನೆಗಳು ಕಾದಂಬರಿಯ ಕಟ್ಟುವಿಕೆಗೆ ಪೂರಕವಾಗಿವೆ. ಇವು ಕಾದಂಬರಿಯ ಆರಂಭದಲ್ಲಿ ಬಂದಿರುವ ಇಲ್ಲಿ ಯಾವುದೂ ಅಮುಖ್ಯವಲ್ಲ ಎಂಬ ತತ್ವಕ್ಕೆ ಅನುಗುಣವಾಗಿವೆ.

ಕೃತಿಯಲ್ಲಿ ಕಾಣಿಸಿಕೊಳ್ಳುವಂತೆ ಹಂದಿ ಹಿಡಿಯುವ ಪ್ರಸಂಗ, ತಿಮ್ಮಣ್ಣ ಹೆಗ್ಗಡೆ, ಸುಬ್ಬಣ್ಣ ಹೆಗ್ಗಡೆ, ವೆಂಕಟಪ್ಪನಾಯಕ ಹೀಗೆ ಮನುಷ್ಯ ಪಾತ್ರ ಸಮಸ್ತವೂ ಚಲನೆಯಲ್ಲಿದೆ. ಚಲನೆಯಲ್ಲಿರುವ ಯಾವ ವಸ್ತುವೂ ಮೂಲ ರೂಪದಲ್ಲಿರುವುದಿಲ್ಲ, ಇದು ವಿಜ್ಞಾನದ ಸತ್ಯವೂ ಕೂಡ ಆಗಿದೆ. ನೀರು-ತೀರ್ಥವಾಗಿ, ಕಲ್ಲು-ಮಣ್ಣಾಗಿ ಬದಲಾಗುತ್ತದೆ. ತಿಮ್ಮಿ-ಗುತ್ತಿ, ಚಿನ್ನಮ್ಮ-ಮುಕುಂದಯ್ಯ ಇವರ ಕಥೆಗಳಲ್ಲದೆ ಹಲವಾರು ಬೇರೆ ಕತೆಗಳ ಎಳೆಗಳೂ ಕಾದಂಬರಿಯ ವಸ್ತುಜಾಲದಲ್ಲಿ ಸೇರಿಕೊಂಡಿವೆ. ಇವುಗಳ ವಿನ್ಯಾಸ ಕ್ರಮ ಹೆಚ್ಚಾಗಿ ಗುತ್ತಿಯ ಪಯಣ, ಮರುಪಯಣಗಳ ಕ್ರಮವನ್ನು ಅನುಸರಿಸಿ ಬರುವುದು ಬಂಧದ ದೃಷ್ಟಿಯಿಂದ ಗಮನಾರ್ಹವಾಗಿದೆ. ಗುತ್ತಿ ಲಕ್ಕುಂದಕ್ಕೆ

ಬಂದಾಗ ಸೇಸನಾಯ್ಕ-ಕಾಡಿಯರ ಪ್ರಸಂಗ, ಮೇಗರವಳ್ಳಿ ತಲುಪಿದಾಗ ಅಂತಕ್ಕ-ಕಾವೇರಿಯರ ಕತೆ, ಹಳೆಮನೆಯನ್ನು ಸೇರಿದಾಗ ಸುಬ್ಬಣ್ಣ ಹೆಗ್ಗಡೆಯವರ ಕುಟುಂಬದ ವಿವರಗಳು, ಬೆಟ್ಟಳ್ಳಿಯನ್ನು ಮುಟ್ಟಿದಾಗ ದೇವಯ್ಯನ ಕತೆ- ಹೀಗೆ ಕಾದಂಬರಿಯ ವಸ್ತು ಹರಡುತ್ತ ಹೋಗುತ್ತದೆ.

ಗುತ್ತಿಯನ್ನು ಕೇಂದ್ರವೆಂದೂ ಅವನ ಪಯಣದ ಹೆಜ್ಜೆಗಳನ್ನು ಕಥನ ಬಿಚ್ಚಿಕೊಳ್ಳುವ ಧಾರೆಗಳೆಂದು ಪರಿಗಣಿಸಿದರೆ ಅವನ ಕೇಂದ್ರದ ಸುತ್ತ ಹಲವರ ಕಥೆ ಹಬ್ಬಿಕೊಳ್ಳುವ ತಂತ್ರವು ಕಾದಂಬರಿಯಲ್ಲಿದೆ. ಕಾನೂರು ಹೆಗ್ಗಡಿತಿಯಲ್ಲಿ ಬರುವ ಮುತ್ತಳ್ಳಿ, ಕಾನೂರು, ಕೆಳಕಾನೂರು, ಸೀತೆಮನೆ, ನೆಲ್ಲುಹಳ್ಳಿ ಈ ಊರುಗಳನ್ನು ಕೇಂದ್ರವಾಗಿಟ್ಟುಕೊಂಡು ಮಲೆನಾಡಿನ ಪ್ರಾಕೃತಿಕ, ಕೌಟುಂಬಿಕ ಮತ್ತು ಗ್ರಾಮ ಜೀವನದ ದೊಡ್ಡ ಪ್ರಪಂಚವನ್ನೇ ಈ ಕಥನವು ತೆರೆದಿಡುತ್ತದೆ. ಹೆಚ್ಚು ತಿರುಗಾಟ ಮಾಡದ ಹೂವಯ್ಯನ ಕುಟೀಚಕ ಪ್ರಜ್ಞೆಯ ಮೂಲಕ ಬಿಚ್ಚಿಕೊಳ್ಳುವ ಮಲೆನಾಡು ಒಂದು ಬಗೆಯಾದರೆ, ಸದಾ ಚಾರಣ ಮಾಡುವ ಗುತ್ತಿಯ ಮೂಲಕ ಬಿಚ್ಚಿಕೊಳ್ಳುವ ಮಲೆನಾಡಿನ ಲೋಕ ಇನ್ನೊಂದು ಬಗೆಯದು. ಒಂದು ಧಾರೆಗೆ ಬೌದ್ಧಿಕತೆ, ಜಿಜ್ಞಾಸೆಯ ಆಯಾಮವಿದ್ದರೆ, ಇನ್ನೊಂದು ಧಾರೆಗೆ ನಿಸರ್ಗಕ್ಕೆ ಹತ್ತಿರವಾದ ಸಂಘರ್ಷ ಹೋರಾಟದ ಆಯಾಮವಿದೆ. ಇಲ್ಲಿಯೇ ಆಮೂರ ಅವರು ಕುವೆಂಪು ಕಾದಂಬರಿಗಳ ಬಗ್ಗೆ ಚರ್ಚಿಸುತ್ತ ವ್ಯಕ್ತಪಡಿಸುವ ಅಭಿಪ್ರಾಯವೊಂದು ಇಲ್ಲಿ ಉಲ್ಲೇಖನೀಯ. “ಹೂವಯ್ಯನ ಪ್ರಜ್ಞೆಯ ವಿಕಾಸಕ್ಕೆ ಕಾವ್ಯ, ಶಾಸ್ತ್ರಗಳು ಒಂದು ಸಾಧನವಾದರೆ ನಿಸರ್ಗ ಇನ್ನೊಂದು ಸಾಧನ. ಹೂವಯ್ಯನ ರಸಸಮಾಧಿಯಂತೆ ಅವನ ಭಾವ ಸಮಾಧಿಯೂ ಪರಿಸರಕ್ಕೆ ಅಪರಿಚಿತ ಅನುಭವ. ಈ ಅನುಭವವನ್ನು ವಿವರಿಸುವಾಗಲೂ ನಿರೂಪಕನ ಭಾಷೆ ಕಾವ್ಯದ ಮೊರೆ ಹೋಗುತ್ತದೆ.”[೧೬] ಇಲ್ಲಿ ಅನುಭವವೊಂದರ ಅಪರಿಚಿತತೆಗೂ ಅದು ಹೊರಗಿನಿಂದ ಪಯಣ ಮಾಡಿ ಸ್ಥಳೀಯ ಪರಿಸರಕ್ಕೆ ವಲಸೆ ಬಂದಿರುವುದಕ್ಕೂ ಸಂಬಂಧವಿದೆ. ಹೊರಗಿನಿಂದ ಪಯಣಿಸಿ ಬಂದ ವಿಚಾರಗಳು ಸ್ಥಳೀಯ ಅನುಭವ ಜಗತ್ತಿನೊಡನೆ ಮುಖಾಮುಖಿ ಆಗುವ ವಿನ್ಯಾಸ ಕುವೆಂಪು ಕಾದಂಬರಿಗಳಲ್ಲಿ ಇದೆ. ಆದರೆ ೧೯ನೇ ಶತಮಾನದ ವಸಾಹತುಶಾಹಿ ಭಾರತದ ವಾಸ್ತವವೂ ಆಗಿದೆ. ಕುವೆಂಪು ಕಾದಂಬರಿಗಳ ವಿಶೇಷತೆಯೆಂದರೆ, ಹೊರಗಿನಿಂದ ಬಂದ ವಿಚಾರದ ಧಾರೆ ಮತ್ತು ಒಳಗಿನಿಂದಲೇ ಹುಟ್ಟಿಬಂದಿರುವ ಅನುಭವ ಜಗತ್ತಿನ ಈ ಎರಡೂ ಧಾರೆಗಳು ಸೇರಿಯೇ ಕುವೆಂಪು ಕಥನದ ಜಗತ್ತನ್ನು ಪೂರ್ಣಗೊಳಿಸುವುದು.

‘ಕಾನೂರು ಹೆಗ್ಗಡಿತಿ’ಯಲ್ಲಿ ಕಾನೂರು ಸೀತೆ ಮನೆಗಳ ನಡುವೆ ನಡೆಯುವ ಸಂಘರ್ಷಗಳ ಸಾಕ್ಷಿಪ್ರಜ್ಞೆಯಾಗಿ ಓಬಯ್ಯನ ಪಾತ್ರವಿದೆ. ‘ಮಲೆಗಳಲ್ಲಿ ಮದುಮಗಳು’ ಕಾದಂಬರಿಯಲ್ಲಿ ಬೆಟ್ಟಳ್ಳಿ ಮತ್ತು ಸಿಂಬಾವಿ ಮನೆಗಳ ನಡುವಣ ಸಂಘರ್ಷದ ಕೊಂಡಿಯಾಗಿ ನಾಯಿಗುತ್ತಿಯ ಪಾತ್ರವಿದೆ. ಗೌಡರ ಮನೆಗಳ ಕಥೆಗಳ ಬಳ್ಳಿ ಹಬ್ಬಲು ಇಂತಹ ಸೇವಕ ಪಾತ್ರಗಳು ಹಂದರವಾಗುತ್ತವೆ. ಗುತ್ತಿಯು ಸಿಂಬಾವಿ-ಲಕ್ಕುಂದ-ಮೇಗರವಳ್ಳಿ-ಹಳೆಮನೆ-ಕಾಡುಹಾದಿ-ಕೋಣೂರು-ಬೆಟ್ಟಳ್ಳಿಗಳ ಮೂಲಕ ಪಯಣ ಮಾಡುತ್ತ ಈ ಊರುಗಳ ಕಥೆ ಬಿಚ್ಚಿಕೊಳ್ಳುವಂತೆ ಕಥನ ವಿನ್ಯಾಸವಿದೆ.

ಅವನ ಪಯಣ ಮತ್ತು ಹಿಂಪಯಣಗಳು ಹರಡಿಕೊಂಡ ಎಲ್ಲ ಘಟನೆಗಳನ್ನು ಪೋಣಿಸುವ ದಾರಗಳಾಗುತ್ತವೆ. ಇಲ್ಲಿನ ಘಟನೆಗಳಿಗೆ ಅರ್ಥಮೌಲ್ಯ ಒದಗಿಸುವ ಕೆಲಸವನ್ನೂ ಅವನ ಪಯಣ ಮಾಡುತ್ತದೆ.

ಪಯಣದ ಹಾದಿಯಲ್ಲಿ ಆಗುವ ಅವಘಡಗಳು ಕಥೆಗೆ ಹೊಸ ತಿರುವನ್ನು ಕೊಡುವ ತಂತ್ರವನ್ನು ಎರಡೂ ಕಾದಂಬರಿಗಳು ಬಳಸಿಕೊಂಡಿವೆ. ಮೈಸೂರಿನಿಂದ ಕಾನೂರಿಗೆ ಬರುವ ಹಾದಿಯಲ್ಲಿ ಹೂವಯ್ಯ ಕುಳಿತ ಗಾಡಿ ಉರುಳಿ ಆತ ಅನಿವಾರ್ಯವಾಗಿ ಸೀತೆಯ ಊರಿಗೆ ಬರಬೇಕಾಗುತ್ತದೆ. ಅಂತೆಯೇ ತನ್ನ ಪ್ರೇಮಿಯನ್ನು ಅಪಹರಣ ಮಾಡಿಕೊಂಡು ಬರಲು ಹೊರಟ ಗುತ್ತಿಯ ಪಯಣವು ಎಲ್ಲೆಲ್ಲೊ ತಿರುಗಿಕೊಂಡು, ಅವನು ಕೊಡುವ ವಿವರಗಳು ಗುಟ್ಟುಗಳು ಅಲ್ಲಿನ ಜನರ ಸಂಬಂಧಗಳನ್ನು ಬದಲಿಸುವಂತೆ ಮಾಡುತ್ತದೆ. 'ಮದುಮಗಳ'ಲ್ಲಿ ಗುತ್ತಿಯ ಪಯಣದಷ್ಟು ವ್ಯಾಪಕವಲ್ಲದಿದ್ದರೂ, ಸುಬ್ಬಣ್ಣ ಹೆಗ್ಗಡೆಯವರು ಮಾಡುವ ಪಯಣವು ಅಂತಕ್ಕನನ್ನು ಒಳಗೊಂಡಂತೆ ಅನೇಕ ಕಥೆಗಳನ್ನು ಬಿಚ್ಚುತ್ತಹೋಗುತ್ತದೆ. ಹೀಗೆ ಕಥೆಯ ಏಕಸೂತ್ರತೆಯನ್ನು ಹಿಡಿಯುವ ಜೊತೆಗೆ ಪಾತ್ರದ ಆಂತರಿಕ ವಿಕಾಸಕ್ಕೂ ಪೂರಕವಾಗಿ ಪಯಣವು ಕಾದಂಬರಿಯ ಆಶಯಕ್ಕೆ ಹೊಸ ತಿರುವು ಕೊಡುತ್ತ ಹೋಗುತ್ತದೆ. ಹೀಗೆ ಪಯಣದ ಪರಿಕಲ್ಪನೆ ಎರಡೂ ಕಾದಂಬರಿಗಳಲ್ಲಿ ತಂತ್ರ ಹಾಗೂ ವಸ್ತುವಿನ ದೃಷ್ಟಿಯಿಂದ ಮಾತ್ರವಲ್ಲ, ತಾತ್ವಿಕತೆಯ ದೃಷ್ಟಿಯಿಂದಲೂ ವಿಶಿಷ್ಟವಾಗಿ ಕೆಲಸಮಾಡುತ್ತದೆ.

ಕೊನೆಟಿಪ್ಪಣಿಗಳು:

೧. ಕುವೆಂಪು, 'ಪಕ್ಷಿಕಾಶಿ', ಪು.೪೪

೨. ಕುವೆಂಪು, 'ಅನಿಕೇತನ', ಪು.೫೫

೩. ಚಕ್ಕರೆ ಶಿವಶಂಕರ್,'ಸಹ್ಯಾದ್ರಿಯ ಸೂರ್ಯ', ಪು.೧೯

೪. ಬಸವರಾಜ ಕಲ್ಗುಡಿ,'ನಕ್ಷೆ-ನಕ್ಷತ್ರ' ಪು೧೪೫.

೫. ನಾಗರಾಜ್ ಡಿ.ಆರ್.,'ಅಮೃತ ಮತ್ತು ಗರುಡ' ಪು.೩೪

೬. 'ದೊರೆ' ಎಂಬ ಕನ್ನಡ ಸಿನಿಮಾದಲ್ಲೂ ಕುದುರೆ ಗಾಡಿಯಲ್ಲಿ ಪಯಣ ಮಾಡುವ ಮೊದಲು ದಲಿತರ ಅಥವಾ ಕೆಳವರ್ಗದವರ ಮೇಲೆ ಕಾಲನ್ನಿಟ್ಟು ಗಾಡಿ ಎತ್ತುವ ಅಮಾನವೀಯ ಶೋಷಣೆಯ ಸನ್ನಿವೇಶವನ್ನು ನೆನೆಯಬಹುದಾಗಿದೆ.

೭. ಚಕ್ಕರೆ ಶಿವಶಂಕರ್, 'ಸಹ್ಯಾದ್ರಿಯ ಸೂರ್ಯ', ಪು.೧೭೩

೮. ನಾಗರಾಜ್ ಡಿ.ಆರ್., 'ಅಮೃತ ಮತ್ತು ಗರುಡ', ಪು.೩೪

೯. ನಾಗಭೂಷಣ ಡಿ.ಎಸ್.,'ಗಮನ' ಪು.೨೦

೧೦. ಶ್ರೀಕೃಷ್ಣ ಆಲನಹಳ್ಳಿ, 'ಮಲೆಗಳಲ್ಲಿ ಮದುಮಗಳು-ಪಾತ್ರಗಳ ಅಭ್ಯಾಸ', ಪು.೪೨

೧೧. ಭಂಡಾರಿ ಆರ್.ವಿ.,'ಕುವೆಂಪು:ದೃಷ್ಟಿ-ಸೃಷ್ಟಿ', ಪು.೧೨೬

೧೨. ರಹಮತ್ ತರೀಕೆರೆ,'ಕತ್ತಿಯಂಚಿನ ದಾರಿ', ಪು.೯

೧೩. ಕುವೆಂಪು, 'ಅನಿಕೇತನ', ಪು.೫೫

೧೪. ಗುರುಪಾದ ಮರಿಗುದ್ದಿ(ಸಂ), 'ಕುವೆಂಪು ಕಾದಂಬರಿಗಳು'(ಮುನ್ನುಡಿ), ಪು೧೩

೧೫. ಕುವೆಂಪು ಅವರಿಗೆ ವೈಯಕ್ತಿಕವಾಗಿ ಆತ್ಮವು ಅನೇಕ ದೇಹಗಳನ್ನು ಬದಲಿಸುತ್ತ ಜನ್ಮಾಂತರದಲ್ಲಿ ಪಯಣ ಮಾಡುವ ಬಗ್ಗೆ ನಂಬಿಕೆಯಿತ್ತು. ಇದನ್ನು ಅವರ ಆತ್ಮಕತೆಯ ಅನೇಕ ಸನ್ನಿವೇಶಗಳಲ್ಲಿ ಗುರುತಿಸಬಹುದು.

೧೬. ಆಮೂರ ಜಿ.ಎಸ್., 'ಕನ್ನಡ ಕಥನ ಸಾಹಿತ್ಯ:ಕಾದಂಬರಿ', ಪು.೬೩

ಅಧ್ಯಾಯ ನಾಲ್ಕು

ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಪಯಣದ ವಿನ್ಯಾಸಗಳು

ಅಧ್ಯಾಯ ನಾಲ್ಕು

ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಪಯಣದ ವಿನ್ಯಾಸಗಳು

೪.೧. ಪ್ರವೇಶ

ಕನ್ನಡ ಕಾದಂಬರಿಯ ನವೋದಯ ಕಾಲಘಟ್ಟದಲ್ಲಿ ಕಾಣಿಸಿಕೊಂಡ ಕಾದಂಬರಿಕಾರರಲ್ಲಿ ಶಿವರಾಮ ಕಾರಂತರು ಪ್ರಮುಖರಾಗಿದ್ದಾರೆ. ಶಿವರಾಮ ಕಾರಂತರು ಈ ಶತಮಾನದ ದೈತ್ಯ ಪ್ರತಿಭೆಯಾಗಿ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವಿಪುಲವಾದ ಸಾಹಿತ್ಯವನ್ನು ನಿರ್ಮಾಣ ಮಾಡಿ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಇವರಲ್ಲಿ ಗಟ್ಟಿಯಾದ ಅನುಭವ, ಪ್ರಬುದ್ಧ ಜೀವನ ದೃಷ್ಟಿ, ಗಟ್ಟಿಯಾದ ವಸ್ತು, ವಾಸ್ತವವಾದಿ ಕಥನಕ್ರಮ, ಪ್ರಖರ ಸಾಮಾಜಿಕ ಪ್ರಜ್ಞೆ ಹಾಗೂ ವೈಚಾರಿಕ ನಿರ್ಭೀತಿಯ ನಿಲುವುಗಳಿಂದಾಗಿ ಶಿವರಾಮ ಕಾರಂತರ ಕೃತಿಗಳು ಆಧುನಿಕ ಕನ್ನಡ ಸಾಹಿತ್ಯದ ಉತ್ತಮ ಸಾಧನೆಯ ಭಾಗಗಳಾಗಿವೆ. ಇವರ ಕಾದಂಬರಿಗಳನ್ನು ಕನ್ನಡದ ಓದುಗರು, ವಿಮರ್ಶಕರು, ಚಳುವಳಿಗಾರರು ಸ್ವೀಕರಿಸಿದ ವಿಭಿನ್ನ ವಿಧಾನಗಳ ಕಾರಣದಿಂದ ಅನೇಕ ವಾಗ್ವಾದಗಳು ಹುಟ್ಟಿದವು. ಈ ಸಂಗತಿಯು ಕುತೂಹಲದಾಯಕ ಮತ್ತು ಅಧ್ಯಯನ ಯೋಗ್ಯವಾಗಿದೆ.

ಶಿವರಾಮ ಕಾರಂತರು ತಮ್ಮ ಸುತ್ತಲಿನ ಸಮಾಜವನ್ನು ಸೂಕ್ಷ್ಮ ಮತ್ತು ಚಿಕಿತ್ಸಕ ದೃಷ್ಟಿಯಿಂದ ಗಮನಿಸುವ ಲೇಖಕರು. ಅವರು ಸಮಾಜದೊಳಗಿನ ವಾಸ್ತವಿಕತೆಯನ್ನು ಪ್ರವಾಸದ ಸಂದರ್ಭದಲ್ಲಿ ಗಮನಿಸುವ ವಿಧಾನವನ್ನು ಅನುಸರಿಸಿ ಪ್ರಾದೇಶಿಕ ಮತ್ತು ಸಾಮುದಾಯಿಕ ಸಂಸ್ಕೃತಿಯನ್ನು ಪ್ರಾಮಾಣಿಕವಾಗಿ ಚಿತ್ರಿಸಿದ್ದಾರೆ. ವಿದ್ಯಾರ್ಥಿ ದೆಸೆಯಲ್ಲಿಯೇ ಗಾಂಧೀಜಿಯವರ ಆದರ್ಶವಾದದ ಪ್ರೇರಣೆಗೆ ಒಳಗಾಗಿದ್ದ ಕಾರಂತರು ನಂತರದ ಘಟ್ಟದಲ್ಲಿ ಗಾಂಧೀ ಚಿಂತನೆಯ ಜತೆ ಭಿನ್ನಮತವನ್ನು ದಾಖಲಿಸಿದವರು. ಗಾಂಧೀವಾದದ ಜತೆಗಿನ ಈ ಒಪ್ಪಿಗೆ ಮತ್ತು ನಿರಾಕರಣೆಗಳು ಅವರ ಕಾದಂಬರಿಗಳ ಸಾಮಾಜಿಕ ಪ್ರಜ್ಞೆಯನ್ನು ರೂಪಿಸಿದವು.

ಈ ಹಿನ್ನೆಲೆಯಲ್ಲಿ ಶಿವರಾಮ ಕಾರಂತರು ಹಾಗೂ ಕುವೆಂಪುರವರು ನವೋದಯ ಸಾಹಿತ್ಯ ಕಾಲಘಟ್ಟದಲ್ಲಿ ವಾಸ್ತವವಾದಿ ಪರಿಕಲ್ಪನೆಯನ್ನು ತಮ್ಮ ಕಾದಂಬರಿಗಳನ್ನು ಅದ್ಭುತವಾಗಿ

ಪ್ರಯೋಗಿಸಿದವರಲ್ಲಿ ಪ್ರಮುಖರಾಗಿದ್ದಾರೆ. ಶಿವರಾಮ ಕಾರಂತರ ವಿಶಿಷ್ಟತೆ ಇರುವುದು ತಮ್ಮ ಕಾದಂಬರಿಗಳ ವಸ್ತುವಿಗಾಗಿ ಪ್ರವಾಸ ಮಾಡಿ ಅಧ್ಯಯನ ಮಾಡುವುದು. ಕನ್ನಡದಲ್ಲಿ ಕುವೆಂಪು ಅವರು ತಮ್ಮ ಬಾಲ್ಯದ ಅನುಭವಗಳನ್ನೇ ನೆಚ್ಚಿಕೊಂಡು ಕಾದಂಬರಿ ಸೃಷ್ಟಿಸಿದರೆ, ಕಾರಂತರಂತಹ ತಿರುಗಾಟದ ಲೇಖಕರು ತಮ್ಮ ಕಾದಂಬರಿಯ ದ್ರವ್ಯವನ್ನು ತಿರುಗಾಟದಿಂದಲೂ ಪಡೆದುಕೊಳ್ಳುವವರಾಗಿದ್ದಾರೆ. 'ಚೋಮನ ದುಡಿ'ಯು ಅವರು ತಮ್ಮ ಬರೆಹದ ಬದುಕಿನ ಆರಂಭದ ಘಟ್ಟದಲ್ಲಿ ಮಾಡಿದ ಪ್ರವಾಸಾನುಭವದ ಫಲವಾಗಿ ಮೂಡಿಬಂದಿದೆ. ಮುಂದೆ ಅವರ ಕಥನಗಳಲ್ಲಿ ಪ್ರವಾಸವು ಒಂದು ತಂತ್ರವಾಗಿಯೂ ಬಳಕೆಯಾಗುವುದನ್ನು ನೋಡಬಹುದು. ಅವರ ಕಾದಂಬರಿಗಳಲ್ಲಿ ಪ್ರಮುಖ ಪಾತ್ರಗಳಾಗಿರುವ ನಿರೂಪಕರು ಪ್ರವಾಸ ಮಾಡುವ ಮೂಲಕ ಪಡೆಯುವ ಅನುಭವಗಳ ಮಂಡನೆಯ ವಿಧಾನವು ಪ್ರಮುಖವಾಗಿದೆ. ಕನ್ನಡ ಕಾದಂಬರಿ ಸಾಹಿತ್ಯದಲ್ಲಿ ಅತೀ ಹೆಚ್ಚು ಪ್ರವಾಸವನ್ನು ಕೈಗೊಂಡು ಕೃತಿ ರಚನೆ ಮಾಡಿದ ಲೇಖಕರಲ್ಲಿ ಕಾರಂತರು ಒಬ್ಬರು. ಇವರನ್ನು ಬಿಟ್ಟರೆ ಎಸ್.ಎಲ್.ಭೈರಪ್ಪ, ಮಾಸ್ತಿ, ನೇಮಿಚಂದ್ರ ಅವರು ಸಹ ತಮ್ಮ ಕೃತಿಯ ವಸ್ತುವಿಗಾಗಿ ಪ್ರವಾಸ ಮಾಡುವ ಗುಣವನ್ನು ಹೊಂದಿರುವ ಲೇಖಕರಾಗಿದ್ದಾರೆ.

ಕಾರಂತರು 'ಅಳಿದಮೇಲೆ' ಕಾದಂಬರಿಯ ಆರಂಭದಲ್ಲಿ 'ಜೀವನವೆಂಬುದು ಬಹು ದೀರ್ಘಕಾಲದ ಒಂದು ಯಾತ್ರೆ' ಎಂದು ಕರೆದಿದ್ದಾರೆ. ಬದುಕನ್ನು ಯಾತ್ರೆ ಅಥವಾ ಪಯಣಕ್ಕೆ ಹೋಲಿಸುವ ಲೇಖಕರ ತಾತ್ವಿಕ ದೃಷ್ಟಿಕೋನವನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕು. ಕಾರಂತರು ತಮ್ಮ 'ಬೆಟ್ಟದಜೀವ' ಮತ್ತು 'ಅಳಿದಮೇಲೆ' ಕಾದಂಬರಿಗಳಲ್ಲಿ ಪಯಣ, ಪ್ರಯಾಣ, ಯಾನ, ಯಾತ್ರೆ, ಪ್ರವಾಸ, ಜಾಡು, ಹಾದಿ, ಅಲೆದಾಟ, ತಿರುಗಾಟ, ಓಡಾಟ, ಸಂಚಾರ ಮುಂತಾದ ಅನೇಕ ಪರಿಭಾಷೆಗಳನ್ನು ಬಳಸುತ್ತಾರೆ. ಪಯಣವು ಕಾರಂತರ ಕಾದಂಬರಿಗಳ ಮಾತ್ರವಲ್ಲ ಅವರ ಒಟ್ಟೂ ಬರೆಹದ ನುಡಿಗಟ್ಟಾಗಿದೆ ಎನ್ನಬಹುದು. ಅವರ 'ಅಳಿದಮೇಲೆ' ಕಾದಂಬರಿಯ ಒಂದು ಕಡೆ ಹೀಗೆ ಬರುತ್ತದೆ: "ಎಷ್ಟು ದೊಡ್ಡದಾದ ಪಯಣ? ಎಷ್ಟು ಕಾಲ ನಡೆಸಿದ್ದು? ಏನೆಲ್ಲ ಪುರುಷಾರ್ಥ ಸಾಧಿಸಿದ್ದು? ಏನು ದುಡಿದದ್ದು? ಏನು ಬಿಟ್ಟದ್ದು? ಇವುಗಳನ್ನೆಲ್ಲ ಲೆಕ್ಕ ಹಾಕಿದರೆ ಮನೆಮಾರು, ಹಣಕಾಸು, ಒಂದಿಷ್ಟಾದರೂ ಉಳಿಯಬಹುದು"(ಪು.೭). ಇನ್ನೊಂದು ಪ್ರಸಂಗದಲ್ಲಿ ಕೃತಿಯ ನಿರೂಪಕ ಹೇಳುವ ಮಾತುಗಳು ಹೀಗಿವೆ: "ಜೀವನ ಯಾತ್ರೆಯೇ ಹಾಗಂತೆ! ಆ ನಾಟಕದಲ್ಲಿನ ಕ್ಷಣಿಕ ದೃಶ್ಯ–ನಾವು ಊರೂರಿಗೆ ಮಾಡುವ ಪಯಣ. ಇದು ವಾಸ್ತವಿಕ ಪಯಣ. ರೈಲಿನಲ್ಲೋ, ಹಡಗಿನಲ್ಲೋ, ಮೋಟರಿನಲ್ಲೋ, ನಮ್ಮ ಒಂದಲ್ಲ ಒಂದು ಕೆಲಸಕ್ಕಾಗಿ ನಾವು ಅಲೆದಾಡುತ್ತಲೇ ಇರುತ್ತೇವೆ. ಸ್ವಂತ ಊರನ್ನು ಬಿಟ್ಟು ಪರವೂರಿಗೆ ಹೋಗುತ್ತೇವೆ. ಕೆಲಸಕ್ಕಾಗಿ ಹೋಗುತ್ತೇವೆ; ವಿಲಾಸಕ್ಕಾಗಿ ಹೋಗುತ್ತೇವೆ; ನಾನೂ, ನೀವೂ ಎಲ್ಲರೂ ಹಾಗೆಯೇ ಮಾಡುವವರು"(ಪು.೨).

ಕಾದಂಬರಿಗಳು ವ್ಯಕ್ತಿಯ ಜೀವನದಲ್ಲಿ ನಡೆದ ಘಟನಾವಳಿಗಳನ್ನು ಪಯಣಕ್ಕೆ ಹೋಲಿಸುತ್ತಿವೆ. ಅವು ಪಯಣದ ಪ್ರಕ್ರಿಯೆಯನ್ನು, ಅದರಿಂದ ಬರುವ ಅನುಭವಗಳನ್ನು ಬೇರೆಬೇರೆ ಬಗೆಯಲ್ಲಿ ದುಡಿಸಿಕೊಳ್ಳುತ್ತವೆ. ಒಬ್ಬ ವ್ಯಕ್ತಿಯ ಬದುಕಿನಲ್ಲಾಗಿರುವ ಏರಿಳಿತಗಳನ್ನು ವಿಶ್ಲೇಷಣೆ ಮಾಡುವುದಕ್ಕೆ ಕಾರಂತರ ಕಾದಂಬರಿಗಳು ಹಾಕಿಕೊಳ್ಳುವ ಪೀಠಿಕೆಯು ಪಯಣದ ರೂಪಕಗಳಲ್ಲಿರುತ್ತದೆ. ಅದರಲ್ಲೂ ವ್ಯಕ್ತಿಯು ಸತ್ತ ಬಳಿಕ ಅವನ ಬದುಕನ್ನು ಮೌಲ್ಯಮಾಪನ ಮಾಡುವಾಗ ಈ ಪಯಣದ ರೂಪಕವು ಕಡ್ಡಾಯವಾಗಿರುತ್ತದೆ. 'ಅಳಿದಮೇಲೆ' ಕಾದಂಬರಿಯ ಆರಂಭದಲ್ಲಿ 'ಒಂದು ಪಯಣದಲ್ಲಿ ಅರ್ಧದಿನವೆಲ್ಲ ನನ್ನ ಜತೆಯಲ್ಲಿ ಕುಳಿತ, ಒಬ್ಬ ವಯೋವೃದ್ಧ ಗೃಹಸ್ಥನನ್ನು ಕುರಿತು ಒಂದು ಕಾದಂಬರಿಯನ್ನೇ ಬರೆಯ ಹೊರಟನೆಂದರೆ ನಿಮಗೆ ಆಶ್ಚರ್ಯವಾಗಲೂಬಹುದು' ಎಂಬ ಸಾಲುಗಳು ಬರುತ್ತವೆ. ಈ ಸಾಲುಗಳನ್ನು ಗಮನಿಸಿದರೆ ಕಾದಂಬರಿಯ ಬೀಜವೇ ಪಯಣದಲ್ಲಿದೆ ಎಂದು ಖಚಿತವಾಗುತ್ತದೆ. ಹೀಗೆ ಕಾರಂತರ ಕೃತಿಗಳ ಒಳಗೆ ವ್ಯಕ್ತಿಯ ಬಾಳ್ವೆಯನ್ನು ಚಿತ್ರಿಸುವಾಗ ಹಾಗೂ ವಿವರಗಳ ಮೂಲಕ ಬದುಕನ್ನು ಮೌಲ್ಯಮಾಪನ ಮಾಡುವಾಗ ಪಯಣವು ಒಂದು ಚಾಲಕಶಕ್ತಿಯಾಗಿ ಕೆಲಸ ಮಾಡುತ್ತದೆ.

'ಅಳಿದಮೇಲೆ' ಕಾದಂಬರಿಯಲ್ಲಿ ಜೀವವಿಕಾಸದ ರೂಪಕವು ಈ ಕೆಳಗಿನಂತೆ ಬರುತ್ತದೆ: "ಜೀವಕೋಟಿಯ ಈ ಯಾತ್ರೆಯು ಎಂದೋ ತೊಡಗಿದ್ದು, ಎಲ್ಲಿಗೋ ಹೋಗುತ್ತಿದೆ; ಪಯಣ ತೊಡಗಿದ ಎಷ್ಟೋ, ಎಷ್ಟೋ ಕಾಲದ ಮೇಲೆ ದಾರಿಯ ರೈಲು ನಿಲ್ದಾಣದಲ್ಲಿ ಬಂಡಿಯನ್ನೇರುವ ಪಯಣಿಗನಂತೆ, ಮನುಷ್ಯ ಎಂಬ ಪ್ರಾಣಿ ಒಳಗೆ ಹೊಕ್ಕ; ಹೊಕ್ಕವನು ಹೊಕ್ಕಂತೆ ಇನ್ನೊಂದು ದಿನ ಇಳಿದು ಹೋಗಿಯೂ ಆಯಿತು. ಜೀವನ ಪಯಣವಂತು ಇನ್ನೂ ಮುಂದಕ್ಕೆ ಸಾಗಿದೆ: ಅದರ ಗುರಿ ಇಂದಿನವರೆಗೂ ತಿಳಿದಿಲ್ಲ; ಮುಂದಿನ ದಾರಿ ಎಣಿಸಲಾರದಷ್ಟು ದೂರದ್ದಾಗಿದೆ" (ಪು.೮). ಇಲ್ಲಿ ಮನುಷ್ಯರ ಪಯಣವನ್ನು ಮಾತ್ರವಲ್ಲ ಇಡೀ ಜೀವವಿಕಾಸವನ್ನೇ ಪಯಣವೆಂದು ಕಾದಂಬರಿ ತಾತ್ವಿಕವಾಗಿ ಗ್ರಹಿಸಿದೆ. ಕಾದಂಬರಿಯ ನಾಯಕ ಯಶವಂತರಾಯನು ನಿರೂಪಕನಿಗೆ ಬರೆದಿರುವ ಪತ್ರದಲ್ಲಿ ಆತ ತನ್ನ ಬದುಕನ್ನು ಮಾತ್ರ ಪಯಣಕ್ಕೆ ಹೋಲಿಸಿಲ್ಲ, ತನ್ನ ಜೊತೆಗೆ ಬದುಕಿದ ಜೀವಕೋಟಿಯ ಯಾನವನ್ನು ಬಳಸಿದ್ದಾನೆ. ಕಾಲದ ಅನಂತವಾದ ಪರಿಕಲ್ಪನೆಯನ್ನು ಮಾಡಿಕೊಂಡು ಅದರಲ್ಲಿ ಜೀವಿಗಳು ಪಯಣ ಮಾಡುತ್ತಾ ಬಂದಿದ್ದು ಯಾವುದೋ ಒಂದು ಘಟ್ಟದಲ್ಲಿ ಮನುಷ್ಯಜೀವಿ ಪಯಣದಲ್ಲಿ ಸೇರಿಕೊಂಡವರು. ಜೀವವಿಕಾಸದ ಈ ರೂಪಕದಲ್ಲಿ ಯಶವಂತರಾಯರು ಬದುಕನ್ನು ಗ್ರಹಿಸುತ್ತಾರೆ. ಪಯಣದ ಪರಿಕಲ್ಪನೆಯನ್ನು ತಾತ್ವಿಕವಾಗಿ ಕಟ್ಟಿಕೊಂಡು ಅದನ್ನು ಅನ್ವಯ ಮಾಡುವ ಹಾಗೇ ಕಾರಂತರ ಕಾದಂಬರಿಗಳು ಬಿಚ್ಚಿಕೊಳ್ಳುವ ವಿಧಾನವನ್ನು ಅನುಸರಿಸುತ್ತವೆ. ಹೀಗಾಗಿ ಕಾದಂಬರಿಯಲ್ಲಿ ಬರುವ ಪಯಣದ ವಿವರಗಳ ಮೂಲಕವೇ ಅವು ಕಟ್ಟಿಕೊಡುವ ಜೀವನವನ್ನು ಗ್ರಹಿಸುವ ಪ್ರಯತ್ನವನ್ನು ವಿಮರ್ಶೆ ಮಾಡಬೇಕಾಗುತ್ತದೆ.

ಪಯಣವು ಮನುಷ್ಯರ ಬದುಕಿಗೆ ಸಂಬಂಧಿಸಿದಂತಹ ಒಂದು ನೆಲೆಯಲ್ಲಿ ನಿರ್ವಚನಗೊಳ್ಳುವ ಒಂದು ಪರಿಕಲ್ಪನೆ. ಅದು ಭೌತಿಕ ಚಲನೆಗೆ ಸಂಬಂಧಿಸಿದ ನೆಲೆಯಲ್ಲಿ ನಿರ್ವಚನಗೊಂಡಿರುವಂತೆ ಬೌದ್ಧಿಕ ಆಲೋಚನ ಸ್ತರದಲ್ಲಿನ ಪಲ್ಲಟಗಳನ್ನು ಸಹ ಒಳಗೊಳ್ಳುತ್ತದೆ. ಪಯಣಕ್ಕೆ ದೈಹಿಕವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವ ಆಯಾಮವಿದ್ದರೆ, ವ್ಯಕ್ತಿಯ ಒಳಗೆ ಆಗುವ ಬೌದ್ಧಿಕ ವಿಕಾಸದ ಕ್ರಿಯೆಗಳ ಜೊತೆಗೆ ಹೋಗುವ ಇನ್ನೊಂದು ಆಯಾಮವಿರುತ್ತದೆ. ಆಗ ಅದು ಪಯಣಿಸುವ ವ್ಯಕ್ತಿಗಳನ್ನು ಒಳಗೊಂಡಂತೆ ಒಟ್ಟು ಜೀವನ ವಿಕಾಸದ ಒಂದು ಆಯಾಮ ಮತ್ತು ವಿಸ್ತರಣೆಯನ್ನು ಪಡೆದುಕೊಳ್ಳುತ್ತದೆ. ಹೀಗೆ ಜೀವವಿಕಾಸದ ವಿರಾಟ್ ಭಿತ್ತಿಯಲ್ಲಿಟ್ಟು ವ್ಯಕ್ತಿಯ ಬಾಳಿನ ಪಯಣವನ್ನು ನೋಡುವಾಗ, ಮನುಷ್ಯರ ಬಾಳು ಒಟ್ಟು ಜೀವವಿಕಾಸದ ಕಥನದಲ್ಲಿ ಒಂದು ಸಣ್ಣ ಭಾಗವಾಗಿ ಮಾತ್ರ ಬರುವುದು ಗೊತ್ತಾಗುತ್ತದೆ. ತೇಜಸ್ವಿಯವರ ಕಾದಂಬರಿಗಳಲ್ಲಿ ಪ್ರಾಣಿಯ, ಪಕ್ಷಿಯ, ಕೀಟದ ಸಸ್ಯಗಳ ಒಟ್ಟು ಜೀವ ವಿಕಾಸದ ಪಥದಲ್ಲಿ ಮನುಷ್ಯರ ಜೀವವು ಒಂದಾಗಿ ಬರುವುದನ್ನು ಗುರುತಿಸಬಹುದು. ಪ್ರಾಣಿ, ಪಕ್ಷಿಗಳ ಜೀವನ ವಿಕಾಸದ ಪಯಣದ ಒಳಗಡೆಯೇ ಮನುಷ್ಯನ ಪಯಣವನ್ನು ಹೇಳುವುದಕ್ಕೆ ತೇಜಸ್ವಿಯವರ 'ಕರ್ವಾಲೋ' ಕಾದಂಬರಿ ಒಳ್ಳೆಯ ನಿದರ್ಶನವಾಗಿದೆ. ಇಲ್ಲಿ ಬರುವ ಹಾರುವ ಓತಿಯ ಪ್ರಸಂಗ ಬರುತ್ತದೆ. ಜೀವವಿಕಾಸದ ಪಯಣದಲ್ಲಿ ಯಾವುದೋ ಒಂದು ಕಾಲಘಟ್ಟದಲ್ಲಿ ಓತಿಯು ಆಕಾಶದಲ್ಲಿ ಹಾರುವ ರೆಕ್ಕೆಯನ್ನು ಪಡೆದುಕೊಳ್ಳದೇ ಮರದಿಂದ ಮರಕ್ಕೆ ಹಾರುವ ಶಕ್ತಿಯನ್ನು ಮಾತ್ರ ಪಡೆದುಕೊಳ್ಳುತ್ತದೆ. ಕಾರಂತರು ಕಾದಂಬರಿಗಳಲ್ಲಿ ಇದೇ ಜೀವವಿಕಾಸದ ಭಿತ್ತಿಯಲ್ಲಿ ಮಾನವ ಜೀವನದ ಪಯಣದ ಚಿತ್ರವನ್ನು ಸಣ್ಣದಾಗಿ ತರುತ್ತಾರೆ. ಅವರ 'ಮೂಕಜ್ಜಿಯ ಕನಸುಗಳು' ಕೃತಿಯಲ್ಲಿ ಜೀವವಿಕಾಸದ ಕಥನದಲ್ಲಿ ಮನುಷ್ಯರ ಕಥನದ ಚಿತ್ರಣವಿದೆ.

ಮನುಷ್ಯರ ಬದುಕನ್ನು ಪ್ರಾಣಿ, ಪಕ್ಷಿ, ಕೀಟಗಳ ಬದುಕಿನ ಜೀವವಿಕಾಸದ ಕಥೆಯಲ್ಲಿಟ್ಟು ನೋಡುವ, ಪ್ರಾಣಿ, ಪಕ್ಷಿ, ಕೀಟಗಳ ಬದುಕನ್ನು ಮನುಷ್ಯರ ಬದುಕಿನೊಳಗಿಟ್ಟು ನೋಡುವ ಎರಡೂ ಕೆಲಸವನ್ನು ಕನ್ನಡ ಕಾದಂಬರಿಗಳು ಮಾಡುತ್ತವೆ. ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಆರಂಭದಲ್ಲಿರುವ 'ಇಲ್ಲಿ ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ; ಯಾವುದೂ ಯಃಕಶ್ಚಿತವಲ್ಲ!' ವೆಂಬ ಉಕ್ತಿಯಲ್ಲಿ, ಜೀವವಿಕಾಸದ ಪಯಣದ ಪರಿಕಲ್ಪನೆಯಿದೆ. ಇದರಲ್ಲಿರುವ 'ಯಾರೂ ಮುಖ್ಯರಲ್ಲ' ಎಂಬ ಹೇಳಿಕೆಯಲ್ಲಿ ಮೇಲ್ಕಾಣಿಸಿದ ದರ್ಶನವು ಅಡಗಿಕೊಂಡಿದೆ.

ಯಾವುದೇ ಬಗೆಯ ಪಯಣವು ಸಾಮಾನ್ಯವಾಗಿ ಮೂರು ಹಂತಗಳಲ್ಲಿ ನಡೆಯುತ್ತದೆ. ಅವೆಂದರೆ–ಪಯಣದ ಸಿದ್ಧತೆ, ಪಯಣದ ಹಾದಿ ಹಾಗೂ ಪಯಣದ ಗುರಿ ಮುಟ್ಟುವುದು. ಕಾರಂತರ ಕಾದಂಬರಿಗಳನ್ನು ಈ ಮೂರು ಹಂತಗಳ ಪ್ರಕ್ರಿಯೆಯಲ್ಲಿಟ್ಟು ನೋಡಬಹುದು. ಅವರ 'ಬೆಟ್ಟದಜೀವ'ದಲ್ಲಿ ಶಿವರಾಮಯ್ಯವೆಂಬ ನಿರೂಪಕನ ಪಾತ್ರವು ಕೆಳಬೈಲಿಗೆ, ಕಾಟುಮೂಲೆಗೆ,

ಪುತ್ತೂರು, ಪುಣೆಗೆ ಹೋಗುವಾಗ ಸಿದ್ಧತೆ ಮಾಡಿಕೊಳ್ಳುತ್ತದೆ. ಎರಡನೇ ಘಟ್ಟದಲ್ಲಿ ಆ ಪಾತ್ರವು ಪಯಣವನ್ನು ಮಾಡುತ್ತದೆ. ಕೊನೆಯ ಘಟ್ಟದಲ್ಲಿ ಅದು ತನ್ನ ಪಯಣ ಮುಗಿಸುವ ವಿನ್ಯಾಸವಿದೆ. ಈ ಮೂರೂ ಘಟ್ಟಗಳಲ್ಲಿ ನಿರೂಪಕ ಪಾತ್ರವು ಹೊಸಹೊಸ ಅನುಭವಗಳನ್ನು ಪಡೆಯುತ್ತದೆ. ಈ ಅನುಭವಗಳ ನಿರೂಪಣೆಯೇ ಕಾದಂಬರಿಯ ರೂಪ ಪಡೆಯುತ್ತದೆ. ನಿರೂಪಕ ಪಾತ್ರವು ಪಯಣ ಆರಂಭಿಸುವ ಮುನ್ನ ಇರಿಸಿಕೊಂಡಿದ್ದ ಆಲೋಚನ ಕ್ರಮವು ಅದು ಪಯಣ ಮಾಡುವಾಗ ಮತ್ತು ಮುಗಿಸಿದಾಗ ಬದಲಾವಣೆ ಪಡೆಯುತ್ತದೆ. ಈ ಬದಲಾವಣೆಯ ಪಲ್ಲಟದ ಪ್ರಕ್ರಿಯೆ ಹೀಗೆ ಈ ಮೂರು ಘಟ್ಟಗಳಲ್ಲಿ ಸಂಭವಿಸುತ್ತದೆ.

ಇದೇ ರೀತಿಯಲ್ಲಿ 'ಅಳಿದಮೇಲೆ'ಯಲ್ಲಿ ಇನ್ನೊಂದು ನಿರೂಪಕ ಪಾತ್ರ ಬರುತ್ತದೆ. ಅಲ್ಲಿ ಎಸ್.ಕೆ. ಕಾರಂತ ಎಂಬ ನಿರೂಪಕನ ಪಾತ್ರವು ಬೆನಕನಹಳ್ಳಿಗೆ ಪಾರ್ವತಮ್ಮನನ್ನು ಭೇಟಿಯಾಗಲು ಹೋದಾಗ ದಾರಿ ಮಧ್ಯದಲ್ಲಿ ಸಿಗುವ ಶಂಭು ಹೆಗಡೆ, ಗೌಡರು, ದನಕಾಯುವವ, ಶಂಕರ ಹೆಗಡೆ, ರಾಮಯ್ಯ ಹೆಗಡೆ, ಸುಬ್ಬ, ಗಾಡಿಯ ಪಯಣ ಹೀಗೆ ಹಲವು ವ್ಯಕ್ತಿಗಳಿಗೆ ಭೇಟಿಯಾಗುವ ಸನ್ನಿವೇಶ ಬರುತ್ತದೆ. ಆತನಿಗೆ ಹಾದಿಯಲ್ಲಿ ಸಿಗುವ ವ್ಯಕ್ತಿಗಳು, ಅವನ ಎದುರು ಘಟಿಸುವ ಘಟನೆಗಳು, ಅವನಿಗೆ ಆಗುವ ಅನುಭವಗಳು, ಈ ಮೂರು ನೆಲೆಗಳ ಮೂಲಕ ಕಾದಂಬರಿ ಮಾನವರ ಸ್ವಭಾವವನ್ನು, ಅವರ ಅನುಭವವನ್ನು ಶೋಧ ಮಾಡುತ್ತದೆ. ಇದೇ ನಿರೂಪಕ ಪಾತ್ರವು ಯಶವಂತರಾಯರ ಹೆಂಡತಿ–ಮಗ, ಅಳಿಯ–ಮಗಳು, ಪಾರ್ವತಜ್ಜಿ, ಮೂಕಾಂಬಿಕೆ, ಮುರ್ಡೇಶ್ವರ ವಕೀಲ, ಶೀನ, ಮೊಮ್ಮಗ ಯಶವಂತ ಮುಂತಾದವರನ್ನು ಭೇಟಿಮಾಡುತ್ತದೆ. ಅದರ ಅನುಭವ ಶೋಧವೆನ್ನುವುದು ಅದು ಮಾಡುವ ಪಯಣದ ತುದಿಯಲ್ಲಿ ಮಾತ್ರ ಸಿಗುವುದಿಲ್ಲ. ಪಯಣ ಮಾಡುತ್ತಿರುವ ಪ್ರತಿ ಹಂತದಲ್ಲಿಯೂ ಅದಕ್ಕೆ ಸಿಕ್ಕುತ್ತ ಹೋಗುತ್ತದೆ. ಅದು ಪಯಣಿಸುವ ಹಾದಿಯಲ್ಲಿ ಬೇರೆ ಬೇರೆ ವ್ಯಕ್ತಿಗಳಲ್ಲಿ ಕಾಣುತ್ತದೆ. ವಿಭಿನ್ನ ಜೀವನದ ಸನ್ನಿವೇಶಗಳನ್ನು ಮುಖಾಮುಖಿ ಮಾಡುತ್ತದೆ. ನಿರೂಪಕ ಪಾತ್ರದ ಈ ಅನುಭವಗಳು ಈ ಕಾದಂಬರಿಯ ರಚನಾ ವಿನ್ಯಾಸದಲ್ಲಿ ಮುಖ್ಯ ಘಟಕಗಳಾಗಿ ದುಡಿಯುತ್ತವೆ.

ಒಟ್ಟಾರೆಯ ಕನ್ನಡ ಕಾದಂಬರಿಗಳಲ್ಲಿ ಪಯಣವು ಮುಖ್ಯ ಆಶಯವಾಗಿದ್ದು, ಪಯಣದ ಲೋಕಕ್ಕೆ ಸಂಬಂಧಿಸಿದ ವಿವರಗಳು ಇದರ ಭಾಗವಾಗಿ ಬರುತ್ತವೆ. ಈ ಕಾದಂಬರಿಗಳಲ್ಲಿ ಪಾತ್ರಗಳ ಪಯಣದಲ್ಲಿ ದೋಣಿ, ಹಡಗು, ಬಸ್ಸು, ರೈಲು, ಬಂಡಿ ಮುಂತಾದ ವಾಹನಗಳ ಚಿತ್ರಗಳು ಬರುತ್ತವೆ. ಇದರ ಜತೆ ಪಾತ್ರಗಳು ಕಾಲ್ನಡಿಗೆ ಮಾಡುವ ವಿವರಗಳೂ ಬರುತ್ತವೆ. ಈ ಪಯಣದಲ್ಲಿ ಪಥಿಕರಿಗೆ ದಾರಿ ತೋರುವ ಮಾರ್ಗದರ್ಶಕರು ಸಹ ಬರುತ್ತಾರೆ. ಈ ಮಾರ್ಗದರ್ಶಕರ ಪಾತ್ರವು ಪಯಣದ ಪ್ರಕ್ರಿಯೆಯಲ್ಲಿ ತುಂಬಾ ಮುಖ್ಯವಾಗಿದೆ. ಅಪರಿಚಿತವಾದ ದಾರಿಯಲ್ಲಿ ನಡೆಯುವ ದಾರಿಹೋಕರಿಗೆ ಹಾದಿ ತೋರಿಸುವವರು, ಪಥಿಕರ ಹೊಸ ತಿಳುವಳಿಕೆಗೆ, ಹೊಸ ಅನುಭವಕ್ಕೆ ಕೂಡ ಕಾರಣವಾಗುತ್ತಾರೆ. ಆದ್ದರಿಂದ ಕಾದಂಬರಿಗಳಲ್ಲಿ ಪಯಣವೆನ್ನುವುದು ಕೇವಲ

ಪಥಿಕರಿಗೆ ಸೀಮಿತವಾದ ಕ್ರಿಯೆಯಲ್ಲ. ಅದು ಆ ಹಾದಿಯಲ್ಲಿ ಎದುರಾಗುವ ಅನೇಕ ಮಾರ್ಗದರ್ಶಕರ ಹಾಗೂ ಪಯಣಕ್ಕೆ ಒದಗಿಬರುವ ಮತ್ತು ಹಾದಿಯಲ್ಲಿ ಎದುರಾಗುವ ಅಡ್ಡಿತೊಡಕುಗಳ ಚಿತ್ರಣವೂ ಆಗಿದೆ. ಈ ಪಥಿಕ ಹಾಗೂ ಮಾರ್ಗದರ್ಶಕರ ಮುಖಾಮುಖಿಯು ಇಬ್ಬರ ಆಲೋಚನೆಗಳ ಪಲ್ಲಟಕ್ಕೂ ಕಾರಣವಾಗುತ್ತದೆ. ಇದು ಕಾದಂಬರಿಗಳಲ್ಲಿರುವ ಪಯಣದ ಪರಿಕಲ್ಪನೆಯ ಬಹುಸ್ತರೀಯತೆಯ ಗುಣವಾಗಿದೆ. 'ಅಳಿದಮೇಲೆ' ಕಾದಂಬರಿಯಲ್ಲಿ ಜನರನ್ನು ಭೇಟಿಯಾಗುವ ನಿರೂಪಕನಾದ ಕಾರಂತನ ಅನುಭವ ಮತ್ತು ಆಲೋಚನೆಗಳಲ್ಲಿ ಮಾತ್ರವಲ್ಲದೆ, ಇದಕ್ಕೆ ಕಾರಣವಾಗುವ ಶಂಭುವಿನ ಅನುಭವ ಮತ್ತು ಆಲೋಚನೆಗಳಲ್ಲಿ ಕೂಡ ಪಲ್ಲಟ ಸಂಭವಿಸುತ್ತದೆ. ಹಳೆಯ ಶಂಭು ಸತ್ತು ಹೊಸ ಶಂಭುವಿನ ಹುಟ್ಟು ಸಾಧ್ಯವಾಗುತ್ತದೆ. ಹೀಗೆ ಬಹುಮುಖಿಯಾಗಿ ಪರಿವರ್ತನೆಯನ್ನು ಪಯಣವು ಮಾಡುತ್ತ ಹೋಗುತ್ತದೆ.

ಪೂರ್ಣಚಂದ್ರ ತೇಜಸ್ವಿಯವರು ತಮ್ಮ 'ಅಬಚೂರಿನ ಪೋಸ್ಟಾಫೀಸು' ಕಥಾಸಂಕಲನದ ಮುನ್ನುಡಿಯಲ್ಲಿ "ಶಿವರಾಮ ಕಾರಂತರ ಜೀವನ ದೃಷ್ಟಿ ತಮ್ಮ ಬರೆಹದ ಮೇಲೆ ತಾತ್ವಿಕವಾದ ಪ್ರಭಾವ ಬೀರಿದೆ" ಎಂದು ದಾಖಲಿಸುತ್ತಾರೆ.[೧] ಪಯಣದ ಮೂಲಕ ಜೀವನಶೋಧ ಮಾಡುವ ಹಾಗೂ ಸಾಮಾಜಿಕ ಅವ್ಯವಸ್ಥೆಗೆ ಪ್ರತಿರೋಧ ಮಾಡುವ ಕಾರಂತರ ಗುಣವು ತೇಜಸ್ವಿಯವರಲ್ಲೂ ಕೊಂಚ ಮಟ್ಟಿಗೆ ಇದೆ. ಸರ್ಕಾರಿ ವ್ಯವಸ್ಥೆಗಳು ಹದಗೆಟ್ಟಿವೆ ಎಂಬುದನ್ನು ಪೊಲೀಸ್, ಜಡ್ಜ್, ಕೋರ್ಟ್, ಲಾಯರ್, ತಾಲೂಕ್ ಆಫೀಸ್ ಮುಂತಾದವುಗಳ ಮೂಲಕ ಸಾಮಾಜಿಕ ವ್ಯವಸ್ಥೆ ಕೆಟ್ಟಿದೆ ಎಂಬ ವಿಷಯದಲ್ಲಿ ತೇಜಸ್ವಿ ಮತ್ತು ಕಾರಂತರು ಸಮಾನ ಮನಸ್ಕರಾಗಿದ್ದಾರೆ. ಇದನ್ನು 'ಅಳಿದಮೇಲೆ', 'ಕರ್ವಾಲೊ', 'ತಬರನಕಥೆ' ಮುಂತಾದ ಕೃತಿಗಳಲ್ಲಿ ಗಮನಿಸಬಹುದಾಗಿದೆ. ಹೀಗೆ ಇಬ್ಬರಿಗೂ ಕಾದಂಬರಿಯಲ್ಲಿ ಯಾವುದೋ ಒಂದು ಗಟ್ಟಿಯಾದ ವಸ್ತುವನ್ನಿಟ್ಟುಕೊಂಡು ಪಯಣವನ್ನು ವಿಶ್ಲೇಷಣೆ ಅಥವಾ ಚರ್ಚೆಯನ್ನು ಮಾಡುವುದು ಮುಖ್ಯವಲ್ಲ. ಅದಕ್ಕೆ ಬದಲಾಗಿ ಬದುಕಿನ ಅಥವಾ ವ್ಯವಸ್ಥೆಯೊಳಗಿನ ಒಳಗಿನ ಸೂಕ್ಷ್ಮ ವಿವರಗಳನ್ನು ಚಿತ್ರಿಸುತ್ತಲೇ ಪರಸ್ಪರ ಸಂಬಂಧವಿಲ್ಲದಂತೆ ಚೆಲ್ಲಿಕೊಂಡಿರುವ ವಿವರಗಳಿಗೆ ಆಂತರಿಕವಾದ ಅರ್ಥವಿದೆ ಎಂಬ ಗ್ರಹಿಕೆಯಲ್ಲಿ ಕಾಣಿಸುವುದು ಮುಖ್ಯ. ಇಲ್ಲಿ ಇಬ್ಬರೂ ಸೂಕ್ಷ್ಮ ಮತ್ತು ಸಣ್ಣ ವಿವರಗಳ ಮೂಲಕ ಪಯಣದ ಪರಿಕಲ್ಪನೆಯನ್ನು ಕಟ್ಟಿಕೊಡುತ್ತಾ ಹೋಗುತ್ತಾರೆ.

'ಬೆಟ್ಟದ ಜೀವ': 'ಬೆಟ್ಟದ ಜೀವ' ಕಾದಂಬರಿಯು ಶಿವರಾಮಯ್ಯ ಎಂಬ ಕಥಾನಾಯಕ ಪುತ್ತೂರಿನ ತಮ್ಮ ಮನೆಯ ಹಸುವೊಂದು ಮೇಯಲು ಹೊರಟು ಮರಳಿ ಬಾರದಿದ್ದಾಗ ಅದನ್ನು ಹುಡುಕಲೆಂದು ಹೊರಡುವ ಘಟನೆಯಿಂದ ಸರಳವಾಗಿ ಶುರುವಾಗುತ್ತದೆ. ಸುಬ್ರಹ್ಮಣ್ಯದಿಂದ ಹನ್ನೆರಡು ಮೈಲು ದೂರವಿರುವ ಪಂಜವನ್ನು ತಲುಪಲೆಂದು ಪಯಣ ಹೊರಟ ಶಿವರಾಮಯ್ಯನು ಮುಸ್ಸಂಜೆಯಲ್ಲಿ ದಾರಿ ತಪ್ಪಿ ಜೀವ ಭಯದಿಂದ ಉಳಿದುಕೊಳ್ಳಲು ಆಶ್ರಯವನ್ನು ಹುಡುಕಿ ಕೆಲವು ದಾರಿಹೋಕ ಶೂದ್ರಗೌಡರೊಂದಿಗೆ ಕೆಳಬೈಲಿನಲ್ಲಿರುವ ಬ್ರಾಹ್ಮಣ ವ್ಯಕ್ತಿ ಗೋಪಾಲಯ್ಯನವರ ಮನೆಗೆ ಬರುತ್ತಾನೆ.

ಈ ಗೋಪಾಲಯ್ಯನವರೇ ಕಾದಂಬರಿಯ ಮುಖ್ಯ ಪಾತ್ರ ಹಾಗೂ ಕಾದಂಬರಿಯ ಶೀರ್ಷಿಕೆಗೆ ಪ್ರತಿಮೆಯಾಗುವವರು. ಅತಿಥಿಯಾಗಿ ಬಂದ ಶಿವರಾಮಯ್ಯನನ್ನು ಸ್ವಾಗತಿಸುವ ಗೋಪಾಲಯ್ಯ ತಮ್ಮ ಸತ್ಕಾರ, ಸರಳ ಮತ್ತು ನೇರ ನಡವಳಿಕೆಯಿಂದ ಅವನ ಮನಸ್ಸನ್ನು ಸೆಳೆಯುತ್ತಾರೆ. ಹೀಗಾಗಿ ಒಂದು ರಾತ್ರಿಯ ಆಶ್ರಯಕ್ಕೆಂದು ಆಕಸ್ಮಿಕವಾಗಿ ಬಂದ ನಿರೂಪಕ ಮೂರು ದಿನಗಳವರೆಗೆ ಅಲ್ಲಿ ಉಳಿಯುತ್ತಾನೆ. ಅಲ್ಲದೆ ಗೋಪಾಲಯ್ಯನವರ ಜೀವನವನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಾನೆ. ಗೋಪಾಲಯ್ಯನವರೊಂದಿಗೆ ಅಲ್ಲಿನ ಕಾಡು–ಮೇಡು, ತೋಟ–ಗದ್ದೆಗಳಲ್ಲಿ ಓಡಾಡುತ್ತಾ ಆ ಬೆಟ್ಟದ ಜೀವದಂತಿರುವ ಗೋಪಾಲಯ್ಯನವರ ಶ್ರಮಜೀವನದ ಜೊತೆಗೆ ಅವರ ಅಂತರಂಗದ ನೋವನ್ನು ಸಹ ಅರ್ಥ ಮಾಡಿಕೊಳ್ಳುತ್ತಾನೆ.

ಗೋಪಾಲಯ್ಯ ಕಾಡಿನ ನಡುವೆಯಿದ್ದು, ಅದು ಒಡ್ಡುವ ಕಠಿಣ ಸವಾಲುಗಳನ್ನು ಎದುರಿಸಿ ಅದಕ್ಕೆ ಹೊಂದಿಕೊಂಡು ಮತ್ತು ಅದನ್ನು ಬದಲಾಯಿಸುತ್ತ ಸಾರ್ಥಕವಾಗಿ ಬದುಕುವ ಪ್ರಯತ್ನ ಮಾಡಿದವರು. ಈ ಪ್ರಯತ್ನದಲ್ಲಿ ಅವರ ಹೆಂಡತಿ ಶಂಕರಿಯೂ ಸಹ ಭಾಗಿಯೇ. ಉಳುಮೆ ಮಾಡಿದಷ್ಟು, ತೋಳಿಗೆ ಬಲವಿದ್ದಷ್ಟು ಭೂಮಿ ಎನ್ನುವ ಭೂಮಿಯ ಬಗ್ಗೆ ಒಡೆತನದ ಬಗ್ಗೆ ಪೈಪೋಟಿ ಇಲ್ಲದ ಆ ಕಾಲದಲ್ಲಿ ಒಬ್ಬಂಟಿಯಾಗಿ ನಿಂತು ಕಾಟುಮೂಲೆಯಲ್ಲಿ ಸಾಗುವಳಿ ಮಾಡಿ ಅಡಿಕೆ ತೋಟ ಗದ್ದೆಯನ್ನು ಈತ ಮಾಡಿದವರು. ಆತನ ಒಬ್ಬಳೇ ಮಗಳು ಬಾಣಂತನದಲ್ಲಿ ಸತ್ತು, ಇದ್ದ ಒಬ್ಬ ಮಗನೂ ವಿದ್ಯಾಭ್ಯಾಸಕ್ಕೆಂದು ಹೋಗಿರುತ್ತಾನೆ. ಮಗನು ಹೋದ ಕಾರಣ ತಿಳಿಯದೆಯೇ ದೂರವಾದಾಗ, ಅನಾಥ ಹುಡುಗ ನಾರಾಯಣನನ್ನು ಗೋಪಾಲಯ್ಯ ಸಾಕುತ್ತಾನೆ. ಅವನಿಗೆ ಮದುವೆ ಮಾಡಿ ಅವನ ಸಂಸಾರವನ್ನು ಕಾಟುಮೂಲೆಯಲ್ಲಿ ನೆಲೆಗೊಳಿಸಿ ಅವನ ಮಕ್ಕಳನ್ನೇ ತನ್ನ ಮೊಮ್ಮಕ್ಕಳೆಂದು ಪ್ರೀತಿಸುತ್ತಾನೆ. ತನ್ನ ಮಗನನ್ನು ಅವರಲ್ಲೇ ಕಂಡುಕೊಳ್ಳುತ್ತಾನೆ.

ಎಳೆಯ ವಯಸ್ಸಿನಲ್ಲೇ ತಂದೆ–ತಾಯಿಯರನ್ನು ಕಳೆದುಕೊಂಡು, ಸ್ವಪ್ರಯತ್ನದಿಂದಲೇ ಮದುವೆಯಾದ ಗೋಪಾಲಯ್ಯ ಸಣ್ಣತನದಿಂದ ದೂರಾಗುತ್ತಾನೆ; ಮುಂದೆ ಹಣವನ್ನು ಕೈಲಿಟ್ಟುಕೊಂಡು ತನ್ನದೇ ಆದ ಜಮೀನನ್ನು ಕೊಳ್ಳಲು ಓಡಾಡಿದ ನಾರಾಯಣನಿಗೆ ಭದ್ರತೆಯನ್ನು ಒದಗಿಸಲು ಕಾಟುಮೂಲೆಯನ್ನು ದಾನಪತ್ರವನ್ನಾಗಿ ಕೊಟ್ಟು, ಮುಂದೆ ಎಂದಾದರೂ ಬರಬಹುದಾದ ಮಗನಿಗೆ ಪಿತ್ರಾರ್ಜಿತ ಆಸ್ತಿಯನ್ನು ಉಳಿಸಲು ನಿರ್ಧರಿಸುತ್ತಾನೆ. ಈ ಸಂದರ್ಭದಲ್ಲಿ ಕಾದಂಬರಿಯ ನಾಯಕನಿಗೆ ಗೋಪಾಲಯ್ಯ ಧೀಮಂತವಾದ ವ್ಯಕ್ತಿಯಾಗಿ ಕಂಡು ಬರುತ್ತಾನೆ.

ಶಿವರಾಮಯ್ಯನಿಗೆ ಕಾಟುಮೂಲೆಯ ನಾರಾಯಣ ಹಾಗೂ ಅವನ ಹೆಂಡತಿಯ ಪರಿಚಯವು, ಗೋಪಾಲಯ್ಯನ ಓಡಿ ಹೋದ ಮಗನ ಕುರಿತು ಕೆಲ ಸುಳಿವನ್ನು ಕೊಡುತ್ತದೆ. ನಾರಾಯಣನ ಹೆಂಡತಿಯ ಜೊತೆಗೆ ಗೋಪಾಲಯ್ಯನ ಮಗ ಶಂಭುಭಟ್ಟ ಅನುಚಿತವಾಗಿ ನಡೆದುಕೊಂಡದ್ದೆ ಅವನು ಓಡಿ ಹೋಗಲು ಕಾರಣವಿರಬಹುದು ಎಂದು ಅವನಿಗೆ ಗೊತ್ತಾಗುತ್ತದೆ.

ಆದರೆ ಗೋಪಾಲಯ್ಯ ಹೇಳುವಂತೆ ಅವನ ಮಗ ಕರುಳು ಸಂಬಂಧ ತೊರೆಯುವಂತೆ ಮಾಡಿದ್ದು ಇಂಗ್ಲಿಷ್ ವಿದ್ಯಾಭ್ಯಾಸವಾಗಿದೆ. ಶಿವರಾಮಯ್ಯನಿಗೆ ಗೋಪಾಲಯ್ಯನ ಮಗನ ಚಿಕ್ಕ ವಯಸ್ಸಿನ ಭಾವಚಿತ್ರವನ್ನು ಕಂಡಾಗ, ತಾನು ಹಿಂದೆ ಪುಣೆಯಲ್ಲಿ ಕಂಡ ಕೆ.ಎಸ್.ಶರ್ಮ ಹಾಗೂ ಆತನ ಮರಾಠಿ ಪತ್ನಿಯ ನೆನಪಾಗುತ್ತದೆ. ತಾನು ಕಂಡ ಶರ್ಮನ (ಅರ್ಥಾತ್ ಶಂಭುವಿನ) ಬಗೆಗಿನ ಕೆಲವು ವಿಚಾರಗಳನ್ನು ಹೇಳಿದಾಗ, ಆ ದಂಪತಿಗಳಿಗೆ ತಮ್ಮ ಮಗನ ಸುಳಿವು ಕೊಡುವ ಆಪದ್ಬಾಂಧವನಾಗಿ ಶಿವರಾಮಯ್ಯ ಕಂಡು ಬರುತ್ತಾನೆ. ಗೋಪಾಲಯ್ಯ ಮಗನನ್ನು ಹುಡುಕಲು ಶಿವರಾಮಯ್ಯನೊಂದಿಗೆ ಪುಣೆಗೆ ಪಯಣ ಹೊರಡುವ ಸೂಚನೆಯೊಂದಿಗೆ ಕಾದಂಬರಿ ಮುಗಿಯುತ್ತದೆ.

'ಅಳಿದಮೇಲೆ': ಶಿವರಾಮ ಕಾರಂತರ 'ಅಳಿದಮೇಲೆ' ಕಾದಂಬರಿಯಲ್ಲಿ ಯಾರ ಬಾಳೂ ವ್ಯರ್ಥವಲ್ಲ, ಎಲ್ಲರ ಬಾಳಿನಲ್ಲೂ ಹಲವಾರು ಸಾರ್ಥಕತೆಗಳನ್ನು ಕಾಣಬಹುದು ಎಂಬ ತತ್ವ ಅಡಗಿದೆ. ಬದುಕಿನ ಪಯಣದಲ್ಲಿ ಒಳ್ಳೆಯ ನಡವಳಿಕೆಗಳ ನೆನಪುಗಳೇ ಅಳಿದ ಮೇಲೆ ಉಳಿದುಕೊಂಡು ಅಳಿದ ವ್ಯಕ್ತಿಗೊಂದು ಪುನರ್ಜನ್ಮ ನೀಡುತ್ತವೆ. ಈ ಕಾದಂಬರಿಯಲ್ಲಿಯೂ 'ಬೆಟ್ಟದ ಜೀವ'ದಲ್ಲಿ ಇರುವಂತೆ ನಿರೂಪಕನ ಪಾತ್ರವನ್ನು ಕಾರಂತರು ತರುತ್ತಾರೆ. ಈ ನಿರೂಪಕನ ಮೂಲಕ ಯಶವಂತರ ಜೀವನದ ಆಳವನ್ನು ಇಣುಕಿ ನೋಡಿ ಅವರ ಬಾಳಿನ ಪಯಣದ ಹಾದಿಯ ಸಾರ್ಥಕತೆಯನ್ನು ತಿಳಿಸುವ ಕೆಲಸವನ್ನು ಕೃತಿ ಮಾಡುತ್ತದೆ.

ನಿರೂಪಕನಾದ ಕಾರಂತನ ಹಾಗೂ ಯಶವಂತರಾಯರ ಪ್ರಥಮ ಭೇಟಿಯು ಪುಣೆ-ಮುಂಬಯಿ ರೈಲು ಮಾರ್ಗದ ಪಯಣದಲ್ಲಿ ಆಗುತ್ತದೆ. ಈ ಭೇಟಿಯು ನಿರೂಪಕನನ್ನು ಯಶವಂತರಾಯರ ಮಂಬಯಿಯ ನಿವಾಸಕ್ಕೆ ಕರೆದೊಯ್ಯುತ್ತದೆ. ಅಲ್ಲಿ ಆತನಿಗೆ ಯಶವಂತರಾಯರ ಜೊತೆಗಿದ್ದ ದಾದಾನ ಮುಖಾಮುಖಿಯಾಗುತ್ತದೆ. ಉಳಿದ ಪಾತ್ರಗಳು ಯಶವಂತರ ಮರಣದ ನಂತರವೇ ನಿರೂಪಕನಿಗೆ ಭೇಟಿಯಾಗುತ್ತ ಹೋಗುತ್ತಾರೆ.

ಯಶವಂತರಾಯರು ತಮ್ಮ ಮರಣದ ಕಾಲಕ್ಕೆ ನಿರೂಪಕನಿಗೆ ತಂತಿ ಕಳಿಸಲು ವ್ಯವಸ್ಥೆ ಮಾಡಿರುತ್ತಾರೆ. ಆದರೆ ನಿರೂಪಕನ ಆಗಮನದ ಸ್ವಲ್ಪ ಸಮಯಕ್ಕೆ ಮೊದಲು ಅವರು ಇಹಲೋಕ ಯಾತ್ರೆ ಮುಗಿಸಿರುತ್ತಾರೆ. ಹೀಗಾಗಿ ನಿರೂಪಕನು ಯಶವಂತರಾಯರ ಶವದಹನ ಇತ್ಯಾದಿ ಕಾರ್ಯಗಳನ್ನು ಮುಗಿಸಿ ಅವರ ವಸ್ತುಗಳ ಉಸ್ತುವಾರಿ ವಹಿಸಿಕೊಳ್ಳುತ್ತಾನೆ. ಯಶವಂತರಾಯರು ತಮ್ಮ ದಿನಚರಿ ಮತ್ತು ಸುಮಾರು ಹದಿನೈದು ಸಾವಿರ ರೂಪಾಯಿಗಳಷ್ಟು ನಗದು ಹಣವನ್ನು ನಿರೂಪಕನ ವಶಕ್ಕೆ ಒಪ್ಪಿಸಿರುತ್ತಾರೆ. ಅದರಲ್ಲಿ ನಾಲ್ಕು ಜನರಿಗೆ ತಿಂಗಳಿಗೆ ಇಪ್ಪತ್ತೈದು ರೂಪಾಯಿಗಳನ್ನು ಕಳುಹಿಸಬೇಕೆಂಬ ಸೂಚನೆ ಇರುತ್ತದೆ. ಆ ನಾಲ್ಕು ಜನ ಯಾರು ಮತ್ತು ಅವರಿಗೂ ಯಶವಂತರಾಯರಿಗೂ ಇದ್ದ ನಂಟಿನ ಸ್ವರೂಪವೇನು ಎಂಬ ಕುತೂಹಲ ನಿರೂಪಕನಿಗೆ ಆಗುತ್ತದೆ. ಅವನು ಅವರನ್ನು ಅರಸುತ್ತ, ರಾಯರ ದಿನಚರಿಯನ್ನೋದಿ ಅವರ ಜತೆಗೆ ರಾಯರಿಗೆ ಇದ್ದ

ನಂಟನ್ನು ಅರ್ಥ ಮಾಡಿಕೊಳ್ಳುತ್ತ ಮತ್ತು ದಿನಚರಿಯಲ್ಲಿ ಇರುವ ಸಂಬಂಧಪಟ್ಟ ವ್ಯಕ್ತಿಗಳ ಚಿತ್ರಗಳನ್ನು ಅರ್ಥೈಸುತ್ತ ಪಯಣ ಆರಂಭಿಸುತ್ತಾನೆ. ನಿರೂಪಕನ ಈ ಮೂರು ಕಾರ್ಯಗಳು ಇಡೀ ಕಾದಂಬರಿಯ ಸ್ವರೂಪವನ್ನು ನಿಯಂತ್ರಿಸುವ ಮೂರು ಮುಖ್ಯವಾದ ಕ್ರಿಯೆಗಳಾಗಿವೆ. ಇಂತಹ ವಿಶಿಷ್ಟ ನಿರೂಪಣಾ ವಿಧಾನವು ಓದುಗರ ಅಪಾರವಾದ ಪತ್ತೇದಾರಿ ಕುತೂಹಲಕ್ಕೆ ಕಾರಣವಾಗಿದೆ. ಈ ಹುಡುಕಾಟದ ನಿರೂಪಣ ವಿಧಾನವೇ ಕಾದಂಬರಿಯ ಚಲನೆಗೂ ಕಾರಣವಾಗಿದೆ. ಯಾವತ್ತೂ ಪತ್ತೇದಾರಿ ಗುಣವೇ ಹುಡುಕಾಟಕ್ಕೂ ತಿರುಗಾಟಕ್ಕೂ ಪ್ರೇರಣೆ ಒದಗಿಸುತ್ತದೆ. ಆದರೆ ಇಲ್ಲಿನ ಪತ್ತೇದಾರಿತನ ಮತ್ತು ಹುಡುಕಾಟವು ರೋಚಕವಾದ ಸಂಗತಿಯಾಗಿಲ್ಲ. ಬದಲಿಗೆ ಬಾಳಿನ ಅರ್ಥವನ್ನು ಹುಡುಕುವ ಗಂಭೀರ ಯತ್ನವಾಗುತ್ತದೆ.

ಯಶವಂತರಾಯರು ಜೀವನದಲ್ಲಿ ಜಿಗುಪ್ಸೆಗೊಂಡು ಕುಮುಟೆಯಂತಹ ಸಣ್ಣ ಪಟ್ಟಣದಿಂದ ದೂರ ಸರಿದು ಜನಾರಣ್ಯವಾದ ಮುಂಬಯಿಯಂತಹ ಮಹಾಶಹರನ್ನು ಸೇರಿದವರು. ಅವರ ವ್ಯಕ್ತಿತ್ವದಲ್ಲಿ ಎದ್ದು ಕಾಣುವ ಎರಡು ಗುಣಗಳೆಂದರೆ ಅವರ ಧಾರಾಳತನ ಮತ್ತು ಜೀವನವನ್ನು ಅರ್ಥ ಮಾಡಿಕೊಳ್ಳಬೇಕೆಂಬ ತವಕ. ಅವರಿಗೆ ಮೂವರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಇದ್ದು, ಒಬ್ಬ ಹೆಣ್ಣ ಮಗಳನ್ನುಳಿದು ಉಳಿದವರು ಆರ್ಥಿಕವಾಗಿ ಒಳ್ಳೆಯ ಸ್ಥಿತಿಯಲ್ಲಿ ಬದುಕಿರುತ್ತಾರೆ. ಆದರೂ ಯಶವಂತರಾಯರು ತಮ್ಮ ಕೊನೆಯ ವರ್ಷಗಳನ್ನು ಎಲ್ಲರಿಂದ ದೂರವಾಗಿ ಮುಂಬಯಿಯಂಥ ಜನಾರಣ್ಯದಲ್ಲಿ ಕಳೆಯುವಂತಹ ಸನ್ನಿವೇಶವು ಬರುತ್ತದೆ. ಇದುವೇ ನಿರೂಪಕನ ಅದಮ್ಯ ಕುತೂಹಲಕ್ಕೂ ಇದರ ರಹಸ್ಯದ ಬೇಧಿಸಲು ಮಾಡುವ ತಿರುಗಾಟಕ್ಕೂ ಕಾರಣವಾಗುತ್ತದೆ.

ತಾಯಿಯಿಲ್ಲದ ತಬ್ಬಲಿಯಾಗಿ ಬೆಳೆದ ಯಶವಂತರಾಯರಿಗೆ ಬಾಲ್ಯದಲ್ಲಿ ಅಕ್ಕರೆಯನ್ನು ಒದಗಿಸಿದವರು ಪಾರೋತಿ. ತಮ್ಮ ಉಯಿಲಿನ ರೂಪದ ಕಾಗದದಲ್ಲಿ ಪ್ರತಿ ತಿಂಗಳು ಇಪ್ಪತ್ತೈದು ರೂಪಾಯಿಗಳನ್ನು ಕಳುಹಿಸಬೇಕೆಂದು ನಮೂದಿಸಿರುವುದರಲ್ಲಿ ಪಾರೋತಜ್ಜಿಯ ಹೆಸರು ಇರುತ್ತದೆ. ಉಯಿಲಿನಲ್ಲಿ ಉಲ್ಲೇಖಿಸಿರುವ ವ್ಯಕ್ತಿಗಳ ಹುಡುಕಾಟವೇ ನಿರೂಪಕನ ಪಾಲಿಗೆ ಯಶವಂತರಾಯರು ಬಿಟ್ಟು ಹೋದ ಹೆಜ್ಜೆಗಳ ಅರಸುವಿಕೆಯಾಗುತ್ತದೆ. ಮೂಕಾಂಬಿಕೆ ಕೂಡ ಪಾರೋತಜ್ಜಿಯ ಜೊತೆಗೆ ಬೆಳೆದ ಇನ್ನೊಂದು ಜೀವ. ಒಬ್ಬ ವ್ಯಕ್ತಿಯ ಜೀವನವನ್ನು ಅರಿತುಕೊಳ್ಳಬೇಕಾದರೆ ಬೇರೆಯವರ ಜೀವನವನ್ನು ಅರಿಯುವ ಅವಶ್ಯಕತೆ ನಿರೂಪಕನಿಗೆ ಉಂಟಾಗುತ್ತದೆ. ಇದರಿಂದ ನಿರೂಪಕನು ಆರಂಭಿಸುವ ಪಯಣವು ಕವಲೊಡೆಯುತ್ತ ಬೇರೆಬೇರೆ ದಿಕ್ಕಿಗೆ ಅವನನ್ನು ಕರೆದುಕೊಂಡು ಹೋಗುತ್ತದೆ. ಅವನು ಹೋದಂತೆಲ್ಲ ಕಾದಂಬರಿಯು ಬೆಳೆಯುತ್ತ ಹೋಗುತ್ತದೆ. ಕಾರಂತರ ಕಾದಂಬರಿಗಳಲ್ಲಿ ನಿರೂಪಕರ ಪಯಣ ಅಥವಾ ಓಡಾಟಗಳಿಗೂ ಕಾದಂಬರಿಯ ಕತೆಯು ವಿಸ್ತರಣೆ ಪಡೆಯುವುದಕ್ಕೂ ನೇರ ಸಂಬಂಧವಿದೆ. ಈ ಪಯಣದ ತಂತ್ರವು ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯೂ ತೇಜಸ್ವಿಯವರ 'ಕರ್ವಾಲೊ'ದಲ್ಲಿಯೂ ಬರುತ್ತದೆ.

ಯಶವಂತರಾಯರ ಜೀವನದಲ್ಲಿ ಮಹತ್ವದ ಇನ್ನೆರಡು ಪಾತ್ರಗಳೆಂದರೆ ಸರಸಿ ಮತ್ತು ಮೇರಿ. ಇವರಿಬ್ಬರನ್ನೂ ನಿರೂಪಕರು ಭೇಟಿ ಮಾಡುವುದಿಲ್ಲ. ಸರಸಿಯೂ ಯಶವಂತರಾಯರಿಗಿಂತ ಮೊದಲೇ ಮರಣ ಹೊಂದಿರುತ್ತಾಳೆ ಮತ್ತು ಮೇರಿಯ ವೃತ್ತಾಂತವು ಅವಳ ತಾಯಿಯಿಂದ ತಿಳಿದುಬರುತ್ತದೆ. ಸರಸಿಯೂ ವೇಶ್ಯಾ ಸಂಪ್ರದಾಯಕ್ಕೆ ಸೇರಿದವಳು. ಆದರೆ ಅವಳು ಕೈಹಿಡಿದ ಧರ್ಮಪತ್ನಿಗಿಂತ ಹೆಚ್ಚಿನ ವಿಶ್ವಾಸವನ್ನು ತೋರಿದವಳು. ಅವಳ ಮಗ ಶೀನನಿಗೆ ತಿಂಗಳಿಗೆ ಇಪ್ಪತ್ತೈದು ರೂಪಾಯಿ ಯಶವಂತರಾಯರಿಂದ ಮನಿ ಆರ್ಡರ್ ಹೋಗಿದೆ. ಆದರೆ ತಾಯಿಯ ಮರಣದ ನಂತರವೂ ಆಕೆಯ ಪಾಲಿನ ಹಣವನ್ನು ಪಡೆಯಲು ಶೀನ ಪ್ರಯತ್ನ ಪಟ್ಟಿರುತ್ತಾನೆ. ಹೀಗೆ ಯಶವಂತರಾಯರ ಜೀವನವನ್ನು ಅವರು ಬಿಟ್ಟು ಹೋದ ಚಿತ್ರಗಳು, ದಿನಚರಿ ಮತ್ತು ಅವರ ಸಹಾಯ ಪಡೆದ ವ್ಯಕ್ತಿಗಳ ಮೂಲಕ ಕಟ್ಟಲು ಕಾದಂಬರಿಯಲ್ಲಿ ಪ್ರಯತ್ನಿಸಲಾಗಿದೆ. ಈ ಎಲ್ಲ ವ್ಯಕ್ತಿಗಳ ಜೀವನವನ್ನು ಪುನಾರಚಿಸಲು ನಿರೂಪಕನು ಮಾಡುವ ಪಯಣವು ನೆರವಾಗುತ್ತದೆ.

೪.೨. ಪಯಣ: ಸಂಘರ್ಷ

ಶಿವರಾಮ ಕಾರಂತರ 'ಬೆಟ್ಟದಜೀವ', 'ಅಳಿದಮೇಲೆ' ಕಾದಂಬರಿಗಳಲ್ಲಿ ಪಾತ್ರಗಳು ಬದುಕಿನ ಪಯಣದಲ್ಲಿ ಸಂಘರ್ಷಗಳಿಗೆ ಒಳಗಾಗುತ್ತವೆ. ಅಂತಹ ಸಂಘರ್ಷದ ಘಟನೆಗಳನ್ನು ನಿರೂಪಕನ ಹಾಗೂ ಆಯಾ ಪಾತ್ರಗಳು ಮಾಡುವ ಪಯಣದ ಹಿನ್ನೆಲೆಯಲ್ಲಿ ನೋಡುವ ಕ್ರಮವು ಕಾದಂಬರಿಯಲ್ಲಿ ಅಳವಡಿಕೆಯಾಗಿದೆ. 'ಬೆಟ್ಟದಜೀವ' ಕಾದಂಬರಿಯ ಆರಂಭದಲ್ಲಿ ನಿರೂಪಕ ಶಿವರಾಮಯ್ಯ ಕಳೆದು ಹೋದ ಹಸುವನ್ನು ಹುಡುಕುವ ಸಂದರ್ಭದಲ್ಲಿ ಆಕಸ್ಮಾತ್ ದಾರಿತಪ್ಪಿದಾಗ ತನಗೆ ದಾರಿಯಲ್ಲಿ ಸಿಕ್ಕ ಶೂದ್ರಗೌಡರ ರಾತ್ರಿ ಹತ್ತಿರ ಉಳಿದುಕೊಳ್ಳಲು ಜಾಗ ಕೇಳಿದಾಗ ಅವರು ಕೊಡುವ ಉತ್ತರ ಹೀಗಿದೆ: "ಅಯ್ಯೋ, ನೀವು ಬ್ರಾಹ್ಮಣರಾಗಿ ಕಾಣಿಸುತ್ತೀರಿ. ನಾವು ಗೌಡರು. ನಿಮಗೆ ಮಲಗಲು ಒಂದು ದಿಂಬು, ಕಂಬಳಿ, ಚಾಪೆ ಕೊಡುವ ಯೋಗ್ಯತೆ ನಮಗೆಲ್ಲಿದೆ? ನೀವು ಊಟವಿಲ್ಲದೆ ಮಲಗುವ ಹಾಗಿಲ್ಲ. ಹಾಗೆ ಮಲಗಿದರೆ ನಿದ್ದೆಯೂ ಬರಲಾರದು. ನಿಮ್ಮನ್ನು ಕಂಡರೆ ಪೇಟೆ ಶಹರಿನವರಾಗಿ ಕಾಣಿಸುತ್ತೀರಿ"(ಪು.೩).

ಈ ಕಾದಂಬರಿಯ ಪ್ರಕಾರ, ಹಳ್ಳಿಯ ಜನರಿಗೆ ಅದರಲ್ಲೂ ಕಾದಂಬರಿಯಲ್ಲಿನ ಕೆಳಜಾತಿಯ ಗೌಡರಿಗೆ ಮೇಲ್ವರ್ಗದವರ ಉಡುಗೆ-ತೊಡುಗೆ ಪರಿಚಯವಿದೆ. ಅವರ ಆಹಾರ ಪದ್ಧತಿಯ ಸಂಸ್ಕೃತಿಯ ಚಹರೆಗಳ ಕುರಿತು ಜ್ಞಾನವಿದೆ. ಇದು ಒಂದು ಸಮುದಾಯದ ಸಂಸ್ಕೃತಿ ಇನ್ನೊಂದು ಸಂಸ್ಕೃತಿಯ ಮೇಲೆ ಬೀರಿರುವ ಪರಿಣಾಮವನ್ನು ಜನರು ತಮ್ಮ ಜೀವನಕ್ರಮದ ಭಾಗವಾಗಿ ಅರಿತಿರುತ್ತಾರೆ ಎನ್ನುವುದನ್ನು ಸೂಚಿಸುತ್ತದೆ. ಪಶ್ಚಿಮಘಟ್ಟ ಮತ್ತು ಕರಾವಳಿ ನಡುವಿನ ಈ ಪ್ರದೇಶದಲ್ಲಿ ಜೀವಂತವಾಗಿರುವ ಮೇಲ್ಜಾತಿ-ಮೇಲ್ವರ್ಗ ಮತ್ತು ಕೆಳಜಾತಿ-ಕೆಳವರ್ಗದವರ ನಡುವಿರುವ ಜೀವನಕ್ರಮವಿಲ್ಲಿ ಕಂಡುಬರುತ್ತದೆ. ಒಂದು ಸಾಮಾಜಿಕ ವ್ಯವಸ್ಥೆ ನಿರ್ಮಿಸಿರುವ

ಅಡೆತಡೆಗಳು ಯಾವ ಬಗೆಯದೆಂಬುದನ್ನು ಈ ಪಯಣದ ಸಂದರ್ಭದಲ್ಲಿ ಕಂಡುಬರುತ್ತದೆ. ಶಿವರಾಮಯ್ಯ ಮತ್ತು ಸ್ಥಳೀಯ ಗೌಡರ ನಡುವಿನ ಸಂವಾದದ ಮೂಲಕ ಸಮುದಾಯಗಳ ನಡುವಿರುವ ಬಿಕ್ಕಟ್ಟು ಸಂಘರ್ಷ ಹಾಗೂ ಹಲವಾರು ತಲ್ಲಣಗಳು ಹೊರಬರುತ್ತವೆ. ಸಾಂಸ್ಕೃತಿಕ ಲೋಕದ ಈ ತಲ್ಲಣಗಳು ತಿಳಿಯುವುದು ಅಪರಿಚಿತ ವ್ಯಕ್ತಿಯಾಗಿ ಪಯಣ ಮಾಡಿಕೊಂಡು ಹೋಗುವ ನಿರೂಪಕನ ನೆಪದಲ್ಲಿ ಎಂಬುದು ಇಲ್ಲಿ ಮುಖ್ಯವಾದುದು. ಹೀಗಾಗಿ ಪಯಣವು ಪರೋಕ್ಷವಾಗಿ ಕಾದಂಬರಿಗಳಲ್ಲಿ ಸಮುದಾಯಗಳ ಸಾಮಾಜಿಕ ಸಾಂಸ್ಕೃತಿಕ ಏರುಪೇರುಗಳನ್ನು ಕಾಣಿಸುವ ಒಂದು ತಂತ್ರವಾಗಿಯೂ ಕೆಲಸ ಮಾಡುತ್ತದೆ.

ಇದೇ ಹಿನ್ನೆಲೆಯಲ್ಲಿ ಗೋಪಾಲಯ್ಯ ತನ್ನ ಹೆಂಡತಿಯ ಬಗ್ಗೆ ನಿರೂಪಕರಿಗೆ ಹೇಳುವ ಈ ಮಾತುಗಳು ಗಮನಾರ್ಹವಾಗಿವೆ: "ಅಂದರೆ ನೋಡಿ ನಮ್ಮ ಶಂಕರಿಗೆ ಮಡಿ ಮೈಲಿಗೆ ಹೆಚ್ಚು ಶೂದ್ರರ ಮನೆಯ ಅಂಗಳವನ್ನು ಮೆಟ್ಟಿ ಬಂದರೆ, ಮನೆ ಹೋಗುವ ಮೊದಲು ಸ್ನಾನವಾಗಬೇಕು, ಅವಕ್ಕೆ ಯಾವ ಮಡಿ ಮೈಲಿಗೆ ಇದೆ? ಮನೆಯಂತಿಲ್ಲ, ಅಡುಗೆ ಮನೆಯಂತಿಲ್ಲ-ಊರೆಲ್ಲಾ ಕೋಳಿಗಳ ಪಿಷ್ಠೆ ಅದನ್ನು ಮುಟ್ಟ ಬೇಕಾದೀತಲ್ಲ ಎಂದು ಅವಳ ಹೆದರಿಕೆ"(ಪು.೧೪). ಗೋಪಾಲಯ್ಯನ ಈ ಮಾತು, ಉಚ್ಚಜಾತಿಯವರಲ್ಲಿ ಕೆಳಜಾತಿಯವರ ಜೀವನಕ್ರಮದ ಬಗ್ಗೆ ಇರುವ ತಿರಸ್ಕಾರದ ಭಾವನೆಯನ್ನು ಹೊರಹಾಕುತ್ತದೆ. ಮೇಲ್ಜಾತಿಯ ಭೂಮಾಲೀಕರಿಗೆ ಶೂದ್ರರು ದಲಿತರು ತಮ್ಮ ಗದ್ದೆತೋಟಗಳಲ್ಲಿ ದುಡಿಯಲು ಬೇಕು. ಆದರೆ ಅವರ ಜತೆ ಸಹಜವಾಗಿ ಬೆರೆಯಲು ಅವರಿಗೆ ಮಾತ್ರ ಸಾಧ್ಯವಾಗಿಲ್ಲ. ಇದಕ್ಕೆ ಕಾರಣವಾಗಿರುವುದು ಜಾತಿಪದ್ಧತಿ ನಿರ್ಮಿಸಿರುವ ಗೋಡೆ. ಇಲ್ಲಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಶೂದ್ರರ ಮನೆಗೆ ಮೇಲ್ವರ್ಗದವರು ಹೋಗಬಹುದು. ಆದರೆ ಶೂದ್ರರು ಮೇಲ್ಜಾತಿಯವರ ಮನೆಗೆ ಪ್ರವೇಶಿಸುವಂತಿಲ್ಲ. ಮಡಿ ಮೈಲಿಗೆಯ ನೆಲೆಯಲ್ಲಿ ಜಾತಿಯ ಯಜಮಾನಿಕೆ ಮತ್ತು ಶೋಷಣೆ ತಲೆತಲಾಂತರದಿಂದ ಸಾಗುತ್ತಲೇ ಬಂದಿದೆ. ಮೇಲ್ಜಾತಿಯ ಚಲನೆಗೆ ಮುಕ್ತ ಅವಕಾಶ ಒದಗಿಸಿರುವ ಜಾತಿಸಮಾಜವು ಕೆಳಜಾತಿಗಳ ಮೇಲ್ಚಲನೆಯನ್ನು ನಿಯಂತ್ರಿಸಿರುವುದು ಇಲ್ಲಿ ಕಂಡುಬರುತ್ತದೆ. ಗೋಪಾಲಯ್ಯನ ಹೆಂಡತಿ ಶಂಕರಿ ಈಗಾಗಲೇ ಒಂದು ಜೀವನಕ್ರಮಕ್ಕೆ ಹೊಂದಿಕೊಂಡಿದ್ದು ಮತ್ತೊಂದು ಜೀವನಕ್ರಮಕ್ಕೆ ಹೊಂದಿಕೊಳ್ಳಲಾಗದ ಸ್ಥಿತಿಯಲ್ಲಿರುವವಳು. ಅವಳಿಗೆ ತನ್ನ ಸಾಂಪ್ರದಾಯಿಕ ಜೀವನಪದ್ಧತಿಯನ್ನು ಉಲ್ಲಂಘಿಸಿ ಇನ್ನೊಂದು ಜೀವನಪದ್ಧತಿಗೆ ಮಾನಸಿಕವಾಗಿ ಚಲಿಸುವುದು ಕಷ್ಟ ಆದರೆ ಪಿ.ಲಂಕೇಶರ 'ಸಂಕ್ರಾಂತಿ' ನಾಟಕದಲ್ಲಿ ಬ್ರಾಹ್ಮಣರ ಹುಡುಗಿ ಉಷಾ ತನ್ನದೇ ಸಮುದಾಯದ ಮಡಿ ಮೈಲಿಗೆ ವಿಚಾರಗಳಿಗೆ ಹೊಂದಿಕೊಳ್ಳಲಾಗದೆ ಹೊಲೆಯನಾದ ರುದ್ರನ ಜೀವನಕ್ರಮಕ್ಕೆ ಹೊಂದಿಕೊಂಡು ಮಾನಸಿಕ ಪಯಣ ಬೆಳೆಸುತ್ತಾಳೆ. ಇವೆರಡೂ ಮಾನಸಿಕ ಪಯಣದ ದೃಷ್ಟಿಯಿಂದ ಭಿನ್ನವಾದ ನೆಲೆಗಳು. ಅನೇಕ ಸಲ ಸಾಂಪ್ರದಾಯಿಕ ಸಮಾಜದಲ್ಲಿ ಇರುವ ಹೊರಗಿನ ಪಯಣ ಮತ್ತು ಚಲನೆ ಕಡಿಮೆಯಿರುವ ಮಹಿಳೆಯರಲ್ಲಿ ಹೆಚ್ಚಿನ ಮಡಿವಂತಿಕೆ ಕಂಡುಬರುತ್ತದೆ. ಆದರೆ ಇಲ್ಲಿ ಹೊರಜಗತ್ತಿಗೆ

ಪಯಣ ಮಾಡುವ ಸಾಧ್ಯತೆಯಿರುವ ಗೋಪಾಲಯ್ಯ ಕೂಡ ಮನೆಯಲ್ಲೇ ಇರುವ ತನ್ನ ಮಡದಿ ಶಂಕರಿಗಿಂತಲೂ ಸಂಪ್ರದಾಯವಾದಿಯಾಗಿದ್ದಾನೆ. ಈ ವೈರುಧ್ಯ ಮತ್ತು ಸಂಘರ್ಷವನ್ನು ಕಾದಂಬರಿ ಸೂಕ್ಷ್ಮವಾಗಿ ಕಾಣಿಸುತ್ತದೆ. ಇದರ ಕಾಣಿಸುವಿಕೆಗೆ ಪಯಣಿಗನಾಗಿ ಹೋದ ನಿರೂಪಕನ ಸಾಕ್ಷಿಪ್ರಜ್ಞೆಯನ್ನು ಕಾದಂಬರಿ ಬಳಸಿಕೊಳ್ಳುತ್ತದೆ. ವ್ಯಂಗ್ಯವೆಂದರೆ, ಕಾದಂಬರಿಯಲ್ಲಿ ನಿರೂಪಕನು ಮೇಲುಜಾತಿಯ ಜನರಲ್ಲಿ ಕೆಳಜಾತಿಯವರ ಸಂಸ್ಕೃತಿ ಇರುವ ಈ ನಿರಾಕರಣೆಯ ಧೋರಣೆಯನ್ನು ವಿಮರ್ಶೆ ಮತ್ತು ಮೌಲ್ಯಮಾಪನ ಮಾಡುವುದಿಲ್ಲ. ಆದ್ದರಿಂದ ಹಲವಾರು ಪ್ರದೇಶಗಳಿಗೆ ನಿರಂತರವಾಗಿ ಪಯಣ ಮಾಡುವ ಹವ್ಯಾಸವುಳ್ಳ ನಿರೂಪಕ ಶಿವರಾಮಯ್ಯನು ಸಂಪ್ರದಾಯವಾದಿ ಅಲ್ಲ. ಹೀಗಾಗಿಯೇ ಆತ ಗೌಡರ ಮನೆಯಲ್ಲಿ ಮಲಗಲು ಸ್ಥಳ ಕೇಳಬಲ್ಲ. ಆದರೆ ಗೋಪಾಲಯ್ಯನ ಸಾಮಾಜಿಕ ಧೋರಣೆಯ ಬಗ್ಗೆ ಅವಿಮರ್ಶಾತ್ಮಕವಾಗಿಯೇ ಉಳಿಯುತ್ತಾನೆ. ಪಯಣದ ಜತೆ ಲಗತ್ತಾಗಿರುವ ಈ ಎಲ್ಲ ಸಂಗತಿಗಳನ್ನು ಕಾದಂಬರಿ ಸೂಚ್ಯವಾಗಿ ಕಾಣಿಸುತ್ತದೆ.

೪.೩. ಪಯಣ: ಅನುಭವ ಶೋಧ

ಮಾನವ ಬದುಕಿನ ಅನುಭವ ಶೋಧದ ಕಾರ್ಯವು ಬೇರೆ ಬೇರೆ ರೂಪಗಳಲ್ಲಿ ನಡೆಯುತ್ತದೆ. ಅನುಭವವು ವ್ಯಕ್ತಿಯ ಹಲವು ವರ್ಷಗಳ ಹೋರಾಟದ ಮೂಲಕ ಕಂಡುಕೊಂಡ ಜ್ಞಾನವಾಗಿದೆ. ಅನುಭವ ಶೋಧವೆಂದರೆ ಅರ್ಥವನ್ನು ಹುಡುಕುವುದಲ್ಲ; ಹೊಸ ಅನುಭವ ಪಡೆಯುವ ಜೊತೆಯಲ್ಲಿ ವಿಶ್ಲೇಷಿಸುವುದು ಸಹ ಆಗಿದೆ. ವ್ಯಕ್ತಿ ಹಾಗೂ ಕುಟುಂಬದ ಒಳಗಿನ ತುಮುಲಗಳ ಆಂತರಿಕ ತೊಳಲಾಟವನ್ನು ಕಾಣಿಸುವ ವಿಧಾನವು ಕಾದಂಬರಿಗಳಲ್ಲಿ ಇರುತ್ತದೆ. ಒಬ್ಬ ವ್ಯಕ್ತಿ ಕಾಡು–ಹಳ್ಳಿ–ನಗರಗಳಿಗೆ ಕೃಷಿ, ಶಿಕ್ಷಣ, ಉದ್ಯೋಗ, ತೀರ್ಥಯಾತ್ರೆಗಳಿಗೆಂದು ವಲಸೆ ಹೊರಟಾಗ, ಅಲ್ಲಿ ದೊರೆಯುವ ಆಧುನಿಕ ಸೌಲಭ್ಯ ಹಾಗೂ ಎದುರಾಗುವ ಮನುಷ್ಯ ಸಂಬಂಧಗಳು ಅವರ ಪಾಲಿಗೆ ವಿಶಿಷ್ಟ ಅನುಭವಗಳನ್ನು ಕಟ್ಟಿಕೊಡುತ್ತವೆ. ಈ ವಿಶಿಷ್ಟ ಅನುಭವಗಳಿಗೆ ಕಾರಣವಾದ ವಲಸೆ ಅಥವಾ ಪಯಣಗಳು, ನೇತ್ಯಾತ್ಮಕವಾಗಿರಬಹುದು ಇಲ್ಲವೇ ಧನಾತ್ಮಕವಾಗಿರಬಹುದು. ಕಾರಂತರ ಕಾದಂಬರಿಗಳು, ಈ ವಲಸೆಯ ಭಾಗವಾಗಿ ವ್ಯಕ್ತಿಗಳ ಅನುಭವದಲ್ಲಿ ಕಾಣಿಸುವ ಈ ಧನಾತ್ಮಕ ಮತ್ತು ನೇತ್ಯಾತ್ಮಕ ಆಯಾಮಗಳನ್ನು ಶೋಧಿಸುತ್ತವೆ.

ಈ ಹಿನ್ನೆಲೆಯಲ್ಲಿ, ಕಾರಂತರ 'ಬೆಟ್ಟದಜೀವ' ಮತ್ತು 'ಅಳಿದಮೇಲೆ' ಕಾದಂಬರಿಗಳಲ್ಲಿ ಅಡಗಿಕೊಂಡಿರುವ ದೊಡ್ಡ ಅಂತಃಶಕ್ತಿ ಅನುಭವ ಶೋಧವಾಗಿದೆ. ಇದನ್ನು ಕಾದಂಬರಿಯಲ್ಲಿ ಬರುವ ವಿವಿಧ ವ್ಯಕ್ತಿಗಳು ಮಾಡುವ ಪಯಣದ ಸಂದರ್ಭಗಳಲ್ಲಿ ಪ್ರಕಟವಾಗುವುದನ್ನು ಗಮನಿಸಬಹುದಾಗಿದೆ. 'ಬೆಟ್ಟದಜೀವ' ಕಾದಂಬರಿಯ ಕಥಾನಾಯಕ ಶಿವರಾಮಯ್ಯನಿಗೆ ಕೆಳಬೈಲಿಗೆ ಬಂದ ಹೊಸತರಲ್ಲಿ ಗೋಪಾಲಯ್ಯನೊಂದಿಗಿನ ತಿರುಗಾಟದಲ್ಲಿ ಅಲ್ಲಿನ ಅನೇಕ ವ್ಯಕ್ತಿಗಳನ್ನು ಕಾಣುತ್ತಾನೆ. ಅವರ ಜೀವನ ವಿಧಾನವನ್ನು ತನ್ನ ಅನುಭವದ ಮೂಲಕ ಅಳೆಯುತ್ತಾನೆ. ಅವನಿಗೆ

ಕೆಳಜಾತಿಯ ಕೆಲಸದಾಳು ಬಟ್ಯ ಎಂಬುವನು ಹೇಳುವ ವರ್ಷಗಳ ಲೆಕ್ಕವೇ ವಿಚಿತ್ರವಾಗಿ ತೋರುತ್ತದೆ. ಆತನಿಗೆ ವಯಸ್ಸೆಷ್ಟು ಎಂದು ಕೇಳಿದಾಗ "ಏನೋ ಬುದ್ಧಿ. ವಯಸ್ಸಾಯಿತು ತುಂಬ, ನಮ್ಮ ಅಯ್ಯ ಹೇಳುತ್ತಾರೆ ನನಗೆ ನೂರು ವರ್ಷವಂತೆ. ನನ್ನ ಹೊಲತಿ ಅನ್ನುತ್ತಾಳೆ. ನೂರು ಗೀರು ಆಗಲಿಕ್ಕಿಲ್ಲ. ಇಪ್ಪತ್ತು ಮೂವತ್ತಕ್ಕೆ ಮೋಸವಿಲ್ಲ ಎಂದು. ಯಾವುದು ಸತ್ಯವೋ, ಯಾವುದು ಸುಳ್ಳೋ" ಎನ್ನುತ್ತಾನೆ(ಪು.೬೫). ಇದು ಬಟ್ಯನ ವಿಶಿಷ್ಟ ಕಾಲಪ್ರಜ್ಞೆಯ ಸಂಕೇತವಾಗಿದೆ. ಇದು ಗ್ರಾಮೀಣ ಪ್ರದೇಶದ ಮುಗ್ಧಜನರು ಕಾಲಪ್ರವಾಹದಲ್ಲಿ ತಮ್ಮ ಜೀವನಪಯಣವನ್ನು ಇಟ್ಟು ನೋಡುವ ವಿಶಿಷ್ಟವಿಧಾನದ ಸಂಕೇತವಾಗಿದೆ. ನಾಗರಿಕ ಜಗತ್ತಿನಲ್ಲಿ ಇರುವ ಕಾಲದ ಕಲ್ಪನೆಗಿಂತ ಭಿನ್ನವಾದ ಕಾಲಪರಿಕಲ್ಪನೆಯಿದು. ಇಲ್ಲಿ ಬಟ್ಯನ ಹಾಸ್ಯಪ್ರಜ್ಞೆಯೂ ಇದೆ. ಇದರಲ್ಲಿ ಸಾವನ್ನು ಕಾಣುವ ಅವನ ವಿಶಿಷ್ಟ ದೃಷ್ಟಿಕೋನ ಹಾಗೂ ಮೌಲ್ಯಪ್ರಜ್ಞೆಯೂ ಅಡಗಿದೆ. ಈ ಸನ್ನಿವೇಶದ ಮೂಲಕ ನಾಗರಿಕ ಜಗತ್ತಿಗೆ ದೂರವಾಗಿ ಬದುಕುವ ಜನರಲ್ಲಿ ಇರುವ ಜೀವನದ ಮತ್ತು ಕಾಲದ ಪರಿಕಲ್ಪನೆಯನ್ನು, ಅದರ ಸಂಕೀರ್ಣತೆಯನ್ನು ಶಿವರಾಮಯ್ಯ ಕಂಡುಕೊಳ್ಳುತ್ತಾನೆ. ಈ ರೀತಿಯ ವಿಭಿನ್ನ ವ್ಯಕ್ತಿಗಳ ಜೊತೆಗಿನ ಸಹಜ ಮತ್ತು ಲಘುವಾದ ಸಂಭಾಷಣೆಯಲ್ಲಿಯೂ ಜೀವನದ ಅನುಭವವನ್ನು ನಿರೂಪಕ ಶೋಧಿಸುತ್ತಾನೆ. ಈ ಶೋಧಕ್ಕೆ ಕಾರಣವಾಗುವುದು ಅವನು ಆ ಪ್ರದೇಶಕ್ಕೆ ಹೊಸಬನಾಗಿರುವುದು. ಪಯಣವು ಯಾವಾಗಲೂ ಹೊಸಹೊಸ ಅನುಭವಗಳಿಗೆ ವ್ಯಕ್ತಿಯನ್ನು ಈಡುಮಾಡುತ್ತದೆ. ಅವನ ಜೀವನ ಅನುಭವ ಹಾಗೂ ಮೌಲ್ಯಪ್ರಜ್ಞೆಯನ್ನು ಬದಲಿಸುತ್ತದೆ. ಹೀಗಾಗಿ ಪಯಣಗೈದು ಹೋದ ವ್ಯಕ್ತಿಮಾತ್ರ ಬದಲಾಗುವುದಿಲ್ಲ. ಪಯಣಮಾಡಿ ಬಂದ ಅಪರಿಚಿತ ವ್ಯಕ್ತಿಯ ಸಹವಾಸ ಮಾಡಿದ ವ್ಯಕ್ತಿಕೂಡ ಬದಲಾಗುತ್ತಾನೆ.

ಗೋಪಾಲಯ್ಯ ಮಾರ್ಗದರ್ಶಕನಾಗಿ ಶಿವರಾಮಯ್ಯನನ್ನು ಅಲೆದಾಟಕ್ಕೆ ಕರೆದುಕೊಂಡು ಹೋಗುವ ಒಂದು ಸನ್ನಿವೇಶದ ವಿವರಣೆ ನಿರೂಪಕನ ಮೂಲಕ ಹೀಗೆ ಬರುತ್ತದೆ: "ಗೋಪಾಲಯ್ಯ ಅಬ್ಬಿಗಳ ಹಾದಿಯನ್ನು ಬಿಟ್ಟು, ಗಿಡಗಳನ್ನು ಸವರುತ್ತ, ಹಳುವನ್ನು ಹೊಕ್ಕರು. ಅವರನ್ನು ಹಿಂಬಾಲಿಸಿದ ನನಗೆ ದಾರಿಗೆಟ್ಟಂತಾಯಿತು. ಕೆಲವು ಕ್ಷಣಗಳ ಕಾಲ, ನಾವು ಕಾಡಿನಲ್ಲಿ ಕುರುಡಾಗಿ ಅಲೆದು, ತಿರುಗಿ ಮತ್ತೊಂದು ಕಾಲುದಾರಿಯನ್ನು ಸೇರಿದೆವು..... ಇದು ಕುಮಾರ ಪರ್ವತ ಇದು ನಮ್ಮ ಶೇಷ ಪರ್ವತ, ಇದು ಸಿದ್ಧ ಪರ್ವತ"(ಪು.೨೧-೨೨). ಇಲ್ಲಿ ಗೋಪಾಲಯ್ಯ ಹೊಸ ಸ್ಥಳಗಳನ್ನು ತೋರಿಸಿದ್ದಲ್ಲದೆ ಅಲ್ಲಿನ ದಂತಕಥೆಗಳನ್ನೂ ನಿರೂಪಕನಿಗೆ ಹೇಳುತ್ತಾರೆ. ಇಲ್ಲಿ ವಹಿಸುವ ಪಾತ್ರವು ಮಾರ್ಗದರ್ಶಕನದು. ವ್ಯಕ್ತಿಗಳಿಗೆ ಈ ಮೊದಲೇ ಕೆಲವು ಜಾಗಗಳ ಪ್ರವಾಸದಿಂದ ಬಂದಿರುವ ಅನುಭವವು ಬೇರೆಯವರ ಜತೆ ಹಂಚಿಕೊಳ್ಳಲು ಪ್ರೇರಿಸುತ್ತದೆ. ಅತಿಥಿಯಾಗಿ ಬಂದಿರುವ ಶಿವರಾಮಯ್ಯನಿಗೆ ಗೋಪಾಲಯ್ಯ ತಿರುಗಾಟದ ಸಂದರ್ಭದಲ್ಲಿ ಸುತ್ತಮುತ್ತಲಿನ ಸ್ಥಳಗಳ ಕುರಿತು ತನ್ನ ಅನುಭವದ ಮೂಲಕ ಪರಿಚಯಿಸುತ್ತಾನೆ. ಇದೇ ಅನುಭವ ಹಂಚಿಕೆಯ ವಿನ್ಯಾಸವು ಇತರೆ ಕಾದಂಬರಿಗಳಲ್ಲೂ ಬರುತ್ತದೆ. ಪೂರ್ಣಚಂದ್ರ ತೇಜಸ್ವಿಯವರ 'ಕರ್ವಾಲೊ' ಕಾದಂಬರಿಯಲ್ಲಿ

ತನ್ನ ತಿರುಗಾಟದಿಂದ ಪಡೆದ ಅನುಭವವನ್ನು ಮಂದಣ್ಣನು ಕರ್ವಾಲೊ ಅವರಿಗೆ ಹಾರುವ ಓತಿ ಹಿಡಿಯಲು ಒದಗಿಸುತ್ತಾನೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವ ಅಂಶವೆಂದರೆ, ನಿರ್ದಿಷ್ಟ ಪ್ರದೇಶದಲ್ಲಿ ವಾಸ ಮಾಡುವವರಿಗೆ ಆ ಪ್ರದೇಶದ ಬಗೆಗಿನ ಅನುಭವವು ಅವರು ಮಾಡುವ ಅಥವಾ ಮಾಡಿಸುವ ಪಯಣದ ಯಶಸ್ಸನ್ನು ನಿರ್ಧರಿಸುತ್ತದೆ. ಪ್ರವಾಸ ಮಾಡಿಬಂದವರು ಪ್ರವಾಸ ಮಾಡದವರಿಗೆ ಅನುಭವ ಹಂಚಿಕೊಳ್ಳುವ ಒಂದು ವಿಧಾನವಿದೆ. ಆದರೆ ಇಲ್ಲಿ ಅನುಭವ ಹಂಚಿಕೊಳ್ಳುವವರೂ ಅನುಭವ ಪಡೆಯುವವರೂ ಒಟ್ಟಿಗೆ ಪ್ರವಾಸದ ಪ್ರಕ್ರಿಯೆಯಲ್ಲಿರುವಾಗ ಈ ಹಂಚಿಕೆ ನಡೆಯುತ್ತಿದೆ ಎಂಬುದು ಗಮನಾರ್ಹ.

ಗೋಪಾಲಯ್ಯ ನಿರೂಪಕನ ಜತೆ ಮನುಷ್ಯ ಸಂಬಂಧಗಳ ವಿಚಿತ್ರವನ್ನು ಕುರಿತು ಹೀಗೆ ವ್ಯಾಖ್ಯಾನಿಸುತ್ತಾನೆ: "ನನಗೆ ಒಂದೊಂದು ಸಾರಿ ಹೀಗೂ ಅನಿಸುತ್ತದೆ; ಹೀಗೆ ಗತಿಯಿಲ್ಲದೆ ಬಂದವರಿಗೆ ಏನಾದರೊಂದು ಉಪಕಾರ ಮಾಡಿದರೆ ಉಳಿಯುವಷ್ಟು ನೆನಪು, ನಮ್ಮವರಿಗೇನೆ ಉಳಿಯುವುದಿಲ್ಲ ಅಲ್ಲವೆ? ಈಗ ನಾರಾಯಣ ನಿಜಕ್ಕೂ ಸೋದರಳಿಯನೋ ಮತ್ತೊಬ್ಬನೋ ಆಗಿದ್ದರೆ, ಹೀಗೆ ನಿಮಿಷ ನಿಮಿಷಕ್ಕೂ ಮಾವ ಮಾವ ಅನ್ನುತ್ತಿದ್ದಾನೇ? ಇಷ್ಟರೊಳಗೆ ಎಲ್ಲಿನ ಮಾವನೋ, ಎಲ್ಲಿನ ಅಳಿಯನೋ ಆಗುತ್ತಿತ್ತು"(ಪು.೮೪). ಇಲ್ಲಿ ಗೋಪಾಲಯ್ಯ ಜೀವನದಲ್ಲಿ ಕಂಡ ಮನುಷ್ಯ ಸಂಬಂಧಗಳಲ್ಲಿನ ಸೂಕ್ಷ್ಮ ಸಂಗತಿಗಳನ್ನು ಹಾಗೂ ತನ್ನ ಅನುಭದಲ್ಲಿ ಕಂಡುಕೊಂಡ ಸಂಗತಿಗಳನ್ನು ತುಲನೆ ಮಾಡುತ್ತಾನೆ. ರಕ್ತ ಸಂಬಂಧಕ್ಕಿಂತಲೂ ಅಕಸ್ಮಾತ್ ಅಪರಿಚಿತರೊಡನೆ ಏರ್ಪಡುವ ಸ್ನೇಹ ಸಂಬಂಧದಲ್ಲಿ ಆತನಿಗಿರುವ ಕಾಳಜಿ ವ್ಯಕ್ತವಾಗಿದೆ. ಈಗಾಗಲೇ ಮಗ ಶಂಭು ಆತನಿಂದ ದೂರವಾಗಿದ್ದಾನೆ. ಎಲ್ಲಿಂದಲೋ ಬಂದ ನಾರಾಯಣ ಅವನಿಗೆ ಆತ್ಮೀಯನಾಗಿದ್ದಾನೆ. ಸಂಬಂಧಗಳ ಬಂಧದಲ್ಲಿನ ಏರು-ಪೇರುಗಳ ನಡುವಿನ ಪಯಣಕ್ಕಿರುವ ಎರಡು ಮುಖಗಳನ್ನು ಅವನ ಮನಸ್ಸು ಅನುಭವದ ಪಕ್ವತೆಯಲ್ಲಿ ವಿಶ್ಲೇಷಿಸುತ್ತದೆ. ಅಷ್ಟೇ ಅಲ್ಲ ಜೀವನದಲ್ಲಿ ಕಂಡುಕೊಂಡ ಮೌಲ್ಯಗಳ ಅನಾವರಣವನ್ನು ಅದು ಮಾಡುತ್ತದೆ.

'ಅಳಿದಮೇಲೆ' ಕಾದಂಬರಿಯಲ್ಲಿ ನಿರೂಪಕನು ಆಡುವ ಈ ಮಾತುಗಳನ್ನು ಗಮನಿಸಬಹುದು: "ಕೇವಲ ಹೊತ್ತು ಹೋಗದ್ದಕ್ಕೆ ಬರೆದಾರೆಯೋ? ಇರಲಾರದಲ್ಲ... ಚಿತ್ರಕಲೆ ಅವರ ಭಾಷೆಯಾಗಿಲ್ಲ; ನಿಜ! ಭಾಷೆ ತಿಳಿಯದವನೊಬ್ಬ ಪರದೇಶಕ್ಕೆ ಹೋದರೆ, ಕೈ ಬಾಯಿಗಳ ಸನ್ನೆಯಿಂದ, ತನ್ನದೇ ಆದ ರೀತಿಯಿಂದ: ನನಗೆ ಇಂಥಲ್ಲಿಗೆ ಹೋಗಬೇಕಾಗಿದೆ: ದಾರಿ ತೋರಿಸಿ ಎಂದು ಹೇಳಲು ಪ್ರಯತ್ನ ಮಾಡಬಾರದೆಂದಿದೆಯೇ"(ಪು.೧೭). ಯಶವಂತರಾಯನು ಬರೆದ ಚಿತ್ರಪಟಗಳು ಕೇವಲ ಸಮಯ ಕಳೆಯುವ ಸಲುವಾಗಿ ಬರೆಯಲಿಲ್ಲ. ಚಿತ್ರ ಬರೆಯುವುದರ ಹಿಂದೆ ಅವನ ಬದುಕಿನ ಪಯಣದ ಅನುಭವಗಳು ಅಲ್ಲಿ ಜಾಗ ಪಡೆಯುತ್ತವೆ. ಈ ಅನುಭವಗಳ ಪ್ರಪಂಚಕ್ಕೆ ಚಿತ್ರವನ್ನು ಮಾಧ್ಯಮವಾಗಿ ಆತ ಬಳಸಿಕೊಂಡಿರಬಹುದು. ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಅನುಭವಗಳಲ್ಲಿ ನೋವು-ಸಂತೋಷಗಳನ್ನು ವ್ಯಕ್ತಪಡಿಸುವುದುಂಟು. ಹಾಗೆಯೇ ಅವನ

ಹಿಂದಿನ ಮತ್ತು ಮುಂದಿನ ಜೀವನ ಪಯಣದಲ್ಲಿನ ಅನುಭವಗಳಿಗೆ ಚಿತ್ರ ಮಾಧ್ಯಮದ ಬಳಕೆ ಮುಖ್ಯ ವೇದಿಕೆಯಾಗಿ ಬಳಕೆಯಾಗಿರಬಹುದು. ಮುಖ್ಯವಾದ ಸಂಗತಿಯೆಂದರೆ, ಈ ಚಿತ್ರಪಟಗಳು ನಿರೂಪಕನಿಗೆ ಯಶವಂತರಾಯನು ಬಾಳಿಬದುಕಿದ ಸ್ಥಳಗಳಿಗೆ ಪಯಣ ಬೆಳೆಸುವುದಕ್ಕೆ ಪ್ರಚೋದನೆ ಕೊಡುತ್ತವೆ. ಪಯಣದ ವೇಳೆಯಲ್ಲಿ ಆತನಿಗೆ ಚಿತ್ರಗಳ ಹಿಂದಿನ ನಿಗೂಢತೆಯು ಬಿಚ್ಚಿಕೊಳ್ಳುತ್ತ ಹೋಗುತ್ತದೆ. ದಿನಚರಿ ಮತ್ತು ಚಿತ್ರಪಟಗಳು ಯಶವಂತರಾಯನ ವ್ಯಕ್ತಿತ್ವ ಅನಾವರಣ ಮಾಡುವ ಮೂಲಕ ನಿರೂಪಕನಿಗೆ ಭಿನ್ನ ಅನುಭವಗಳಿಗೆ ವೇದಿಕೆಯೊಂದನ್ನು ಕಲ್ಪಿಸಿಕೊಡುತ್ತವೆ. ಹೀಗೆ ಕಾದಂಬರಿ ವಿನ್ಯಾಸದಲ್ಲಿ ಕಾದಂಬರಿ ನಾಯಕನ ಚಿತ್ರಕಲೆಯ ಹವ್ಯಾಸವು ಅವನ ಬಾಳಿನ ಹಿಂಪಯಣವನ್ನು ಅರಿಯಲು ಇನ್ನೊಂದು ತಲೆಮಾರಿಗೆ ಸೇರಿದ ನಿರೂಪಕನು ಪಯಣ ಮಾಡುವುದಕ್ಕೆ ರಹದಾರಿಯನ್ನು ನಿರ್ಮಿಸುತ್ತವೆ.

ಏಕವ್ಯಕ್ತಿಯ, ಘಟನೆಯ, ಸನ್ನಿವೇಶದ, ವಿಶ್ಲೇಷಣೆಯ ಅನುಭವ ಶೋಧ ಮಾಡುವುದು ಕಾರಂತರ ಕಾದಂಬರಿಗಳ ಉದ್ದೇಶವಲ್ಲ. ಅವು ಒಬ್ಬ ವ್ಯಕ್ತಿಯ ಬದುಕಿನ ನೆಪದಲ್ಲಿ ಒಂದು ಸಮುದಾಯದ ಅಥವಾ ಗುಂಪಿನ ಅನುಭವ ಶೋಧವನ್ನು ಮಾಡುತ್ತವೆ. ಯಶವಂತರಾಯನ ಪಾತ್ರದ ಜೊತೆಯಲ್ಲೇ 'ಅಳಿದಮೇಲೆ' ಕಾದಂಬರಿಯು ದಾದಾ, ಮೇರಿ, ಸರಸಿ, ಪಾರ್ವತವ್ವ ಮುಂತಾದ ಹಲವು ಪಾತ್ರಗಳ ಅನುಭವ ಶೋಧವನ್ನು ಕಾದಂಬರಿ ಮಾಡುತ್ತದೆ. ಯಶವಂತ ರಾಯನಂತಿರುವ ಮತ್ತು ಅವನಂತೆ ಇಲ್ಲದಿರುವ ಹಲವು ಜನರ ಅನುಭವದ ಶೋಧವನ್ನು ಕಾದಂಬರಿ ಮಾಡುತ್ತದೆ. ಪಯಣವೆನ್ನುವುದು ಆರಂಭದಿಂದ ಕೊನೆಯನ್ನು ತಲುಪುವ ಕ್ರಿಯೆಯಲ್ಲ; ಬದಲಿಗೆ ಅದು ಪಯಣದ ಹಾದಿಯಲ್ಲಿ ಸಿಗುವ ಹಲವು ವ್ಯಕ್ತಿಗಳ ವ್ಯಕ್ತಿತ್ವದ ಶೋಧ ಕೂಡ. ಹಲವು ಘಟನೆಗಳ ಮುಖಾಮುಖಿ, ಅವುಗಳ ವಿಶ್ಲೇಷಣೆ, ಅವುಗಳಲ್ಲಿನ ಅರ್ಥಗಳ ಹುಡುಕಾಟಗಳ ಮೂಲಕ ಇಡೀ ಸಮಾಜದ ಚಿತ್ರಣವನ್ನು ಕಟ್ಟಿಕೊಡುವುದು ಅದರ ಉದ್ದೇಶವಾಗಿದೆ. ಹೀಗೆ ಪಯಣವೆನ್ನುವುದು ವ್ಯಕ್ತಿಯ ಬಾಳಿನ ಅನುಭವಗಳ ಹಾಗೂ ಸಮಾಜದ ಬಾಳಿನ ಅರ್ಥಶೋಧದ ದೊಡ್ಡ ಪ್ರಕ್ರಿಯೆಯಾಗಿದೆ.

'ಅಳಿದಮೇಲೆ' ಕಾದಂಬರಿಯ ಕೊನೆಯ ಭಾಗದಲ್ಲಿ ನಿರೂಪಕನು ಯಶವಂತರಾಯನನ್ನು ಸಂಧ್ಯಾಕಾಲದಲ್ಲಿ ನೆನೆಯುವ ಸಂದರ್ಭವೊಂದು ಹೀಗಿದೆ: "ನನ್ನ ಮನಸ್ಸು ಅಂದಿನ ಸಂಜೆಯ ಭೇಟಿಯಿಂದಾಗಿ ತುಂಬಾ ನೊಂದಿತ್ತು; ಹೋಗಿ ಕಡಲ ದಂಡೆಯಲ್ಲಿ ಕುಳಿತು, ಉರುಳಿ ಬರುತ್ತಿರುವ ಅಲೆಗಳನ್ನು ನೋಡುತ್ತ ಹೊತ್ತು ಕಳೆದೆ. ಬಾನಿನಲ್ಲಿ ಮುಳುಗುವ ಸೂರ್ಯ ಕೆಂಪಡರಿ, ಅವನ ಬಿಂಬ ದೊಡ್ಡ ದೊಡ್ಡದಾಗುತ್ತ, ದಿಗಂತದ ಅಂಚನ್ನು ಸಮೀಪಿಸುತ್ತಿದ್ದ. ನಂದುವ ದೀಪಕ್ಕೆ ಬೆಳಕು ಹೆಚ್ಚು ಎನ್ನುತ್ತಾರೆ. ಹಾಗೆಯೇ ಮುಳುಗುವ ಸೂರ್ಯನಿಗೂ ಚೆಲುವು ಹೆಚ್ಚು. ಇಷ್ಟೆಲ್ಲವಾದ, ಪ್ರತಿವಾದ, ದೂರು, ತೆಗಳಿಕೆ, ಹೊಗಳಿಕೆಗಳನ್ನು ನನ್ನ ಮಿತ್ರರ ವಿಷಯದಲ್ಲಿ ನಾನು ಕೇಳಿದೆ.

ಆದರೆ, ನನಗೆ ಅವರ ಪರಿಚಯವಾದದ್ದು ಬಾಳಿನ ಕಡು ಸಂಜೆಯಲ್ಲಿ. ಸಂಧ್ಯಾಕಾಲದ ಸೂರ್ಯನಂತೆ ನನಗೆ ಅವರು ತುಂಬಿದ ಜೀವವಾಗಿ ಕಾಣಿಸಿದರು"(ಪು.೧೬೫). ಈ ಪ್ರಸಂಗವು ಬಹಳ ಸಾಂಕೇತಿವಾಗಿದೆ. ಇಲ್ಲಿ ಯಶವಂತರಾಯನ ಸಾವಿನ ನಂತರ ಅವನ ಬದುಕಿನ ಚೆಲವು ನಿರೂಪಕನ ಅನುಭವದಲ್ಲಿ ಹೆಚ್ಚುತ್ತ ಹೋಗಿರುವುದನ್ನು ಕಾಣುತ್ತೇವೆ. ಸಮುದ್ರದಲ್ಲಿ ಏಳುವ ಅಲೆಗಳು ಪಯಣಿಸುತ್ತ ಚಲಿಸುತ್ತಾ ದಡವನ್ನು ಸೇರಿ ಮತ್ತೆ ಮತ್ತೆ ಹುಟ್ಟುತ್ತವೆ. ಈ ಚಲನೆ ಅಥವಾ ಪಯಣ ಪುನಃ ಪುನಃ ಜರುಗುತ್ತಲೇ ಇರುತ್ತದೆ. ಹಾಗೆಯೇ ಯಶವಂತರಾಯರಂತಹ ಒಳ್ಳೆಯ ಪಾತ್ರಗಳು ಹುಟ್ಟುತ್ತಲೇ ಇರುತ್ತವೆ. ಯಶವಂತ ಎಂಬ ಹೆಸರಿಟ್ಟುಕೊಂಡಿರುವ ಆತನ ಮೊಮ್ಮಗನು ಹುಟ್ಟಿರುವುದು ಜೀವನದ ಪಯಣವು ನಿರಂತರವಾಗಿದೆ ಎಂಬುದನ್ನು ಧ್ವನಿಸುತ್ತದೆ. ಇಲ್ಲಿ ಅಲೆಗಳು ಮಾಡುವ ಚಲನೆಯಂತೆ, ಸೂರ್ಯನು ಕೂಡ ತನ್ನ ಇಡೀ ದಿನದ ಪಯಣವನ್ನು ಮುಗಿಸಿ ಮುಳುಗುತ್ತಿರುವನು. ಹೀಗೆ ಇಲ್ಲಿ ಪಯಣದ ವಿವಿಧ ಆಯಾಮಗಳು ಪ್ರಕೃತಿಯ ವಿವರಗಳ ಮೂಲಕ ಬಿಂಬಿತವಾಗುತ್ತವೆ. ಚಿತ್ರಿಸುತ್ತವೆ. ಕಾರಂತರ ಮುಖ್ಯ ಉದ್ದೇಶವೇ ಗತಿಸಿ ಹೋದ ವ್ಯಕ್ತಿಯ ಮತ್ತು ಜೀವಂತವಿರುವ ವ್ಯಕ್ತಿಗಳ ಚಲನಶೀಲ ಬದುಕಿನ ಅರ್ಥವನ್ನು ಶೋಧ ಮಾಡುವುದು. ಯಶವಂತರಾಯನ ಹಣದ ವಿಲೇವಾರಿಗಳ ಮೂಲಕ ಮನುಷ್ಯ ಸಂಬಂಧಗಳ ಶೋಧವನ್ನು ಅವರು ನಿರೂಪಕನ ಪಾತ್ರದ ಮೂಲಕ ಮಾಡಿಸುತ್ತಾರೆ. ಟಿ.ಪಿ.ಅಶೋಕ ಅವರು 'ಕಾರಂತರ ಕಾದಂಬರಿಗಳಲ್ಲಿ ಕೌಟುಂಬಿಕ ವ್ಯವಸ್ಥೆಯ ದ್ವಂದ್ವಗಳು' ಎಂಬ ಲೇಖನದಲ್ಲಿ ಮನುಷ್ಯ ಸಂಬಂಧಗಳನ್ನು ಕಾರಂತರು ಕಾಣಿಸುವ ಬಗೆಯನ್ನು ಕುರಿತು ಹೀಗೆ ಅಭಿಪ್ರಾಯಪಡುತ್ತಾರೆ: "ಕಾರಂತರ ಕಾದಂಬರಿಗಳಲ್ಲಿ ಬರುವ ಮನುಷ್ಯ ಸಂಬಂಧಗಳ ಜಾಡನ್ನು ಹಿಡಿದು ಹೋದರೆ ಇಲ್ಲಿ ವೈವಿಧ್ಯಮಯವಾದಂಥ ಕಾರಂತ ಪ್ರಪಂಚವನ್ನು, ಒಂದು ವೈವಿಧ್ಯಮಯವಾದ ಮನುಷ್ಯ ಸಂಬಂಧಗಳ ಜಾಲವನ್ನು ಕಾರಂತರು ಕೊಡ್ತಾ ಹೋಗುತ್ತಾರೆ."[೨] ಅವರ ಪ್ರಕಾರ, ಮನುಷ್ಯ ಸಂಬಂಧಗಳಲ್ಲಿನ ಹಲವು ಮುಖಗಳನ್ನು ಶೋಧಿಸುವ ಕಾರಂತರು ಹೊಸದೊಂದು ಪ್ರಪಂಚವನ್ನೆ ಕಡೆದು ನಿಲ್ಲಿಸುತ್ತಾರೆ. ಅವರು ಕಾದಂಬರಿಗಳಲ್ಲಿ ಮೆಚ್ಚುವ, ಸಹಾನುಭೂತಿ ತೋರಿಸುವ ಮತ್ತು ಗೌರವಿಸುವ ಪಾತ್ರಗಳೆಲ್ಲ ಸಾಮಾನ್ಯವಾಗಿ ಒಂದು ಜೀವನ ಸಿದ್ಧಾಂತದ ಹಿನ್ನೆಲೆಯಲ್ಲಿ ತಮ್ಮ ಬದುಕನ್ನು ನಡೆಸುವ ಮನೋಭಾವದವರು. ಸಮಾಜದಿಂದ ತಾನು ಪಡೆದದ್ದಕ್ಕಿಂತ ಕೊಟ್ಟದ್ದು ಒಟ್ಟಿನಲ್ಲಿ ಹೆಚ್ಚಾಗಿರಬೇಕು ಎಂಬುದೇ ಆ ಸಿದ್ಧಾಂತ. ಈ ದೃಷ್ಟಿಯು ಮೂಲತಃ ಸ್ವಾವಲಂಬನ ಮತ್ತು ಸಮಾಜದ ಋಣದ ಕಲ್ಪನೆಯಿಂದ ಪ್ರೇರಿತವಾದದ್ದು. ಇಂಥ ದೃಷ್ಟಿಯುಳ್ಳ ವ್ಯಕ್ತಿಯು ತನ್ನ ಬದುಕಿನ ನೆಮ್ಮದಿ, ಸುಖಗಳನ್ನು ಕೆಡಿಸಿಕೊಳ್ಳದೆ ಇತರರ ಅಥವಾ ಸಮೂಹದ ನೆಮ್ಮದಿ, ಸುಖಗಳಿಗೂ ಕಾರಣವಾಗುತ್ತಾನೆ. ವ್ಯಕ್ತಿ ತನ್ನ ಸಮೂಹದ ಸುಖಗಳಿಗೆ ಕಾರಣವಾಗುವಂಥ ವ್ಯಕ್ತಿತ್ವದ ಶೋಧನೆಯೂ ಕಾರಂತರಲ್ಲಿ ಮೂಲತಃ ಜೀವನ ಶ್ರದ್ಧೆಯ ಶೋಧನೆಯೇ ಆಗುತ್ತದೆ. ಈ ಜೀವನಶ್ರದ್ಧೆಯ ಶೋಧದಲ್ಲಿ ಪಯಣದ ಪರಿಕಲ್ಪನೆಯು ಅತಿಹೆಚ್ಚು ಬಳಕೆಯಾಗುತ್ತದೆ ಎನ್ನುವುದು ಇಲ್ಲಿ ಮುಖ್ಯ ಸಂಗತಿಯಾಗಿದೆ.

೪.೪. ಪಯಣ: ಆಲೋಚನ ಕ್ರಮ

ಸಮಾಜ, ವ್ಯಕ್ತಿ, ಸನ್ನಿವೇಶ ಬದುಕನ್ನು ಕುರಿತ ನಮಗೆ ಒಂದು ಪರಿಕಲ್ಪನೆಯಿರುತ್ತದೆ. ಕೆಲವೊಮ್ಮೆ ಅಂತಹ ಪರಿಕಲ್ಪನೆಗಳು ಅನುಭವ ಪಡೆದ ಬಳಿಕ ಅದಲು ಬದಲು ಆಗಬಹುದು. ನಮಗೆ ವ್ಯಕ್ತಿಯೊಬ್ಬರಲ್ಲಿ ಮೊದಲು ಕಂಡ ಗುಣ ಅವರೊಂದಿಗಿನ ತಿರುಗಾಟದಲ್ಲಿ ಬದಲಾಗಬಹುದು. ಆದರೆ ಅವು ಬದಲಾಗದೆಯೂ ಇರಬಹುದು.[೩] ಈ ಹಿನ್ನೆಲೆಯಲ್ಲಿ ಕಾರಂತರ ಕಾದಂಬರಿಗಳಲ್ಲಿರುವ ಪಾತ್ರಗಳ ಆಲೋಚನ ಕ್ರಮ ಮತ್ತು ಸಮಾಜ ಕುರಿತ ತಿಳುವಳಿಕೆಗಳು ಪಯಣದ ಸಂದರ್ಭದಲ್ಲಿ ಪಲ್ಲಟವಾಗುವುದನ್ನು ತಿಳಿಯಬಹುದಾಗಿದೆ.

ಭಾರತೀಯ ಜಾತಿ ಸಮಾಜದಲ್ಲಿ ಮೊದಲಿನಿಂದಲೂ ಮನುಷ್ಯರ ಆಲೋಚನ ಕ್ರಮದಲ್ಲಿ ಮೇಲು-ಕೀಳು ಮನೋಭಾವ ಒಂದೆಡೆಯಿದ್ದರೆ, ಇನ್ನೊಂದೆಡೆ ಬೇರೆ ಸಮುದಾಯಗಳನ್ನು ಅವರ ಬೆನ್ನಹಿಂದೆ ಟೀಕಿಸುವ ಮತ್ತು ವ್ಯಂಗ್ಯಮಾಡುವ ಪದ್ಧತಿಯಿದೆ. ಮೇಲ್ಜಾತಿಯವರು ಕೆಳಜಾತಿಯವರ ಮನೆಗಳಿಗೆ ಹೋಗಿ ಬಂದಾಗ ಸ್ವಯಂ ಶುದ್ಧೀಕರಣಗೊಳ್ಳುವ ರೂಢಿಯಿದೆ. 'ಅಳಿದಮೇಲೆ' ಕಾದಂಬರಿಯಲ್ಲಿ ಇಂತಹ ಜಾತಿ ಆಚರಣೆಗಳ ಅನೇಕ ವಿವರಗಳು ಬರುತ್ತವೆ. ಇಲ್ಲಿ ಬ್ರಾಹ್ಮಣರಂತೆ ಹೊಲೆಯರ ಬಟ್ಯ ತರಕಾರಿ ಬೆಳೆಯುತ್ತ ಶಿಷ್ಟ ನಾಗರಿಕನಾಗಿ ಪರಿವರ್ತನೆಯಾಗುವುದು ಮೇಲ್ಜಾತಿಯವರಿಗೆ ತಳಮಳವನ್ನು ಉಂಟುಮಾಡುವ ಸೂಕ್ಷ್ಮ ವಿವರಗಳು ಬರುತ್ತವೆ. ಬಟ್ಯ ದುಡಿಯುವ ಸಲುವಾಗಿ ಹಲವಾರು ಕಡೆ ತಿರುಗಾಟ ಮಾಡಿ ಬ್ರಾಹ್ಮಣರ ಕೃಷಿ ಪದ್ಧತಿಯನ್ನು ಅರಿತು ಬೆಳೆಯುತ್ತಾನೆ. ಇದು ಅವನಿಗೆ ಸಾಧ್ಯವಾಗುವುದು ಅವನ ತಿರುಗಾಟದಿಂದ. ತಾವು ವಾಸಿಸುವ ಪ್ರದೇಶದಿಂದ ಹೊರಗೆ ಹೋಗಿ ಬಂದಾಗ, ಜನರಲ್ಲಿ ವಿಶೇಷ ತಿಳುವಳಿಕೆ ಮೂಡುತ್ತದೆ. ಬಟ್ಯನಲ್ಲಿ ಆಗಿರುವ ಈ ಪರಿವರ್ತನೆಯನ್ನು ಮೇಲ್ಜಾತಿಯ ಜನರು ವ್ಯಂಗ್ಯಮಾಡುವುದನ್ನು ಕಾದಂಬರಿ ದಾಖಲಿಸುತ್ತದೆ. ಪಯಣ ವಲಸೆ ತಿರುಗಾಟಗಳು ಸ್ಥಳಬದ್ಧವಾಗಿ ಬದುಕುವ ಜನರಲ್ಲಿ ಹೊಸಪ್ರಜ್ಞೆಯನ್ನು ಕೊಡುವ ಶಕ್ತಿಯಾಗಿ ಬದಲಾಗುವುದನ್ನು ಇಲ್ಲಿ ಗಮನಿಸಬಹುದು.

ಮೇಲ್ವರ್ಗ-ಮೇಲ್ಜಾತಿ ಮತ್ತು ಕೆಳವರ್ಗ-ಕೆಳಜಾತಿಗಳ ಬದುಕುಗಳ ಚಲನೆಯಲ್ಲಿನ ಅಂತರಗಳು, ಅವುಗಳ ನಡುವೆ ನಡೆಯುವ ಸಂಘರ್ಷಗಳು ಕುವೆಂಪು ಕಾದಂಬರಿಗಳಲ್ಲಿ ಹೆಚ್ಚು ಮೂರ್ತವಾಗಿ ಕಾಣಿಸಿಕೊಳ್ಳುತ್ತವೆ. ಆದರೆ 'ಚೋಮನದುಡಿ' ಬಿಟ್ಟರೆ ಕಾರಂತರ ಕಾದಂಬರಿಗಳಲ್ಲಿ ಈ ಅಂತರ ಮತ್ತು ಸಂಘರ್ಷಗಳು ತೀವ್ರವಾಗಿ ಚಿತ್ರಣಗೊಳ್ಳುವುದಿಲ್ಲ. ಇದಕ್ಕೆ ಕಾರಣ ಕುವೆಂಪು ಅವರಲ್ಲಿ ಜಾತಿವಿರೋಧಿ ಮತ್ತು ಕೆಳವರ್ಗ ಪರವಾದ ಸಾಮಾಜಿಕ ಪ್ರಜ್ಞೆಯ ಪರಿಣಾಮ ಆಗಿದೆ. ಹೀಗಾಗಿ ಕುವೆಂಪು ಕಾದಂಬರಿಗಳಲ್ಲಿ ಪಯಣದ ವಿವರಗಳು ಜಾತಿಸಮಾಜದ ಕ್ರೌರ್ಯಗಳನ್ನು ದಾಖಲಿಸುವ ಆಯಾಮವನ್ನು ಸಹ ಪಡೆದುಕೊಳ್ಳುತ್ತವೆ. ಈ ಪ್ರಕ್ರಿಯೆ ಕಾರಂತರ ಕಾದಂಬರಿಗಳಲ್ಲಿ ಕೊಂಚ ಕ್ಷೀಣವಾಗಿ ಬರುತ್ತದೆ. 'ಬೆಟ್ಟದ ಜೀವ'ದ ಗೋಪಾಲಯ್ಯ ತನ್ನ ಮನೆಗೆ ಬಂದ

ಶಿವರಾಮಯ್ಯನಿಗೆ ತನ್ನ ಹೊಲವನ್ನು ತೋರಿಸುವ ತವಕ ಈ ಕೆಳಗಿನಂತೆ ಪ್ರಕಟವಾಗುತ್ತದೆ: "ಬೇಡ, ಅಡಿಕೆಯ ಕೆಲಸ ಇಲ್ಲಿಗೆ ಸಾಕು. ನಿಮ್ಮನ್ನು ನಾನು ಕಾಟುಮೂಲೆಗೆ ಕರೆದುಕೊಂಡು ಹೋಗುತ್ತೇನೆ ಎಂದಿದ್ದೆ. ಅಲ್ಲಿನ ತೋಟಕ್ಕೆ ಬೇಸಿಗೆಯಲ್ಲಿಯೂ ನೀರು ಬೇಡ, ಯಾವಾಗಲೂ ಅಲ್ಲಿ ನೆಲ ತಂಪಾಗಿಯೇ ಇರುತ್ತದೆ. ಅಲ್ಲಿ ಸ್ವಲ್ಪ ಬಯಲು ಗದ್ದೆಯೂ ಇದೆ: ಹಾಗೆ ಸ್ವಲ್ಪ ಕಬ್ಬು, ಬತ್ತ ಎಲ್ಲವನ್ನೂ ಬೆಳೆಯಿಸುತ್ತಿದ್ದೇವೆ. ಅವೆಲ್ಲವೂಗಳ ಮೇಲು ತನಿಖೆ ನಮ್ಮ ನಾರಾಯಣನಿಗೆ" (ಪು.೩೩). ನಮ್ಮ ಮನೆಗಳಿಗೆ ಬಂದ ಅತಿಥಿಗಳನ್ನು ಅವರಿಗೆ ಬೇಸರವಾಗದಿರಲೆಂದು ನಮಗೆ ಗೊತ್ತಿರುವ ಹೊಲ, ಮನೆ, ಸ್ಥಳಗಳಿಗೆ ಕರೆದುಕೊಂಡು ಹೋಗುವುದು ಸಹಜ. ಈ ಪದ್ಧತಿಯಲ್ಲಿ ಆಧುನಿಕತೆಗೆ ತಕ್ಕಂತೆ ಅಲ್ಪಸ್ವಲ್ಪ ಬದಲಾವಣೆಗಳಾಗಿವೆ. ಆದರೂ ದೂರದಿಂದ ಪಯಣ ಮಾಡಿ ಬಂದಿರುವ ಅತಿಥಿಗಳಿಗೆ ಉಪಚರಿಸುವ ಮನೋಧರ್ಮ ಬದಲಾಗಿಲ್ಲ ಎಂಬುದನ್ನು ಈ ಕಾದಂಬರಿ ಸೂಚಿಸುತ್ತದೆ. ಪಯಣವು ಪಯಣಿಗರಿಗೆ ಹೊಸ ಹೊಸ ಸ್ಥಳಗಳನ್ನು ಕಾಣುವ ಅವಕಾಶ ಮಾತ್ರವಲ್ಲದೆ, ಹೊಸ ಮಾನವ ಸಂಬಂಧಗಳನ್ನು ಬೆಳೆಸಿಕೊಳ್ಳುವ ಅವಕಾಶವೂ ಆಗಿದೆ. ಈ ವಿವರಗಳ ಮೂಲಕ ಕಾದಂಬರಿಯು ಪ್ರವಾಸ ಮಾಡಿ ಅತಿಥಿಯಾಗಿ ಬಂದಿರುವ ವ್ಯಕ್ತಿಯಲ್ಲೂ ಅವರನ್ನು ತಮ್ಮ ಊರು ಪರಿಸರದಲ್ಲಿ ತಿರುಗಾಟ ಮಾಡಿಸುವ ಅತಿಥೇಯರಲ್ಲೂ ಏಕಕಾಲಕ್ಕೆ ಆಲೋಚನೆಯಲ್ಲಿ ಆಗುವ ಸೂಕ್ಷ್ಮ ಬದಲಾವಣೆಯ ಬಗ್ಗೆ ಕಾದಂಬರಿ ಧ್ವನಿಸುತ್ತದೆ. ಮೇಲ್ಕಾಣಿಸಿದ ಉಲ್ಲೇಖದಲ್ಲಿ ಗೋಪಾಲಯ್ಯ ತಾನು ಮಾಡಿದ ಸಾಧನೆಯನ್ನು ಬಿಂಬಿಸಿಕೊಳ್ಳುವ ಯತ್ನವನ್ನು ಮಾಡುತ್ತಾನೆ. ಈ ಸಾಧನೆಯನ್ನು ಗುರುತಿಸಿ ಅದನ್ನು ಮೌಲ್ಯಮಾಪನ ಮಾಡತೊಡಗುತ್ತಾನೆ. ಈ ಪ್ರಕ್ರಿಯೆಯಲ್ಲಿ ಇಬ್ಬರ ಆಲೋಚನಕ್ರಮದಲ್ಲಿಯೂ ಬದಲಾವಣೆ ಸಂಭವಿಸುತ್ತ ಹೋಗುತ್ತದೆ. ಇದರ ಹಿನ್ನೆಲೆಯಲ್ಲಿ ಪ್ರಯಾಣದ ಭಿತ್ತಿಯೂ ಇದೆ.

ಪುರುಷರು ತಾವು ಮಾಡಿರುವ ಕೆಲಸವು ಶ್ರೇಷ್ಠವೆಂದು, ಸ್ತ್ರೀಯರು ಮಾಡುವ ಕೆಲಸವನ್ನು ಕನಿಷ್ಠವೆಂದು ಗ್ರಹಿಸುವ ಚಿಂತನಾಕ್ರಮ ಲಿಂಗಭೇದ ನೀತಿಯುಳ್ಳ ಭಾರತೀಯ ಸಮಾಜದಲ್ಲಿದೆ. ಗಂಡು ಹೆಣ್ಣುಗಳಿಗೆ ಸಮಾಜದಲ್ಲಿ ಇರುವ ಸಾರ್ವಜನಿಕ ಬದುಕು ಮತ್ತು ಪಯಣ ಮಾಡುವ ಅವಕಾಶಗಳು, ಅವರಿಗೆ ಹೊಸ ತಿಳುವಳಿಕೆ ಅನುಭವಗಳಿಗೆ ಕಾರಣವಾಗುವಂತೆಯೇ, ಅವರಲ್ಲಿ ಬೇರೆಬೇರೆ ಅಭ್ಯಾಸಗಳು ಮೂಡಲು ಸಹ ಕಾರಣವಾಗಬಹುದು. ತಿರುಗಾಟ ಮತ್ತು ವ್ಯಸನಗಳಿಗೆ ಇರುವ ಸಂಬಂಧವು ಲಿಂಗಾಧಾರಿತವಾಗಿ ಇರುವ ಪ್ರಸಂಗವೊಂದು 'ಬೆಟ್ಟದ ಜೀವ' ಕೃತಿಯಲ್ಲಿ ಕಾಣಿಸಿಕೊಳ್ಳುತ್ತದೆ. ಗೋಪಾಲಯ್ಯನು ಶಂಕರಿಯನ್ನು ಕುರಿತು ಛೇಡಿಸುತ್ತ ಆಡುವ ಈ ಮಾತನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು: "ಈ ಊರಿನ ಗಂಡಸರು ಪುಡಿ ಎಳೆದುದರಿಂದ ಮನೆಯವರಿಗೆಲ್ಲಾ ಆ ಚಾಳಿ ಬಂದಿತು. ಅಲ್ಲಿನ ಗಂಡಸರು ಹಾಗೆ ತಮ್ಮ ಮನೆಗೆ ಸಿಗರೇಟಿನ ಮೇಲ್ಪಂಕ್ತಿ ಹಾಕಿ ಹೆಂಗಸರನ್ನು ಕೆಡಿಸಿರಬೇಕು"(ಪು.೧೧೭). ಈ ಮೇಲಿನ ಮಾತುಗಳು ಲಿಂಗತಾರತಮ್ಯವುಳ್ಳ ಸಾಮಾಜಿಕ ವ್ಯವಸ್ಥೆಯಲ್ಲಿ ನಡೆದುಕೊಂಡು ಬಂದಿರುವ ಏಕಮುಖಿ ಆಲೋಚನ

ಕ್ರಮವನ್ನು ತೋರಿಸುತ್ತದೆ. ಸಾಂಪ್ರದಾಯಿಕ ಸಮಾಜದಲ್ಲಿ ಪುರುಷರು ಮಾಡುವ ಪಯಣಕ್ಕೂ, ಸ್ತ್ರೀಯರು ಮಾಡುವ ಪಯಣಕ್ಕೂ ನಿರ್ಬಂಧವಿರುತ್ತದೆ. ಇದರಂತೆ ಇಲ್ಲಿಯ ನಸ್ಯ ಹಾಕುವ ಪ್ರಸಂಗದಲ್ಲಿ ತನ್ನ ಹೆಂಡತಿಯಾದ ಶಂಕರಿಯನ್ನು ಗೋಪಾಲಯ್ಯ ಸುತ್ತಿ ಬಳಸಿ ಛೇಡಿಸುವನು. ನಿಜವಾಗಿಯೂ ಪಯಣಕ್ಕೂ ಲಿಂಗಭೇದಕ್ಕೂ ಇರುವ ಸಂಬಂಧ ವ್ಯಕ್ತವಾಗುವುದು, ಕಾದಂಬರಿಯ ಮಹಿಳೆಯರ ಜೀವನಕ್ಕೆ ಸಂಬಂಧಿಸಿ. ಇಲ್ಲಿ ಶಂಕರಿ ಮತ್ತು ನಾರಾಯಣನ ಹೆಂಡತಿ ಇಬ್ಬರೂ ತಮ್ಮ ಗಂಡಂದಿರಿಗೆ ಹೋಲಿಸಿದರೆ, ಹೆಚ್ಚು ಬಾಹ್ಯಲೋಕಕ್ಕೆ ತೆರೆದುಕೊಂಡಿರದ ವ್ಯಕ್ತಿಗಳು. 'ಅಳಿದಮೇಲೆ' ಕಾದಂಬರಿಯಲ್ಲಿ ಬರುವ ಅಜ್ಜಿಯರಾದ ಪಾರ್ವತಜ್ಜಿ ಮತ್ತು ಮೂಕಾಂಬಿಕೆ ಕೂಡ ಇಂತಹವರೇ. ಇವರು ತಾವು ಜೀವಿಸುವ ಮನೆಗೆ ಅಥವಾ ಚಿಕ್ಕ ಪ್ರದೇಶಕ್ಕೆ ಸೀಮಿತರಾಗಿ ಇರುವವರು. ಆದರೂ ಸಹ ಹೊರಗೆ ತಿರುಗಾಡಿ ಬರುವ, ಪಯಣ ಮಾಡಿ ತಮ್ಮ ಆಲೋಚನೆಯಲ್ಲಿ ಪ್ರಗತಿಪರವಾಗುವ ಸಾಧ್ಯತೆಯಿರುವ ಗಂಡಸರಿಗಿಂತ ಹೆಚ್ಚು ಮಾನವೀಯವಾಗಿ ಕಾಣುತ್ತಾರೆ. ಆದ್ದರಿಂದ ಪ್ರವಾಸವು ಆಲೋಚನಕ್ರಮದಲ್ಲಿ ಧನಾತ್ಮಕವಾದ ಬದಲಾವಣೆ ಮಾಡುತ್ತದೆ ಎಂಬುದು ಎಲ್ಲ ಸನ್ನಿವೇಶಗಳಲ್ಲಿಯೂ ನಿಜವಲ್ಲ.

ಕಾದಂಬರಿಯಲ್ಲಿ ಗೋಪಾಲಯ್ಯ ಶಂಕರಿಯ ಕುರಿತು ವ್ಯಂಗ್ಯವಾಗಿ ಹೇಳುವ ಮಾತುಗಳು ಹೀಗಿವೆ. "ಈಗ ನನ್ನ ನಾಲಗೆ ಮತ್ತು ನಿನ್ನ ನಾಲಗೆಗಳು ಬೇರೆಯೇನು! ಹಿಂದಿನ ಕಾಲದಲ್ಲಿ, ಪತಿಯ ವಾಕ್ಯವೆಂದರೆ ಪತ್ನಿಗೆ ಸ್ಮೃತಿಯಾಗಿರುತ್ತಿತ್ತು. ನಾನು ಹುಳಿ ರುಚಿಯಿಲ್ಲ ಎಂದರೆ, ನೀನು ನಂಬಿಬಿಡಬೇಕು. ರುಚಿಯಿದೆ ಎಂದರೆ, ರುಚಿ ಉಂಟು ಎಂದು ತಿಳಿಯಬೇಕು-ಅದು ಧರ್ಮ" (ಪು.೧೧೭). ಇಲ್ಲಿ ದಂಪತಿಗಳ ನಡುವಣ ಆತ್ಮೀಯ ಸಂಬಂಧದ ಭಾಗವಾಗಿ ಈ ಕೀಟಲೆ ಬರುತ್ತಿದೆ. ಆದರೆ ಈ ಆತ್ಮೀಯ ಸಂಬಂಧದ ಒಳಗೂ ಪುರುಷ ಯಜಮಾನಿಕೆಯ ಚೌಕಟ್ಟು ಸೂಕ್ಷ್ಮವಾಗಿದೆ. ಈ ಚೌಕಟ್ಟನ್ನು ಗಂಭೀರವಾಗಿ ಪರಿಗಣಿಸಿದ ಕನ್ನಡದ ಲೇಖಕಿಯರು ಹೆಣ್ಣಿನ ಅಧೀನತೆಯನ್ನು ಚಿತ್ರಿಸುತ್ತ ಹೋಗುತ್ತಾರೆ. ಇಲ್ಲಿ ವೈದೇಹಿಯವರ 'ಅಡುಗೆಮನೆ ಹುಡುಗಿ' ಕವಿತೆಯ ನಾಯಕಿಯ ತಳಮಳಗಳು ನೆನಪಾಗುತ್ತವೆ. ಸಾರಾ ಅಬೂಬಕ್ಕರ್ ಅವರು ಚಿತ್ರಿಸುವ ಅನೇಕ ಗೃಹಿಣಿಯರ ಬಂಧನ ಮತ್ತು ಅಧೀನತೆಯ ಬದುಕಿನ ಚಿತ್ರಗಳು ನೆನಪಾಗುತ್ತವೆ. ಹೊರಗೆ ಮುಕ್ತವಾಗಿ ಚಲಿಸುವ ಅವಕಾಶವಿಲ್ಲದೆ ಇರುವುದೇ ದೊಡ್ಡ ಅನುಭವದಿಂದ ಮಹಿಳೆಯರನ್ನು ವಂಚಿಸಿದೆ ಮತ್ತು ಅವರ ಅಧೀನತೆಯ ಬದುಕಿಗೆ ಕಾರಣವಾಗಿದೆ ಎಂಬುದನ್ನು ಅವರು ಕಾಣಿಸುತ್ತಾರೆ. ಆದರೆ ಕಾರಂತರ ಕಾದಂಬರಿಗಳಲ್ಲಿ ಬರುವ ಶಂಕರಿಯಂತಹ ಪಾತ್ರಗಳಲ್ಲಿ ಈ ಬಗೆಯ ಧ್ವನಿಯು ಕಾಣಿಸುವುದಿಲ್ಲ. ಗೋಪಾಲಯ್ಯ ಎಷ್ಟೇ ಬೌದ್ಧಿಕವಾಗಿ ಎತ್ತರದ ಮಟ್ಟದ ಆಲೋಚನೆಯ ಮಾಡುವ ವ್ಯಕ್ತಿಯಾಗಿ ಕಂಡರೂ ಹೆಂಡತಿ ಶಂಕರಿಯ ಬಗ್ಗೆ ಅವನ ಧೋರಣೆ ಪುರುಷವಾದಿ ಚೌಕಟ್ಟಿನ ಕುಟುಂಬದ ಒಳಗೇ ಇರುವಂತೆ ತೋರುತ್ತದೆ. ಅವನ ತಿರುಗಾಟಗಳು ಅವನ ಆಲೋಚನಕ್ರಮದಲ್ಲಿ ಬಹಳ ದೊಡ್ಡ ಪಲ್ಲಟಗಳನ್ನು ತಂದಿರುವುದಿಲ್ಲ.

'ಬೆಟ್ಟದಜೀವ'ದ ಶಿವರಾಮಯ್ಯ ಮೊದಲಿಗೆ ಗೋಪಾಲಯ್ಯನನ್ನು ಕಂಡಾಗ ಇದ್ದ ಗ್ರಹಿಕೆಯು ಅವನೊಂದಿಗಿನ ಒಡನಾಟದ ಬಳಿಕ ಬದಲಾಗುತ್ತದೆ. ಈ ಪ್ರಕ್ರಿಯೆಯನ್ನು 'ಕರ್ವಾಲೊ' ಕಾದಂಬರಿಯಲ್ಲಿಯೂ ಕಾಣಬಹುದು. ನಿರೂಪಕನಿಗೆ ಕರ್ವಾಲೊ ಬಗ್ಗೆ ಮೊದಲ ಘಟ್ಟದಲ್ಲಿದ್ದ ಅಪನಂಬಿಕೆಗಳು ಅವನ ಜತೆ ಓಡಾಟ ಮಾಡುತ್ತ ಬದಲಾಗುತ್ತ ಹೋಗುತ್ತವೆ. 'ಅಳಿದಮೇಲೆ' ಕಾದಂಬರಿಯಲ್ಲಿಯೂ ಯಶವಂತರಾಯನ ಬಗ್ಗೆ ಆರಂಭದಲ್ಲಿ ನಿರೂಪಕನು ಇರಿಸಿಕೊಂಡಿದ್ದ ಗ್ರಹಿಕೆಯು ಅವನ ಪ್ರವಾಸ ಮತ್ತು ಒಡನಾಟಗಳ ಫಲವಾಗಿ ಬದಲಾಗುತ್ತವೆ. ಜತೆ ತಿರುಗಾಟವು ಇಬ್ಬರು ವ್ಯಕ್ತಿಗಳು ಪರಸ್ಪರ ಅರಿಯುವ ಒಂದು ವಿಧಾನವೂ ಆಗಿ ಈ ಕಾದಂಬರಿಗಳಲ್ಲಿ ಬರುತ್ತವೆ. ಈ ಹಿನ್ನೆಲೆಯಲ್ಲಿ 'ಬೆಟ್ಟದಜೀವ'ದ ಶಿವರಾಮಯ್ಯ ಗೋಪಾಲಯ್ಯನ ಬಗ್ಗೆ ಹೇಳುವ ಮಾತನ್ನು ಗಮನಿಸಬಹುದು: "ಚಿಂತೆಯಿಲ್ಲ! ಬೆಟ್ಟದ ಹೊಟ್ಟೆಯಲ್ಲಿ ಹುಟ್ಟಿದ ಈ ಮನುಷ್ಯ ಬೆಟ್ಟದಷ್ಟು ಎತ್ತರಕ್ಕೆ ಬೆಳೆದಿದ್ದಾನೆ. ಮನಸ್ಸೂ ಹಾಗೆ; ಮಾನವೂ ಹಾಗೆ"(ಪು.೧೩೨). ಕಾದಂಬರಿಯ ಆರಂಭದಲ್ಲಿ ಶಿವರಾಮಯ್ಯ ಕಂಡುಕೊಂಡಿದ್ದ ಗೋಪಾಲಯ್ಯನಿಗೂ, ಕೊನೆಯಲ್ಲಿ ಕಾಣುವ ಗೋಪಾಲಯ್ಯನ ವ್ಯಕ್ತಿತ್ವಕ್ಕೂ ಅವರ ಜೊತೆಗಿನ ಪುಟ್ಟ ಪುಟ್ಟ ಪಯಣಗಳು ಭಿನ್ನವಾಗಿಸಿವೆ. ಬೆಟ್ಟದಂತೆ ಎತ್ತರವಾದ ಜೀವನ್ಮುಖಿ ಮನಸ್ಸಿನ ವ್ಯಕ್ತಿಯಾಗಿ ಗೋಪಾಲಯ್ಯ ಕಂಡುಬರುತ್ತಾನೆ. ಬೆಟ್ಟದ ಎತ್ತರವು ಅದರ ಗಾತ್ರವನ್ನು ಹೇಳಿದಂತೆ ಗೋಪಾಲಯ್ಯನ ವ್ಯಕ್ತಿತ್ವವನ್ನು ಅರಿಯಲು ಶಿವರಾಮಯ್ಯನಿಗೆ ಅವನೊಂದಿಗಿನ ತಿರುಗಾಟದ ಹಲವು ಉಪಪಯಣಗಳು ಕಾರಣವಾಗುತ್ತವೆ.

ಪಥಿಕರು ಪ್ರವಾಸಕ್ಕೆ ತೆರಳಿದಾಗ ಗೊತ್ತಿಲ್ಲದ ಸ್ಥಳಗಳಿಗೆ ಹೋಗಬೇಕಾದಾಗ ಬೇರೆಯವರಿಂದ ಮಾರ್ಗದರ್ಶನ ಪಡೆಯುವರು. ಅನುಭವವಿರುವ ವ್ಯಕ್ತಿಯ ಮೂಲಕ ಪಯಣವನ್ನು ಮುಂದುವರೆಸುವರು. ಕಾರಂತರ 'ಅಳಿದಮೇಲೆ' ಕಾದಂಬರಿಯಲ್ಲಿ ಮೂಕಜ್ಜಿಯ ಮನೆ ತೋರಿಸಲು ನಿರೂಪಕನನ್ನು ಕೆಳಜಾತಿಗೆ ಸೇರಿದ ಸುಬ್ಬ ಕರೆದುಕೊಂಡು ಹೋಗುವ ಪ್ರಸಂಗ ಬರುತ್ತದೆ. ಆಗ ಶಂಕರಭಟ್ಟರು ತಮ್ಮ ಮನೆಯಾಳಿಗೆ ಹೇಳುವ ಮಾತಿದು: "ಸುಬ್ಬ, ಈ ರಾಯರನ್ನು ಬಯಲಿನ ದಾರಿಯಿಂದಲೇ, ಕೆಳಮನೆಗೆ ಕರೆದುಕೊಂಡು ಹೋಗು ಆ ಪಾರೋತಜ್ಜಿಯ ಹತ್ತಿರಕ್ಕೆ, ತೋಟದ ಮನೆ ಹಾಯುವಾಗ ಅಲ್ಲೇ ಪುರಾಣ ಬಿಚ್ಚುತ್ತ ನಿಂತಿರಬೇಡ. ಇವರು ಹೋಗಿ ಅಜ್ಜಿಯನ್ನು ಮಾತನಾಡಿಸಿಕೊಂಡು ಬರುತ್ತಾರೆ; ಅಲ್ಲಿಯವರೆಗೆ ನೀನು ಕಾದಿರು"(ಪು.೭೭). ಕುವೆಂಪು ಕಾದಂಬರಿಗಳಲ್ಲೂ ಇಂತಹ ಸನ್ನಿವೇಶಗಳು ಇವೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ನಾಗಕ್ಕ, ನಾಗತ್ತೆಯರ ಮಾರ್ಗದರ್ಶಕನಾಗಿ ಗುತ್ತಿ ಪಯಣ ಮಾಡುತ್ತಾನೆ. ಈ ಎರಡೂ ಪ್ರಸಂಗಗಳಲ್ಲಿ ಮೇಲ್ಜಾತಿಯವರಿಗೆ ದಾರಿತೋರಿಸುವ ಕೆಲಸವನ್ನು ಕೆಳಜಾತಿಯವರು ಅಥವಾ ಕೆಳವರ್ಗದವರು ನಿರ್ವಹಿಸುವರು. ಇದು ಒಂದು ಬಗೆಯಲ್ಲಿ ಮೇಲ್ವರ್ಗ ಮತ್ತು ಮೇಲ್ಜಾತಿಯವರ ಪಯಣ ಮತ್ತು ಆ ಮೂಲಕ ಅವರು ಹೊಸ ಹೊಸ ಅನುಭವ, ಆಲೋಚನೆಗಳಿಗೆ ಒಳಗಾಗುವುದಕ್ಕೆ, ಕೆಳವರ್ಗದವರು ಕೆಲಜಾತಿಯವರು ಪರೋಕ್ಷವಾಗಿ ನೆರವಾಗುವ ಬಗೆಯಾಗಿದೆ. ಆದರೆ ಬಹಳಷ್ಟು

ಪ್ರಸಂಗಗಳಲ್ಲಿ ಈ ಮಾರ್ಗದರ್ಶಕರು ಅನಾಮಿಕರಾಗಿಯೇ ಉಳಿದುಬಿಡುತ್ತಾರೆ. ಆದರೆ ಕಾದಂಬರಿಗಳು ಈ ಮಾರ್ಗದರ್ಶಿಗಳ ಬಗ್ಗೆ ಬಹಳ ಗಮನವಿಟ್ಟು ಚಿತ್ರಿಸುತ್ತವೆ.

ವ್ಯಕ್ತಿ ಎಷ್ಟೇ ನಾಗರಿಕನಾದರೂ ಹಲವು ಪ್ರದೇಶಗಳಿಗೆ ತಿರುಗಾಟ ನಡೆಸಿ ಬಂದರೂ ಕೆಲವು ವಿಷಯಗಳಲ್ಲಿ ಸಾಂಪ್ರದಾಯಿಕವಾಗಿ ಉಳಿಯಬಹುದು. 'ಅಳಿದಮೇಲೆ' ಕಾದಂಬರಿಯ ನಿರೂಪಕನು ಒಬ್ಬ ವಿಚಾರವಂತ. ಮಾನವತಾವಾದಿ. ಆದರೆ ಅವನಿಗೆ ಯಶವಂತರಾಯನ ಬಗ್ಗೆ ಅತೀವವಾದ ವಿಶ್ವಾಸ ಇರುವ ಕಾರಣ, ಯಶವಂತರಾಯನಿಗೆ ಹಗೆಗಳಾಗಿರುವವರ ಬಗ್ಗೆ ತಾನೂ ಪೂರ್ವಗ್ರಹದಿಂದ ಕಾಣುತ್ತ ಹೋಗುವ ಸನ್ನಿವೇಶಗಳಿವೆ. ಇದಕ್ಕೆ ಸಾಕ್ಷಿ ಯಶವಂತರಾಯನ ಹೆಂಡತಿಯ ಬಗ್ಗೆ ಆತ ಮಾಡುವ ಕಹಿಯಾದ ಹೇಳಿಕೆಗಳು. ಆದರೆ ನಿರೂಪಕ ಹೀಗೆ ಎಲ್ಲ ಕಡೆಯೂ ಏಕರೀತಿಯಲ್ಲಿ ವರ್ತಿಸುವುದಿಲ್ಲ. ಪಯಣ ಮತ್ತು ವ್ಯಕ್ತಿಗಳ ಭೇಟಿಗಳು ಅವನ ಗ್ರಹಿಕೆ ಆಲೋಚನೆ ವರ್ತನೆಗಳಲ್ಲಿ ವಿಭಿನ್ನ ಪರಿಣಾಮ ಮಾಡುವುದನ್ನು ಕಾದಂಬರಿ ಕಾಣಿಸುತ್ತದೆ.

ಇಂದಿಗೂ ಜಾತಿ ವರ್ಗದ ಕುರಿತು ಮೇಲು-ಕೀಳು ಭಾವನೆಗಳು ಭಾರತದ ಜಾತಿ ಸಮಾಜದಲ್ಲಿ ಜೀವಂತವಾಗಿವೆ. ಇದನ್ನು ಕನ್ನಡ ಕಾದಂಬರಿಗಳು ಬಗೆಬಗೆಯಾಗಿ ಚಿತ್ರಿಸುತ್ತ ಹೋಗಿವೆ. ಪಯಣ ಮಾಡಿ ಬರುವ ಹೊಸಬರನ್ನು ಗುರುತಿಸುವಾಗ ಜಾತಿಯನ್ನು ಗುರುತಿಸಿ ಅದಕ್ಕೆ ತಕ್ಕ ಉಪಚಾರ ಮಾಡುವುದು ಒಂದು ಪದ್ಧತಿ. 'ಅಳಿದಮೇಲೆ' ಕಾದಂಬರಿಯಲ್ಲಿ ನಿರೂಪಕನು ಬೆನಕನಹಳ್ಳಿಗೆ ಪಯಣ ಮಾಡಿ ಬಂದಾಗ, ಅವನ ವೇಷದಿಂದ ಯಾವಜಾತಿಯವನೊ ಎಂದು ಶಂಕರಭಟ್ಟರು ಅನುಮಾನಪಡುತ್ತಾರೆ. ಆದರೆ ಬಂದವನು ತಮ್ಮ ಜಾತಿಗೆ ಸೇರಿದವನೆಂದು ತಿಳಿದಾಗ ಅವರ ಆಲೋಚನೆಯಲ್ಲಿ ಬದಲಾವಣೆಯಾಗುತ್ತದೆ. "ಯಾವ ಮತಸ್ಥರೋ ಏನೋ ಎಂದು ಯೋಚನೆ ಮಾಡಿದ್ದೆ. ಈ ಬಟ್ಟೆಯಲ್ಲಾದರೆ ನೀವು ಬ್ರಾಹ್ಮಣರೆಂದು ಹೊಡೆದು ಕಾಣುತ್ತದೆ" ಎಂದು ಅವರು ಹೇಳುತ್ತಾರೆ(ಪು.೬೫). ಹೊಸಬರು ಊರಿಗೆ ಅಥವಾ ಮನೆಗೆ ಹೊಸಬರು ಬಂದಾಗ ಜನ ತಮ್ಮ ಜಾತಿಯರೆಂದು ಖಾತ್ರಿ ಮಾಡಿಕೊಳ್ಳುವ ಅನೇಕ ಉಪಾಯಗಳು ಸಮಾಜದಲ್ಲಿ ಜಾರಿಯಲ್ಲಿವೆ. ಇದು ಎಲ್ಲ ಪ್ರವಾಸಿಗಳಿಗೆ ತಿರುಗಾಟಗಾರರಿಗೆ ಅನುಭವಕ್ಕೆ ಬರುವಂತಹ ಸಂಗತಿ. ಇದು ಕಾರಂತರ ಕಾದಂಬರಿಗಳ ತಿರುಗಾಟ ಮಾಡುವ ನಿರೂಪಕರು ಅನುಭವಿಸುತ್ತಾರೆ. ಈ ಪ್ರಸಂಗಗಳು ಜಾತಿ ವರ್ಗದಲ್ಲಿ ಸಾಂಪ್ರದಾಯಿಕವಾಗಿ ನಡೆದುಕೊಂಡು ಬಂದಿರುವ ಸಂಘರ್ಷದ ಸುಳಿವನ್ನು ತಿಳಿಸುತ್ತವೆ.

೪.೫. ಪಯಣ: ಸಂಕೇತಗಳು

ವ್ಯಕ್ತಿಗಳು ತಮ್ಮ ತಿರುಗಾಟ ಅಥವಾ ಪ್ರವಾಸದ ಸಂದರ್ಭದಲ್ಲಿ ಪಡೆದುಕೊಂಡ ಅನುಭವಗಳ ಮೂಲಕ ತಮ್ಮೊಳಗೆ ಅಡಗಿರುವ ಪ್ರತಿಭೆಯನ್ನು ಪ್ರದರ್ಶಿಸುವ ಅವಕಾಶ ಪಡೆಯಬಲ್ಲರು. ಈ ವ್ಯಕ್ತಿಪ್ರತಿಭೆಗಳು ಕಾಲ, ಸನ್ನಿವೇಶ, ಸಂದರ್ಭಕ್ಕೆ ಅನುಗುಣವಾಗಿ ಭಿನ್ನಭಿನ್ನವಾಗಿ ಪ್ರಕಟವಾಗುತ್ತವೆ.

ಅವನ್ನು ಅರ್ಥೈಸುವುದು ಸವಾಲಿನ ಕೆಲಸವಾಗಿದೆ. 'ದೇಶ ಸುತ್ತಿ ನೋಡು, ಕೋಶ ಓದಿ ನೋಡು' ಎಂಬ ಗಾದೆ ಮಾತು ಪಯಣಕ್ಕಿರುವ ಕಲಿಕೆಯ ಮಹತ್ವವನ್ನು ತಿಳಿಸುತ್ತದೆ. ಕಾರಂತರ ಕಾದಂಬರಿಗಳಲ್ಲಿ ಪಯಣ ಮಾಡುವ ನಿರೂಪಕನು ಪಯಣದ ಒಂದು ಹಂತದಲ್ಲಿ ಕಾಣುವ ಅಸ್ಪಷ್ಟ ಸಂಗತಿಗಳು, ಅವನ ಪಯಣದ ಇನ್ನೊಂದು ಘಟ್ಟದಲ್ಲಿ ತಮ್ಮ ಅರ್ಥವನ್ನು ಬಿಚ್ಚಿಕೊಡುತ್ತವೆ. ಆದ್ದರಿಂದ ಪಯಣವು ವಿಭಿನ್ನ ಘಟ್ಟಗಳಲ್ಲಿ ಅನುಭವ ಮತ್ತು ಜ್ಞಾನವನ್ನು ಕೊಡುವ ಪ್ರಕ್ರಿಯೆಯಾಗಿದೆ. ಇದನ್ನು 'ಬೆಟ್ಟದಜೀವ' ಹಾಗೂ 'ಅಳಿದಮೇಲೆ' ಕಾದಂಬರಿಗಳಲ್ಲಿ ಕಾಣಬಹುದು.

'ಅಳಿದಮೇಲೆ' ಕಾದಂಬರಿಯಲ್ಲಿ ನಿರೂಪಕನು ಯಶವಂತರಾಯರ ಚಿತ್ರ ಮತ್ತು ಸಾಂಕೇತಿಕ ಬರವಣಿಗೆಯನ್ನು ತನ್ನ ಎರಡನೇ ಹಂತದ ಪಯಣದ ಮೂಲಕ ಅರಿಯುತ್ತ ಹೋಗುತ್ತಾನೆ. ಒಂದು ಕಡೆ ಆತ ಹೀಗೆ ಚಿಂತಿಸುತ್ತಾನೆ: "ಅವರು ಎರಡು ಮೂರು ತಿಂಗಳಿಗೊಮ್ಮೆ ಮಹಾಬಲೇಶ್ವರ, ಪುಣೆ, ಬೋರ್ಡಿ ಎಂದು ಆಗಾಗ ಹೋಗುತ್ತಿದ್ದರಲ್ಲ– ಚಿತ್ರ ಬರೆಯುವುದಕ್ಕೆ, ಆ ವೇಳೆಯಲ್ಲಿ ನಮಗೆ ಈ ಮನೆ ಬರಿದಾಗಿ ಕಾಣಿಸುತ್ತಿತ್ತು"(ಪು.೧೩). ಪಯಣಕ್ಕೆ ಕೆಲವೊಮ್ಮೆ ಖಚಿತವಾದ ಉದ್ದೇಶವಿರಬಹುದು; ಅದು ಇಲ್ಲದೆಯೂ ಇರಬಹುದು. ಈ ಮೇಲಿನ ಸಾಲುಗಳನ್ನು ಗಮನಿಸಿದರೆ ಚಿತ್ರ ಬರೆಯುವ ಸಲುವಾಗಿ, ಏಕಾಂತವನ್ನು ಬಯಸಿ ಯಶವಂತರಾಯನು ಮಹಾಬಲೇಶ್ವರ, ಪುಣೆಗೆ ಪಯಣ ಮಾಡುತ್ತಿದ್ದನು ಎಂದು ತಿಳಿಯುತ್ತದೆ. ಯಶವಂತರಾಯ ತನ್ನ ಬದುಕಿನ ನೆನಪುಗಳ ಅನಾವರಣಕ್ಕೆ ಚಿತ್ರ ಮಾಧ್ಯಮವನ್ನು ಬಳಸಿಕೊಂಡ ಕಲಾವಿದನು. ಆತ ನೇರವಾಗಿ ಹೇಳಿಕೊಳ್ಳಲಾಗದ ಭಾವನೆಗಳನ್ನು ಚಿತ್ರದ ಮೂಲಕ ವ್ಯಕ್ತಪಡಿಸಿರುತ್ತಾನೆ. ಅವನ ಬಾಳಿನಲ್ಲಿ ಪಯಣವು ಬಿಡುಗಡೆಗಾಗಿ ಏಕಾಂತವನ್ನು ಪಡೆಯುವುದಕ್ಕೆ ಮಾಡಿರುವ ಚಲನೆಯಾಗಿದೆ. ಅಂದರೆ ಯಶವಂತರಾಯನ ಕಲಾಕೃತಿಗಳ ಹಿಂದೆ ಪಯಣದ ಅನುಭವವಿದೆ. ಅವನ್ನು ಅರ್ಥಮಾಡಿಕೊಳ್ಳಲು ಅವನ ಸಾವಿನ ನಂತರ ನಿರೂಪಕನು ಪಯಣವನ್ನು ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕೆಲವು ಸಾಂಕೇತಿಕ ಚಿತ್ರಗಳನ್ನು ಗಮನಿಸಬಹುದು.

ಒಂದು ಚಿತ್ರದಲ್ಲಿ ದನ ಮೇಯುತ್ತಿರುವ ದೃಶ್ಯವಿದೆ; ಅದರ ಮೈಯ ಮೇಲೆ ಕುಳಿತ ಒಂದು ಕಾಡು ಮೈನಾ ಹಕ್ಕಿ ಅದರ ಮೈಯನ್ನು ಕುಕ್ಕಿಗಾಯ ಮಾಡಿದೆ. ಈ ಚಿತ್ರದ ಕುರಿತು ಕಲಾವಿದನು ಹೀಗೆ ವಿವರಣೆ ಕೊಟ್ಟಿರುತ್ತಾನೆ: "ಕಾಂಡಾಲಾದಲ್ಲಿ ನಮ್ಮ ಮನೆಯ ಮುಂದೆ ಹಸನಾದ ಹುಲ್ಲುಗಾವಲೊಂದಿದೆ. ಅಲ್ಲಿಗೆ ನಿತ್ಯವೂ ಹತ್ತಾರು ದನಕರುಗಳು ಮೇಯುವುದಕ್ಕೆ ಬರುತ್ತವೆ. ಅವುಗಳ ಹಿಂದೆ ಮುಂದೆ, ಉಣ್ಣೆ ಹೆಕ್ಕುವುದಕ್ಕೆ ಊರಿನ ಮೈನಾಗಳು ಸದಾ ಸಿದ್ಧ. ಕೊಕ್ಕರೆಗಳೂ ಹಾರಿ ಬರುವುದುಂಟು. ಅವುಗಳಲ್ಲಿ ಎಂಥ ಮೈತ್ರಿ! ಅವು ಪಕ್ಷಿಗಳು! ಇವು ಪಶುಗಳು. ಇವಕ್ಕೆ ಹುಲ್ಲು ಆಹಾರ; ಅವಕ್ಕೆ ಕೀಟ ಆಹಾರ. ದನಕರುಗಳಿಗೆ ಈ ಉಣ್ಣೆ ಒಂದು ಪೀಡೆ. ಆ ಪೀಡೆಯನ್ನು ನಿವಾರಿಸುವ ಕಾಡು ಮೈನಾ ಸ್ವಾಭಾವಿಕ ಸ್ನೇಹಿತ. ಅನಾದಿ ಕಾಲದಿಂದಲೂ ಬಂದ ಗೆಳೆತನ ಅದು. ಇಂದು ದಿನ ನೋಡುತ್ತೇನೆ–ಉಣ್ಣೆ ಇಲ್ಲದಕ್ಕೋ ಏನೋ ಹಸಿವಾದುದಕ್ಕೂ

ಏನೋ, ಒಂದು ಮೈನಾ ಬಡ ದನವೊಂದರ ಬೆನ್ನನ್ನು ಕುಕ್ಕಿ ಗಾಯಮಾಡಿತ್ತು; ಅದರಿಂದ ರಕ್ತ ಬರುತ್ತಿತ್ತು. ಅದೇ ಚಿತ್ರವನ್ನು ಬರೆದಿದ್ದೇನೆ"(ಪು.೫೦-೫೧). ಆದರೆ ಈ ಸಾಂಕೇತಿಕ ಚಿತ್ರದ ಹಿಂದೆ ಯಶವಂತರಾಯನ ಬಾಳಿನಲ್ಲಿ ಕಾಣಿಸಿಕೊಂಡ ರೀಮಾ ಅರ್ಥಾತ್ ಮೇರಿಯನ್ನು ಮೈನಾ ಹಕ್ಕಿಗೆ ಹೋಲಿಸಲಾಗಿದೆ ಎಂದು ನಿರೂಪಕನಿಗೆ ನಂತರ ಅರಿವಿಗೆ ಬರುತ್ತ ಹೋಗುತ್ತದೆ. ಮೇರಿಯ ತಾಯಿಯಿಂದ ಮೇರಿಯ ಬಗೆಗಿನ ವಿಷಯಗಳು ಆತನಿಗೆ ತಿಳಿದಾಗ ತಾನೇ ಸಾಕಿದ ಮೈನಾ ತನ್ನನ್ನೇ ಕುಕ್ಕಿದ ಬಗೆಯನ್ನು ಇಲ್ಲಿ ಯಶವಂತರಾಯ ಚಿತ್ರಿಸಿದ್ದಾನೆಂದು ಅರಿವಾಗುತ್ತದೆ. ಈ ರೀತಿಯ ಹಲವಾರು ಸಂಕೇತಗಳು ಕಾದಂಬರಿಯಲ್ಲಿ ತಮ್ಮ ಅರ್ಥವನ್ನು ಬಿಚ್ಚಿಕೊಳ್ಳುವ ಸನ್ನಿವೇಶಗಳು ಇವೆ. ಅವಕ್ಕೆ ಅರ್ಥಸಿಗುವುದು ನಿರೂಪಕನು ತನ್ನ ಪಯಣದ ಮೂಲಕ ಸಂಬಂಧಪಟ್ಟ ವ್ಯಕ್ತಿಗಳನ್ನು ಭೇಟಿಮಾಡುತ್ತ ಹೋಗುವುದರಿಂದ.

'ಬೆಟ್ಟದಜೀವ'ದಲ್ಲಿ ಗೋಪಾಲಯ್ಯ ಶಂಕರಿಗಿಂತಲೂ ಕಾಯಿಹುಳಿ ಪಲ್ಯ ಮಾಡುವುದರಲ್ಲಿ ನಿಸ್ಸೀಮರಾಗಿರುವ ಸನ್ನಿವೇಶ ಬರುತ್ತದೆ. ಆಗ ಶಂಕರಿ ಹೀಗೆ ಹೇಳುತ್ತಾಳೆ: "ಅವರಿಗೆ, ತಾವು ಕಾಯಿಹುಳಿ ಮಾಡುವುದರಲ್ಲಿ ಬುದ್ಧಿವಂತರು ಎಂದು ಹೇಳಿಕೊಳ್ಳಬೇಕಾಗಿತ್ತು. ಅದಕ್ಕೇನೆ ಹೀಗೆ ಸುತ್ತಿ ಸುತ್ತಿ ಗೋಕರ್ಣ ಯಾತ್ರೆ ಮಾಡಿದ್ದು. ಕಾಯಿಹುಳಿ ಮಾಡುವುದೇನು ಮಹಾ ಸಂಭ್ರಮವಂತೆ ತೆಂಗಿನ ಕಾಯಿ ತುಂಬಾ ಇದ್ದರೆ, ಎಂಥ ಮಗುವೂ, ಅರೆದು ಹಾಕಿದರೆ, ಹುಳಿ ಚೆನ್ನಾಗಿ ಆಗುತ್ತದೆ. ನಮ್ಮ ನಾರಾಯಣನ ಹೆಂಡತಿಯೂ ಚೆನ್ನಾಗಿ ಹುಳಿ ಮಾಡುತ್ತಾಳೆ. ನನ್ನ ಕೈಗಿಂತಲೂ ಅವಳ ಕೈಯೇ ಮೇಲು ಅನಿಸುತ್ತದೆ. ನೀವು ನಿನ್ನೆ ಅಲ್ಲಿ ಉಣಲಿಲ್ಲವೇ?"(ಪು.೧೧೫). ಇಲ್ಲಿ ಗೋಕರ್ಣಯಾತ್ರೆ ಎಂಬ ಪಯಣ ಸೂಚಕ ನುಡಿಗಟ್ಟು ಬರುತ್ತಿದೆ. ಅನಗತ್ಯವಾಗಿ ಸುತ್ತಿ ಗೋಕರ್ಣ ಯಾತ್ರೆ ಮಾಡುವುದರಿಂದ ಈ ನುಡಿಗಟ್ಟು ಹುಟ್ಟಿದೆ. ತಿರುಗಾಟ ಮಾಡುವ ಸ್ವಭಾವ ಇರುವ ಗೋಪಾಲಯ್ಯ ತನ್ನ ಕೈಚಳಕದ ಮಹತ್ವ ತಿಳಿಸಲು ಬಳಸಿದ ಮಾತಿನ ವರಸೆಯನ್ನು ಶಂಕರಿಯ ಗೋಕರ್ಣದ ಉಪಮೆ ಬಳಸಿ ವ್ಯಂಗ್ಯವಾಗಿ ವ್ಯಾಖ್ಯಾನಿಸುತ್ತಾಳೆ. ಪಯಣ ಸೂಚಕವಾದ ಇಂತಹ ಅನೇಕ ನುಡಿಗಟ್ಟುಗಳನ್ನು ಕಾರಂತರ ಕಾದಂಬರಿಗಳು ಬಳಸುತ್ತವೆ. ಪಯಣವು ಕಾದಂಬರಿಗಳ ಒಳವಿನ್ಯಾಸದ ಭಾಗವಾಗಿರುವ ಹಿನ್ನೆಲೆಯಲ್ಲಿ ಈ ನುಡಿಗಟ್ಟುಗಳಿಗೆ ವಿಶೇಷ ಮಹತ್ವವಿದೆ.

'ಅಳಿದಮೇಲೆ'ಯಲ್ಲಿ ಬರುವ ರೀಮಾಳ ಸ್ವಭಾವವನ್ನು ಕುರಿತು ಯಶವಂತರಾಯ ತನ್ನ ದಿನಚರಿಯಲ್ಲಿ ಕೊಡುವ ಉಪಮೆ ಸ್ವಾರಸ್ಯಕರವಾಗಿದೆ: "ರೀಮಾ ಒಂದು ಆರ್ಕಿಡ್(ಮರಬಾಳೆ) ಗಿಡದಂತೆ! ಆರ್ಕಿಡ್ ಬದನಿಕೆಯ ಬಳಗದ್ದಲ್ಲವೇ? ಅದು ಪರಜಾತಿಯ ಮರಗಳ ಮೇಲೆ ಬೇರೂರಿ ತನ್ನ ವಿಲಾಸವನ್ನು ನೆಡೆಯಿಸುವ ಸಸ್ಯವಲ್ಲವೇ?"(ಪು.೫೪). ಆರ್ಕಿಡ್ ಪರಜಾತಿಯ ಮರಗಳ ಮೇಲೆ ತನ್ನ ವಿಕಾಸವನ್ನು ಕಾಣುವಂತಹ ಸಸ್ಯವಾಗಿದೆ. ಈ ರೀತಿಯ ವ್ಯಕ್ತಿತ್ವ ರೀಮಾಳದ್ದು ಎಂಬುದು ಯಶವಂತರಾಯ ತನ್ನ ಬದುಕಿನ ಪಯಣದಲ್ಲಿ ಕಂಡುಕೊಂಡ ಸತ್ಯವಾಗಿದೆ. ಆರ್ಕಿಡ್ ಗಿಡದ ಬೆಳವಣಿಗೆಯ ಕ್ರಮ ಹರಡಿಕೊಳ್ಳುವ ರೀತಿಯಂತೆ ರೀಮಾ ಯಶವಂತರಾಯನ ಬಾಳಿನಲ್ಲಿ

ಬಂದು ಮೋಸಗೊಳಿಸುತ್ತಾಳೆ. ವಿಶೇಷವೆಂದರೆ, ಇಲ್ಲಿ ಸಂಕೇತವಾಗಿ ಆರ್ಕಿಡ್ ತಾನು ಆಶ್ರಯ ಪಡೆಯುವ ಮರಕ್ಕೆ ಪಯಣಮಾಡಿಯೇ ಬರುತ್ತದೆ. ಯಶವಂತರಾಯರ ಬೌದ್ಧಿಕ ಪ್ರತಿಭೆ ಈ ರೀತಿಯ ಉಪಮೆ ಸಂಕೇತಗಳ ಸೃಷ್ಟಿಯಲ್ಲಿ ಪ್ರಕಟವಾಗುತ್ತದೆ. ಈ ಪ್ರತಿಮೆ ಸಂಕೇತಗಳ ಹಿಂದೆ ಅವನು ಪಯಣಮಾಡಿ ಪಡೆದಿರುವ ಅನುಭವಲೋಕವಿದೆ. ಈ ಹಿನ್ನೆಲೆಯಲ್ಲಿ ಡಿ.ಆರ್.ನಾಗರಾಜ್ 'ಕನ್ನಡ ಕಾದಂಬರಿ ಪರಂಪರೆ ಮತ್ತು ಕಾರಂತರು' ಲೇಖನದಲ್ಲಿ ಕಾರಂತರ ಪ್ರತಿಭೆಯ ಕುರಿತು ಹೇಳುವ ಮಾತುಗಳನ್ನು ಉಲ್ಲೇಖಿಸಬಹುದು. "ಕಾರಂತ ಪ್ರತಿಭೆ ಮೂಲತಃ ಸಾಮಾಜಿಕವಾದದ್ದು. ಅಂದರೆ, ಮನುಷ್ಯನ ಸಾಮಾಜಿಕ ವ್ಯಕಿತ್ವವೇ ಅವರಿಗೆ ಪ್ರಧಾನ; ವೈಚಾರಿಕ ತೀಕ್ಷ್ಣತೆಯೇ ಸತ್ವ ಜೀವನದ ನಿಗೂಢ ಅಥವಾ ಧಾರ್ಮಿಕ, ಅನುಭಾವೀ ಆಯಾಮಗಳ ಕಡೆಗೆ ಕಾರಂತರು ಅಷ್ಟಾಗಿ ಪ್ರತಿಸ್ಪಂದಿಸುವುದಿಲ್ಲ. ಹೀಗಾಗಿ, ಧರ್ಮದ ಬಗೆಗೆ, ಅನುಭಾವದ ಬಗೆಗೆ ಅವರದು ಯಾವಾಗಲೂ ಸಂದೇಹದ ದೃಷ್ಟಿಕೋನವೆ. ಆದರೆ, ಕುವೆಂಪು ಹಾಗಲ್ಲ, ಕುವೆಂಪು ಪ್ರತಿಭೆಗೆ ಜೀವನದ ಈ ಆಯಾಮದ ಬಗ್ಗೂ ವಿಶೇಷ ಕುತೂಹಲವಿದೆ."[೪] ಈ ಅಭಿಪ್ರಾಯದಲ್ಲಿರುವ ಮನುಷ್ಯನ ಸಾಮಾಜಿಕ ವ್ಯಕ್ತಿತ್ವದ ಹುಡುಕಾಟವೇ ಕಾರಂತರಿಗೆ ಮುಖ್ಯವಾಗಿದೆ. ಈ ಹುಡುಕಾಟವು ಅವರನ್ನು ಮಾತ್ರ ಪ್ರವಾಸಕ್ಕೆ ದೂಡುವುದಿಲ್ಲ. ಅವರ ಕಾದಂಬರಿಗಳ ಪಾತ್ರಗಳನ್ನು ಪ್ರವಾಸಿಗಳನ್ನಾಗಿ ಮಾಡುತ್ತದೆ.

ಈ ಹಿನ್ನೆಲೆಯಲ್ಲಿ ಕಾರಂತರ ಕಾದಂಬರಿಗಳಲ್ಲಿ ಪಯಣಕ್ಕೆ ಬದಗಿ ಬರುವ ಬಂಡಿ, ರೈಲು, ಚಕ್ಕಡಿ ಇತ್ಯಾದಿ ವಾಹನಗಳನ್ನು ಗಮನಿಸಬಹುದು; ಪಯಣದಲ್ಲಿ ಬಸ್ಸು ಕೆಟ್ಟು ನಿಲ್ಲುವುದು, ಹೊಳೆ ಅಡ್ಡಕಟ್ಟುವುದು, ದಾರಿಯಲ್ಲಿ ಆನೆಗಳು ಅಡ್ಡಬರುವುದು ಮುಂತಾದ ಸಂದರ್ಭಗಳನ್ನು ಗಮನಿಸಬಹುದು. ಇವು ಮನುಷ್ಯರ ಬಾಳಿನ ಪಯಣದಲ್ಲಿ ಬರುವ ತೊಡಕುಗಳಾಗಿ ಸಾಂಕೇತಿಕತೆ ಪಡೆಯುತ್ತವೆ. ಇದಕ್ಕೆ ಕಾರಣ, ಕಾರಂತರು ಜೀವನವು ಸಲೀಸಾಗಿ ಜರುಗುವ ಪಯಣವಲ್ಲ. ಅದೊಂದು ಏರುಪೇರುಗಳುಳ್ಳ ಅನಿರೀಕ್ಷಿತ ಕಷ್ಟಗಳುಳ್ಳ ಪಯಣವೆಂದು ತಾತ್ವಿಕವಾಗಿ ಭಾವಿಸಿರುವುದು. ಅವರ ಜೀವನದ ಪರಿಕಲ್ಪನೆಗೂ ಅವರ ಕಾದಂಬರಿಗಳಲ್ಲಿ ಬರುವ ಪಯಣದ ರೂಪಕಗಳಿಗೂ ಈ ದೃಷ್ಟಿಯಿಂದ ಆಂತರಿಕವಾದ ಸಂಬಂಧವಿದೆ.

೪.೬. ಪಯಣ: ಪಾತ್ರಗಳು

ಕಾರಂತರ ಕಾದಂಬರಿಗಳಲ್ಲಿ ಕಥನದ ಕೇಂದ್ರವ್ಯಕ್ತಿ ದೀರ್ಘವಾದ ಜೀವನದ ಪಯಣಕ್ಕೆ ಸಿಕ್ಕು ವಿಶಿಷ್ಟವಾದ ಅನುಭವಗಳನ್ನು ಪಡೆಯುವ ವಿನ್ಯಾಸವಿದೆ. ಈ ಕೇಂದ್ರದ ಸುತ್ತ ಸುತ್ತುವ ಇತರೆ ಪಾತ್ರಗಳು ಆ ಕೇಂದ್ರವ್ಯಕ್ತಿಯೊಂದಿಗೆ ಮುಖಾಮುಖಿಯಾಗುತ್ತಲೇ ಅನುಭವ ಪಡೆಯುವ ವಿನ್ಯಾಸವೂ ಇದೆ. ಈ ಎರಡೂ ನೆಲೆಯ ಅನುಭವಗಳು ಪರಸ್ಪರ ಮುಖಾಮುಖಿ ಆಗುತ್ತವೆ. ಇದನ್ನು ವಿಮರ್ಶಕರು ಸಹ ಗುರುತಿಸಿದ್ದಾರೆ. "ಮನುಷ್ಯ ಚಲನಶೀಲ ಸಮಾಜದಲ್ಲಿ ತನ್ನತನವನ್ನು

ಹೇಗೆ ಉಳಿಸಿಕೊಳ್ಳಬಲ್ಲ ಎಂಬುದು ಮಾನವತಾವಾದ ಎತ್ತುವ ಮುಖ್ಯ ಪ್ರಶ್ನೆ. ಇಂತಹ ಮನುಷ್ಯನ ಬದುಕು ಸೂಕ್ಷ್ಮ ಗ್ರಾಹಿ ದೃಷ್ಟಿಯಿಂದ ಈ ಪ್ರಶ್ನೆಗೆ ಉತ್ತರವಾಗಿಸಲು ಹುಡುಕಾಟದ ವಸ್ತುವಾಗುತ್ತದೆ. ಇಂತಹ ಹುಡುಕಾಟ ಮೂರು ನೆಲೆಯಲ್ಲಿ ನಡೆಯುತ್ತದೆ. ಮೊದಲನೆಯದು ವ್ಯಕ್ತಿ ತನ್ನ ಬದುಕನ್ನು ತಾನೆ ಹುಡುಕಿಕೊಳ್ಳುವುದು. ಎರಡನೆಯದು ಆತನ ಬದುಕನ್ನು ಅವನ ಸಮೀಪದವರು ಹುಡುಕುವುದು ಕೊನೆಯದು ಇತರರು ಆತನ ಬದುಕನ್ನು ಹುಡುಕುವುದು.[೫] ಈ ಬಗೆಯ ಪಾತ್ರಚಿತ್ರಣ ಅಥವಾ ಕಥನ ವಿನ್ಯಾಸವು ಕನ್ನಡದ ಇತರೆ ಲೇಖಕರಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ಈ ಹಿನ್ನೆಲೆಯಲ್ಲಿ 'ಬೆಟ್ಟದಜೀವ' ಹಾಗೂ 'ಅಳಿದಮೇಲೆ' ಕಾದಂಬರಿಗಳ ಪಾತ್ರ ಚಿತ್ರಣಗಳನ್ನು ಗಮನಿಸಬಹುದು.

'ಬೆಟ್ಟದಜೀವ' ಕಾದಂಬರಿಯಲ್ಲಿ ಗೋಪಾಲಯ್ಯನು ಗಂಡಸಾಗಿ ಪಡೆದಿರುವ ಮುಕ್ತವಾದ ಪಯಣದ ಸ್ವಾತಂತ್ರ್ಯವನ್ನು ಅವನ ಹೆಂಡತಿಯಾದ ಶಂಕರಿ ಒಂದು ಕಡೆ ಪ್ರಶ್ನಿಸುವ ಸನ್ನಿವೇಶ ಬರುತ್ತದೆ: "ಅಂದರೆ ಅವರು ಗಂಡಸರು. ಅವರಿಗೇನು? ಸೊಂಟಕ್ಕೆ ಕತ್ತಿಯನ್ನು ಸಿಕ್ಕಿಸಿಕೊಂಡು ಹೊತ್ತು ಹೋಗದಿದ್ದರೆ, ದೇರಣ್ಣನಲ್ಲಿಗೋ, ಕಾಟುಮೂಲೆಗೋ ಹೋಗಿ ಎಲೆ ಅಡಿಕೆಯ ಹರಿವಾಣ ಬರಿದು ಮಾಡಿಯಾರು"(ಪು.೧೧). ಈ ಮಾತನ್ನು ಗಮನಿಸಿದಾಗ ಸ್ತ್ರೀ-ಪುರುಷರಿಗೆ ಸಾಂಪ್ರದಾಯಿಕ ಸಮಾಜವು ಒದಗಿಸಿರುವ ಚಲನೆಯ ಸ್ವಾತಂತ್ರ್ಯದಲ್ಲಿರುವ ವ್ಯತ್ಯಾಸವನ್ನು ತಿಳಿಯುತ್ತದೆ. ಅದರಲ್ಲಿಯೂ ಮೇಲ್ವರ್ಗ-ಮೇಲ್ಜಾತಿಯ ಸ್ತ್ರೀಯರು ಮನೆಯ ಅಥವಾ ಅಕ್ಕಪಕ್ಕದ ಮನೆಯವರ ಸೀಮಿತ ನೆಲೆಯಲ್ಲಿ ಚಲಿಸುವ ಸ್ವಾತಂತ್ರ್ಯ ಪಡೆದಿರುತ್ತಾರೆ. ಈ ತಾರತಮ್ಯವನ್ನು ಸಾಂಪ್ರದಾಯಿಕ ಪರಿಸರದಲ್ಲಿ ಬೆಳೆದ ಶಂಕರಿಯೂ ಪ್ರಶ್ನಿಸುವಂತೆ ತನ್ನ ಅಸಮಾಧಾನವನ್ನು ಹೊರಹಾಕುತ್ತಾಳೆ. ಸ್ತ್ರೀಯರು ಮಾಡುವ ಪಯಣಕ್ಕೆ ನಿರ್ಬಂಧ ಹಾಕಿರುವುದು ಅವರ ಸ್ವಾತಂತ್ರ್ಯಕ್ಕೆ ಧಕ್ಕೆ ಮಾತ್ರವಲ್ಲ, ಅವರ ಅನುಭವಲೋಕದ ವಿಸ್ತರಣೆಗೂ ಧಕ್ಕೆಯಾಗಿದೆ. ಅದರಲ್ಲೂ ಮಹಿಳೆಯರನ್ನು ಮಡಿಮೈಲಿಗೆ ಹೆಸರಲ್ಲಿ ಪುರುಷ ವ್ಯವಸ್ಥೆ ಮತ್ತಷ್ಟು ಪಯಣಕ್ಕೆ ತಡೆಯೊಡುತ್ತದೆ. ಇದರ ಬಗ್ಗೆ ಶಂಕರಿಯ ಪ್ರತಿರೋಧ ಕಂಡುಬರುತ್ತದೆ. ಕಾರಂತರ ಕಾದಂಬರಿಗಳು ಸಾಂಪ್ರದಾಯಿಕ ಕುಟುಂಬದ ಜೀವನವನ್ನು ಚಿತ್ರಿಸುತ್ತ ಹೋದರೂ, ಅದರೊಳಗೆ ಇರುವ ಬಂಡುಕೋರ ಸೌಮ್ಯದನಿಗಳನ್ನು ಸೂಕ್ಷ್ಮವಾಗಿ ದಾಖಲಿಸುತ್ತಾರೆ ಎನ್ನುವುದಕ್ಕೂ ಈ ಪ್ರಸಂಗ ಸಾಕ್ಷಿಯಾಗಿದೆ.

ಮನುಷ್ಯರು ಜೀವನ ನಡೆಸುವ ಸಲುವಾಗಿ ಸಮುದಾಯಗಳು ತಮ್ಮ ಅಸ್ತಿತ್ವಕ್ಕಾಗಿ ಪಯಣವನ್ನು ಮಾಡುವ ಸನ್ನಿವೇಶಗಳು ಬರುತ್ತವೆ. ಇಂತಹ ಸನ್ನಿವೇಶವನ್ನು ಗೋಪಾಲಕೃಷ್ಣ ಪೈ ಅವರ 'ಸ್ವಪ್ನಸಾರಸ್ವತ'ದಲ್ಲಿ ಕಾಣಬಹುದು. ಕುವೆಂಪು ಅವರಲ್ಲಿ ಕೂಡ ಅನೇಕ ಪಾತ್ರಗಳು ಹೊಸಬದುಕನ್ನು ಹುಡುಕಿಕೊಂಡು ಪಾತ್ರಗಳು ಪಯಣ ಮಾಡುತ್ತವೆ. ಬಡವರಾದ ಅಣ್ಣಯ್ಯಗೌಡರು ಚಂದ್ರೇಗೌಡರ ಕಾಟ ತಡೆಯಲಾರದೆ, ರಾತ್ರೋರಾತ್ರಿ ಊರುಬಿಟ್ಟು ಇನ್ನೊಂದು ಊರಿಗೆ ಪಯಣಿಸುತ್ತಾರೆ. ಗುತ್ತಿಯು ಹೊಸಬದುಕನ್ನ ಅರಸಿಕೊಂಡು ಹೀಗೆ ವಲಸೆ ಹೋಗುತ್ತಾನೆ. ಇಲ್ಲಿ ಮುಖ್ಯವಾದ

ಸಂಗತಿಯೆಂದರೆ, ಪಯಣ ಮಾಡುವ ಪಥಿಕರು ಯಾವ ಜಾತಿಗೆ ಅಥವಾ ವರ್ಗಕ್ಕೆ ಸೇರಿದವರ ಎಂಬುದರ ಮೇಲೆ ಅವರ ಅನುಭವದ ಸ್ವರೂಪಕ ನಿರ್ಧಾರವಾಗುತ್ತದೆ. ಯಾಕೆಂದರೆ ಮೇಲ್ವರ್ಗದವರು ಮತ್ತು ಕೆಳವರ್ಗದವರು ಮಾಡುವ ಪಯಣದ ನೆಲೆಯಲ್ಲಿ ವ್ಯತ್ಯಾಸಗಳಿವೆ. 'ಬೆಟ್ಟದಜೀವ' ಕಾದಂಬರಿಯಲ್ಲಿ ಇರುವ ಒಂದು ಸನ್ನಿವೇಶ ಇದಕ್ಕೆ ಸಾಕ್ಷಿಯಾಗಿದೆ. ಬಟ್ಯನು ತನ್ನ ಕುಟುಂಬದ ಬಗ್ಗೆ ಹೇಳುವ ಮಾತಿದು: "ಮಕ್ಕಳು ಇಬ್ಬರು ಇದ್ದರೂ ಒಡೆಯ ಅವರ ಋಣ ಹರಿಯಿತು; ದೈವ ಕೊಂಡು ಹೋಯಿತು. ಈಗ ಮನೆಯಲ್ಲಿರುವುದು ನನ್ನ ಮಗಳು, ಅವಳ ನಾಲ್ಕಾರು ಗಂಡುಗಳು. ಅಳಿಯ ಘಟ್ಟಕ್ಕೆ ಹೋಗಿದ್ದಾನೆ; ಎಲ್ಲರೂ ಇಲ್ಲಿ ಇದ್ದರೆ ಆಗುತ್ತದೆಯೇ?"(ಪು.೧೨೬). ಇಲ್ಲಿ ಬಟ್ಯನಂತಹ ಹೊಲೆಯ ಮುಂತಾದ ಕೆಳಜಾತಿ ಮತ್ತು ಕೆಳವರ್ಗಕ್ಕೆ ಸೇರಿದ ಜನರು ತಮ್ಮ ಬದುಕಿಗಾಗಿ, ಅಸ್ತಿತ್ವಕ್ಕಾಗಿ ಘಟ್ಟ ಪ್ರದೇಶಗಳಿಗೆ ಪಯಣ ಮಾಡುತ್ತ ಬಂದಿರುವುದನ್ನು ಚರಿತ್ರೆಯದ್ದಕ್ಕೂ ನೋಡಬಹುದು. ಕೆಲವೊಮ್ಮೆ ಕೆಳವರ್ಗದ ಹಾಗೂ ಕೆಳಜಾತಿಯ ಸ್ತ್ರೀಯರು ಸಹ ತಮ್ಮ ಪುರುಷರೊಂದಿಗೆ ವಲಸೆ ಹೋಗುತ್ತಾರೆ. ಕಾರಂತರ 'ಚೋಮನದುಡಿ'ಯಲ್ಲಿ ಬೆಳ್ಳಿ ತನ್ನ ತಮ್ಮಂದಿರ ಜೊತೆ ಘಟ್ಟ ಪ್ರದೇಶಕ್ಕೆ ಜೀತಮಾಡಲು ಪಯಣ ಹೋಗುವುದನ್ನು ಗಮನಸಬಹುದು. ಹೀಗೆ ಜನರ ವರ್ಗ, ಜಾತಿ, ಅಂತಸ್ತುಗಳು ಅವರು ಮಾಡುವ ಪಯಣದ ಸ್ವರೂಪವನ್ನು ನಿರ್ಧರಿಸುತ್ತವೆ. ಮೇಲ್ಜಾತಿಗೆ ಸೇರಿದ ನಿರೂಪಕನು ಮಾಡುವ ಪಯಣವು ಅನುಭವ ಸಂಚಯಕ್ಕೆ ಕಾರಣವಾದರೆ, ಇಲ್ಲಿ ಕೆಳಜಾತಿಯವರು ಮಾಡುವ ಪಯಣವು ಅವರ ಬದುಕಿನ ಅಸ್ತಿತ್ವದ ಹೋರಾಟದ ಭಾಗವಾಗಿದೆ.

'ಅಳಿದಮೇಲೆ' ಕಾದಂಬರಿಯಲ್ಲಿ ಕಾಣಿಸಿಕೊಳ್ಳುವ ಮೂಕಾಂಬಿಕೆಯು ಪಾರೋತಜ್ಜಿಯ ಜೊತೆಗೆ ಬೆಳೆದ ಇನ್ನೊಂದು ಜೀವ. ಮಹಿಳೆಯರಿಗೆ ಇವರಿಬ್ಬರೂ ತಮ್ಮತಮ್ಮ ಮನೆತನಗಳ ಗಂಡಸರು ಮಾಡಿದ ಆಣೆ-ಭಾಷೆಗಳಿಂದಾಗಿ ಒಬ್ಬರನ್ನೊಬ್ಬರು ಇಳಿವಯಸ್ಸಿನಲ್ಲೂ ಕೂಡ ಸಂಧಿಸಲಾಗದ ಇಕ್ಕಟ್ಟನ್ನು ಅನುಭವಿಸುತ್ತಾರೆ. ಆದರೆ ಇವರು ಈ ಇಕ್ಕಟ್ಟನ್ನು ದಾಟಿ ಪರಸ್ಪರ ಭೇಟಿಯಾಗಲು ಅವರು ಜಾತ್ರೆಗಾಗಿ ಮಾಡುವ ಪಯಣವು ಅವಕಾಶ ಕಲ್ಪಿಸುತ್ತದೆ. ಇಬ್ಬರೂ ವರ್ಷಕ್ಕೊಮ್ಮೆ ಬರುವ ಬೆನಕನ ಜಾತ್ರೆಯ ದಿನ ದೇವಸ್ಥಾನಕ್ಕೆ ಸಂಧಿಸಲೆಂದೇ ಬರುತ್ತಾರೆ! ಕಾದಂಬರಿಯಲ್ಲಿ ಪಾರೋತಜ್ಜಿಯ ಜೀವನದ ವಿವರಗಳು ಮಹತ್ವವಾಗುತ್ತವೆ. ಏಕೆಂದರೆ ಯಶವಂತರಾಯನು ತನ್ನ ಹುಟ್ಟಿದೂರನ್ನು ತ್ಯಜಿಸಿ ಕುಮಟೆಯಂತಹ ಪಟ್ಟಣಕ್ಕೆ ಪಯಣಿಸಬೇಕಾದ ಅನಿವಾರ್ಯತೆಗೆ ಕಾರಣ, ಆತನ ದಾಂಪತ್ಯ ಜೀವನದಲ್ಲಿನ ಏರುಪೇರುಗಳು. ಅವನ ಸಂಬಂಧಿಕರಲ್ಲಿದ್ದ ಜಿದ್ದಿನ ಸ್ವಭಾವಗಳು. ಅಂದರೆ ಅನೇಕರ ಜೀವನದಲ್ಲಿ ಅವರು ಮಾಡುವ ಅನಿವಾರ್ಯ ಪಯಣಗಳ ಹಿಂದೆ ಬಾಳಿನ ಕಹಿ ಪ್ರಸಂಗಗಳ ಒತ್ತಡವಿರುತ್ತದೆ. "ಒಬ್ಬ ಮನುಷ್ಯನ ಜೀವನವನ್ನು ಅರಿತುಕೊಳ್ಳಬೇಕಾದರೆ ಬೇರೆಯವರ ಜೀವನವನ್ನು ಅರಿಯುವ ಅವಶ್ಯಕತೆ ಇದೆ ಎಂಬ ಅಂಶವು ಈ ಕಾದಂಬರಿಯಲ್ಲಿ ಅಂತರ್ಗತವಾಗಿ ಹರಿಯುತ್ತದೆ. ಈ ಸಿದ್ಧಾಂತದ ಒಂದು

ಭಾಗವಾಗಿ ಪಾರೋತಜ್ಜಿಯ ಜೀವನ ಮೂಡಿಬರುತ್ತದೆ.[೬] ಈ ತತ್ವವನ್ನು ಸಾಬೀತುಪಡಿಸಲೊ ಎಂಬಂತೆ ಇಲ್ಲಿನ ಪಾತ್ರಗಳು ಸ್ಥಳದಿಂದ ಸ್ಥಳಕ್ಕೆ ಚಲನೆ ಮಾಡುತ್ತವೆ. ಹೀಗೆ ಕಾರಂತರ ಕಾದಂಬರಿಯಲ್ಲಿನ ಪಾತ್ರಗಳ ಚಲನೆ ವಲಸೆ ಪಯಣಗಳಿಗೂ ಕಾರಂತರು ಶೋಧಿಸ ಬಯಸುವ ಜೀವನ ದರ್ಶನಕ್ಕೂ ಆಳವಾದ ಸಂಬಂಧವು ಏರ್ಪಟ್ಟಿದೆ.

೪.೭. ಪಯಣ: ಕಥನತಂತ್ರ

ಕಾರಂತರ ಕಾದಂಬರಿಗಳಲ್ಲಿ ಪಯಣಕ್ಕೂ ಜೀವನ ದರ್ಶನಕ್ಕೂ ಒಂದು ಆಂತರಿಕ ಸಂಬಂಧ ಇರುವಂತೆ, ಈ ಜೀವನ ದರ್ಶನಕ್ಕೂ ಕಥನತಂತ್ರಕ್ಕೂ ಆಂತರಿಕ ಸಂಬಂಧವಿದೆ. ಅವರ ಪ್ರಸಿದ್ಧ ಕಾದಂಬರಿ 'ಮರಳಿ ಮಣ್ಣಿಗೆ'ಯ ಎರಡು ತಲೆಮಾರಿನ ಪಾತ್ರಗಳಾದ ಲಚ್ಚ ಹಾಗೂ ರಾಮ ಕ್ರಮವಾಗಿ ಚೆನ್ನೈ ಹಾಗೂ ಮುಂಬೈಗೆ ವಿದ್ಯಾಭ್ಯಾಸ ಹಾಗೂ ನೌಕರಿಗಾಗಿ ಪಯಣ ಮಾಡುವ ಕಥನವಿದೆ. ಹಾಗೆ ಕಂಡರೆ ಕಾರಂತರ ಕಾದಂಬರಿಯ ಭೂಮಿಕೆಯಾದ ದಕ್ಷಿಣ ಕನ್ನಡವು ರಾಜಕೀಯವಾಗಿ ಮದರಾಸು ಪ್ರಾಂತ್ಯಕ್ಕೆ ಸೇರಿದ್ದರೂ, ಅದರ ಬದುಕನ್ನು ಬಹಳ ಪ್ರಭಾವಿಸಿದ್ದು ಮುಂಬೈ ಮಹಾನಗರ. ಹೀಗಾಗಿ ಅವರ ಪಾತ್ರಗಳು ಮುಂಬೈಗೆ ಹೋಗುವ ಸನ್ನಿವೇಶಗಳು ಬಹಳ ಇವೆ. ಇದನ್ನು ಎಲ್ಲ ಕಾಲದ ವಿಮರ್ಶಕರು ಗುರುತಿಸುತ್ತ ಬಂದಿದ್ದಾರೆ.[೭] 'ಅಳಿದಮೇಲೆ' ಹಾಗೂ 'ಬೆಟ್ಟದಜೀವ' ಕಾದಂಬರಿಗಳಲ್ಲಿ ಕೂಡ ಪಾತ್ರಗಳು ಮುಂಬೈಗೆ ಹೋಗುವ ಸನ್ನಿವೇಶಗಳಿವೆ.

'ಅಳಿದಮೇಲೆ' ಹಾಗೂ 'ಬೆಟ್ಟದಜೀವ' ಕಾದಂಬರಿಗಳಲ್ಲಿ ನಿರೂಪಕನು ಕಂಡದ್ದನ್ನು ವಿವರಿಸುತ್ತಾ ಹೋಗುವ ಕಥನಕ್ರಮವಿದೆ. ಹೀಗಾಗಿ ಈ ಕಾದಂಬರಿಗಳಲ್ಲಿ ಪಯಣವು ಒಂದು ಮುಖ್ಯ ಆಶಯವಾಗಿಯೂ ಕಥನತಂತ್ರವಾಗಿಯೂ ಬಳಕೆಯಾಗಿದೆ. ಒಂದು ಕಡೆ ನಿರೂಪಕನು ತಾನು ಹಿಂದೆ ಕಂಡದ್ದನ್ನು ಮುಂದೆ ಕಂಡದ್ದರ ಜೊತೆ ಜೋಡಿಸಿ ಬೆಲೆಕಟ್ಟುವ, ಆಲೋಚನ ಕ್ರಮದ ವಿಸ್ತರಣೆಯ ನೆಲೆಯ ಕಥನಕ್ರಮವಿದೆ. ಎರಡನೆಯದರಲ್ಲಿ ನಿರೂಪಕನು ತಾನು ಕಾಣುತ್ತ ಹೋದದನ್ನು ನಿರೂಪಣೆ ಮಾಡುವ ನೆಲೆಯ ಕಥನಕ್ರಮವಿದೆ.

'ಬೆಟ್ಟದಜೀವ'ದಲ್ಲಿ ಮೂರು ಪಯಣದ ಚಲನೆಗಳಿವೆ. ಒಂದನೆಯದು–ಶಿವರಾಮಯ್ಯ ಪುತ್ತೂರಿನಿಂದ ಕೆಳಬೈಲಿಗೆ ಬಂದಿರುವುದು; ಎರಡನೆಯದು–ಕೆಳಬೈಲಿನಿಂದ ಗೋಪಾಲಯ್ಯನ ಮಗ ಶಂಭು ಪುಣೆಗೆ ಹೋಗಿರುವುದು; ಮೂರನೆಯದು–ಶಿವರಾಮಯ್ಯ ಮತ್ತು ಗೋಪಾಲಯ್ಯ ಮಗನನ್ನು ಹುಡುಕಿಕೊಂಡು ಮಹಾನಗರಕ್ಕೆ ಪಯಣ ಮಾಡುವುದು. ಈ ಕೃತಿಯಲ್ಲಿ ತನ್ನ ಮೂಲನೆಲೆಯನ್ನು ಬಿಟ್ಟು ಕಾಟುಮೂಲೆಯ ನೆಲೆಗೆ ಹೋಗಿರುವ ವ್ಯಕ್ತಿಯಾಗಿ ಗೋಪಾಲಯ್ಯ ಇದ್ದಾನೆ; ಅವರನ್ನು ತನ್ನ ಊರನ್ನು ಬಿಟ್ಟು ಹಸುವನ್ನು ಹುಡುಕುತ್ತ ಕಾಟುಮೂಲೆಗೆ ಬಂದಿರುವ ವ್ಯಕ್ತಿಯಾಗಿ ಶಿವರಾಮಯ್ಯ ಇದ್ದಾನೆ. ಕಾಟುಮೂಲೆಯಿಂದ ಅಪ್ಪನ ಜತೆ ಮನಸ್ತಾಪ ಮಾಡಿಕೊಂಡು

ಮುಂಬೈಗೆ ಹೋಗಿರುವ ವ್ಯಕ್ತಿಯಾಗಿ ಶಂಭುಭಟ್ಟ ಇದ್ದಾನೆ. ಅವನನ್ನು ಹುಡುಕಿಕೊಂಡು ಶಿವರಾಮಯ್ಯ ಹಾಗೂ ಗೋಪಾಲಯ್ಯ ಮುಂಬೈಗೆ ಹೋಗುವ ಸೂಚನೆಯೊಂದಿಗೆ ಕಾದಂಬರಿ ಮುಗಿಯುತ್ತದೆ. ಹೀಗೆ ಇಡೀ ಕಾದಂಬರಿಯ ಕಥನಕ್ರಮವು ಹೀಗೆ ಪರಸ್ಪರ ತಮ್ಮ ಮೂಲನೆಲೆಗಳಿಂದ ಇನ್ನೊಂದು ನೆಲೆಗೆ ಚಲಿಸುವ ವ್ಯಕ್ತಿಗಳ ಕಥನವಾಗಿದೆ. ಗೋಪಾಲಯ್ಯನಿಗೆ ತನ್ನ ಮಗ ಶಂಭು ಕಾಡಿನ ಮೂಲೆಯಲ್ಲಿರುವ ಮನೆಯನ್ನು ಬಿಟ್ಟ ಮಹಾನಗರಕ್ಕೆ ಚಲಿಸಿರುವ ನೋವು ಇದೆ. ಇದನ್ನು ತನ್ನ ಊರು ಬಿಟ್ಟು ಬಂದಿರುವ ಅಪರಿಚಿತ ವ್ಯಕ್ತಿಯ ಜೊತೆ ಹಂಚಿಕೊಳ್ಳುತ್ತಾರೆ. ಇದುವೇ ಅವರಿಬ್ಬರ ಸಂಬಂಧ ಬೆಳೆಯಲು ಒಂದು ನೆಪವಾಗುತ್ತದೆ. ಇಲ್ಲಿ ಸಂಬಂಧಗಳನ್ನು ಮುರಿದು ಕಟ್ಟುವ ಪ್ರಕ್ರಿಯೆ ಕಂಡುಬರುತ್ತದೆ. ಪಯಣ ವ್ಯಕ್ತಿಗೆ ಮನುಷ್ಯರನ್ನು ಭೇಟಿ ಮಾಡುವ, ಮಾತನಾಡಿಸುವ ಮೂಲಕ ಅವರೊಳಗೆ ಅಡಗಿರುವ ಭಾವನೆಗಳನ್ನು ಹೊರಗೆ ತೆಗೆಯುವ ಕೆಲಸವನ್ನು ಕಲಿಸುತ್ತದೆ. ಪಯಣ ಬೇರೆ ಬೇರೆ ವ್ಯಕ್ತಿಗಳನ್ನು ಭೇಟಿಯಾಗುವ ಅವಕಾಶವನ್ನು ಕಲ್ಪಿಸುತ್ತದೆ. ಅವರೊಂದಿಗೆ ಮಾತನಾಡುವ ತಂತ್ರಗಾರಿಕೆಯನ್ನು ಹುಡುಕಿಕೊಳ್ಳುವುದನ್ನು ಕಲಿಸುತ್ತದೆ. ಅವರ ಬಾಳಿನ ಗುಟ್ಟುಗಳನ್ನು ತಿಳಿದುಕೊಳ್ಳುವ, ಅವರಿಗೆ ಸಮಾಧಾನ ಮಾಡುವ, ಸಂಬಂಧ ಬೆಳೆಸುವ ಮಾನವೀಯ ಆಯಾಮವು ಪಯಣಕ್ಕಿದೆ. ಇದನ್ನು ಕಾರಂತರ ಕಾದಂಬರಿಯು ಚೆನ್ನಾಗಿ ಬಳಸಿಕೊಳ್ಳುತ್ತದೆ. ಅದರ ಕಥನಕ್ರಮವನ್ನು ಇದರ ಹಿನ್ನೆಲೆಯಲ್ಲಿ ಗ್ರಹಿಸಬೇಕಾಗಿದೆ.

ಕಾರಂತರ 'ಅಳಿದಮೇಲೆ' ಕಾದಂಬರಿಯಲ್ಲಿ ಮಾನವರು ತಮ್ಮ ಬಾಳಿನ ಪಯಣದ ಕೊನೆಯಲ್ಲಿ ಏನನ್ನು ಉಳಿಸಿ ಹೋಗುತ್ತಾರೆ? ಅದು ಬದುಕಿದವರ ಜೀವನದಲ್ಲಿ ಯಾವ ಅರ್ಥವನ್ನು ಪಡೆಯುತ್ತದೆ? ಎಂಬ ಎರಡು ಸಂಗತಿಗಳನ್ನು ಹುಡುಕಿ ನೋಡುವ ಪ್ರಯತ್ನವಿದೆ. ವ್ಯಕ್ತಿಯು ತನ್ನ ಬಾಳಿನ ಪಯಣ ಮುಗಿಸಿದ ಬಳಿಕ ಬರಿಯ ಸ್ಮರಣೆಗಳಷ್ಟೇ ಉಳಿಯುವ ಸಂಗತಿಗಳು. ತಿರುಗಾಟ ನಡೆಸಿ ಸಾಗಿದವರು ತಮ್ಮ ಹೆಜ್ಜೆಯ ಜಾಡನ್ನು ಬಿಟ್ಟು ಹೋಗುವಂತೆ, ಕಳೆದ ಬಾಳು ಅನ್ಯರಲ್ಲಿ ಮೂಡಿಸಿದ ಪ್ರಭಾವಗಳಿಂದ ಅಳೆಯಬಹುದಾದ ವಸ್ತು. ನಮ್ಮ ಬಾಳಿನ ಪ್ರವಾಸ ಅದಕ್ಕಿಂತಲೂ ಗಾಢವಾದ ಮುದ್ರೆಯೊತ್ತಬಲ್ಲುದು ಎಂದು ನಡೆದ ಎಲ್ಲರೂ ಎಣಿಸಬೇಕಾಗಿಲ್ಲ. ಆ ಲಭ್ಯತೆ ಎಲ್ಲರಿಗೂ ಸಿಗಲಾರದು. ಕಾದಂಬರಿಯಲ್ಲಿನ ಯಶವಂತನಂತೆ ಜನ ಹುಟ್ಟುತ್ತಾರೆ, ಬಾಳುತ್ತಾರೆ, ಸಾಯುತ್ತಾರೆ. ತಮ್ಮ ಜೀವನ ಪಯಣದಲ್ಲಿ ತಮ್ಮ ಸಂಪರ್ಕಕ್ಕೆ ಬಂದ ಕೆಲವರಿಗೆ ಅವರು ಹಿತವರು; ಹಲವರಿಗೆ ಅವರು ತಿಳಿಯದವರು. ಬದುಕಿನ ಚಲನೆಯಲ್ಲಿನ ಸಂಪರ್ಕದಲ್ಲುಂಟಾದ ಹಿತಾಹಿತ ಪ್ರಭಾವಗಳನ್ನು ಮೇಳವಿಸಿ, ಯಶವಂತರಾಯನ ಬಾಳು ಎಂಥದಿತ್ತೆಂದು ಹುಡುಕಲೆತ್ನಿಸುವ ಹಾಗೂ ಆತ ಬಿಟ್ಟುಹೋದ ಹೆಜ್ಜೆಯ ಜಾಡನ್ನು ಹಿಂಬಾಲಿಸಿ ನೋಡುವ ಕಥನಕ್ರಮವಿಲ್ಲಿದೆ. ಆದರೂ ಎಂ.ಜಿ. ಕೃಷ್ಣಮೂರ್ತಿ ಅವರು ಅಭಿಪ್ರಾಯ ಪಡುವಂತೆ "ಕಾದಂಬರಿಯಲ್ಲಿ ಅನೇಕ ಪಾತ್ರಗಳ ಪ್ರಯಾಣಗಳ ಚಿತ್ರಣವಿದ್ದರೂ ಮುಖ್ಯವಾದ ಎರಡು ಪ್ರಯಾಣಗಳು ಯಶವಂತರಾಯರದ್ದು ಮತ್ತು ಕಾದಂಬರಿಯ ಕೇಂದ್ರ ಪ್ರಜ್ಞೆಯಾದ ಪಾತ್ರದ್ದು."[೮]

'ಅಳಿದಮೇಲೆ' ಕೃತಿಯ ಮುನ್ನುಡಿಯಲ್ಲಿ ಕಾರಂತರು 'ಬೆಟ್ಟದಜೀವ' ಕಾದಂಬರಿಯ ನಿರೀಕ್ಷಕ ಪಾತ್ರದಂತೆ ಸಾಗುವ ಅನುಭವಗಳನ್ನು ಪಡೆಯುವ ದಾಖಲಿಸುವ ಚಲನೆಯ ಕ್ರಮ 'ಅಳಿದಮೇಲೆ' ಕಾದಂಬರಿಯಲ್ಲಿಯೂ ಕಂಡುಬರುತ್ತದೆ ಎಂದು ಸ್ವತಃ ಹೇಳುತ್ತಾರೆ. 'ಅಳಿದಮೇಲೆ' ಕಾರಂತರ ರಚನಾ ಕೌಶಲದ ದೃಷ್ಟಿಯಿಂದ ಮತ್ತು ಹೊಸ ವಸ್ತುವಿನ ಅರಸುವಿಕೆಯ ದೃಷ್ಟಿಯಿಂದ ಮಹತ್ವದ ಕಾದಂಬರಿ. ಯಶವಂತರಾಯ ಬಿಟ್ಟು ಹೋದ ಜೀವನದ ಹೆಜ್ಜೆಗಳನ್ನು ಅರಸುತ್ತಾ ಹೊರಟ ನಿರೂಪಕನಿಗೆ ಇದು ಜೀವನ ಮೌಲ್ಯಗಳ ತುಲನಾತ್ಮಕ ಅಭ್ಯಾಸಕ್ಕೊಂದು ದಾರಿಯಾಗುತ್ತದೆ. ಇದಲ್ಲದೆ ಯಶವಂತರಾಯನ ದಿನಚರಿ ಮತ್ತು ಚಿತ್ರಗಳು ಅವನ ಮನಸ್ಸಿನ ಇಣುಕು ನೋಟವನ್ನು ಒದಗಿಸುತ್ತವೆ. ಈ ಚಿತ್ರಗಳು ಮತ್ತು ದಿನಚರಿಗಳು ನಿರೂಪಕರ ಮುಂದಿನ ಪಯಣಕ್ಕೆ ಪ್ರೇರಕವಾಗುತ್ತವೆ. ಒಬ್ಬ ವ್ಯಕ್ತಿಯ ಜೀವನದ ನೆನಪಿನ ಹೆಜ್ಜೆಗಳನ್ನು ಅರಸಿ ಪಯಣ ಮಾಡುವುದರಿಂದ ಒದಗುವ ನಿರೂಪಣಾ ವಿಧಾನದ ಸೌಕರ್ಯ, ದಿನಚರಿ, ಚಿತ್ರಗಳಿಂದೊದಗುವ ಸಾಂಕೇತಿಕ ಸೂಚನೆಗಳು ಇಲ್ಲಿ ಮುಖ್ಯವಾಗುತ್ತವೆ. ಜನರನ್ನು ಕಂಡು ಅವರಿಂದ ಯಶವಂತರಾಯನ ಬಾಳಿನ ಬಗ್ಗೆ ಮಾಹಿತಿ ಪಡೆಯುವಲ್ಲಿ ಉಂಟಾಗುವ ಪತ್ತೇದಾರಿಯ ಸ್ಪರ್ಶವು ಕಾದಂಬರಿಯಲ್ಲಿ ಹದವರಿತು ಬೆರೆತಿದೆ. ಇದರಿಂದ 'ಅಳಿದಮೇಲೆ' ಕಾದಂಬರಿಯು ಜೀವನದರ್ಶನ ಶೋಧನೆಯ ಪತ್ತೇದಾರಿ ಕಾದಂಬರಿಯಾಗಿದೆ. ಇದರ ಹಿಂದೆ ಪಯಣದ ಭಿತ್ತಿಯು ಕೆಲಸ ಮಾಡಿದೆ.

'ಅಳಿದಮೇಲೆ' ಗಂಭೀರವಾದ ಕೃತಿಯಾದರೂ ಕಾರಂತರ ಆರೋಗ್ಯಕರವಾದ ಹಾಸ್ಯಪ್ರವೃತ್ತಿಯ ಜೊತೆಗೆ ಶಬ್ದಗಳ ಜೊತೆ ಆಟವಾಡುವ ಆಯಾಮ ಅದರಲ್ಲಿದೆ. ಒಬ್ಬ ಗಂಭೀರ ಸಾಹಿತಿಯ ಲವಲವಿಕೆಯ ಗುಣವನ್ನು ಸುಮತೀಂದ್ರ ನಾಡಿಗ ಅವರು 'ವಿಮರ್ಶೆಯ ದಾರಿಯಲ್ಲಿ' ಹೀಗೆ ಗುರುತಿಸಿದ್ದಾರೆ: "ನಿರೂಪಕನ ಹೆಸರು ಕಾರಂತ. ಜೆಮ್‌ಷೆಡ್ಜಿ ಕರ್ನಾತ್ ಎಂದು ಕರೆಯುತ್ತಾರೆ. ಗೋವೆಯ ಕ್ರಿಶ್ಚಿಯನ್ ಕುಟುಂಬವೊಂದನ್ನು ನಿರೂಪಕ ಕರಿಯ ದೊರೆಗಳ ಕುಟುಂಬ ಎನ್ನುತ್ತಾನೆ. ಮೊದಲು ಪೋಟೋಬಾ ಆಮೇಲೆ ವಿಠೋಬಾ. ಪಾರ್ವತಮ್ಮ ಮನಿ ಯಾರ್ಡರನ್ನೂ ಮನಿಹಾಂಡಲು ಎನ್ನುತ್ತಾಳೆ. ರಾಮಹೆಗ್ಗಡೆಯವರು ಜನರಿಗೆ ಮೋಸ ಮಾಡುವುದನ್ನು, ನಿರೂಪಕ ಮತ್ಸವ್ಯವಸಾಯ ಎನ್ನುತ್ತಾನೆ. ಚಿತ್ರಕಾರರೊಬ್ಬರಿಗೆ ಯಶವಂತರ ಚಿತ್ರಗಳನ್ನು ತೋರಿಸಿದಾಗ ಆತ ಅವರ ಬಗ್ಗೆ ಕುತೂಹಲದಿಂದ ಇವರು ಎಲ್ಲಿಯವರು ಎಂದು ಕೇಳಿದಾಗ ನಿರೂಪಕ ಸ್ವರ್ಗೂರಿನವರು ಎನ್ನುತ್ತಾನೆ."[೫] ಇಲ್ಲಿಯ ಭಾಷೆಯ ಪ್ರಯೋಗದಲ್ಲಿ ಕೃತಿಯ ದಾರ್ಶನಿಕ ಹುಡುಕಾಟಕ್ಕೆ ಧಕ್ಕೆಯಾಗದಂತೆ ಕಾರಂತರು ಎಚ್ಚರವಹಿಸಿದ್ದಾರೆ. ಅವರ ಹಾಸ್ಯಪ್ರವೃತ್ತಿಯ ಹಿಂದೆ ಕೆಲಸ ಮಾಡಿರುವುದು ಅವರು ತಿರುಗಾಟದ ಅನುಭವಗಳು. ಅವರ ಕಾದಂಬರಿಗಳಲ್ಲಿ ಬರುವ ಊರುಗಳನ್ನು ಗಮನಿಸಬೇಕು. ಮುಂಬೈ, ಗೋವೆ, ಧಾರೇಶ್ವರ, ಹೊನ್ನಗದ್ದೆ, ಕುಮಟಾ, ಪುಣೆ, ಬೆನಕನಹಳ್ಳಿ. ವ್ಯಕ್ತಿಗಳು ತಾವು ವಾಸಿಸುವ ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಪಯಣ ಮಾಡುವಾಗ ಅವರಲ್ಲಿ ಒಂದು ಹೊಸದೃಷ್ಟಿಕೋನದಿಂದ ಅಲ್ಲಿನ ಜನರನ್ನು ಘಟನೆಗಳನ್ನು

ಕಾಣುವ ಮನೋಧರ್ಮ ಕೆಲಸ ಮಾಡುತ್ತಿರುತ್ತದೆ. ಅದುವೇ ಅವರಲ್ಲಿ ಹುಟ್ಟುವ ಹಾಸ್ಯಕ್ಕೆ ಹಿನ್ನೆಲೆಯಾಗಿ ಕೆಲಸಮಾಡುತ್ತದೆ.

ಕಾರಂತರ ಎರಡು ಕಾದಂಬರಿಗಳ ಆರಂಭದಲ್ಲಿ ಕಾಣಿಸಿಕೊಳ್ಳುವ ನಿರೂಪಕರಿಗೆ, ಅದರ ನಾಯಕರಾದ ಗೋಪಾಲಯ್ಯ ಮತ್ತು ಯಶವಂತರಾಯರು ಕೊನೆಯಲ್ಲಿ ಅಪೂರ್ವ ವ್ಯಕ್ತಿಗಳಾಗಿ ಕಾಣಿಸುತ್ತಾರೆ. ಪಥಿಕರಾಗಿ ಕಾರ್ಯನಿರ್ವಹಿಸುವ ಈ ನಿರೂಪಕರು ವ್ಯಕ್ತಿಗಳ ಸುತ್ತಲಿನ ಜೀವನವನ್ನು ಸೂಕ್ಷ್ಮವಾಗಿ ಅಳೆಯಬಲ್ಲ ವ್ಯಕ್ತಿಗಳಾಗಿ ಕಂಡುಬರುತ್ತಾರೆ. ನಿರೂಪಕರಿಗೆ ಕಥಾನಾಯಕರ ಜತೆಗಿನ ಒಡನಾಟದಲ್ಲಿನ ಸಣ್ಣ ಸಣ್ಣ ಪಯಣಗಳೂ ಅವರನ್ನು ಭಿನ್ನವಾಗಿ ಅರ್ಥೈಸಲು ನೆರವಾಗುತ್ತವೆ. ಪೂರ್ಣಚಂದ್ರ ತೇಜಸ್ವಿಯವರ 'ಕರ್ವಾಲೊ' ಕಾದಂಬರಿಯಲ್ಲಿ ಕರ್ವಾಲೊ ಅವರಿಗೆ ಮಂದಣ್ಣ ವಿಶಿಷ್ಟ ವ್ಯಕ್ತಿಯಾಗಿ ಕಾಣುತ್ತಾನೆ. ಹಾಗೆಯೇ ಶಿವರಾಮಯ್ಯನಿಗೆ ಗೋಪಾಲಯ್ಯನ ಬದುಕು ಬೆರಗನ್ನು ಹುಟ್ಟಿಸುತ್ತದೆ.

'ಅಳಿದಮೇಲೆ' ಕಾದಂಬರಿಯ ಆರಂಭದಲ್ಲಿ 'ಜೀವನವೆಂಬುದು ದೀರ್ಘಕಾಲದ ಯಾತ್ರೆ' ಎಂಬ ಮಾತು ಬರುತ್ತದೆ. ಅದು ಜೀವನವನ್ನು ಪಯಣವೆಂದು ಭಾವಿಸಿದೆ ಮಾತ್ರವಲ್ಲ, ಜೀವನದಲ್ಲಿ ಪಯಣಕ್ಕಿರುವ ಮಹತ್ವವನ್ನು ಸಹ ಸೂಚಿಸುತ್ತದೆ. ಮನುಷ್ಯನ ಹುಟ್ಟಿನಿಂದ ಅಂತ್ಯದವರೆಗೂ ನಡೆಯಬಹುದಾದ ಪಯಣವನ್ನು ಅದು ತಿಳಿಸುತ್ತದೆ. ಇಲ್ಲಿನ ನಿರೂಪಕನು ಕಥಾನಾಯಕನ ಭೇಟಿ ಮಾಡುವುದರೊಂದಿಗೆ ಕಥೆ ತನ್ನ ಚಲನಶೀಲತೆಯನ್ನು ಪಡೆಯುತ್ತದೆ. ನಿರೂಪಕ ಆಕಸ್ಮಿಕವಾಗಿ ಭೇಟಿಯಾಗುವ ಯಶವಂತರಾಯನ ಬದುಕಿನ ಒಗಟುಗಳನ್ನು ಪಯಣದ ಸಂದರ್ಭದಲ್ಲಿ ತಿಳಿಯುತ್ತಾ ಬಿಡಿಸುತ್ತ ಹೋಗುತ್ತಾನೆ. ಯಶವಂತರಾಯನನ್ನು ಹುಡುಕಿಕೊಂಡು ಮುಂಬೈಯೆಡೆಗೆ ಪಯಣಿಸುತ್ತಾನೆ. ಬಳಿಕ ಮುಂಬೈಯಿಂದ ಯಶವಂತರಾಯನ ದಿನಚರಿಯಲ್ಲಿ ದಾಖಲಾಗಿರುವ ವ್ಯಕ್ತಿಗಳ ಊರುಗಳಿಗೆ ಪಯಣಿಸುತ್ತಾನೆ. ಯಶವಂತರಾಯನ ಆಶೋತ್ತರಗಳ ಈಡೇರಿಕೆಗಾಗಿ ಅವನ ಸಂಬಂಧಿಕರನ್ನು ಅರಸಿಕೊಂಡು ಪಯಣ ಮಾಡುತ್ತಾನೆ. ಹೀಗೆ ಪಯಣ ಮಾಡುತ್ತಲೇ ತಾನು ಭೇಟಿಯಾಗುವ ವ್ಯಕ್ತಿಗಳ ಹಾಗೂ ಯಶವಂತರಾಯನ ಮನಸ್ಥಿತಿಯನ್ನು ಅರಿಯುವ ಸಂಶೋಧಕನಾಗಿ ಬದಲಾಗುತ್ತಾನೆ. ಈ ಮೇಲಿನ ಎರಡು ಕಾದಂಬರಿಗಳ ವಸ್ತು ಒಂದೇ ಎಂಬಂತೆ ಕಂಡರೂ ಅವು ಭಿನ್ನವಾದ ಪಯಣದ ಚಲನೆಗಳನ್ನು ಹೊಂದಿವೆ.

'ಬೆಟ್ಟದಜೀವ' ಕಾದಂಬರಿಯಲ್ಲಿ ಮೂರು ರೀತಿಯ ಚಲನೆಗಳಿವೆ. ಹಳ್ಳಿಯ ಒಳಗಡೆಯೇ ನಡೆಯುವ ಪಯಣ, ಹಳ್ಳಿಯಿಂದ ಪಟ್ಟಣಕ್ಕೆ ನಡೆಯುವ ಪಯಣ, ಕೊನೆಯದು ಹಳ್ಳಿ-ಪಟ್ಟಣದಿಂದ ಮಹಾನಗರಕ್ಕೆ ಮಾಡುವ ಪಯಣ. ಈ ಮೂರೂ ನೆಲೆಯ ಪಯಣಗಳು ಮೂರು ಸ್ತರದ ಅನುಭವಗಳಿಗೆ ಕಾರಣವಾಗುತ್ತವೆ. ಈ ಮೂರೂ ಸ್ತರದ ಅನುಭವಗಳು ಪರಸ್ಪರ ಸಂಬಂಧ ಪಡೆದಿವೆ. ನಿರೂಪಕರು ಬೇರೆ ಊರಿನಲ್ಲಿ ಕಂಡಿರುವ ವ್ಯಕ್ತಿಗಳನ್ನು ಅವರನ್ನು ಕಳೆದುಕೊಂಡಿರುವ ಸಂಬಂಧಿಕರನ್ನು ಭೇಟಿ ಮಾಡುವ ವಿನ್ಯಾಸ ಎರಡು ಕಾದಂಬರಿಗಳಲ್ಲೂ ಇದೆ. ಪಯಣವೆನ್ನುವುದು

ಕಾರಂತರ ಕಾದಂಬರಿಗಳಲ್ಲಿ ಕಡಿದು ಹೋದ ಸಂಬಂಧಗಳನ್ನು ಕೂಡಿಸುವ ತಂತುವಾಗಿ ಕೆಲಸ ಮಾಡುತ್ತದೆ. ಈ ಪಯಣವು ಅವರ ಕಾದಂಬರಿಗಳಲ್ಲಿ ಮನುಷ್ಯ ಸಂಬಂಧಗಳ ಶೋಧದ ಒಂದು ಉಪಾಯವಾಗಿದೆ. ಚಿಂತಕ ವಿ. ಚಂದ್ರಶೇಖರ ನಂಗಲಿ ಅವರು ಕಾದಂಬರಿಗಳ ಬಗ್ಗೆ ಹೇಳುವಂತೆ "ಕಾರಂತರ ಕಾಲ್ನಡಿಗೆಯ ತಿರುಗಾಟಗಳು, ಪರ್ವತಾರಣ್ಯ ಕೇಂದ್ರಿತ ಜೀವನಶೈಲಿಯ ಬಿಂಬಜ್ಞಾನ, ದಕ್ಷಿಣ ಕನ್ನಡ ಜಿಲ್ಲೆಯ ಸ್ಥಳೀಯ ಭೂಗೋಳದ ನಿಕಟ ಮೈತ್ರಿ ಇವುಗಳ ಪರಿಣಾಮ ಫಲದಂತೆ ಮೂಡಿ ಬಂದಿರುವ 'ಚೋಮನದುಡಿ' ಮತ್ತು 'ಬೆಟ್ಟದಜೀವ' ಕೃತಿಗಳು"[೧೦] ವ್ಯತ್ಯಾಸವೆಂದರೆ, ಕುವೆಂಪು ಕಾದಂಬರಿಗಳಲ್ಲಿ ಪಯಣವು ಜಾತಿ ವ್ಯವಸ್ಥೆ ಮತ್ತು ಊಳಿಗಮಾನ್ಯ ವ್ಯವಸ್ಥೆಯ ಕ್ರೌರ್ಯ ಮತ್ತು ಔದಾರ್ಯಗಳನ್ನು ಕಾಣಿಸುವಂತಹ ಒಂದು ನೆಪವಾಗಿ ಪರಿಣಮಿಸಿದರೆ, ಕಾರಂತರ ಕಾದಂಬರಿಗಳಲ್ಲಿ ಅದು ಮನುಷ್ಯ ಸಂಬಂಧಗಳ ಹಲವು ಮಗ್ಗಲು, ಆಯಾಮಗಳನ್ನು ಶೋಧಿಸುವ ಒಂದು ನೆಪವಾಗಿದೆ.

ಕನ್ನಡ ಕಾದಂಬರಿಗಳಲ್ಲಿ ಪಯಣವು ಕಡಿಮೆ ಅರಿವಿನ ಸ್ಥಿತಿಯಿಂದ ಪೂರ್ಣ ಅರಿವಿನ ಸ್ಥಿತಿಯೆಡೆಗೆ ಮಾಡುವ ಚಲನೆಯ ಒಂದು ಸಂಕೇತವಾಗಿ ಬರುತ್ತವೆ. 'ಬೆಟ್ಟದಜೀವ'ದಲ್ಲಿನ ಗೋಪಾಲಯ್ಯನನ್ನು ಭೇಟಿಯಾಗುವುದಕ್ಕಿಂತ ಮುಂಚೆ ಇದ್ದ ಶಿವರಾಮಯ್ಯನ ಜೀವನ ಅನುಭವ, ವ್ಯಕ್ತಿಗಳ ಬಗೆಗಿದ್ದ ತಿಳಿವಳಿಕೆಗಳೆರಡು ಭೇಟಿಯಾದ ನಂತರ ಬದಲಾಗಿರುವುದು ಕೊನೆಯಲ್ಲಿ ಗಮನಿಸಬಹುದು. ಎರಡು ದೊಡ್ಡ ಜೀವನ ತತ್ವಗಳನ್ನು ಅರಿಯುವ ಕೆಲಸವನ್ನು ಎರಡು ಕಾದಂಬರಿಗಳಲ್ಲಿ ಕಾಣಿಸುವ ಶಿವರಾಮಯ್ಯ ಮತ್ತು ಕಾರಂತ ಎಂಬ ನಿರೂಪಕ ಪಾತ್ರಗಳು ಮಾಡುತ್ತವೆ. ಪ್ರಶ್ನೆಯೆಂದರೆ, ಯಾಕೆ ಕನ್ನಡ ಕಾದಂಬರಿಗಳಲ್ಲಿ ಕಾಣಿಸುವ ನಿರೂಪಕರ ಈ ಪಯಣವು ಪುರುಷರ ಪಯಣವೇ ಆಗಿದೆ? ಈ ಅಂಶವು ನಮ್ಮ ಸಮಾಜದ ವಿಚಿತ್ರ ಸಾಮಾಜಿಕ ವಾಸ್ತವಿಕತೆಯನ್ನು ಹೇಳುತ್ತದೆ. 'ಗಂಡಸು ಕೂತು ಕೆಟ್ಟರೆ, ಹೆಂಗಸು ತಿರುಗಿ ಕೆಟ್ಟಳು' ಎಂಬ ಗಾದೆಯನ್ನು ಇದೇ ಸಾಮಾಜಿಕ ಗ್ರಹಿಕೆಯ ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು. ಈ ಗಾದೆಯು ಸಾಂಪ್ರದಾಯಿಕ ಸಮಾಜವು ಮಹಿಳೆಗೆ ತಿರುಗಾಡಲು ಅವಕಾಶವನ್ನು ನೀಡಿಲ್ಲ ಎಂಬ ಸತ್ಯವನ್ನು ಪರೋಕ್ಷವಾಗಿ ತಿಳಿಸುತ್ತದೆ. ಪಯಣವು ಅರಿವು ಮತ್ತು ದರ್ಶನಗಳಿಗೆ ಕಾರಣವಾಗುತ್ತದೆ ಎಂದು ಹೇಳುವಾಗ ಈ ಪಯಣವನ್ನು ಮಾಡುವವರು ಒಂದೊಮ್ಮೆ ಮಹಿಳೆಯರಾಗಿದ್ದರೆ ಈ ಕಾದಂಬರಿಗಳ ಅನುಭವಲೋಕ, ದರ್ಶನಗಳಿಗೆ ಇನ್ನೊಂದು ಆಯಾಮವಿರುತ್ತಿತ್ತು ಅನಿಸುತ್ತದೆ. ಶಾಂತಿನಾಥ ದೇಸಾಯಿಯವರ 'ಕ್ಷಿತಿಜ' ಕಥೆಯಲ್ಲಿ ಹೆಣ್ಣಿನ ಪಯಣದ ಮೂಲಕ ಹೊಸ ಅನುಭವಗಳಿಗೆ ಸಾಕ್ಷಿಯಗುವ ಸನ್ನಿವೇಶವಿದೆ. ಯು.ಆರ್. ಅನಂತಮೂರ್ತಿಯವರು 'ಕಾರಂತರ ಅಥೆಂಟಿಕ್ ಪ್ರಪಂಚ' ಎಂಬ ಲೇಖನದಲ್ಲಿ "ಸಹಾನುಭೂತಿ, ಔದಾರ್ಯ, ಸ್ನೇಹ, ಜೀವನಶ್ರದ್ಧೆ, ಕಷ್ಟಸಹಿಷ್ಣುತೆ– ಇಂತಹ ಸಾರ್ವತ್ರಿಕ ಮೌಲ್ಯಗಳನ್ನೆ ತಮ್ಮ ಕಾದಂಬರಿ ಪ್ರಪಂಚದ ಜೀವಾಳಗಳಾಗಿ ಕಾರಂತರು ಆಯ್ದುಕೊಳ್ಳುತ್ತಾರೆ."[೧೧] ಕಾರಂತರಿಗೆ ಕಾದಂಬರಿ ಪ್ರತಿಸೃಷ್ಟಿಯಲ್ಲ; ಜೀವನದ ಅನುಭವದಿಂದ

ಬಂದ ಜೀವಂತ ದಾಖಲೆ. ಈ ಪ್ರಪಂಚವನ್ನು ಕಾಲದ ಚಲನೆಯಲ್ಲಿ ಜೀವನ ನಿಧಾನವಾಗಿ ಮಾಗುವ ಬಗೆ, ಪಡೆಯುವ ಸ್ವರೂಪ ಕಾರಂತರ ಕೃತಿಗಳ ಮುಖ್ಯಕಾಳಜಿ. ಇಂತಹ ಬದುಕಿನ ಅನುಭವಗಳಿಗೆ ಹೆದರದೆ ಮೈಯೊಡ್ಡಿ ಮಾಗುವುದೇ ಅವರ ಮೌಲ್ಯವಾಗಿದೆ. ಈ ಮೌಲ್ಯಗಳು ಒಂದು ಸ್ಥಳಕ್ಕೆ ಬದ್ಧವಾಗಿ ಬದುಕುತ್ತಿರುವವರ ಬದುಕಿನಲ್ಲಿಯೂ ಅವರು ಕಾಣಿಸುವರು. ಸ್ಥಳಕ್ಕೆ ಬದ್ಧವಾಗದೆ ಪಯಣ ಮಾಡುತ್ತ ಚಲಿಸುವ ವ್ಯಕ್ತಿಗಳ ಬದುಕಿನಲ್ಲಿಯೂ ಕಾಣಿಸುವವರು. 'ಅಳಿದಮೇಲೆ' ಹಾಗೂ 'ಬೆಟ್ಟದಜೀವ' ಕಾದಂಬರಿಗಳಲ್ಲಿ ಈ ಎರಡೂ ಮಾದರಿಯ ವ್ಯಕ್ತಿಗಳ ಬದುಕಿನ ಚಿತ್ರಗಳಿವೆ.

ಕೊನೆ ಟಿಪ್ಪಣಿಗಳು:

೧. ಪೂರ್ಣಚಂದ್ರ ತೇಜಸ್ವಿ, 'ಅಬಚೂರಿನ ಪೋಸ್ಟಾಫೀಸು'(ಮುನ್ನುಡಿ), ಪು.೧

೨. ವಿವೇಕ ರೈ ಬಿ.ಎ., 'ಶತಮಾನದ ಕೊನೆಯಲ್ಲಿ ಶಿವರಾಮ ಕಾರಂತ', ಪು.೩೨

೩. "ಶಿಕ್ಷಣ, ಕಲಾಜೀವನ, ಉದ್ಯೋಗ, ವಿಷಯಜ್ಞಾನ-ಇಂಥವುಗಳಿಗೆ ಸಂಬಂಧಿಸಿದಂತೆ ಕಥಾನಾಯಕರ ಬದುಕು ವಿಕಸನಶೀಲ, ಚಲನಶೀಲ ಎಂಬಂತೆ ಕಂಡರೂ ಮೌಲ್ಯಗಳನ್ನು ಕುರಿತಂಥ ಪೂರ್ವಗ್ರಹಿಕೆಗಳು ಮಾತ್ರ ಹೆಚ್ಚು ಕಡಿಮೆ ಸ್ಥಿರ ತಿಳಿವಳಿಕೆಯ ನೆಲೆಯಲ್ಲಿಯೇ ಕೊನೆಯವರೆಗೂ ಅಬಾಧಿತವಾಗಿ ಇರುತ್ತದೆ. ಅಂದರೆ ಬದುಕಿನಲ್ಲಿ ರೂಢಿಸಿಕೊಂಡು ಬಂದ ಮೌಲ್ಯಗಳು ಮತ್ತು ವಿಚಾರಗಳು ಹೊಸ ಮತ್ತು ನಿಷ್ಠುರ ಜೀವನ ಸಂದರ್ಭಗಳ ಎದುರಿನಲ್ಲಿ ಪುನರ್ಪರಿಶೀಲನೆಗೆ ಒಳಗಾಗುವ, ಆ ಮೂಲಕ ಆ ಮೌಲ್ಯಗಳ ಬಗೆಗಿನ ಪೂರ್ವಗ್ರಹಿಕೆಗಳು ಹೊಸ ಆಯಾಮ ಮತ್ತು ಅರ್ಥವಂತಿಕೆಯಲ್ಲಿ ಪುನರ್ನಿಮಿತವಾಗುವ ಬಲವಾದ ಸಂಘರ್ಷ ಸಂದರ್ಭಗಳು ಕಥಾನಾಯಕರಿಗೆ ಅಷ್ಟಾಗಿ ಎದುರಾಗುವುದಿಲ್ಲ"('ಕೃತಿ ಸಾಕ್ಷಿ', ಜಿ.ಎಚ್.ನಾಯಕ್, ಪು.೨೯)

೪. ನಾಗರಾಜ್ ಡಿ.ಆರ್., 'ಅಮೃತ ಮತ್ತು ಗರುಡ', ಪು.೪೨-೪೩

೫. ವಿವಿಧ ಲೇಖಕರು, 'ಕಾದಂಬರಿ ಕಣ್ಣಲ್ಲಿ ಕಾರಂತರು', ಪು.೯೪

೬. ಮಾಧವ ಕುಲಕರ್ಣಿ, 'ಕಾರಂತರ ಕಾದಂಬರಿಗಳು: ವಿಮರ್ಶೆ', ಪು.೧೦೬

೭. ಹರಿದಾಸಭಟ್ಟ ಕು.ಶಿ., ಕಾರಂತ ಪ್ರಪಂಚ', ಪು.೭೭

೮. ಕೃಷ್ಣಮೂರ್ತಿ ಎಂ.ಜಿ., 'ಚಿಂತನ-ಮಂಥನ', ಪು.೩೭

೯. ಸುಮತೀಂದ್ರ ನಾಡಿಗ, 'ವಿಮರ್ಶೆಯ ದಾರಿಯಲ್ಲಿ', ಪು.೨೦೫

೧೦. ಚಂದ್ರಶೇಖರ ನಂಗಲಿ ಎ.,'ನೆಲ ಮುಟ್ಟುವ ಪ್ರೀತಿ', ಪು.೧೧೫

೧೧. ಅನಂತಮೂರ್ತಿ ಯು.ಆರ್., ಪ್ರಜ್ಞೆ-ಪರಿಸರ', ಪು.೬೧

ಅಧ್ಯಾಯ ಐದು

ಮಾಸ್ತಿಯವರ ಕಾದಂಬರಿಗಳಲ್ಲಿ ಪಯಣದ ವಿನ್ಯಾಸಗಳು

೫.೧. ಪ್ರವೇಶ

೫.೨. ಪಯಣ: ಗಂಡು-ಹೆಣ್ಣು

೫.೩. ಪಯಣ: ವ್ಯಕ್ತಿತ್ವ

೫.೪. ಪಯಣ: ನೈತಿಕತೆ

೫.೫. ಪಯಣ: ಸಂಸ್ಕೃತಿ

೫.೬. ಪಯಣ: ಅಧಿಕಾರ

೫.೭. ಪಯಣ: ಕಥನತಂತ್ರ

ಅಧ್ಯಾಯ ಐದು

ಮಾಸ್ತಿಯವರ ಕಾದಂಬರಿಗಳಲ್ಲಿ ಪಯಣದ ವಿನ್ಯಾಸಗಳು

೫.೧. ಪ್ರವೇಶ

ಕನ್ನಡ ನವೋದಯ ಸಾಹಿತ್ಯ ಕಾಲಘಟ್ಟದಲ್ಲಿ ಕಾಣಿಸಿಕೊಂಡ ಪ್ರಮುಖ ಕಥೆಗಾರ ಮತ್ತು ಕಾದಂಬರಿಕಾರರೆಂದರೆ ಮಾಸ್ತಿ ವೆಂಕಟೇಶ ಅಯ್ಯಂಗಾರ್. ಮಾಸ್ತಿಯವರು ಕೋಲಾರ ಜಿಲ್ಲೆಯ ಮಾಸ್ತಿಯಲ್ಲಿ ಜನಿಸಿ ಮುಂದೆ ಅಸಿಸ್ಟೆಂಟ್ ಕಮೀಷನರ್ ಆಗಿ ಹಲವು ಪ್ರದೇಶಗಳಿಗೆ ಪಯಣಿಸಿ ಕಾರ್ಯನಿರ್ವಹಿಸಿದವರು; ಸಣ್ಣ ಕಥೆಗಾರರಾಗಿ, ಕಾದಂಬರಿಕಾರರಾಗಿ ತಮ್ಮದೇ ಗುರುತನ್ನು ಕನ್ನಡ ಸಾಹಿತ್ಯದಲ್ಲಿ ಸ್ಥಾಪಿಸಿಕೊಂಡವರು; ಸಣ್ಣಕಥೆ, ವಿಮರ್ಶೆ, ಕಾವ್ಯ, ನಾಟಕ, ಆತ್ಮಚರಿತ್ರೆ, ಕಾದಂಬರಿ, ಜೀವನ ಚರಿತ್ರೆ, ಅನುವಾದ ಹೀಗೆ ಹಲವು ನೆಲೆಗಳಲ್ಲಿ ಕೃತಿಗಳನ್ನು ರಚಿಸಿದವರು. ಬದುಕಿನ ಪಯಣದಲ್ಲಿ ಕಂಡ ಅನುಭವಗಳನ್ನು ತಮ್ಮ ಕೃತಿಯ ರಚನೆಯಲ್ಲಿ ಬಳಸಿಕೊಂಡವರು; ಚಾರಣಿಗರಾಗಿ ದೇಶವನ್ನು ಸುತ್ತಿದ ಶಿವರಾಮ ಕಾರಂತರು ಒಂದೆಡೆ ಇದ್ದರೆ, ಅಧಿಕಾರಿಯಾಗಿ ಕರ್ನಾಟಕದ ಬಹುಭಾಗವನ್ನು ಕಾರ್ಯನಿಮಿತ್ತ ತಿರುಗಾಡಿದ ಮಾಸ್ತಿಯವರು ಇನ್ನೊಂದೆಡೆಯಿದ್ದಾರೆ.[೧] ಅಷ್ಟೇ ಅಲ್ಲದೆ ಅವರು ತಮ್ಮ ಸುತ್ತಾಟದ ಭಾಗವಾಗಿ ಕಂಡ ಜನರ ಬದುಕಿನ ಸೂಕ್ಷ್ಮ ನೆಲೆಗಳನ್ನು ಗುರುತಿಸಿ ತಮ್ಮ ಸಾಹಿತ್ಯದಲ್ಲಿ ದುಡಿಸಿಕೊಂಡಿದ್ದಾರೆ. ಅವರ ಸಾಹಿತ್ಯವನ್ನು ಪಯಣದ ಪರಿಕಲ್ಪನೆಯಿಲ್ಲದೆ ಅರ್ಥಮಾಡಿಕೊಳ್ಳುವುದು ಕಷ್ಟ ಎಂಬಂತೆ ಅಲ್ಲಿ ಪಯಣದ ನೂರಾರು ವಿನ್ಯಾಸಗಳಿವೆ.

ಮಾಸ್ತಿಯವರು ತಾವು ಅಧಿಕಾರದಲ್ಲಿದ್ದಾಗ ತಿರುಗಾಡಿದ ಪ್ರದೇಶಗಳ ಕುರಿತು ಬರೆಹಕ್ಕಾಗಿ ಅಪಾರವಾದ ಮಾಹಿತಿ ಸಂಗ್ರಹಿಸುವ ಅಭ್ಯಾಸ ಇಟ್ಟುಕೊಂಡಿದ್ದರು. ಈ ಮಾಹಿತಿಯು ಗ್ರಂಥಸ್ಥ ರೂಪದಲ್ಲಿ ಇದ್ದಂತೆ ಮೌಖಿಕ ಕಥನಗಳ ರೂಪದಲ್ಲಿಯೂ ಇತ್ತು. ಅವರು ಹೀಗೆ ಸಂಗ್ರಹಿಸಿದ ಮಾಹಿತಿಯ ಆಧಾರದಲ್ಲಿ ಅವರ ಪ್ರಮುಖ ಐತಿಹಾಸಿಕ ಕಾದಂಬರಿಗಳಾದ 'ಚೆನ್ನಬಸವ ನಾಯಕ' ಹಾಗೂ 'ಚಿಕವೀರ ರಾಜೇಂದ್ರ' ರಚಿಸಲ್ಪಟ್ಟವು. 'ಜ್ಯೋಗೂರ ಅಂಜಪ್ಪನ ಕೋಳಿಕಥೆ' ಯಂತಹ ಕತೆಗಳೂ 'ಮದಲಿಂಗನ ಕಣಿವೆ'ಯಂತಹ ಕಥನಕಾವ್ಯಗಳೂ ರಚನೆಯಾದವು. ಅವರ ಎರಡು

ಕಾದಂಬರಿಗಳಲ್ಲಿ ಒಂದು ಮಲೆನಾಡಿನ ರಾಜವಂಶವೊಂದರ ಬದುಕನ್ನು ಪ್ರತಿನಿಧಿಸಿದರೆ, ಮತ್ತೊಂದು ಕೊಡಗಿನ ಭಾಗದ ರಾಜವಂಶದ ಬದುಕನ್ನು ಪ್ರತಿನಿಧಿಸುತ್ತದೆ. ಮಾಸ್ತಿಯವರು ತಮ್ಮ ಕೃತಿಗಳಲ್ಲಿ ಬರುವ ವಿವರಗಳ ವಿಷಯದಲ್ಲಿ ಎಷ್ಟು ಶ್ರದ್ಧೆವಹಿಸುತ್ತಾರೆಂದರೆ, 'ಚಿಕವೀರ ರಾಜೇಂದ್ರ' ಕೃತಿಯು ಅಚ್ಚಿಗೆ ಹೋಗುವ ಮೊದಲು ನಾಲ್ಕುನಾಡು ಅರಮನೆಯನ್ನು ನೋಡಬೇಕೆಂದು ಕ್ಷೇತ್ರಕಾರ್ಯ ಮಾಡಿದವರು. ಇದು ಮಾಸ್ತಿಯವರು ವಸ್ತುವಿಗಾಗಿ ತಿರುಗಾಟ ನಡೆಸಿ ಮಾಹಿತಿಯನ್ನು ಕಲೆಹಾಕುವಲ್ಲಿ ತೋರುವ ಬದ್ಧತೆಗೆ ಹಿಡಿದ ಕನ್ನಡಿಯಾಗಿದೆ. ತಮ್ಮ ಸಂದರ್ಶನಗಳಲ್ಲಿಯೂ ಮಾಸ್ತಿ 'ಚೆನ್ನಬಸವ ನಾಯಕ' ಕುರಿತ ಮಾಹಿತಿಗಾಗಿ ಬಿದನೂರಿನ ಕಡೆ ಮತ್ತು 'ಚಿಕವೀರ ರಾಜೇಂದ್ರನ' ಮಾಹಿತಿಗಾಗಿ ಮಡಿಕೇರಿ ಪ್ರದೇಶಗಳ ಕಡೆ ಪಯಣ ಮಾಡಿರುವುದನ್ನು ದೃಢೀಕರಿಸಿದ್ದಾರೆ.[೨] ಇದು ಅವರ ಎರಡು ಕೃತಿಗಳು ಲೇಖಕರ ಪಯಣದ ಅನುಭವದಿಂದ ಹುಟ್ಟಿರುವುದನ್ನು ದೃಢಪಡಿಸುತ್ತವೆ. ಇದಕ್ಕೆ ಪೂರಕವಾಗಿ ಎರಡೂ ಕಾದಂಬರಿಗಳಲ್ಲಿ ಪಯಣದ ವಿವಿಧ ವಿನ್ಯಾಸಗಳಿರುವುದನ್ನು ತಿಳಿಯಲು ಪ್ರೇರಿಸುತ್ತವೆ. ಈ ಹಿನ್ನೆಲೆಯಲ್ಲಿ ಅವರ ಎರಡೂ ಕಾದಂಬರಿಗಳನ್ನು ವಿಶ್ಲೇಷಿಸಲು ಈ ಅಧ್ಯಾಯದಲ್ಲಿ ಯತ್ನಿಸಲಾಗುವುದು.

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಮೊದಲನೆಯ ಕಾದಂಬರಿ 'ಚೆನ್ನಬಸವ ನಾಯಕ' ೧೯೪೯ರಲ್ಲಿ ಪ್ರಕಟವಾಯಿತು. ಎರಡನೆಯ ಕಾದಂಬರಿ 'ಚಿಕವೀರ ರಾಜೇಂದ್ರ' ೧೯೫೬ರಲ್ಲಿ ಪ್ರಕಟವಾಯಿತು. ಇವೆರಡೂ ಚಾರಿತ್ರಿಕ ಕಾದಂಬರಿಗಳಾಗಿವೆ. ಮೊದಲನೆಯ ಕಾದಂಬರಿ ಮಲೆನಾಡಿನ ಪ್ರಾಂತ್ಯಕ್ಕೆ ಸಂಬಂಧಿಸಿದ್ದರೆ, ಎರಡನೆಯ ಕಾದಂಬರಿ ಕೊಡಗಿನ ಪ್ರಾಂತ್ಯಕ್ಕೆ ಸಂಬಂಧಿಸಿದ್ದಾಗಿದೆ. ಮೊದಲನೆಯ ಈ ಕಾದಂಬರಿಯ ಮುಖ್ಯ ಕಥೆ ಬಿದನೂರಿನ ಇತಿಹಾಸವನ್ನು ಕುರಿತದ್ದಾಗಿದೆ. ಶಾಂತವ್ವಳ ಪಾತ್ರದ ಬೆಳವಣಿಗೆಯೊಂದಿಗೆ ಆರಂಭಗೊಳ್ಳುವ ಕಥೆ ವೀರಮ್ಮಾಜಿ ಹಾಗೂ ಚೆನ್ನಬಸವ ನಾಯಕನ ನಡುವಿನ ವೈಮನಸ್ಸು ಮತ್ತು ಅದರ ಸುತ್ತ ಮೈಸೂರು ಅರಸ, ಹೈದರಾಲಿ, ಬೂದಿಬಸವ, ನೇಮಯ್ಯ, ಹೆಗ್ಗಡಿತಿ ಮುಂತಾದ ಪಾತ್ರಗಳ ಪರಿಚಯವನ್ನು ಮಾಡಿಸುತ್ತದೆ. ಕಾದಂಬರಿ ಗತಕಾಲದ ರಾಜಕೀಯ ಚಿತ್ರಣವನ್ನು ನೀಡುತ್ತದೆ. ಚೆನ್ನಬಸವನ ತಾಯಿ ವೀರಮ್ಮಾಜಿ. ಪತಿ ಬಸವಪ್ಪ ನಾಯಕನ ಮರಣದ ನಂತರ ರಾಜ್ಯದ ಆಧಿಪತ್ಯ ವಹಿಸಿಕೊಂಡವಳು. ಮಗನಿಗೆ ಪಟ್ಟ ಕಟ್ಟಲು ಆಕೆಗೆ ಮನಸಿಲ್ಲ. ಸೊಸೆ ಶಾಂತವ್ವಳನ್ನು ಕಂಡರೆ ಆಕೆಗೆ ಆಗದು. ಅವಳು ನಂಬಯ್ಯ ಎನ್ನುವ ಮನೆವಾರ್ತೆಯ ಅಧಿಕಾರಿಯೊಂದಿಗೆ ಇರಿಸಿಕೊಂಡಿರುವ ಸಂಬಂಧ ಊರಿಗೆಲ್ಲಾ ತಿಳಿದಿರುವ ರಹಸ್ಯವಾಗಿರುತ್ತದೆ. ಆಕೆ ನಂಬಯ್ಯನನ್ನೇ ರಾಜ್ಯದ ಉತ್ತರಾಧಿಕಾರಿಯನ್ನಾಗಿ ಮಾಡಬಹುದೆಂಬ ಶಂಕೆ ಎಲ್ಲರಲ್ಲಿಯೂ ಇದೆ. ಆಕೆ ತನ್ನ ಮಗ ತನ್ನನ್ನು ಗೌರವಿಸುತ್ತಿಲ್ಲ; ತನ್ನ ತಾಯ್ತನದ ಅಧಿಕಾರದ ಸ್ಥಾಪನೆಯಾಗಬೇಕು ಎಂದೆಲ್ಲ ಎಣಿಸಿ ಅದಕ್ಕಾಗಿ ಒಂದು ದಾರಿ ಹುಡುಕುತ್ತಾಳೆ. ಚೆನ್ನಬಸವ ನಾಯಕನ ಮಡದಿ ಶಾಂತವ್ವಳು, ಜೈನ ಸಂಪ್ರದಾಯದವಳಾದರೆ ವೀರಮ್ಮಾಜಿ ಶೈವಳು. ಅರಮನೆಯಲ್ಲಿ ನಡೆಯುವ ಧಾರ್ಮಿಕ ಆಚರಣೆಗಳನ್ನು ನೋಡಿಕೊಳ್ಳುವ ಸಲುವಾಗಿ

ಶೈವ ಸಂಪ್ರದಾಯದ ಬೇರೊಬ್ಬ ಸೊಸೆಯನ್ನು ತರುವುದು ಆಕೆಯ ಉದ್ದೇಶ. ಆದರೆ ಶಾಂತವ್ವಳದ್ದು ಸರಳ ಸ್ವಭಾವ. ಗಂಡ ಬಯಸಿದರೆ ತಾಯಿಯ ಒತ್ತಾಯದಂತೆ ಇನ್ನೊಂದು ಮದುವೆಯಾಗಿ ಸುಖವಾಗಿರಲಿ ಎನ್ನುವ ಉದಾರ ಮನೋಭಾವ ಆಕೆಯದು.

ವಸ್ತಾರೆಯ ಹೆಗ್ಗಡಿತಿಯ ಪಾತ್ರದ ಸೃಷ್ಟಿಯೊಂದಿಗೆ ಅಧಿಕಾರ ಮತ್ತು ವ್ಯಾಪಾರ ವ್ಯವಸ್ಥೆಯ ಸ್ಥೂಲ ಚಿತ್ರಣ ಕಾದಂಬರಿಯಲ್ಲಿ ದೊರಕುತ್ತದೆ. ಹಾಗೆಯೇ ಅವಳ ಕೈಕೆಳಗಿನ ಜೀತದಾಳುಗಳಾದ ಮಲ್ಲಿಗೆ ಹಾಗೂ ಸಗುನರ ಮುಖೇನ ಸಾಮಾಜಿಕ ಕ್ರಾಂತಿಯೂ ನಡೆಯುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಕತೆಯೊಳಗೆ ನುಸುಳುವುದು ಮೈಸೂರು ಸಂಸ್ಥಾನ ಮತ್ತು ಹೈದರಾಲಿಯ ಚಿತ್ರಣ. ಮೈಸೂರಿನ ಅರಸ ಕೃಷ್ಣರಾಜ ತನ್ನ ಅಧಿಕಾರ ಸ್ಥಾಪನೆಗಾಗಿ ಹವಣಿಸುತ್ತಿರುವ ಅಸಹಾಯಕ. ಹೈದರನ ಪ್ರಕಾರ ಅಸಮರ್ಥ ದೊರೆ. ಹೈದರಾಲಿಯನ್ನು ಮಟ್ಟಹಾಕಲು ಬಿದನೂರಿನ ಚೆನ್ನಬಸವ ನಾಯಕನ ಸಹಾಯವನ್ನು ಮೈಸೂರು ಅರಸ ಬಯಸುತ್ತಾನೆ. ಒಂದೆಡೆ ವೀರಮ್ಮಾಜಿ ಮತ್ತು ಕೃಷ್ಣರಾಜ ತಮ್ಮ ತಮ್ಮ ಅಧಿಕಾರ ಸ್ಥಾಪನೆಗಾಗಿ ಹವಣಿಸುತ್ತಿದ್ದರೆ, ಅಧಿಕಾರದ ಆಸೆಬುರುಕನಂತೆ ಕಾದಂಬರಿಯ ಉದ್ದಕ್ಕೂ ಚಲನೆಗೆ ಒಳಪಟ್ಟಿರುವ ಪಾತ್ರವಾಗಿ ಹೈದರಾಲಿ ಕಾಣಿಸುತ್ತಾನೆ.

ಮೈಸೂರು ಅರಸರಿಗೆ ಹೈದರನ ಪ್ರಾಬಲ್ಯವನ್ನು ತಗ್ಗಿಸಲು ಬಿದನೂರಿನ ಸಹಾಯ ಬೇಕಾಗಿರುತ್ತದೆ. ಅದಕ್ಕಾಗಿಯೇ ಅವರು ಚೆನ್ನಬಸವ ನಾಯಕ ಪಟ್ಟಕ್ಕೆ ಬರಲೆಂದು ಬಯಸಿ ಅವನನ್ನು ಮೈಸೂರಿಗೆ ಕರೆಸಿಕೊಳ್ಳುತ್ತಾರೆ. ಹೈದರಾಲಿ ತನಗೆ ವಿರೋಧವಾಗಿ ಫಿತೂರಿ ನಡೆಯುತ್ತಿದೆ ಯೆಂದು ತಿಳಿಯುತ್ತಾನೆ. ಬಿದನೂರಿನ ಅಸ್ಪಷ್ಟವಾದ ರಾಜಕೀಯ ಪರಿಸ್ಥಿತಿಯನ್ನು ನೆಪ ಮಾಡಿಕೊಂಡು ಬಿದನೂರಿನ ಪ್ರಾಂತ್ಯವನ್ನು ಆಕ್ರಮಿಸಿಕೊಳ್ಳುವನು. ಚೆನ್ನಬಸವ ನಾಯಕನು ಕೆಲವು ದಿನಗಳ ನಂತರ ಕಾಯಿಲೆಗೆ ಒಳಗಾಗಿ ಸಾಯುತ್ತಾನೆ. ಹೈದರ್ ರಾಜ್ಯವನ್ನು ವಶಪಡಿಸಿಕೊಂಡು ರಾಣಿ ವೀರಮ್ಮಾಜಿಯನ್ನು, ನಂಬಯ್ಯನನ್ನು ಮಧುಗಿರಿಯಲ್ಲಿ ಸೆರೆಯಿಡುತ್ತಾನೆ. ಇದಿಷ್ಟು ಕಾದಂಬರಿಯ ಮುಖ್ಯ ಕಥಾಸಾರ.

ಇನ್ನು 'ಚಿಕವೀರ ರಾಜೇಂದ್ರ' ಕಾದಂಬರಿಯನ್ನು ಮಾಸ್ತಿ ಪ್ರಾಸ್ತಾವಿಕ, ಕಥಾಮುಖ, ಪೂರ್ವಕಥೆ, ಕಥಾಗರ್ಭ, ಕಥಾಪೂರಣ, ಕಥಾಶೇಷ, ಮತ್ತು ಸಮಾರೋಪ ಎಂಬ ಏಳು ಭಾಗಗಳಾಗಿ ವಿಂಗಡಿಸಿಕೊಂಡಿದ್ದಾರೆ. ಒಟ್ಟು ೧೮೨ ಅಧ್ಯಾಯಗಳಲ್ಲಿ ೫೩೩ ಪುಟಗಳವರೆಗೆ ಕಾದಂಬರಿ ಚಾಚಿಕೊಂಡಿರುವ ಈ ಕಾದಂಬರಿ, ಕೊಡಗಿನ ಕೊನೆಯ ದೊರೆಯಾದ ಚಿಕವೀರ ರಾಜನ ದುರಂತ ಬದುಕಿನ ಕಥೆಯಾಗಿದೆ. ಚಿಕವೀರರಾಜೇಂದ್ರ ಚಿಕ್ಕಂದಿನಿಂದಲೂ ಕೆಟ್ಟ ವಾತಾವರಣದಲ್ಲಿ ಬೆಳೆದನು. ಆತನು ಪಟ್ಟಕ್ಕೆ ಬಂದ ಮೇಲೆ ದುಶ್ಚಟಗಳಿಗೆ ಒಳಗಾಗುತ್ತಾನಲ್ಲದೆ ಕುಂಟ ಬಸವನನ್ನು ಮಂತ್ರಿ ಪದವಿಗೆ ಏರಿಸುತ್ತಾನೆ. ಇವನೂ ವೀರರಾಜನಂತೆಯೇ ಲಿಂಗರಾಜನ ಮಗನಾಗಿದ್ದು, ಅವಿವಾಹಿತಳಾದ ಪ್ರೇಯಸಿಯಲ್ಲಿ ಹುಟ್ಟಿದವನು. ಇವನ ತಾಯಿಯೇ ಮುಂದೆ ಭಗವತಿಯಾಗಿ ಕಾಣಿಸಿಕೊಳ್ಳುತ್ತಾಳೆ. ಭಗವತಿಯು ಬಹುಕಾಲ ಹೊರಗೆಲ್ಲಿಯೋ ಇದ್ದು ಅನಂತರ

ಮಡಿಕೇರಿಗೆ ಬಂದು ಗುಟ್ಟಾಗಿ ತನ್ನ ಮಗನಿಗೆ ರಾಜ್ಯವನ್ನು ದೊರಕಿಸಲು ಪ್ರಯತ್ನ ಮಾಡುವಳು. ಚಿಕವೀರರಾಜ ರಾಜ್ಯದ ಮಹಿಳೆಯರನ್ನು ತನ್ನ ಕಾಮಸುಖಕ್ಕಾಗಿ ಮಂತ್ರಿ ಬಸವನ ಮೂಲಕ ಬಳಸಿಕೊಳ್ಳುವ, ಕೊನೆಗೆ ಮಡಿಕೇರಿಯ ವರ್ತಕಪೇಟೆಯ ಮುಖ್ಯಸ್ಥನಾದ ಚಿಕ್ಕಣ್ಣ ಶೆಟ್ಟಿಯ ಸೊಸೆ ಮಗಳನ್ನು ಕಳುಹಿಸಿಕೊಡಬೇಕೆಂದು ಒತ್ತಾಯ ಮಾಡಿದ ಪ್ರಸಂಗಗಳು, ನೈತಿಕವಾಗಿ ಅವನನ್ನು ಕೆಳಮಟ್ಟಕ್ಕೆ ತಳ್ಳುತ್ತವೆ.

ಕೊಡಗಿನ ಮಂತ್ರಿಗಳಾದ ಲಕ್ಷೀನಾರಾಯಣಯ್ಯ, ಬೋಪಣ್ಣರೆಂಬ ನಿಸ್ವಾರ್ಥ ವ್ಯಕ್ತಿಗಳನ್ನು ಚಿಕವೀರ ರಾಜೇಂದ್ರ ಎದುರು ಹಾಕಿಕೊಳ್ಳುವನು. ಅವನ ಅವಧಿಯಲ್ಲಿ ರಾಜ್ಯ ಬೊಕ್ಕಸ ಬರಿದಾಗುತ್ತದೆ. ಇವನ ನಡತೆಯನ್ನು ವಿರೋಧಿಸುವವರೆಂದರೆ ಗೌರಮ್ಮಾಜಿ ಮತ್ತು ಮಗಳು ಪುಟ್ಟಮ್ಮಾಜಿ ಮಾತ್ರ. ಚಿಕವೀರರಾಜೇಂದ್ರನು ಅಧಿಕಾರದ ಆಸೆಗಾಗಿ ತಂಗಿ ದೇವಮ್ಮಾಜಿಯನ್ನು ಸೆರೆಯಲ್ಲಿ ಬಂಧಿಸುತ್ತಾನೆ. ಮುಂದೆ ಬಿಡುಗಡೆಯಾದ ಬಳಿಕ ಆಕೆ ಗಂಡ ಚೆನ್ನಬಸವನೊಂದಿಗೆ ಆಂಗ್ಲರ ರಕ್ಷಣೆಕೋರಿ ಮಂಗಳೂರಿನೆಡೆಗೆ ಅಲ್ಲಿಂದ ಬೆಂಗಳೂರಿನೆಡೆಗೆ ಪಯಣ ಬೆಳೆಸುವಳು. ಅವಳ ಈ ಪಯಣ ಮುಂದೆ ರಾಜ್ಯದಲ್ಲಿ ಹಲವು ಬದಲಾವಣೆಗೆ ಕಾರಣವಾಗುವುದು. ಚಿಕವೀರರಾಜ ಕೊನೆಗೆ ಹತಾಶೆಯಿಂದ ವಿಕೃತ ಮನಸ್ಸಿನವನಾಗಿ ಚೋಮ, ಮಗುವನ್ನು ಕೊಲ್ಲಿಸಿದ್ದು ರಾಜ್ಯದ ಪತನಕ್ಕೆ ಕಾರಣವಾಗುತ್ತದೆ. ಕೊಡಗಿಗೆ ಆಂಗ್ಲರ ಭೇಟಿ, ಕೊಡಗಿನ ಜನರೊಂದಿಗೆ ಕಾಡು ಮೃಗಗಳ ಅವರು ಮಾಡುವ ಬೇಟೆ, ಇದಕ್ಕಾಗಿ ಮಾಡುವ ತಿರುಗಾಟಗಳು ಕಾದಂಬರಿಯಲ್ಲಿ ಚಿತ್ರಿತವಾಗಿವೆ. ಕಾದಂಬರಿಯಲ್ಲಿ ಕಾಣಿಸಿಕೊಳ್ಳುವ ಇನ್ನೆರಡು ಪ್ರಮುಖ ಸಂಗತಿಯೆಂದರೆ, ಮೇಗ್‌ಲಿಂಗ ಪಾದ್ರಿಯ ಜೊತೆಯಲ್ಲಿ ದೀಕ್ಷಿತ ಮತ್ತು ಭಗವತಿ ನಡೆಸಿದ ಧರ್ಮ ಮತ್ತು ಸಂಸ್ಕೃತಿಯ ಕುರಿತ ಚರ್ಚೆ. ಇನ್ನೊಂದು ನೈತಿಕವಾಗಿ ಪತನಕ್ಕಿಡಾದ ಚಿಕವೀರರಾಜ ತನ್ನ ಮಂತ್ರಿ ಬಸವನನ್ನೇ ಗುಂಡಿಕ್ಕಿ ಕೊಂದು ಆಂಗ್ಲರಿಗೆ ಸೆರೆಯಾಗುತ್ತಾನೆ. ಹೀಗೆ ಕಾದಂಬರಿಯುದ್ದಕ್ಕೂ ಉತ್ತಯ್ಯ ತಕ್ಕ, ಅಪ್ಪಾಜಿ, ಉತ್ತಯ್ಯ, ಲೂಸಿ ಪಾರ್ಕರ್, ಪಾಣೇ ಸೂರ್ಯ ನಾರಾಯಣ, ಪೊನ್ನಪ್ಪ, ಚೆನ್ನವೀರಯ್ಯ ಮುಂತಾದ ಪಾತ್ರಗಳು ಬರುತ್ತವೆ. ಒಂದಲ್ಲಾ ಒಂದು ಬಗೆಯಲ್ಲಿ ಈ ಪಾತ್ರಗಳು ಬೇರೆಬೇರೆ ಬಗೆಯಲ್ಲಿ ಪಯಣವನ್ನು ಕೈಗೊಳ್ಳುತ್ತವೆ.

೫.೨. ಪಯಣ: ಗಂಡು-ಹೆಣ್ಣು

ಭಾರತೀಯ ಸಮಾಜದಲ್ಲಿ ಮಹಿಳೆಯರು ಮತ್ತು ಪುರುಷರು ಮಾಡುವ ಪಯಣವು ಬೇರೆಯದೇ ಆದ ವಿನ್ಯಾಸಗಳನ್ನು ಒಳಗೊಂಡಿರುತ್ತದೆ. ಇವರಿಬ್ಬರ ಪಯಣವು ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಕಾರಣಗಳಿಗಾಗಿ ಹಲವು ವ್ಯತ್ಯಾಸಗಳನ್ನು ಪಡೆಯುತ್ತದೆ. ಇದಕ್ಕೆ ಸ್ತ್ರೀ-ಪುರುಷರ ನಡುವಿನ ಲಿಂಗರಾಜಕಾರಣವು ಕಾರಣವಾಗಿದೆ. ಮಾಸ್ತಿಯವರ ಎರಡು ಚಾರಿತ್ರಿಕ ಕಾದಂಬರಿಗಳಾದ 'ಚೆನ್ನಬಸವ ನಾಯಕ', 'ಚಿಕವೀರ ರಾಜೇಂದ್ರ' ಕಾದಂಬರಿಗಳ

ಮೂಲಕ ಪುರುಷ ಮತ್ತು ಸ್ತ್ರೀ ಪಾತ್ರಗಳ ನಡುವಿನ ಪಯಣದ ವಿನ್ಯಾಸಗಳನ್ನು ಈಗ ವಿಶ್ಲೇಷಣೆಗೆ ಒಳಪಡಿಸಬಹುದು. ಇದೇ ಹೊತ್ತಿನಲ್ಲಿ ಮಾಸ್ತಿಯವರು ಗಂಡು-ಹೆಣ್ಣಿನ ಸಂಬಂಧಗಳನ್ನು ನಿರ್ವಹಿಸುವ ಬಗೆ ಕುರಿತು ಜಿ.ಎಚ್.ನಾಯಕರ ಅಭಿಪ್ರಾಯವನ್ನು ಗಮನಿಸಬಹುದು: "ಮಾಸ್ತಿಯವರಿಗೆ ಜೀವನ ಸಂದರ್ಭದ ಬಿಕ್ಕಟ್ಟುಗಳಿಂದ ಹುಟ್ಟಿಕೊಳ್ಳಬಹುದಾದ ಸಂಘರ್ಷದ ಆಂತರಿಕ ಅಥವಾ ಬಾಹ್ಯ ಒತ್ತಡಗಳ ಗುರುತ್ವ, ತೀವ್ರತೆಗಳು ಮುಖ್ಯವಾಗುವುದಿಲ್ಲ. ಅವುಗಳನ್ನು ನಿವಾರಿಸಿಕೊಳ್ಳುವ ದಾರಿಯನ್ನು ಹುಡುಕಿಕೊಳ್ಳುವುದು ಮುಖ್ಯವಾಗುತ್ತದೆ."[೨]

'ಚೆನ್ನಬಸವ ನಾಯಕ' ಕೃತಿಯಲ್ಲಿ ಚೆನ್ನಬಸವ ನಾಯಕನ ಕ್ಷೇಮಕ್ಕಾಗಿ ಹೆಂಡತಿ ಶಾಂತವ್ವೆ ಪಯಣ ಬೆಳೆಸುತ್ತಾಳೆ. ಆ ಸಂದರ್ಭದಲ್ಲಿ ಆಕೆ ಗಂಡನಿಗೂ ಕರೆದಾಗ ಆತ "ಗಂಡಸರಿಗೆ ಯಾತರದು ಯಾತ್ರೆ? ಹೋಗೋಣ ಬರೋಣ ಅಂತ ನನಗೆ ಅನಿಸುತ್ತಯಿಲ್ಲ. ಹೆಣ್ಣು ಮಕ್ಕಳು ಹೋಗಿ ಬನ್ನಿರಿ" ಎಂದು ಹೇಳುತ್ತಾನೆ(ಪು.೯). ದೈವಬಲಕ್ಕಾಗಿ ಬೇಡುವುದು, ಪಯಣ ಮಾಡುವುದು ಸ್ತ್ರೀಯರ ಕೆಲಸವೇ ಹೊರತು ಪುರುಷರದಲ್ಲ ಎನ್ನುವ ಧೋರಣೆ ಅವನ ಮಾತಲ್ಲಿ ವ್ಯಕ್ತವಾಗಿದೆ. ಪುರುಷ ರಾಜ್ಯದ ರಕ್ಷಣೆಯ ಹೆಸರಲ್ಲಿ ಹೆಂಡತಿಯೊಂದಿಗೆ ಧಾರ್ಮಿಕ ಸ್ಥಳಗಳಿಗೆ ಹೋಗುವುದರ ನಿರಾಕರಣೆಯ ಹಿನ್ನೆಲೆಯಲ್ಲಿ ಘನತೆಯ ಪ್ರಶ್ನೆ ಇರಬಹುದು. ಕೆಲವೊಮ್ಮೆ ಪುರುಷರ ಅಧಿಕಾರ ಮತ್ತು ಅಹಂ ನೆಲೆಯಲ್ಲಿ ಮಹಿಳೆ-ಪುರುಷ ಮಾಡುವ ಪಯಣಕ್ಕೆ ಸಮಾಜದಲ್ಲಿ ಅಂತರಗಳು ಏರ್ಪಡುತ್ತವೆ. ಮಹಿಳೆಯರು ಪ್ರಯಾಣ ಮಾಡುವುದು ಹೊಸತಲ್ಲ. ಅನೇಕ ರಾಜಮನೆತನದ ಸ್ತ್ರೀಯರು ಗಂಡನ, ರಾಜ್ಯದ ಹಿತಕ್ಕಾಗಿ ಹರಕೆಹೊತ್ತು ದೇವಸ್ಥಾನಗಳಿಗೆ ಧಾರ್ಮಿಕ ಯಾತ್ರೆ ಮಾಡಿರುವುದುಂಟು. ಆದರೆ ಅವರ ಪಯಣವು ಪುರುಷರ ಹಾಗೆ ರಾಜಕೀಯ ಕಾರಣದ್ದಲ್ಲ. ವೈಯಕ್ತಿಕ ಮತ್ತು ಕುಟುಂಬದ ನೆಲೆಯದ್ದು. ಇಂತಹ ಸೀಮಿತ ನೆಲೆಯ ಧಾರ್ಮಿಕ ಕಾರಣಗಳಿಗಾಗಿ ಸಮಾಜವು ಮಹಿಳೆಯರ ಪ್ರವಾಸವನ್ನು ಮನ್ನಿಸುತ್ತದೆ. ಅಲ್ಲಿ ಪುರುಷರಿಗೆ ವಿನಾಯಿತಿ ಕೊಡುತ್ತದೆ. ಸಮಾಜದ ಈ ನಿಲುವು ಚೆನ್ನಬಸವನ ಮಾತಿನಲ್ಲಿ ಪ್ರತಿಬಿಂಬಿತವಾಗುತ್ತದೆ.

'ಚೆನ್ನಬಸವ ನಾಯಕ' ಕಾದಂಬರಿಯಲ್ಲಿ ಬರುವ ವಸ್ತಾರೆಯ ಹೆಗ್ಗಡಿತಿಯ ಜೀತದಾಳುಗಳಾದ ಮಲ್ಲಿಗೆ ಮತ್ತು ಸಗುನ ಪಾತ್ರಗಳು ಮುಖ್ಯವಾಗಿವೆ. ಇವು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಗುತ್ತಿ-ತಿಮ್ಮಿ ಮತ್ತು ಐತ-ಪೀಂಚಲು ಜೋಡಿಗಳನ್ನು ನೆನಪಿಸುತ್ತದೆ. ದುಡಿಯುವ ವರ್ಗಕ್ಕೆ ಸೇರಿದ ಈ ಪಾತ್ರಗಳು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಇಲ್ಲವೇ ತಮ್ಮ ಒಡೆಯರಿಗೆ ಒಳಿತೆಸಗಲು ಪಯಣ ಕೈಗೊಳ್ಳುತ್ತಾರೆ. ಇಲ್ಲಿ ಸಗುನನನ್ನು ಮದುವೆಯಾಗುವ ಸಲುವಾಗಿ ಮಲ್ಲಿಗೆ ಅವನೊಂದಿಗೆ ಕಸವೆಯ ಬೂದಿಬಸವ ಸ್ವಾಮಿಯನ್ನು ಭೇಟಿಯಾಗುವುದಕ್ಕಾಗಿ ಪಯಣ ಮಾಡುವ ಸಂದರ್ಭವಿದೆ. ಬೂದಿಬಸವ ಸ್ವಾಮಿಯು ಮಲ್ಲಿಗೆ ಪರಿಚಯವನ್ನು ಕೇಳಿದಾಗ, ಆಕೆ "ನಾವು ವಸ್ತಾರೆಯ ಜೀತ, ನಾನು ಮಲ್ಲಿಗೆ, ಇವನು ಸಗುನ. ನಾವು ಮದುವೆಯಾಗಬೇಕೂಂದ್ರೆ ಹೆಗ್ಗಡಿತಿ ಬ್ಯಾಡಾಂತಾರೆ. ನನ್ನ ಜವರನ್ನ ಮದುವೆಯಾಗೂಂತಾರೆ. ನಾನು ಜವರನ್ನ ಒಲ್ಲೆ. ಸ್ವಾಮಿ ನನ್ನ ಸಗುನಗೆ

ಮದುವೆ ಮಾಡೂಂತ ಹೆಗ್ಗಡಿತಿಗೆ ಬೆಸಸಬೇಕು" ಎಂದು ಹೇಳುತ್ತಾಳೆ(ಪು.೨೭). ಇಲ್ಲಿ ಮಲ್ಲಿಗೆ ಜೀತದಾಳಾಗಿದ್ದು ಇಷ್ಟ ಪಟ್ಟ ಸಗುನನ್ನು ಮದುವೆಯಾಗಬೇಕೆಂದು ಧೈರ್ಯವಾಗಿ ಅವನೊಂದಿಗೆ ಪಯಣ ಮಾಡಿದ್ದಾಳೆ. ಕುವೆಂಪು ಕಾದಂಬರಿಗಳಲ್ಲಿ ಪುರುಷ ಪಾತ್ರಗಳೇ ಮಹಿಳೆಯರನ್ನು ಕರೆದುಕೊಂಡು ಪಯಣ ಹೋಗುವ, ಒಂದಾಗುವ ಚಲನೆಯ ನೆಲೆಗಳಿವೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬಚ್ಚನನ್ನು ನಿರಾಕರಿಸಿ ಗುತ್ತಿಯೊಂದಿಗೆ ತಿಮ್ಮಿ ಮಾಡುವ ಪಯಣ ಇಂತಹುದು. ಆದರೆ ಮಾಸ್ತಿಯವರ 'ಚೆನ್ನಬಸವ ನಾಯಕ' ಕಾದಂಬರಿಯಲ್ಲಿ ಬರುವ ವಸ್ತಾರೆಯ ಹೆಗ್ಗಡಿತಿಯ ಜೀತದಾಳುಗಳಾದ ಮಲ್ಲಿಗೆಯು ಗಂಡಿನಂತೆ ಸಗುನನಿಗಾಗಿ ಪಯಣ ಮಾಡುತ್ತಾಳೆ. ಸಾಮಾನ್ಯ ಮಹಿಳೆಗೂ ತಾನು ಇಷ್ಟಪಟ್ಟ ಗಂಡನ್ನು ಪಡೆಯುವ ಸ್ವಾತಂತ್ರ್ಯ ಚಲಾಯಿಸುವ ಸನ್ನಿವೇಶವನ್ನು ಕಾದಂಬರಿಯು ತನ್ನ ಚೌಕಟ್ಟಿನೊಳಗೆ ನಿರ್ಮಿಸಿದೆ. 'ಕಾನೂರು ಹೆಗ್ಗಡಿತಿ'ಯಲ್ಲಿ ತನ್ನ ಪ್ರಿಯತಮೆಗಾಗಿ ಹೀಗೆ ರಿಸ್ಕಿನ ಪಯಣ ಮಾಡದೇ ಹೋಗುವುದರಿಂದ, ಆತ ಸೀತೆಯನ್ನು ಪಡೆದುಕೊಳ್ಳಲು ಆಗುವುದಿಲ್ಲ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಗುತ್ತಿ–ತಿಮ್ಮಿ, ಮುಕುಂದಯ್ಯ–ಚಿನ್ನಮ್ಮ ಪಯಣ ಮಾಡುವ ಮೂಲಕ ಒಂದಾಗುವಂತೆ, ಇಲ್ಲಿ ಮಲ್ಲಿಗೆ–ಸಗುನರು ಪಯಣ ಮಾಡುವ ಮೂಲಕ ಒಂದಾಗುತ್ತಾರೆ. ಪಯಣವಿಲ್ಲದೆ ಪ್ರೇಮಿಗಳು ಒಂದಾಗಲು ಸಾಧ್ಯವಿಲ್ಲ ಎಂಬುದು ಇಲ್ಲಿ ಧ್ವನಿತವಾಗುತ್ತದೆ. ಕೆಲವೊಮ್ಮೆ ಪ್ರೇಮಿಗಳು ಮಾಡುವ ಪಯಣವು ಅವರ ಪ್ರೇಮವನ್ನು ವಿಘಟಿಸುವ ಕೆಲಸವನ್ನು ಮಾಡಬಹುದು. ಬೋಳುವಾರು ಮುಹಮ್ಮದ್ ಕುಂಞಿಯವರ 'ಮುತ್ತುಚೇರ' ಕತೆಯಲ್ಲಿ ದುಬೈನಿಂದ ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಅರಬ್ಬರು ಇಲ್ಲಿನ ಮುಸ್ಲಿಂ ಮಹಿಳೆಯರನ್ನು ಮದುವೆಯಾಗುವ, ನಂತರ ತಲಾಖ್ ಹೇಳಿ ತಮ್ಮ ದೇಶಕ್ಕೆ ಹಿಂತಿರುಗುವ ಚಿತ್ರಣವಿದೆ. ಇಲ್ಲಿ ಪಯಣಗಳು ಮಹಿಳೆಯರ ಬದುಕಿನಲ್ಲಿ ದುರಂತವನ್ನು ಸೃಷ್ಟಿಸುತ್ತವೆ.

ಮಹಿಳೆಯೇ ಮಹಿಳೆಯ ಚಲನೆಯನ್ನು ನಿಯಂತ್ರಿಸುವ ಮತ್ತು ವಿರೋಧಿಸುವ ಸನ್ನಿವೇಶ 'ಚೆನ್ನಬಸವ ನಾಯಕ' ಕೃತಿಯಲ್ಲಿ ಬರುತ್ತದೆ. ಚೆನ್ನಬಸವನ ಹೆಂಡತಿ ಶಾಂತವ್ವೆ ಯಾತ್ರೆಯನ್ನು ಮುಗಿಸಿಕೊಂಡು ಬಂದು ದೇವರ ಪ್ರಸಾದ ಕಳುಹಿಸಿದಾಗಿನ ಸಂದರ್ಭದಲ್ಲಿ ವೀರಮ್ಮಾಜಿ ಹೇಳುವ ಮಾತುಗಳಿವು. "ಮನೆಗೆ ಹೆಜ್ಜೆ ಇಟ್ಟವಳು ಮಾವನ್ನ ಮಣ್ಣು ಮಾಡಿದಳು, ನನಗೆ ಮಣ್ಣು ಮುಕ್ಕಿಸಿದಳು. ಈಗ ಅಪ್ಪ ಯಾತ್ರೆ ಮಾಡಿಸಿದ ಅನ್ನೋ ಅಹಂಕಾರದಲ್ಲಿ ನನಗೆ ನಿನ್ನ ಪಾಲಿಗೆ ಇನ್ನಿರೋದು ಇಷ್ಟು ಮಣ್ಣು ಅಂತ ಇದನ್ನು ಕಳುಹಿಸಿದ್ದಾಳೆ. ಇವಳು ಮನೆಗೆ ಬಂದಾಗಲೇ ನನ್ನ ಅದೃಷ್ಟ ಮಣ್ಣು ಪಾಲಾಯಿತು. ಇವಳು ಇದನ್ನ ನನಗೆ ಹೇಳೋದೇನು?"(ಪು.೩೨). ಶಾಂತವ್ವೆ ಅರಮನೆಗೆ ಬಂದ ನಂತರ ತನ್ನ ಗಂಡನ ಸಾವಿಗೆ ಕಾರಣರಾದಳು. ಅವಳ ಚಲನೆಯು ಕುಟುಂಬದ ಮೇಲೆ ಕೆಟ್ಟ ಪರಿಣಾಮವನ್ನು ಉಂಟುಮಾಡಿದೆ ಎಂಬುದು ವೀರಮ್ಮಾಜಿಯ ಅಭಿಪ್ರಾಯವಾಗಿದೆ. ಸೊಸೆಯ ಈಗ ತಾನೇ ಮುಗಿಸಿ ಬಂದಿರುವ ಯಾತ್ರೆಯೂ ಇದೇ ರೀತಿ ಕೆಟ್ಟಪರಿಣಾಮ

ಬೀರಬಹುದು ಎಂಬುದು ಅವಳ ಆಲೋಚನೆ. ಈ ಸನ್ನಿವೇಶದಲ್ಲಿ ಮಹಿಳೆಯ ತಿರುಗಾಟಗಳನ್ನು ಅನುಮಾನದಿಂದ ನೋಡುವ, ಮತ್ತು ತಿರಸ್ಕರಿಸುವ ಮನೋಭಾವ ಮಹಿಳೆಯರಲ್ಲೂ ಬೇರೆ ಬಗೆಯಲ್ಲಿ ನಿರತವಾಗಿದೆ ಎಂದು ಕೃತಿ ಸೂಚಿಸುತ್ತದೆ. ಸಾಂಪ್ರದಾಯಿಕ ಸಮಾಜದಲ್ಲಿ ಇಂದಿಗೂ ಮದುವೆಯಾಗಿ ಗಂಡನ ಮನೆಗೆ ಹೋಗುವ ಹೆಣ್ಣುಮಕ್ಕಳ ವಿಷಯದಲ್ಲಿ ಈ ಬಗೆಯ ನಂಬಿಕೆಗಳಿವೆ. ಈ ನಂಬಿಕೆಗಳು ಅನೇಕ ಕುಟುಂಬಗಳಲ್ಲಿ ಹಿಂಸೆ ಮಾಡುವುದಕ್ಕೆ ಕಾರಣವಾಗಿವೆ. ಇವುಗಳ ಹಿಂದೆ ಕೂಡ ಮಹಿಳೆಯ ಚಲನೆಗಳನ್ನು ಕೆಟ್ಟದಾಗಿ ಮತ್ತು ಒಳ್ಳೆಯದಾಗಿ ವ್ಯಾಖ್ಯಾನಿಸುವ ಮನೋಧರ್ಮ ಕೆಲಸ ಮಾಡಿದೆ.

ರಾಜಪ್ರಭುತ್ವದ ವ್ಯವಸ್ಥೆಯಲ್ಲಿ ಜನರ ಯೋಗಕ್ಷೇಮ ಹಾಗೂ ಹಗೆಗಳ ಫಿತೂರಿಗಳನ್ನು ತಿಳಿಯಲು ಅರಸರು ಗೂಢಾಚಾರಿಗಳನ್ನು ತಿರುಗಾಡಲು ಬಿಡುತ್ತಿದ್ದರು. ಬೇರೆ ಬೇರೆ ರಾಜರುಗಳೊಂದಿಗೆ ಮೈತ್ರಿ ಬೆಳೆಸಲು ಸಹ ಈ ಗೂಢಾಚಾರಿಗಳನ್ನು ಬಳಸಿಕೊಳ್ಳುತ್ತಿದ್ದರು. ಇದನ್ನು ರಾಜಕೀಯ ಕಾರಣಗಳಿಗಾಗಿ ಮಾಡುವ ಚಲನೆ ಅಥವಾ ಪಯಣ ಎಂದು ಕರೆಯಬಹುದು. ಇಂತಹ ರಾಜಕೀಯ ಪಯಣದ ಒಂದು ಘಟನೆ 'ಚೆನ್ನಬಸವ ನಾಯಕ'ಕೃತಿಯಲ್ಲೂ ಕಂಡುಬರುತ್ತದೆ. ಹೈದರಾಲಿಯ ವಿರುದ್ಧ ಸಹಾಯಕ್ಕಾಗಿ ಮೈಸೂರು ಅರಸರು ಬಿದನೂರು ಪ್ರಾಂತ್ಯದ ಮೈತ್ರಿಗಾಗಿ ವೀರಣ್ಣ, ಸೂರಪ್ಪನನ್ನು ಕಳುಹಿಸುತ್ತಾರೆ. ಇವರೀರ್ವರ ಪಯಣದ ಮಾಹಿತಿಯನ್ನು ಸೂರಪ್ಪ ಅರಸರಿಗೆ ತಿಳಿಸುವ ಸನ್ನಿವೇಶ ಹೀಗಿದೆ: "ವೀರಣ್ಣ, ಸೂರಪ್ಪ ಹತ್ತು ದಿನಗಳಲ್ಲಿ ಶ್ರೀರಂಗಪಟ್ಟಣಕ್ಕೆ ಬಂದು ಸೇರಿದರು. ಪಟ್ಟಣವನ್ನು ಸೇರಿದ ವೇಳೆ ಅವರು ಜೊತೆಯಾಗಿ ಒಳಕ್ಕೆ ಹೋಗಲಿಲ್ಲ. ಹಿರೋಡೆಯಿಂದ ವೀರಣ್ಣ ಒಂದು ಬೆಳಗು ಮುಂದಾಗಿ ಹೊರಟನು; ಮಧ್ಯಾಹ್ನಕ್ಕೆ ಮೊದಲು ಪಟ್ಟಣವನ್ನು ಮುಟ್ಟಿದನು"(ಪು.೧೨೪) ರಾಜರಿಗೆ ಮಾಹಿತಿ ತಿಳಿಸುವ ಮೊದಲು ಹೋಗುವ ಸಮಯವನ್ನು ನಿರ್ಧರಿಸಿಕೊಂಡು ರಾಜನ ಆಸ್ಥಾನಕ್ಕೆ ಹೋಗುವರು. ಈ ರೀತಿಯ ಚಲನೆಯೂ ವ್ಯಕ್ತಿಯ ಮತ್ತು ಆಸ್ಥಾನದ ಗೌಪ್ಯತೆಯನ್ನು ಕಾಪಾಡುತ್ತದೆ. ರಾಜಕೀಯ ಉದ್ದೇಶದಲ್ಲಿ ಮಾಡಲಾಗುವ ಪಯಣಗಳ ಹಿಂದೆ ಇಂತಹ ಕೆಲವು ನಿರ್ಬಂಧಗಳು ಜೋಡಣೆ ಆಗಿರುತ್ತವೆ. ಈ ರೀತಿಯ ಗೂಢಚರ್ಯೆಯ ತಿರುಗಾಟ ವ್ಯವಸ್ಥೆ ಎಲ್ಲಾ ದೇಶಗಳಲ್ಲೂ ಇದೆ. ಆಧುನಿಕ ಪ್ರಜಾಪ್ರಭುತ್ವಗಳಲ್ಲಿಯೂ ಗೂಢಚರ್ಯೆಯ ತಿರುಗಾಟಗಳು ನಡೆಯುತ್ತಿರುತ್ತವೆ. ಈ ಗುಪ್ತ ಪಯಣಗಳು ಹೆಚ್ಚಿನ ಜನರ ಅರಿವಿಗೆ ಬರದೆ ಹೋಗುತ್ತವೆ. ಮಾಸ್ತಿಯವರ ಕಾದಂಬರಿಗಳು ರಾಜಕೀಯ ಕಾದಂಬರಿಗಳಾಗಿರುವುದರಿಂದ, ಈ ಬಗೆಯ ಗುಪ್ತಚರ್ಯೆಯ ಪಯಣದ ವಿನ್ಯಾಸವು ಅಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

'ಚೆನ್ನಬಸವ ನಾಯಕ' ಕಾದಂಬರಿಯಲ್ಲಿ ಶ್ರೀನಿವಾಸನ ರಕ್ಷಣೆಗಾಗಿ ಅವನ ತಾಯಿ ಹೈದರನ ಕಡೆಗೆ ಪಯಣ ಬೆಳೆಸಿದರೆ, ಹೈದರ್ ಶ್ರೀನಿವಾಸನ ತಾಯಿಗೆ ಕೊಟ್ಟ ಮಾತಿಗಾಗಿ ಪಯಣ ಮಾಡಿ ರಕ್ಷಿಸುವ ಎರಡು ಚಲನೆಗಳಿವೆ. ಈ ಪಯಣದ ವಿವರಗಳನ್ನು ಕಾದಂಬರಿ ಬೇರೆಬೇರೆಯಾಗಿ ನೀಡುತ್ತದೆ. ಎರಡೂ ರಾಜಕೀಯ ಪಯಣಗಳೇ ಆದರೂ ಪಯಣ ಮಾಡುವವರು ಹಾಗೂ

ಅವರ ಉದ್ದೇಶಗಳು ಭಿನ್ನವಾಗಿರುವುದರಿಂದ, ಪಯಣದ ಸ್ವರೂಪ ಬದಲಾಗುತ್ತದೆ. ನಂಜರಾಜನ ಸರ್ವಾಧಿಕಾರಿಯಾಗಿದ್ದ ವೆಂಕಟರಾವ್‌ನ ಹೆಂಡತಿ ಮತ್ತು ಹೈದರ್‌ನ ನಡುವೆ ನಡೆಯುವ ಸಂಭಾಷಣೆಯೊಂದು ಹೀಗಿದೆ: "ತಾಯಿ ಕೊಟ್ಟೆ ಎಂದು ಹೇಳಲಾರೆ, ನೀವು ಹಾಕಿದ ಅನ್ನದಾಣೆ ನನ್ನ ಕೈಯಲ್ಲಾದದ್ದನ್ನು ಮಾಡುತ್ತೇನೆ. ಸಾಧ್ಯವಾದರೆ ನಿಮ್ಮ ಮಗನನ್ನು ಕರೆತರುತ್ತೇನೆ. ಮನೆಗೆ ದಯಮಾಡಿ"(ಪು.೧೫೭). ಶ್ರೀನಿವಾಸನ ತಂದೆಯ ಸ್ವಾಭಿಮಾನ, ತಾಯಿಗೆ ಮಗನ ಮೇಲಿನ ಮಮತೆ, ಹೈದರ್‌ನ ನಿಷ್ಠೆ ಇವು ಇಲ್ಲಿನ ಪಯಣಗಳ ಹಿಂದೆ ಕೆಲಸ ಮಾಡಿರುವ ಭಾವಗಳಾಗಿವೆ. ಒಂದು ಚಲನೆ ಸ್ವಾಭಿಮಾನದ ನೆಲೆಯಲ್ಲಿದ್ದರೆ, ಮತ್ತೊಂದು ಮಗನ ಮೇಲಿನ ಪ್ರೀತಿಗಾಗಿದೆ. ಕೊನೆಯದು ಅನ್ನದ ಮೇಲಿನ ಋಣಕ್ಕಾಗಿ ನಡೆಯುತ್ತದೆ. ಈ ಮೇಲೆ ಗಮನಿಸಿದಂತೆ ಶಾಂತವ್ವೆ ಪತಿಯ ಕ್ಷೇಮಕ್ಕಾಗಿ ಪಯಣ ಮಾಡಿದರೆ, ಇಲ್ಲಿ ಮಗನ ರಕ್ಷಣೆಗಾಗಿ ತಾಯಿ ಪಯಣ ಮಾಡುವುದನ್ನು ಗಮನಿಸಬಹುದು. ಎರಡೂ ಕಡೆ ಮಹಿಳೆಯರು ತಮ್ಮ ಕುಟುಂಬವನ್ನು ಉಳಿಸಿಕೊಳ್ಳಲು ಪಯಣ ಮಾಡುತ್ತಾರೆ. ಪುರುಷ ಪಾತ್ರಗಳು ರಾಜ್ಯದ ರಕ್ಷಣೆಗಾಗಿ ಪಯಣ ಮಾಡಿದರೆ, ಮಹಿಳಾ ಪಾತ್ರಗಳು ಪತನದಿಂದ ಕುಟುಂಬ ರಕ್ಷಣೆ ಮಾಡಲು ಪಯಣ ಮಾಡುತ್ತಾರೆ. ಮಾಸ್ತಿಯವರ ಕಾದಂಬರಿಗಳಲ್ಲಿ ಮಹಿಳೆಯರ ಪಯಣಗಳು ಹೆಚ್ಚಿವೆ. ಆದರೆ ಕುವೆಂಪು, ರಾವಬಹದ್ದೂರರ ಅವರ ಕಾದಂಬರಿಗಳಲ್ಲಿ ಪುರುಷ ಪಾತ್ರಗಳೇ ಬಹುಮಟ್ಟಿಗೆ ಪಯಣ ಮಾಡುವ ವಿವರಗಳಿವೆ. ಮಾಸ್ತಿಯವರ ಕಾದಂಬರಿಗಳಲ್ಲಿ ಮಹಿಳಾ ಪಾತ್ರಗಳು ಸಾಂಪ್ರದಾಯಿಕ ನೆಲೆಯಲ್ಲಿ ಚಿತ್ರಣಗೊಂಡಿದ್ದು, ಹೆಂಡತಿಯಾಗಿ, ತಾಯಿಯಾಗಿ, ಮಗಳಾಗಿ, ಸೊಸೆಯಾಗಿ, ರಾಣಿಯಾಗಿ ಹಲವು ನೆಲೆಗಳಲ್ಲಿ ಚಲನೆ ಮಾಡುತ್ತಾರೆ. ಅವರ ಚಲನೆಗಳ ಹಿಂದೆ ಸಮಾಜದ ಬೇರೆಬೇರೆ ಅಧಿಕಾರ ಕೇಂದ್ರಗಳ ನಿಯಂತ್ರಣವಿದೆ. ಇದಕ್ಕೆ ಭಿನ್ನವಾಗಿ ಶಾಂತಿನಾಥ ದೇಸಾಯಿಯವರ ಕಾದಂಬರಿಗಳಲ್ಲಿ ಮಹಿಳೆಯರು ಹೆಚ್ಚು ಮುಕ್ತವಾಗಿ ಪಯಣ ಮಾಡುತ್ತಾರೆ. ಅಲ್ಲಿ ಅವರು ತಮ್ಮ ಮೇಲೆ ಚಲನೆಗೆ ಇರುವ ನಿಯಂತ್ರಣಗಳನ್ನು ಮೀರಿ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಯತ್ನಿಸುತ್ತಾರೆ.

ಪಯಣದ ಅನೇಕ ಆಯಾಮಗಳನ್ನು ಮಾಸ್ತಿ ಕಾದಂಬರಿಗಳು ಕಾಣಿಸುತ್ತವೆ. ಅವುಗಳಲ್ಲಿ ಮನೆಯಿಂದ ಹೊರಗೆ ಬಂದು ಮಾಡುವ ಪಯಣಗಳಲ್ಲಿ ಹೊಸ ಸಂಬಂಧಗಳು ಏರ್ಪಡುವ ಆಯಾಮವೂ ಒಂದು. 'ಚೆನ್ನಬಸವ ನಾಯಕ' ಕಾದಂಬರಿಯಲ್ಲಿ ಒಂದು ಕಡೆ ಕಾದಂಬರಿ ಹೀಗೆ ವ್ಯಾಖ್ಯಾನಿಸುತ್ತದೆ. "ಹೊಸ ಸನ್ನಿವೇಶ ಈ ಸಂತೋಷದಲ್ಲಿ ಚೆನ್ನಬಸವ, ಶಾಂತವ್ವೆ ತಮ್ಮ ದಾಂಪತ್ಯ ಜೀವನದಲ್ಲಿ ಹೊಸ ಒಂದು ಘಟ್ಟವನ್ನು ಮುಟ್ಟಿದಂತೆ ಆದರು. ಇದುವರೆಗೆ ಅವರು ನಿಜವಾಗಿ ಜೊತೆಗಿದ್ದದ್ದೂ ಬಹುಕೊಂಚ. ಈ ಪಯಣದಲ್ಲಿ ಅವರ ಜೀವಗಳು ಹತ್ತಿರ ಹತ್ತಿರ ಬಂದವು, ಈ ಅರಮನೆಯಲ್ಲಿ ಇಳಿದ ಮೇಲೆ ಎರಡೂ ಒಂದುಗೂಡಿ ನಿಂತವು"(ಪು.೧೬೫). ಪಯಣವು ಕೇವಲ ದೈಹಿಕ ಚಲನೆಯಷ್ಟೇ ಅಲ್ಲ, ಅದು ದೇಹದ ಚಲನಶೀಲತೆಯನ್ನು ಮಾನಸಿಕ, ಬೌದ್ಧಿಕ, ಭಾವನಾತ್ಮಕ ಚಲನಶೀಲತೆಯಾಗಿ ಮಾರ್ಪಡಿಸುತ್ತದೆ. ಕಾದಂಬರಿಯಲ್ಲಿ ಚೆನ್ನಬಸವ

ಹಾಗೂ ಶಾಂತವ್ವೆ ಅವರು ಮನೆಯಲ್ಲಿ ದೈಹಿಕವಾಗಿ ಜತೆಗಿದ್ದರೂ ಭಾವನಾತ್ಮಕವಾಗಿ ದೂರ ಇದ್ದವರು. ಆದರೆ ಗಂಡ-ಹೆಂಡತಿಯರಿಬ್ಬರೂ ಮೈಸೂರಿಗೆ ಮಾಡುವ ಪಯಣವು ಅವರಿಬ್ಬರನ್ನೂ ಭಾವನಾತ್ಮಕವಾಗಿ ಒಂದುಗೂಡಿಸುತ್ತದೆ. ಪಯಣದಲ್ಲಿ ಸಿಗುವ ಮನಸ್ಸಿನ ನಿರಾಳತೆ, ಏಕಾಂತಗಳು ಗಂಡ-ಹೆಂಡತಿಯರ ನಡುವೆ ಸಲುಗೆ ಬೆಳೆಸಲು ಕಾರಣವಾಗುತ್ತವೆ. ಯಾವುದೇ ವ್ಯಕ್ತಿ ಇನ್ನೊಬ್ಬರನ್ನು ಅರಿಯಲು ಮತ್ತು ಅವರ ಜತೆ ಬೆರೆಯಲು ಒಂದು ಮಾಧ್ಯಮವಾಗಿ ಕೊಂಡಿಯಾಗಿ ಪಯಣ ಕೆಲಸ ಮಾಡುವುದನ್ನು ಕಾದಂಬರಿಗಳು ಕಾಣಿಸುತ್ತವೆ. ಪಯಣ ಮತ್ತು ಓಡಾಟಗಳು ಮೈಸೂರು ಮತ್ತು ಬಿದನೂರಿನ ಮಧ್ಯೆಯಿದ್ದ ವೈಮನಸ್ಸು ಹೋಗಲಾಡಿಸಿ, ಅವರ ಸೌಹಾರ್ದತೆಗೆ ಕಾರಣ ವಾಗುತ್ತವೆ. ಸುದೀರ್ಘ ಪಯಣದಿಂದ ರಾಜ-ರಾಣಿಯ ನಡುವೆ ಸಾಮರಸ್ಯ ಸೃಷ್ಟಿಯಾಗುವಂತೆಯೇ, ರಾಜ್ಯ-ರಾಜ್ಯದ ನಡುವೆ ಸಹ ಹೊಸ ಸ್ನೇಹಕ್ಕೆ ಕಾರಣವಾಗುತ್ತದೆ.

ಯಾವಾಗಲೂ ಅಧಿಕಾರ ವಿಸ್ತರಣೆ ಮತ್ತು ಜೀವರಕ್ಷಣೆಗಾಗಿ ರಾಜಕೀಯ ಕಥನಗಳಲ್ಲಿ ಈ ಬಗೆಯ ತಿರುಗಾಟಗಳು ಹೆಚ್ಚಾಗಿರುತ್ತವೆ. 'ಚೆನ್ನಬಸನ ನಾಯಕ' ಕೃತಿಯಲ್ಲಿ ಬಿದನೂರಿನಿಂದ ರಕ್ಷಣೆಗಾಗಿ ವೀರಮ್ಮಾಜಿ ಮತ್ತು ಶಾಂತವ್ವೆ ಕಾವಲೆದುರ್ಗಕ್ಕೆ ಪಯಣ ಮಾಡುವ ಸನ್ನಿವೇಶವಿದೆ. ನವಾಬನ ದಾಳಿ ತಿಳಿದು ಅತ್ತೆ, ಸೊಸೆಯನ್ನು ಅಲ್ಲೇ ಬಿಟ್ಟು ಬೇರೆಡೆಗೆ ಪಯಣ ಮಾಡುತ್ತಾರೆ. ಆಗ ಸೊಸೆಯು ಅತ್ತೆಯನ್ನು ಕುರಿತು "ಇವರಿಲ್ಲಿರುತ್ತಾರೆ ಅಂತ ನಾವು ಬಂದರೆ ನಮ್ಮನ್ನ ವೈರಿಗೆ ಬಲಿಕೊಟ್ಟು ಇವರು ಹೊರಟು ಬಿಟ್ಟರೆ?" ಎಂದು ಹೇಳುತ್ತಾಳೆ(ಪು.೩೦೨). ಇಲ್ಲಿ ಪಯಣ ನಿಷ್ಫಲವಾದ ಬಗ್ಗೆ ನಿರಾಶೆಯಿದೆ. ಇಲ್ಲಿ ಪಯಣಗಳು ಒಬ್ಬರನ್ನು ಒಬ್ಬರು ಬಲಿಕೊಡುವ ಮತ್ತು ಅದರಿಂದ ರಕ್ಷಣೆ ಪಡೆಯುವ ಆಯಾಮಗಳಿಂದ ಕೂಡಿವೆ. ಇಲ್ಲಿ ಅತ್ತೆಯಾದವಳು ಗರ್ಭಿಣಿಯಾದ ಸೊಸೆಯನ್ನು ಕಾಪಾಡುವ ಬದಲು ತಾನೇ ರಹಸ್ಯವಾಗಿ ಬೇರೆಡೆ ಪಯಣಿಸುತ್ತಾಳೆ. ಪಯಣವು ವಿಶ್ವಾಸ ಪಡೆಯುವ ಕ್ರಿಯಾಗಿರುವಂತೆ ವಿಶ್ವಾಸದ್ರೋಹದ ಕ್ರಿಯೆಯಾಗಿಯೂ ಇಲ್ಲಿ ಕಾಣಿಸಿಕೊಳ್ಳುತ್ತದೆ.

ಮಾಸ್ತಿಯವರ 'ಚಿಕವೀರ ರಾಜೇಂದ್ರ'ದಲ್ಲಿ ಕಾಣಿಸಿಕೊಳ್ಳುವ ಸ್ತ್ರೀಪಾತ್ರವಾಗಿರುವ ಭಗವತಿ ಮಹಾಚಾರಣಿಗಳು. ಅವಳ ಬದುಕಿಡಿ ತಿರುಗಾಟಗಳಿಂದ ತುಂಬಿಹೋಗಿದೆ. ಅವರ ತಿರುಗಾಟಗಳಿಗೂ ಅವಳು ಕೌಟುಂಬಿಕ ಚೌಕಟ್ಟುಗಳ ಆಚೆ ಇರುವ ಮಹಿಳೆಯಾಗಿರುವುದಕ್ಕೂ ಸಂಬಂಧವಿದೆ. ಜತೆಗೆ ಅವಳು ದೈವಿಕ ಜಗತ್ತಿಗೆ ಸೇರಿದ ಪಾತ್ರವಾಗಿರುವುದರಿಂದ, ಆಕೆಯ ತಿರುಗಾಟ ಮತ್ತು ಏಕಾಂತವಾಸಗಳಿಗೆ ಒಂದು ಪಾವಿತ್ರ್ಯತೆಯೂ ಬಂದು ಒದಗಿದೆ. ಆಕೆಯ ಎಲ್ಲ ಓಡಾಟಗಳು ರಾಜನನ್ನು ಮತ್ತು ರಾಜ್ಯವನ್ನು ರಕ್ಷಿಸುವ ನೆಲೆಯೊಳಗೆ ನಡೆಯುತ್ತದೆ. ರಾಣಿ ದೇವಮ್ಮಾಜಿ ತನ್ನ ಗಂಡನ ಆರೋಗ್ಯ ಕಾಪಾಡಲು ಬಸವನಿಗೆ ಹೀಗೆ ಹೇಳುತ್ತಾಳೆ: "ಒಡೆಯರಿಗೆ ಮೈಯಲ್ಲಿ ಸಾರವಿಲ್ಲ. ಅದು ಸರಿಯಾಗ ಬೇಕಾದರೆ ಈ ವೈದ್ಯರ ಮದ್ದು ಕೊಡೋದಿಲ್ಲ. ಮಲೆಯಾಳದ ಮದ್ದೇ ಮದ್ದು; ಘಟ್ಟದ ಕೆಳಕ್ಕೆ ಹೇಳಿಕಳಿಸಿದರೂ ಸಮನೆ. ಅಂದರೆ ಭಗವತಿ ಇತ್ತೀಚೆಗೆ ಇಲ್ಲಿಗೆ

ಬಂದಿದ್ದಾಳೆ. ಗುಡ್ಡದ ಕೆಳಗೆ ಹೊಳೆ ಪಕ್ಕದಲ್ಲಿ ಮಂದಿರ ಮಾಡಿಕೊಂಡಿದ್ದಾಳೆ. ಅಂತಾರೆ ಅವಳನ ಕರೆಸಿ ತೋರಿಸೋದು ಒಳ್ಳೆದು"(ಪು.೯೬). ಈ ಮಾತಿನಲ್ಲಿ ಮುಖ್ಯವಾದುದು ಭಗವತಿಯ ಶಕ್ತಿ ಮಾತ್ರವಲ್ಲ, ಆಕೆಯ ಶಕ್ತಿಯ ಹಿಂದಿರುವ ತಿರುಗಾಟ. ಆಕೆ ಮಲೆಯಾಳದಿಂದ ಬಂದವಳು. ಘಟ್ಟದ ಮೇಲಿರುವ ಅರಸನ ರಕ್ಷಣೆ ಘಟ್ಟದ ಕೆಳಗಿನಿಂದ ಪಯಣ ಮಾಡುವ ಮೂಲಕ ಬಂದಿರುವ ಭಗವತಿ ಮಾಡುತ್ತಾಳೆ. ಬಯಲುಪ್ರದೇಶ ಮತ್ತು ಕರಾವಳಿಗಳನ್ನು ಬೇರೆಮಾಡುವ ಘಟ್ಟಪ್ರದೇಶದ ಒಳಗೆ ಮಾಸ್ತಿಯವರ ಹಾಗೂ ಕುವೆಂಪು ಅವರ ಕಾದಂಬರಿಗಳ ಕಥೆ ನಡೆಯುತ್ತದೆ. ಹೀಗಾಗಿ ಪಯಣಗಳಿಗೆ ಘಟ್ಟವು ಒಂದು ಸವಾಲಾಗಿಯೂ ಸಾಕ್ಷಿಯಾಗಿಯೂ ಬರುತ್ತದೆ. ಕುವೆಂಪುರವರ ಎರಡೂ ಕಾದಂಬರಿಗಳಲ್ಲಿ ಬೇರೆಬೇರೆ ಪಾತ್ರಗಳು ಬದುಕು ನಡೆಸುವ ಸಲುವಾಗಿ ಘಟ್ಟಗಳಿಂದ ಮೇಲೆ ಘಟ್ಟದಿಂದ ಕೆಳಗೆ ಪಯಣ ಮಾಡುವ ನೂರಾರು ಸನ್ನಿವೇಶಗಳಿವೆ. ಇಂದಿಗೂ ಬಯಲುಸೀಮೆಯ ಹಲವು ವರ್ಗಗಳು ಜೀವನ ನಿರ್ವಹಣೆಗಾಗಿ ಘಟ್ಟದ ಕೆಳಗೆ ವಲಸೆ ಹೋಗುವುದನ್ನು ಘಟ್ಟದ ಕೆಳಗಿನವರು ವಾಣಿಜ್ಯಕ್ಕಾಗಿ ಘಟ್ಟದ ಮೇಲೆ ಬರುವುದನ್ನು ಮಾಡುತ್ತಿವೆ.

'ಚಿಕವೀರ ರಾಜೇಂದ್ರ'ದಲ್ಲಿ ರಾಜನ ರಕ್ಷಣೆಗಾಗಿ, ಪದಚ್ಯುತಿಗಾಗಿ ಬಸವ ಮತ್ತು ಭಗವತಿ ಮಾಡುವ ವಿಭಿನ್ನ ಬಗೆಯ ಪಯಣಗಳನ್ನು ಗಮನಿಸಬಹುದು. "ಹೇಳುತೀನರವ್ವ, ಬ್ಯಾಸರ ಬ್ಯಾಡರಿ. ನೀವು ಈ ಎರಡು ತಿಂಗಳು ಅಲ್ಲಿ ಇಲ್ಲಿ ಹೋಗಿ ಜನರನ್ನು ಕಂಡಿದ್ದೀರಿ. ಅಪ್ಪಂಗೊಳಕ್ಕೆ ಹೋಗಿ ಅಳಿಯ ದೇವರ ಕಂಡಿದ್ದೀರಿ. ಈ ಜನ ಬಹುತೇಕ ಅರಸರಿಗೆ ಆಗದವರು. ಇವರ ತಾವು ನೀವು ಹೋಗಿ ಬಂದು ಅರಸರಿಗೇನಾದರೂ ಕೆಡಕಾದೀತು ಅಂತ ಬಯವಾಯ್ತು. ಅದಕ್ಕಾಗಿ ನಿಮ್ಮನ್ನು ಬೇಡಿಕೊಳ್ಳೋಕೆ ಬಂದೆ"(ಪು.೧೧೨). ಭಗವತಿ ತನ್ನ ಮಗನಾದ ಬಸವನಿಗಾಗಿ ರಹಸ್ಯ ತಿರುಗಾಟವನ್ನು ನಡೆಸಿ ರಾಜನನ್ನಾಗಿ ಮಾಡಲು ಪ್ರಯತ್ನ ಮಾಡುತ್ತಾಳೆ. ಆದರೆ ಇನ್ನೊಂದೆಡೆ ಅದೇ ಬಸವ ರಾಜನನ್ನು ಪಿತೂರಿಗಳಿಂದ ರಕ್ಷಿಸಲು ಭಗವತಿಯೆಡೆಗೆ ಚಲಿಸಿ ಬಂದಿದ್ದಾನೆ. ಚಿಕವೀರನನ್ನು ರಕ್ಷಿಸುವ, ವಿರೋಧಿಸುವ ಎರಡು ಭಿನ್ನ ಚಲನೆಗಳು ಇಲ್ಲಿ ಮುಖಾಮುಖಿಯಾಗುತ್ತವೆ. ಬಸವ ಮತ್ತು ಭಗವತಿ ಎರಡು ಪಾತ್ರಗಳ ನಡುವೆ ವಿರುದ್ಧ ಉದ್ದೇಶಗಳು ಅವರ ಪಯಣವನ್ನು ರೂಪಿಸುತ್ತವೆ.

೫.೩. ಪಯಣ: ವ್ಯಕ್ತಿತ್ವ

ಪ್ರತಿಯೊಂದು ಜೀವಿಗೂ ಅದರದೇ ಆದ ವಿಶಿಷ್ಟ ವ್ಯಕ್ತಿತ್ವವಿರುತ್ತದೆ. ಹಾಗೆಯೇ ವ್ಯಕ್ತಿ ವ್ಯಕ್ತಿಗಳ ನಡುವೇ ಅವರದೇ ಆದ ವ್ಯಕ್ತಿತ್ವಗಳು ಮುಖಾಮುಖಿ ಆಗುತ್ತವೆ. ಅವುಗಳ ಪರಸ್ಪರ ಒಡನಾಟದ ಮೂಲಕ ಸಮಾಜ, ಸಂಸ್ಕೃತಿ, ಸಮುದಾಯಗಳ ಸ್ವರೂಪ ಬದಲಾಗುತ್ತದೆ. ಹಾಗೆ ಬದಲಾಗುತ್ತ ಅದು ಧನಾತ್ಮಕ ಅಥವಾ ಋಣಾತ್ಮಕ ನೆಲೆಗಳಲ್ಲಿ ನಿರ್ಮಾಣವಾಗುತ್ತದೆ. ಈ

ಹಿನ್ನೆಲೆಯಲ್ಲಿ ಮಾಸ್ತಿಯವರ ಕಾದಂಬರಿಗಳಲ್ಲಿ ಪಾತ್ರಗಳ ಪಯಣದಲ್ಲಿ ವ್ಯಕ್ತಿತ್ವವನ್ನು ಅರಿಯುವುದಕ್ಕೆ ಯತ್ನಿಸಬಹುದು. ವ್ಯಕ್ತಿಯನ್ನು ನೋಡಿದ ಕೂಡಲೇ ಅವರ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಳ್ಳುವುದು ಒಂದು ಬಗೆಯಾದರೆ, ಅವರೊಂದಿಗಿನ ನಿರಂತರ ತಿರುಗಾಟದ ಅನುಭವದ ಮೂಲಕ ಆ ವ್ಯಕ್ತಿತ್ವವನ್ನು ವಿಮರ್ಶೆಗೆ ಒಳಪಡಿಸುತ್ತಾ ತಿಳಿಯುವುದು ಮತ್ತೊಂದು ಬಗೆಯಾಗಿದೆ. ಮುಖ್ಯವೆಂದರೆ, ಜನರ ವ್ಯಕ್ತಿತ್ವದ ಬೆಳವಣಿಗೆಯ ಹಿಂದೆ ಪಯಣದ ಪ್ರಕ್ರಿಯೆ ಇರುತ್ತದೆ. ಶಿವರಾಮ ಕಾರಂತರ 'ಬೆಟ್ಟದಜೀವ' 'ಅಳಿದಮೇಲೆ' ಕಾದಂಬರಿಗಳ ಮುಖ್ಯ ಪಾತ್ರಗಳನ್ನು ಈ ದೃಷ್ಟಿಯಿಂದ ನೆನೆಯಬಹುದು. ಆದರೆ ಮಾಸ್ತಿಯವರಲ್ಲಿ ತಿರುಗಾಟಕ್ಕಿಂತ ಮನುಷ್ಯನ ಕ್ರಿಯೆ ವ್ಯಕ್ತಿತ್ವದಲ್ಲಿ ಉಂಟುಮಾಡುವ ಬದಲಾವಣೆಗಳು ಮುಖ್ಯವಾದವು. ಈ ಹಿನ್ನೆಲೆಯಲ್ಲಿ ಮಾಸ್ತಿಯವರ ಕತೆಗಳ ಬಗ್ಗೆ ಮೂರ್ತಿರಾವ್ ಅವರು ಹೇಳುವ ಮಾತೊಂದು ಗಮನಾರ್ಹವಾಗಿದೆ. "ಪಾತ್ರ ಚಿತ್ರಣ ಎರಡು ದಾರಿಯಲ್ಲಿ ನಡೆಯಬಹುದು. ಮಾನವನೊಬ್ಬನು ಮಾಡುವ ಕ್ರಿಯೆ ಅವನ ಸ್ವಭಾದ ಫಲ ಎಂದು ತೋರಿಸುವುದು ಮಾತ್ರವಲ್ಲದೆ, ಆ ಕ್ರಿಯೆಯ ಫಲವಾಗಿ ಮತ್ತು ಕ್ರಿಯೆಗೆ ಪರಿಸ್ಥಿತಿಯಿಂದ ಬರುವ ಪ್ರತಿಕ್ರಿಯೆಯ ಫಲವಾಗಿ ಅವನ ಸ್ವಭಾವ ಹೇಗೆ ಮಾರ್ಪಡುತ್ತದೆ ಎಂಬುದನ್ನು ಚಿತ್ರಿಸಬಹುದು."[೨] ಈ ಅಭಿಪ್ರಾಯವು ಮಾಸ್ತಿಯವರ ಕಾದಂಬರಿಗಳ ವಿಶ್ಲೇಷಣೆ ಮಾಡುವಾಗಲೂ ನಿಜವೆನಿಸುತ್ತದೆ.

ಮಾಸ್ತಿಯವರ 'ಚೆನ್ನಬಸವ ನಾಯಕ' ಕಾದಂಬರಿಯಲ್ಲಿ ಹೈದರಾಲಿಯ ವ್ಯಕ್ತಿತ್ವವನ್ನು ಮೌಲ್ವಿಗಳ ಮೂಲಕ ಕಾಣಿಸುವ ಬಗೆ ಸ್ವಾರಸ್ಯಕರವಾಗಿದೆ. ದೂರ ದೇಶದಿಂದ ಪಯಣ ಮಾಡಿಕೊಂಡು ಶ್ರೀರಂಗಪಟ್ಟಣಕ್ಕೆ ಬಂದ ಮೌಲ್ವಿಗಳ ಹಾಗೂ ಸ್ಥಳೀಯನಾಗಿರುವ ಹೈದರಾಲಿಯ ನಡುವೆ ಒಂದು ಮುಖಾಮುಖಿ ನಡೆಯುತ್ತದೆ. ಅಪರಿಚಿತ ದೇಶಕ್ಕೆ ಬಂದು ಅಲ್ಲಿನ ಸಂಸ್ಕೃತಿಯನ್ನು ಅರಿಯದ ಸಂಕುಚಿತ ಮನಸ್ಸಿನ ಧರ್ಮಗುರುಗಳು ಹೈದರ್ ವ್ಯಕ್ತಿತ್ವ ತಿಳಿಯದೆ ಅವನಿಗೆ ಇಸ್ಲಾಮಿಕ್ ರಾಜ್ಯವನ್ನಾಗಿ ಮಾಡಬೇಕೆಂದು ಕರೆಗೊಡುತ್ತಾರೆ. ಆದರೆ ಅದನ್ನು ನಿರಾಕರಿಸುತ್ತ ಹೈದರಾಲಿ ಅದು ನಮಕ್ ಹರಾಂ ಕೆಲಸ ಎನ್ನುತ್ತಾನೆ"(ಪು.೧೪೪). ಮುಂದೆ ಮೈಸೂರು ರಾಜ್ಯ ಪಡೆಯುವ ಸಂದರ್ಭಕ್ಕಿಂತ ಪ್ರಸ್ತುತ ಸನ್ನಿವೇಶದಲ್ಲಿ ಹೈದರನ ವ್ಯಕ್ತಿತ್ವ ತಿಳಿಯುವುದು ಮುಖ್ಯವಾಗುತ್ತದೆ. ಧರ್ಮ ರಾಜಕಾರಣಕ್ಕಿಂತ, ಪ್ರಾಮಾಣಿಕತೆಯ ರಾಜಕಾರಣ ಶ್ರೇಷ್ಠವಾದುದೆಂಬುದು ಹೈದರ್-ಮೌಲ್ವಿಗಳ ನಡುವಣ ಸಂಭಾಷಣೆ ವ್ಯಕ್ತಪಡಿಸುತ್ತದೆ. ಈ ಪ್ರಕರಣದ ಬಳಿಕ ಹೈದರ್ ಮೌಲ್ವಿಯ ಸಲಹೆಯನ್ನು ನಿರಾಕರಿಸುತ್ತಾನೆ ಮತ್ತು ಅವನಿಗೆ ದೇಶಾಂತರ ಹೋಗುವಂತೆ ಆಜ್ಞಾಪಿಸುತ್ತಾನೆ. ಅನೇಕ ಸಲ ಪಯಣಗಳು ನಿರ್ದಿಷ್ಟ ಉದ್ದೇಶ ಈಡೇರಿಕೆಗಾಗಿ ನಡೆಯುತ್ತವೆ. ಆದರೆ ಕೆಲವೊಮ್ಮೆ ಉದ್ದೇಶ ವಿಫಲವಾದಾಗ ಸೋತಾಗ ಕೂಡ ಸಂಭವಿಸುತ್ತವೆ. ಮೌಲ್ವಿಯ ಪಯಣದ ಹಿಂದೆ ಅಂತಹ ಸೋಲಿನ ಅಪಮಾನದ ಹಿನ್ನೆಲೆಯಿದೆ. ಹೀಗೆ ಕಾದಂಬರಿಯು ಬೇರೆಬೇರೆ ಬಗೆಯ ಪಯಣದ ವಿನ್ಯಾಸಗಳನ್ನು ತನ್ನ ಒಡಲಲ್ಲಿ ಧರಿಸುತ್ತದೆ.

ಪಯಣವು ಅನೇಕ ಸಲ ಅಂತಸ್ತುಗಳನ್ನು ಕಾಪಾಡಿಕೊಳ್ಳುವ ಶ್ರೇಣೀಕರಣದ ಗುಣವನ್ನು ಹೊಂದಿದೆ. ಅಧಿಕಾರಸ್ಥರು ತಮ್ಮ ಬಳಿಗೆ ಅಧಿಕಾರರಹಿತರು ಪಯಣ ಮಾಡಿ ಭೇಟಿಮಾಡಬೇಕೆಂದು ನಿರೀಕ್ಷಿಸುತ್ತಾರೆ. ಆದರೆ ಈ ಪಯಣದೊಳಗಿನ ಶ್ರೇಣೀಕರಣವು ಕೆಲವೊಮ್ಮೆ ಭಗ್ನವಾಗುವುದುಂಟು. ಇದಕ್ಕೆ ನಿದರ್ಶನ ಮೈಸೂರು ಸಂಸ್ಥಾನದ ರಾಜಮಾತೆಯವರು ತಮ್ಮ ಅಂತಸ್ತನ್ನು ಮತ್ತು ಶಿಷ್ಟಾಚಾರವನ್ನು ಲೆಕ್ಕಿಸದೇ ತಮ್ಮ ಸಾಮಂತರಾದ ಬಿದನೂರಿನ ಶಾಂತವ್ವೆಯನ್ನು ನೋಡಲು ಬರುವುದು. ಮೇಲುಸ್ತರದಲ್ಲಿದ್ದವರು ಕೆಳಸ್ತರದವರ ಕಡೆಗೆ ಚಲನೆ ಮಾಡುವಾಗಿನ ಸಂದರ್ಭವನ್ನು ಕಾದಂಬರಿಯು ಹೀಗೆ ವ್ಯಾಖ್ಯಾನಿಸುತ್ತದೆ: "ಅರಸು ಮಕ್ಕಳ ಹಿರಿಯಾಕೆ ತನ್ನ ಕುಲದವಳಲ್ಲದ ಈ ತರುಣಿಯನ್ನು ಹೀಗೆ ಮುದ್ದಿಸುವುದರಲ್ಲಿ ತನ್ನ ಸಂಪ್ರದಾಯದ ಬಿಗುಮಾನವನ್ನು ಮರೆತಳೆನ್ನಬೇಕು. ಆದರೆ ಹೆಣ್ಣಿನ ಮನಸ್ಸು ಇಂಥ ವೇಳೆ ಕುಲ ಆಚಾರಗಳ ಅಡ್ಡಿಗಳನ್ನು ಮೀರಿ ಹಾಯುತ್ತದೆ"(ಪು.೧೯೦). ಒಂದೆಡೆ ಅತ್ತೆಯಾದ ವೀರಮ್ಮಾಜಿ ಶಾಂತವ್ವೆಯನ್ನು ತಿರಸ್ಕಾರದಿಂದ ನೋಡಿದರೆ, ಸಂಬಂಧವಿಲ್ಲದ ರಾಜಮಾತೆ ಪ್ರೀತಿಯಿಂದ ನೋಡುತ್ತಾಳೆ. ಈ ಎರಡು ಸನ್ನಿವೇಶಗಳು ಕೃತಿಯಲ್ಲಿ ಬಂದಿವೆ. ರಾಜಮಾತೆ ರಾಣಿಯ ವ್ಯಕ್ತಿತ್ವದ ಸರಳತೆಯನ್ನು ಆಕೆ ಶಾಂತವ್ವೆಯೆಡೆಗಿನ ಚಲನೆಯ ಮೂಲಕ ತಿಳಿಯಬಹುದಾಗಿದೆ.

'ಚಿಕವೀರ ರಾಜೇಂದ್ರ' ಕೃತಿಯಲ್ಲಿ ಚಿಕವೀರ ರಾಜೇಂದ್ರನ ಹೆಂಡತಿ ಗೌರಮ್ಮ ಗಂಡನನ್ನು ಬಿಟ್ಟು ಕೊಡದೆ, ರಾಣಿಯ ಘನತೆ ಮತ್ತು ಪತಿಯ ಗೌರವವನ್ನು ಕಾಪಾಡುವ ಸನ್ನಿವೇಶವಿದೆ. "ಪುಟ್ಟಮ್ಮಾಜಿ ಒಂದಿಗೆ ಆಡುವುದಕ್ಕೆ ಮಕ್ಕಳು ಯಾರಾದರೂ ಬೇಕು ಅಂದಿದ್ದೆವು. ಆ ಮಾತು ನಿಮಗೆ ಮುಟ್ಟಿರಬೇಕು. ತಿರುಗಿ ಹೇಳಿ ಕಳುಹಿಸುತ್ತೇವೆ. ಅದುವರೆಗೂ ಯಾರನ್ನೂ ಕಳುಹೋದು ಬೇಡ"(ಪು.೬೫). ಇದು ಗೌರಮ್ಮಾಜಿ ಚಿಕ್ಕಣ್ಣಶೆಟ್ಟಿಗೆ ಹೇಳುವ ಮಾತು. ಇಲ್ಲಿ ಸಾಮಾನ್ಯ ಜನರ ಮಹಿಳೆಯರನ್ನು ಕೆಣಕುತ್ತಿದ್ದ ರಾಜ ರಾಜ ಮನೆಯವರ ಮಕ್ಕಳನ್ನು ಬಯಸಿದ್ದು ಕಂಡುಬರುತ್ತದೆ. ಆ ಮೂಲಕ ಚಿಕವೀರ ರಾಜೇಂದ್ರನ ವ್ಯಕ್ತಿತ್ವದ ಅಧಃಪತನದ ಪಯಣವು ಗೋಚರವಾಗುತ್ತದೆ. ಚಿಕವೀರ ರಾಜೇಂದ್ರನ ಹೆಂಡತಿ ಗೌರಮ್ಮವಿಲ್ಲಿ ಗಂಡನ ಗೌರವವನ್ನು ಕಾಪಾಡುವುದು ಒಂದೆಡೆ ಕಂಡರೆ, ಮತ್ತೊಂದೆಡೆ ಆದರ್ಶ ಸತಿಯಾಗಿ ಕಂಡುಬರುತ್ತಾಳೆ. ಚಿಕ್ಕಣ್ಣ ಶೆಟ್ಟಿಯ ಸೊಸೆಯ ಮೇಲಿನ ರಾಜನ ದೃಷ್ಟಿ ಮುಂದೆ ರಾಜನ ಅವನತಿಗೆ ಕಾರಣವಾಗುತ್ತದೆ. ಇದರಿಂದ ಶೆಟ್ಟಿಯು ತನ್ನ ಸೊಸೆಯನ್ನು ರಾತ್ರೋರಾತ್ರಿ ಪಯಣ ಮಾಡಿ ಕೊಡಗಿನಿಂದ ಹೊರಕಳಿಸಲು ಕಾರಣವಾಗುತ್ತದೆ. ಹೀಗೆ ಕಾದಂಬರಿಯಲ್ಲಿ ಬೇರೆಬೇರೆ ವ್ಯಕ್ತಿಗಳು ಹೆದರಿಕೆಯಿಂದ ಆತ್ಮರಕ್ಷಣೆಗಾಗಿ ಮಾಡುವ ಗುಪ್ತಪಯಣಗಳು ಇವೆ. ಇವು ಪರೋಕ್ಷವಾಗಿ ಕೃತಿಯಲ್ಲಿರುವ ಇತರೆ ಪಾತ್ರಗಳ ವ್ಯಕ್ತಿತ್ವವನ್ನು ಅಳೆಯುವ ಮಾಪನಗಳಾಗಿ ಕೆಲಸ ಮಾಡುತ್ತವೆ. ಹೀಗೆ ಪಯಣವು ಕಾದಂಬರಿಯಲ್ಲಿ ವ್ಯಕ್ತಿತ್ವ ಕಟ್ಟಿಕೊಳ್ಳುವುದಕ್ಕೆ ಮಾತ್ರವಲ್ಲ, ಇನ್ನೊಬ್ಬರ ವ್ಯಕ್ತಿತ್ವ ಅಳೆಯುವುದಕ್ಕೆ ಕೂಡ ಕಾರಣವಾಗುತ್ತದೆ.

ಚಿಕವೀರ ರಾಜೇಂದ್ರನ ವ್ಯಕ್ತಿತ್ವವು ಕಾಲದ ಪಯಣಕ್ಕೆ ಸಿಕ್ಕು ನಿಧಾನವಾಗಿ ಕ್ರೂರತೆಗೆ ಬದಲಾದ ಮನಸ್ಥಿತಿ ಇಲ್ಲಿ ವ್ಯಕ್ತವಾಗಿದೆ. ಚಿಕವೀರರಾಜೇಂದ್ರ ತನ್ನ ತಂಗಿಯನ್ನು ಕುರಿತು ಬಸವನಿಗೆ ಹೇಳುವ ಮಾತಿದು: "ಈ ಮುಂಡೇನ ಕತ್ತೆಮೇಲೆ ಏರಿಸಿ ಮಡಿಕೇರಿಲಿ ಮೆರವಣಿಗೆ ಮಾಡಿಸಿ ಹೊಲೆಯರಿಗೆ ಹಾಕು; ಈ ಹಂದಿ ಮಗನ್ನ ಶೂಲಕ್ಕೆ ಏರಿಸು"(ಪು.೨೭೮). ಇಲ್ಲಿ ಚಿಕವೀರ ರಾಜೇಂದ್ರನ ಮಾತಿನಲ್ಲಿ ರಾಜತ್ವದ ನೆಲೆಯಿಂದ ಪತನವಾಗುತ್ತಿರುವ ಅಧಿಕಾರದ ಛಾಯೆ ಕಾಣುತ್ತದೆ. ರಾಜನಿಗಿರಬೇಕಾದ ಮಾತು, ಘನತೆಗಳು ಇಲ್ಲವಾಗಿ, ಆತ ಕೆಳಸ್ಥಿತಿಗೆ ಪಯಣ ಮಾಡುತ್ತ ಹೋಗುವಿಕೆ ಇದೆ. ಇದನ್ನು ವ್ಯಕ್ತಿತ್ವ ನಾಶದ ಹಾದಿಯಲ್ಲಿ ಪಾತ್ರಗಳು ಮಾಡುವ ಪಯಣ ಎಂದು ಕರೆಯಬಹುದು.

'ಚಿಕವೀರ ರಾಜೇಂದ್ರ' ಕೃತಿಯಲ್ಲಿ ಬಸವ ಮಂತ್ರಿಯಾಗಿದ್ದು, ಭಗವತಿಯೊಂದಿಗಿನ ಸಂಭಾಷಣೆಯಲ್ಲಿ ರಾಜನ ಮೇಲಿನ ವಿಶ್ವಾಸದ ಮೂಲಕ ವ್ಯಕ್ತಿತ್ವವನ್ನು ತಿಳಿಸುವ ಸಂದರ್ಭ ಹೀಗಿದೆ: "ಏನು ಮಾಡಲಿಲ್ಲ ಅವ್ವ? ನಾನು ಒಂದು ಜೀವ ಅಂತ ಒಲಿದು ನೋಡಿರೋರು ಈ ಲೋಕದಾಗ ಅವರೊಬ್ಬರೇ, ಅಂಥ ದಣಿ ಹತ್ತಿರ ನಾಯಿ ಆಗೋದು ಮಾನಕ್ಕೆ ಕಡಮೆ ಯಲ್ಲ"(ಪು.೧೧೩). ಬಸವನು ರಾಜನ ವಿರುದ್ಧ ನಡೆಯುವ ಫಿತೂರಿಯ ಸಲುವಾಗಿ ಭಗವತಿಯೆಡೆಗೆ ಚಲಿಸಿ ಬಂದಿದ್ದಾನೆ. ಇಲ್ಲಿ ರಾಜನ ಮೇಲೆ ಬಸವನ ವಿಶ್ವಾಸ ಒಂದೆಡೆ ಕಂಡರೆ, ಮತ್ತೊಂದೆಡೆ ಭಗವತಿಗೆ ಮಗನಾದ ಬಸವನ ಮೇಲೆ ತಾಯಿಯ ಮಮತೆ ವ್ಯಕ್ತವಾಗಿದೆ. ಬಸವನಲ್ಲಿ ತಾನು ರಾಜನಾಗಬೇಂಬ ಬಯಕೆಗಿಂತ ರಾಜನಿಗೆ ಕೆಡುಕಾಗಬಾರದೆಂಬ ಮನೋಭಾವವಿದೆ. ರಾಜನ ಪರ ಮತ್ತು ವಿರುದ್ಧ ಮನೋಭಾವಗಳ ಪಯಣದಲ್ಲಿ ಬಸವ ಮತ್ತು ಭಗವತಿ ಇಬ್ಬರೂ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಾರೆ.

'ಚಿಕವೀರ ರಾಜೇಂದ್ರ'ದಲ್ಲಿ ಚಿಕವೀರರಾಜನ ತಂಗಿ ದೇವಮ್ಮಾಜಿ-ಚೆನ್ನಬಸವ ನಾಯಕ ರಿಬ್ಬರೂ ಸೆರೆಯಿಂದ ತಪ್ಪಿಸಿಕೊಂಡು ಪಯಣ ಮಾಡುವ ಪ್ರಸಂಗವು ಬಹಳ ಮಹತ್ವದ ಘಟನೆಯಾಗಿದೆ. ಅವರು ಮಾಡುವ ಪಯಣದಲ್ಲಿ ಪ್ರಾಣ ಉಳಿಸಿಕೊಳ್ಳುವ ತುಡಿತವಿದೆ. ಆ ಸಂದರ್ಭದಲ್ಲಿ ಯಾವ ಮಗುವಿನ ಭವಿಷ್ಯಕ್ಕಾಗಿ ಅವರ ಪ್ರಯಾಣವು ಯೋಜಿತವಾಗಿತ್ತೊ ಆ ಮಗುವೇ ದಾರಿಯಲ್ಲಿ ಬಿದ್ದು ಹೋಗುತ್ತದೆ. ಮುಂದೆ ಗೌಡರ ಮೂಲಕ ಮಡಿಕೇರಿಯ ಅರಮನೆಯನ್ನು ತಲುಪುತ್ತದೆ. ಅರಸನ ಮನೆಗೆ ಮಗು ಬಂದಾಗ ಅರಮನೆಯಲ್ಲಿನ ವ್ಯಕ್ತಿತ್ವದಲ್ಲಿ ಮೂಡಿಸಿದ ಬದಲಾವಣೆಯ ಸಂದರ್ಭ ಹೀಗಿದೆ: "ರಾಣಿವಾಸದಲ್ಲಿ ಒಂದು ಮಗು ಆಡಿದ್ದು ಬಹು ವರ್ಷ ಕಳೆದು ಹೋಗಿತ್ತು. ಅಸಹಾಯಕವಾಗಿ ಅಳುವ ಒಂದು ಮಗುವಿನ ಧ್ವನಿಯಿಂದ ಮನೆಮನೆಯೇ ಮೆದುವಾಗುತ್ತದೆ. ಈ ಅರ್ಥದಲ್ಲಿ ಮನುಷ್ಯರಿಗೆ ವ್ಯಕ್ತಿತ್ವ ಇರುವಂತೆ ಒಂದೊಂದು ಮನೆಗೂ ವ್ಯಕ್ತಿತ್ವ ಇರುತ್ತದೆ"(ಪು.೩೧೪). ದೇವಮ್ಮಾಜಿಯ ಮಗುವಿನಿಂದ ಅರಮನೆಯಲ್ಲಿನ ಇತರರಲ್ಲಿ ತಾಯ್ತನದ ಭಾವ ಉಕ್ಕುತ್ತದೆ. ಈ ತಾಯ್ತನವು ಅಂತಸ್ತು, ಮೇಲು-ಕೀಳು ಎಂಬ

ಭಾವನೆಗಳಾಚೆ ಮನುಷ್ಯರಲ್ಲಿರುವ ಆಂತರಿಕ ಪಯಣಕ್ಕೆ ಕಾರಣವಾಗುತ್ತದೆ. ಈ ಮಾನಸಿಕವಾದ ಪಯಣವು ಅನೇಕ ಸಂಕಟಗಳಿಂದ ಛಿದ್ರವಾಗಿದ್ದ ಅವರೆಲ್ಲರನ್ನು ಒಗ್ಗೂಡಿಸುತ್ತದೆ. ಮಗುವಿನ ಎರಡು ಬಗೆಯ ಪಯಣಗಳು ಅರಮನೆಯಲ್ಲಿ ಉಂಟುಮಾಡುವ ಈ ಪರಿವರ್ತನೆಗಳು ನಾಟಕೀಯವಾಗಿವೆ. ಈ ಕುರಿತ ನಿರೂಪಣ ಭಾಗಗಳು ವ್ಯಕ್ತಿಗಳಲ್ಲಿ ಮಾತ್ರ ವ್ಯಕ್ತಿತ್ವವಿರುವುದಿಲ್ಲ, ಅರಮನೆಗೂ ಕೂಡ ವ್ಯಕ್ತಿತ್ವವಿದೆ. ದೇಶಕ್ಕೂ ಕೂಡ ಒಂದು ವ್ಯಕ್ತಿತವಿರುತ್ತದೆ ಎಂಬುದನ್ನು ಧ್ವನಿಸುತ್ತವೆ. ನಿರ್ದಿಷ್ಟವಾದ ಆಲೋಚನ ಕ್ರಮ ಅಥವಾ ಅನುಭವಗಳು ವ್ಯಕ್ತಿಯೊಳಗಿರುವ ಚಿಂತನೆ ಹೊಸ ಹೊಸ ಲೋಕಗಳಿಗೆ ಸನ್ನಿವೇಶಗಳಿಗೆ ಮುಖಾಮುಖಿಯಾದಾಗ ಬದಲಾವಣೆಯನ್ನು ಪಡೆಯುತ್ತವೆ. ಈ ಬದಲಾವಣೆ ವಿಕಾಸ ಕ್ರಮದಲ್ಲಿರಬಹುದು, ಪತನಕ್ರಮದಲ್ಲೂ ಇರಬಹುದು. ಹಾಗೇ ಆ ವ್ಯಕ್ತಿತ್ವದ ಒಳಗೆ ಉಂಟಾಗುವ ಪಲ್ಲಟಗಳು ಆಂತರಿಕ ಪಯಣಕ್ಕೆ ಪ್ರೇರಣೆ ಒದಗಿಸುತ್ತವೆ.

ಈ ಬಗೆಯ ಸಂಘರ್ಷಗಳು ವ್ಯಕ್ತಿಯ ವ್ಯಕ್ತಿತ್ವದೊಳಗೆ ಉಂಟುಮಾಡುವ ಪಯಣ ಅಥವಾ ಚಲನೆಗಳಿಗೆ ಕುವೆಂಪುರವರ 'ಶೂದ್ರತಪಸ್ವಿ'ಯ ಶೂದ್ರನ ಪಾತ್ರ ಒಳ್ಳೆಯ ನಿದರ್ಶನ. ಆತನು ತಪಸ್ಸು ಮಾಡಿ ಋಷಿಯಾಗಲು ಬಯಸುತ್ತಾನೆ. 'ಶ್ರೀರಾಮಾಯಣ ದರ್ಶನಂ'ನಲ್ಲಿನ ಮಂಥರೆ, ರಾವಣ ಪಾತ್ರಗಳು ಕೂಡ ತಮ್ಮ ಬದುಕಿನ ಪಯಣದಲ್ಲಿ ಬದಲಾಗುತ್ತ ಮಾಗುತ್ತ ಹೋಗುತ್ತಾರೆ. ಹೀಗೆ ಅನೇಕ ದುಷ್ಟ ಕ್ರೂರ ಪಾತ್ರಗಳು ಬದುಕಿನ ಕಠಿಣ ಪರಿಸ್ಥಿತಿಗಳಿಗೆ ಒಳಗಾಗಿ ಸಜ್ಜನ ಪಾತ್ರವಾಗುತ್ತವೆ. ಆದ್ದರಿಂದ ಕನ್ನಡ ಕಾದಂಬರಿಗಳು ಭೌತಿಕ ಪಯಣದ ಜತೆಜತೆಗೆಯೇ ಪಾತ್ರಗಳ ವ್ಯಕ್ತಿತ್ವದಲ್ಲಿ ಆಗುವ ಪಲ್ಲಟಗಳನ್ನು ಅವರೊಳಗೆ ನಡೆಯುವ ಆಂತರಿಕ ಪಯಣಗಳನ್ನು ಒಟ್ಟಿಗೆ ಚಿತ್ರಿಸುತ್ತವೆ. ಈ ನಿಟ್ಟಿನಲ್ಲಿ 'ಚಿಕವೀರ ರಾಜೇಂದ್ರ' ಕಾದಂಬರಿಯು ಉತ್ತಯ್ಯ ತಕ್ಕ, ಗೌರಮ್ಮ, ಲಕ್ಷ್ಮೀನಾರಾಯಣಯ್ಯ ಇಂಥ ಪಾತ್ರಗಳನ್ನು ಚಿಕವೀರ ರಾಜೇಂದ್ರನಿಗೆ ಮುಖಾಮುಖಿಯಾಗಿಸುತ್ತದೆ. ಈ ಮೂಲಕ ಕ್ರೌರ್ಯದ ಮಧ್ಯೆ ಕಳೆದು ಹೋಗಿರುವ ಚಿಕವೀರ ರಾಜೇಂದ್ರನ ಮಾನವೀಯ ಗುಣಗಳನ್ನು ಶೋಧಿಸುತ್ತದೆ. ತನ್ನೆಲ್ಲ ದುಷ್ಟತನದ ಹಿನ್ನೆಲೆಯಲ್ಲೂ ಚಿಕವೀರ ರಾಜೇಂದ್ರನು ಉತ್ತಯ್ಯತಕ್ಕ ಮತ್ತು ಸಾವಿತ್ರಮ್ಮನನ್ನು ನಡೆಸಿಕೊಳ್ಳುವ ರೀತಿಯನ್ನು ಗಮನಿಸಬೇಕು. ಹೆಂಡತಿ ಮತ್ತು ಮಗಳೊಂದಿಗಿನ ಸಂಬಂಧದಲ್ಲೂ ಚಿಕವೀರ ರಾಜೇಂದ್ರ ಸಂಕೀರ್ಣವಾಗುತ್ತಾನೆ. ಹೀಗೆ ಮಾಸ್ತಿಯವರು ಪಾತ್ರಗಳ ಚಲನೆಯಲ್ಲಿ ವ್ಯಕ್ತಿತ್ವದ ಶೋಧನೆಯನ್ನು ಮಾಡುತ್ತಲೇ ಚಿಕವೀರ ರಾಜೇಂದ್ರನ ಬದುಕನ್ನು ಕಟ್ಟುವ ಪ್ರಯತ್ನ ಮಾಡುತ್ತಾರೆ. ಚಿಕವೀರರಾಜನು ಭೌತಿಕವಾಗಿ ಮಾಡುವ ಪಯಣಗಳಿಗಿಂತ ಆಂತರಿಕವಾಗಿ ಮಾಡುವ ಪಯಣಗಳತ್ತಲೇ ಕಾದಂಬರಿಯ ಗಮನವಿದೆ.

೫.೪. ಪಯಣ: ನೈತಿಕತೆ

ನೈತಿಕತೆ ಎಂದರೆ ಬಹುಸಂಖ್ಯಾತ ಸಮಾಜವು ಒಪ್ಪಿದ ಮೌಲ್ಯಗಳ ಮೊತ್ತವಾಗಿದೆ. ಕೊಲೆ, ವ್ಯಭಿಚಾರ, ಕಳ್ಳತನ ಮುಂತಾದವನ್ನು ಸಮಾಜವು ಅನೀತಿಯೆಂದು ಕರೆಯುತ್ತದೆ. ಯಾವುದನ್ನು ಅದು ನೈತಿಕತೆಯೆಂದು ಕರೆಯುತ್ತದೆಯೊ ಅದು ಬೇರೆ ಕೆಲವರ ನೆಲೆಯಲ್ಲಿ ಅನೈತಿಕವಾಗಿ

ಕಾಣಬಹುದು. ಹೀಗಾಗಿ ನೈತಿಕತೆಯನ್ನು ಸರಳ ರೇಖೆಯಲ್ಲಿ ವಿಭಾಗಿಸಿ ಹೇಳಲು ಸಾಧ್ಯವಿಲ್ಲ. ಒಟ್ಟಾರೆ ಸಮಾಜವು ಒಪ್ಪಿತ ಮೌಲ್ಯಗಳ ನೆಲೆಯಲ್ಲಿ ಬದುಕನ್ನು ರೂಪಿಸಿಕೊಳ್ಳುತ್ತದೆ. ವ್ಯಕ್ತಿ ಬೇರೆಯವರಿಗೆ ಹಾನಿ ಮಾಡದೇ ನೀತಿಯುಕ್ತವಾಗಿ ಮೌಲ್ಯಯುತ ಜೀವನವನ್ನು ಸಾಗಿಸುವ ನೆಲೆಗಳ ಹುಡುಕಾಟವನ್ನು ಮಾಸ್ತಿಯವರ ಕಾದಂಬರಿಗಳು ಮಾಡುತ್ತವೆ. ಈ ನೈತಿಕತೆಯ ಪರಿಕಲ್ಪನೆಯ ಜತೆಗೆ ಪಯಣವು ಜೋಡಣೆಗೊಂಡಿರುವುದನ್ನು ಕೂಡ ಅಲ್ಲಿ ಕಾಣಬಹುದು.

'ಚಿಕವೀರ ರಾಜೇಂದ್ರ' ಕೃತಿಯಲ್ಲಿ ಚಿಕವೀರ ರಾಜೇಂದ್ರ ತನ್ನ ತಂಗಿಯಾದ ದೇವಮ್ಮಾಜಿಯ ಕುರಿತು ಮಾತನಾಡುವ ಒಂದು ಸನ್ನಿವೇಶವಿದೆ: "ಎಷ್ಟು ನಿಮ್ಮ ಹರಟೆ? ಬೇಕು ಬೇಡ ಅನ್ನೋರು ನಾವು. ವರ್ಷದ ದಿನ ಎಲ್ಲಿ ಸೆರೇಲಿದ್ದ ನಿಮ್ಮ ನಾದಿನಿ ಯಾರಿಗೆ ಬಸುರಾದಳು? ಬಿಡಿಸಿ ಹೇಳಿ. ನಾದಿನೀನ ಯಾರಿಗೋ ಬಸರುಮಾಡಿ ಗಂಡನ ಮನೆಗೆ ಕಳಸತೀರಾ?"(ಪು.೧೩). ಇದನ್ನು ಚಿಕವೀರರಾಜೇಂದ್ರ ನಾದಿನಿಯನ್ನು ಸೆರೆಯಿಂದ ಮುಕ್ತಮಾಡಬೇಕೆಂದು ವಿನಂತಿಸಿದಾಗ ಹೇಳುವ ಮಾತುಗಳಿವು. ಅವನ ಮಾತುಗಳಲ್ಲಿ ತಂಗಿಯ ಶೀಲ ಕುರಿತ ಆಕ್ರೋಶ ಮತ್ತು ಅನುಮಾನ ವ್ಯಕ್ತವಾಗಿದೆ. ಗೌರಮ್ಮಾಜಿಯ ಸಹಾಯದಿಂದ ಚೆನ್ನಬಸವಯ್ಯ ಹೆಂಡತಿಯೆಡೆಗೆ ಪಯಣ ಮಾಡಿ ಬಂದು ಕೂಡಿದ್ದರಿಂದಲೇ ದೇವಮ್ಮಾಜಿ ಬಸುರಾಗಿದ್ದಾಳೆ. ಈ ಪಯಣಗಳ ಬಗ್ಗೆ ತಿಳಿಯದೆ ಚಿಕವೀರ ರಾಜೇಂದ್ರನಿಗೆ ತಂಗಿಯ ಮೇಲೆ ಅನೈತಿಕ ಸಂಬಂಧ ಕಾರಣವಾಗಿರಬಹುದೆಂದು ಸಿಟ್ಟುಮಾಡಿಕೊಂಡಿದ್ದಾನೆ. ಆದರೆ ಗೌರಮ್ಮಾಜಿಗೆ ನಿಜ ಸಂಗತಿಯ ಅರಿವಿದೆ. ಈ ಸನ್ನಿವೇಶದಲ್ಲಿ ಸ್ತ್ರೀಯರ ಶೀಲ ಕುರಿತ ಮನಸ್ಥಿತಿಗಳು ಬೇರೆಯಾಗಿ ಪ್ರಕಟವಾಗುತ್ತವೆ. ಗೌಪ್ಯವಾದ ಲೈಂಗಿಕ ಸಂಬಂಧಗಳ ಹಿಂದೆ ಯಾವಾಗಲೂ ಸಂಬಂಧಪಟ್ಟ ವ್ಯಕ್ತಿಗಳ ಗುಪ್ತ ಚಲನೆಗಳಿರುತ್ತವೆ. ರಹಸ್ಯವಿರುತ್ತದೆ. ಆದರೆ ರಹಸ್ಯ ತಿಳಿಯದ ಸಮಾಜ ಅದನ್ನು ಅನೈತಿಕವೆಂದೇ ಪರಿಗಣಿಸುತ್ತದೆ. 'ಕುಸುಮಬಾಲೆ' ಕಾದಂಬರಿಯಲ್ಲಿ ಅಕ್ಕಮಹಾದೇವಿ ಹಾಗೂ ಕುಸುಮರ ಲೈಂಗಿಕ ಸಂಬಂಧ ಹಾಗೂ ಸಂತಾನಗಳ ಹಿಂದೆ ಈ ಬಗೆಯ ಗುಪ್ತಸಂಬಂಧಗಳು ಹಾಗೂ ಗುಪ್ತ ಓಡಾಟಗಳು ಕೆಲಸ ಮಾಡಿವೆ. ಗಿರೀಶ ಕಾರ್ನಾಡರ 'ನಾಗಮಂಡಲ' ಚಂದ್ರಶೇಖರ ಕಂಬಾರರ 'ಸಂಗ್ಯಾ-ಬಾಳ್ಯ' ಪು.ತಿ.ನ ಅವರ 'ಅಹಲ್ಯೆ' ನಾಟಕದ ಹಿಂದೆ ಕೂಡ ಇಂತಹ ನೈತಿಕತೆ, ಗುಪ್ತಪ್ರಣಯ ಹಾಗೂ ಪಯಣಗಳ ಆಂತರಿಕ ಸಂಬಂಧಗಳು ಕೆಲಸ ಮಾಡಿವೆ.

'ಚಿಕವೀರ ರಾಜೇಂದ್ರ' ಕೃತಿಯಲ್ಲಿ ಕಾಣಿಸಿಕೊಳ್ಳುವ ಚೋಮ ಚೆನ್ನಬಸವಯ್ಯನ ಸೇವಕ. ಬಸವನೊಂದಿಗೆ ದೇವಮ್ಮಾಜಿ ಮತ್ತು ಮಗುವನ್ನು ಸಾಗಿಸುವ ಜವಾಬ್ದಾರಿ ವಹಿಸಿಕೊಳ್ಳುತ್ತಾನೆ. ರಾತ್ರಿಯಲ್ಲಿ ಕದ್ದು ಹೋಗುವಾಗ ಬಿದ್ದು ಹೋದ ಮಗುವಿಗಾಗಿ ಹುಡುಕುತ್ತಾ ಚೋಮ ಚಿಕವೀರ ರಾಜೇಂದ್ರನಿಗೆ ಸೆರೆಯಾಗಿ ಶೂಲಕ್ಕೆ ಏರುವ ಸಂದರ್ಭದಲ್ಲಿ ಹೀಗೆ ದೇವರಲ್ಲಿ ಬೇಡಿಕೊಳ್ಳುತ್ತಾನೆ: "ಚೋಮ, ಕರಿಂಗಾಳಿ, ನನ್ನ ತಾಯಿ, ನಿನ್ನ ಕರುತ ಇಂತಿತ್ತು. ಒಡೆಯನ ಒಡತೀನ ಕಾಯಿಕೋ ಅವ್ವ; ಅವರ ಮೊಗಾನ ಕಾಯಿಕೋ" ಎಂದು ಹೇಳುತ್ತಾನೆ(ಪು.೨೯೮). ಅವನ ಸಾವಿನ ಚಿತ್ರಣವನ್ನು

ಕಾದಂಬರಿ ಎದೆಕಲಕುವಂತೆ ಚಿತ್ರಿಸುತ್ತದೆ. ಈ ಪ್ರಸಂಗದಲ್ಲಿ ತಮ್ಮ ಜೀವದ ರಕ್ಷಣೆಗಾಗಿ ಮಗುವಿನ ತಂದೆತಾಯಿಗಳು ಅಡಗಿಕೊಂಡು ಓಡುತ್ತ ಮಾಡುವ ಪ್ರಯಾಣಗಳಿವೆ. ಆದರೆ ತಮ್ಮ ಒಡೆಯರ ಮಗುವಿನ ರಕ್ಷಣೆಗಾಗಿ ಒಬ್ಬ ಮನೆಯಾಳು ಸಾವಿನ ಸಂಕೇತವಾಗಿರುವ ಚಿಕವೀರ ರಾಜೇಂದ್ರನ ಬಳಿಗೆ ದಿಟ್ಟವಾಗಿ ಮಾಡುವ ಪಯಣವಿದೆ. ಆಳುವ ವರ್ಗಗಳು ತಮ್ಮ ರಕ್ಷಣೆಗಾಗಿ ಕೆಳವರ್ಗಗಳನ್ನು ಬಲಿಕೊಡುತ್ತವೆ. ಕೆಳವರ್ಗಗಳು ತಮ್ಮ ಆಳುವ ಧಣಿಗಳಿಗಾಗಿ ಪ್ರಾಣಬಿಡುತ್ತವೆ. ಈ ಸಾವಿನ ಸುತ್ತಮುತ್ತ ನಡೆಯುವ ಪಯಣಗಳನ್ನು ಕಾದಂಬರಿ ಚಿತ್ರಿಸುತ್ತದೆ. ಚೋಮ ಪಯಣದಲ್ಲಿ ಸಿಕ್ಕಿಬಿದ್ದಾಗಲೂ ತನ್ನ ಒಡೆಯನ ಕುಟುಂಬದ ರಕ್ಷಣೆಗಾಗಿ ಪ್ರಾರ್ಥಿಸುವ ಸನ್ನಿವೇಶ ವಿಶಿಷ್ಟವಾದುದು. ಅವನ ನೈತಿಕ ವ್ಯಕ್ತಿತ್ವ ದೊಡ್ಡದಾಗಿ ಕಾಣುತ್ತದೆ. ಹೀಗೆ ಪಯಣವು ಅನೇಕರ ನೈತಿಕ ವ್ಯಕ್ತಿತ್ವದ ಶಕ್ತಿ ಮತ್ತು ಮಿತಿಗಳನ್ನು ಬಯಲುಗೊಳಿಸುವ ಕೆಲಸ ಮಾಡುತ್ತದೆ.

ಚಿಕವೀರ ರಾಜೇಂದ್ರನ ವಿಕೃತ ಮನಸ್ಥಿತಿಗೆ ಸಾಕ್ಷಿಯಾಗಿ ಈ ಚಲನೆ ಕಂಡುಬರುತ್ತದೆ. "ಅರಸ ತೊಟ್ಟಿಲ ಬಳಿ ನಿಂತನು. ಮಗುವನ್ನು ನಿಟ್ಟಿಸಿ ನೋಡಿದನು. ಸುರಗಿಯನ್ನು ಹೊರಕ್ಕೆ ತೆಗೆದು ಮಗುವಿನ ಕೊರಳಿಗೆ ಇಕ್ಕಿ ಜೌಕಿದನು. ನಿದ್ದೆ ಕೆಟ್ಟು ಸ್ವಲ್ಪ ಅಲಗುವಂತೆ ಮಾಡಿ ಮಗು ನಿಶ್ಚೇಷ್ಟವಾಯಿತು. ಜೌಕಿದ ಕತ್ತಿಯನ್ನು ಮಗುವಿನ ಕೊರಳಲ್ಲೇ ಬಿಟ್ಟು ಅರಸ ನಿಶ್ಯಬ್ದವಾಗಿಯೇ ರಾಣಿವಾಸದಿಂದ ಹೊರಬಿದ್ದು ತನ್ನ ಸಜ್ಜೆಗೆ ಬಂದನು"(ಪು.೩೨೪). ಚಿಕವೀರ ರಾಜೇಂದ್ರನಿಗೆ ತಂಗಿಯ ಮೇಲಿನ ಮತ್ಸರ, ಅಧಿಕಾರ ಗದ್ದುಗೆಯಲ್ಲಿ ಮಗಳು ಕೂರಬೇಕೆಂಬ ಇಚ್ಛೆಯಿಂದ ದೇವಮ್ಮಾಜಿಯ ಮಗುವನ್ನು ನಿರ್ದಯವಾಗಿ ಕೊಲ್ಲುತ್ತಾನೆ. ರಾತ್ರೀ ಇಡಿ ನಿದ್ದೆ ಬರದೇ ರಾಜ ಅಲಗಿನಲ್ಲಿ ಮಗುವನ್ನು ಕೊಲ್ಲುವ ಯತ್ನ ರಾಜನ ವಿಕೃತ ಮನಸ್ಸನ್ನು ಚಿತ್ರಿಸುತ್ತದೆ. ಮಾನವೀಯ ನೈತಿಕ ನೆಲೆಯಿಂದ ಕೆಳಗೆ ಇಳಿಯುತ್ತಿರುವ ರಾಜ ಒಂದೆಡೆಯಿದ್ದರೆ, ಮತ್ತೊಂದೆಡೆ ಈ ಸಾವು ಮುಂದೆ ಮಡಿಕೇರಿ ಪ್ರಾಂತ್ಯವನ್ನೇ ಬ್ರಿಟಿಷರ ಕೈಗೆ ಹೋಗುವಂತೆ ಮಾಡುತ್ತದೆ. ಇದೇ ರೀತಿ 'ಮಹಾಭಾರತ' ದಲ್ಲೂ ಕಂಸ ತನ್ನ ತಂಗಿ ದೇವಕಿಯ ಮಗುವನ್ನು ಕೊಲ್ಲುವ ಪ್ರಸಂಗವಿದೆ. ರಾಜಪ್ರಭುತ್ವದಲ್ಲಿ ನಡೆಯುವ ಅಮಾಯಕರ ಕೊಲೆಗಳ ಹಿಂದೆ ಅನೈತಿಕ ಪತನಗಳು ಇವೆ. ಅವು ಅನೇಕ ಪರಿಯ ಪಯಣಗಳಿಗೆ ಪ್ರೇರಣೆ ಕೊಡುತ್ತವೆ.

ಚಿಕವೀರ ರಾಜೇಂದ್ರನ ಮಂತ್ರಿಯಾದ ಬಸವ ರಾಜನಿಗೆ ತಪ್ಪಿಸಿಕೊಂಡು ಪಯಣ ಬೆಳೆಸಲು ಸಹಾಯ ಮಾಡುತ್ತಾನೆ. ಮುಂದೆ ಆ ಸಹಾಯವನ್ನೇ ತಪ್ಪಾಗಿ ಗ್ರಹಿಸಿ ರಾಜನಿಂದ ಬಸವ ಸಾಯುವ ಪ್ರಸಂಗವಿದೆ. ಈಗಾಗಲೇ ಹಲವಾರು ಅಮಾಯಕರ ಪ್ರಾಣ ರಾಜನ ಕೈಲಿ ಬಲಿಯಾಗಿವೆ. ಆದರೆ ರಾಜನಿಗಾಗಿ ನಿಷ್ಠೆಯಿಂದ ಸೇವೆ ಸಲ್ಲಿಸಿದ, ರಾಜನ ರಕ್ಷಣೆಗಾಗಿ ಸುರಂಗ ದಾರಿಯಲ್ಲಿ ಸಾಗಲು ವ್ಯವಸ್ಥೆ ಮಾಡಿದ ಬಸವ ಕೊನೆಗೆ ರಾಜ ಶರಣಾಗುವ ಸನ್ನಿವೇಶದಲ್ಲಿ, ರಾಜನ ತಪ್ಪಾದ ಗ್ರಹಿಕೆಯಿಂದ ಸಾವಿಗೆ ಈಡಾಗುತ್ತಾನೆ. ಈ ವೇಳೆಗೆ ರಾಜನ ಮನಸ್ಥಿತಿ ವಿಕೃತ ಸ್ಥಿತಿಗೆ ತಲುಪಿರುತ್ತದೆ.

ರಾಜನೊಬ್ಬ ಜನಪರವಾಗಿ ಆಡಳಿತ ಮಾಡದೆ, ಸ್ವಹಿತಕ್ಕಾಗಿ ಅಧಿಕಾರ ಬಳಸಿದರೆ, ಅವನ ಬದುಕು ಕೊನೆಯಲ್ಲಿ ನೈತಿಕವಾಗಿ ನಾಶವಾಗುತ್ತದೆ ಎಂಬುದನ್ನು ಕಾದಂಬರಿ ಸೂಚಿಸುತ್ತದೆ. ನೈತಿಕ ಪತನವು ವ್ಯಕ್ತಿಯ ನಾಶಕ್ಕೆ ಮಾತ್ರವಲ್ಲ, ರಾಜ್ಯದ ಪತನಕ್ಕೂ ಕಾರಣವಾಗುತ್ತದೆ. 'ಚಿಕವೀರ ರಾಜೇಂದ್ರ' ಮೇಲುನೋಟಕ್ಕೆ ಕೊಡಗಿನ ಅರಸುವಿನ ಕಥೆಯಂತೆ ಕಂಡರೂ, ಆಳದಲ್ಲಿ ಅದು ಪ್ರಾಯ, ಶ್ರೀಮಂತಿಕೆ, ಅಧಿಕಾರದಿಂದ ಹಾಳಾಗಿ, ಮನೆತನವನ್ನು ನಾಶಮಾಡುವ ಅಧಿಕಾರಸ್ಥರ ಕಥೆಯೂ ಆಗಿದೆ.

ಬಾಳಿನಲ್ಲಿ ವ್ಯಕ್ತಿಯ ಪತನ ಮತ್ತು ಉನ್ನತಿಕೆಗಳ ಚಲನೆಯನ್ನು ಮಾನಸಿಕ ಪಯಣವೆಂದು ಕರೆಯುವುದಾದರೆ, ಬಸವ, ಚಿಕವೀರನದು ಇಳಿಕೆಯ ಪಯಣ. ಮಾಸ್ತಿಯವರ ಪ್ರಕಾರ ವ್ಯಕ್ತಿ, ಕುಟುಂಬ, ದೇಶ ತನ್ನ ಅತ್ಯುತ್ತಮ ಸ್ಥಿತಿಯಿಂದ ಅಧಃಪತನಕ್ಕೆ ಸಾಗುತ್ತದೆ. ಡಿ.ಆರ್.ನಾಗರಾಜ್‌ರ 'ಸಾಹಿತ್ಯ ಕಥನ' ಕೃತಿಯಲ್ಲಿ 'ಮಾಸ್ತಿಯವರ ಕಾದಂಬರಿಗಳಲ್ಲಿ ಕೇಡಿನ ಪರಿಕಲ್ಪನೆ' ಎಂಬ ಲೇಖನದಲ್ಲಿ "ಕೇಡೆ ಪತನಕ್ಕೆ ಮೂಲ" ಎಂದು ಕರೆದಿದ್ದಾರೆ.[೫] ಚಿಕವೀರ ರಾಜೇಂದ್ರನ ಮೂಲಕ ಒಳಿತು ಮತ್ತು ಕೇಡಿನ ನೆಲೆಗಳನ್ನು ಶೋಧಿಸುತ್ತಲೇ ನೈತಿಕಪತನಕ್ಕೆ ಚಿಕವೀರ ಇಳಿದ ಬಗೆಯನ್ನು ನಾಗರಾಜ್ ಡಿ.ಆರ್ ಗುರುತಿಸಿದ್ದಾರೆ. ಪಯಣದಲ್ಲಿ ವ್ಯಕ್ತಿಯ, ಕುಟುಂಬದ, ದೇಶದ ಪತನವೆಂಬುದರಲ್ಲಿ ಕೇಡು ಕೆಲಸ ಮಾಡುತ್ತದೆ. ಪತನದ ಪಯಣದ ಹಿಂದೆ ಕೆಲಸ ಮಾಡಿರುವುದು ವ್ಯಕ್ತಿಯ ಅನೈತಿಕತೆ. ನೈತಿಕ ಮೌಲ್ಯಗಳ ಪತನವೇ ಒಬ್ಬ ವ್ಯಕ್ತಿಯ, ಕುಟುಂಬದ, ದೇಶದ ದುರ್ಗತಿಯ ಪಯಣಕ್ಕೆ ಕಾರಣವಾಗಿದೆ. ವ್ಯಕ್ತಿಯ ಬದುಕಿನ ಪಯಣಕ್ಕೆ ಸಂಬಂಧಿಸಿದಂತೆ ಇರುವ ಮುಖ್ಯ ಧೋರಣೆಗಳಲ್ಲಿರುವ ವ್ಯತ್ಯಾಸ. ಕುವೆಂಪುರವರಿಗೆ ಮೇಲ್ಮುಖ ಚಲನೆಯ ಮೂಲಕ ವಿಕಾಸಾತ್ಮಕ ಪ್ರಕ್ರಿಯೆಯನ್ನು ಕೃತಿಗಳಲ್ಲಿ ತಂದರೆ, ಮಾಸ್ತಿಯವರು ಪತನದ ಚಲನೆಯ ಮೂಲಕ ಸಾಗುವ ವಿವರಗಳನ್ನು ಕೊಡುತ್ತಾರೆ. 'ಚಿಕವೀರ ರಾಜೇಂದ್ರ'ದಲ್ಲಿ ಬರುವ ಕುಂಟಬಸವನ ಅವಸ್ಥೆಗೆ ಕಾರಣವಾಗಿರುವುದು, ಭಗವತಿಯ ಮೇಲ್ಮುಖ ಚಲನೆ. ಹೀಗೆ ಹಲವು ನೆಲೆಗಳಲ್ಲಿ ಅಧಿಕಾರದ ಚಲನೆಗಳು ಕೆಲಸ ಮಾಡಿರುವುದನ್ನು ಅವರ ಎರಡು ಕೃತಿಗಳಲ್ಲೂ ಗಮನಿಸಬಹುದು. ಮೈಸೂರಿನ ರೆಸಿಡೆಂಟರು ಮಡಿಕೇರಿಗೆ ಪಯಣ ಬೆಳೆಸಿ ಬಂದಾಗ ಅವರ ಗೌರವಾರ್ಥ ನಡೆದ ವಿವಿಧ ವಿನೋದಾವಳಿಗಳಲ್ಲಿ ಸೂಕ್ಷ್ಮವಾಗಿ ಸೂಚ್ಯವಾಗಿದ್ದ ವಿರೋಧ, ಅಸಮಾಧಾನ ಚೋಮನನ್ನು ಶೂಲಕ್ಕೇರಿಸಿದ ಮೇಲೆ ಬಹಿರಂಗವಾದದ್ದನ್ನು ಚಿತ್ರಿಸುವಾಗ ಮಾಸ್ತಿಯವರು ಚಿಕವೀರ ರಾಜೇಂದ್ರನ ಪ್ರಭುತ್ವ ಹೇಗೆ ಒಳಗಿನಿಂದಲೇ ತನ್ನ ಪಾಪದ ಭಾರಕ್ಕೆ ತಾನೇ ಕುಸಿಯುತ್ತಿತ್ತು ಎಂಬುದನ್ನು ಧ್ವನಿಸುತ್ತಾರೆ. ಹೀಗೆ ಮಾಸ್ತಿಯವರ ಕಾದಂಬರಿಗಳು ವಿವಿಧ ವ್ಯಕ್ತಿಗಳು ತಮ್ಮ ಜೀವನದಲ್ಲಿ ಮಾಡುವ ಕೃತ್ಯಗಳಿಂದಲೇ ನೈತಿಕವಾಗಿ ಮೇಲ್ಮುಖ ಇಲ್ಲವೇ ಕೆಳಮುಖವಾದ ಪಯಣಗಳನ್ನು ಮಾಡುತ್ತ ತಮ್ಮ ಅವಸ್ಥೆಯನ್ನು ಪಡೆಯುತ್ತಾರೆ ಎಂಬುದನ್ನು ಶೋಧಿಸುತ್ತವೆ.

೫.೫. ಪಯಣ: ಸಂಸ್ಕೃತಿ

ಸಂಸ್ಕೃತಿ ಎಂದರೆ ಶುದ್ಧೀಕರಿಸುವಿಕೆ, ಸಂಸ್ಕಾರದಿಂದ ಸಂಸ್ಕೃತಿ ಬಂದಿದೆ ಎಂಬರ್ಥ ಜನಪ್ರಿಯವೂ ವ್ಯಾಪಕವೂ ಆಗಿದೆ. ವ್ಯಕ್ತಿಯ ಜೀವನದ ವಿಕಾಸಕ್ಕೆ ಕಾರಣವಾದ ಸಾಮರಸ್ಯದ, ಅಂತರಂಗದ ಸಾಧನೆಗೆ ಸಹಕಾರಿಯಾದ ಸಾಮಗ್ರಿಗಳು ಎಂಬ ಅರ್ಥ ಹೊಂದಿದೆ. ಸಾವಿರಾರು ವರ್ಷಗಳ ನಡವಳಿಕೆ ಮತ್ತು ತಿಳುವಳಿಕೆಯ ಫಲವಾಗಿ ಸಮಾಜಕ್ಕೆ ಕೂಡಿ ಬರುವ ಸಂಸ್ಕಾರ ವಿಶೇಷವನ್ನು ಸಂಸ್ಕೃತಿ ಎಂದು ಕರೆಯುವ ಪದ್ಧತಿಯೂ ಇದೆ. ಇದನ್ನು ಮೌಲ್ಯಾದರ್ಶಗಳ ಸಂಸ್ಕೃತಿ ವ್ಯಾಖ್ಯೆ ಎಂದು ಕರೆಯಬಹುದು. ಆದರೆ ಸಂಸ್ಕೃತಿಗೆ ಒಂದು ಸಮುದಾಯದ ಇಲ್ಲವೇ ಪ್ರದೇಶದ ಆಚಾರ ವಿಚಾರಗಳನ್ನು ಕೂಡ ಸಂಸ್ಕೃತಿ ಎಂದು ಕರೆಯುವ ಇನ್ನೊಂದು ಅರ್ಥವೂ ಇದೆ. ಇದನ್ನು ಸಮುದಾಯ ಕೇಂದ್ರಿತ ಸಂಸ್ಕೃತಿ ವ್ಯಾಖ್ಯೆ ಎನ್ನಬಹುದು. ಮಾಸ್ತಿಯವರು ಮೊದಲನೆಯ ವ್ಯಾಖ್ಯೆಯನ್ನು ಒಪ್ಪಿಕೊಂಡವರು. ಈ ಹಿನ್ನೆಲೆಯಲ್ಲಿ 'ಚೆನ್ನಬಸವ ನಾಯಕ', 'ಚಿಕವೀರ ರಾಜೇಂದ್ರ' ಈ ಎರಡು ಕಾದಂಬರಿಗಳಲ್ಲಿ ಪಯಣ ಮತ್ತು ಸಂಸ್ಕೃತಿಗೆ ಇರುವ ಅಂತರ್‌ಸಂಬಂಧವನ್ನು ತಿಳಿಯುವ ಯತ್ನವನ್ನಿಲ್ಲಿ ಮಾಡಬಹುದು.

ಮಾಸ್ತಿಯವರ ದೃಷ್ಟಿಕೋನ ಸಾಮಾಜಿಕವಾದದ್ದು; ಸಮಾಜ ಕ್ಷೇಮದ ಹಂಬಲ, ಕಾತರ ಉಳ್ಳದ್ದು. ಹಾಗೆಂದು ಅದು ಸಮಾಜದ ಮೂಲಭೂತ ಪರಿವರ್ತನೆಯನ್ನು, ಕ್ರಾಂತಿಕಾರಿ ಬದಲಾವಣೆಯನ್ನು ತತ್ವ ಅಥವಾ ವಿಚಾರವಾದದ ನೆಲೆಯಲ್ಲಿ ಪ್ರತಿಪಾದಿಸುವಂತಹ ದೃಷ್ಟಿಯಲ್ಲ. ಅದು ವಸ್ತು ಸ್ಥಿತಿವಾದಿಯ ನಿಲುವಿನಲ್ಲಿಯೇ ಸಮಾಜವನ್ನು ಒಪ್ಪಿಕೊಂಡು ಅದರ ಧಾರ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಸ್ವೀಕರಿಸಿ ಅವುಗಳ ಉದಾತ್ತ ಸಾಧ್ಯತೆಗಳನ್ನು ವ್ಯಕ್ತಿಗಳ ಜೀವನ ಸಂದರ್ಭದಲ್ಲಿ ಕಂಡುಕೊಳ್ಳಬೇಕೆನ್ನುವ, ಆ ಮೂಲಕವೇ ಸಮೂಹದ ಒಳಿತನ್ನು ಬೆಳೆಸಬೇಕೆನ್ನುವ ಚಿಂತನ ದೃಷ್ಟಿ ಅವರದು. ಇದು ಮಾಸ್ತಿಯವರು ಬದುಕಿನ ಪಯಣದ ದಾರಿಯನ್ನು ನಿರ್ದೇಶಿಸುವ ಆಶಯ ಪ್ರಧಾನವಾದ ದೃಷ್ಟಿಕೋನ. ಅದರಲ್ಲೂ ಅವರ ಕಾದಂಬರಿಗಳಲ್ಲಿ ಬರುವ ಸ್ತ್ರೀಪಾತ್ರಗಳ ಚೌಕಟ್ಟು ಸಾಂಪ್ರದಾಯಿಕ ಭಾರತೀಯ ಸಮಾಜದ್ದಾಗಿದ್ದು, ಅಲ್ಲಿ ಅವರನ್ನು ಮಾಸ್ತಿ ಸಂಸ್ಕೃತಿ–ಕುಟುಂಬ ಮೌಲ್ಯಗಳ ಪ್ರತೀಕವಾಗಿ ಕಂಡಿದ್ದಾರೆ. ಸ್ತ್ರೀಯರನ್ನು ಆದರ್ಶದ ನೆಲೆಯ ಚೌಕಟ್ಟಿನಲ್ಲಿ ಇಟ್ಟು ನೋಡುವ ಮಾಸ್ತಿ, ಇತರೆ ಕಾದಂಬರಿಕಾರರಿಗಿಂತ ಭಿನ್ನವಾಗಿ ಕಾಣುತ್ತಾರೆ. ಶಾಂತವ್ವೆ ದೇವಮ್ಮಾಜಿ, ಗೌರಮ್ಮಾಜಿ, ಮೈಸೂರಿನ ರಾಜಮಾತೆ ಮುಂತಾದ ಪಾತ್ರಗಳು ಇದಕ್ಕೆ ನಿದರ್ಶನ. ಅವರು ಆಲೋಚಿಸುವ ರೀತಿಯಲ್ಲಿ, ವರ್ತಿಸುವ ವಿಧಾನದಲ್ಲಿ, ಜೀವನದ ಬಿಕ್ಕಟ್ಟುಗಳನ್ನು ಎದುರಿಸುವ ಬಗೆಯಲ್ಲಿ ಈ ಭಾರತೀಯ ಸಂಸ್ಕೃತಿ ಎಂದು ಮಾಸ್ತಿ ಗ್ರಹಿಸಿರುವ ಆದರ್ಶಗಳು ಕಾಣುತ್ತವೆ. ನಿದರ್ಶನಕ್ಕೆ 'ಚೆನ್ನಬಸವ ನಾಯಕ' ಕೃತಿಯಲ್ಲಿ ಬರುವ ಶಾಂತವ್ವೆ ಮತ್ತು ಮೈಸೂರಿನ ರಾಜಮಾತೆಯ ನಡುವಿನ ಪ್ರಸಂಗವನ್ನು ಗಮನಿಸಬಹುದು. ಇದರಲ್ಲಿ ರಾಜಮಾತೆಯು ಶಾಂತವ್ವೆಗೆ ಮಾಡುವ ಉಪದೇಶವು ಹೀಗಿದೆ: "ನಾಯಕರು ಇನ್ನೂ ಕಿರಿಯರು, ಅಂಥ ತೊಂದರೆ ಏನೂ ಆಗಿರಲಾರದು.

ಅಲ್ಲದೆ ನೀನು ಮುದ್ದುಗಾರ ಅರಗಿಳಿ ಹಾಗಿದ್ದೀಯ! ನಿನ್ನ ನೋಡಿದರೆ ಹೆಣ್ಣಿಗೂ ಆಶೆ ಆಗತದೆ; ಗಂಡು ಮರುಳಾಗದೆ ಬಿಟ್ಟೀತೆ? ಯಜಮಾನನನ್ನು ಒಪ್ಪವಾಗಿ ನೋಡಿಕೊ ತಾಯಿ. ಅಂಟಿ ಬಾಳಬೇಕು; ಹೆಮ್ಮೆ ಬೇಡ: ಹಾಲು ಸಕ್ಕರೇನ ಕರಗಿಸಿಕೊಳ್ಳೊ ಹಾಗೆ ಗಂಡನ ಮನಸ್ಸು ಕರಗಿಸಿ ಕೊಳ್ಳಬೇಕು"(ಪು.೧೮೯). ಇಲ್ಲಿ ಮಾಸ್ತಿಯವರು ಸಾಂಪ್ರದಾಯಿಕ ಕೌಟುಂಬಿಕ ಸಾಂಸ್ಕೃತಿಕ ಚೌಕಟ್ಟಿನ ನೆಲೆಯಲ್ಲಿಯೇ, ಸ್ತ್ರೀಯ ಪಾತ್ರವನ್ನು ಚಿತ್ರಿಸುತ್ತಾರೆ. ಆಕೆ ಗಂಡನೊಂದಿಗೆ ಜೀವನ ನಡೆಸಬೇಕಾದ ಬಗೆಯನ್ನು ಹಿರಿಯ ಮಹಿಳಾ ಪಾತ್ರಗಳ ಮೂಲಕ ಹೇಳಿಸುತ್ತಾರೆ. ಮಹಿಳೆಯೇ ಮಹಿಳೆಯರ ಅತ್ಯುತ್ತಮ ಜೀವನ ವಿಧಾನದ ಬಗ್ಗೆ ಒಳಿತು ಕೆಡಕಿನ ಬಗ್ಗೆ ತಿಳಿಸುವುದು ಇಲ್ಲಿ ಮುಖ್ಯವಾಗಿದೆ. ಈ ಮೂಲಕ ಹಿರಿಯ ಮತ್ತು ಕಿರಿಯರ ನಡುವಿನ ಸಾಂಸ್ಕೃತಿಕ ಕೊಂಡಿಯಾಗಿ ಜೀವನ ವಿಧಾನವು ಚಲನಶೀಲಗೊಳ್ಳುವುದು ಕಂಡುಬರುತ್ತದೆ. ಮಾಸ್ತಿಯವರ 'ಹೇಮಕೂಟದಿಂದ ಬಂದ ಮೇಲೆ' ಮತ್ತು 'ವೆಂಕಟಿಗನ ಹೆಂಡತಿ' ಕಥೆಯಲ್ಲಿಯೂ ಕೊನೆಗೆ ಹೆಂಡತಿ ಗಂಡನೊಂದಿಗೆ ಕೂಡಿ ಬಾಳುವ ಆದರ್ಶಗಳು ಮುಖ್ಯವಾಗಿವೆ. ಈ ಕತೆಗಳಲ್ಲಿ ಜೀವನದ ಆದರ್ಶಗಳು ಮಹಿಳೆಗೆ ಬೋಧನೆಯಾಗುವ ಸನ್ನಿವೇಶಗಳು ಪಯಣದ ಜತೆ ಜೋಡಣೆಗೊಂಡಿವೆ ಎನ್ನುವುದು ಗಮನಾರ್ಹ. ಒಂದು ಕತೆಯಲ್ಲಿ ಮಹಿಳೆಯು ತನ್ನ ದೀರ್ಘಕಾಲದ ತಿರುಗಾಟದಿಂದ ಮರಳಿ ಗಂಡನ ಬಳಿಗೆ ಬಂದ ಬಳಿಕ ಉಪದೇಶಕ್ಕೆ ಒಳಗಾದರೆ, ಇನ್ನೊಂದು ಕತೆಯಲ್ಲಿ ದೀರ್ಘ ಪಯಣ ಮಾಡಿ ತನ್ನ ಗಂಡನ ಮನೆಗೆ ಹೋಗುವ ಸಂದರ್ಭದಲ್ಲಿ ಉಪದೇಶಕ್ಕೆ ಒಳಗಾಗುವಳು.

'ಚೆನ್ನಬಸವ ನಾಯಕ' ಕೃತಿಯಲ್ಲಿ ರಾಜಮಾತೆ ಮತ್ತು ಶಾಂತವ್ವೆ ನಡುವಿನ ದಾಂಪತ್ಯ ಕುರಿತ ಸಲಹೆಗಳಿದ್ದರೆ, 'ಚಿಕವೀರ ರಾಜೇಂದ್ರ'ದಲ್ಲಿ ಗೌರಮ್ಮಳಿಗೆ ಮಾವ ಹೇಳುವ ಜೀವನಾದರ್ಶದ ಮಾತುಗಳಿವೆ. ಹೆಣ್ಣು ಹೆಣ್ಣಿಗೆ ಹೇಳುವ ಆದರ್ಶದ ಹಿತವಚನಕ್ಕೂ ಗಂಡು ಹೆಣ್ಣಿಗೆ ಮಾಡುವ ಹಿತವಚನಕ್ಕೂ ಬಹಳ ವ್ಯತ್ಯಾಸಗಳಿವೆ. ವಿಶಿಷ್ಟವೆಂದರೆ ಈ ಎರಡೂ ಹಿತವಚನಗಳ ಹಿಂದೆ ಪಯಣವು ಒಂದು ಅಂತಃಶಕ್ತಿಯಾಗಿ ಕೆಲಸ ಮಾಡಿರುವುದು. ಗೌರಮ್ಮಳ ಮಾವ ಹುಡುಕಾಟ ನಡೆಸಿ ಮದುವೆ ಮಾಡಿಕೊಂಡ ಸೊಸೆಯ ಕುರಿತು ಹೇಳುವ ಮಾತಿದು: "ನೀನು ಮನೆಯ ಲಕ್ಷ್ಮಿ ಆಗಬೇಕೆಂದು ನಾನೇ ನಿನ್ನನ್ನು ಹುಡುಕಿ ಕರೆತಂದಿದ್ದೇನೆ. ನಿನ್ನ ಗಂಡನಿಗೆ ಬುದ್ಧಿ ಇಲ್ಲ. ಇಬ್ಬರಿಗಿರಬೇಕಾದ ಬುದ್ಧಿಯನ್ನು ನೀನೊಬ್ಬಳೇ ತೋರಿಸಬೇಕು. ನೀನು ಬದುಕಬೇಕು ಅವನನ್ನು ಬದುಕಿಸಿ ಕೊಳ್ಳಬೇಕು"(ಪು.೪೭). ಈ ಹಿಂದೆ ಹೇಳಿದಂತೆ ಎರಡು ಹೇಳಿಕೆಗಳಲ್ಲಿ ಸಾಮ್ಯತೆ ಕಂಡುಬಂದರೂ ಹೇಳಿಕೆಯಲ್ಲಿನ ತೀವ್ರತೆಗಳಲ್ಲಿ ವ್ಯತ್ಯಾಸವಿದೆ. ಚಿಕವೀರರಾಜ ಕುಡಿತಕ್ಕೆ ಮತ್ತು ಸ್ತ್ರೀ ವ್ಯಾಮೋಹಕ್ಕೆ ಬಲಿಯಾಗಿ ರಾಜ್ಯವನ್ನು ಪತನದೆಡೆಗೆ ತಳ್ಳದಂತೆ ತಡೆಯುವುದು ಇಲ್ಲಿ ಮುಖ್ಯವಾಗಿದೆ. ಹಾಗಾಗಿಯೇ ಗೌರಮ್ಮಳನ್ನು ಲಕ್ಷ್ಮಿಗೆ ಹೋಲಿಸಿ ಆಕೆ ರಾಜ್ಯವನ್ನು ರಕ್ಷಿಸುವ ಜೊತೆಗೆ ತನ್ನ ಗಂಡನನ್ನು ರಕ್ಷಿಸಿಕೊಳ್ಳಬೇಕೆಂಬ ಧ್ವನಿ ಇಲ್ಲಿದೆ. ಗಂಡ ಹಾದಿ ತಪ್ಪಿದರೂ ಹೆಣ್ಣಾದವಳು ಹೊಂದಾಣಿಕೆ ಮಾಡಿಕೊಂಡು ಜೀವನದಲ್ಲಿ ಬೆಳವಣಿಗೆಯನ್ನು ಹೊಂದಬೇಕೆಂಬ ಆಶಯ

ಮಾಸ್ತಿಯವರ ಕೃತಿಯಲ್ಲಿದೆ. ಹೆಣ್ಣಿನ ಸ್ವಾತಂತ್ರ್ಯಕ್ಕಿಂತ ಹೊಣೆಗಾರಿಕೆಯನ್ನು ಕುರಿತು ಚಿಂತಿಸುವ, ಗಂಡಿನ ಚಲನೆಯ ಮುಕ್ತತೆಗೆ ಅವಕಾಶ ನೀಡಿರುವ ಪುರುಷವಾರು ಕೌಟುಂಬಿಕ ರಾಜಕಾರಣ ಇಲ್ಲಿ ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ಮಾಸ್ತಿಯವರು ಮಹಿಳೆಯನ್ನು ಸಂಸ್ಕೃತಿ ರಕ್ಷಣೆಯ ಸಂಕೇತವಾಗಿ, ಕುಟುಂಬದ ರಕ್ಷಕಿಯಾಗಿ ಕಂಡಿರುವುದು ವಿಶಿಷ್ಟವಾಗಿದೆ. ಹೆಣ್ಣಿನ ಮೇಲೆ ಹೊರೆಸಲಾಗಿರುವ ಈ ಬಗೆಯ ಹೊಣೆಗಾರಿಕೆಗಳೇ ಆಕೆ ಮನೆಬಿಟ್ಟು ಹೊರಗೆ ಚಲಿಸುವ ಇಲ್ಲವೇ ಚಲಿಸದಿರುವ ಒತ್ತಡಗಳನ್ನು ಸೃಷ್ಟಿಸುತ್ತವೆ. ಗೌರಮ್ಮ ಮತ್ತು ಶಾಂತವ್ವೆ ಇಬ್ಬರೂ ತಮ್ಮ ಕುಟುಂಬ ಮತ್ತು ರಾಜ್ಯ ರಕ್ಷಣೆಗೆ ಪಯಣ ಮಾಡುವ ಸನ್ನಿವೇಶಗಳು ಮಾಸ್ತಿಯವರ ಎರಡೂ ಕಾದಂಬರಿಗಳಲ್ಲಿವೆ.

ಗಂಡು-ಹೆಣ್ಣಿನ ಸಂಬಂಧಗಳ ಸನ್ನಿವೇಶದಲ್ಲಿ ಸಂಸ್ಕೃತಿಯ ರಕ್ಷಣೆಯ ಸಂಗತಿ ಬಂದಂತೆ, ದೇಶೀಯರು ಹಾಗೂ ವಿದೇಶಿಯರ ನಡುವಣ ಸಂಘರ್ಷದಲ್ಲಿಯೂ ಸಂಸ್ಕೃತಿ ರಕ್ಷಣೆಯ ಸಂಗತಿ ಬರುತ್ತದೆ. ಈ ಹಿನ್ನೆಲೆಯಲ್ಲಿ 'ಚಿಕವೀರ ರಾಜೇಂದ್ರ' ಕೃತಿಯಲ್ಲಿ ದೀಕ್ಷಿತ ಮತ್ತು ಭಗವತಿಯರ ಮೂಲಕ, ಮೇಗ್‌ಲಿಂಗ್ ಪಾದ್ರಿಯ ಆಕ್ರಮಣಕ್ಕೆ ಎದುರಾಗಿ ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ರಕ್ಷಿಸುವ ಸನ್ನಿವೇಶವನ್ನು ಗಮನಿಸಬಹುದು. ಮೇಗ್‌ಲಿಂಗ್ ದೂರದೇಶದಿಂದ ಪಯಣ ಮಾಡಿ ಭಾರತಕ್ಕೆ ಬಂದವನು. ಅವನಿಗೆ ಎದುರಾಗಿ ನಿಲ್ಲುವ ದೀಕ್ಷಿತ ಹಾಗೂ ಭಗವತಿಯರು ಸ್ಥಳೀಯರು. ಇದೊಂದು ಬಗೆಯಲ್ಲಿ ಸ್ಥಳೀಯತೆ ಮತ್ತು ಪರಕೀಯತೆಗಳ ನಡುವಿನ ಮುಖಾಮುಖಿ ಕೂಡ ಆಗಿದೆ. ಧಾರ್ಮಿಕ ಜಿಜ್ಞಾಸೆಯ ಸನ್ನಿವೇಶದಲ್ಲಿ ವಿದೇಶಿ ಪಾದ್ರಿಗೆ ಭಗವತಿ ಹೀಗೆ ಹೇಳುತ್ತಾಳೆ: "ನೀವು ಬೇರೆಯ ದೇಶದ ಜನ, ನಿಮಗೆ ಆ ವ್ಯವಸ್ಥೆ ಸರಿ. ಈ ದೇಶ ಕರ್ಮ ಭೂಮಿ. ಇದರಲ್ಲಿ ಮನುಷ್ಯರು ಹೀಗೆ ಹೀಗೆ ನಡೆಯಬೇಕು, ಹೀಗೆ ಹೀಗೆ ಬಾಳಬೇಕು, ಅನೇಕ ಜನ್ಮ ಎತ್ತಿ ಜ್ಞಾನ ಭಕ್ತಿ ಕರ್ಮಗಳಿಂದ ಮೋಕ್ಷವನ್ನು ಸಾಧಿಸಬೇಕು, ಎಂದು ವ್ಯವಸ್ಥೆ ಆಗಿದೆ. ನಮಗೆ ಈ ವ್ಯವಸ್ಥೆಯೇ ಸರಿ"(ಪು.೨೨೭).

ಇಲ್ಲಿ ಪಾಶ್ಚಿಮಾತ್ಯ ಧರ್ಮ ಪ್ರಚಾರಕನಾಗಿ ಬಂದಿರುವ ಪಾದ್ರಿ ಮೇಗ್‌ಲಿಂಗ್ ಮತ್ತು ದೀಕ್ಷಿತನ ನಡುವೆ ಕ್ರೈಸ್ತ ಮತ್ತು ಹಿಂದೂ ಧರ್ಮ ಕುರಿತು ನಡೆಯುವ ವಾಗ್ವಾದಗಳಲ್ಲಿ, ಮಡಿಕೇರಿಗೆ ಮಲೆಯಾಳ ದೇಶದಿಂದ ಪಯಣ ಬೆಳೆಸಿ ಬಂದಿದ್ದ ಭಗವತಿ ದೀಕ್ಷಿತನ ಸಹಾಯಕ್ಕೆ ಬರುತ್ತಾಳೆ. ಹಿಂದೂ ಧರ್ಮ ಮತ್ತು ಸಂಸ್ಕೃತಿ ಕುರಿತು ಪಾದ್ರಿಯೊಂದಿಗೆ ವಾದಿಸುವ ಮತ್ತು ಗೆಲ್ಲುವ ಮೂಲಕ ಸಂಸ್ಕೃತಿಯ ರಕ್ಷಕಿಯಾಗಿ ಭಗವತಿಯನ್ನು ಮಾಸ್ತಿ ಚಿತ್ರಿಸುತ್ತಾರೆ. ಆದರೆ ಈ ರೀತಿಯಾಗಿ ಭಗವತಿಯು ಧರ್ಮರಕ್ಷಣೆ ಮಾಡಲು ಕಾರಣ, ಅವಳಿಗೆ ತಿರುಗಾಟದಿಂದ ಬಂದಿರುವ ವಿಶೇಷ ಅನುಭವ ಮತ್ತು ಜ್ಞಾನ ಎನ್ನುವುದು ಇಲ್ಲಿ ಮುಖ್ಯವಾದುದು. ಆದರೆ ಸಾಮಾನ್ಯವಾಗಿ ಸಾರ್ವಜನಿಕ ಬದುಕು ಕಡಿಮೆಯಿರುವ, ಕುಟುಂಬಕ್ಕೆ ಅಂಟಿಕೊಂಡು ಬದುಕಬೇಕಾಗಿರುವ ಮಹಿಳೆಯರಲ್ಲಿ ಭಗವತಿಯ ತರಹದ ಮಹಿಳೆಯರ ದಿಟ್ಟತನ ಮತ್ತು ತಿಳುವಳಿಕೆ ಕಡಿಮೆ. ವಿಶೇಷವೆಂದರೆ,

ಅನೇಕ ಮಹಿಳೆಯರು ಭಗವತಿಯ ತರಹ ದೇಶಾಂತರ ತಿರುಗಾಟ ಮಾಡದೆಯೂ, ಭಗವತಿಯ ತರಹ ಜ್ಞಾನಿಗಳಾಗಿರಲು ಸಾಧ್ಯವಿದೆ. ಇದಕ್ಕೆ ಭಾರತಿದೇವಿಯ ಪಾತ್ರ ಸಾಕ್ಷಿ. ಎಸ್.ಎಲ್.ಭೈರಪ್ಪನವರ 'ಸಾರ್ಥ' ಕಾದಂಬರಿಯಲ್ಲಿ ಕುಮಾರಿಲಭಟ್ಟನ ತಂಗಿ ಭಾರತಿದೇವಿಯು ತನ್ನ ಗಂಡನಾದ ಮಂಡನಮಿಶ್ರನ ರಕ್ಷಣೆಗಾಗಿ, ಪತಿಯನ್ನು ಉಳಿಸಿಕೊಳ್ಳುವುದು ಸತಿಯ ಧರ್ಮವೆಂಬ ಸಂಸ್ಕೃತಿಯ ನೆಲೆಯಲ್ಲಿ, ಯತಿಯಾದ ಶಂಕರಾಚಾರ್ಯರೊಂದಿಗೆ ಮುಖಾಮುಖಿಯಾಗುವ ಸನ್ನಿವೇಶವಿದೆ. ಈ ಸನ್ನಿವೇಶದಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ವಾದದಲ್ಲಿ ಸೋಲುವ ಯತಿ ಶಂಕರರು ಇಡೀ ಭಾರತವನ್ನೇ ಪಯಣ ಮಾಡಿ ಬಂದವರಾಗಿದ್ದುದು.

ಡಿ.ಆರ್.ನಾಗರಾಜ್‌ರವರು ತಮ್ಮದೊಂದು ಲೇಖನದಲ್ಲಿ ಮಾಸ್ತಿಯವರನ್ನು ಕುರಿತು ವ್ಯಕ್ತಮಾಡುವ ಅಭಿಪ್ರಾಯಗಳು ಹೀಗಿವೆ: "ಮಾಸ್ತಿ ಒಬ್ಬ ಕಠೋರ ಸಂಪ್ರದಾಯಸ್ಥರಲ್ಲ. ಹಂಗಿಲ್ಲದೆ ಹಬ್ಬುವ ಜೀವನದ ಬಳ್ಳಿಯನ್ನು ಕ್ರೋರವಾಗಿ ಕತ್ತರಿಸಿ ಬಿಡುವ ಒರಟುತನ ಮಾಸ್ತಿಗಿಲ್ಲ. ಉಲ್ಲಂಘಿಸುವ ಜನರನ್ನು ಸಾಕಷ್ಟು ದಯೆಯಿಂದಲೇ ನೋಡಿ, ಕಡೆಗೆ ಸಾಂಪ್ರದಾಯಿಕ ಮೌಲ್ಯಗಳನ್ನೇ ಎತ್ತಿ ಹಿಡಿಯುವ ಲೇಖಕ" ಎಂದು ಕರೆದಿದ್ದಾರೆ.[೬] ಮಾಸ್ತಿಯವರ ಕೃತಿಗಳಲ್ಲಿನ ಸಮಾಜ ವಾಸ್ತವದ ಸಮಾಜದಂತಿದ್ದರೂ ವಾಸ್ತವದಲ್ಲ. ಅದೊಂದು ಆದರ್ಶ ಸಮಾಜ 'ಭಾರತೀಯ' ಪಾರಂಪರಿಕ ಸಂಸ್ಕೃತಿಯನ್ನು ಎತ್ತಿ ಹಿಡಿಯಬಲ್ಲ ಸಮಾಜ. ಆದರೆ ಬೇರೆ ಧರ್ಮದ ವಿರುದ್ಧ ಧ್ವನಿ ಎತ್ತುವ ಮಾಸ್ತಿ ಹಿಂದೂಧರ್ಮವನ್ನು ಅದರಲ್ಲೂ ವೈದಿಕ ಧರ್ಮದ ಪರವಾಗಿ ಬ್ರಾಹ್ಮಣೀಕರಣದ ನೆಲೆಗಳಲ್ಲಿ ಬಂಧಿಸಿದ್ದಾರೆಯೇ ಎಂದೆನಿಸುತ್ತದೆ. ಈ ಹಿನ್ನೆಲೆಯಲ್ಲಿ 'ಚಿಕವೀರ ರಾಜೇಂದ್ರ' ಕಾದಂಬರಿಯ ಕೊನೆಯಲ್ಲಿ ಗೌರಮ್ಮಾಜಿ ವ್ರತಕ್ಕಾಗಿ ಮಾಡುವ ಪಯಣಗಳಲ್ಲಿ ಬ್ರಾಹ್ಮಣ/ವೈದಿಕ ಸಂಸ್ಕೃತಿಯ ತಳಹದಿಯ ಬೇರುಗಳು ಕಂಡುಬರುತ್ತವೆ. ವ್ರತ ಮತ್ತು ಫಲಗಳು ಲೋಕದ, ಕುಟುಂಬದ ಅಥವಾ ವ್ಯಕ್ತಿಯ ಶ್ರೇಯಸ್ಸಿಗಾಗಿಯೇ ಹಿಂದಿನಿಂದ ಇಂದಿನವರೆಗೂ ಸಾಗಿಕೊಂಡು ಬಂದಂತಹವು. ಈ ವ್ರತಗಳಿಗೆ ಮಹಿಳೆಯರು ತೀರ್ಥಯಾತ್ರೆಯಂತಹ ಪಯಣಗಳನ್ನು ಕೈಗೊಳ್ಳುವ ಸನ್ನಿವೇಶ ಬರುತ್ತದೆ. ಗೌರಮ್ಮಾಜಿ ಅಂತಹ ವ್ರತಕ್ಕಾಗಿ ಕಾಶಿಗೆ ಪಯಣಿಸುವ ಸನ್ನಿವೇಶ 'ಚಿಕವೀರ ರಾಜೇಂದ್ರ' ಕಾದಂಬರಿಯಲ್ಲಿ ಬರುತ್ತದೆ. ಆಕೆ "ಕಾಶಿಗೆ ಹೋದ ಎರಡನೆಯ ಶ್ರಾವಣದಲ್ಲಿ ರಾಣಿ ಒಂದು ಮಂಡಲ ವ್ರತವೊಂದನ್ನು ಆರಂಭಿಸಿದಳು; ದಿನವೂ ಮೂರು ಸಲ ಗಂಗಾಸ್ನಾನ, ಸಂತರ್ಪಣೆ, ಅನ್ನದಾನ; ವಿಶ್ವೇಶ್ವರನಿಗೆ ಅಭಿಷೇಕ; ಹೀಗೆ ತೀರ ಕಠಿಣವಾದ ಸೇವೆಯಲ್ಲಿ ತೊಡಗಿದಳು. ಅರಸನಿಗೆ ಮಗಳಿಗೆ ಒಳ್ಳೆಯದನ್ನು ಮಾಡು ಎಂದು ವಿಶ್ವೇಶ್ವರನಲ್ಲಿ ನಿರಂತರವಾಗಿ ಪ್ರಾರ್ಥನೆ ಮಾಡಿದಳು" ಎಂದು ಕಾದಂಬರಿ ವಿವರಣೆ ಕೊಡುತ್ತದೆ(ಪು.೪೧೦). ಚಿಕವೀರನ ಹೆಂಡತಿ ಗೌರಮ್ಮಾಜಿ ಗಂಡ ಮತ್ತು ಮಗಳ ಶ್ರೇಯಸ್ಸಿಗಾಗಿ ಮಾಡುವ ವ್ರತವಾಗಿದೆ. ವ್ರತಕ್ಕಾಗಿ ಮಾಡುವ ಅವಳ ದೇಶಾಂತರ ಮತ್ತು ಓಡಾಟಗಳು ಅಸಹಾಯಕ ಸ್ಥಿತಿಯಲ್ಲಿ ನಡೆಯುತ್ತವೆ. ಕಾಶಿಗೆ ಚಿಕವೀರನ ಕುಟುಂಬ ಪಯಣಿಸಿದ ನಂತರ ಎಲ್ಲವನ್ನು ಕಳೆದುಕೊಂಡು ಮುಂದೆ ಪತಿ ಹಾಗೂ

ಮಗಳ ಯೋಗಕ್ಷೇಮದ ಸಲುವಾಗಿ ಆಕೆ ತಿರುಗಾಟ ಮಾಡುತ್ತಾ ಹೋಗುತ್ತಾಳೆ. ಆದರೆ ಅವಳು ಮಾಡುವ ಈ ತಿರುಗಾಟಗಳು ಧಾರ್ಮಿಕ ನೆಲೆಯುವಾಗಿದ್ದರಿಂದ ಕೌಟುಂಬಿಕ ರಕ್ಷಣೆಯುವಾಗಿದ್ದರಿಂದ ಅವಕ್ಕೆ ಸಂಸ್ಕೃತಿಯ ಆಯಾಮ ಬಂದುಬಿಡುತ್ತವೆ. ಅವಳ ತಿರುಗಾಟಗಳು ಸಂಸ್ಕೃತಿಯಲ್ಲಿ ಮಾನ್ಯತೆ ಪಡೆಯುತ್ತವೆ.

ಮಾಸ್ತಿಯವರ 'ಚಿಕವೀರ ರಾಜೇಂದ್ರ' ಕೃತಿಯಲ್ಲಿ ದೀಕ್ಷಿತನು ರಾಣಿಯ ಸಾವಿನ ನಂತರ ಹಿಂದೂ ಧರ್ಮದ ನೆಲೆಯಲ್ಲಿ ಮುಕ್ತಿಗಾಗಿ ತೀರ್ಥಯಾತ್ರೆ ಮಾಡುವ ಸಂದರ್ಭವಿದೆ. ಅದನ್ನು ಕಾದಂಬರಿಯು ವಿವರವಾಗಿ ತರುತ್ತದೆ. "ಕಾಶಿಯಿಂದ ಹೊರಟವನು, ದೀಕ್ಷಿತ ಪ್ರಯಾಗ ಕ್ಷೇತ್ರಕ್ಕೆ ಬಂದು, ಜಾಬಾಲ ಕ್ಷೇತ್ರಕ್ಕೆ ಸಾರಿ ಆಗ್ನೇಯವಾಗಿ ಜಗನ್ನಾಥ ಪುರಿಗೆ ಮುಟ್ಟಿ, ಕಾಳಹಸ್ತಿ, ಸಿಂಹಾಚಲ, ತಿರುಪತಿಯ ಮಾರ್ಗವಾಗಿ ಕಂಚಿಗೆ, ಅಲ್ಲಿಂದ ಮಧುರೆ, ಆ ಮೇಲೆ ರಾಮೇಶ್ವರ, ಕನ್ಯಾಕುಮಾರಿ, ಅಲ್ಲಿಂದ ತಿರುವನಂತಪುರ ಹೀಗೆ ಪ್ರದಕ್ಷಿಣವಾಗಿ ಪ್ರಯಾಣ ಮಾಡಿ ಮಲೆಯಾಳದಲ್ಲಿ ಹಾಯ್ದು ವೈನಾಡನ್ನು ಸೇರಿ ಘಟ್ಟವನ್ನೇರಿ ವೀರರಾಜ ಪೇಟೆಯ ಮಾರ್ಗವಾಗಿ ಮಡಿಕೇರಿಗೆ ಸೇರಿದನು. ಇವನ ಈ ಪ್ರಯಾಣ ವರ್ಷದ ಮೇಲೆ ಆರು ತಿಂಗಳು ಹಿಡಿಯಿತು"(ಪು.೪೧೨).

ಈ ಪಯಣದಲ್ಲಿ ಇಡೀ ಭಾರತದ ಪ್ರಮುಖ ತೀರ್ಥಕ್ಷೇತ್ರಗಳ ಪಟ್ಟಿಯೇ ಇದೆ. ಒಂದೇ ವಾಕ್ಯದಲ್ಲಿ ಕಾದಂಬರಿಯು ಅವನು ಮಾಡಿದ ಯಾತ್ರೆಯನ್ನು ಹೇಳುತ್ತಿದ್ದರೂ, ಅದು ತೆಗೆದುಕೊಂಡಿರುವ ಕಾಲವು ದೀರ್ಘವಾಗಿದೆ. ಈ ಪಯಣದಲ್ಲಿ ದೀಕ್ಷಿತನು ತಿರುಗಿರುವ ದಿಕ್ಕುಗಳ ವಿವರಣೆಯೂ ಇದೆ. ಈ ಎಲ್ಲ ಕ್ಷೇತ್ರಗಳು ಭಾರತದ ಪೂರ್ವಭಾಗದವು ಎಂಬುದು ಗಮನಾರ್ಹ. ಕಾದಂಬರಿಯಲ್ಲಿ ಬಂದಿರುವ ಈ ತೀರ್ಥಕ್ಷೇತ್ರಗಳು ದಕ್ಷಿಣದವರು ಕಾಶಿಗೆ ಹೋಗುವ ಹಳೆಯ ತೀರ್ಥಯಾತ್ರಾ ಪಥದಲ್ಲಿ ಬರುತ್ತವೆ. ದೀಕ್ಷಿತ ಮಾಡುವ ಈ ಬಹು ಉದ್ದನೆಯ ಪಯಣಕ್ಕೆ ಗೌರಮ್ಮಾಜಿಯ ಸಾವು ಕಾರಣವಾಗುತ್ತದೆ. ವೈದಿಕ ಹಿಂದೂ ಧರ್ಮದಲ್ಲಿ ಸಾವಿನ ನಂತರದ ಮುಕ್ತಿಯೆಂಬ ಕಲ್ಪನೆಯ ನೆಲೆಯಲ್ಲಿ ದೀಕ್ಷಿತನ ಯಾತ್ರೆ ಆರಂಭವಾಗುತ್ತದೆ. ವ್ಯಕ್ತಿ ತನ್ನ ಜೀವಿತದ ಕೊನೆಯಲ್ಲಿ ಅಥವಾ ಸತ್ತವರ ಶಾಂತಿಗಾಗಿ ಭಾರತೀಯ ಸಂಸ್ಕೃತಿಯ ಭಾಗವಾದ ಪಾಪ, ಪುಣ್ಯ ಸಂಸ್ಕಾರದ ನೆಲೆಯಲ್ಲಿ ಪಯಣ ಜರುಗುತ್ತದೆ. ಈ ರೀತಿಯ ಪಯಣದ ಹಿಂದೆ ಸಂಸ್ಕೃತಿಯ ಬೇರುಗಳು ಹರಡಿಕೊಂಡಿರುತ್ತವೆ. ಭಾರತೀಯ ಸಂಸ್ಕೃತಿಯಲ್ಲಿ ದೇಹವನ್ನು ವಿಸರ್ಜನೆ ಮಾಡಿದ ನಂತರ ಪುಣ್ಯ ನದಿಗಳು ಹರಿಯುವೆಡೆಗೆ ಸಾಗಿ ನದಿಯಲ್ಲಿ ಮೀಯುವುದಿದೆ, ಮತ್ತೊಂದೆಡೆ ಮನಶಾಂತಿಗಾಗಿ, ಪುಣ್ಯಕ್ಕಾಗಿ ತೀರ್ಥಯಾತ್ರೆ ಮಾಡುವುದಿದೆ. ಮುಸ್ಲಿಂ ಜನಾಂಗದಲ್ಲೂ ವ್ಯಕ್ತಿಯೂ ಜೀವಿತದಲ್ಲೊಮ್ಮೆ ಮೆಕ್ಕಾ ಯಾತ್ರೆ ಮಾಡುವುದಿದೆ. ಹೀಗೆ ಪಯಣ ವ್ಯಕ್ತಿಯ ಸತ್ತ ನಂತರದಲ್ಲೂ ಮುಖ್ಯ ಪಾತ್ರವನ್ನು ವಹಿಸಿರುವುದನ್ನು ಈ ಮೇಲಿನಂತೆ ಗಮನಿಸಬಹುದಾಗಿದೆ. ಕಾದಂಬರಿಯು ಸಾವಿಗೆ ಮುನ್ನ ಚಿಕವೀರರಾಜ ಹಾಗೂ ಅವನ ಮಡದಿ ಮಕ್ಕಳು ಕಾಶಿಗೆ ಮಾಡುವ ಪಯಣವನ್ನು ಕಾಣಿಸುವಂತೆ, ದಂಪತಿಗಳ ಸಾವಿನ ಬಳಿಕ ಮರಳಿ ಮನೆಗೆ ದೀಕ್ಷಿತನು ಮಾಡುವ ಪಯಣದ

ವಿವರಗಳನ್ನೂ ಕಾಣಿಸುತ್ತದೆ. ಆದರೆ ಈ ಪಯಣದ ವಿವರಗಳೆಲ್ಲವೂ ಧಾರ್ಮಿಕ ಸಂಸ್ಕೃತಿಗೆ ಲಗತ್ತಾಗಿ ಬರುತ್ತವೆ. ಇವು ದಂಡಯಾತ್ರೆಗೆ ಸೈನಿಕರು ಮತ್ತು ರಾಜರು ಮಾಡುವ ರಾಜಕೀಯ ಪಯಣಕ್ಕಿಂತ ಭಿನ್ನವಾದವು. ಮಾಸ್ತಿ ಕಾದಂಬರಿಗಳು ರಾಜಕೀಯ ಮತ್ತು ಧಾರ್ಮಿಕ ನೆಲೆಯ ಪಯಣಗಳನ್ನು ಒಟ್ಟೊಟ್ಟಿಗೆ ಚಿತ್ರಿಸುತ್ತ ಅವುಗಳ ನಡುವಿನ ಅಂತಃಸಂಬಂಧವನ್ನು ಸೂಚಿಸುತ್ತವೆ.

೫.೬. ಪಯಣ: ಅಧಿಕಾರ

ಇತಿಹಾಸದ ಪುಟಗಳನ್ನು ಗಮನಿಸಿದಾಗ ವ್ಯಕ್ತಿ ಅಧಿಕಾರ ಉಳಿಸಿಕೊಳ್ಳುವುದಕ್ಕಾಗಿ ಮತ್ತು ಪಡೆಯುವುದಕ್ಕಾಗಿ ಪಯಣ ಮಾಡಿದ್ದಾನೆ. ಅಷ್ಟೇ ಅಲ್ಲದೆ, ಯುದ್ಧ ಮಾಡುವ ಮೂಲಕ ಅಧಿಕಾರವನ್ನು ವಿಸ್ತರಿಸಿಕೊಂಡಿದ್ದಾನೆ. ಅಧಿಕಾರ ಹಿಡಿಯುವ, ಚಲಾಯಿಸುವ ಹಾಗೂ ಉಳಿಸಿಕೊಳ್ಳುವ ಈ ಮೂರೂ ನೆಲೆಯಲ್ಲಿ ಪಯಣ ನಿರ್ವಹಿಸಿರುವ ಪಾತ್ರ ದೊಡ್ಡದು. ರಾಜಕೀಯ ಕಾರಣಗಳಿಗಾಗಿ ಪಯಣ ಮಾಡದೆ ಅಧಿಕಾರವನ್ನು ಪಡೆಯಲೂ ಮತ್ತು ವಿಸ್ತರಿಸಿಕೊಳ್ಳಲು ಸಾಧ್ಯವಿಲ್ಲ. ಚರಿತ್ರೆಯನ್ನು ಗಮನಿಸಿದಾಗ ಅಲೆಗ್ಸಾಂಡರ್, ನೆಪೋಲಿಯನ್, ಅಶೋಕ ಮುಂತಾದ ಅರಸರು, ಬ್ರಿಟಿಶರು, ಮರಾಠರು, ಮೊಗಲರು, ಫ್ರೆಂಚರು ತಮ್ಮ ರಾಜಕೀಯ ಅಧಿಕಾರದ ವಿಸ್ತರಣೆಗಾಗಿ ಮತ್ತು ಗಳಿಸಿದ ರಾಜಕೀಯ ಅಧಿಕಾರದ ರಕ್ಷಿಸಿಕೊಳ್ಳುವ ಸಲುವಾಗಿ ಪಯಣ ಮಾಡಿರುವುದು ಕಂಡುಬರುತ್ತದೆ. ಅಧಿಕಾರದ ವಿವಿಧ ಸ್ತರಗಳಲ್ಲಿ ಹೀಗೆ ಪಯಣ ವಿಸ್ತರಿಸಿಕೊಂಡಿದೆ. ಇದರ ನೆಲೆಗಳನ್ನು ರಾಜಕೀಯ ಅಧಿಕಾರ ಪ್ರಾಪ್ತಿ ಮತ್ತು ನಾಶವೇ ವಸ್ತುವಾಗಿರುವ ಮಾಸ್ತಿಯವರ ಕಾದಂಬರಿಗಳ ಮೂಲಕ ಅರಿಯುವುದಕ್ಕೆ ಇಲ್ಲಿ ಯತ್ನಿಸಬಹುದು.

ಮಾಸ್ತಿಯವರ 'ಚಿಕವೀರ ರಾಜೇಂದ್ರ' ಹಾಗೂ ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುವ ಕ್ರೈಸ್ತಮಿಷನರಿಗಳು ವಸಾಹತುಶಾಹಿಯ ಚಲನೆಯನ್ನು ತಿಳಿಸುತ್ತವೆ. ಬ್ರಿಟಿಷರು ಅಧಿಕಾರ ಮತ್ತು ವ್ಯಾಪಾರದ ಉದ್ದೇಶಕ್ಕಾಗಿ ಭಾರತಕ್ಕೆ ಪಯಣಿಸಿ ಬಂದವರು. ನಂತರ ಇಲ್ಲಿನ ಜನರನ್ನೇ ಗುಲಾಮರನ್ನಾಗಿ ಮಾಡಿಕೊಂಡು ಧರ್ಮ ಪ್ರಚಾರ, ಅಧಿಕಾರ, ವ್ಯಾಪಾರ ಮುಂತಾದ ನೆಲೆಗಳಲ್ಲಿ ನೆಲೆಸಿದವರು. ಆದರೆ ಅವರು ನೆಲೆಸಿ ವಸಾಹತುಶಾಹಿಗಳಾದ ಬಳಿಕ ಭಾರತದ ಜನರು ಅವರ ದೇಶಗಳಿಗೆ ಜ್ಞಾನಕ್ಕಾಗಿ, ವಿಚಾರಕ್ಕಾಗಿ, ವಿದ್ಯಾಭ್ಯಾಸಕ್ಕಾಗಿ ಮತ್ತು ಉದ್ಯೋಗಕ್ಕಾಗಿ ಪಯಣ ಮಾಡುವ ಸನ್ನಿವೇಶ ಎದುರಾಯಿತು. 'ಇಂದಿರಾಬಾಯಿ'ಯ ಭಾಸ್ಕರ ಹಾಗೆ ಪಯಣ ಮಾಡಿದ ಭಾರತೀಯನು. ಆದರೆ ವಸಾಹತುಶಾಹಿಗಳಿಗೆ ತನ್ನ ರಾಜ್ಯವನ್ನು ಕೊಟ್ಟು ಚಿಕವೀರ ರಾಜನು ಮಡದಿ ಮಕ್ಕಳೊಂದಿಗೆ ಮಾಡುವ ಪಯಣವು ಈ ಬಗೆಯದಲ್ಲ. ಅದು ಸೋತ ವ್ಯಕ್ತಿಯೊಬ್ಬನು ಅಸಹಾಯಕವಾಗಿ ದೇಶಭ್ರಷ್ಟನಾಗುವ ಪಯಣವಾಗಿದೆ. ಆಂಗ್ಲರ ಪಯಣವು ಭಾರತದ ಅನೇಕ ಪಯಣದ ವಿನ್ಯಾಸಗಳನ್ನು ರೂಪಿಸಿದ ಬಗೆಯಿದು. ಮಾಸ್ತಿ ಅಂತಹ ಒಂದು ದುರಂತಮಯವಾದ ಪಯಣವನ್ನು ಚಿಕವೀರರಾಜೇಂದ್ರನಲ್ಲಿ ಚಿತ್ರಿಸುತ್ತಾರೆ.

ಆದರೆ ಮಾಸ್ತಿಯವರ 'ಚೆನ್ನಬಸವ ನಾಯಕ' ಕೃತಿಯಲ್ಲಿ ಅದರ ನಾಯಕರನ್ನು ಪದಚ್ಯುತಗೊಳಿಸಿ ದುರಂತ ಸ್ಥಿತಿಗೆ ಹೋಗುವ ಕೆಲಸವನ್ನು ವಸಾಹತುಶಾಹಿ ಮಾಡುವುದಿಲ್ಲ. ಬದಲಿಗೆ ದೇಶೀಯ ದೊರೆಗಳೇ ಮಾಡುತ್ತಾರೆ. ಇಡೀ ಕಾದಂಬರಿಯಲ್ಲಿ ಬರುವ ತಿರುಗಾಟ ಮತ್ತು ಪಯಣಗಳು 'ಚಿಕವೀರರಾಜೇಂದ್ರ' ಕಾದಂಬರಿಗೆ ಹೋಲಿಸಿದರೆ, ಸೀಮಿತವಾದ ಪ್ರದೇಶದೊಳಗೆ ನಡೆಯುತ್ತವೆ. ಆ ಸೀಮಿತ ಪ್ರದೇಶವು ಮೈಸೂರು ಬಿದನೂರುಗಳ ನಡುವೆಯೇ ಹೆಚ್ಚಾಗಿ ನಡೆಯುತ್ತದೆ. ಮೈಸೂರು ಅರಸರು ತಮ್ಮ ಅಧಿಕಾರದ ಭದ್ರತೆಗಾಗಿ ಗೂಢಾಚಾರರನ್ನು ಬಿದನೂರಿಗೆ ಕಳುಹಿಸಿದ್ದಾರೆ. ಈ ಪಯಣದ ಮೂಲಕ ಎರಡೂ ರಾಜ್ಯಗಳ ನಡುವೆ ಮೈತ್ರಿ ಬೆಳವಣಿಗೆಗೆ ವೇದಿಕೆ ಸೃಷ್ಟಿಯಾಗುತ್ತದೆ. ಇದಕ್ಕೆ ಹಿನ್ನೆಲೆಯಾಗಿರುವ ಸನ್ನಿವೇಶದಲ್ಲಿ ಚೆನ್ನಬಸವನ ಹಿತಚಿಂತಕನಾದ ನೇಮಯ್ಯನು ಸೂರಪ್ಪ ಮತ್ತು ವೀರಪ್ಪ ಎಂಬ ಗೂಢಚಾರಿಗಳಿಗೆ ಹೇಳುವ ಮಾತುಗಳಿವು: "ಇದು ನಮಗೆ ಬಹಳ ಸಂತೋಷ. ನೀವು ನಿಮ್ಮ ನಾಯಕರನ್ನು ನವರಾತ್ರಿಯ ಉತ್ಸವಕ್ಕೆ ಕರೆಯುವುದಕ್ಕೆ ಬಂದಿದ್ದೀರಿ ಎಂದು ತಿಳಿಯಿತು. ಈ ರೀತಿಯ ಬಾಂಧವ್ಯ ಈ ಮೊದಲೆ ಆರಂಭವಾಗಬೇಕಾಗಿತ್ತು. ತಮ್ಮ ಅರಸರು ಈಗಲಾದರೂ ಈ ವಿಷಯವನ್ನು ಕುರಿತು ಯೋಚನೆ ಮಾಡಿರುವುದು ಸಂತೋಷ"(ಪು.೮೯). ನವರಾತ್ರಿಯ ನೆಲೆಯಲ್ಲಿ ಮೈಸೂರು ಅರಸರು ಬಿದನೂರಿನೊಂದಿಗೆ ಸಂಬಂಧ ಬಿಗಿಗೊಳಿಸುವುದು ಒಂದೆಡೆ ಕಂಡರೆ, ಮತ್ತೊಂದೆಡೆ ಮೈಸೂರಿನ ಅರಸರ ಸಹಾಯದಿಂದ ಚೆನ್ನಬಸವನ ತಾಯಿಯ ಮೂಲಕ ಅಧಿಕಾರವನ್ನು ಮಗನಿಗೆ ವರ್ಗಾಯಿಸುವ ಚಲನೆಯಿದೆ. ಇಲ್ಲಿ ಅಧಿಕಾರವನ್ನು ಗಟ್ಟಿಗೊಳಿಸಿಕೊಳ್ಳುವ ಮತ್ತು ಪಡೆಯುವ ನೆಲೆಗಳ ಹಿಂದೆ ಪಯಣವು ಕೊಂಡಿಯಾಗಿದೆ. ಮಾಸ್ತಿಯವರ ಕಾದಂಬರಿಗಳಲ್ಲಿ ರಾಜ್ಯದ ರಕ್ಷಣೆಗಾಗಿ ಕೆಲವು ಪಾತ್ರಗಳು ಚಲನೆಮಾಡಿದರೆ, ಮತ್ತೆ ಕೆಲವು ಪಾತ್ರಗಳು ರಾಜ್ಯವನ್ನು ನಾಶ ಮಾಡುವ ವ್ಯವಸ್ಥೆಯನ್ನು ಬದಲಾಯಿಸುವ ಸಲುವಾಗಿ ಪಯಣ ಮಾಡುತ್ತವೆ.

ಎಷ್ಟೋ ಅರಸರು ತಮ್ಮ ಅಧಿಕಾರದ ಸಲುವಾಗಿ, ಪದವಿಯ ಸಲುವಾಗಿ ಮತ, ಧರ್ಮಗಳನ್ನು ಮೀರಿ ಮತಾಂತರಗೊಂಡಿದ್ದಾರೆ. ಇಂತಹ ಬದಲಾವಣೆಗಳು ಸಾಮಾನ್ಯ ಜನರ, ಉನ್ನತ ಪದವಿ ಪಡೆದವರ ಮತ್ತು ರಾಜರ ವಿಷಯದಲ್ಲಿ ಬೇರೆಯಾಗಿಯೇ ಇರುತ್ತವೆ. ಈ ಹಿನ್ನೆಲೆಯಲ್ಲಿ 'ಚೆನ್ನಬಸವ ನಾಯಕ'ದಲ್ಲಿ ನೇಮಯ್ಯ ಹಾಗೂ ಸಿದ್ಧರ ನಡುವೆ ನಡೆಯುವ ಮಾತುಕತೆಯಲ್ಲಿ ವ್ಯಕ್ತವಾಗುವ ಒಂದು ಅಭಿಪ್ರಾಯ ಹೀಗಿದೆ: "ಯಾವ ಹೊತ್ತಿಗೆ ಯಾವ ದೈವ ಫಲ ಕೊಡತದೆಯೊ ಆ ಹೊತ್ತಿಗೆ ಅದನ್ನ ಉಪಾಸನೆ ಮಾಡಬೇಕು. ಒಂದು ಕಾಲಕ್ಕೆ ಜೈನರಾಗಿದ್ದೋರು ದೊರೆ ವೀರಶೈವ ಅಂತ ತಾವು ಶಿವಾಚಾರಕ್ಕೆ ಸೇರಲಿಲ್ಲವೆ? ಯಾಕೆ ಸೇರಿದರು? ಯಾವುದೋ ಪ್ರಯೋಜನಕ್ಕೆ; ಮನೇಗೆ, ಮಠಕ್ಕೆ, ಪದವೀಗೆ ಆಶೇಪಟ್ಟು, ಆ ಧರ್ಮ ಅಲ್ಲ ಈ ಧರ್ಮ ಇರಲಿ ಅಂದರು"(ಪು.೧೦೬). ಹಿಂದೆ ರಾಜನಾದವನು ಅಧಿಕಾರ ಮತ್ತು ಪದವಿಯ ಸಲುವಾಗಿ ಮತವನ್ನೂ, ಧರ್ಮವನ್ನೂ ಬದಲಾಯಿಸಿದರೆ ಜನಸಾಮಾನ್ಯರು ಬದಲಾಗಬೇಕಾಗಿತ್ತು. ಮಹಮದ್ ಬಿನ್ ತೊಘಲಕ್‌ನ

ದೆಹಲಿ ಮತ್ತು ದೇವಗಿರಿ ನಡುವಿನ ರಾಜಧಾನಿ ವರ್ಗಾವಣೆಯ ಸನ್ನಿವೇಶದಲ್ಲಿ ನಡೆಯುವ ಪಯಣವು ಇದೇ ತೆರನಾದುದು. ರಾಜನಾದವನು ಅಧಿಕಾರ, ಆಡಳಿತಕ್ಕಾಗಿ ರಾಜಧಾನಿಯನ್ನು ಬದಲಾವಣೆ ಮಾಡಿದರೆ ಜನ ಸಾಮಾನ್ಯರು ಅದಕ್ಕೆ ಹೊಂದಿಕೊಂಡು ಹೋಗಬೇಕಾಗಿತ್ತು. ಎಷ್ಟೋ ಕವಿಗಳು ಉಂಬಳಿಯ ಸಲುವಾಗಿ ರಾಜನ ಧರ್ಮವನ್ನು ಅನುಸರಿಸಿರುವುದು ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ದಾಖಲಾಗಿದೆ. ಪ್ರಸ್ತುತ ಸಂದರ್ಭದಲ್ಲೂ ರಾಜಕೀಯ ನಾಯಕರೂ ಪಕ್ಷ ಬದಲಾಯಿಸಿದರೆ ಅವರ ಅಭಿಮಾನಿಗಳು ಪಕ್ಷ ಬದಲಾಯಿಸುವುದು ಕಂಡುಬರುತ್ತದೆ. ಅಧಿಕಾರಕ್ಕಾಗಿ ಮತ, ಧರ್ಮಗಳ ಬದಲಾವಣೆಯ ಪ್ರಕ್ರಿಯೆಯೊಳಗೆ ಚಲನೆ ಇದೆ. ಹೀಗೆ ಬದಲಾಗುವ ಮೂಲಕ ಅಧಿಕಾರವನ್ನು ಪಡೆಯುವ ಕ್ರಿಯೆ ವ್ಯಕ್ತವಾಗಿದೆ. ಇದು ಅಧಿಕಾರಸ್ಥರು ಮತದಿಂದ ಮತಕ್ಕೆ ಮಾಡುವ ಪಯಣದ ಹೊತ್ತಿನಲ್ಲಿ ನಡೆಯುವ ವಿದ್ಯಮಾನಗಳಾಗಿವೆ.

ಬಿದನೂರು ಮತ್ತು ಮೈಸೂರಿನ ನಡುವೆ ಮೈತ್ರಿಗಾಗಿ ಅಧಿಕಾರದ ಸ್ಥಾಪನೆಗಾಗಿ ನವರಾತ್ರಿಯ ಉತ್ಸವಕ್ಕೆ ಚೆನ್ನಬಸವ ಪಯಣ ಬೆಳೆಸಿ ಬರುತ್ತಾನೆ. ಆದರೆ ಮೈಸೂರಿನ ಹೆಸರಲ್ಲೇ ಚೆನ್ನಬಸವನ ಬಿದನೂರು ಪ್ರಾಂತ್ಯವನ್ನು ಕಬಳಿಸಲು ಯತ್ನ ನಡೆಯುತ್ತದೆ. ಅದು ಹೀಗಿದೆ: "ಚೆನ್ನಬಸವ ನಾಯಕ ಪಟ್ಟಣವನ್ನು ಕುರಿತು ಪ್ರಯಾಣ ನಡೆಯುತ್ತಿದ್ದ ವೇಳೆ, ಅವನಿಂದ ಅವನ ಪಿತ್ರಾರ್ಜಿತ ರಾಷ್ಟ್ರವನ್ನು ಕಸಿದುಕೊಳ್ಳುವುದಕ್ಕೆ ಮೈಸೂರು ಹೆಸರಲ್ಲಿ ಯತ್ನ ನಡೆಯಿತು"(ಪು.೧೯೬). ಈ ಮೇಲಿನ ಸನ್ನಿವೇಶ ಮೂರು ನೆಲೆಗಳಲ್ಲಿ ಚಲನೆಯನ್ನು ಕಂಡಿದೆ. ಒಂದನೆಯದು ಚೆನ್ನಬಸವ ತನ್ನ ರಾಜ್ಯದ ಅಧಿಕಾರವನ್ನು ಪಡೆಯುವ ಸಲುವಾಗಿ; ಎರಡನೆಯದು ಮೈಸೂರು ಅರಸರು ಅಧಿಕಾರವನ್ನು ಉಳಿಸಿಕೊಳ್ಳುವ ಸಲುವಾಗಿ; ಮೂರನೆಯದು ಹೈದರ್ ಮೋಸದಿಂದ ಬಿದನೂರನ್ನು ವಶಪಡಿಸಿಕೊಳ್ಳುವ ಸಲುವಾಗಿ. ಮೇಲಿನ ಮೂರೂ ಸನ್ನಿವೇಶಗಳು ಅಧಿಕಾರವನ್ನು ಪಡೆಯುವ ನೆಲೆಯಲ್ಲಿಯೇ ಕೇಂದ್ರೀಕರಣಗೊಂಡಿರುವುದು ವಿಶೇಷವಾಗಿದೆ. ಈ ಮೂರೂ ಸನ್ನಿವೇಶಗಳು ಕಾದಂಬರಿಯಲ್ಲಿ ಪಯಣದ ಜತೆ ಬೆರೆತುಕೊಂಡಿವೆ.

'ಚೆನ್ನಬಸವ ನಾಯಕ' ಕೃತಿಯಲ್ಲಿ ವೀರಮ್ಮಾಜಿ ಬಿದನೂರಿನ ಮೇಲೆ ಹೈದರಾಲಿಯ ದಾಳಿ ಮಾಡುವ ಸಂದರ್ಭದಲ್ಲಿ ಹೀಗೆ ಆಜ್ಞಾಪಿಸುತ್ತಾಳೆ: "ಹೋಗು ನಂಬಯ್ಯ, ಸವಣೂರಿಗೆ ಮರಾಟೆವಾಡಿಗೆ ಎರಡು ಕಾಗದ ಬರೆದು ತಾ; ಈ ಮೈಸೂರಿನ ಜನ ನಮ್ಮ ಮೇಲೇನಾದರೂ ಕೈ ಮಾಡಿದರೆ ನಿಮ್ಮ ನೆರವು ಬೇಕು ಎಂತ ಅವರಿಗೆ ತಿಳಿಸು. ಬಂದ ಸೈನ್ಯವನ್ನ ನಾವು ನೋಡಿಕೊಳ್ಳುತ್ತೇವೆ, ಮೇಲೆ ಲಕ್ಷ ಹೊನ್ನು ಸಲ್ಲಿಸುತ್ತೇವೆ ಎಂತ ಹೇಳು"(ಪು.೨೦೯) ರಾಜ್ಯವನ್ನು ಅದರ ಅಧಿಕಾರವನ್ನು ಪಡೆಯುವ ಸಲುವಾಗಿ ಒಂದು ರಾಜ್ಯದವರು ಮತ್ತೊಂದು ರಾಜ್ಯದವರ ಮೇಲೆ ಯುದ್ಧ ಮಾಡುವುದು ಸಾಮಾನ್ಯ. ಹೀಗೆ ಯುದ್ಧಕ್ಕಾಗಿ ನಡೆದ ಪಯಣವು ಮುಂದೆ ಅಧಿಕಾರದ ಸ್ಥಾಪನೆಗೆ ಕಾರಣವಾಗುತ್ತದೆ. ಅದೇ ರೀತಿ ಹೈದರಾಲಿಯೂ ಬಿದನೂರನ್ನು ವಶಪಡಿಸಿಕೊಳ್ಳಲು ದಂಡಯಾತ್ರೆ ಮಾಡಿದಾಗ, ವೀರಮ್ಮಾಜಿ ಹಿತರಕ್ಷಕ ರಾಜ್ಯದ ಸಹಾಯವನ್ನು

ಅಪೇಕ್ಷಿಸುತ್ತಾಳೆ. ಜೊತೆಗೆ ಬಂದ ಸೈನ್ಯದ ಉಪಚಾರ ಮತ್ತು ಹಣವನ್ನು ನೀಡುವುದಾಗಿಯೂ ದೂತರನ್ನೂ ಕಳುಹಿಸುತ್ತಾಳೆ. ವೀರಮ್ಮಾಜಿ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಮಾಡುವ ಪ್ರಯತ್ನಗಳ ಹಾಗೂ ಹೈದರಾಲಿ ಅಧಿಕಾರವನ್ನು ಹಿಡಿಯುವುದಕ್ಕೆ ಮಾಡುವ ಪ್ರಯತ್ನಗಳ ಒಳಗೆ ನಿರಂತರವಾಗಿ ಸೈನಿಕರ, ಗೂಢಚರ್ಯೆ ಮಾಡುವವರ, ಮಧ್ಯಸ್ಥಗಾರರ ಪಯಣಗಳಿವೆ. ಅವು ಎಲ್ಲ ಕಾಲದ ರಾಜಕೀಯ ಅಧಿಕಾರ ಸ್ಥಾಪನೆ ಮತ್ತು ನಾಶದ ಹಿಂದೆ ನಿರತವಾಗಿರುತ್ತವೆ. ಅವನ್ನು ಮಾಸ್ತಿಯವರ ಕಾದಂಬರಿಗಳು ಬಹಳ ಶ್ರದ್ಧೆಯಿಂದ ವಿವರವಾಗಿ ದಾಖಲಿಸುತ್ತವೆ.

ಅಧಿಕಾರವನ್ನು ಉಳಿಸಿಕೊಳ್ಳುವ ಸಲುವಾಗಿ ಚೆನ್ನಬಸವ ನಾಯಕ ಭಾಸ್ಕರಯ್ಯನವರನ್ನು ಮೈಸೂರಿಗೆ ಕಳುಹಿಸುತ್ತಾನೆ. ಆಗ "ಇದನ್ನ ಕಂಡವರಿಗೆಲ್ಲ ಡಂಗುರ ಹೊಡೆಕೊಂಡು ಹೋಗಬಾರದು. ಯಾವ ಊರು ಅಂದರೆ ನಗರ ಅನ್ನಬೇಡಿ; ಶಿವಮೊಗ್ಗಿ ಅನ್ನಿ. ಅರಸರು ಮಾರೋಲೆ ಬರೆದುಕೊಡದೆ ಅಲ್ಲಿಂದ ಹೊರಡಬೇಡಿ. ಅವರು ಕೊಟ್ಟ ಓಲೇನ ಭದ್ರವಾಗಿ ತಕ್ಕೊಂಡು ಬನ್ನಿ. ಯಾತ್ರೆ ಹೋಗಿದ್ದೆ ಅನ್ನಿ; ವ್ಯಾಪಾರಕ್ಕೆ ಬಂದಿದ್ದೆ ಅನ್ನಿ. ಬೇಕಾದ ಮಾತು ಹೇಳಿ ಈ ಕೆಲಸ ಮಾಡಿಕೊಂಡು ಬರಬೇಕು" ಎಂದು ಎಚ್ಚರಿಕೆ ಕೊಡುತ್ತಾನೆ(ಪು.೨೧೯). ಪಯಣಗಳು ನಿರಾತಂಕವಾಗಿ ಇಲ್ಲಿ ನಡೆಯುವುದಿಲ್ಲ. ಅವು ಅಧಿಕಾರಕ್ಕೆ ಸಂಬಂಧಪಟ್ಟವಾದ್ದರಿಂದ ರಹಸ್ಯವು ಅಲ್ಲಿದ್ದು, ಅದು ಕೊಲೆ ವಿಶ್ವಾಸಘಾತುಕತೆಗಳಿಗೂ ಕಾರಣವಾಗಿದೆ. ಮಾಸ್ತಿಯವರು ಇಂತಹ ಸಂದರ್ಭದಲ್ಲಿ ಮನುಷ್ಯರ ವರ್ತನೆಗಳಲ್ಲಿ ಆಗುವ ಬದಲಾವಣೆಗಳನ್ನು ಸೂಕ್ಷ್ಮವಾಗಿ ಚಿತ್ರಿಸುತ್ತಾರೆ. ಗುಪ್ತಪಯಣಗಳು ಬಹಳ ಅಪಾಯಕಾರಿ ಆಗಿರುತ್ತವೆ. ಈ ಪಯಣಿಗರು ತಾವು ಹೋಗಬೇಕಾದ ಮಾರ್ಗ ಮತ್ತು ಸ್ಥಳದ ಕುರಿತು ಯಾರಿಗೂ ಮಾಹಿತಿ ನೀಡುವಂತಿಲ್ಲ. ರಹಸ್ಯ ಪಯಣಗಳಿಗೂ ರಾಜಕೀಯ ಅಧಿಕಾರದ ಫಿತೂರಿಗಳಿಗೂ ಚರಿತ್ರೆಯಲ್ಲಿ ನೇರ ಸಂಬಂಧವಿದೆ. ವ್ಯಂಗ್ಯವೆಂದರೆ ಅಧಿಕಾರಸ್ಥರ ಸಂಘರ್ಷದಲ್ಲಿ ನಡುವೆ ಅವರ ದೂತರು ಸೇವಕರು ಪಯಣ ಮಾಡುತ್ತ ಸಿಕ್ಕಿಕೊಂಡು ಕೊಲೆಗೀಡಾಗುವ ದಾರುಣ ಸನ್ನಿವೇಶಗಳನ್ನು ಕಾದಂಬರಿಗಳು ಚಿತ್ರಿಸುತ್ತವೆ.

'ಚೆನ್ನಬಸವ ನಾಯಕ'ದಲ್ಲಿ ಚೆನ್ನಬಸವ ನಾಯಕನ ಸಾವಿನ ಸಂದರ್ಭದಲ್ಲಿ ಅಧಿಕಾರವನ್ನು ಉಳಿಸಿಕೊಳ್ಳುವ ಸಲುವಾಗಿ, ದತ್ತು ಪದ್ಧತಿಯನ್ನು ನೇಮಯ್ಯನ ಮೂಲಕ ಊರ್ಜಿತಗೊಳಿಸುವುದಕ್ಕೆ ಮೈಸೂರಿನೆಡೆಗೆ ನೇಮಯ್ಯ ಪಯಣಿಸುವ ಸನ್ನಿವೇಶ ಬರುತ್ತದೆ. ಆಗ ಚೆನ್ನಬಸವ ನಾಯಕ "ನಮ್ಮ ಹೆಗ್ಗಡಿತಿಯವರು ಒಪ್ಪುವುದಾದರೆ ಇವರ ಮೊಮ್ಮಗನ್ನ ನಾವು ದತ್ತು ಮಾಡಿಕೊಂಡಿದ್ದೇವೆಂದು ಎಣಿಸಿ ಹುಡುಗನಿಗೆ ನಾಯಕ ಪಟ್ಟ ಮಾಡಬೇಕು. ಮೈಸೂರು ಅರಸರ ಬಳಿ ಹೋಗಿ ಮಾತನಾಡಿ ಅವನ ಆಸ್ತಿಯನ್ನು ಅವನಿಗೆ ಕೊಡಿಸಿ ಕೊಡಬೇಕು"(ಪು.೩೨೧) ಎಂದು ಸಭೆಯಲ್ಲಿ ನುಡಿಯುತ್ತಾನೆ. ಇದಕ್ಕೆ ಚೆನ್ನಬಸವನಿಗೆ ಮಕ್ಕಳಾಗದೇ ಇರುವುದರಿಂದ ಹೆಗ್ಗಡಿತಿಯ ಮೊಮ್ಮನಿಗೆ ಪಟ್ಟ ಕಟ್ಟುವ ಆಲೋಚನೆ ನಡೆಯುತ್ತದೆ. ಮೈಸೂರು ಅರಸರನ್ನು ಭೇಟಿಯಾಗದೇ, ಅವರೆಡೆಗೆ ಚಲಿಸದೆ ಅಧಿಕಾರವನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ. ಆಗಾಗಿ ದತ್ತುಪುತ್ರನ ಮೂಲಕ ಕಳೆದುಕೊಂಡ

ಪ್ರಾಂತ್ಯ ಮತ್ತು ಅಧಿಕಾರವನ್ನು ಪಡೆಯುವ ಮಾರ್ಗ ಇದಾಗಿದೆ. ಮುಂದೆ ಇದೇ ನೆಲೆಯಲ್ಲೆ ಬ್ರಿಟಿಷರಿಂದ ಮೈಸೂರಿನ ಅಧಿಕಾರವನ್ನು ಪಡೆಯಲು ಮೈಸೂರಿನ ಅರಸರು ಪ್ರಯತ್ನ ಪಡುವ ಬೆಳವಣಿಗೆಗಳು ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ. ಇಲ್ಲೆಲ್ಲ ಅಧಿಕಾರವು ಹೊಸಹೊಸ ಪಯಣಗಳನ್ನು ಹುಟ್ಟಿಸುತ್ತ ಹೋಗುತ್ತದೆ. 'ಚೆನ್ನಬಸವ ನಾಯಕ' ಮತ್ತು 'ಚಿಕವೀರ ರಾಜೇಂದ್ರ' ಕೃತಿಗಳಲ್ಲಿ ವ್ಯಕ್ತಿಗಳೂ ಅಧಿಕಾರ ಉಳಿಸಿಕೊಳ್ಳಲು ಮಾಡುವ ಪಯಣದ ಹಲವಾರು ನೆಲೆಗಳು ಬರುತ್ತವೆ. 'ಚೆನ್ನಬಸವ ನಾಯಕ' ಕೃತಿಯಲ್ಲಿ ವೀರಮ್ಮಾಜಿ ಮಗನಿಗೆ ಪಟ್ಟ ಕಟ್ಟದೆ ಅಧಿಕಾರ ಉಳಿಸಿಕೊಳ್ಳುವ ಪ್ರಯತ್ನ ಒಂದೆಡೆ ಕಂಡರೆ, ಮತ್ತೊಂದೆಡೆ ಚೆನ್ನಬಸವನಿಗೆ ಪಟ್ಟಕಟ್ಟುವ ಮೂಲಕ ಅಧಿಕಾರ ಗಟ್ಟಿಗೊಳಿಸಿ ಕೊಳ್ಳುವುದಕ್ಕಾಗಿ ಮೈಸೂರು ಅರಸರು ಬಿದನೂರಿನೊಂದಿಗೆ ಸಂಬಂಧ ಬೆಳೆಸಲು ಪ್ರಯತ್ನವಿದೆ. ಆದರೆ ಹೈದರಾಲಿ ಮೈಸೂರು ಮತ್ತು ಬಿದನೂರು ಈ ಎರಡೂ ರಾಜ್ಯಗಳ ಅಧಿಕಾರವನ್ನು ಪಡೆಯುವ ಸಲುವಾಗಿ ಪಯಣ ಮಾಡುತ್ತಾನೆ. ಹೀಗೆ ಎರಡು ರಾಜ್ಯಗಳ ಈ ತ್ರಿಕೋನ ಸ್ಪರ್ಧೆಯಲ್ಲಿ ಅಧಿಕಾರ ಗ್ರಹಣದ ಭಾಗವಾಗಿ ಪಯಣಗಳು ನಡೆಯುತ್ತವೆ.

ಚಿಕವೀರರಾಜ ಅಧಿಕಾರದ ಅಮಲಿನಲ್ಲಿ ಅನೈತಿಕ ಚಟುವಟಿಕೆಗಳಿಗೆ ಬಲಿಯಾಗುತ್ತಲೇ ಅಧಃಪತನಕ್ಕೆ ಇಳಿಯುವುದಿದೆ. ಕೊಡಗಿನ ಅಧಿಕಾರವನ್ನು ತಂಗಿಯ ಗಂಡನಿಗೆ ಹೋಗುತ್ತದೆ ಎಂಬುದಕ್ಕಾಗಿ ತಂಗಿಯನ್ನು ಬಂಧಿಸುವ, ಅಳಿಯನನ್ನು ಶಿಕ್ಷಿಸುವ ಓಡಾಟಗಳು ಕೃತಿಯ ಒಳಸ್ತರಗಳಲ್ಲಿಯೇ ಚಲನಶೀಲವಾಗಿರುವುದು ಕಂಡುಬರುತ್ತದೆ. ಒಂದೆಡೆ ಅಧಿಕಾರ ಪಡೆಯುವ ಸಲುವಾಗಿ ಬಿದನೂರು ಪ್ರಾಂತ್ಯ ನಾಶವಾದರೆ, ಮತ್ತೊಂದೆಡೆ ಅಧಿಕಾರದ ದುರ್ಬಳಕೆಯಿಂದ ಕೊಡಗಿನ ಅಧಿಕಾರವನ್ನು ಬ್ರಿಟಿಷರ ಕೈಗೆ ಸಾಗುವಂತೆ ಮಾಡುತ್ತದೆ. ಕೊಡಗಿನ ಅಧಿಕಾರವನ್ನು ಪಡೆಯಲು ಅಳಿಯ ಚೆನ್ನಬಸವ ಬ್ರಿಟಿಷರನ್ನು ಸಂಧಿಸುವ ಚಲನೆಗಳು, ಮಂತ್ರಿಯಾದ ಬಸವನಿಗೆ ರಾಜ ಪಟ್ಟವನ್ನು ದೊರಕಿಸುವ ಸಲುವಾಗಿ ತಾಯಿಯಾದ ಭಗವತಿ ಮಾಡುವ ಓಡಾಟಗಳು ಕೃತಿಯೊಳಗಡೆ ಬರುತ್ತವೆ. ಈ ಹಲವು ವಿನ್ಯಾಸಗಳ ಮೂಲಕ ಅಧಿಕಾರದ ಭಾಗವಾಗಿ ಪಯಣಗಳು ನಡೆಯುತ್ತವೆ. ಕಾದಂಬರಿಯು ಇಲ್ಲಿ ಪಯಣ ಮಾಡುವವರ ಮುಂಚಿನ ಸನ್ನಿವೇಶಗಳನ್ನು ಮಾತ್ರವಲ್ಲದೆ; ಪಯಣ ಮಾಡುವಾಗಿನ ಚಿತ್ರಗಳನ್ನು ಹಾಗೂ ಪಯಣ ಮುಗಿವಲ್ಲಿನ ಸನ್ನಿವೇಶವನ್ನೂ ಒಟ್ಟಿಗೆ ಹಿಡಿದುಕೊಡುತ್ತದೆ. ಪಯಣ ಮಾಡುವವರ ತಲ್ಲಣಗಳನ್ನು ಮಾತ್ರವಲ್ಲದೆ; ಪಯಣ ಕಳಿಸುವವರ ತಲ್ಲಣಗಳನ್ನೂ ಇದು ಹಿಡಿದುಕೊಡುತ್ತದೆ.

ವ್ಯಕ್ತಿಗಳಿಗೆ ಚರಿತ್ರೆ ಇರುವಂತೆ ದೇಶ, ರಾಜ್ಯ ಹಾಗೂ ಸಮಾಜಗಳಿಗೂ ಚರಿತ್ರೆ ಇರುತ್ತದೆಯೆಷ್ಟೆ ವಿಶೇಷವೆಂದರೆ, ಇಲ್ಲಿ ವ್ಯಕ್ತಿಯ, ಕುಟುಂಬದ, ದೇಶದ ಪಯಣಗಳು ಒಂದರೊಳಗೊಂದು ಬೆಸೆದುಕೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ಕಾಲಪ್ರವಾಹದಲ್ಲಿ ಕೊಡಗು ರಾಜ್ಯವು ಬೇರೆಬೇರೆ ರಾಜ್ಯಗಳ ಕೈಗೆ ಸಿಕ್ಕು ಪಯಣ ಮಾಡಿದೆ. ಇಂತಹ ರಾಜ್ಯಗಳನ್ನು ಆಧರಿಸಿ ಹುಟ್ಟುವ ಕಾದಂಬರಿಗಳಲ್ಲಿ ಪಯಣದ ಪರಿಕಲ್ಪನೆ ಅಂತರ್ಗತವಾಗಿ ನಾನಾ ತೆರನಾಗಿ ಇರುತ್ತದೆ. ಮಾಸ್ತಿಯವರ ಕಾದಂಬರಿಗಳಲ್ಲಿ

ರಾಜ್ಯಗಳು ಮಾಡುವ ಪಯಣವು ಎರಡು ನೆಲೆಗಳಲ್ಲಿದೆ. ಒಂದು ಒಂದು ದೇಶವನ್ನು ರಕ್ಷಿಸಿಕೊಳ್ಳುವ ಸಲುವಾಗಿ ದೇಶದ ಒಳಗಡೆಯೇ ಮಾಡುವ ಆತ್ಮರಕ್ಷಕ ಪಯಣಗಳು; ಇನ್ನೊಂದು ದೇಶವನ್ನು ವಶಪಡಿಸಿಕೊಳ್ಳುವ ಸಲುವಾಗಿ ಮಾಡುವ ಆಕ್ರಾಮಕ ಪಯಣಗಳು. ಮಾಸ್ತಿಯವರ ಎರಡೂ ಕಾದಂಬರಿಗಳು ವಿವಿಧ ಅಧಿಕಾರಸ್ಥರ ರಾಜಕೀಯ ಭೇಟಿಗಳಿಂದ, ಅವರ ಮನರಂಜನೆ ಬೇಟೆಗಳಿಂದ, ಬ್ರಿಟಿಷರು, ದೂತರು, ಹೈದರಾಲಿ, ಮೈಸೂರು ಅರಸರು, ದೇವಮ್ಮಾಜಿ–ಚೆನ್ನಬಸವ ನಾಯಕ ಮುಂತಾದ ನಾಯಕರ ಪಯಣಗಳಿಂದ, ವಿವಿಧ ಅರಮನೆ ಸೇವಕರು ಮಾಡುವ ದೂತಪಯಣಗಳಿಂದ ತುಂಬಿಹೋಗಿವೆ. ಈ ಪಯಣಗಳು ಬಿದನೂರಿನಿಂದ–ಮೈಸೂರು, ಮೈಸೂರಿನಿಂದ–ಬಿದನೂರು, ಕೊಡಗಿನಿಂದ–ಬೆಂಗಳೂರು–ಮದ್ರಾಸ್–ಇಂಗ್ಲೆಂಡ್ ಮುಂತಾದ ಕಡೆಗಳಲ್ಲಿ ಸಾಗುತ್ತವೆ.

ಈ ಕಾದಂಬರಿಯಲ್ಲಿ ಪಯಣ ದೊಡ್ಡ ರಾಜಕೀಯ ಉದ್ದೇಶಗಳಲ್ಲಿ ನಡೆಯುತ್ತಾ ಹೋಗುತ್ತದೆ. ಉದಾಹರಣೆ, ಹೈದರಾಲಿಯ ಮತ್ತು ಬ್ರಿಟಿಷರ ಚಲನೆಗಳು. ಮತ್ತೊಂದು ರಾಜ್ಯವನ್ನು ಕಬಳಿಸಲು ಮಾಡುವ ಓಡಾಟಗಳನ್ನು ಈ ಕಾದಂಬರಿಯೂ ಚಿತ್ರಿಸುತ್ತದೆ. ಬೇರೆ ಬೇರೆ ಹಕ್ಕುದಾರರು ರಾಜ್ಯವನ್ನು ಉಳಿಸಿಕೊಳ್ಳುವ ಸಲುವಾಗಿ, ರಾಜ್ಯದ ಅಧಿಕಾರವನ್ನು ಪಡೆದು ಕೊಳ್ಳುವುದಕ್ಕೆ, ಸಿಂಹಾಸನವನ್ನು ಪಡೆದುಕೊಳ್ಳುವುದಕ್ಕೆ ಮಾಡುವ ಪಯಣಗಳಿವೆ. ಮಾಸ್ತಿಯವರು ಬೇರೆ ಯಾವುದೇ ಕಾದಂಬರಿಗಳಲ್ಲೂ ಇಲ್ಲದೇ ಇರುವ ಎರಡು ಚಲನೆಗಳನ್ನು ತರುತ್ತಿದ್ದಾರೆ. ರಾಜ್ಯದ ಅಧಿಕಾರವನ್ನು ಪಡೆಯಲು ಮತ್ತು ಪದಚ್ಯುತಗೊಳಿಸಲು ಮಾಡುವ ಚಲನೆ. ರಾಜಕೀಯ ಚೌಕಟ್ಟಿನಲ್ಲಿ ಅಧಿಕಾರವನ್ನು ಕಲ್ಪಿಸಿಕೊಂಡಿವೆ. ಸೈನಿಕರು ಮತ್ತು ಚಿಕವೀರ ರಾಜೇಂದ್ರ, ಬಸವ, ಭಗವತಿ ಪಯಣ ಮಾಡುವಾಗಿನ ಸಂದರ್ಭಗಳು. ಪಯಣದ ಸಿದ್ಧತೆಗಳು ಪಯಣ ಮಾಡುವವರ ಮನೋಭಾವವನ್ನು ಸೂಚಿಸುತ್ತವೆ.

ವಿಶೇಷವೆಂದರೆ ಅಧಿಕಾರದ ಭಾಗವಾಗಿ ಕಾಣಿಸಿಕೊಳ್ಳುವ ಸುದ್ದಿಗಾರರು ಗೂಢಚಾರರು ಹಾಗೂ ಸೈನಿಕರ ಜತೆಯಲ್ಲಿ ಸಂದೇಶ ಪತ್ರಗಳು ಸಹ ಪಯಣಿಸುವುದು. ರಾಜ್ಯವನ್ನು ಅಥವಾ ರಾಜನನ್ನು ವಶಪಡಿಸಿಕೊಳ್ಳುವ ಇಲ್ಲವೇ ಬಂಧಮುಕ್ತಗೊಳಿಸುವ ನೆಲೆಯಲ್ಲಿ ಸಾಗುವ ಈ ಸುದ್ದಿಗಳು ಬಾಯ್ದೆರೆಯಾಗಿ ಪಯಣಿಸುತ್ತವೆ. ಲಿಖಿತರೂಪದಲ್ಲಿಯೂ ಪಯಣಿಸುತ್ತವೆ. ಮಗುವನ್ನು ಪಡೆದುಕೊಳ್ಳುವುದಕ್ಕೆ ಮಂಗಳೂರಿನ ಕುಂಪಣಿಯ ಕಲೆಕ್ಟರ್ ಕೊಡಗಿನ ಅರಸರಿಗೆ ಬರೆಯುವ ಪತ್ರ; ಮಂಗಳೂರಿನ ಕಲೆಕ್ಟರ್ ಬರೆಯುವ ಪತ್ರ, ಬೆಂಗಳೂರಿನ ರೆಸಿಡೆಂಟ್ ಮಹಾಶಯ ಬರೆಯುವ ಪತ್ರ, ಮದರಾಸಿನ ಗವರ್ನರ್ ಕೊಡಗನ್ನು ವಶಪಡಿಸಿಕೊಳ್ಳುವ ತಂತ್ರಗಾರಿಕೆಯ ಭಾಗವಾಗಿ ಕಳಿಸುವ ಪತ್ರ, ಹೀಗೆ ಕಾದಂಬರಿಯ ತುಂಬ ಸುದ್ದಿಗಾರರ ಮತ್ತು ಸಂದೇಶಗಳ ಚಲನೆಗಳ ವಿನಿಮಯವಾಗುತ್ತದೆ. ಜೀವವುಳ್ಳ ಮನುಷ್ಯರ ಮೂಲಕ ಸಾಗುವ ಈ ಜೀವರಹಿತ ಪತ್ರಗಳು ಅನೇಕರ ಜೀವ ಉಳಿಸುವ ಹಾಗೂ ಜೀವತೆಗೆಯುವ ಪ್ರಕ್ರಿಯೆಯಲ್ಲಿ ಚಲಿಸುತ್ತವೆ.

೫.೭. ಪಯಣ: ಕಥನತಂತ್ರ

ಮಾಸ್ತಿಯವರ ಎರಡು ಕಾದಂಬರಿಗಳ ವಸ್ತು ನಾಯಕರ ಪ್ರಾಣವು ಇಹಲೋಕವನ್ನು ಬಿಟ್ಟು ಹೋಗುವ ದುರಂತದಲ್ಲಿ ಅಂತ್ಯಗೊಳ್ಳುತ್ತವೆ. ಚೆನ್ನಬಸವನಾಯಕನ ಸಾವಿನ ಮೂಲಕ ಬಿದನೂರು ಪ್ರಾಂತ್ಯ ಮೈಸೂರಿನ ವಶವಾದರೆ, ಚಿಕವೀರ ರಾಜೇಂದ್ರನ ನಂತರ ಕೊಡಗು ಪ್ರಾಂತ್ಯವು ಬ್ರಿಟಿಷರ ವಶವಾಗುತ್ತದೆ. ಎರಡು ರಾಜ್ಯಗಳ ಅವನತಿಯ ಪಯಣ ಸಾಗುವುದು ಮಾತ್ರ ಭಿನ್ನ ನೆಲೆಗಳಲ್ಲಿ. ಇಡೀ ರಾಜ್ಯಗಳ ಏಳುಬೀಳುಗಳಲ್ಲಿ ಪ್ರಮುಖ ಪಾತ್ರ ವಹಿಸುವವರು ಮಹಿಳೆಯರು. ಇವರು ರಾಜ್ಯದ ಅಧಿಕಾರ ನಿರ್ವಹಣೆಯಲ್ಲಿ ಭಾಗವಹಿಸಿ ಅಧಃಪತನವೂ ಆಗುತ್ತದೆ. ರಾಜ್ಯದ ರಕ್ಷಣೆಯೂ ಆಗುತ್ತದೆ. 'ಚೆನ್ನಬಸವ ನಾಯಕ' ಕೃತಿಯ ಕಥೆ ಚೆನ್ನಬಸವ ನಾಯಕನ ಹೆಂಡತಿ ಶಾಂತವ್ವೆ ಯಾತ್ರೆ ಮಾಡುವ ಸನ್ನಿವೇಶದಿಂದ ಆರಂಭವಾಗುತ್ತದೆ. ಹೆಂಡತಿಯ ಸಾವಿನಿಂದ ಕಂಗೆಟ್ಟ ನಾಯಕನು ಅವಳು ಓಡಾಡಿದ ಸ್ಥಳಗಳಿಗೆ ಪಯಣ ಬೆಳೆಸುವ ಮೂಲಕ ಸಾಯುವ ಸನ್ನಿವೇಶದ ಮೂಲಕ ಕೊನೆಯಾಗುತ್ತದೆ. ಹೀಗೆ ಕಥೆಯ ಆರಂಭ ಮತ್ತು ಕೊನೆಗಳು ಪಯಣದ ಮೂಲಕವೇ ಆಗುತ್ತವೆ. ಕಥಾಹಂದರ ಆರಂಭದಲ್ಲಿ ಮಹಿಳೆ ಪಯಣ ಹೊರಟರೆ, ಕೊನೆಯಲ್ಲಿ ಅವಳ ನೆನಪಿನಲ್ಲಿ ಪುರುಷ ಪಯಣ ಮಾಡುತ್ತಾನೆ. ಒಂದು ಚಲನೆ ಮನೆತನದ, ಪತಿಯ ಶ್ರೇಯಸ್ಸಿಗಾಗಿ ಸಾಗಿದರೆ, ಇನ್ನೊಂದು ಹೆಂಡತಿಯ ಮೇಲಿನ ಪ್ರೀತಿಗಾಗಿ ಪಶ್ಚಾತ್ತಾಪಕ್ಕಾಗಿ ದುಗುಡ ನಿವಾರಣೆಗಾಗಿ ಸಾಗುತ್ತದೆ. ಈ ಎರಡು ಪಯಣಗಳ ನಡುವೆ ಬಿದನೂರು ರಾಜ್ಯದ ಏಳುಬೀಳುಗಳ ಚಲನೆಯು ಹುದುಗಿಕೊಳ್ಳುತ್ತದೆ.

ಮಾಸ್ತಿಯವರ ಕಥನ ತಂತ್ರದಲ್ಲಿ ಮನುಷ್ಯರ ಪಯಣಗಳ ಹಾಗೆಯೇ ಮಕ್ಕಳ, ಪತ್ರಗಳ ಪಯಣಗಳೂ ಸೇರಿವೆ. ವಸ್ತಾರೆಯ ಹೆಗ್ಗಡಿತಿ ವೀರಮ್ಮಾಜಿಗೆ ಬರೆಯುವ ಪತ್ರ, ಮೈಸೂರಿನ ಅರಸರಿಂದ ನವರಾತ್ರಿ ಉತ್ಸವಕ್ಕೆ ಚೆನ್ನಬಸವ, ಶಾಂತವ್ವೆಯರಿಗೆ ಆಹ್ವಾನ, ಮೈಸೂರಿನಿಂದ ಹೈದರ್‌ನಿಗೆ ಪತ್ರ ಮುಂತಾದ ಸನ್ನಿವೇಶಗಳು ಕಥೆಯ ವಿಸ್ತರಣೆಗೆ ಬೇಕಾದ ಹೊಸಪಯಣಗಳಿಗೆ ಕಾರಣವಾಗುತ್ತವೆ. ಇಡೀ ಕಾದಂಬರಿಯಲ್ಲಿ ಅರಸುಮನೆತನದ ಮುಂದಿನ ಕುಡಿಯಾಗಬಹುದಾದ ಎಳೆಯ ಮಗುವನ್ನು ಸಾಗಿಸುವುದು, ಅದು ತಂದೆ ತಾಯಿಗಳಿಂದ ತಪ್ಪಿಸಿಕೊಳ್ಳುವುದು, ಘಟ್ಟ ಹತ್ತುತ್ತ ಇದ್ದ ಹಾದಿಹೋಕರ ಕೈಗೆ ಸಿಗುವುದು, ಮರಳಿ ಅರಮನೆಗೆ ಬರುವುದು ಮತ್ತು ಕೊಲೆಗೀಡಾಡುವುದು ಅತ್ಯಂತ ಹೃದಯಸ್ಪರ್ಶಿಯಾಗಿ ದಾರುಣವಾಗಿ ಚಿತ್ರಿತವಾಗಿದೆ. ಅಧಿಕಾರಸ್ಥರ ಚಲನೆಯ ಅಮಾನುಷವಾಗಿರ ಬಲ್ಲವು ಎಂಬುದು ಸಾಂಕೇತಿಕವಾಗಿ ಈ ಮಗು ಮಾಡಬೇಕಾದ ಪಯಣಗಳು ಸೂಚಿಸುತ್ತವೆ. ಹೀಗೆ ಹಲವು ಬಗೆಯ ಸನ್ನಿವೇಶಗಳನ್ನು ಕಾದಂಬರಿ ದುಡಿಸಿಕೊಂಡಿರುವ ಕ್ರಮವು ಅದರ ದುರಂತಕ್ಕೆ ಒಂದು ಬಿಗಿಯನ್ನು ತಂದಿದೆ.

'ಚಿಕವೀರ ರಾಜೇಂದ್ರ' ವಸಾಹತುಶಾಹಿ ಆಳ್ವಿಕೆಯು ಭಾರತದಲ್ಲಿ ನೆಲೆನಿಂತ ರೀತಿಯನ್ನು ಚಿತ್ರಿಸುವ ಕಾದಂಬರಿ. ಅದು ಭಾರತವು ರಾಜಪ್ರಭುತ್ವದಿಂದ ಜನಪ್ರಭುತ್ವದ ಕಡೆ ಆರಂಭಿಸಿರುವ

ರಾಜಕೀಯ ಪಯಣವನ್ನೂ ಒಳಗೊಂಡಿರುವುದು ಸ್ವಾರಸ್ಯಕರವಾಗಿದೆ. 'ಚಿಕವೀರ ರಾಜೇಂದ್ರ'ದಲ್ಲಿ ಬ್ರಿಟಿಷರು ಮಡಿಕೇರಿಗೆ ಪಯಣ ಬೆಳೆಸಿ ಬಂದಾಗ ತಮ್ಮ ದೊರೆಯ ಬಗೆಗಿನ ಅಸಮಾಧಾನವನ್ನು ಪ್ರಜೆಗಳೇ ನಾಟಕದ ರೂಪಕದಲ್ಲಿ ವ್ಯಕ್ತಪಡಿಸುವ ಪ್ರಸಂಗ ಬರುತ್ತದೆ. ಇದು ದುರ್ಬಲ ಮತ್ತು ಕೆಟ್ಟ ಅನೈತಿಕ ರಾಜನನ್ನು ಆರಿಸುವ ಮತ್ತು ಕೆಳಗಿಳಿಸುವ ಹಕ್ಕನ್ನು ಜನ ಚಲಾಯಿಸುವ ಅವಕಾಶವಾಗಿ ಮಾರ್ಪಡುತ್ತದೆ. ಮಾಸ್ತಿಯವರ ಎರಡು ಕಾದಂಬರಿಗಳು ೧೮-೧೯ನೇ ಶತಮಾನಗಳ ಚರಿತ್ರೆಯ ವಸ್ತುವನ್ನು ಒಳಗೊಂಡಿದ್ದರೂ, ಭಾರತವು ಆಂಗ್ಲರ ಆಳ್ವಿಕೆಯಿಂದ ಬಿಡುಗಡೆಗೊಂಡ ಬಳಿಕ ಪ್ರಕಟವಾದ ಜನರ ಆಲೋಚನೆಯ ಕ್ರಮದಲ್ಲಿ ಆಗಿರುವ ಪಲ್ಲಟಗಳನ್ನು ಸಹ ಪ್ರತಿಬಿಂಬಿಸುತ್ತವೆ. ಇವು ಆದರ್ಶ ರಾಜ್ಯವು ಹೇಗಿರಬೇಕೆಂಬ ಕಲ್ಪನೆಯನ್ನು ಓದುಗನ ಮುಂದೆ ಮಂಡಿಸುತ್ತವೆ. ಒಬ್ಬ ರಾಜ ಅಥವಾ ರಾಣಿಯ ನಡುವಿನ ಅಧಿಕಾರ, ನಡತೆ, ಕುಟುಂಬದ ಕಲಹ ಹೇಗೆ ದೇಶ, ಪ್ರಾಂತ್ಯಗಳನ್ನು ಅವನತಿಯೆಡೆಗೆ ಸಾಗಿಸಬಹುದು ಎಂಬುದನ್ನು ಅವು ಸೂಕ್ಷ್ಮವಾಗಿ ತೆರೆದಿಡುತ್ತವೆ. ಇಲ್ಲಿಯೇ ಕನ್ನಡದ ಹಿರಿಯ ವಿಮರ್ಶಕರಾದ ಕೆ.ವಿ.ನಾರಾಯಣ ಅವರ ಅಭಿಪ್ರಾಯವೊಂದನ್ನು ಉಲ್ಲೇಖಿಸಬಹುದು. "ಮಾಸ್ತಿಯವರು ಮನುಷ್ಯನ ಅಂತರಂಗದ ಅತೀತ ಮೂಲಗಳಿಗೆ ಪಯಣ ಹೊರಟಿದ್ದರಿಂದ ಅವರ ಸಾಹಿತ್ಯದಲ್ಲಿ ಕಾಲದ ಪರಿಕಲ್ಪನೆ ವಿಶಿಷ್ಟಗೊಳ್ಳುತ್ತದೆ. ಅಂದರೆ ಚಾರಿತ್ರಿಕ ಕಾಲವೆಂಬುದಕ್ಕೆ ಅವರ ಸಾಹಿತ್ಯದಲ್ಲಿ ಅರ್ಥವಿಲ್ಲ. ಈಗ-ಇಲ್ಲಿ ಎಂಬುದಷ್ಟೇ ಮುಖ್ಯ ಕಾಲ-ಕಥೆಯ ಕಾಲ ಓದುಗನ ಕಾಲವಾಗಿ ಮಾರ್ಪಡಬೇಕೆಂಬುದೇ ಮುಖ್ಯ ಉದ್ದೇಶ."[೨] ಈ ದೃಷ್ಟಿಯಿಂದ ಮಾಸ್ತಿಯವರ ಕಾದಂಬರಿಗಳಲ್ಲಿ ಪಯಣ ಅಥವಾ ತಿರುಗಾಟಗಳಿಗೆ ಹೊಸಹೊಸ ಪ್ರದೇಶಗಳನ್ನು ಕಾಣಿಸುವ ಪ್ರವಾಸಿಗುಣವಿಲ್ಲ. ಬದಲಿಗೆ ಹೊಸಹೊಸ ವ್ಯಕ್ತಿಗಳಲ್ಲಿ ಇರುವ ದಯೆ ಕೇಡು ಪ್ರೇಮ ದ್ವೇಷ ಇತ್ಯಾದಿ ಮಾನವಭಾವಗಳನ್ನು ಕಾಣಿಸುವ ಉದ್ದೇಶವಿದೆ. ಹೀಗಾಗಿಯೇ ಕುವೆಂಪು ಕಾದಂಬರಿಗಳನ್ನು ಓದುವಾಗ ಓದುಗರು ಗುತ್ತಿಯ ಜತೆ ಮಲೆನಾಡಿನ ಪ್ರವಾಸ ಹೊರಟಂತೆ ಭಾಸವಾಗುತ್ತದೆ. ಆದರೆ ಮಾಸ್ತಿಯವರ ಪಾತ್ರಗಳ ಜತೆ ಹೊರಟರೆ ಕೊಡಗಿನ ಅಥವಾ ಬಿದನೂರಿನ ಪರಿಸರದ ವಿವರಗಳು ಹಾಗೆ ದಟ್ಟವಾಗಿ ಕಾಣಿಸುವುದಿಲ್ಲ. ಎಂತಲೇ ಅವರ ಕಾದಂಬರಿಗಳು ವ್ಯಕ್ತಿಜಗತ್ತಿನ ಅಂತರಂಗದ ಲೋಕಕ್ಕೆ ಮಾಡುವ ಪಯಣವೆಂಬಂತೆ ಭಾಸವಾಗುತ್ತದೆ.

ಕೊನೆ ಟಿಪ್ಪಣಿಗಳು:

೧. ಮೈಸೂರು ವಿಭಾಗದಲ್ಲಿ ಅಧಿಕಾರಿಯಾಗಿದ್ದ ಮಾಸ್ತಿಯವರಿಗೆ ಕೊಡಗಿನ ಸಮೀಪ ಪರಿಚಯವಾಗಿ, ಚಿಕವೀರ ರಾಜನನ್ನು ಕುರಿತು ಒಂದು ನಾಟಕವನ್ನು ಬರೆಯಲು ಸಂಕಲ್ಪಿಸಿದ್ದರು. ಕಾಲಕ್ರಮೇಣ ನಾಲ್ಕಾರು ಸಲ ಕೊಡಗಿನ ಪರ್ಯಟನ, ವಿವಿಧ ಇತಿಹಾಸ ಗ್ರಂಥಗಳ ಪರಿಶೀಲನೆ, ಅನೇಕ ಐತಿಹ್ಯಗಳ ಸಂಕಲನಗಳಿಂದಾಗಿ ಕಥಾವಸ್ತು ದೊಡ್ಡದಾಗಿ ಬೆಳೆಯಿತು.

೨. ವಿಜಯಾ(ಸಂ), 'ಅಂಕಣ', ಮಾಸ್ತಿ ವಿಶೇಷಾಂಕ, ಪು.೧೯

೩. ಶಿವರುದ್ರಪ್ಪ ಜಿ.ಎಸ್.(ಸಂ), ‘ಮಾಸ್ತಿಯವರ ಸಾಹಿತ್ಯ ಒಂದು ಅಧ್ಯಯನ’, ಪು.೫೩

೪. ಮೂರ್ತಿರಾವ್ ಎ.ಎನ್., ‘ಶ್ರೀ ಮಾಸ್ತಿಯವರ ಕಥೆಗಳು’(ವಿಮರ್ಶೆ), ಪು.೧೨೭

೫. ನಾಗರಾಜ್ ಡಿ.ಆರ್., ‘ಸಾಹಿತ್ಯ ಕಥನ’, ಪು.೩೪೩

೬. ನಾಗರಾಜ್ ಡಿ.ಆರ್., ‘ಅಮೃತ ಮತ್ತು ಗರುಡ’, ಪು.೮೧

೭. ನಾರಾಯಣ ಕೆ.ವಿ., ‘ಬೇರು ಕಾಂಡ ಚಿಗುರು’, ಪು.೩೬೬

ಅಧ್ಯಾಯ ಆರು

ರಾವಬಹದ್ದೂರರ ಕಾದಂಬರಿಗಳಲ್ಲಿ ಪಯಣದ ವಿನ್ಯಾಸಗಳು

೬.೧. ಪ್ರವೇಶ

೬.೨. ಪಯಣ: ಅಂತರ್ ಸಂಬಂಧಗಳು

೬.೩. ಪಯಣ: ಆಸ್ತಿ ಮತ್ತು ಅಧಿಕಾರ

೬.೪. ಪಯಣ: ಸಂಘರ್ಷ

೬.೫. ಪಯಣ: ನೈತಿಕತೆ

೬.೬ ಪಯಣ: ಆಗಮನ ಮತ್ತು ನಿರ್ಗಮನದ ಸನ್ನಿವೇಶಗಳು

೬.೭. ಪಯಣ: ಕಥನತಂತ್ರ

ಅಧ್ಯಾಯ ಆರು

ರಾವಬಹದ್ದೂರರ ಕಾದಂಬರಿಗಳಲ್ಲಿ ಪಯಣದ ವಿನ್ಯಾಸಗಳು

೬.೧. ಪ್ರವೇಶ

ರಾಮಚಂದ್ರ ಭೀಮರಾವ್ ಕುಲಕರ್ಣಿಯವರು ಕನ್ನಡ ಸಾಹಿತ್ಯದಲ್ಲಿ 'ರಾವಬಹದ್ದೂರ' ಎಂಬ ಕಾವ್ಯನಾಮದಿಂದ ಹೆಸರಾಗಿದ್ದಾರೆ. ಇವರು ಮುಖ್ಯವಾಗಿ ಕಾದಂಬರಿ, ಕಥೆ, ನಾಟಕ, ಪ್ರವಾಸ ಸಾಹಿತ್ಯ ಹೀಗೆ ಹಲವು ನೆಲೆಗಳಲ್ಲಿ ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ಅವರು ಅನೇಕ ಕಾದಂಬರಿಗಳನ್ನು ಬರೆದಿದ್ದರೂ ಅವರಿಗೆ ಹೆಸರು ತಂದುಕೊಟ್ಟ ಕಾದಂಬರಿಯೆಂದರೆ 'ಗ್ರಾಮಾಯಣ'. ರಾವಬಹದ್ದೂರರ ಈ ಕಾದಂಬರಿ ಉತ್ತರ ಕರ್ನಾಟಕದ ಜನ ಜೀವನ ಹಾಗೂ ಪ್ರಾದೇಶಿಕ ಸೊಗಡಿಗೆ ಹೆಸರಾಗಿದೆ. ಅಲ್ಲಿನ ವಿಶಿಷ್ಟ ಭಾಷೆ, ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಭಾರತದ ಸ್ಥಿತಿಗತಿ, ಗಾಂಧಿಯುಗದ ಆದರ್ಶ, ಮೌಲ್ಯಗಳು ಹಾಗೂ ಗಾಂಧಿ ನಂತರದ ಭಾರತ ಕಂಡ ಸ್ಥಿತ್ಯಂತರದ ಚಲನೆಗಳನ್ನು ರಾವಬಹದ್ದೂರರು ತಮ್ಮ ಕೃತಿಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಇವರ ಕಾದಂಬರಿಗಳ ವಸ್ತುವಿನೊಳಗಡೆಯೆ ಸ್ಥಿತ್ಯಂತರದ ನೆಲೆಗಳಿದ್ದು ಅವು ವಿವಿಧ ಬಗೆಯ ಪಯಣಗಳ ಜತೆ ಲಗತ್ತಾಗಿವೆ. ಪ್ರಸ್ತುತ ಪಯಣದ ಪರಿಕಲ್ಪನೆಯ ದೃಷ್ಟಿಯಿಂದ ರಾವಬಹದ್ದೂರರ 'ಗ್ರಾಮಾಯಣ'(೧೯೫೭) ಮತ್ತು 'ಬಿತ್ತಿ ಬೆಳೆದವರು'(೧೯೭೨) ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಬಹುದು.

ಪಯಣದಲ್ಲಿ ಮುಖ್ಯವಾಗಿ ಮೂರು ರೀತಿಯ ಚಲನೆಗಳಿವೆ. ಮೊದಲನೆಯದು–ಪ್ರಾಕೃತಿಕ ನೆಲೆಯ ಚಲನೆಗಳು. ನಿದರ್ಶನಕ್ಕೆ ನೀರು ಒಂದೆಡೆಯಿಂದ ಮತ್ತೊಂದೆಡೆ ಚಲಿಸುವುದು; ಗಾಳಿ ಒಂದೆಡೆಯಿಂದ ಮತ್ತೊಂದೆಡೆಗೆ ಬೀಸುವುದು; ಸೂರ್ಯ ಪೂರ್ವ ದಿಕ್ಕಿನಿಂದ ಪಶ್ಚಿಮ ದಿಕ್ಕಿಗೆ ಪಯಣಿಸುವುದು ಇತ್ಯಾದಿ. ಎರಡನೆಯದು–ಭೂಮಿ ಆಗಸ ನೀರುಗಳಲ್ಲಿ ಜೀವಿಗಳು ಒಂದೆಡೆಯಿಂದ ಮತ್ತೊಂದೆಡೆಗೆ ಮಾಡುವ ಚಲನವಲನ; ಮೂರನೆಯದು–ಭೌತಿಕವಾಗಿ ಚಲನವಲನವಿಲ್ಲದೆ

ನೆಲೆನಿಂತಿರುವ ಕುಟುಂಬ, ಊರುಗಳಲ್ಲಿ ನಡೆಯುವ ಚಲನವಲನ. ಮನೆ, ಕುಟುಂಬ, ಊರು ಚಲಿಸುವುದಿಲ್ಲ. ಆದರೂ ಅವುಗಳೊಳಗೆ ಸಾಮಾಜಿಕ ಒತ್ತಡಕ್ಕೆ ಅನುಸಾರವಾಗಿ ಬದಲಾವಣೆ ಆಗುತ್ತದೆ. ಆದರೆ ಪ್ರಕೃತಿಯೊಳಗಿನ ಬದಲಾವಣೆಗಳು ಜೀವಿಗಳ ಮತ್ತು ಊರು ಕುಟುಂಬಗಳ ಚಲನೆಗೆ ಕಾರಣವಾಗಬಲ್ಲವು. ಕುಟುಂಬ, ಹಳ್ಳಿ, ಊರುಗಳೊಳಗೆ ನಡೆಯುವ ಚಲನೆಗಳು ಜನರ ಆಲೋಚನ ಕ್ರಮದಲ್ಲಿ ಹಾಗೂ ಮನುಷ್ಯ ಸಂಬಂಧಗಳಲ್ಲಿ ಬದಲಾವಣೆ ಸಂಭವಿಸುವಂತೆ ಮಾಡುತ್ತವೆ. ಮಹಾದೇವರ 'ಕುಸುಮಬಾಲೆ' ಕಾದಂಬರಿಯಲ್ಲಿ ಕುಸುಮ ಮದುವೆಯಾಗಿ ಬಂದ ಕೂಡಲೇ ಎರಡು ಬಗೆಯ ಚಲನೆಗಳು ಕಂಡುಬರುತ್ತವೆ. ಒಂದು–ಊರಲ್ಲಿ ಸುಪ್ತವಾದ ಜಾತಿ ಸಂಘರ್ಷಗಳು ಆರಂಭವಾಗುವುದು; ಮತ್ತೊಂದು ಆಕೆಯ ಕುಟುಂಬದ ಒಳಗಡೆಯೇ ಸಂಘರ್ಷಗಳು ಸಂಭವಿಸುವುದು. ಕುವೆಂಪು ಕಾದಂಬರಿಗಳಲ್ಲಿಯೂ ಊರು ಮತ್ತು ಕುಟುಂಬದ ಒಳಗಡೆಯೇ ವ್ಯಕ್ತಿಗಳು ಬದಲಾಗುವ ರೂಪಾಂತರಗಳು ಬರುತ್ತವೆ. ಮುಖ್ಯ ಸಂಗತಿಯೆಂದರೆ, ವ್ಯಕ್ತಿ ಕುಟುಂಬ ಊರು ಹಾಗೂ ಸಮಾಜಗಳಲ್ಲಿ ಉಂಟಾಗುವ ಚಲನೆಗಳು ಪ್ರಾಕೃತಿಕ ಪರಿಸರದೊಳಗೆ ಆಗುವ ಚಲನೆಗಳ ಜತೆ ಸಂಬಂಧ ಪಡೆದಿರುವುದು.

ರಾವಬಹದ್ದೂರರ ಕಾದಂಬರಿಗಳಲ್ಲಿಯೂ ವ್ಯಕ್ತಿ, ಕುಟುಂಬ, ಊರು ಹಾಗೂ ನಿಸರ್ಗ ಈ ನಾಲ್ಕೂ ಸ್ತರಗಳಲ್ಲಿ ಚಲನವಲನ ಕಂಡುಬರುತ್ತದೆ. ಇಲ್ಲಿ ಊರಿನ ಒಳಗಡೆ ಜಾತಿ ವರ್ಗಗಳ ನಡುವೆ ಸಂಘರ್ಷಗಳು ನಡೆಯುತ್ತವೆ; ಎರಡು ಕುಟುಂಬಗಳ ನಡುವಿನ ಸಂಘರ್ಷ ನಡೆಯುತ್ತದೆ. ಒಂದೆ ಕುಟುಂಬಕ್ಕೆ ಸೇರಿದ ವ್ಯಕ್ತಿ ವ್ಯಕ್ತಿಗಳ ನಡುವೆ ಸಂಘರ್ಷ ನಡೆಯುತ್ತದೆ. ಗಂಡು–ಹೆಣ್ಣಿನ ನಡುವೆ ಸಂಘರ್ಷ ನಡೆಯುತ್ತದೆ; ಪ್ರಕೃತಿಯ ವಿಕೋಪ ಹಾಗೂ ಮಾನವ ಸಮಾಜದ ನಡುವೆ ಸಂಘರ್ಷ ಜರುಗುತ್ತದೆ. ಈ ಸಂಘರ್ಷಗಳು ಬದಲಾವಣೆ ಉಂಟುಮಾಡುತ್ತವೆ. ಚರಿತ್ರೆಯಲ್ಲಿ ಪರಸ್ಪರ ವಿರುದ್ಧ ಹಿತಾಸಕ್ತಿಗಳ ನಡುವೆ ನಡೆದ ಸಂಘರ್ಷಗಳು ಬದಲಾವಣೆ ಉಂಟುಮಾಡಿವೆ. ಯಾವಾಗಲೂ ಸಂಘರ್ಷಗಳು ಚಲನೆಯ ಚಾಲಕ ಶಕ್ತಿಯಾಗಿ ಕೆಲಸ ಮಾಡುತ್ತವೆ. ವ್ಯಕ್ತಿಗಳ ನಡುವಿನ, ಜಾತಿಗಳ ನಡುವಿನ, ಕುಟುಂಬಗಳ ನಡುವಿನ ವೈಮನಸ್ಸುಗಳು ಸಂಘರ್ಷಗಳಾಗಿ ವ್ಯಕ್ತಿಗಳನ್ನು, ಕುಟುಂಬವನ್ನು, ಊರನ್ನು ಪಲ್ಲಟಕ್ಕೆ ಒಡ್ಡುತ್ತವೆ. ಇದನ್ನು ರಾವಬಹದ್ದೂರರ ಕಾದಂಬರಿಗಳು ಚಿತ್ರಿಸುತ್ತವೆ.

ವ್ಯಕ್ತಿ, ಕುಟುಂಬ, ಊರು ಘಟಕಗಳ ಒಳಗೆ ಜರುಗುವ ಬದಲಾವಣೆಗೆ ಚಾಲಕ ಶಕ್ತಿಗಳು–ಸ್ವಾತಂತ್ರ್ಯ ಚಳುವಳಿ ಇತ್ಯಾದಿ–ಊರ ಹೊರಗಿವೆ. ಅವು ವ್ಯಕ್ತಿಗಳಲ್ಲಿ ಬದಲಾವಣೆ ತರುತ್ತವೆ. ಪರಿಸರದಲ್ಲಿ ಬದಲಾವಣೆಯಾದರೆ ವ್ಯಕ್ತಿಯಲ್ಲೂ ಬದಲಾವಣೆಯಾಗುತ್ತದೆ. ಹಾಗೆ ಬದಲಾದ ವ್ಯಕ್ತಿಯಿಂದ ಪರಿಸರವೂ ಬದಲಾಗುತ್ತದೆ. ಇಂತಹ ಭಿನ್ನ ನೆಲೆಯ ದ್ವಂದ್ವಾತ್ಮದ ಚಲನೆಗಳನ್ನು ರಾವಬಹದ್ದೂರರ ಕಾದಂಬರಿಗಳಲ್ಲಿ ಗುರುತಿಸಬಹುದು. ಸ್ವಾತಂತ್ರ್ಯ ಚಳುವಳಿಯ ಬದಲಾವಣೆಯಿಂದ ವ್ಯಕ್ತಿಯಲ್ಲಿ ಬದಲಾವಣೆಯಾಗುತ್ತದೆ. ಹೀಗೆ ಬದಲಾದ ಅವನಿಂದ ಕುಟುಂಬ, ಜನ,

ಹಳ್ಳಿಯ ಜನರು ಮತ್ತೊಂದು ಚಲನಶೀಲ ರೂಪ ಪಡೆಯುವರು. ಒಂದು ಚಲನೆ ಅಥವಾ ಬದಲಾವಣೆ ಇನ್ನೊಂದು ಬದಲಾವಣೆಗೆ ನಾಂದಿಹಾಡುತ್ತದೆ. ಇವುಗಳ ಹಿಂದೆ ಪಯಣದ ಅನೇಕ ವಿನ್ಯಾಸಗಳು ಕೆಲಸ ಮಾಡಿವೆ.

ಸಮಾಜ ಮತ್ತು ವ್ಯಕ್ತಿಯ ನಡುವೆ ಏಕಮುಖವಾದ ಸಂಬಂಧವಿರುವುದಿಲ್ಲ. ಅದು ದ್ವಿಮುಖಿಯಾಗಿರುತ್ತದೆ. ಪಯಣವೆಂಬುದು ಕೇವಲ ವ್ಯಕ್ತಿಯ ದೈಹಿಕ ಚಲನೆಯಾಗದೇ ವ್ಯಕ್ತಿ, ಕುಟುಂಬ, ಹಳ್ಳಿ, ಊರುಗಳ ಒಳಗಡೆಯೇ ನಡೆಯುವ ಆಂತರಿಕ ಪಲ್ಲಟಗಳೂ ಆಗಿವೆ ಎಂಬುದನ್ನು ತಾತ್ವಿಕವಾಗಿ ಈ ನಿಬಂಧದ ವಿಶ್ಲೇಷಣೆಯಲ್ಲಿ ಗುರುತಿಸಿಕೊಳ್ಳಲಾಗಿದೆ. ಉದಾಹರಣೆಗೆ, ಕುವೆಂಪುರವರ 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಹೂವಯ್ಯ ವಿದ್ಯಾಭ್ಯಾಸ ಪಡೆದು ಮಲೆನಾಡನ್ನು ಬದಲಾಯಿಸಲು ಪ್ರಯತ್ನಿಸಿದ ಹಾಗೇ, ಮಲೆನಾಡಿನ ಪರಿಸರ ಹೂವಯ್ಯನ ಆಲೋಚನ ಕ್ರಮವನ್ನೂ ಬದಲಾವಣೆಗೆ ಒಳಪಡಿಸುತ್ತದೆ. ಕೆ.ವಿ.ಪುಟ್ಟಪ್ಪನವರು ಮಲೆನಾಡಿನಿಂದ ಮೈಸೂರಿಗೆ ಪಯಣ ಬೆಳೆಸಿ ಕುವೆಂಪು ಆದಂತೆ, ತಮ್ಮನ್ನು ಬದಲಾಯಿಸಿದ ಮೈಸೂರನ್ನೂ ಅವರು ಸಾಂಸ್ಕೃತಿಕವಾಗಿ ಬದಲಾಯಿಸಿದರು. ಅಲ್ಲಿನ ರಾಜ ಪ್ರಭುತ್ವವನ್ನು ವೀಕ್ಷಿಸಿದರು, ಸಮಾಜದ ಸುಧಾರಣೆಯನ್ನು ತಮ್ಮ ಕಲಾ ಜಗತ್ತಿನ ಮೂಲಕ ಮಾಡಿದರು. ಬದಲಾವಣೆಗೆ ಒಳಪಟ್ಟ ಮನುಷ್ಯರು ಸಮಾಜವನ್ನು ಬದಲಾಯಿಸುವರು. ಹೀಗೆ ಕುಟುಂಬ, ಹಳ್ಳಿ, ಊರುಗಳ ಸಾಮಾಜಿಕ ಪರಿಸರವು ಬದಲಾಯಿಸಿದ ವ್ಯಕ್ತಿಗಳನ್ನು ಹಾಗೂ ಹೀಗೆ ಬದಲಾದ ವ್ಯಕ್ತಿಗಳು ತಮ್ಮ ಸುತ್ತಲಿನ ಸಾಮಾಜಿಕ ಪರಿಸರವನ್ನು ಬದಲಾಯಿಸಲು ಯತ್ನಿಸುವ ಸಂಗತಿಗಳನ್ನು ರಾವಬಹದ್ದೂರರ ಕಾದಂಬರಿಗಳೂ ಚಿತ್ರಿಸುತ್ತವೆ. ರಾವಬಹದ್ದೂರರ 'ಬಿತ್ತಿ ಬೆಳೆದವರು' ಕಾದಂಬರಿಯಲ್ಲಿ ಸ್ವಾತಂತ್ರ್ಯದ ಚಳುವಳಿ ಅಥವಾ ಕ್ವಿಟ್ ಇಂಡಿಯಾ ಚಳುವಳಿ ಊರನ್ನು ಬದಲಾಯಿಸಿದಂತೆ, ಆ ಚಳುವಳಿಯನ್ನು ಕಟ್ಟಿದವನು ಅದೇ ಊರಿನವನು ಎಂಬುದನ್ನು ಮರೆಯುವಂತಿಲ್ಲ. ಆ ಮೂಲಕ ರಾವಬಹದ್ದೂರರ ಕಾದಂಬರಿಗಳಲ್ಲಿ ಎರಡೂ ನೆಲೆಗಳಲ್ಲಿ ಪರಿವರ್ತನೆಯ ಚಲನೆಗಳನ್ನು ಗುರುತಿಸಬಹುದಾಗಿದೆ. ವ್ಯಕ್ತಿ, ಕುಟುಂಬ, ಸಮುದಾಯ, ಊರುಗಳಲ್ಲಿ ಹೊರಗಡೆಯಿಂದ ಬರುವಂತಹ ಚಾರಿತ್ರಿಕ ಒತ್ತಡಗಳಾದ ಸ್ವಾತಂತ್ರ್ಯ ಚಳುವಳಿ, ಆಧುನಿಕ ಶಿಕ್ಷಣ ಚಾಲಕ ಶಕ್ತಿಗಳಾಗಿ ಬದಲಾವಣೆ ತರುತ್ತವೆ. ಹೀಗೆ ಸಂಭವಿಸುವ ರೂಪಾಂತರ ಇಲ್ಲವೇ ಪಲ್ಲಟಗಳನ್ನು ಸಹ ಇಲ್ಲಿ ವಿಶಾಲ ಅರ್ಥದಲ್ಲಿ ಸಾಮಾಜಿಕ ಪರಿಸರವು ಮಾಡುವ ಪಯಣವೆಂದು ಗ್ರಹಿಸಿ ಇಲ್ಲಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

ಆದರೆ ಈ ಲೋಕದಲ್ಲಿ ಸಂಭವಿಸುವ ಪಲ್ಲಟ ಅಥವಾ ಬದಲಾವಣೆ ಎಂಬುದು ಕೇವಲ ಒಳಿತನ್ನು ಮಾಡುವುದಿಲ್ಲ, ಕೆಡಕನ್ನೂ ಉಂಟು ಮಾಡಬಹುದು. ಬದಲಾವಣೆ, ಪರಿವರ್ತನೆ, ಚಲನೆ, ಪಯಣಗಳು ಕೇವಲ ಧನಾತ್ಮಕವಾಗಿ ನಡೆಯುವುದಿಲ್ಲ. ಅವುಗಳ ಪರಿಣಾಮಗಳು ಋಣಾತ್ಮಕವಾಗಿಯೂ ಇರಬಲ್ಲವು. ಈ ಹಿನ್ನೆಲೆಯಲ್ಲಿ ಹಳ್ಳಿಯ ಬದುಕಿನೊಳಗಿನ ಒಳಿತು ಮತ್ತು ಕೆಡುಕಿನ ಎರಡು ಬಗೆಯ ಬದಲಾವಣೆಯ ವಿನ್ಯಾಸಗಳನ್ನು ಹಿಡಿಯುವುದೇ ರಾವಬಹದ್ದೂರರ

ಕಾದಂಬರಿಯ ಯತ್ನವಾಗಿದೆ. ಮಾಸ್ತಿ ಕಾದಂಬರಿಗಳಲ್ಲಿ ನೈತಿಕ ಕಾಳಜಿಯಿಂದ ಬದುಕಿನಲ್ಲಿ ನಡೆಯುವ ಬದಲಾವಣೆಗಳ ಚಿತ್ರಣವಿದೆ. ಆದರೆ ರಾವಬಹದ್ದೂರರು ಯಾವುದೇ ನೈತಿಕ ತಳಮಳವಿಲ್ಲದೆ ಕೆಡಕು ಒಳಿತುಗಳೆರಡೂ ಇರುವ ಗ್ರಾಮಬದುಕಿ ಬದಲಾವಣೆಗಳನ್ನು ನಿರ್ಲಿಪ್ತವಾಗಿ ಚಿತ್ರಿಸುವರು. ೨೦ನೇ ಶತಮಾನದ ಆಸುಪಾಸಿನಲ್ಲಿ ಉತ್ತರ ಕರ್ನಾಟಕದ ಗ್ರಾಮಗಳಲ್ಲಿ ಸಂಭವಿಸುತ್ತಿರುವ ವಾಸ್ತವವನ್ನು ಚಿತ್ರಿಸುವುದೇ ಅವರ ಕಾದಂಬರಿಗಳ ಉದ್ದೇಶವಾಗಿದೆ.

ಕನ್ನಡದಲ್ಲಿ ಅನೇಕ ಕಾದಂಬರಿಕಾರರಿಗೆ ಕಥೆಯನ್ನು ಸುಖಾಂತವೊ ದುಃಖಾಂತವೊ ಮಾಡುವ ಮೂಲಕ ಓದುಗರ ಮೇಲೆ ಗಾಢ ಪರಿಣಾಮವನ್ನು ಉಂಟುಮಾಡುವುದು ಮುಖ್ಯವಾಗುತ್ತದೆ. ಆದರೆ ರಾವಬಹದ್ದೂರರಿಗೆ ಹಳ್ಳಿಗಳ ಬದುಕಿನೊಳಗೆ ಕಟುವಾದ ವಾಸ್ತವವಾದ ಚಲನೆಗಳನ್ನು ಹಿಡಿಯುವುದೇ ಮುಖ್ಯವಾಗುತ್ತದೆ. ಜೀವನದ ಚಲನಶೀಲ ತತ್ವವನ್ನು ನಿಷ್ಠುರವಾಗಿ ತಮ್ಮ ಕೃತಿಗಳ ಮೂಲಕ ಅವರು ಕಾಣಿಸುತ್ತಾರೆ. ಮಿರ್ಜಿ ಅಣ್ಣಾರಾಯ, ರಾವಬಹದ್ದೂರ, ಶಿವರಾಮ ಕಾರಂತ ಮುಂತಾದವರ ಕಾದಂಬರಿಗಳು ಜನಪ್ರಿಯ ರಾಜಕೀಯ ಘೋಷಣೆಗಳಾಚೆ ಇರುವ ಗ್ರಾಮೀಣ ವಾಸ್ತವತೆಯನ್ನೂ ಹಿಡಿಯುತ್ತವೆ. ಕಲಾವಿದರಾಗಿ ಹಳ್ಳಿಯ ವಾಸ್ತವಿಕ ಬದುಕಿನ ಪಲ್ಲಟಗಳನ್ನು ರಾವಬಹದ್ದೂರರು ತಮ್ಮ ಕಾದಂಬರಿಯಲ್ಲಿ ತೆರೆದಿಟ್ಟಿದ್ದಾರೆ. ಜಿ.ಎಸ್. ಆಮೂರ ಅವರು 'ಕನ್ನಡ ಕಥನ ಸಾಹಿತ್ಯ: ಕಾದಂಬರಿ' ಕೃತಿಯಲ್ಲಿ ರಾವಬಹದ್ದೂರರ ಕುರಿತು ಚರ್ಚಿಸುತ್ತ "ಕಾರಂತ–ಗೋಕಾಕರಿಗೆ ಸಮಾಜದ ವಿಘಟನೆಯಂತೆ ಅದರ ಸಂಘಟನೆಯೂ ಮಹತ್ವದ್ದೆನಿಸಿದ್ದರಿಂದ ಅವರು ತಮ್ಮ ಕಾದಂಬರಿಗಳಿಗೆ ಆ ರೀತಿಯ ಹೊಳವನ್ನು ಹಾಕಿಕೊಂಡರು. ರಾವಬಹದ್ದೂರರು ಇಂಥ ಮಹತ್ವಾಕಾಂಕ್ಷೆ ಬಿಟ್ಟುಕೊಟ್ಟು ಒಂದು ಸಮಾಜದ ಅಧೋಗತಿಯನ್ನು ಚಿತ್ರಿಸುವುದರಲ್ಲಿಯೇ ಕೃತಾರ್ಥತೆಯನ್ನು ಕಂಡುಕೊಂಡರು. ಇದು ಅವರ ಕಾದಂಬರಿಗೆ ಏಕರೂಪತೆಯನ್ನು ಕೊಟ್ಟುದುದಲ್ಲದೆ ವಸ್ತುವಿನ ನವ್ಯತೆಯ ಆವಿರ್ಭಾವಕ್ಕೂ ಕಾರಣವಾಯಿತು" ಎಂದು ಹೇಳುತ್ತಾರೆ.[೧] ಹಾಗಾಗಿಯೇ ರಾವಬಹದ್ದೂರರು ವಸ್ತುವಿನ ಕಥೆಯನ್ನು ನಿಯಂತ್ರಿಸದೆ ಸಹಜ ನೆಲೆಯಲ್ಲಿಯೇ ಇರುವ ಹಾಗೆಯೇ ಹಳ್ಳಿಯ ಬದುಕಿನ ವಾಸ್ತವ ಚಲನೆಯ ಪಲ್ಲಟಗಳನ್ನು ಹೇಳುತ್ತಾರೆ. ಅವರ ಈ ಕಥನಕ್ರಮವೇ ಬೇರೆ ಕಾದಂಬರಿಕಾರರಿಗಿಂತ ಅವರನ್ನು ಭಿನ್ನವಾದ ಸಾಲಿನಲ್ಲಿ ತಂದು ನಿಲ್ಲಿಸುತ್ತದೆ. ವಾಸ್ತವವನ್ನು ಹೀಗೆ ತೆರೆದಿಡುವಿಕೆಯು ವಾಸ್ತವವಾದಿ ಕಥನಕ್ರಮವು ಒಂದು ದೊಡ್ಡ ಶಕ್ತಿಯಾಗಿದೆ. ಬದಲಾವಣೆಯೇ ಜೀವನದ ಮೂಲಭೂತ ತತ್ವ. ಈ ನೆಲೆಯಲ್ಲಿ ಸ್ವತಃ ಗಾಂಧಿವಾದಿಯಾಗಿದ್ದ ರಾವಬಹದ್ದೂರರು ಗಾಂಧೀಜಿಯವರು ನಂಬಿದ ಸ್ಥಗಿತ ಹಳ್ಳಿಗಳ ಕಲ್ಪನೆಯನ್ನು ತಮ್ಮ ಕಲಾಕೃತಿಯ ಮೂಲಕ ನಿರಾಕರಿಸುತ್ತಾರೆ. ಗಾಂಧಿವಾದವನ್ನು ಪ್ರಾಮಾಣಿಕವಾಗಿ ನಂಬಿದ್ದ ಗೊರೂರು ರಾಮಸ್ವಾಮಿ ಅಯ್ಯಂಗಾರರು, ಹಳ್ಳಿಗಳ ಕುರಿತು ಸ್ವಲ್ಪ ಮಟ್ಟಿಗೆ ರಮ್ಯ ಚಿತ್ರಣವನ್ನು ನೀಡಿದರು. ಆದರೆ ಮೊದಲು ಗಾಂಧಿವಾದಿಯಾಗಿದ್ದ ನಂತರ ಅದರ ಜತೆ ವಿರಸವನ್ನು ಬೆಳೆಸಿಕೊಂಡ ಕಾರಂತರು ನಮ್ಮ ಭಾರತದ ಹಳ್ಳಿಗಳ ನೈಜತೆಯನ್ನು ಕಠೋರವಾಗಿ ಚಿತ್ರಿಸಿದರು.

ಇವರ ಬಳಿಕ 'ನಿಸರ್ಗ' ಕಾದಂಬರಿಯನ್ನು ಬರೆದ ಮಿರ್ಜಿಅಣ್ಣಾರಾಯ ಸಹ ತಮ್ಮ ಕೃತಿಯಲ್ಲಿ ಈ ಬದಲಾವಣೆ ಅಥವಾ ಚಲನೆಗಳನ್ನು ಕಾಣಿಸಿದರು. ಇಂತಹ ಚಲನೆಯ ವಿನ್ಯಾಸಗಳನ್ನು ಗುರುತಿಸುವುದು ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಮುಖ್ಯವಾಗುತ್ತದೆ.

'ಗ್ರಾಮಾಯಣ'(೧೯೫೭): 'ಗ್ರಾಮಾಯಣ' ಶೀರ್ಷಿಕೆಯ ಒಳಗಡೆಯೇ ಚಲನೆಯ ಸೂಚನೆಯಿದ್ದು, ಬೇರೆಬೇರೆ ಒತ್ತಡಗಳಲ್ಲಿ ಒಂದು ಗ್ರಾಮವು ಮಾಡಿದ ಪಯಣದ ಕಥೆಯನ್ನು ಇದು ಒಳಗೊಂಡಿದೆ. ಗ್ರಾಮಾಯಣವು ರಾಮಾಯಣಕ್ಕೆ ಹತ್ತಿರವಾದ ಪದವಾಗಿದ್ದು ರಾಮಾಯಣದ ಹಾಗೆ ಇದು ಒಂದು ದೊಡ್ಡ ಚಲನೆಯ ಕಥೆಯೆಂದು ಸೂಚಿಸುತ್ತಿದೆ. ರಾಮಾಯಣ ಮೂಲತಃ ಮನೆಯನ್ನು ಬಿಟ್ಟು ಕಾಡಿಗೆ ಹೋಗಿ ಮರಳಿ ಮನೆಗೆ ಬರುವ ಪಯಣದ ವಿನ್ಯಾಸವನ್ನು ಒಳಗೊಂಡ ಮಹಾಕಾವ್ಯ. ಈ ಅರ್ಥದಲ್ಲಿ ಕಾದಂಬರಿಯ ನಾಯಕ ದಾದಾ ಮನೆಬಿಟ್ಟು ಹೋಗುವ ಮತ್ತು ಮರಳಿ ಬರುವ ಪ್ರಕ್ರಿಯೆಗಳು ಗ್ರಾಮಾಯಣದಲ್ಲಿ ತುಂಬಾ ಇವೆ. ಹೀಗಾಗಿ ಕಾದಂಬರಿಯ ಶೀರ್ಷಿಕೆಯ ಒಳಗಡೆಯೇ ಪಯಣದ ವಿನ್ಯಾಸವಿದೆ. ಈ ಕಾದಂಬರಿ ಮುಖ್ಯವಾಗಿ ಪಾದಳ್ಳಿಯೆಂಬ ಒಂದು ಊರಿನ ಕತೆ. ಒಂದು ಜನಾಂಗವೇ ಈ ಕಾದಂಬರಿಯ ನಾಯಕ ಪಾತ್ರವನ್ನು ವಹಿಸುತ್ತದೆ. ಕೌಟುಂಬಿಕ ಮೌಲ್ಯಗಳ ಮೂಲಕ ಬಾಳಿ ಬೆಳೆದ ಹಳ್ಳಿಯೊಂದರ ಸಾವಯವ ಸಮಾಜವು ಕ್ರಮೇಣ ಬಾಹ್ಯ ಪ್ರಚೋದನೆ ಹಾಗೂ ಆಂತರಿಕ ವಿಚ್ಛಿದ್ರಕಾರಿ ಶಕ್ತಿಗಳಿಂದಾಗಿ ಅವನತಿ ಹೊಂದುವ ಚಿತ್ರಣವನ್ನು 'ಗ್ರಾಮಾಯಣ' ಮುಂದಿಡುತ್ತದೆ. ಒಂದು ಪಾತ್ರದ ವೈಯಕ್ತಿಕ ವಿಕಾಸಾತ್ಮಕ ಚಲನೆ ಇಡೀ ಊರಿನ ಸಾಮೂಹಿಕ ಅವನತಿಯ ಘಟ್ಟವನ್ನು ಸೂಚಿಸುತ್ತದೆ. ಊರನ್ನು ಆಳಿದ ದೊರೆ ರಾಣೋಜಿರಾಯನ ಮರಣ, ಅವನ ಹೆಂಡತಿಯರಾದ ಲಕ್ಷ್ಮೀಬಾಯಿ ಮತ್ತು ಪುತಳಾಬಾಯಿ ರಾಣೋಜಿರಾಯನ ಆಸ್ತಿಗಾಗಿ ನಡೆಸುವ ಕಲಹಗಳು ಹೊಸ ವಿಪತ್ತುಗಳಿಗೆ ವೇದಿಕೆ ನಿರ್ಮಿಸುತ್ತವೆ. ರಾಣೋಜಿರಾಯನ ಮರಣದಿಂದಾಗಿ ಪುತಳಾಬಾಯಿಯ ತಮ್ಮನಾದ ಗೌಡ ಬಾಪೂಸಾಹೇಬನನ್ನು ಪಾದಳ್ಳಿಗೆ ಕರೆತರುವಳು. ಲಕ್ಷ್ಮೀಬಾಯಿ ಪಾದಳ್ಳಿ ಬಿಟ್ಟು ಹೋದ ಮೇಲೆ ಬಾಪೂಸಾಹೇಬ ಕ್ರಮೇಣ ಅಲ್ಲಿಯವನೇ ಆಗುತ್ತಾನೆ. ಅಲ್ಲಿಂದ ಊರಿನ ಕೆಡುಕುಗಳು ಆರಂಭವಾಗುತ್ತವೆ. ಕೃತಿಯ ಆರಂಭದಲ್ಲಿಯೇ ಬರುವ ಚಿಮಣಾಳ ಶೀಲಭಂಗ ಪ್ರಸಂಗ ಮುಂದೆ ಅನೇಕ ದುರಂತ ಘಟನೆಗಳಿಗೆ ಕಾರಣವಾಗುತ್ತದೆ. ನಾನಾನ ಮರಣ ಸಂದರ್ಭದಲ್ಲಿ ಪಂಚಾಯತಿಯಲ್ಲಿ ಲಂಚದ ಮಾತು ಬಂದಾಗ ಬಾಳಾಚಾರ್ಯರ ಮನಸ್ಸು ವೈರಾಗ್ಯದತ್ತ ತಿರುಗುತ್ತದೆ. ಈ ಸಂಗತಿ ಅವರನ್ನು ಊರವರಿಂದ ಪ್ರತ್ಯೇಕವಾಗಿಸುತ್ತದೆ. ಇದೇ ಸಂಗತಿ ಊರಿನ ಸಾಮೂಹಿಕ ಜೀವನದ ವಿಘಟನೆಯನ್ನು ಸೂಚಿಸುತ್ತದೆ. ಪುತಳಾಬಾಯಿ ಮತ್ತು ನಾನಾನ ಸಂಬಂಧ ಮುಂದೆ ನಾನಾನ ಸಾವಿಗೆ ಕಾರಣ ವಾಗುವುದಲ್ಲದೆ, ಪುತಳಾಬಾಯಿಯ ಆತ್ಮಹತ್ಯೆಗೂ ಕಾರಣವಾಗುತ್ತದೆ. ಶಂಕರೆಪ್ಪಗೌಡರ ಮರಣದಿಂದ ಮತ್ತೆ ಹೊಸ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಕಾಲರ, ಪ್ಲೇಗ್, ಕ್ಷಾಮ ಮುಂತಾದ ದುರಂತಗಳಿಂದಾಗಿ ಸಾಮಾನ್ಯರ ಬದುಕನ್ನು ದುಸ್ಥಿತಿಗೆ ಹೋಗುತ್ತದೆ. ಗೌಡರ ಮರಣದಿಂದ ಆಚಾರ್ಯರು ಅಂದು

ಕೊಂಡಿದ್ದಂತೆ ಗೌಡರ ಮನೆತನದ ವಾರಸಾ ಪ್ರಕರಣ ತಲೆಯತ್ತುತ್ತದೆ. ಬೇಟೆಯಾಡುವ ಸಂದರ್ಭದಲ್ಲಿ ದಾದಾ ಹಾವನೂರಿನವರೊಂದಿಗಿನ ಮಾಡುವ ಜಗಳ ಹಾಗೂ ಜಿನ್ನಪ್ಪನ ಬಣವಿಗೆ ಪಡದಪ್ಪನವರ ಕಡೆಯವರಿಂದ ಹಚ್ಚಲಾಗುವ ಬೆಂಕಿಯಿಂದ ಪಡದಪ್ಪ ಪಾದಳ್ಳಿಯನ್ನು ಬಿಡುವಂತಾಗುತ್ತದೆ. ಶಾನುಭಾಗ ಶ್ಯಾಮರಾಯ ತಿರುಗಿ ಪಾದಳ್ಳಿಗಿ ಬರುತ್ತಾನೆ. ಜಾಗೀರಿ ಹೊಲಗಳೆಲ್ಲ ಮಹಾರಾಜರ ಹೆಸರಲ್ಲಿ ದಾಖಲಾಗುತ್ತವೆ; ಬಾಪೂಸಾಹೇಬ ಪಾದಳ್ಳಿ ಬಿಟ್ಟು ಸ್ವಂತ ಹಳ್ಳಿಗೆ ಹಿಂತಿರುಗುತ್ತಾನೆ. ಬರೋಡೆಯ ಮಹಾರಾಜರು ಪಾದಳ್ಳಿಗೆ ಬರುವ ಸನ್ನಿವೇಶ ಒದಗಿಬರುತ್ತದೆ. ಬೇರೊಂದು ಊರಿನಿಂದ ಪಾದಳ್ಳಿಗೆ ಬಂದ ಲಿಂಗಪ್ಪ ಚಿಮಣಾಳನ್ನು ಪಡೆಯಲು ಪ್ರಯತ್ನಿಸುವನು. ಪಡದಪ್ಪ ಗಿಬ್ಸನ್ ಸಾಹೇಬರ ಅಪ್ಪಣೆಯಂತೆ ಮಠಕ್ಕೆ ವಾಪಸ್ಸು ಬರುತ್ತಾನೆ. ಈ ಪ್ರಸಂಗಗಳು ಒಂದರ ಜೊತೆಯೊಂದು ಸಾಗುತ್ತಿರುವಾಗಲೇ ಪಾದಳ್ಳಿಯ ಮೇಲೇರಗಿದ ಚಿಮಣಾ, ಬಾಳಾಚಾರ್ಯ, ಪಾರ್ವತೆವ್ವ ಗೌಡಿತಿಯ ಸಾವುಗಳು ಹಳ್ಳಿಯ ದುರಂತ ಚಲನೆಗಳಿಗೆ ಸಾಕ್ಷಿಯಾಗುತ್ತವೆ. ಬಾಳಾಚಾರ್ಯರ ಜಲಸಮಾಧಿಯಾಗುತ್ತದೆ. ಕಾದಂಬರಿಯ ದಾದಾ ಪಾದಳ್ಳಿಗೆ ಮರಳುವುದ ರೊಂದಿಗೆ ಕೊನೆಗೊಳ್ಳುತ್ತದೆ. ಹೀಗೆ ಇಡೀ ಕಾದಂಬರಿಯ ತುಂಬ ವ್ಯಕ್ತಿಗಳು ಮಾಡುವ ಪಯಣಗಳೇ ತುಂಬಿಹೋಗಿವೆ.

'ಬಿತ್ತಿ ಬೆಳೆದವರು'(೧೯೭೨): ರಾವಬಹದ್ದೂರರ ಕಾದಂಬರಿಗಳಲ್ಲಿ ಮತ್ತೊಂದು ಪ್ರಮುಖವಾದ ಕಾದಂಬರಿ 'ಬಿತ್ತಿ ಬೆಳೆದವರು' 'ಗ್ರಾಮಾಯಣ'ದ ಮಟ್ಟಕ್ಕೆ ಹೆಸರು ಮಾಡದಿದ್ದರೂ, ವಸ್ತುವಿನ ದೃಷ್ಟಿಯಿಂದ ಇಲ್ಲಿಯೂ ಗ್ರಾಮಗಳ ಬದುಕಿನೊಳಗಿನ ಸಂಘರ್ಷ, ತಳಮಳ ಸ್ಥಿತ್ಯಂತರಗಳನ್ನು ಗುರುತಿಸಬಹುದಾಗಿದೆ. ಇಲ್ಲಿ ಹಳ್ಳಿಯೊಳಗಿನ ಸಾಮುದಾಯಿಕ ಬದುಕಿನ ಸಂಬಂಧಗಳಾಚೆ ಅಧಿಕಾರ, ದ್ವೇಷ, ಹೆಣ್ಣು, ಸಂಪತ್ತು ಮುಂತಾದ ನೆಲೆಗಳಲ್ಲಿ ಪಾತ್ರಗಳು ಚಲನಶೀಲತೆಗೆ ಒಳಪಡುತ್ತಾ ಸಾಗುತ್ತವೆ. ಭೂಮಿಯ ಗರ್ಭದಲ್ಲಿ ಬಿತ್ತಿದ ಬೀಜವೇ ಮುಂದೆ ಫಲ ನೀಡುವುದು. ಆ ಬೀಜ ಸರಿಯಿರದಿದ್ದರೆ ಒಳ್ಳೆಯ ಬೆಳೆ ಬರುವುದಿಲ್ಲ. ಹಾಗೆಯೇ ಬಿತ್ತಿದ ದ್ವೇಷವು ಬಿತ್ತಿದವರನ್ನೇ ಬಲಿ ತೆಗೆದುಕೊಳ್ಳುತ್ತದೆ ಎಂಬುದು ಈ ಕಾದಂಬರಿಯ ಧ್ವನಿಯಾಗಿದೆ. ಇದರ ಕಥೆಯು ಹೀಗಿದೆ: ಮೋದನೂರ ಇನಾಂದಾರರ ಮನೆತನ ಸುತ್ತ ಹಳ್ಳಿಗಳಿಗೆಲ್ಲಾ ಪರಿಚಿತವಾದದ್ದು ಮತ್ತು ಹೆಸರುವಾಸಿಯಾಗಿದ್ದು, ಊರ ಭೂಮಿಯಲ್ಲಾ ಶ್ರೀಪತಿರಾಯರ ಒಡೆತನಕ್ಕೆ ಸೇರಿರುತ್ತದೆ. ಮೋದನೂರಿನ ಜನರೆಲ್ಲಾ ಒಂದು ಕುಟುಂಬದವರಂತೆ ಅನ್ಯೋನ್ಯ ಪ್ರೀತಿ ವಿಶ್ವಾಸದಿಂದ ಜೀವನ ಸಾಗಿಸುತ್ತಿರುತ್ತಾರೆ. ಮೋದನೂರಿನಲ್ಲಿ ಶ್ರೀಪತಿರಾಯರದೊಂದೆ ಬ್ರಾಹ್ಮಣ ಕುಟುಂಬವಾಗಿದ್ದು, ಉಳಿದವರೆಲ್ಲರೂ ಬೇಡರ ಜಾತಿಗೆ ಸೇರಿದವರು. ಬೇಡರ ಶ್ರಮದ ಫಲವಾಗಿ ದೇಸಗತಿ ಶ್ರೀಪತಿರಾಯರಿಗೆ ಬಂದಿದೆ. ಬೇಡರ ನಾಯಕ ವೆಂಕಟಪ್ಪ ಹಳೇ ಸಂಪ್ರದಾಯದ ಶ್ರೀಪತಿರಾಯರ ವಿಶ್ವಾಸಿ ಸೇವಕನಾಗಿದ್ದಾನೆ. ಹಳ್ಳಿಯ ಜನರ ಪರವಾಗಿರುವ ಶ್ರೀಪತಿರಾಯರಿಗೆ ಇಬ್ಬರು ಮಕ್ಕಳು ಅಣ್ಣಾರಾಯ ಮತ್ತು ತಮ್ಮಣ್ಣ. ಅಣ್ಣಾರಾಯ ಪುಣೆಯಲ್ಲಿ ವಿದ್ಯಾಭ್ಯಾಸ ಮಾಡುವಾಗಲೇ ಸ್ವಾತಂತ್ರ್ಯ

ಚಳುವಳಿಯ ಪ್ರಭಾವಕ್ಕೆ ಒಳಗಾಗಿ ಶಿಕ್ಷಣ ಮೊಟಕುಗೊಳಿಸಿ ಊರಿಗೆ ಪಯಣ ಬೆಳೆಸುವನು. ಹಾಗೆ ಬಂದು ವ್ಯವಸಾಯದಲ್ಲಿ ತೊಡಗಿಸಿಕೊಂಡೆ ಚಳುವಳಿಯನ್ನು ಬೆಂಬಲಿಸುವನು.

ಶ್ರೀಪತಿರಾಯರು ಅಣ್ಣಾರಾಯನಿಗೆ ಇಂದೂರು ಜಹಗೀರದಾರರ ಮಗಳು ಇಂದಿರಮ್ಮನ ಜೊತೆ ವಿವಾಹ ಮಾಡುವರು. ತಮ್ಮಣ್ಣರಾಯನು ವಿದೇಶಿ ಸೈಕಲ್ ತಂದಿದ್ದದಕ್ಕಾಗಿ ಅಣ್ಣಾರಾಯ ಮತ್ತು ತಮ್ಮಣ್ಣನ ನಡುವೆ ಮನಸ್ತಾಪ ಏರ್ಪಡುತ್ತದೆ. ಇದು ಇಬ್ಬರ ನಡುವೆ ದ್ವೇಷ ಬೂದಿ ಮುಚ್ಚಿದ ಕೆಂಡದಂತೆ ಇಡೀ ಹಳ್ಳಿಯನ್ನು ಎರಡು ಬಣಗಳಾಗಿ ವಿಂಗಡಿಸುತ್ತದೆ. ಮೋದನೂರ ಇನಾಂದಾರರ ಮನೆತನದಲ್ಲಿ ಹುಟ್ಟಿದ ಇಬ್ಬರು ಅಣ್ಣ-ತಮ್ಮಂದಿರಲ್ಲಿ ಆಸ್ತಿ ವಿಭಜನೆಯೊಂದಿಗೆ ಸಾಮರಸ್ಯ ಭಂಗವಾಗುತ್ತದೆ. ದಿನದಿನಕ್ಕೂ ಅವರಲ್ಲಿ ಭಿನ್ನಾಭಿಪ್ರಾಯ ತೀವ್ರ ಸ್ವರೂಪ ತಾಳುತ್ತಾ ಹೋಗುತ್ತದೆ. ಭೂಮಿ ವ್ಯಾಜ್ಯಕ್ಕಾಗಿ ಕೋರ್ಟು ಕಛೇರಿಗಳಿಗೆ ಎರಡು ಕುಟುಂಬದ ಜೊತೆಯಲ್ಲೇ ಊರಿನ ಕೆಲವರು ಪಟ್ಟಣಕ್ಕೆ ಪಯಣ ಮಾಡಬೇಕಾಗುವುದು. ತಮ್ಮಣ್ಣ ಆಸ್ತಿಯನ್ನು ವಿಸ್ತರಿಸುವ ಸಲುವಾಗಿ ಯೋಚಿಸಿದರೆ, ಅಣ್ಣಾರಾಯ ಸ್ವಾತಂತ್ರ್ಯ ಚಳುವಳಿಗಾಗಿ ಜೈಲು ಸೇರುವ ಘಟನೆಗಳು ನಡೆಯುತ್ತವೆ. ಇಬ್ಬರ ನಡುವಿನ ದ್ವೇಷ ತಮ್ಮಣ್ಣರಾಯ ಶಾಮಲಾದೇವಿಯ ಮಗಳಾದ ಲಲಿತಾ ಮತ್ತು ಅಣ್ಣಾರಾಯ ಮತ್ತು ಲಕ್ಷ್ಮೀಬಾಯಿಯ ಮಗಳಾದ ಶಾರದಾರ ವೈವಾಹಿಕ ಬದುಕಿನಲ್ಲಿ ದುರಂತವನ್ನು ತಂದೊಡ್ಡುತ್ತದೆ. ಗಿಡದಳ್ಳಿ ವಿಠಲಾಚಾರಿಯ ಮಗ ಕೃಷ್ಣಚಾರಿಯ ಸಾವು, ಲಲಿತಾ ಮತ್ತು ಗೋಪಾಳಾಚಾರಿಯ ನಡುವಿನ ಅನೈತಿಕ ಸಂಬಂಧ, ಅಣ್ಣಾರಾಯನ ಸ್ವಾತಂತ್ರ್ಯ ಸಲುವಾಗಿ ಜೈಲುವಾಸ, ಕೊನೆಯಲ್ಲಿ ಲಕ್ಷ್ಮೀಬಾಯಿಯ ಸಾವು ಹೀಗೆ ಕುಟುಂಬದೊಳಗಿನ ದ್ವೇಷ ಹಳ್ಳಿಯೊಳಗಿನ ಬದುಕಿನ ಮೇಲೂ ತೀವ್ರ ಸ್ವರೂಪದ ಬದಲಾವಣೆಯನ್ನು ಉಂಟು ಮಾಡುತ್ತದೆ. ಹೀಗೆ ಕೃತಿ ಕುಟುಂಬ ಮತ್ತು ಹಳ್ಳಿಗಳೊಳಗಿನ ಬಿರುಕುಗಳು ಹೇಗೆ ಸಮಾಜದ ಅಶಾಂತಿಗೆ ಕಾರಣವಾಗುತ್ತವೆ ಎಂಬುದನ್ನು ಕಾಣಿಸುತ್ತದೆ. ಇಡೀ ಕಾದಂಬರಿಯು ವಿವಿಧ ಪಯಣದ ವಿವರಗಳಿಂದ ತುಂಬಿದೆ.

೬.೨. ಪಯಣ: ಅಂತರ್‌ಸಂಬಂಧಗಳು

ಇಲ್ಲಿ ಪಯಣವು ಮನುಷ್ಯ ಸಂಬಂಧಗಳನ್ನು ಹುಟ್ಟಿಸುತ್ತದೆ, ಗಟ್ಟಿಗೊಳಿಸುತ್ತದೆ ಮತ್ತು ಹದಗೆಡಿಸುತ್ತದೆ. ಪಯಣದ ಪ್ರಕ್ರಿಯೆ ದೈಹಿಕವಾಗಿರಲಿ ಅಥವಾ ಮಾನಸಿಕವಾಗಿರಲಿ ಅದು ಮಾನವ ಸಂಬಂಧಗಳನ್ನು ಒಂದುಗೂಡಿಸುವ ಅಥವಾ ಬೇರೆಬೇರೆ ಮಾಡುವ ಈ ಸಾಧ್ಯತೆಯನ್ನು ರಾವಬಹದ್ದೂರರ ಕಾದಂಬರಿಗಳು ಚೆನ್ನಾಗಿ ಹಿಡಿದುಕೊಡುತ್ತವೆ. ಈ ಉಪ ಅಧ್ಯಾಯದಲ್ಲಿ ಕಾದಂಬರಿಯಲ್ಲಿರುವ ಮನುಷ್ಯ ಸಂಬಂಧಗಳೊಳಗಿನ ಬದಲಾವಣೆಗೂ ವಿವಿಧ ಪಯಣದ ಚಲನೆಗೂ ಇರುವ ಅಂತರ್‌ಸಂಬಂಧವನ್ನು ಅರಿಯುವುದಕ್ಕೆ ಯತ್ನಿಸಬಹುದು. ಕಾದಂಬರಿಯಲ್ಲಿನ ವ್ಯಕ್ತಿಗಳ ಆಲೋಚನೆ ಮತ್ತು ದುರಂತ ಸಂಬಂಧಗಳನ್ನು ತಿಳಿದುಕೊಳ್ಳಬೇಕಾದರೆ ಅವರ ಪಯಣದ ವಿವರಗಳನ್ನು ಅಧ್ಯಯನಕ್ಕೆ ಒಳಪಡಿಸಬೇಕಾಗುತ್ತದೆ. 'ಗ್ರಾಮಾಯಣ' ಮತ್ತು 'ಬಿತ್ತಿ ಬೆಳೆದವರು'

ಕೃತಿಗಳಲ್ಲಿ ಮನುಷ್ಯ ಸಂಬಂಧಗಳನ್ನು ಪ್ರಾಕೃತಿಕ ವಿದ್ಯಮಾನಗಳ ಜತೆ ಬೆರೆಸುವ ವಿನ್ಯಾಸವಿದೆ. ಹೀಗಾಗಿ ಪಯಣದ ಹಿನ್ನೆಲೆಯಲ್ಲಿ ಪ್ರಕೃತಿ ಮತ್ತು ಮನುಷ್ಯ ಸಂಬಂಧಗಳ ಸ್ವರೂಪವನ್ನು ನೋಡಬಹುದು.

೧. ಪಾದಳ್ಳಿಯು ಹೊಳೆಪಕ್ಕದ ಊರಾದ ಕಾರಣ, ಪ್ರತಿಯೊಂದು ವಿಷಯಕ್ಕೂ ಜನರು ಹೊಳೆದಾಟುವ ವಿವರಗಳು ಕಾದಂಬರಿಯಲ್ಲಿ ಬರುತ್ತವೆ. ಇಲ್ಲಿಯೇ ಆಮೂರರ ಅಭಿಪ್ರಾಯವನ್ನು ಕಾಣಿಸುವುದು ಉಚಿತವಾಗಿದೆ. ಅವರ ಅಭಿಪ್ರಾಯದಲ್ಲಿ ಕಾದಂಬರಿಯ ಪಾತ್ರಗಳಿಗೂ ನದಿಯ ಪ್ರವಾಹ ಅಥವಾ ಪಯಣಕ್ಕೂ ಆಂತರಿಕ ಸಂಬಂಧವಿದೆ. "ರಾವಬಹಾದ್ದೂರರ ಪಾತ್ರಗಳಲ್ಲಿ ಪರಿವರ್ತನಾ ಶೀಲತೆ ಕಡಿಮೆ. ಪಡದಯ್ಯ, ಬಾಪೂ ಸಾಹೇಬ, ದಾದಾ, ಯಶವಂತರಾಯ, ಶೇಷಪ್ಪ, ಲಕ್ಷ್ಮೀಬಾಯಿ ಮೊದಲಾದವರು ಮೊದಲಿನಿಂದ ಕೊನೆಯವರೆಗೂ ಒಂದೇ ತೆರೆನಾದ ಪ್ರವೃತಿಗಳನ್ನು ತೋರುತ್ತಾರೆ. ಇದರಿಂದ ಮನುಷ್ಯ ಸ್ವಭಾವದ ವಿಸಂಗತತೆ ಅಗಮ್ಯತೆಗಳ ದರ್ಶನ ನಮಗಾಗುವುದಿಲ್ಲ. ಕೃಷ್ಣಾನದಿಯ ಪ್ರವಾಹದಂತೆ ಕಥೆ ನೆರವಾಗಿ ಒಂದೇ ದಿಕ್ಕಿನಲ್ಲಿ ಹರಿಯುತ್ತದೆ."[೨]

೨. ಆದರೆ ಪಾದಳ್ಳಿಯು ಕೇವಲ ಹೊಳೆ ಬದಿಯ ಊರಲ್ಲ. ಅದು ಸ್ಥಳೀಯ ದೊರೆಯಿರುವ ಊರೂ ಕೂಡ ಹೌದು. ಹೀಗಾಗಿ ಅದು ಅಕ್ಕಪಕ್ಕದ ಊರುಗಳ ಜತೆ ಸಂಬಂಧವನ್ನು ಬೆಳೆಸಿದ್ದು, ಪಾತ್ರಗಳು ಅಲ್ಲಿಗೆ ಹೋಗಿ ಬರುವ ವಿವರಗಳು ಬರುತ್ತವೆ. ಪಾದಳ್ಳಿಯು ಲಿಂಗಪ್ಪ ಹಾಗೂ ಪಡದಯ್ಯನ ಕಾರಣದಿಂದ ಪ್ರಕ್ಷುಬ್ಧವಾದ ಊರಾಗುವುದರಿಂದಲೂ, ಊರಿನಲ್ಲಿ ಹಾದಿಯ ಜನರನ್ನು ಬೆದರಿಸಿ ದೋಚುವ ಒಂದು ಪುಂಡರ ಗುಂಪು ಇದ್ದುದರಿಂದಲೂ ಇಲ್ಲಿನ ಜನರು ಕೋರ್ಟು ಕಛೇರಿಗಾಗಿ ಪಟ್ಟಣಕ್ಕೆ ಹೋಗಿ ಬರುವ ಅನಿವಾರ್ಯತೆ ಒದಗುತ್ತದೆ. ಹೀಗೆ ಹಲವು ಕಾರಣದಿಂದ ಜನ ಮಾಡುವ ಈ ಓಡಾಟಗಳು ಅವರ ಉದಾರತೆ ಮತ್ತು ದುಷ್ಟತನ ಎರಡನ್ನೂ ಬಹಿರಂಗಮಾಡುತ್ತವೆ.

ಕಾದಂಬರಿಯ ನಾಯಕನಾದ ಬಹಳ ಗೌರವಿಸುವ ಯಶವಂತರಾಯರ ಚಕ್ಕಡಿಯು ಪಾದಳ್ಳಿಗೆ ನಡುರಾತ್ರಿ ಪಯಣ ಹೊರಟಿರುತ್ತದೆ. ಆಗ ಕುಸ್ತಿಗಾಗಿ ಬೇರೆ ಊರಿಗೆ ಹೋಗಿದ್ದ ದಾದಾ ಮತ್ತು ಅವನ ಸ್ನೇಹಿತರು ಮರಳಿ ಬರುತ್ತಿರುತ್ತಾರೆ. ಆದರೆ ದಾದಾ ಗೆಳೆಯರಿಂದ ಅಗಲಿ ಕೊಂಚ ದೂರವಿದ್ದಾಗ, ಅವನ ಗೆಳೆಯರು ಯಶವಂತರಾಯರ ಚಕ್ಕಡಿಯನ್ನು ದೋಚುವ ಯತ್ನ ಮಾಡುತ್ತಾರೆ. ಚಕ್ಕಡಿಯನ್ನು ಕ್ಷೇಮದಿಂದ ಪಾರುಗಾಣಿಸುವ ಹೊಣೆಹೊತ್ತಿದ್ದ ದಾದಾನಿಗೆ ಇದು ಗೊತ್ತಾಗುತ್ತದೆ. ಅವನಿಗೆ ತನ್ನ ಗೆಳೆಯರ ಬಗ್ಗೆ ಗುಮಾನಿ. ಎಲ್ಲಿ ಈ ಪುಂಟರು ಗಾಡಿ ದೋಚಿ ತಮ್ಮ ಊರಿನ ಮರ್ಯಾದೆ ಕಳೆದರೋ ಎಂದು ಅವನು ಆತಂಕಿತನಾಗುತ್ತಾನೆ. "ಗಾಡಿ ತರಬಿದ್ದರಿ ಹೌದಲ್ಲೂ! ನಿಮ್ಮ ಗುಣ ಎಲ್ಲಿ ಹೋದರೂ ಯಾಕ ಬಿಟ್ಟೀರಲೇ? ಏನೇನು ಕಿತಕೊಂಡ್ರಿ ಹೇಳಿ. ಇಲ್ಲಾಂದ್ರ ಪಾಡಾಗಾಕಿಲ್ಲ"(ಪು.೪೦). ಎಂದು ಓಡಿ ಬಂದು ದಾದಾ ಸ್ನೇಹಿತರನ್ನು ಕೇಳುವನು. ಕುಸ್ತಿಯಲ್ಲಿ ಆದ ಜಗಳದಿಂದ ತಮ್ಮನ್ನೆಲ್ಲ ಪಾರುಮಾಡಿದ ಊರ ಧಣಿ ಬಾಪೂಸಾಹೇಬರ

ಮಾವನವರು ಪ್ರಯಾಣಿಸುತ್ತಿದ್ದ ಗಾಡಿಯನ್ನು ತಡೆದು ತಪ್ಪು ಮಾಡಿದರು ಎಂದು ದಾದಾನ ಆಕ್ರೋಶ. ತಮ್ಮ ಊರಿನ ಹಿರಿಯರ ಗಾಡಿಯನ್ನು ದೋಚಿ ಅವಮಾನಿಸುವುದು ತಪ್ಪೆಂದು ಅವನಲ್ಲಿ ಶಿಷ್ಟಾಚಾರದ ಪ್ರಜ್ಞೆಯೂ ವೈಯಕ್ತಿಕವಾಗಿ ಕೃತಜ್ಞತೆಯ ಭಾವವೂ ಜಾಗೃತವಾಗುತ್ತದೆ. ದಾದಾ, ಸ್ನೇಹಿತರ ನಡುವೆ ಇರಬೇಕಾಗಿದ್ದ ಸ್ನೇಹ ಸಂಬಂಧದ ಮಹತ್ವ ಬಲ್ಲನು. ಆದರೆ ಅವರು ತಪ್ಪು ಮಾಡಿದಾಗ ಅವರನ್ನು ದಂಡಿಸುವುದಕ್ಕೂ ಹಿಂಜರಿಯನು. ಹೀಗೆ ಪಯಣದ ಸನ್ನಿವೇಶಗಳು ವ್ಯಕ್ತಿಗಳ ಒಳಗಿರುವ ಮಾನವೀಯ ಭಾವಗಳನ್ನು ಹೊರಗೆ ತರುತ್ತವೆ. ಹಾಗೆಯೇ ಅವರಲ್ಲಿ ಅಡಗಿರುವ ಮೌಲ್ಯಪ್ರಜ್ಞೆಯನ್ನು ಪ್ರಕಟಿಸುತ್ತವೆ. ಸುರಕ್ಷಿತವಾದ ಮನೆಯನ್ನು ಬಿಟ್ಟು ನಿರ್ಜನವಾದ ರಸ್ತೆಯಲ್ಲಿ ಮಾಡುವ ಪಯಣವು ಅನೇಕ ಸಲ ಪಥಿಕರಲ್ಲಿ ಅಸಹಾಯಕತೆಯ ಭಾವವನ್ನು ಉಂಟುಮಾಡುತ್ತದೆ. ಆ ಅಸಹಾಯಕತೆಯನ್ನು ದುರುಪಯೋಗ ಮಾಡಿಕೊಳ್ಳುವವರು ಇರುತ್ತಾರೆ. ಆದರೆ ಅವರ ಅಸಹಾಯಕತೆಯ ಸನ್ನಿವೇಶದಲ್ಲಿ ನೆರವು ನೀಡುವವರು ಇದೇ ಬಿಕ್ಕಟ್ಟಿನಲ್ಲಿ ಹುಟ್ಟಿಕೊಳ್ಳುತ್ತಾರೆ. ಸಹಜೀವಿಗಳ ಮಾನವೀಯ ಬಿಕ್ಕಟ್ಟುಗಳು ಜನರಲ್ಲಿ ಮಾನವೀಯ ಭಾವಗಳನ್ನು ಜೀವಂತಗೊಳಿಸುತ್ತವೆ. ಅಜರಾಣಿಯಿಂದ ಪಾದಳ್ಳಿಗೆ ಪಯಣ ಮಾಡಿ ಬರುವಾಗ ಯಶವಂತರಾಯರ ದಾದಾ ಹಾದಿಯಲ್ಲಿ ರಕ್ಷಣೆ ಮಾಡಿದ ಬಗ್ಗೆ ಕೃತಜ್ಞತೆ ಉಳಿಸಿಕೊಳ್ಳುತ್ತಾರೆ. ಅವನಿಗೆ ಹಿತರಕ್ಷಕರಾಗಿ ಕೊನೆಯ ತನಕವೂ ನಿಲ್ಲುತ್ತಾರೆ. ಹಾದಿಯ ಒಂದು ಪ್ರಕರಣವು ಅವರ ಮತ್ತು ದಾದಾನ ಸಂಬಂಧವನ್ನು ಶಾಶ್ವತವಾಗಿ ಬೆಸೆಯುತ್ತದೆ.

ತನ್ನದೇ ಜೀವನದ ಲಯದಲ್ಲಿ ಬದುಕುತ್ತಿದ್ದ ಪಾದಳ್ಳಿಗೆ ಇಬ್ಬರು ಬೇರೆ ಊರಿನಿಂದ ಆಗಮಿಸುವುದು ದೊಡ್ಡ ತಿರುವನ್ನು ನೀಡುತ್ತದೆ. ಅವರೆಂದರೆ ಬಾಪುಗೌಡ ಹಾಗೂ ಪಡದಯ್ಯ. ಇದನ್ನು ಪಾದಳ್ಳಿಯ ಹಿರಿಯರಾದ ಶಂಕರಗೌಡರು ಊರಿನ ಸಂಬಂಧಗಳ ಬಗ್ಗೆ ಯಶವಂತರಾಯರ ಜತೆ ಮಾತನಾಡುತ್ತ ವಿಷಾದದಲ್ಲಿ ಹೇಳುವ ಪ್ರಸಂಗವಿದೆ: "ಊರಾಗ ಇಂದಿನ ತನಾ ಒಂದು ಮುಷ್ಟಿ ಇತ್ತು ಪಾಟೀಲರ, ನಿಮ್ಮ ಅಳಿಯಾ ಅದನ್ನು ಬಿಚ್ಚಿ ಐದ ಬಟ್ಟ ಮಾಡಾಕ ಹತ್ಯಾನ. ಹೊಟ್ಟೆಗಿಲ್ಲದ ಬಡ ಜನಾ ಇಂದಾ ನನ್ನ ಹಗೇ ಲೂಟಿ ಮಾಡಿದರ ನಾಳೆ ವಾಡೇದ ಹಗೇ ಬಿಡತಾರೇನು?"(ಪು.೪೨). ಪಾದಳ್ಳಿಗೆ ಬಾಪೂಸಾಹೇಬ ಬರುವ ಮೊದಲು ಇದ್ದ ಊರಿನ ಸ್ಥಿತಿ ಹಾಗೂ ಬಂದ ನಂತರದಲ್ಲಿ ಆಗಿರುವ ಬದಲಾವಣೆ ಎರಡನ್ನೂ ಗೌಡರ ಮಾತುಗಳು ವ್ಯಕ್ತಮಾಡುತ್ತವೆ. ಬಾಪೂಸಾಹೇಬನ ಆಗಮನಕ್ಕೂ ಮೊದಲು ಶಾಂತವಾಗಿದ್ದ ಪಾದಳ್ಳಿ ಮತ್ತು ಪಾದಳ್ಳಿಯ ಜನರು, ನಂತರ ತಮ್ಮ ತಮ್ಮಲ್ಲೇ ಬೇರೆಯಾಗುವ, ಬಡಿದಾಡುವ ಮೂಲಕ ಸಂಬಂಧಗಳನ್ನು ಮುರಿದುಕೊಂಡು ಹಗೆಗಳಂತೆ ಬದುಕಲು ಆರಂಭಿಸುವವರು. ಇಡೀ ಊರಿನ ಮಾನವೀಯ ಸಂಬಂಧಗಳಲ್ಲಿ ಶಂಕೆ ಅಪಮಾನ ಸೇಡು ಕುದಿತಗಳು ತುಂಬಿಕೊಳ್ಳುತ್ತವೆ. ಹೀಗಾಗಿ ಶಂಕರಗೌಡರು ಯಶವಂತರಾಯರೆದುರು ಅವರ ಅಳಿಯನ ಬಗ್ಗೆ ದೂರು ಹೇಳುವ ಮೂಲಕ ಹಳ್ಳಿಯ ಸಂಬಂಧವನ್ನು ಮರಳಿ ಸ್ಥಾಪಿಸಲು ಯತ್ನಿಸುವರು. ಆದರೆ ಅದು ಸಾಧ್ಯವಾಗುವುದಿಲ್ಲ

ಎಂಬುದೇ ದುರಂತ. ಪಾದಳ್ಳಿಗೆ ಹೊರಗಿನಿಂದ ಬೇರೆಬೇರೆ ಜನರು ಬಂದು ಇದರ ವಿದ್ಯಮಾನಗಳಲ್ಲಿ ಭಾಗವಹಿಸುತ್ತ ಹೋದಂತೆ, ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುತ್ತದೆ.

ಮನಸ್ಸಿನಲ್ಲಿ ನಡೆಯುವ ಕ್ರಿಯೆಗಳು ಕನಸಿನ ರೂಪವನ್ನು ಪಡೆದು ಪ್ರೀತಿ ಪಾತ್ರರಾದವರನ್ನು ನೆನಪಿಸುತ್ತವೆ. ಕೇವಲ ನೆನಪಿಸುತ್ತವೆ ಎನ್ನುವುದಕ್ಕಿಂತ ದುರಂತಕ್ಕೆ ಒಳಗಾಗಿರುವ ಸಂಬಂಧಗಳನ್ನು ಬೇರೆಬೇರೆ ಸಂಕೇತಗಳ ಮೂಲಕ ಎಚ್ಚರಿಸುತ್ತವೆ ಎನ್ನಬಹುದು. ಪಾದಳ್ಳಿಯಲ್ಲಿ ನಾನಾಕಾಕಾನ ಮರಣ ಒಂದೆಡೆ ಸಂಭವಿಸಿದ್ದರೆ, ಇನ್ನೊಂದೆಡೆ ನಾನಾನ ಮಗಳು ಚಿಮಣಾಳ ಬದುಕು ಪುರುಷನಿಂದ ಹಾಳಾಗಿರುತ್ತದೆ. ಈ ಘಟನೆಗಳು ದಾದ ಕನಸಿನಲ್ಲಿ ಕಾಣಿಸುವ ನಾಗರಹಾವು ಮತ್ತು ಕುದುರೆಯ ಸಂಕೇತಗಳ ಮೂಲಕ ವ್ಯಕ್ತವಾಗುತ್ತವೆ. ಬಾಪೂಸಾಹೇಬ ಮತ್ತು ಪಡದಪ್ಪನಿಂದಾಗಿ ಚಿಮಣಾಳ ಜೀವನ ಹಾಳಾದರೆ, ಚಿಮಣಾಳ ಈ ದುರಂತ ಪ್ರಸಂಗವೇ ನಾನಾನ ಸಾವಿಗೆ ಕಾರಣವಾಗುತ್ತದೆ. ಪ್ರತಿಯೊಂದು ಚಲನೆಯೂ ಇನ್ನೊಂದು ದುರಂತ ಚಲನೆಗೆ ಕಾರಣವಾಗುವುದನ್ನು ಇಲ್ಲಿ ಗಮನಿಸಬಹುದು. 'ಗ್ರಾಮಾಯಣ'ದಲ್ಲಿ ದಾದಾ ತನ್ನ ಕನಸಿನ ಸನ್ನಿವೇಶವನ್ನು ಹಂಚಿಕೊಳ್ಳುವ ಸನ್ನಿವೇಶ ಹೀಗಿದೆ: ಅಲ್ಲಿ ಕೂಡ ಪಯಣದ ವಿವರಗಳು ಇವೆ ಎನ್ನುವುದು ಮುಖ್ಯವಾಗಿದೆ: "ಎಜ್ಜಾ ಕನಸ್ಸಿನ್ಯಾಗ, ನಾನು, ನಾನಾಕಾಕಾ ಮತ್ತ ಚಿಮಣಾ ಕೂಡಿ, ಪಂಢರಪುರಕ್ಕ ದಿಂಡೀ ಕೂಡ ಹೊಂಟಿದ್ದಿವಿ. ಬಾಪೂಸಾಬರು ಕುದುರಿ ಮ್ಯಾಗ ಮುಂದ ಸಾಗಿದ್ದರು. ದಾರ್‍ಯಾಗ ಕತ್ತಲಾತು. ಚಿಮಣಾ ಬೈಲ ಕಡೆಗೆ ಹೋಗಿದ್ದಳು. ನೋಡು ಎಜ್ಜಾ ದೊಡ್ಡ ನಾಗರಹಾವು ಬಂದು ಕಡೀತು. ಚೀರಿದಾಕೀನ ಬಕಬಾರಲೇ ಬಿದ್ದಳು"(ಪು.೪೨). ದಾದಾನ ಕನಸಿನ ಪಯಣದಲ್ಲಿ ಕಂಡ ಸಂಕೇತಗಳು ವಾಸ್ತವ ಘಟನೆಗಳಿಗೆ ಹತ್ತಿರವಾಗಿವೆ. ಕಾಕಾ ಮತ್ತು ಚಿಮಣಾ ದಾದಾನ ಸಂಬಂಧಿಕರು. ಅವರ ಜತೆಗಿನ ಅವನ ಮಾನವೀಯ ಸಂಬಂಧವು ಗಾಢವಾದುದು. ಇದು ಅವನ ಕೆಟ್ಟಕನಸಿನ ಚಲನೆಯ ಮೂಲಕ ದುರಂತ ಸೂಚನೆಯನ್ನು ಕೊಡುತ್ತದೆ. ಇಲ್ಲಿ ಕುದುರೆ, ನಾಗರಹಾವು ಇವು ಚಲಿಸುವ ಎರಡು ಜೀವಿಗಳು. ಇವುಗಳ ಜತೆ ಹಾದಿ ಮತ್ತು ಪಯಣದ ವಿವರಗಳೂ ಇವೆ. ಧರ್ಮಗುರುವಾಗಿ ಜನರಲ್ಲಿ ನೈತಿಕತೆ ತುಂಬಬೇಕಾದ ಸನ್ಯಾಸಿಯೇ ಹೆಣ್ಣಿನ ಮೇಲೆ ಬಲಾತ್ಕಾರ ಮಾಡುವನು. ಇದು ನಾಗರಹಾವನ್ನು ಸಂಕೇತಿಸುತ್ತದೆ. ಈ ವಿಷದ ಹಾವು ಪಾದಳ್ಳಿಯದಲ್ಲ. ಬೇರೆ ಊರಿನಿಂದ ಬಂದುದು.

ಪುತಳಾಬಾಯಿ ತನ್ನ ಜೀವನದಲ್ಲಿ ಘಟಿಸಿಹೋದ ನೆನಪಿನ ಪಯಣದಲ್ಲಿ ಹಿಂದಕ್ಕೆ ಸಾಗಿದಾಗ ಅವಳ ಮತ್ತು ನಾನಾನ ನಡುವಿನ ಸಂಬಂಧದ ಕಥನ ಬಿಚ್ಚಿಕೊಳ್ಳುತ್ತದೆ. ಚಿಮಣಾಳ ಬದುಕು ಪುತಳಾಬಾಯಿಯಿಂದಲೇ ವಿರೂಪಗೊಂಡಿತೆಂದು ತಪ್ಪಾಗಿ ಭಾವಿಸಿದ, ನಾನಾ ಪುತಳಾಬಾಯಿಯೊಂದಿಗಿನ ತನ್ನ ಹಳೆಯ ಸಂಬಂಧವನ್ನು ಕೆದಕುವ ಬೆದರಿಕೆ ಹಾಕುವನು. ಈ ಘಟನೆ ಪುತಳಾಬಾಯಿಯ ಬದುಕಿನಲ್ಲಿ ನೀರಿಗ ಕಲ್ಲೊಗೆದಂತೆ ಆಗಿ, ಅದು ಅವಳ ವ್ಯಕ್ತಿತ್ವವನ್ನು ಅಲುಗಾಡಿಸುವುದು. ಅವಳು ರಾಣೋಜಿರಾಯನನ್ನು ಮದುವೆಯಾಗಿ ಪಾದಳ್ಳಿಗೆ ಪಯಣ

ಮಾಡಿ ಬಂದ ಸಂದರ್ಭದಿಂದ ಹಿಡಿದು ನಾನಾನೊಂದಿಗಿನ ಸಂಬಂಧದವರೆಗೂ ನೆನಪುಗಳು ಅವಳನ್ನು ಕಾಡುತ್ತವೆ. ಇದನ್ನು ಕಾದಂಬರಿಯು ಪಯಣದ ಪರಿಭಾಷೆಯಲ್ಲಿಯೇ ವರ್ಣಿಸುವುದು ಗಮನಾರ್ಹವಾಗಿದೆ: "ನೆನಪು ಕೈಹಿಡಿದು ಜಗ್ಗಿತು. ದಣಿದ ಪ್ರಯಾಣಿಕನಂತೆ ಮನಸ್ಸಿಲ್ಲದ ಮನಸ್ಸಿನಿಂದ ಪುತಳಾ ಹಿಂಬಾಲಿಸಿದಳು"(ಪು.೯೪). ಇಲ್ಲಿ ವ್ಯಕ್ತಿಗಳು ದೈಹಿಕವಾಗಿ ಪಯಣ ಮಾಡುವುದು ಅಷ್ಟೇ ಮುಖ್ಯವಲ್ಲ. ಅವರ ಮನೋಲೋಕದಲ್ಲಿ ನೆನಪಿನ ಗಣಿ ಅಗೆಯುತ್ತ ಹಿಂದಕ್ಕೆ ಚಲಿಸಿಹೋಗವುದು ಕೂಡ ಅಷ್ಟೇ ಮುಖ್ಯವಾಗಿದೆ. ಈ ಮಾನಸಿಕ ಪಯಣವು ಅವರ ಮನುಷ್ಯ ಸಂಬಂಧದ ಹಲವಾರು ಜಟಿಲ ಗಂಟುಗಳನ್ನು ಮುನ್ನೆಲೆಗೆ ತರುತ್ತವೆ. ಅವು ಹಲವಾರು ದುರಂತಗಳಿಗೆ ಮುನ್ನುಡಿ ಬರೆಯುತ್ತವೆ. ಯುವತಿ ಪುತಳಾಬಾಯಿ ತನ್ನ ಅಂಗರಕ್ಷಕನೂ ಸುಂದರ ತರುಣನೂ ಆದ ನಾನಾನೊಂದಿಗೆ ತನ್ನ ತಂದೆಯನ್ನು ನೋಡಲು ಪ್ರಯಾಣ ಮಾಡಿದ ಸಂದರ್ಭದಲ್ಲಿ ಅನುಭವಿಸಿದ ಆಕರ್ಷಣೆ ಪಡೆದ ಸುಖ ಇವು ಗತಕಾಲದಿಂದ ಪಯಣ ಮಾಡಿಕೊಂಡು ಬಂದು, ಅವಳ ವರ್ತಮಾನದ ಬದುಕನ್ನು ನಾಶ ಮಾಡಲು ಯತ್ನಿಸುತ್ತವೆ. ಅವಳ ಒಂದೊಂದು ನೆನಪು ಸಹ ಅವಳನ್ನು ಗತಕಾಲದ ಪ್ರವಾಹದಲ್ಲಿ ಹಿಂದಕ್ಕೆ ಸಾಗುವಂತೆ ಮಾಡುತ್ತದೆ. ಈ ನೆನಪುಗಳ ಪಯಣದಲ್ಲಿ, ಅವಳು ದಣಿದುಹೋಗುತ್ತಾಳೆ ಮತ್ತು ನಾನಾನ ಸಾವಿಗೆ ಕಾರಣಳಾಗುತ್ತಾಳೆ.

'ಗ್ರಾಮಾಯಣ'ದಲ್ಲಿ ಅನೇಕ ಸಂಘರ್ಷದ ಪ್ರಸಂಗಗಳಿವೆ. ಅವು ಇಲ್ಲಿನ ಜನರ ಮಾನವೀಯ ಸಂಬಂಧಗಳ ಜತೆ ಸಂಬಂಧ ಪಡೆದಿವೆ. ಅವುಗಳಲ್ಲಿ ಪಾದಳ್ಳಿಗೂ ಪಕ್ಕದ ಹಾವನೂರಿನವರಿಗೂ ನಡುವೆ ಬೇಟೆಯ ಹೊತ್ತಲ್ಲಿ ನಡೆದ ಜಗಳ ನ್ಯಾಯಪಂಚಾಯತಿಗೆ ಬರುವ ಸಂದರ್ಭವೊಂದಿದೆ. ಈ ಘಟನೆ ಎರಡು ಊರುಗಳ ಪ್ರತಿಷ್ಠೆಯ ಪ್ರಶ್ನೆಯಾಗುತ್ತದೆ. ಬೇಟೆಯಾಡುವ ಸಂದರ್ಭದಲ್ಲಿ ದಾದಾ ಹಾವನೂರಿನ ಕಡೆಗೆ ಹೋಗಿದ್ದೇ ಎರಡು ಊರಿನ ವಿರಸಕ್ಕೆ ಕಾರಣವಾಗಿದೆ. ಪ್ರತಿಯೊಂದು ಕೇರಿ-ಕೇರಿ, ಹಳ್ಳಿ-ಹಳ್ಳಿ, ಊರು-ಊರುಗಳ ನಡುವೆ ಒಂದು ಬಗೆಯ ಕೊಡುಕೊಳ್ಳುವಿಕೆಯ ಚಲನೆ ಇರುತ್ತದೆ. ಅಂತಹ ವ್ಯಾವಹಾರಿಕ ಚಲನೆ ಪಾದಳ್ಳಿ ಮತ್ತು ಹಾವನೂರಿನ ನಡುವೆಯೂ ಇದೆ. ಆದರೆ ಎರಡು ಊರುಗಳ ನಡುವೆಯಿದ್ದ ಸಂಬಂಧಗಳ ಒಳಗೆ ದಾದಾ ಮಾಡುವ ಸಾಹಸ ಪ್ರಸಂಗ ಬಿರುಕುಂಟುಮಾಡುತ್ತದೆ. ಆದರೆ ಹಾವನೂರಿನ ಕಲ್ಲನಗೌಡನ ಮೂಲಕ ಪಾದಳ್ಳಿಯೊಂದಿಗಿನ ಹಾವನೂರಿನ ಸಂಬಂಧದ ಸ್ವರೂಪ ಎಂತಹದ್ದು ಎಂಬುದು ಸೂಚಿತವಾಗುತ್ತದೆ: "ಕಡದಾಡೂದು ಯಾವಾಗ ಬೇಕಾಗೇತಿರಿ? ಬೆಳಗಾದರ ನಮ್ಮೂರ ಜನಾ ಈ ಊರಿಗೆ ಹಾಲು-ಮಸರು ಮಾರಾಕ ಬರತಾರು. ನದಿ ದಾಟಲಾಕ ನಾವಿಗೆ ಬರತಾರು. ಕಡಿದಾಡಕೊಂತ ನಿಂತರ ದಿನದ ಯವಾರ ಹ್ಯಾಗ ಸಾಗಬೇಕರಿ?"(ಪು.೨೫೧). ಇದು ಕಲ್ಲನಗೌಡನ ಮಾತು. ಇದು ಎರಡು ಊರಿನ ದೈನಿಕ ಬದುಕಿನ ಸಣ್ಣ ಸಣ್ಣ ಪಯಣಗಳು ಎರಡು ಊರುಗಳ ಮನುಷ್ಯ ಸಂಬಂಧಗಳನ್ನು ಬೆಸೆದಿರುವುದನ್ನು ವಿವರಿಸುತ್ತವೆ. ಅಷ್ಟೇ ಅಲ್ಲದೆ ದಾದಾನ ಬೇಟೆಯ ಪ್ರಸಂಗಕ್ಕಿಂತ ಎರಡು ಊರುಗಳ ನಡುವಿನ ಸಂಬಂಧ ಮುಖ್ಯವೆಂಬ ಭಾವವು ಇಲ್ಲಿ ವ್ಯಕ್ತವಾಗುತ್ತಿದೆ.

'ಬಿತ್ತಿ ಬೆಳೆದವರು' ಕೃತಿಯಲ್ಲಿ ಬರುವ ಹೊಸಬರು ಪಯಣ ಮಾಡಿ ಊರಿಗೆ ಬರುವುದಕ್ಕೂ ಆ ಊರಿನ ಜತೆ ಸಂಬಂಧ ಬೆಳೆಸುವುದಕ್ಕೂ ಇರುವ ಒಂದು ಪದ್ಧತಿ ಕುತೂಹಲಕರವಾಗಿದೆ. ಅದನ್ನು ಕಾದಂಬರಿ ನಿರೂಪಣೆ ಹೀಗೆ ವಿವರಿಸುತ್ತದೆ. "ಲಗ್ನವಾಗಿ ಊರಿಗೆ ಬಂದ ಹೊಸ ಮೊದಲಗಿತ್ತಿ ಮೊದಲು ಗ್ರಾಮದೇವರಿಗೆ, ನಂತರ ಊರ ತಂದೆ ಶ್ರೀಪತಿರಾಯರಿಗೆ ನಮಸ್ಕಾರ ಮಾಡಿ ತಮ್ಮ ಮನೆಗೆ ಹೋಗಬೇಕು"(ಪು.೨). ಈ ಮೇಲಿನ ಸನ್ನಿವೇಶದಲ್ಲಿ ಮೋದನೂರ ಹಳ್ಳಿ ಮತ್ತು ಊರಿಗೆ ಬರುವ ಹೊಸ ಮೊದಲಗಿತ್ತಿಯ ನಡುವಿನ ಸಂಬಂಧ ಬೆಸೆಯುವಿಕೆಯ ಆಚರಣೆಯಿದೆ. ಈ ಆಚರಣೆಯಲ್ಲಿ ಜಮೀನ್ದಾರಿ ಪದ್ಧತಿಯ ಯಜಮಾನಿಕೆಯೂ ಇದೆ. ಇಲ್ಲಿ ಹಿರಿಯ ಮನೆತನದ ಆದರ್ಶ ವ್ಯಕ್ತಿಯಾಗಿ ಶ್ರೀಪತಿರಾಯರು ಕಂಡು ಬರುತ್ತಾರೆ. ಜಮೀನ್ದಾರಿ ಕುಟುಂಬ ಹಳ್ಳಿಯ ಜನರ ಬದುಕಿನೊಂದಿಗೆ ಹೊಂದಿರುವ ಆದರಣೀಯ ಸಂಬಂಧವು ಇಲ್ಲಿ ಹೊಸಬರ ಬಾಳ್ವೆಯ ಆರಂಭದಲ್ಲಿ ಮುನ್ನುಡಿ ಬರೆಯುತ್ತದೆ. ಕಾದಂಬರಿಯಲ್ಲಿ ಇಂತಹ ಆಚರಣೆಯಲ್ಲಿ ಇರುವ ಜಮೀನುದಾರಿ ವ್ಯವಸ್ಥೆಯ ಬಗ್ಗೆ ವಿಮರ್ಶೆಯಿಲ್ಲ. ಆದರೆ ಇದೇ ತೆರನಾದ ಸನ್ನಿವೇಶ ಬರಗೂರು ರಾಮಚಂದ್ರಪ್ಪನವರ 'ಶಬರಿ' ಕಾದಂಬರಿಯಲ್ಲೂ ಬರುತ್ತದೆ. ಮದುವೆಯಾಗಿ ಬಂದ ಹೊಸ ಮೊದಲಗಿತ್ತಿ ದೇವಸ್ಥಾನದಲ್ಲಿ ದೇವರೊಂದಿಗೆ ಕಳೆಯಬೇಕೆಂಬ ಪದ್ಧತಿಯನ್ನು ಕಾದಂಬರಿ ವಿಮರ್ಶೆ ಮಾಡುತ್ತ ಚಿತ್ರಿಸುತ್ತದೆ. ಇದಕ್ಕೆ ವಿರುದ್ಧವಾಗಿ ರಾವಬಹದ್ದೂರರಲ್ಲಿ ಒಂದು ಹಳ್ಳಿಯ ಜಮೀನ್ದಾರಿ ಕುಟುಂಬ ಮತ್ತು ಹಳ್ಳಿಯ ಜನರ ನಡುವಿನ ಸಂಬಂಧಗಳನ್ನು ಬೆಸೆಯುವ ಆಚರಣೆಗಳ ಬಗ್ಗೆ ಸಮ್ಮತಿಯಿದೆ. ವ್ಯಂಗ್ಯವೆಂದರೆ, ಊರಿನ ಸಂಬಂಧವನ್ನು ತನ್ನ ಕುಟುಂಬ ಜತೆ ಬೆಸೆಯುವ ಆಚರಣೆಯುಳ್ಳ ಈ ಕುಟುಂಬವೇ ಮನುಷ್ಯ ಸಂಬಂಧಗಳನ್ನು ನಿಭಾಯಿಸಲಾಗದೆ ಒಡೆದು ಚೂರಾಗುವುದು. ಇದು ಒಂದು ಕುಟುಂಬವು ಊರಿನ ಪಯಣದಲ್ಲಿ ಸಾಗುತ್ತ ವಿವಿಧ ಅವಸ್ಥೆಗಳಿಗೆ ಈಡಾಗುವುದರ ಕಥನವೂ ಆಗಿದೆ.

ಎಲ್ಲ ಧರ್ಮೀಯರಲ್ಲೂ ತಮ್ಮ ಜೀವಿತಾವಧಿಯಲ್ಲಿ ತಮ್ಮ ಪ್ರಿಯವಾದ ದೇವರ ದರ್ಶನದಿಂದ ಪುಣ್ಯಪ್ರಾಪ್ತಿಯೆಂಬ ನಂಬಿಕೆಯಿದೆ. ಹೀಗಾಗಿ ಎಲ್ಲಾ ಧರ್ಮಗಳಲ್ಲೂ ಯಾತ್ರೆ ಹೋಗುವ ಪದ್ಧತಿಯಿದೆ. ಸಾವಿನ ನಂತರದ ಆಚರಣೆಗಳಲ್ಲಿಯೂ ಮದುವೆಯ ನಂತರದ ಆಚರಣೆಗಳಲ್ಲಿಯೂ ಧಾರ್ಮಿಕ ಕ್ಷೇತ್ರಗಳಿಗೆ ಜನ ಪಯಣ ಮಾಡುವರು. 'ಕಾನೂರು ಹೆಗ್ಗಡಿತಿ'ಯಲ್ಲಿ ರಾಮಯ್ಯ ಸೀತೆಯರ ತಿರುಪತಿ ಯಾತ್ರೆಯನ್ನು ಇಲ್ಲಿ ನೆನೆಯಬಹುದು. ಮದುವೆಯ ನೆಪದಲ್ಲಿ ಗಂಡ-ಹೆಂಡತಿಯ ಸಂಬಂಧವನ್ನು ಬಿರುಕುಗೊಳಿಸುವ ಒಂದು ವಿದ್ಯಮಾನ 'ಬಿತ್ತಿ ಬೆಳೆದವರು' ಕೃತಿಯಲ್ಲಿ ಕಂಡುಬರುತ್ತದೆ. ತಿರುಪತಿ ಯಾತ್ರೆಯ ನೆಪದಲ್ಲಿ ಗಿಡದಳ್ಳಿ ವಿಠಲಾಚಾರ್ಯ ಮಗ ಕೃಷ್ಣಚಾರಿಯ ಹೆಂಡತಿ ಶಾರದಾಳಿಂದ ದೂರ ಮಾಡುವ ಮೂಲಕ ತಮ್ಮಣ್ಣನ ಮಗಳ ಜೊತೆ ಮದುವೆ ಮಾಡುವ ಪ್ರಸಂಗವಿದು. ಶಾರದಾ ಹೇಳುವ ಮಾತಿದು: "ತಿರುಪತಿ ಯಾತ್ರೆಗೆ ಮಾವನವರು ಹೋಗತಾರ? ಅದಕ್ಕಂತೆ ಕರಕೊಂಡು ಬಾ ಅಂತ ಹೇಳಿದರ? ಅವರಿಗೆ ಹೋಗುವ ಮನಸ್ಸು

ಬಂದರೆ ನಾಯಾಕೆ ಬ್ಯಾಡ ಅನ್ನಲಿ?"(ಪು.೨೮೮). ಹೆಂಡತಿಗೆ ಗಂಡನನ್ನು ಯಾತ್ರೆಗೆ ಕಳುಹಿಸಲು ಇಷ್ಟವಿಲ್ಲದಿದ್ದರೂ ಅವನಿಗೆ ಪಯಣದ ನಿರ್ಧಾರವನ್ನು ಬಿಟ್ಟಿರುವುದು ಕಂಡುಬರುತ್ತದೆ. ಹೆಣ್ಣಿಗೆ ಗಂಡಿನ ಪಯಣವನ್ನು ತಡೆಯುವ, ನಿರ್ಧರಿಸುವ ಹಕ್ಕನ್ನು ಹೆಣ್ಣಿಗೆ ಸಮಾಜವು ನೀಡಿಲ್ಲವೆಂಬ ವಾಸ್ತವಿಕ ಸತ್ಯವನ್ನು ಇಲ್ಲಿ ಗ್ರಹಿಸಬಹುದಾಗಿದೆ. ಇಲ್ಲಿ ಪಯಣದ ಜತೆ ಮಾನವ ಸಂಬಂಧಗಳು ತೊಡಕಿಕೊಂಡಿರುವುದು ಇಲ್ಲಿ ಸ್ಪಷ್ಟವಾಗಿದೆ. ಈ ಪಯಣದ ಬಳಿಕ ಒಂದು ಸಂಬಂಧವು ಮುರಿದುಬಿದ್ದು ಇನ್ನೊಂದು ಸಂಬಂಧವು ಬೆಸೆದುಕೊಳ್ಳುತ್ತದೆ. ಮಾಸ್ತಿಯವರ 'ಚಿಕವೀರ ರಾಜೇಂದ್ರ' ಕೃತಿಯ ಕೊನೆಯಲ್ಲಿ ಕುಟುಂಬದೊಳಗಿನ ಮಾನವ ಸಂಬಂಧಗಳ ಒಳಿತಿಗಾಗಿ ಧಾರ್ಮಿಕ ಯಾತ್ರೆ ನಡೆದರೆ, 'ಚೆನ್ನಬಸವ ನಾಯಕ' ಕೃತಿಯ ಆರಂಭದಲ್ಲಿ ಕುಟುಂಬದ ಶ್ರೇಯಸ್ಸಿಗಾಗಿ ರಾಣಿಯರು ಯಾತ್ರೆಯನ್ನು ಕೈಗೊಳ್ಳುವ ಸನ್ನಿವೇಶವಿದೆ. ಇದೇ ರೀತಿಯಲ್ಲಿ 'ಬಿತ್ತಿ ಬೆಳೆದವರು' ಕೃತಿಯಲ್ಲಿ ಮತ್ತೊಂದು ನೆಲೆಯಲ್ಲಿ ತಿರುಪತಿ ಯಾತ್ರೆ ನಡೆಯುತ್ತಿದೆ. ಆದರೆ ಈ ಧಾರ್ಮಿಕ ಪಯಣವು ಶಾರದಾಳ ಬದುಕನ್ನು ದುರಂತವಾಗಿಸುತ್ತದೆ. ಗಂಡ-ಹೆಂಡತಿ-ಮಾವರ ನಡುವಿನ ಸಂಬಂಧಗಳು ಅರ್ಥವನ್ನು ಕಳೆದುಕೊಳ್ಳುತ್ತವೆ. ಆದರೆ ಮುಂದೆ ಅದೇ ಸಂಬಂಧಗಳ ಮೂಲಕವೇ ಅವು ಅರ್ಥವನ್ನು ಪಡೆದುಕೊಳ್ಳುತ್ತದೆ. ಹೀಗೆ ಕಾದಂಬರಿಯಲ್ಲಿ ಮೂರು ಕುಟುಂಬಗಳ ಒಳಗಡೆಯೇ ಹಲವು ಪ್ರಕ್ರಿಯೆಗಳಿಗೆ ತಿರುಪತಿ ಯಾತ್ರೆ ಕಾರಣವಾಗುತ್ತದೆ. ಯಾತ್ರೆ ಲಲಿತಾಳಿಗೆ ಶಾರದಾಳ ಮೇಲೆ ಮತ್ಸರಕ್ಕೆ ಕಾರಣವಾದರೆ, ಲಲಿತಾಳ ಮತ್ತು ಗೋಪಾಳಚಾರಿಯ ನಡುವಿನ ಸಂಬಂಧ ವಿಠಲಾಚಾರಿಯ ಮಗನ ಸಾವಿಗೆ ಕಾರಣವಾಗುತ್ತದೆ. ಮಾಸ್ತಿ, ರಾವಬಹದ್ದೂರ ಹಾಗೂ ಕುವೆಂಪು ಈ ಮೂರೂ ಜನರ ಕಾದಂಬರಿಗಳಲ್ಲಿ ಪಯಣವು ಧಾರ್ಮಿಕ ಯಾತ್ರೆಯ ರೂಪದಲ್ಲಿ ಕಾಣಿಸಿಕೊಳ್ಳುವುದು ಮತ್ತು ಮನುಷ್ಯ ಸಂಬಂಧಗಳ ಮೇಲೆ ಪರಿಣಾಮ ಬೀರುವುದು ಸೋಜಿಗವಾಗಿದೆ.

'ಬಿತ್ತಿ ಬೆಳೆದವರು' ಕಾದಂಬರಿಯಲ್ಲಿ ವೆಂಕಟಪ್ಪ ಸೊಸೆಯ ನಡುವಿನ ಸಂಭಾಷಣೆ ಕಾಲದ ಚಲನೆಯ ಮೂಲಕ ಸಂಬಂಧಗಳ ಮಹತ್ವವನ್ನು ವ್ಯಕ್ತಪಡಿಸುವ ಬಗೆ ಸ್ವಾರಸ್ಯಕರವಾಗಿದೆ: "ನಮ್ಮ ಕಾಲ ಮುಗೀಲಾಕ ಬಂತು ತಂಗೀ. ಇನ್ನ ಮುಂದೆ ನಿಮ್ಮ ಕಾಲ ಗಂಡಾ-ಹೆಣ್ತಿ ನಿಮ್ಮ ಮಕ್ಕಳು ಇಷ್ಟೇ ನಿಮ್ಮ ಕಣ್ಣಾಗ ಕಾಣಿಸುವ ಕುಟುಂಬ ಕಕ್ಕ-ಕಕ್ಕಿ, ಅಜ್ಜ-ಅಜ್ಜಿ, ಅಣ್ಣ-ತಮ್ಮ, ಅಕ್ಕ-ತಂಗಿ ಇವರು ನಿಮ್ಮ ಕುಟುಂಬದಾಗ ಸೇರೊದಿಲ್ಲ"(ಪು.೪೭೯). ವೆಂಕಟಪ್ಪ, ಶ್ರೀಪತಿರಾಯ ಮತ್ತು ಅಣ್ಣಾರಾಯರ ಬದುಕಿನ ಜೀವನಕ್ರಮ ಸಾಗಿದ್ದನ್ನು ಹೇಳುತ್ತಲೇ ಹಳ್ಳಿಯೇ ಒಂದು ಕುಟುಂಬವೆನ್ನುವ ಆದರ್ಶ ಜೀವನಕ್ರಮವನ್ನು ಈ ಚಲನೆ ಹೇಳುತ್ತದೆ. ಹಳೆಯ ತಲೆಮಾರಿನವರಲ್ಲಿದ್ದ ಜೀವನಮೌಲ್ಯ, ಬದುಕಿನ ಕ್ರಮ ಹಾಗೂ ಆದರ್ಶ ಚಿಂತನೆಗಳು ಹೊಸ ಪೀಳಿಗೆಯವರಲ್ಲಿ ಕಣ್ಮರೆಯಾಗುತ್ತಿರುವುದನ್ನು ಇದು ಸೂಚಿಸುತ್ತದೆ; ಅಸೂಯೆ, ಮತ್ಸರಗಳು ಮನುಷ್ಯ ಸಂಬಂಧಗಳು ವಿಘಟನೆಗೆ ಒಳಗಾಗುತ್ತಿರುವುದನ್ನು ಸಹ ಇದು ತಿಳಿಸುತ್ತದೆ.

ರಾವಬಹದ್ದೂರರ ಕಾದಂಬರಿಗಳಲ್ಲಿ ಪ್ರಕೃತಿಯೊಳಗಿನ ಚಲನೆಗಳು ಮನುಷ್ಯ ಸಂಬಂಧಗಳಿಗೆ ತೀರ ಹತ್ತಿರವಾಗಿವೆ. ಪ್ರಕೃತಿಯ ಭಾಗವಾದ ನದಿ, ಮಳೆ, ಬಿಸಿಲು, ಹುಣ್ಣಿಮೆ, ಅಮವಾಸ್ಯೆಗಳು ವ್ಯಕ್ತಿಯೊಳಗಿನ ಮನಸ್ಸಿನ ಭಾವನೆಗಳ ಜತೆ ಸೇರಿಕೊಳ್ಳುತ್ತವೆ. ಈ ಮೂಲಕ ಮನುಷ್ಯ ಸಂಬಂಧಗಳ ಜೊತೆಯಲ್ಲೇ ಪಾದಳ್ಳಿಯ ಜೀವನ ಕ್ರಮದಲ್ಲಿನ ಬೆಳವಣಿಗೆಗಳು ಸಂಭವಿಸುತ್ತವೆ. 'ಗ್ರಾಮಾಯಣ'ದಲ್ಲಿ ಕಂಡುಬರುವ ಪ್ರಮುಖ ಪಾತ್ರವಾದ ದಾದಾನ ಓಡಾಟಗಳ ಮೂಲಕ ಹಲವು ಮಾನವ ಸಂಬಂಧಗಳು ಹುಟ್ಟಿಕೊಳ್ಳುತ್ತವೆ. ಈ ಓಡಾಟ ಮತ್ತು ಸಂಬಂಧಗಳ ಸ್ವರೂಪವನ್ನು ಕಾದಂಬರಿಯ ಪ್ರಕೃತಿಯ ವಿದ್ಯಮಾನಗಳ ಮೂಲಕ ಸಂಕೇತೀಕರಿಸುತ್ತದೆ. ಅಂದರೆ ಪಾತ್ರಗಳ ಚಲನವಲನ ಭಾವನೆ ಅವರ ಬಾಳಿನ ಸುಖದುಃಖಗಳಿಗೂ ಕಾದಂಬರಿಯಲ್ಲಿ ಬರುವ ನೈಸರ್ಗಿಕ ಚಿತ್ರಗಳಿಗೆ ಸಂಬಂಧವಿದೆ. "ಸಾವಕಾಶವಾಗಿ ಹೊರಟ ಗಾಡಿ ಇನ್ನೂ ಅರ್ಧ ದಾರಿಯನ್ನು ಕ್ರಮಿಸಿರಲಿಲ್ಲ. ಅಷ್ಟರಲ್ಲಿ ಗಾಳಿಯ ಅಬ್ಬರ ಹೆಚ್ಚಾಗಿ ನೆಲದ ಮೇಲಿಂದ ಧೂಳಿಯ ಮೋಡವೆದ್ದು ಬಂದು, ಆಕಾಶವನ್ನೇ ಅಪ್ಪಿಕೊಂಡಿತ್ತು. ಚೈತ್ರದ ಉರಿಬಿಸಿಲಿಗೆ ಕಾದು ಕಾದು ಹುಚ್ಚು ಹಿಡಿದಿರಬೇಕು ಪ್ರಕೃತಿಗೆ ಎಂದೆನಿಸುತ್ತಿತ್ತು. ಅಬ್ಬರ ಸ್ಪರ್ಶವೇದ್ಯವಾಗಿದ್ದ ಗಾಳಿ ಈಗ ಕಣ್ಣಿಗೆ ಕಾಣುವಂತಾಯಿತು. ದಾರಿಯ ಗಿಡಮರಗಳೆಲ್ಲ ಹೊಯ್ದಾಡಿ ಗೋಳೋ ಎಂದು ಕೂಗಿಕೊಂಡವು"(ಪು.೧೯೯). ಇದು ಪಾರ್ವತೆವ್ವ ಮತ್ತು ಬಾಳಾಚಾರ್ಯರ ಮಾತಿನ ಮೇರೆಗೆ ಜಿನ್ನಪ್ಪ ದಾದಾನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿಸಿ ಹಿಂದಿರುಗಿ ಬರುವಾಗ ಘಟಿಸುವ ಘಟನೆಯಾಗಿದೆ. ಇದು ಪಾದಳ್ಳಿಯಲ್ಲಿ ಈಗಾಗಲೇ ಸಂಭವಿಸಿರಬಹುದಾದ ದುರಂತ ಘಟನೆಯ ಮುನ್ಸೂಚನೆಯ ಸಂಕೇತವಾಗಿದೆ. ಇಲ್ಲಿನ ಗಾಳಿ, ಮೋಡಗಳ ಅಬ್ಬರಗಳು ಸಂಕೇತಗಳಾಗಿ ಪರಿವರ್ತನೆಯಾಗುತ್ತವೆ. ಚೈತ್ರದ ಬಿಸಿಲು ಹೆಚ್ಚಾದಂತೆ ಪಾದಳ್ಳಿಯ ಪಡದಪ್ಪನ ಮನಸ್ಥಿತಿಯೂ ಕೆಡುವ ವಿವರಣೆ ಕಾದಂಬರಿಯಲ್ಲಿ ಬರುತ್ತದೆ. ಅದರ ಪರಿಣಾಮವಾಗಿ ಜಿನ್ನಪ್ಪನ ಬಣವಿಯೂ ಬೆಂಕಿಗೆ ಆಹುತಿಯಾಗುವ ದುರಂತದ ಮುನ್ಸೂಚನೆಯಾಗಿದೆ. ಪ್ರಕೃತಿಯೊಳಗಿನ ಏರು-ಪೇರಿನ ಚಲನೆಗೂ ದಾದಾನನ್ನು ಜಿನ್ನಪ್ಪ ಬಿಡಿಸಿದರ ಫಲವಾಗಿ ಬೆಂಕಿ ಬಿದ್ದ ಬಣವೆಗೂ ಸಹ ಸಂಬಂಧ ಏರ್ಪಡುವ ವಿನ್ಯಾಸವು ಕಾದಂಬರಿಯಲ್ಲಿದೆ. ಇದಕ್ಕೆ ಕಾರಣ "ಕಾರಂತ-ಗೋಕಾಕರಿಗೆ ಸಮಾಜದ ವಿಘಟನೆಯಂತೆ ಅದರ ಸಂಘಟನೆಯೂ ಮಹತ್ವದ್ದೆನಿಸಿದ್ದರಿಂದ ಅವರು ತಮ್ಮ ಕಾದಂಬರಿಗಳಿಗೆ ಆ ರೀತಿಯ ಹೊಳವನ್ನು ಹಾಕಿಕೊಂಡರು. ರಾವಬಹದ್ದೂರರು ಇಂಥ ಮಹತ್ವಾಕಾಂಕ್ಷೆ ಬಿಟ್ಟುಕೊಟ್ಟು ಒಂದು ಸಮಾಜದ ಅಧೋಗತಿಯನ್ನು ಚಿತ್ರಿಸುವುದರಲ್ಲಿಯೇ ಕೃತಾರ್ಥತೆಯನ್ನು ಕಂಡುಕೊಂಡರು. ಇದು ಅವರ ಕಾದಂಬರಿಗೆ ಏಕರೂಪತೆಯನ್ನು ಕೊಟ್ಟುದುದಲ್ಲದೆ ವಸ್ತುವಿನ ನವ್ಯತೆಯ ಆವಿರ್ಭಾವಕ್ಕೂ ಕಾರಣವಾಯಿತು."[೩]

ಪಾದಳ್ಳಿಯ ಜನರ ಬದುಕಿನ ಪಯಣದ ದಿಕ್ಕು ಯಾವ ಕಡೆ ಚಲಿಸುತ್ತಿದೆ ಎಂಬುದನ್ನು ಕೃತಿ ಅನೇಕ ಸಂಕೇತಗಳ ಮೂಲಕ ಕಾಣಿಸುತ್ತದೆ. ಬಾಳಾಚಾರ್ಯ, ಶಂಕರಪ್ಪಗೌಡ, ಪಾರ್ವತೆವ್ವ,

ದಾದಾ, ಯಶವಂತರಾಯ ಮುಂತಾದ ಪಾತ್ರಗಳ ಮೂಲಕ ಹಳ್ಳಿಯ ಮೇಲ್ಮುಖ ಚಲನೆ ಕಂಡುಬರುತ್ತದೆ; ಬಾಪೂಸಾಹೇಬ, ಪಡದಯ್ಯ, ಶೇಷಪ್ಪ, ಲಿಂಗಪ್ಪ ಮುಂತಾದವರ ಮೂಲಕ ಹಳ್ಳಿಯ ಬದುಕಿನೊಳಗೆ ಅಶಾಂತಿ ನೆಲೆಸಿ ಅವನತಿಯೆಡೆಗೆ ಚಲಿಸಿದ ಮತ್ತೊಂದು ಚಲನೆ ಕಂಡುಬರುತ್ತದೆ. ಈ ಸನ್ನಿವೇಶದಲ್ಲಿ ದೋಣಿಯ ಮೂಲಕ ಬೇರೆ ದಡವನ್ನು ಸೇರಬೇಕೆಂಬ ಪಯಣಿಗನಿಗೆ ನದಿಯ ಸೆಳೆತವು ಮತ್ತೊಂದು ದಡಕ್ಕೆ ಸೆಳೆದುಕೊಂಡು ಹೋಗುತ್ತದೆ. ಈ ಸನ್ನಿವೇಶದ ಚಿತ್ರಣವು ಸಾಂಕೇತಿಕವಾಗಿದೆ: "ನಾವೆಯು ಉಪ್ಪಿನ ಮಾಳಿಗಳ ಹತ್ತಿರ ಬಂದಾಗ, ಅಂಬಿಗರ ಭರಮ ತನ್ನ ಹಸ್ತ ಕೌಶಲ, ಪ್ರಸಂಗಾವಧಾನ ಎಲ್ಲವನ್ನೂ ಏಕಕಾಲಕ್ಕೆ ಪ್ರಯೋಗಿಸಿ, ನೀರಿನ ಸೆಳೆವಿನಲ್ಲಿ ಸಿಕ್ಕ ನಾವೆಯನ್ನು ಸರ್‍ರನೆ ದಂಡೆಗೆ ತಿರುಗಿಸಿದನು"(ಪು.೨೭೦). ದೋಣಿ, ನದಿ, ನಾವಿಕ ಈ ಮೂರು ಪಯಣ ಜಗತ್ತಿನ ಸಂಗತಿಗಳು. ಪಾದಳ್ಳಿಯ ಜೀವನಕ್ರಮ ಕೆಲವು ಸ್ವಾರ್ಥಿಗಳ ನದಿಯ ಸೆಳೆತಕ್ಕೆ ಸಿಕ್ಕು ದಿಕ್ಕೆಟ್ಟು ಚಲಿಸಿದೆ. ಆದರೆ ಕೆಲವು ಒಳ್ಳೆಯ ವ್ಯಕ್ತಿಗಳು ನಾವಿಕರಂತೆ ಪಾದಳ್ಳಿಯ ಶಾಂತಿಗೆ ಪ್ರಯತ್ನಿಸುವರು. ದೋಣಿಯನ್ನ ಬೇರೆ ದಡಕ್ಕೆ ಸಾಗಿದಂತೆ ಪಾದಳ್ಳಿ ಜೀವನ ಕ್ರಮದಲ್ಲೂ ಬದಲಾವಣೆಗಳು ನಡೆಯುತ್ತವೆ. ಹೀಗೆ ಪ್ರಕೃತಿಯ ವಿದ್ಯಮಾನದ ಸೂಕ್ಷ್ಮ ಚಲನೆಯ ವಿವರಗಳನ್ನು ಕಾದಂಬರಿ ವ್ಯಕ್ತಿ, ಕುಟುಂಬ, ಹಳ್ಳಿಯ ಬದುಕಿನ ಪಯಣದ ಸಂದರ್ಭದಲ್ಲಿ ಸಂಕೇತಗಳಾಗಿ ದುಡಿಯುವಂತೆ ನಿರೂಪಿಸುತ್ತದೆ.

ಬೇಟೆಯ ಪದ್ಧತಿಗೂ ಬೇಟೆಗಾರರ ಚಲನವಲನಗಳಿಗೆ ಸಂಬಂಧವಿದೆ. ಇದರಲ್ಲಿ ಎರಡು ವಿಧವಿದೆ. ಆಹಾರಕ್ಕಾಗಿ ಬೇಟೆಯಾಡುವವರು. ಮನರಂಜನೆಗಾಗಿ, ಹವ್ಯಾಸಕ್ಕಾಗಿ ಪ್ರಾಣಿಗಳನ್ನು ಬೇಟೆಯಾಡುವವರು. ಕುವೆಂಪುರವರ ಕಾದಂಬರಿಗಳಲ್ಲಿ ಮೊದಲನೇ ಮಾದರಿಯ ಬೇಟೆಯಾಡುವಿಕೆ ಹೆಚ್ಚಿದೆ. 'ಗ್ರಾಮಾಯಣ'ದಲ್ಲೂ ಇಂದುಪುರದ ಮಹಾರಾಜರು ಪಾದಳ್ಳಿಗೆ ಬಂದಾಗ ಪ್ರಾಣಿಗಳನ್ನು ಬೇಟೆಯಾಡುವ ಪ್ರಸಂಗವಿದೆ. ಇದು ಮನರಂಜನೆಯ ಬೇಟೆಯಾಗಿದೆ: "ಆಷಾಢ ಮಾಸದ ಜಡಿಮಳೆ ಬಿದ್ದದ್ದರಿಂದ ಎರೆಭೂಮಿ ಹಸಿಯಾಗಿತ್ತು. ಚಿಗರೆಗಳು ಜಿಗಿದರೆ ಅವುಗಳ ಕಾಲುಗಳು ಅನಾಯಾಸವಾಗಿ ಹುದುಲಿನಲ್ಲಿ ಸಿಗಬಹುದಾಗಿತ್ತು. ಆಗ ಓಡುವುದು ಆಯಾಸ ಪ್ರದವಾಗಿ ಅವು ನಾಯಿಗಳ ಬಾಯಿಗೆ ತಾವಾಗಿಯೇ ಬೀಳುವ ಪ್ರಸಂಗ ಬರುತ್ತದೆ" ಎಂದು ಕಾದಂಬರಿ ಬೇಟೆಯ ಹಿನ್ನೆಲೆಯನ್ನು ಚಿತ್ರಿಸುತ್ತದೆ(ಪು.೨೭೮). ಚಿಗರೆಗಳ ಬೇಟೆ ಸಾಂಕೇತಿಕವಾಗಿದೆ. ಯಾಕೆಂದರೆ ಪಾದಳ್ಳಿಯಲ್ಲಿ ಮನುಷ್ಯರು ಮನುಷ್ಯರ ಬೇಟೆಯಾಡುತ್ತಾರೆ. ಹಸಿಮಣ್ಣಿನಲ್ಲಿ ಕಾಲು ಸಿಕ್ಕಿಸಿಕೊಂಡು ಬೇಟೆಗಾರರಿಗೆ ಬಲಿಯಾಗುವ ಚಿಗರೆಗಳು ಪಾದಳ್ಳಿಯ ಮುಗ್ಧಜನರ ಅವನತಿಯನ್ನು ಸಂಕೇತಿಸುವಂತಿದೆ. ಪಾದಳ್ಳಿಯ ಕೆಲವು ಸ್ವಾರ್ಥಿಗಳು ಹಸಿಮಣ್ಣಿನಂತೆ ಪಾದಳ್ಳಿಯ ಓಟವನ್ನು ತಡೆಯುವ, ಅದರ ಸಾವು ಮತ್ತು ಅವನತಿಯೆಡೆಗೆ ಕೊಂಡೊಯ್ಯುವಂತೆ ಇಲ್ಲಿ ಭಾಸವಾಗುತ್ತದೆ. ಮನುಷ್ಯರ ಪ್ರಗತಿಗೆ ಕಾರಣವಾಗುವ ನದಿಗಳ ಏರುಪೇರುಗಳು ಪಾದಳ್ಳಿಯ ಗತಿ ಅವನತಿಗೂ ಕಾರಣವಾಗುತ್ತವೆ. ಇಲ್ಲಿ ಪಾದಳ್ಳಿ ಹಾಗೂ ಪಾದಳ್ಳಿಯ ಜನರು ಪ್ರಕೃತಿಯ ನಡುವೆ ಬೆಸೆದುಕೊಂಡು

ಸಾಗುವ ಸಂಬಂಧಗಳು ಇಲ್ಲಿ ಸೂಕ್ಷ್ಮವಾಗಿ ಚಿತ್ರಿತವಾಗಿವೆ. ಚಿಗರೆಯ ಸಾವಿನ ಓಟದ ಹಾಗೆ ಹಾಗೂ ನದಿಯ ಭೀಷಣ ಪ್ರವಾಹದ ಪಯಣದ ಹಾಗೆ ಪಾದಳ್ಳಿಯೂ ದುರಂತದತ್ತ ಚಲಿಸುತ್ತದೆ.

ನಿಸರ್ಗದ ಭಾಗವಾಗಿರುವ ಜೀವಿಗಳು ಸಹ ಸಂಕೇತಗಳಾಗಿ ಕಾದಂಬರಿಯಲ್ಲಿ ದುಡಿಯುತ್ತವೆ. 'ಗ್ರಾಮಾಯಣ'ದ ಕೊನೆಯಲ್ಲಿ ಲಿಂಗಪ್ಪನ ಮೂಲಕ ಚಿಮಣಾಳ ಮೇಲೆ ಬಲತ್ಕಾರ ನಡೆಯುವ ಸನ್ನಿವೇಶವಿದೆ. ಅದೇ ಸಂದರ್ಭದಲ್ಲಿ ಪಡದಯ್ಯ ಬೇರೆ ಸ್ಥಳಕ್ಕೆ ಪಯಣ ಬೆಳೆಸಿರುತ್ತಾನೆ. ಆ ಸ್ಥಳವನ್ನು ತಲುಪಿದ ನಂತರ ಬೀಳುವ ಪಡದಯ್ಯನ ಕನಸಿನಲ್ಲಿ ಆತ ಕುದುರೆಯ ಪ್ರಯಾಣ ಮಾಡುತ್ತಿರುವಾಗ ಹಾವೊಂದು ಹಿಂಬಾಲಿಸಿಕೊಂಡು ಬರುವ ಪ್ರಸಂಗವಿದೆ. ಸರ್ಪವನ್ನು ಹಿಂದಿನಿಂದಲೂ ಲೈಂಗಿಕತೆಯ ಸಂಕೇತವಾಗಿ ಬಳಸಿಕೊಂಡು ಬರಲಾಗಿದೆಯಷ್ಟೆ. ಪಡದಯ್ಯನ ಕನಸಿನ ವಿವರಗಳು ಹೀಗಿವೆ: "ಸರ್ಪವೊಂದು ತಮ್ಮ ಬೆನ್ನ ಹಿಂದೆಯೇ ಬರುತ್ತದೆ. ಕುದುರೆಯ ಹೆಜ್ಜೆಯನ್ನು ಹಿಡಿದೇ ಬರುತ್ತದೆ. ಬಿಸಿಲಿನಲ್ಲಿ ಅದರ ಗೋದಿ ಬಣ್ಣದ ಮೈ ಮಿರಮಿರನೆ ಮಿಂಚುತ್ತಿದೆ. ಮುಚ್ಚಿದ ಹೆಡೆಯನ್ನೊಮ್ಮೆ ಅರಳಿಸಿ ಅದು ಮೇಲೆತ್ತಿದ್ದಾಗ ಹೆಣ್ಣಿನ ಕಣ್ಣೊಂದು ತೆರೆದಂತೆ ಭಾಸವಾಗುತ್ತಿದೆ. ಆದರೆ ಅದು ಸರ್ಪವೆಂದು ತಿಳಿದಾಗ ಮಾತ್ರ ಹೆದರಿಕೆಯಾಯಿತು. ಕುದುರೆಯನ್ನು ಓಡಿಸಬೇಕೆಂದರೂ ಅದು ದಣಿದಿದೆ. ಬಿಸಿಲು ತಲೆಯ ಮೇಲೆ ಅಪ್ಪಳಿಸುತ್ತಿದೆ"(ಪು.೩೯೪). ಚಿಮಣಾಳ ದುಸ್ಥಿತಿಗೆ ಪಡದಯ್ಯನೇ ಕಾರಣನಾಗಿರುತ್ತಾನೆ. ಅವನ ಕುಮ್ಮಕ್ಕಿನಿಂದಲೇ ಬಲತ್ಕಾರ ಮಾಡಲು ಲಿಂಗಪ್ಪ ಹೋಗಿದ್ದರಿಂದ ಆಕೆ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ. ಪುರುಷ ದೌರ್ಜನ್ಯಗಳಿಗೆ ಒಳಗಾಗಿ ದುರಂತ ಸಾವನ್ನು ಕಂಡ ಚಿಮಣಾ ಪಡದಯ್ಯನ ಕನಸಿನಲ್ಲಿ ತನ್ನ ಅಸಹಾಯಕತೆ, ಪ್ರತಿಭಟನೆ, ಸಿಟ್ಟನ್ನು ತೋರಿರುವಂತೆ ಕಂಡುಬರುತ್ತದೆ. ಆತನ ಕನಸಿನ ಮೂಲಕ ಕುದುರೆಯ ಪಯಣ, ಹಾವಿನ ಪಯಣ, ಲಿಂಗಪ್ಪನ ಪಯಣ ಮೂರೂ ಸೇರಿಕೊಂಡ ಸಂಭವಿಸುವ ದುರಂತಕ್ಕೆ ಸಂಕೇತವಾಗುತ್ತವೆ.

'ಗ್ರಾಮಾಯಣ'ದ ಕೊನೆಯಲ್ಲಿ ದಾದಾ ಪಾದಳ್ಳಿಯನ್ನು ತಲುಪಲು ನದಿಯಲ್ಲಿ ಈಜುವ ಪ್ರಸಂಗವಿದೆ. ಇದು 'ಮದುಮಗಳು' ಕಾದಂಬರಿಯಲ್ಲಿ ನಾಯಿಗುತ್ತಿ ಹಾಗೂ ಅವನ ನಾಯಿಯು ತುಂಗಾ ನದಿಯನ್ನು ದಾಟುವ ಪ್ರಸಂಗವನ್ನು ನೆನಪಿಸುತ್ತದೆ. ಕನ್ನಡದ ಇಬ್ಬರು ಮಹಾನ್ ಕಾದಂಬರಿಕಾರರು ತಮ್ಮ ಕಾದಂಬರಿಗಳಲ್ಲಿ ತಮ್ಮತಮ್ಮ ಭಾಗದ ನದಿಗಳನ್ನು ಕಾದಂಬರಿಗಳಲ್ಲಿ ಜೀವಂತ ಪಾತ್ರವಾಗಿ ತರುತ್ತಾರೆ. ಮಾತ್ರವಲ್ಲ ಅದರ ದಡದ ಜನರ ಬದುಕಿನ ಎಲ್ಲ ವಿವರಗಳನ್ನು ಆ ನದಿಯ ಜತೆ ಬೆಸೆದುಬಿಡುತ್ತಾರೆ. ನದಿಯು ಹರಿಯುತ್ತ ಪಯಣಿಸುವಂತೆ ಅವುಗಳ ದಡದ ಊರುಗಳೂ ತಮ್ಮದೇ ಲಯದಲ್ಲಿ ಪಯಣ ಮಾಡುತ್ತವೆ. ನದಿಯ ಪಯಣಕ್ಕೆ ಊರು ಸಾಕ್ಷಿಯಾದರೆ, ಊರ ಪಯಣಕ್ಕೆ ನದಿಗಳು ಸಾಕ್ಷಿಯಾಗುತ್ತವೆ. ಮೈದುಂಬಿ ಭೋರ್ಗರೆಯುತ್ತ ಹರಿಯುವ ನದಿಯ ಸುಳಿಯೊಳಗೆ ಸಿಕ್ಕು ದಾದಾ ಬೇರೆಡೆ ಎಳೆದೊಯ್ಯಲ್ಪಡುತ್ತಾನೆ. ಅದು ಪಾದಳ್ಳಿಯ ಜತೆ ದಾದಾನ ನಡುವಿನ ಸಂಬಂಧವನ್ನು ಬೇರ್ಪಡಿಸುವಂತೆ ಕಾಣುತ್ತದೆ. ಆದರೆ ದಾದಾ ನದಿ ದಾಟಿ

ಊರು ಮುಟ್ಟುತ್ತಾನೆ. ಆಗ ಅವನ ಎಲ್ಲ ಸಂಬಂಧಿಕರು ಸತ್ತು ಕಣ್ಮರೆಯಾಗಿರುವ ಘೋರಸತ್ಯವು ತಿಳಿದುಬರುತ್ತದೆ. ದಾದಾ ನದಿಯಲ್ಲಿ ಈಜುವಾಗ ಪಾದಳ್ಳಿಯಿಂದ ದೂರ ಚಲಿಸಿದಂತೆ, ಊರಿನಿಂದ ಸಂಬಂಧಿಕರಿಂದ ದೂರವಾಗುವಂತೆ ಭಾಸವಾಗುವ ಈ ಚಿತ್ರವು ಸಾಂಕೇತಿಕವಾಗಿದೆ. ಈ ನದಿಯ ನೀರಿಗೂ ಇಲ್ಲಿನ ಜನರ ಮಾನವ ಸಂಬಂಧಗಳಿಗೂ ಇರುವ ನಂಟನ್ನು ಚರ್ಚಿಸುತ್ತ ವಿಮರ್ಶಕಿ ತಾರಿಣಿ ಶುಭದಾಯಿನಿಯವರು "ಕೃಷ್ಣಾನದಿಯ ನೀರು ಕಾದಂಬರಿಯಲ್ಲಿ ಕೇಡಿನ ಸಂಕೇತ. ಅದು ಅತಿಯಾಗಿ ಉಕ್ಕುತ್ತದೆ; ಇಲ್ಲ ಒಣಗುತ್ತದೆ. ಈ ಅತಿಗಳೇ ಸಾಮರಸ್ಯಭಂಗದ ಸಂಕೇತವಾಗುತ್ತದೆ" ಎಂದು ಹೇಳುತ್ತಾರೆ.[೪] ಪಾದಳ್ಳಿಯಲ್ಲಿ ಹರಿಯುವ ಹೊಳೆಯೇ ಎರಡು ನೆಲೆಗಳಲ್ಲಿ ಅದರ ಅಧೋಗತಿಗೆ ಕಾರಣವಾಗುತ್ತದೆ. ಕೃಷ್ಣಾಹೊಳೆ ಹರಿಯುವ ಚಲನೆಯ ಸಂಕೇತ. ಹೊಳೆಯ ಚಲನೆ ಹೆಚ್ಚಾದರೆ ಅಥವಾ ಕಡಿಮೆಯಾದರೆ ಅದರ ಪರಿಣಾಮವನ್ನು ಅನುಭವಿಸುವುದು ಪಾದಳ್ಳಿ. ಪಾದಳ್ಳಿಯ ಬದುಕಿನ ಒಳಗೂ ಬೇರೆ ಬೇರೆ ನೆಲೆಯ ಚಲನೆಗಳನ್ನು ನದಿ ಉಂಟುಮಾಡುತ್ತದೆ. ಹೀಗೆ ರಾವಬಹದ್ದೂರರ ಕೃತಿಗಳು ಮನುಷ್ಯ ಸಂಬಂಧಗಳನ್ನು ಮನುಷ್ಯರ ಮತ್ತು ನಿಸರ್ಗದ ಚಲನೆ ಅಥವಾ ಪಯಣಗಳ ಮೂಲಕ ಬೆಸೆದು ಸಾಂಕೇತಿಕವಾಗಿ ಚಿತ್ರಣ ಮಾಡುತ್ತವೆ. ಜಿ.ಎಸ್. ಶಿವರುದ್ರಪ್ಪನವರ 'ಮಬ್ಬಿನಿಂದ ಮಬ್ಬಿಗೆ', ಕುವೆಂಪು ಅವರ 'ಸೂರ್ಯೋದಯ' ಮುಂತಾದ ಕವಿತೆಗಳಲ್ಲೂ ನಿಸರ್ಗದ ಹಕ್ಕಿ, ನದಿ, ಆಕಾಶಕಾಯ ಮುಂತಾದವುಗಳ ಚಲನೆಗಳ ಮೂಲಕ ವ್ಯಕ್ತಿಯ ಜೀವನದ ಚಲನೆಗಳನ್ನು ಸಮೀಕರಿಸಿ ನೋಡುವ ಕ್ರಮವಿದೆ. ಆದರೆ ಗದ್ಯಕೃತಿಗಳಲ್ಲಿ ನಿಸರ್ಗದ ವಿವರಗಳನ್ನು ಮಾನವ ಬದುಕಿನ ಏರಿಳಿತಗಳ ಜತೆ ಬೆಸೆಯುವುದು ರಾವಬಹದ್ದೂರ, ಕಾರಂತ, ಕುವೆಂಪು ಅವರ ವಿಶಿಷ್ಟತೆಯಾಗಿದೆ.

೬.೩. ಪಯಣ: ಆಸ್ತಿ ಮತ್ತು ಅಧಿಕಾರ

ಪಯಣಕ್ಕೂ ಸಂಪತ್ತು ಅಧಿಕಾರಗಳಿಗೂ ವಿಚಿತ್ರವಾದ ಸಂಬಂಧವಿದೆ. ಹಾಗೆಯೇ 'ಗ್ರಾಮಾಯಣ' ಮತ್ತು 'ಬಿತ್ತಿ ಬೆಳೆದವರು' ಕಾದಂಬರಿಗಳಲ್ಲಿ ಆಸ್ತಿ ಮತ್ತು ಅಧಿಕಾರಕ್ಕಾಗಿ ನಡೆಯುವ ಪಯಣ ಮತ್ತು ಚಲನೆಗಳ ಸ್ವರೂಪ ಅರಿಯುವುದು ಇಲ್ಲಿ ಮುಖ್ಯವಾಗಿದೆ. ದಾಹಿ ಮನುಷ್ಯರು ಸಂಪತ್ತು, ಅಧಿಕಾರದ ಮೋಹದಲ್ಲಿ ಬೀಳುತ್ತಾರೆ. ಮನುಷ್ಯರ ಬದುಕಿನ ಸಮೃದ್ಧಿಗೆ ಕಾರಣವಾದ ಭೂಮಿ, ನದಿ ಇತ್ಯಾದಿ ಪರಿಸರದ ವಿನಾಶಕ್ಕೂ ಕಾರಣರಾಗುತ್ತಾರೆ. ಇದನ್ನು ರಾವಬಹದ್ದೂರರ ಕೃತಿಗಳಲ್ಲಿ ಗಮನಿಸಬಹುದಾಗಿದೆ.

'ಗ್ರಾಮಾಯಣ'ದಲ್ಲಿ ರಾಣೋಜಿರಾಯ ತೀರಿಕೊಂಡ ನಂತರ ಹೆಂಡತಿಯರಲ್ಲಿ ಆಸ್ತಿ ಮತ್ತು ವಾಡೆಯ ಅಧಿಕಾರಕ್ಕಾಗಿ ಕಲಹ ಪ್ರಾರಂಭವಾಗುತ್ತದೆ. ಲಕ್ಷ್ಮೀಬಾಯಿ ಮತ್ತು ಪುತಳಾಬಾಯಿಯ ನಡುವಿನ ಕಲಹ ಸಾಮಾನ್ಯರ ಬದುಕಿನ ಮೇಲೂ ಪ್ರಭಾವವನ್ನು ಬೀರುತ್ತದೆ. ಈ ಸಂಪತ್ತು ಮತ್ತು ಅಧಿಕಾರದ ಸಂಘರ್ಷದ ಸಂದರ್ಭಗಳಲ್ಲಿ ಅನೇಕ ಪಯಣಗಳು ನಡೆಯುತ್ತವೆ. ಜಾಗೀರಿಗೆ ಸಂಬಂಧಿಸಿದ ಕಾಗದ ಪತ್ರಗಳನ್ನು ಆಭರಣಗಳನ್ನು ಕದ್ದು ತವರಿಗೆ ಪಯಣ ಬೆಳೆಸುತ್ತಾಳೆ.

ಲಕ್ಷ್ಮೀಬಾಯಿ ವಾಡೇಯ ಮೇಲಿನ ಅಧಿಕಾರವನ್ನು ಉಳಿಸಿಕೊಳ್ಳುವಲ್ಲಿ ವಿಫಲವಾಗುವರು. ಪಾದಳ್ಳಿಯ ಜನರೇ ಲಕ್ಷ್ಮೀಬಾಯಿಯ ಅಧಿಕಾರವನ್ನು ವಿರೋಧಿಸಿದ್ದು ಒಂದೆಡೆಯಾದರೆ, ಮತ್ತೊಂದೆಡೆ ಪಾದಳ್ಳಿಯ ಜನರನ್ನು ನಿರ್ಲಕ್ಷಿಸಿ ಆಕೆ ಇಂದುಪುರಕ್ಕೆ ಹೋಗುವುದು ಅವಳನ್ನು ವಾಡೇಯ ಅಧಿಕಾರ ಕಳೆದುಕೊಳ್ಳುವಂತೆ ಮಾಡುತ್ತದೆ. ಆಕೆ ಅಧಿಕಾರ ಕಳೆದುಕೊಂಡ ಬಡೋದೆಗೆ ಪಯಣ ಮಾಡುವಾಗ "ಇಷ್ಟು ದಿನಾ ಈ ಆಸ್ತೀನಾ ನಾ ಉಣಕೋತ ಬಂದೀನು. ಇನ್ನ ಮ್ಯಾಗ ಅದರ ಮಾಲ್ಕೀ ನಿಂದ ಆತು. ಯಾಕೋ ಇಲ್ಲೇ ಜೀವ ನಿಲ್ಲಗೊಡುದಿಲ್ಲ. ಮನಸ್ಸು ಬಂದ ಕಡೇ ಹೊಕ್ಕೇನು" ಎಂದು ಹೇಳುತ್ತಾಳೆ(ಪು.೭). ವಾಡೇದ ಮೇಲಿನ ಜವಾಬ್ದಾರಿಯನ್ನು ಪುತಳಾಬಾಯಿಗೆ ವಹಿಸಿ ತೆರಳುವಳು. ಅಧಿಕಾರ ಪಡೆಯುವುದು ಇಲ್ಲವೇ ಕಳೆದುಕೊಳ್ಳುವುದು ವ್ಯಕ್ತಿಯ ಸಾಮರ್ಥ್ಯ ಮತ್ತು ನಡುವಳಿಕೆಯ ಮೇಲೆ ನಿಂತಿರುತ್ತದೆ. ಲಕ್ಷ್ಮೀಬಾಯಿ ಸಿಕ್ಕ ಅಧಿಕಾರವನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಕಳೆದುಕೊಳ್ಳುವಳು. ಇದೇ ನೆಲೆಯಲ್ಲೇ ಮಾಸ್ತಿಯವರ 'ಚಿಕವೀರ ರಾಜೇಂದ್ರ'ದಲ್ಲಿಯೂ ಚಿಕವೀರನು ದುಂದುವೆಚ್ಚ, ತಪ್ಪು ನಿರ್ಧಾರ, ಸೋಮಾರಿತನದಿಂದ ಅಧಿಕಾರ ಕಳೆದುಕೊಂಡು ದೇಶಭ್ರಷ್ಟನಾಗುವನು. ಭೂಮಿ ಮತ್ತು ಅಧಿಕಾರಕ್ಕಾಗಿ ಎಷ್ಟೋ ರಾಜಮನೆತನಗಳು ಕಾಲದ ಚಲನೆಯಲ್ಲಿ ಉಗಮ ಮತ್ತು ಅವನತಿಗಳ ಏರಿಳಿತಗಳನ್ನು ಕಂಡಿವೆ. ಇದು ಚರಿತ್ರೆಯ ಪುಟಗಳಲ್ಲೂ ನೋಡಬಹುದಾಗಿದೆ.

ಪಾದಳ್ಳಿಯ ಜೀವನ ಗತಿಯ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳಲ್ಲಿ ಪಡದಯ್ಯ ಕೂಡ ಒಬ್ಬರು. ಪಡದಯ್ಯ ಮಠದ ಆಸರೆಯಲ್ಲಿದ್ದುಕೊಂಡೇ ಅನೈತಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡದ್ದು ಪಾದಳ್ಳಿಯ ಜನರ ವಿರೋಧಕ್ಕೆ ಕಾರಣವಾಗುವುದು. ಬಾಪೂ ಸಾಹೇಬ, ಲಿಂಗಪ್ಪನಿಗೆ ಅಧಿಕಾರವನ್ನು ಕೊಡಿಸುವ ಸಲುವಾಗಿ ಮಾಡಿದ ಚಲನೆಗಳೇ ಪಡದಯ್ಯ ಮಠದ ಅಧಿಕಾರವನ್ನು ಕಳೆದು ಕೊಳ್ಳಬೇಕಾಗುತ್ತದೆ. ಪಡದಯ್ಯ ಅಧಿಕಾರ ಕಳೆದುಕೊಂಡು ಪಾದಳ್ಳಿಯನ್ನು ತೊರೆದದ್ದು, ಇತರೇ ಅಧಿಕಾರಗಳ ನೆಲೆಗೆ ವೇದಿಕೆಯೊಂದನ್ನು ಸಿದ್ಧಗೊಳಿಸುತ್ತದೆ. "ಇಂದುಪುರಿಗೆ ಹೋಗಿದ್ದ ಯಶವಂತರಾಯರು ಮರಳಿ ಪಾದಳ್ಳಿಗೆ ಬಂದಾಗ ಅವರಿಗೆ ಪಡದಪ್ಪನವರನ್ನು ಪದಭ್ರಷ್ಟಗೊಳಿಸಿದ ಸುದ್ದಿ ತಿಳಿಯಿತು. ಅದನ್ನು ಕೇಳಿದವರೇ ಅವರು ಬಾಳಾಚಾರ್ಯರ ಮನೆಗೋಡಿದರು"(ಪು.೨೧೧). ಯಶವಂತರಾಯರಿಗೆ ಪಾದಳ್ಳಿಯ ವಾಡೆಗೆ ಲಕ್ಷ್ಮೀಬಾಯಿಯನ್ನು ಕರೆಸಿ ತಮ್ಮ ಅಳಿಯ ಬಾಪೂ ಸಾಹೇಬನನ್ನು ವಾಡೆಯಿಂದ ದೂರಮಾಡಲು ಪ್ರಯತ್ನಿಸುವರು. ಬಾಳಾಚಾರ್ಯರ ಮೂಲಕ ಇಂದುಪುರಿಗೆ, ಲಕ್ಷ್ಮೀಬಾಯಿಯೆಡೆಗೆ ನಡೆದ ಪಯಣಗಳು ಅಧಿಕಾರವನ್ನು ಸ್ಥಾಪಿಸುವುದು ಮುಖ್ಯವಲ್ಲ. ಪಾದಳ್ಳಿಯ ಜನರ ಬದುಕನ್ನು ಸುಧಾರಿಸುವುದು ಮುಖ್ಯ. ಬಾಪೂ ಸಾಹೇಬ, ಲಿಂಗಪ್ಪರಿಗೆ ಪಡದಯ್ಯನ ನಿರ್ಗಮನ ತಮ್ಮ ಅಧಿಕಾರದ ಸ್ಥಾಪನೆಗೆ ತೊಡಕಾದರೆ, ಲಕ್ಷ್ಮೀಬಾಯಿ ಮತ್ತು ಇಂದುಪುರದ ರಾಜರಿಗೆ ಅಧಿಕಾರವನ್ನು ಮರುಸ್ಥಾಪಿಸಲು ವೇದಿಕೆಯೊಂದು ಸಿದ್ಧವಾಗುತ್ತದೆ.

ಹೀಗೆ ಪಡದಯ್ಯನವರು ಮಠದ ಅಧಿಕಾರದಿಂದ ನಿರ್ಗಮನಗೊಂಡಿದ್ದು ಹಲವು ಅಧಿಕಾರದ ನೆಲೆಗಳ ಬೆಳವಣಿಗೆಯೊಂದಕ್ಕೆ ಕಾರಣವಾಗುತ್ತದೆ.

ಆಸ್ತಿ ಮತ್ತು ಅಧಿಕಾರಗಳು ಹಳ್ಳಿಯ ಜೀವನ ಕ್ರಮದ ಮೇಲೆ ಪ್ರಭಾವ ಬೀರುತ್ತವೆ. ಪಡದಯ್ಯನ ಸಹಾಯದಿಂದ ಬಾಪೂಸಾಹೇಬ, ಲಿಂಗಪ್ಪಗೌಡರ ಜಮೀನಿನ ಅಧಿಕಾರವನ್ನು ಪಡೆಯುವ ಸಲುವಾಗಿ ಭೂಮಿಯಿಂದ ಬೆಳೆ ಮೇಲೇಳದಂತೆ ಮಾಡುವರು. ಇನ್ನೊಬ್ಬರ ಆಸ್ತಿ ಮತ್ತು ಅಧಿಕಾರವನ್ನು ವಶಪಡಿಸಿಕೊಳ್ಳುವ ಸಲುವಾಗಿ ಭೂಮಿಯನ್ನು ಪಾಳುಬಿಡುವ ಸನ್ನಿವೇಶ ನಿರ್ಮಾಣವಾಗುತ್ತದೆ. ಮಹಾರಾಜರು ಬೇಟೆಯಾಡುವ ಸಂದರ್ಭದಲ್ಲಿ ಕಾಣುವ ಭೂಮಿಯ ಚಿತ್ರಣ ಬಹಳ ವಿಷಾದಕರವಾಗಿದೆ: "ಎಲ್ಲಿ ನೋಡಿದರು ಭೂಮಿಯಲ್ಲಿ ಮನುಷ್ಯನ ಕತೆಯ ವಿಷಾದಛಾಯೆ ಪರಿಸರಿಸಿದಂತಿತ್ತು. ಯಾರದೋ ಈರ್ಷ್ಯೆ ನೆಲವನ್ನು ಬಂಜೆಯಾಗಿಸಿತ್ತು; ಅಧಿಕಾರ ಭೂಮಿಯನ್ನು ಮುಟ್ಟದಂತೆ ನಿರ್ಬಂಧ ಹಾಕಿತ್ತು; ಕಪಟಕಾರಸ್ಥಾನಗಳೆಲ್ಲ ಬೀಜದ ಮೊಳಕೆ ಮೇಲೇಳದಂತೆ ಮಾಡಿದ್ದವು"(ಪು.೨೭೭). ದೇಶಪಾಂಡೆಯವರ ಭೂಮಿಯನ್ನು ಕುಲಕರ್ಣಿಯು ಮೂಲಕ ರೈತರಿಂದ ದೂರವಿಡುವನು; ಬೆಳೆ ಭೂಮಿಯಲ್ಲಿರುವಾಗಲೇ ನಾಶ ಮಾಡಲಾಗುತ್ತದೆ. ಇಡೀ ಕಾದಂಬರಿಯಲ್ಲಿ ಸಂಪತ್ತಿಗಾಗಿ, ಅಧಿಕಾರಕ್ಕಾಗಿ ಭೂಮಿಯನ್ನು ವಶಪಡಿಸಿಕೊಳ್ಳುವ ಸಲುವಾಗಿ ನಡೆಯುವ ಅಧಿಕಾರಸ್ಥರು ಮಾಡುವ ಪಯಣಗಳು ಪಾದಳ್ಳಿಯ ಬಡಜನರ ಮೇಲೆ ಪರಿಣಾಮ ಬೀರುತ್ತವೆ.

'ಗ್ರಾಮಾಯಣ'ದಲ್ಲಿ ಲಕ್ಷ್ಮಣ ಮತ್ತು ನಾನಾರವರ ಬದುಕುಗಳು ಒಂದು ವೈರುಧ್ಯದಂತಿವೆ. "ಅಣ್ಣ ತಮ್ಮಂದಿರಲ್ಲಿ ಎರಡು ಧ್ರುವಗಳ ಅಂತರವಿತ್ತು. ಲಕ್ಷಣ ಭೂಮಿಯಲ್ಲಿ ದುಡಿದು ಅಲ್ಲಿಯೇ ಸಾಯುವ ಒಕ್ಕಲಿಗ, ಕಾರುಭಾರ ಮಾಡುತ್ತಾ ಪ್ರತಿಷ್ಠಿತರಲ್ಲಿ ಒಬ್ಬನಾಗಿ ಅಡ್ಡಾಡುತ್ತಿದ್ದ" ಎಂದು ಕಾದಂಬರಿ ಅವರನ್ನು ವಿವರಿಸುತ್ತದೆ(ಪು.೪೫). ಲಕ್ಷಣ ಕುಟುಂಬದ ನಿರ್ವಹಣೆಗಾಗಿ ಭೂಮಿಯನ್ನು ಪಡೆದು ಪಾದಳ್ಳಿಯಲ್ಲಿಯೇ ಬದುಕನ್ನು ಕಟ್ಟಿಕೊಂಡರೆ, ನಾನಾ ಊರಿಂದ ಊರಿಗೆ ಪಯಣ ಮಾಡುತ್ತಾ ವ್ಯವಹಾರ ಮಾಡುವ ಬುದ್ಧಿವಂತನಾಗುತ್ತಾನೆ. ಇರುವ ಊರಿನಲ್ಲೇ ಜೀವನ ಕಂಡುಕೊಂಡಿರುವ ಲಕ್ಷ್ಮಣ ಬಡವನಾಗಿದ್ದರೆ, ವ್ಯವಹಾರ ಮಾಡುತ್ತಾ ತಿರುಗಾಟ ಮಾಡುವ ನಾನಾ ಸಮಾಜದಲ್ಲಿ ಆಸ್ತಿ ಮತ್ತು ಅಧಿಕಾರ ಪಡೆದುಕೊಳ್ಳುತ್ತಾನೆ. ಪಯಣ ಮಾಡುವ ನಾನಾ ಸಮಾಜದ ಪ್ರತಿಷ್ಠಿತರಲ್ಲಿ ಒಬ್ಬನನಾಗುವನು. ಭೂಮಿಗೆ ಅಂಟಿಕೊಂಡು ಬದುಕುವ ಲಕ್ಷ್ಮಣ ಅನಾಮಿಕನಾಗಿಯೇ ಉಳಿಯುವನು. ಹೀಗೆ ಎರಡು ನೆಲೆಯ ಚಲನೆಗಳು ವ್ಯಕ್ತಿಯ ಬದುಕಿನಲ್ಲಿ ಆಸ್ತಿ ಮತ್ತು ಅಧಿಕಾರ ಅಂತಸ್ತುಗಳೂ ರೂಪುಗೊಳ್ಳಲು ಕಾರಣವಾಗುತ್ತವೆ. ಇದನ್ನು ಕಾದಂಬರಿ ಸೂಕ್ಷ್ಮವಾಗಿ ಕಾಣಿಸುತ್ತದೆ.

ಇತಿಹಾಸದಲ್ಲಿ ರಾಜ, ರಾಣಿ, ಮಂತ್ರಿ ಮುಂತಾದವರು ತಮ್ಮ ಬದುಕಿನಲ್ಲಿ ಆಸ್ತಿ ಮತ್ತು ಅಧಿಕಾರದ ಸಲುವಾಗಿ ಹಲವು ಸಂಘರ್ಷ ಹಾಗೂ ಪಲ್ಲಟಗಳನ್ನು ಕಂಡಿದ್ದಾರೆ. 'ಗ್ರಾಮಾಯಣ'ದಲ್ಲಿ

ಪುತಳಾಬಾಯಿ ಮತ್ತು ಬಾಪೂಸಾಹೇಬನ ಚಲನೆ ಲಕ್ಷ್ಮೀಬಾಯಿಯಿಂದ ಆಸ್ತಿ ಮತ್ತು ಅಧಿಕಾರವನ್ನು ಕಿತ್ತುಕೊಳ್ಳುತ್ತದೆ; ಪುತಳಾಬಾಯಿಯ ಸಾವಿನ ನಂತರ ಬಾಪೂ ಸಾಹೇಬನ ದುರ್ನಡತೆ ಅವನನ್ನು ಅಧಿಕಾರದಿಂದ ಕೆಳಗಿಳಿಯುವಂತೆ ಮಾಡುತ್ತದೆ ಮತ್ತು ಊರನ್ನು ಬಿಟ್ಟು ಹೋಗುವಂತೆಯೂ ಮಾಡುತ್ತದೆ: "ಈ ವಾಡೇ ಲಕ್ಷ್ಮೀಬಾಯಿಗೆ ಸಲ್ಲತಕ್ಕದ್ದು. ಆಕಿ ಮನೆತನದ ಆಸ್ತಿ, ಅವರು ಕೇಳೋ ಮೊದಲೇ ಕರೆಸಿಕೊಟ್ಟು ಮರ್ಯಾದಿಯಿಂದ ನೀನು ನಿನ್ನ ಊರಿಗೆ ಹೋಗು ಅಂತ ನಾ ಹೇಳಾವಾ. ಇದು ನನ್ನ ಅಂತಃಕರಣದ ಮಾತು"(ಪು.೧೩೦). ಬಾಪೂ ಸಾಹೇಬನ ಮಾವ ಯಶವಂತರಾಯರು ಈ ಮೇಲಿನಂತೆ ಹೇಳುತ್ತಾರೆ. ವಾಡೇಯ ಮೂಲ ವಾರಸುದಾರರಾದ ಲಕ್ಷ್ಮೀಬಾಯಿಯನ್ನು ಪಾದಳ್ಳಿಗೆ ಕರೆಸಿ ಆಸ್ತಿ ಮತ್ತು ಅಧಿಕಾರವನ್ನು ವಹಿಸಿಕೊಡಬೇಕೆಂದು ಅವರ ಅಭಿಪ್ರಾಯ. ಆದರೆ ಬಾಪೂವಿಗೆ ಅಧಿಕಾರ ಬಿಟ್ಟುಕೊಡಲು ಇಷ್ಟವಿರುವುದಿಲ್ಲ. ಅಧಿಕಾರವನ್ನು ಉಳಿಸಿಕೊಳ್ಳುವ ಸಲುವಾಗಿ ಆತ ಪಡದಯ್ಯನತ್ತ ಹೋಗುತ್ತಾನೆ. ಬಾಪೂನನ್ನು ಪಾದಳ್ಳಿಯಿಂದ ಕರೆದುಕೊಂಡು ಹೋಗಲು ಲಕ್ಷ್ಮೀಬಾಯಿಯನ್ನು ಕರೆಸಲು ಯಶವಂತರಾಯರು ಮುಂದಾಗುತ್ತಾರೆ. ಈ ಮೇಲಿನ ಎರಡು ಚಲನೆಗಳು ಅಧಿಕಾರವನ್ನು ಉಳಿಸಿಕೊಳ್ಳುವ, ಅಧಿಕಾರವನ್ನು ಹಸ್ತಾಂತರಿಸುವ ಸಲುವಾಗಿ ವ್ಯಕ್ತಿಗಳ ಪಯಣಕ್ಕೆ ಕಾರಣವಾಗುತ್ತದೆ.

'ಬಿತ್ತಿ ಬೆಳೆದವರು' ಕಾದಂಬರಿಯಲ್ಲಿ ಅಣ್ಣ-ತಮ್ಮಂದಿರಲ್ಲಿ ಭೂಮಿಯ ಆಸ್ತಿ ಮತ್ತು ಅಧಿಕಾರವನ್ನು ಪಡೆಯುವ ಸಲುವಾಗಿ ಇಬ್ಬರ ನಡುವೆ ಏರ್ಪಟ್ಟ ಚಲನೆಗಳು ದ್ವೇಷಕ್ಕೆ ಕಾರಣವಾಗುತ್ತವೆ. ತಮ್ಮಣ್ಣರಾಯನು ಅಣ್ಣಾರಾಯನಿಗೆ ಸೇರಿದ ಬೀಳುಭೂಮಿಯನ್ನು ಅತಿಕ್ರಮಿಸಲು ಯತ್ನಿಸುತ್ತಾನೆ. ಆಗ ನಡೆಯುವ ಮಾತುಕತೆ ಹೀಗಿದೆ: "ಇಲ್ಲದ ಹಕ್ಕು ಪಡೆಯುವ ಆಸೆ ನಿನಗೆ ಇಲ್ಲ ಎಂದು ಹೇಳುವಿ. ಬೀಳಿನ ಮೇಲೆ ನಿನಗೆ ಎಷ್ಟೂ ಹಕ್ಕು ಇಲ್ಲ. ಹೀಗಿದ್ದರು ಅಲ್ಲಿಯ ಗಿಡ ಕಡಿಸಿ ಗಳೇ ಹೊಡೆದಿರಿ. ಅದರ ಮೇಲೆ ನಿನಗಿಲ್ಲದ ಹಕ್ಕು ಪಡೆಯುವ ಆಸೆ ಇಲ್ಲದಿದ್ದರೆ ಅತಿಕ್ರಮಣ ಮಾಡಿ ಅದನ್ನು ಸಾಗುವಳಿಗೆ ಹದಗೊಳಿಸುವ ಉದ್ದೇಶವಾದರೂ ಏನು?"(ಪು.೪೦). ಮನೆಯ ಹಾಳಾದ ವೆಂಕಟಪ್ಪನೊಂದಿಗೆ ಅಣ್ಣಾರಾಯ ತಮ್ಮಣ್ಣರಾಯನ ಮನೆಗೆ ಪಯಣ ಬೆಳೆಸುವನು. ಅಲ್ಲಿ ಅಣ್ಣಾರಾಯನ ಬೀಳುಭೂಮಿಯನ್ನು ವಶಕ್ಕೆ ತೆಗೆದುಕೊಳ್ಳಲು ತಮ್ಮಣ್ಣರಾಯನು ಮಾಡಿದ ಕುತಂತ್ರದ ಸಲುವಾಗಿ ವಾಗ್ವಾದ ನಡೆಯುತ್ತದೆ. ತಮ್ಮ ಅಣ್ಣನ ಭೂಮಿಯನ್ನು ಪಡೆಯುವ ಸಲುವಾಗಿ ಮಾಡುವ ಪಯಣಗಳು ಒಂದೆಡೆ ಕಂಡರೆ, ಮತ್ತೊಂದೆಡೆ ಆಸ್ತಿಯನ್ನು ಉಳಿಸಿಕೊಳ್ಳುವ ಸಲುವಾಗಿ ಕೋರ್ಟು, ನಗರಗಳೆಡೆಗೆ ಮಾಡುವ ಪಯಣಗಳು ಇನ್ನೊಂದೆಡೆ ಇವೆ. ಆಸ್ತಿ ಮತ್ತು ಅಂತಸ್ತಿಗಾಗಿ ಎರಡು ಕುಟುಂಬಗಳ ನಡುವೆ ನಡೆಯುವ ತಿರುಗಾಟಗಳೇ ಮುಂದೆ ಕುಟುಂಬವನ್ನೂ ಊರನ್ನೂ, ಜನ ಸಾಮಾನ್ಯರ ಬದುಕನ್ನೂ ಅತಂತ್ರ ಸ್ಥಿತಿಗೆ ತಂದು ನಿಲ್ಲಿಸುತ್ತವೆ.

ಲಲಿತ, ಗೋಪಾಳಾಚಾರಿ, ತಮ್ಮಣ್ಣರಾಯ ಆಸ್ತಿ ತಮಗೆ ಸೇರಬೇಕೆಂದು ಮಾಡಿದ ಪ್ರಯತ್ನ ಸಫಲವಾಗುವುದಿಲ್ಲ. ಗಿಡದಳ್ಳಿ ವಿಠಲಾಚಾರಿಯ ಮಗ ಕೃಷ್ಣಚಾರಿಗೆ ಮದುವೆಯಾಗಿದ್ದರೂ ಆಸ್ತಿಗಾಗಿ

ತಮ್ಮಣ್ಣರಾಯ ತನ್ನ ಮಗಳಾದ ಲಲಿತಾಳೊಂದಿಗೆ ಮರುಮದುವೆ ಮಾಡುವನು. ತಿರುಪತಿ ಯಾತ್ರೆಯ ನೆಪದಲ್ಲಿ ಗೋಪಾಳಾಚಾರಿ ವಾಡಿದ ಮದುವೆ ಲಲಿತಾಳ ಬದುಕನ್ನೇ ಹಾಳುಮಾಡಲಾಗುತ್ತದೆ. ಆಕೆ ಗೋಪಾಳಚಾರಿಯೊಂದಿಗೆ ತೀಜೋರಿಯನ್ನು ಕದ್ದು ತನ್ನ ಮಗನಿಗೆ ಆಸ್ತಿ ಮಾಡಲು ಹೋಗಿ ಮಗನನ್ನೇ ಕಳೆದುಕೊಳ್ಳುವಳು. ಹಣ, ಭೂಮಿ, ಸಂಪತ್ತು, ಅಧಿಕಾರಕ್ಕಾಗಿ ಮಾಡಿದ ಪಯಣಗಳು ಅಣ್ಣಾರಾಯ ಮತ್ತು ತಮ್ಮಣ್ಣರಾಯರ ಕುಟುಂಬಗಳನ್ನು ಅವನತಿಗೆ ಕೊಂಡೊಯ್ಯುತ್ತವೆ. ಕೋರ್ಟಿನ ಆದೇಶದಂತೆ ಲಲಿತಾ ಬಚ್ಚಿಟ್ಟ ಸಂಪತ್ತನ್ನು ತೋರಿಸಲು ಪಯಣ ಮಾಡುತ್ತಾಳೆ. ಅಲ್ಲಿಂದ ಬಂದ ಸಂದರ್ಭದಲ್ಲಿ ನಾರಾಯಣರಾಯರು ಹೇಳುತ್ತಾರೆ: "ನಿನಗೆ ಮಗನ ಹಿತಕ್ಕಿಂತ ದುಡ್ಡು ಉಳಿಸಿಕೊಳ್ಳೂದು ಹೆಚ್ಚಿನದು ಅನಿಸತಿದ್ದರೆ ಯಾರಿಗೂ ತೋರಿಸಬೇಡ. ಇದ್ದಲ್ಲಿಯೇ ಅದು ಇದ್ದು ಬಿಡಲೀ"(ಪು.೬೬೩). ಲಲಿತಾಳ ಗಿಡದಳ್ಳಿ ಕಡೆಗಿನ ಪಯಣ ಅಣ್ಣಾರಾಯನ ಉಳಿವಿಗೆ ಕಾರಣವಾಗುತ್ತದೆ. ಆಸ್ತಿಗಾಗಿ ನಡೆದ ಕಲಹ ಕೊನೆಯಲ್ಲಿ ವ್ಯಕ್ತಿಗಳನ್ನೇ ಬಲಿತೆಗೆದುಕೊಳ್ಳುವ ಮಟ್ಟಕ್ಕೆ ಸಾಗುತ್ತದೆ. ಬಚ್ಚಿಟ್ಟ ಸಂಪತ್ತು ಹೊರಬರುತ್ತಿದ್ದಂತೆ ಗೋಪಾಳಾಚಾರಿಗೆ ಶಿಕ್ಷೆಯಾದರೆ, ಅಣ್ಣಾರಾಯ ಕೊಲೆಯ ಅಪಾದನೆಯಿಂದ ಹೊರಬರುತ್ತಾರೆ. ಈ ಅಪರಾಧ ಶಿಕ್ಷೆ ಎಲ್ಲವೂ ಸ್ಥಳದಿಂದ ಸ್ಥಳಕ್ಕೆ ಮಾಡಿದ ಪಯಣಗಳ ವಿವರಗಳ ಜತೆ ಬೆಸೆದುಕೊಳ್ಳುತ್ತವೆ. ಹೀಗೆ 'ಗ್ರಾಮಾಯಣ' ಮತ್ತು 'ಬಿತ್ತಿ ಬೆಳೆದವರು' ಎರಡು ಕಾದಂಬರಿಗಳಲ್ಲೂ ಆಸ್ತಿ ಮತ್ತು ಅಧಿಕಾರಕ್ಕಾಗಿ ಮಾಡುವ ಚಲನೆಗಳು ವ್ಯಕ್ತಿಗಳಲ್ಲಿ ಬದಲಾವಣೆಯನ್ನು ತರುತ್ತವೆ. ಅಷ್ಟೇ ಅಲ್ಲ ವ್ಯಕ್ತಿಯ ಅಂತಸ್ತು, ವ್ಯಕ್ತಿತ್ವ, ಗೌರವ ಮತ್ತು ಸ್ಥಾನಮಾನಗಳಲ್ಲಿ ಪಯಣವು ಪ್ರಮುಖ ಪಾತ್ರವನ್ನು ವಹಿಸುತ್ತದೆ.

೬.೪. ಪಯಣ: ಸಂಘರ್ಷ

ಜಗತ್ತಿನಲ್ಲಿ ಪ್ರತಿಯೊಂದು ಜೀವಿಯೂ ಬದುಕಲು ಅಥವಾ ಅಸ್ತಿತ್ವಕ್ಕಾಗಿ ಒಂದಲ್ಲಾ ಒಂದು ತರಹ ಸಂಘರ್ಷ ಮಾಡುತ್ತಲೇ ಇರುತ್ತದೆ. ಇಲ್ಲಿ ಹಸಿವು, ಕಾಮ, ಜೀವರಕ್ಷಣೆ ಮುಖ್ಯವಾಗಿರುತ್ತದೆ. ಆದರೆ ಬದುಕಿನ ಪಯಣದಲ್ಲಿ ಸಂಘರ್ಷಗಳು ಸಂಪತ್ತಿಗಾಗಿ, ಅಧಿಕಾರಕ್ಕಾಗಿ, ನಡೆಯುವ ಸಂಘರ್ಷಗಳು ಬೇರೆ ಪರಿಯಲ್ಲಿರುತ್ತವೆ. ಇವು ಹೊಸ ಅನುಭವಗಳನ್ನು ಹುಟ್ಟುಹಾಕುತ್ತವೆ. ಈ ಎರಡನೆಯ ಮಾದರಿಯ ಸಂಘರ್ಷಗಳು ಮಾನವ ಜೀವಿಗೆ ವಿಶಿಷ್ಟವಾಗಿದ್ದು ಇವು ಸಮುದಾಯಗಳ ಬೆಳವಣಿಗೆಗೆ ಮತ್ತು ಅವನತಿಗೆ ಕಾರಣವಾಗಿವೆ. ಈ ಹಿನ್ನೆಲೆಯಲ್ಲಿಯೇ 'ಗ್ರಾಮಾಯಣ' ಮತ್ತು 'ಬಿತ್ತಿ ಬೆಳೆದವರು' ಕಾದಂಬರಿಗಳಲ್ಲಿ ಸಂಘರ್ಷ ಮತ್ತು ಅದರಿಂದಾದ ಪಲ್ಲಟಗಳನ್ನು ಗಮನಿಸಬಹುದು. ಈ ಸಂಘರ್ಷಕ್ಕೆ ಸಿಕ್ಕು ವ್ಯಕ್ತಿ, ಕುಟುಂಬ, ಹಳ್ಳಿ, ಊರುಗಳು ಹೇಗೆ ನಾಶವಾಗುತ್ತವೆ ಎಂಬುದನ್ನು ಈ ಕಾದಂಬರಿಗಳನ್ನು ಚಿತ್ರಿಸುತ್ತವೆ. ಈ ಸಂಘರ್ಷ ಮತ್ತು ನಾಶದಲ್ಲಿ ಪಯಣದ ಪಾತ್ರವೇನು ಎಂದು ಆಲೋಚಿಸುವುದಕ್ಕೆ ಯತ್ನಿಸಿದೆ.

'ಗ್ರಾಮಾಯಣ' ಕಾದಂಬರಿಯಲ್ಲಿ ಚಿಮಣಾಳ ಮೇಲಿನ ಬಲಾತ್ಕಾರ ಮತ್ತು ನಾನಾ ಕಾಕಾನ ಸಾವು ಪಾದಳ್ಳಿಯಲ್ಲಿ ಅನೇಕ ಬಗೆಯ ಸಂಘರ್ಷಗಳಿಗೆ ಅವಕಾಶವನ್ನು ಒದಗಿಸಿಕೊಡುತ್ತವೆ.

ಅಪ್ಪನ ಸಾವು ಮಗಳ ಶೀಲಭಂಗದ ವಿಷಯ ದಾದಾನಿಗೆ ತಿಳಿದರೆ ನಮ್ಮನ್ನು ಸುಮ್ಮನೆ ಬಿಡಲಾರ ಎಂದು ಸಂಬಂಧಪಟ್ಟ ವ್ಯಕ್ತಿಗಳಲ್ಲಿ ಹೊಡೆದಾಟ ನಡೆಯುತ್ತದೆ. ಅವರು ಬಾಪೂಸಾಹೇಬ, ಪಡದಯ್ಯ ಮತ್ತು ದಾದಾನ ನಡುವೆ ಸಂಘರ್ಷ ನಡೆಯುವುದನ್ನು ತಡೆಯುವ ಸಲುವಾಗಿ ಪಂಢರಪುರಕ್ಕೆ ಹೋದ ದಾದಾನ ಪಯಣದ ದಿಕ್ಕನ್ನು ಬದಲಾಯಿಸಲು ಸಂಚನ್ನು ರೂಪಿಸುತ್ತಾರೆ. ದಾದಾನಿಗೆ ಸುಳ್ಳು ಮಾಹಿತಿ ನೀಡಿ ಆತ ಪಾದಳ್ಳಿಗೆ ಬರುವುದನ್ನು ತಡೆದರೆ ಮಾತ್ರ ಹೊಡೆದಾಟ ತಪ್ಪಿಸಲು ಸಾಧ್ಯವೆಂದು ಭಾವಿಸಿದ ಬಾಳಾಚಾರ್ಯರ ಅಭಿಪ್ರಾಯವಾಗಿರುತ್ತದೆ. "ಜತ್ತಿಗೆ ಅಂತ ಹೋಗ್ಯಾನ್ರಿ, ಅಲ್ಲಿಂದ ಸೊಲ್ಲಾಪುರ ಫಂಢರಪುರಕ್ಕ ಹೋಗೇ ಬರತಾನು. ಅಂದ ಮ್ಯಾಗ ಅವಗ ಹೇಳಿ ಹ್ಯಾಗ ಕಳಸೋದ್ರಿ ಈಗ? ಇನ್ನೇನು ತಾಸಗಾಂವಿಗೆ ಬಂದರೂ ಬಂದಾನು" ಎನ್ನುವ ಅವರ ಮಾತಲ್ಲಿ ದಾದಾನ ಪಯಣದ ಪಥದ ಚಿತ್ರವಿದೆ(ಪು.೩೫) ತಂದೆಯ ದೊಡ್ಡಪ್ಪನಾದ ನಾನಾಕಾಕಾನ ಸಾವಿಗೆ ಕಾರಣರಾದವರನ್ನು ದಾದಾ ಸುಮ್ಮನೇ ಬಿಡಲಾರನು. ಅಷ್ಟೇ ಅಲ್ಲ ಚಿಮಣಾಳ ದಿಕ್ಕೆಟ್ಟ ಬದುಕೇ ನಾನಾನ ಸಾವಿನ ಹಿನ್ನೆಲೆ ಎಂದು ತಿಳಿದರೆ ಇದಕ್ಕೆ ಕಾರಣರಾದ ಬಾಪೂ ಸಾಹೇಬ, ಪಡದಯ್ಯರನ್ನು ಸುಮ್ಮನೇ ಬಿಡುವುದಿಲ್ಲ. ಹೀಗಾಗಿ ಅವರ್ರೀವರ ನಡುವೆ ನಡೆಯಬಹುದಾದ ಸಂಘರ್ಷವನ್ನು ತಪ್ಪಿಸುವ ಸಲುವಾಗಿ ತಾಸಂಗಾವಿಯಲ್ಲಿಯೇ ದಾದಾ ಇರಲು ವ್ಯವಸ್ಥೆ ಮಾಡಲಾಗುತ್ತದೆ. ಆದರೆ ದಾದಾ ಹೊಡೆದಾಟಕ್ಕೆ ಮುಂದಾಗಿ ಚಿಮಣಾಳನ್ನು ಪಡದಯ್ಯನಿಗೆ ಮದುವೆ ಮಾಡುವ ಮೂಲಕ ತಂಗಿಯ ಬದುಕನ್ನು ಸರಿ ಮಾಡಲು ಯತ್ನಿಸುವನು. ಚಿಮಣಾಳ ಮೇಲಿನ ಬಲಾತ್ಕಾರ, ನಾನಾನ ಸಾವು ಈ ಎರಡು ಘಟನೆಗಳೇ ಮುಂದಿನ ಅನೇಕ ಸಂಘರ್ಷಗಳಿಗೆ ಪ್ರಚೋದಕವಾಗುತ್ತವೆ.

ಫೌಜದಾರ, ಗೌಡ ಮತ್ತು ದಾದಾನ ನಡುವೆ ನಡೆದ ಮುಖಾಮುಖಿ ಸಂಘರ್ಷಕ್ಕೆ ಕಾರಣವಾಗುತ್ತದೆ. ಗೌಡರ ಮೇಲೆ ಮಾಡಿದ ಫೌಜದಾರನ ದರ್ಪವು ದಾದಾನನ್ನೂ ಸಿಟ್ಟುಗೊಳ್ಳುವಂತೆ ಮಾಡುತ್ತದೆ. ದಾದ ಫೌಜದಾರನನ್ನು ಹೊಡೆದಿದ್ದಲ್ಲದೆ ಸಂಗಪ್ಪನ ಹಣವನ್ನು ಅವನಿಂದ ಕಸಿದುಕೊಡುವನು. ಗೌಡರ ಮೇಲೆ ದಾದಾನಿಗಿದ್ದ ಪ್ರೀತಿ, ಸಂಗಪ್ಪನ ಹಣವನ್ನು ಕಿತ್ತುಕೊಂಡದ್ದು, ದಾದಾನನ್ನು ಜೈಲಿಗೆ ತಳ್ಳುವ ಮಸಲತ್ತಿಗಾಗಿ ದಾದಾ ಮತ್ತು ಫೌಜದಾರನ ನಡುವೆ ಸಂಘರ್ಷವಾಗಿ ಮಾರ್ಪಡುತ್ತದೆ. ಫೌಜದಾರನು ವಾಡೆಗೆ ದಾದಾ ಮತ್ತು ಗೌಡರನ್ನು ಚಾವಡಿಗೆ ಕರೆಸಿಕೊಂಡು ನಿಂದಿಸಿದ್ದೆ ಸಂಘರ್ಷಕ್ಕೆ ಎಡೆಮಾಡಿಕೊಡುತ್ತದೆ. ಇವರಿಬ್ಬರ ನಡುವೆ ನಡೆದ ಹೊಡೆದಾಟದ ಸನ್ನಿವೇಶದಲ್ಲಿ ದಾದಾ ಹಾಕುವ ಬೆದರಿಕೆ ವಿಶಿಷ್ಟವಾಗಿದೆ. "ಇಲ್ಲಿ ನೋಡ ಫೌಜದಾರಾ, ಈ ಬಂದೂಕ ಹೋದರೆ ನಿನ್ನ ನೌಕರಿನ ಹೋಗತೈತಿ. ನೀನೂ ಮಕ್ಕಳೊಂದಿಗ್ಯಾ, ಅದರ ಸಲುವಾಗಿ, ಈ ಬಂದೂಕು ನಿನಗೆ ಕೊಡಬೇಕೆನಸತೈತಿ. ಆದರ ಬಂದೂಕ ಕೈಗೆ ಬರಾಣಾ ಮತ್ತೆ ಈದ ಹುಲಿ ಹಾಂಗ ಏರಿ ಬಂದು ಗೌಡರಿಗೆ ಏನಾದರೂ ತ್ರಾಸ ಕೊಟ್ಟೀ ಅಂದರ, ಜೀವಸೈತ ನೀ ಊರು ಬಿಟ್ಟು ಹೋಗದಾಂಗ ಮಾಡತೇನಿ"(ಪು.೧೨೬). ಈ ಮಾತಿನಲ್ಲಿ ದಾದಾನ ವಿಶಿಷ್ಟ ಧೈರ್ಯ

ಮತ್ತು ನೈತಿಕ ಆಕ್ರೋಶ ಕಂಡುಬರುತ್ತದೆ. ಗೌಡರ ಮೇಲಿದ್ದ ಪ್ರೀತಿ ದಾದಾನನ್ನು ಫೌಜದಾರನ ಮೇಲೇರಿ ಹೋಗುವಂತೆ ಮಾಡುತ್ತದೆ. ಈ ಘಟನೆಯಿಂದ ದಾದಾನನ್ನು ರಕ್ಷಿಸಲು ಅವನನ್ನು ಅಜರಾಣಿಗೆ ಪಯಣ ಮಾಡುವಂತೆ ಬಾಳಾಚಾರ್ಯರು ಮಾಡುವರು. ದಾದಾನ ವರ್ತನೆಯಲ್ಲಿ ಕೋಪ, ಆಕ್ರೋಶ ವ್ಯಕ್ತವಾದರೂ ಅವನ ಮನಸ್ಸು ಮೃದು ಎಂಬುದು ಫೌಜದಾರನ ಪ್ರಸಂಗದಲ್ಲಿ ಅವಲೋಕಿಸಬಹುದು. ಇಡೀ ಕಾದಂಬರಿಯಲ್ಲಿ ದಾದಾ ಊರಲ್ಲಿ ನೆಲೆನಿಂತಿರುವ ಸನ್ನಿವೇಶಗಳಿಗಿಂತ ಆತ ಊರೂರು ಅಲೆಯುವುದೇ ಹೆಚ್ಚಾಗಿದೆ. ಅದೊಂದು ಮಹಾ ಚಾರಣಿಗ ಪಾತ್ರವಾಗಿದೆ. ಗುತ್ತಿ ಹೋದ ಕಡೆಯಲ್ಲೆಲ್ಲ ಕತೆಯು ವಿಸ್ತರಣೆ ಪಡೆಯುವಂತೆ, ದಾದಾ ಹೋದ ಕಡೆಯಲ್ಲೆಲ್ಲ 'ಗ್ರಾಮಾಯಣ'ದ ಕತೆ ಹರಡಿಕೊಳ್ಳುತ್ತ ಹೋಗುತ್ತದೆ.

ಹುಣ್ಣಿಮೆಯ ಮರುದಿನ ಹುಲಿಬ್ಯಾಟಿ ಹಳಬರು, ಪಾದಳ್ಳಿಯ ಜನರು ಬೇಟೆ ಮಾಡುವ ಆಚರಣೆ ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಮರುದಿನ ನಸುಕಿನಲ್ಲಿಯೇ ಬೇಟೆಗಾರರೆಲ್ಲಾ ಊರನ್ನು ಬಿಟ್ಟು ಕಾಡಿನೆಡೆಗೆ ಪಯಣ ಮಾಡುವರು. ಪಾದಳ್ಳಿಯವರು ಬೇಟೆಯಲ್ಲಿರುವಾಗ ಪಾದಳ್ಳಿಯ ಸರಹದ್ದಿನಿಂದ ಎದ್ದ ಮೊಲ ಹಾವನೂರಿನ ಸೀಮೆಯಲ್ಲಿ ದಾದಾ ಹೊಡೆಯುವುದು ಎರಡೂ ಊರಿನ ನಡುವಿನ ಸಂಘರ್ಷಕ್ಕೆ ಕಾರಣವಾಗುವುದು. ಪಾದಳ್ಳಿಯವರು ಹಾವನೂರಿನೆಡೆಗೆ ನುಗ್ಗಿ ಹಿಡಿದ ಬೇಟೆಗಾಗಿ ಸಂಘರ್ಷ ಶುರುವಾಗುತ್ತದೆ. ದಾದಾನ ಕೈಯಲ್ಲಿದ್ದ ಬೇಟೆಯನ್ನು ನೋಡಿ ಹಾವನೂರಿನವರು "ನಮ್ಮೂರ ಹದ್ದಿನ್ಯಾಗಿನ ಬ್ಯಾಟಿಗೆ ನೀ ಹ್ಯಾಂಗ ಕೈ ಹಾಕಿದೇ?" ಎಂದು ಪ್ರಶ್ನಿಸುವರು(ಪು.೧೬೬) ಈ ಬೇಟೆಯ ಪ್ರಸಂಗ ದಾದಾನನ್ನು ಜೈಲಿಗೆ ಕಳಿಯಿಸುವ, ತನ್ನ ಕಾರ್ಯ ಸಾಧಿಸುವ ಪಡದಯ್ಯನ ಮುಂದಿನ ಬೆಳವಣಿಗೆಗೆ ಕಾರಣವಾಗುತ್ತದೆ. ಹೀಗಾಗಿಯೇ ಪಡದಯ್ಯ ಹಾವನೂರಿಗೆ ಪಯಣ ಮಾಡಿ ದಾದಾನ ಮೇಲೆ ಫೌಜದಾರನಿಗೆ ದೂರುಕೊಡುವಂತೆ ಪ್ರೇರೇಪಿಸುತ್ತಾನೆ. ವ್ಯಕ್ತಿಗಳ ನಡುವೆ ಇದ್ದ ಕಿಚ್ಚು ಹಾವನೂರಿನ ಮತ್ತು ಪಾದಳ್ಳಿಯ ಜನರ ನಡುವಿನ ಸಂಘರ್ಷಕ್ಕೆ ಕಾರಣವಾಗುತ್ತದೆ. ಈ ಸಂಘರ್ಷ ಮುಂದೆ ಪ್ರತಿಷ್ಠೆಯ ನೆಲೆಯಲ್ಲಿ ತೀವ್ರ ಸ್ವರೂಪವನ್ನು ಪಡೆದು ಪಾದಳ್ಳಿಯ ಜನರ ಬದುಕಿನಲ್ಲಿ ಅಶಾಂತಿಗೆ ಕಾರಣವಾಗುತ್ತದೆ. ಇದಕ್ಕೆಲ್ಲ ದಾದಾ ಮಾಡುವ ಸೀಮೋಲ್ಲಂಘನವೇ ಕಾರಣವಾಗುತ್ತದೆ.

ಲಿಂಗಪ್ಪ, ಪಡದಯ್ಯರು ಜನರ ಸಹಾಯದಿಂದ ಗೌಡರ ವಾಡೆ ವಶಪಡಿಸಿಕೊಳ್ಳಲು ಮುಂದಾಗುವರು. ಆದರೆ ಈ ಯತ್ನವು ಪ್ರಶ್ನಿಸುವ ಆಚಾರ್ಯರು ವಾಡೆಯನ್ನು ಯಾರೂ ಪ್ರವೇಶಿಸದಂತೆ ತಡೆಯುವರು. ಲಿಂಗಪ್ಪನ ಕಡೆಯವರೊಂದಿಗೆ ಆಚಾರ್ಯರು ಮಾತಿಗೆ ಮಾತು ಬೆಳೆಸುವರು. ತಮ್ಮ ಎಲ್ಲಾ ಓಡಾಟಗಳಿಗೂ ಅಡ್ಡಗಾಲಾಗುವ ಆಚಾರ್ಯರನ್ನು ಸಿಟ್ಟಿನಿಂದ ಪಡದಯ್ಯ "ಇಲ್ಲೆ ನೋಡ್ರಿ ಆಚಾರೆಪ್ಪ, ತಮ್ಮ ಗೌಡರು ಎಲ್ಲಿ ಇರಬೇಕನ್ನೂದ ಜನರಿಗೆ ಗೊತ್ತಾಗೇತಿ. ಸುಮಾಕ ದಾರಿ ಬಿಡ್ರಿ, ಜನಾ ಸಿಟ್ಟಿಗೆದ್ದಿತೂ ಅಂದರ ಏನಾದೀತು ಹೇಳಾಕ ಬರಾಣಿಲ್ಲಾ" ಎಂದು ಬೆದರಿಕೆ ಹಾಕುವನು(ಪು.೩೩೫). ಶಂಕರಪ್ಪ ಗೌಡರ ಹೆಂಡತಿ ಪಾರ್ವತೆವ್ವಳ ಕಡೆಯಿಂದ ವಾಡೆಯನ್ನು

ವಶಪಡಿಸಿಕೊಳ್ಳಲು ಗೌಡರ ಮಗನೆಂದು ಹೇಳಿಕೊಂಡ ಲಿಂಗಪ್ಪ ವಾಡೆಯೆಡೆಗೆ ಧಾವಿಸುವನು. ಪಾರ್ವತೆವ್ವನನ್ನು, ವಾಡೆಯನ್ನು ಲಿಂಗಪ್ಪ ಮತ್ತು ಪಡದಯ್ಯರ ಆಕ್ರಮಣದಿಂದ ರಕ್ಷಿಸಲು ಆಚಾರ್ಯರು ತಡೆಯುವರು. ಮಾತಿಗೆ ಮಾತು ಬೆಳೆದು ಸಂಘರ್ಷಕ್ಕೆ ತಿರುಗಿದಾಗ ಶೇಷಪ್ಪ ಅವರನ್ನು ಹಿಂತಿರುಗುವಂತೆ ಮಾಡುವನು. ವಾಡೆಯನ್ನು ಪಡೆಯುವ, ಉಳಿಸಿಕೊಳ್ಳುವ ಸಲುವಾಗಿ ನಡೆವ ಈ ವಿದ್ಯಮಾನಗಳು ಸಂಘರ್ಷಕ್ಕೆ ಕಾರಣವಾಗುವವು. ಇದೇ ಮುಂದೆ ಜಮೀನನ್ನೂ ಹರಗಿಸಿ ಭೂಮಿಯಲ್ಲಿದ್ದ ಬೆಳೆ ನಾಶ ಮಾಡಲು ಈ ಘಟನೆ ಕಾರಣವಾಗುವುದು. ಈ ಎಲ್ಲ ಘಟನೆಗಳು ದಾದಾ ಖಾಯಮ್ಮಾಗಿ ಪಾದಳ್ಳಿ ಬಿಟ್ಟು ಬೇರೆ ಊರಿಗೆ ಪಯಣಿಸುವುದಕ್ಕೆ ಕಾರಣವಾಗುವವು.

'ಬಿತ್ತಿ ಬೆಳೆದವರು' ಕಾದಂಬರಿಯಲ್ಲಿ ಜಮೀನಿಗಾಗಿ, ಎತ್ತುಗಳ ಮೆರವಣಿಗೆಗಾಗಿ ಅಣ್ಣ–ತಮ್ಮಂದಿರ ನಡುವೆ ನಡೆದ ಸಣ್ಣಸಣ್ಣ ಜಗಳಗಳು ಎರಡು ಗುಂಪುಗಳ ಸಂಘರ್ಷಕ್ಕೆ ನಾಂದಿಹಾಡುತ್ತವೆ. ಹೋಳಿ ಹುಣ್ಣಿಮೆಯ ದಿನ ಎತ್ತುಗಳ ಮೆರವಣಿಗೆಯ ಮೂಲಕ ಕುಟುಂಬದ ಪ್ರತಿಷ್ಠೆಯನ್ನು ತೋರ್ಪಡಿಸಿಕೊಳ್ಳುವ ಸಲುವಾಗಿ ಎರಡು ಗುಂಪುಗಳ ನಡುವೆ ವೈಮನಸ್ಸು ಚಿಗುರೊಡೆಯುತ್ತದೆ. ಅಣ್ಣಾರಾಯನ ಎತ್ತುಗಳ ಮೆರವಣಿಗೆಯ ಮೂಲಕ ಊರಿನಲ್ಲಿ ಸ್ಥಾನ ಹೆಚ್ಚಿಸಿಕೊಳ್ಳುವ ಸಲುವಾಗಿ ಮಾಡಿದ ಯತ್ನಗಳೇ ಮುಂದೆ ತಮ್ಮಣ್ಣರಾಯನ ಅವನತಿಗೆ ದಾರಿ ಮಾಡಿಕೊಡುತ್ತದೆ. ಎತ್ತುಗಳ ಮೆರವಣಿಗೆಗಾಗಿ ಎರಡು ಕುಟುಂಬಗಳ ನಡುವಿನ ಸಂಘರ್ಷದ ಸಂದರ್ಭದಲ್ಲಿ ನಡೆಯುವ ಮಾತುಕತೆಯಿದು: "ವೆಂಕಟಪ್ಪ, ನಮ್ಮ ರೈತರ ಉತ್ಸಾಹ ಭಂಗವಾಗುವುದು ಬೇಡ, ಎತ್ತುಗಳ ಮೆರವಣಿಗೆ ನಿನ್ನ ಮನಸ್ಸಿಗೆ ಬಂದಂತೆ ತೆಗೆಸು. ಕರೀ ಹರಿಯಲು ನಮ್ಮ ಎತ್ತಗಳು ಹೋಗಲಿ. ಅವನ ಪಾರ್ಟಿಜನರ ಮೂಗು ಮೇಲೆ ಆಗದಂತೆ ನಮ್ಮ ಜನರು ತಲೆ ತಗ್ಗಿಸುವ ಪ್ರಸಂಗ ಬರದಂತೆ ನಾವು ನಡೆದುಕೊಳ್ಳದೆ ಇನ್ನು ವಿಧಿ ಇಲ್ಲ"(ಪು.೪೩) ಇಬ್ಬರು ಪ್ರಬಲ ವ್ಯಕ್ತಿಗಳ ನಡುವಿನ ದ್ವೇಷ ಸಮುದಾಯಕ್ಕೂ ಹಬ್ಬಿ ಊರನ್ನೇ ಎರಡು ಭಾಗವಾಗಿ ವಿಂಗಡಿಸಿರುವುದು ಇಲ್ಲಿ ಕಂಡುಬರುತ್ತದೆ. ಇದೇ ತರಹ ಕರಿಹಾಯುವ ಪ್ರಸಂಗ 'ಗ್ರಾಮಾಯಣ'ದಲ್ಲೂ ಕಂಡುಬರುತ್ತದೆ. ದಾದಾ ಗೌಡರ ಎತ್ತುಗಳ ಮೆರವಣಿಗೆಯನ್ನು ತಡೆದಿದ್ದರಿಂದಲೇ ಪಾರ್ವತೆವ್ವಳ ದ್ವೇಷವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಬೀಳುಭೂಮಿ ಮತ್ತು ಎತ್ತುಗಳ ಮೆರವಣಿಗೆಯ ಪ್ರತಿಷ್ಠೆಯ ಓಡಾಟಗಳೇ ಎರಡು ಕುಟುಂಬಗಳನ್ನು ಅವನತಿಯೆಡೆಗೆ ಕೊಂಡೊಯ್ಯುತ್ತವೆ. ಭಾರತದ ಸ್ವಾತಂತ್ರ್ಯದ ಕಲ್ಪನೆಯನ್ನು ಈ ನೆಲೆಯಲ್ಲಿಯೇ ವ್ಯಾಖ್ಯಾನಿಸುವ ಕೃತಿ, ಕೊನೆಯಲ್ಲಿ ತಮ್ಮಣರಾಯನ ಮಾತಿನ ಮೂಲಕ ಹೀಗೆ ಧ್ವನಿಸುತ್ತದೆ. "ಒಂದು ಮನೆತನದ ಆಸ್ತಿ ಹಂಚಿಕೊಂಡು ವಿಭಕ್ತರಾದ ನಾವು ಉಂಡ ಫಲ ದೇಶವೇ ಉಣ್ಣುವ ಕಾಲ ಬರುವುದೋ ಏನೋ?"(ಪು.೬೮). ಭಾರತ ಮತ್ತು ಪಾಕಿಸ್ತಾನ ಇಬ್ಭಾಗವಾಗಿ ಒಡೆದು ಹೋದದ್ದು ಇದೆ ತೆರನಾಗಿ; ಎರಡು ದೇಶಗಳ ನಡುವಿನ ಇಬ್ಭಾಗ ಸಾಮಾನ್ಯ ಜನರ ಬದುಕಿನ ಮೇಲೆ ಉಂಟು ಮಾಡಿದ ಪರಿಣಾಮಗಳು ಬಹಳ ಭೀಕರವಾಗಿವೆ.

ಇಂದಿಗೂ ಕೂಡ ಬೂದಿ ಮುಚ್ಚಿದ ಕೆಂಡದಂತೆ ಎರಡು ದೇಶಗಳ ನಡುವೆ ಸಂಘರ್ಷ ನಿರಂತರವಾಗಿ ನಡೆಯುತ್ತಲೇ ಇದೆ. ದೇಶವಿಭಜನೆಯು ಎರಡು ಕಡೆಯ ಜನರು ದೊಡ್ಡ ಪ್ರಮಾಣದಲ್ಲಿ ವಲಸೆಯ ಪ್ರಯಾಣ ಮಾಡುವಂತೆ ಮಾಡಿತು. ಹಾಗೆಯೇ ಮೋದನೂರ ಇನಾಂದಾರರ ಮನೆತನದ ಜಗಳ ಎರಡು ಕುಟುಂಬದ್ದಾಗಿರದೇ ಊರನ್ನೇ ಎರಡು ಭಾಗವಾಗಿ ಮಾಡುತ್ತದೆ.

ರಾವಬಹದ್ದೂರರ 'ಬಿತ್ತಿ ಬೆಳೆದವರು' ಕಾದಂಬರಿಯಲ್ಲಿ ಅಸಹಕಾರ ಚಳುವಳಿಯ ಸನ್ನಿವೇಶ ವಿದೆ. ನಾರಾಯಣರಾಯರು ಹಳ್ಳಿಹಳ್ಳಿಗೆ ಪಯಣ ಬೆಳೆಸಿ ಜನರಲ್ಲಿ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಜಾಗೃತಿ ಮೂಡಿಸುವರು. ಅಣ್ಣಾರಾಯ ಸ್ವಾತಂತ್ರ್ಯ ಚಳುವಳಿಯ ಪರವಾಗಿದ್ದರೆ, ತಮ್ಮಣ್ಣರಾಯ ಬ್ರಿಟಿಷ್ ಸರ್ಕಾರದ ಜಮೀನ್ದಾರಿಕೆಯ ಪರವಾಗಿ ಇರುವವನು. ನಾರಾಯಣರಾಯರ ಭಾಷಣದಿಂದ ಹಳ್ಳಿಯ ಜನರು ಎರಡು ಗುಂಪುಗಳನ್ನು ಕಟ್ಟಿಕೊಳ್ಳುವರು. ತಮ್ಮಣ್ಣರಾಯನ ಗುಂಪು ಅಸಹಕಾರ ಚಳುವಳಿಯ ವಿರುದ್ಧವಾಗಿದ್ದರೆ, ಅಣ್ಣಾರಾಯನ ಗುಂಪು ಚಳುವಳಿಯ ಪರವಾಗಿರುತ್ತದೆ. ಹೀಗಾಗಿ ತಮ್ಮಣ್ಣರಾಯ ನಾರಾಯಣರಾಯರು ಊರಿಗೆ ಬರುವುದನ್ನು ವಿರೋಧಿಸುತ್ತಾನೆ. "ನೀವು ನಮ್ಮ ಊರಿಗೆ ಮಾತ್ರ ಬರಬ್ಯಾಡ್ರಿ. ಒಮ್ಮೆ ಬಂದ್ರಿ, ಊರೊಳಗೆ ಇದ್ದ ಒಗ್ಗಟ್ಟು ಹಾಳ ಮಾಡಿ ಹೋದಿರಿ" ಎಂದು ಆರೋಪಿಸುತ್ತಾನೆ(ಪು.೧೨೮). ಗಾಂಧೀಜಿಯವರು ಇಡೀ ಭಾರತದ ತುಂಬ ಪಯಣ ಮಾಡಿ ರಾಷ್ಟ್ರೀಯವಾದದ ಕಿಚ್ಚನ್ನು ಹಚ್ಚಿದರು. ಅದರಂತೆ ಇಲ್ಲಿ ನಾರಾಯಣರಾಯರ ತಿರುಗಾಟಗಳಿವೆ. ನಾರಾಯಣರಾಯರ ಭಾಷಣ ಎರಡು ನೆಲೆಯಲ್ಲಿ ಪ್ರಭಾವ ಬೀರುತ್ತದೆ; ಒಂದು-ಅಲ್ಲಿನ ಜನರಲ್ಲಿ ಸ್ವಾತಂತ್ರ್ಯದ ಬಗ್ಗೆ ಜಾಗೃತಿ ಮೂಡಿಸಿದರೆ, ಮತ್ತೊಂದು-ವ್ಯಕ್ತಿ ನೆಲೆಯಿಂದ ಸಮುದಾಯದ ನೆಲೆಗೆ ದ್ವೇಷ ಸಂಘರ್ಷ ರೂಪಾಂತರವಾಗುತ್ತದೆ. ಎರಡೂ ಕುಟುಂಬಗಳಲ್ಲಿ ಬೆಂಬಲವಾಗಿ ನಿಂತಿರುವ ವ್ಯಕ್ತಿವ್ಯಕ್ತಿಗಳ ಒಳಗೇ ಸಂಘರ್ಷ ಬೆಳೆಯುತ್ತದೆ. ವೆಂಕಟಪ್ಪನ ಕುಟುಂಬದ ಮೇಲೆ ತಮ್ಮಣ್ಣರಾಯನ ಸೇಡು ಸಾಗಿದನ್ನು ಕಂಡರೆ ಅಸಹಾಯಕರ ಮೇಲೆ ಉಳ್ಳವರ ದೌರ್ಜನ್ಯ ಕಂಡುಬರುತ್ತದೆ. ವ್ಯಕ್ತಿ, ಕುಟುಂಬದ ನೆಲೆಯಿಂದ ಸಮುದಾಯದ ಕಡೆ ಸಂಘರ್ಷ ಚಲನೆಯನ್ನು ಪಡೆದುಕೊಂಡದ್ದು ಮೋದನೂರು ಹಳ್ಳಿಯ ವಿಘಟನೆಗೆ ಕಾರಣವಾಗುತ್ತದೆ. ಹೀಗೆ ರಾವಬಹದ್ದೂರರ ಎರಡು ಕಾದಂಬರಿಗಳಲ್ಲೂ ಸಂಘರ್ಷದ ಚಲನಶೀಲತೆ ನಿಧಾನವಾಗಿ ವ್ಯಕ್ತಿ, ಕುಟುಂಬದಿಂದ ಸಮುದಾಯದ ಬದುಕಿನ ವಿಘಟನೆ ಕಡೆ ಸಾಗುವುದು ಮತ್ತು ಅನೇಕರ ಪಯಣಗಳಿಗೆ ಅದು ಕಾರಣವಾಗುವುದು.

೬.೫. ಪಯಣ: ನೈತಿಕತೆ

ಸಮಾಜದಲ್ಲಿ ಬಹುಸಂಖ್ಯಾತರು ಒಪ್ಪುವ ಮೌಲ್ಯಗಳ ಒಳಗೆ ನಿಂತು ಬದುಕನ್ನು ನಡೆಸುವ ಕ್ರಮವನ್ನು ನೈತಿಕತೆ ಎನ್ನಬಹುದು. ವ್ಯಕ್ತಿಗತ ನೆಲೆಯಲ್ಲಿ ಒಪ್ಪಿತ ಮೌಲ್ಯಗಳನ್ನು ಮೀರುವುದು ತಪ್ಪಲ್ಲದಿದ್ದರೂ, ಸಾಮುದಾಯಿಕ ನೆಲೆಯಲ್ಲಿ ತಪ್ಪಾಗಿ ಕಾಣುತ್ತದೆ. ಲೈಂಗಿಕತೆ, ಹಣ, ಅಧಿಕಾರ,

ಜಾತಿ ಮುಂತಾದ ನೆಲೆಗಳಲ್ಲಿ ಸಮಾಜದ ನೈತಿಕ ಕಟ್ಟುಪಾಡುಗಳನ್ನು ಮೀರಿ ಚಟುವಟಿಕೆಯಲ್ಲಿ ತೊಡಗಿಕೊಳ್ಳುವುದು ವ್ಯಕ್ತಿಯ ಮೇಲೆ ಧನಾತ್ಮಕ ಅಥವಾ ಋಣಾತ್ಮಕ ನೆಲೆಯಲ್ಲಿ ಪ್ರಭಾವವನ್ನು ಬೀರುತ್ತದೆ. 'ಗ್ರಾಮಾಯಣ' ಮತ್ತು 'ಬಿತ್ತಿ ಬೆಳೆದವರು' ಕಾದಂಬರಿಗಳಲ್ಲಿ ವ್ಯಕ್ತಿ ನೈತಿಕತೆಯನ್ನು ಬಿಟ್ಟು ವರ್ತಿಸಿದಾಗ ವ್ಯಕ್ತಿ, ಕುಟುಂಬ, ಹಳ್ಳಿ, ಊರುಗಳಲ್ಲಿ ಬದಲಾವಣೆ ಉಂಟಾಗುತ್ತದೆ. ಇಂತಹ ಚಲನಾತ್ಮಕ ಅಂಶಗಳಿಂದಾಗುವ ಪಲ್ಲಟಗಳನ್ನು ಗುರುತಿಸುವುದಕ್ಕೆ ಈ ಉಪ ಅಧ್ಯಾಯದಲ್ಲಿ ಯತ್ನಿಸಬಹುದು.

'ಗ್ರಾಮಾಯಣ' ಕಾದಂಬರಿಯಲ್ಲಿ ನಾನಾಕಾಕಾನ ಮಗಳು ಚಿಮಣಾ ಮಠದ ಕಡೆ ಹೋಗಿ ದಾನವ್ವ, ಬಾಪೂಸಾಹೇಬ, ಪಡದಯ್ಯರ ಕುತಂತ್ರಕ್ಕೆ ಬಲಿಯಾಗುತ್ತಾಳೆ. ಪಡದಯ್ಯನ ಬಲಾತ್ಕಾರಕ್ಕೆ ಒಳಗಾಗುವ ಚಿಮಣಾ ಅಸಹಾಯಕಳಾಗಿ ಕಂಡುಬರುತ್ತಾಳೆ. ಪಾದಳ್ಳಿಯ ಮಠದ ಮಠಪತಿಯಾದ ಪಡದಯ್ಯ ಜನರಿಗೆ ನೀತಿ ಹೇಳಬೇಕಾದ ಸ್ಥಾನದಲ್ಲಿದ್ದು ಅನೈತಿಕ ಮಾರ್ಗದಲ್ಲಿ ಚಲಿಸುವುದು ಬೇಲಿಯೇ ಎದ್ದು ಹೊಲವನ್ನು ಮೇದಂತೆ ಆಗುತ್ತದೆ. ಧಾರ್ಮಿಕ ಮುಖಂಡನಾದ ಪಡದಯ್ಯ ಬಾಪೂ ಸಾಹೇಬನಿಗೆ ಚಿಮಣಾಳನ್ನು ಹೊಂದಿಕೆ ಮಾಡುವ ಕೀಳು ರಾಜಕಾರಣಕ್ಕೆ ಸಾಗುತ್ತಾನೆ. ಚಿಮಣಾ ಮಠದ ಕಡೆ ಮಾಡಿದ ಪಯಣ ಅವಳ ಬದುಕನ್ನು ಹಾಳುಮಾಡುತ್ತದೆ. ಅವಳ ಈ ಸಾಗುವಿಕೆ ಅನೇಕ ವ್ಯಕ್ತಿಗಳ ಚಲನೆಗೆ ಪರೋಕ್ಷವಾಗಿ ಕಾರಣವಾಗುತ್ತದೆ. ಚಿಮಣಾ ಬಲಾತ್ಕಾರಕ್ಕೆ ಒಳಗಾದ ಸಂದರ್ಭದಲ್ಲಿ ಪುತಳಾಬಾಯಿ, ಬಾಪೂಸಾಹೇಬನಿಗೆ "ನೀ ಆಕಿನ್ನ ಲಗ್ನ ಆಗತೀನಿ ಅಂತ ಭುಲತಾಪಿ ತುಂಬಿ. ಮಠಕ್ಕೆ ಕರೆಸಿಕೊಂಡು ಆ ತ್ವಾಳನ ಕೈಯಾಗ ಕೊಟ್ಟು, ಬಂಗಾರದಂತಾ ಹುಡುಗಿನ್ನ ಹಾಳುಗೆಡವಿಟ್ಟೆ" ಎಂದು ವಿಷಾದಿಸುತ್ತಾಳೆ(ಪು.೧೪೪) ಅಧಿಕಾರಸ್ಥರಿಂದ ಮೋಸ ಹೋಗುವ ಚಿಮಣಾ ಒಂದು ದುರಂತ ಪಾತ್ರವಾಗಿ ಚಿತ್ರಣಗೊಂಡಿರುವಳು. ಇಂದಿಗೂ ಸ್ತ್ರೀಯರು ಪುರುಷಪ್ರಧಾನ ಸಮಾಜದಿಂದ ಒಂದಲ್ಲಾ ಒಂದು ಬಗೆಯಲ್ಲಿ ಮೋಸಕ್ಕೆ ಒಳಗಾಗುತ್ತಲೇ ಇರುವರು. ಸಮಾಜದ ಒಪ್ಪಿತ ಮೌಲ್ಯಗಳನ್ನು ಧಿಕ್ಕರಿಸಿ ಸ್ವಾರ್ಥ ಜೀವನದ ಕಡೆ ಚಲಿಸಿದ ಪಡದಯ್ಯನಂತಹ ವ್ಯಕ್ತಿಗಳು ತಮ್ಮ ಧಾರ್ಮಿಕತೆಯ ಪೋಷಾಕಿನಲ್ಲಿ ತಲೆಮರೆಸಿಕೊಂಡು ಉಳಿದುಬಿಡುತ್ತಾರೆ.

ನಾನಾಕಾಕಾ ತನ್ನ ಮಗಳು ಚಿಮಣಾಳ ಜೀವನ ಹಾಳಾಗಲು ಪುತಳಾಬಾಯಿಯೇ ಕಾರಣವೆಂದು ಪಾದಳ್ಳಿಯುದ್ದಕ್ಕೂ ಓಡಾಡಿ ಅವಳ ವ್ಯಕ್ತಿತ್ವಕ್ಕೇ ಮಸಿ ಬಳಿಯುವ ಪ್ರಸಂಗವಿದೆ: "ಹೇಳತೀನಿ ಕೇಳ ಪುತಳಾ, ಚಿಮಣಾನ ಬಾಳೇವೆಲ್ಲ ಹಾಳಾತು. ಇನ್ನ ನಾ ಯಾರದು ದರಕಾರ ಮಾಡೂದುಲ್ಲ. ನನ್ನ ನಿನ್ನ ಸಂಬಂಧ ಏನೈತಲ್ಲ ಅದನ್ನ ಊರ ತುಂಬ ಹೇಳಿಕೊಂತ ತಿರಿಗ್ಯಾಡತೇನಿ" ಎಂದು ಆತ ಧಮಕಿ ಹಾಕುತ್ತಾನೆ(ಪು.೬೪). ಚಿಮಣಾಳ ಮೇಲೆ ನಡೆದ ಅತ್ಯಾಚಾರ ಮುಂದೆ ಪುತಳಾಬಾಯಿ ಮತ್ತು ನಾನಾಕಾಕಾನ ನಡುವಿನ ಹಿಂದಿನ ಸಂಬಂಧಗಳನ್ನು ಕೆದಕುತ್ತದೆ. ಅದು ಪುತಳಾಬಾಯಿ ಅನಾರೋಗ್ಯದಲ್ಲಿರುವ ತಂದೆಯನ್ನು ನೋಡಲು ಪಯಣ ಮಾಡುವ ಸಂದರ್ಭದಲ್ಲಿ

ನಾನಾನೊಂದಿಗೆ ಬೆಳೆಸಿದ ಸಂಬಂಧದ ಗತಕಾಲದ ಕತೆಯನ್ನು ಬಿಚ್ಚುತ್ತದೆ. ಈ ಕತೆ ಮುಂದೆ ಚಿಮಣಾಳ ಬದುಕು ಹಾಳಾದ ಹಿನ್ನೆಲೆಯಲ್ಲಿ ಪುತಳಾ ನಡುವಿನ ಸಂಬಂಧ ದ್ವೇಷದ ತಿರುವನ್ನು ಪಡೆದುಕೊಳ್ಳುತ್ತದೆ. ಒಂದೆಡೆ ಪಡದಯ್ಯನಿಂದ ಚಿಮಣಾಳ ಜೀವನ ಕೆಟ್ಟರೆ, ಮತ್ತೊಂದೆಡೆ ಉದ್ದೇಶಪೂರ್ವಕವಾಗಿ ಪುತಳಾ ಸಂಬಂಧವನ್ನು ನಾನಾ ಬಯಲಿಗೆಳೆಯುತ್ತಾನೆ. ಈ ಎರಡು ಚಲನೆಗಳಲ್ಲೂ ಪುರುಷರಿಂದ ಅನ್ಯಾಯಕ್ಕೆ ಒಳಗಾಗಿರುವ ಸ್ತ್ರೀಪಾತ್ರಗಳಿವೆ. ಈ ಸಂಬಂಧವೇ ಮುಂದೆ ಪುತಳಾಬಾಯಿ ಆತ್ಮಹತ್ಯೆಗೆ ಕಾರಣವಾಗುತ್ತದೆ. ಚಿಮಣಾ ಪುರುಷನಿಂದ ಬಲಾತ್ಕಾರಕ್ಕೆ ಒಳಗಾದರೆ, ಪುತಳಾಬಾಯಿ ಸಮಾಜ ನಿರಾಕರಿಸಿರುವ ಅನೈತಿಕ ಸಂಬಂಧದಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುವಳು. ಕುವೆಂಪುರವರ 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲೂ ಸುಬ್ಬಮ್ಮ ಹೆಗ್ಗಡಿತಿ ಸೇರಗಾರನೊಂದಿಗಿನ ಅನೈತಿಕ ಸಂಬಂಧದಿಂದಾಗಿ ಸಾಯುವ ಚಿತ್ರಣವನ್ನು ಇಲ್ಲಿ ನೆನೆಯಬಹುದು. ಸಾವನ್ನು ಅಂತಿಮ ಪಯಣ ಎನ್ನುವುದಾದರೆ, ಲೈಂಗಿಕ ಸಂಬಂಧಗಳ ನೈತಿಕತೆ–ಅನೈತಿಕತೆಯ ಪ್ರಶ್ನೆಗಳು, ಈ ಕಾದಂಬರಿಗಳಲ್ಲಿ ಅನೇಕರ ಅಂತಿಮ ಪ್ರಯಾಣಕ್ಕೆ ಕಾರಣವಾಗುತ್ತವೆ.

ದಾದಾನ ಮೇಲಿದ್ದ ಖಟ್ಲೆಯಲ್ಲಿ ಜಾಮೀನು ನೀಡಿ ಬಿಡಿಸಿಕೊಂಡು ಬರಲು, ಪಾರ್ವತೆವ್ವ ಗೌಡತಿ ಹಾಗೂ ಬಾಳಾಚಾರ್ಯರ ಮಾತಿಗೆ ಮನ್ನಣೆಕೊಟ್ಟು ಜೈನರ ಜಿನ್ನಪ್ಪ ಸಂಗಡ ತಾಲ್ಲೂಕಿಗೆ ಪ್ರಯಾಣ ಬೆಳೆಸುವನು. ಜಾಮೀನು ನೀಡಿ ದಾದಾನೊಂದಿಗೆ ಪಾದಳ್ಳಿಯ ಕಡೆಗೆ ಮರಳಿ ಬರುವಾಗ ಜಿನ್ನಪ್ಪನ ಜಮೀನಿನಲ್ಲಿ ಬೆಂಕಿ ಕಾಣಿಸಿಕೊಳ್ಳುತ್ತದೆ. ಜಿನ್ನಪ್ಪ ತನ್ನ ಇಷ್ಟಕ್ಕೆ ವಿರುದ್ಧವಾಗಿ ದಾದಾನಿಗೆ ಜಾಮೀನು ನೀಡಿ ಕರೆದುಕೊಂಡು ಬಂದಿದ್ದರಿಂದ ಪಡದಯ್ಯ ಈ ಬೆಂಕಿ ಹಚ್ಚಿಸುವನು. ಈ ಘಟನೆಯಿಂದ ಪಾದಳ್ಳಿಯ ಜನರ ವಿರೋಧವನ್ನು ಪಡದಯ್ಯ ಕಟ್ಟಿಕೊಳ್ಳುವನು. ಅದೇ ಕಾರಣಕ್ಕಾಗಿ ಪಾದಳ್ಳಿಯನ್ನು, ಮಠದ ಅಧಿಕಾರವನ್ನು ಬಿಟ್ಟು ಪಡದಯ್ಯ ಕಟ್ಟಿಕೊಳ್ಳಬೇಕಾಗುತ್ತದೆ. ಪಶುಗಳ ಆಹಾರವಾದ ಹುಲ್ಲನ್ನು ಸುಡುವುದು ದೊಡ್ಡ ಅನೈತಿಕ ಕೆಲಸವೆಂದು ಗ್ರಾಮೀಣ ವಿವೇಕ ತಿಳಿಯುತ್ತದೆ. ಈ ಘಟನೆ ಪಡದಯ್ಯ ಊರುಬಿಟ್ಟು ಬೇರೆಡೆಗೆ ಪ್ರಯಾಣ ಮಾಡುವುದಕ್ಕೆ ಕಾರಣವಾಗುತ್ತದೆ. ಒಂದು ಪಯಣದಲ್ಲಿ ಸಂಭವಿಸಿದ ಘಟನೆ ಮತ್ತೊಂದು ಪಯಣಕ್ಕೆ ಕಾರಣವಾಗುವುದಕ್ಕೆ ಇದು ಒಂದು ನಿದರ್ಶನವಾಗಿದೆ. ಜಿನ್ನಪ್ಪನ ಜಮೀನಿಗೆ ದಾದಾ ಗಾಡಿಯಿಂದ ಇಳಿದು ಓಡಿಹೋಗುವಾಗ "ಅಂಜಬ್ಯಾಡಾ ಕಾಕಾ, ಓಡಿಕೊಂತ ಹೋಗಿ, ಆ ಜಾಗೆ ನೋಡಿ ಊರಿಗೆ ಬರತೇನು. ಹೀಗೆ ದಾರಿ ಹಿಡಿದು ಗಾಡಿ ಸಾಗಲಿ" ಎನ್ನುವನು(ಪು.೨೦೧).

ನೈತಿಕವಾಗಿ ಸಮಾಜದಲ್ಲಿ ಬಾಳ್ವೆಗೆ, ಸಮುದಾಯದ ಬೆಳವಣಿಗೆಗೆ ಕಾರಣವಾಗಬೇಕಾದ ಪಡದಯ್ಯ ಅನೈತಿಕ ಮಾರ್ಗವನ್ನು ಅನುಸರಿಸಿ ಅಧಃಪತನಕ್ಕಿಳಿಯುತ್ತಾನೆ. ಇದಕ್ಕಾಗಿ ಆತ ತಕ್ಕ ಫಲವನ್ನು ಅನುಭವಿಸುತ್ತಾನೆ ಕೂಡ. ಪಾದಳ್ಳಿಯಲ್ಲಿ ನಡೆಯುವ ಕಳ್ಳತನ, ಬೆಳೆ ಲೂಟಿ ಪ್ರಸಂಗಗಳು ಜನರಲ್ಲಿ ವೈಮನಸ್ಸನ್ನು ಬೆಳೆಸುತ್ತವೆ; ಗೌಡರ ಜಮೀನನ್ನು ಪಡದಯ್ಯ ತನ್ನ ಸಹಚರರಿಂದ ಲೂಟಿ ಮಾಡಿಸುವುದು ಜನರಿಗೆ ಅನೈತಿಕವೆನಿಸುತ್ತದೆ. ಕಾಳನ್ನು ಲೂಟಿ ಮಾಡುವ, ವಾಡೆಯನ್ನು

ಅತಿಕ್ರಮಿಸುವ ಬಾಪೂಸಾಹೇಬ, ಲಿಂಗಪ್ಪನೊಂದಿಗೆ ಪಡದಯ್ಯ ಮಾಡುವ ಕೃತ್ಯಗಳು ಅನೈತಿಕವಾಗಿವೆ. ಇವು ಪಾದಳ್ಳಿಯ ಅಶಾಂತಿಗೂ ಅವನತಿಗೂ ಕಾರಣವಾಗುತ್ತವೆ. ಎರಡು ವರ್ಗಗಳ ನಡುವಣ ತಿಕ್ಕಾಟದಲ್ಲಿ ದಾದಾ ಮಾಡುವ ತಿರುಗಾಟಗಳು ಅವನನ್ನು ಎರಡು ನೆಲೆಗಳಲ್ಲಿ ನಿಲ್ಲಿಸುತ್ತವೆ. ಒಂದು–ಆತ ಕುಸ್ತಿಯಲ್ಲಿ ಗೆಲ್ಲುವ ಮೂಲಕ ಪಾದಳ್ಳಿಯ ಗೌರವ ರಕ್ಷಕನಾಗಿ ರೂಪುಗೊಳ್ಳುವುದು. ಎರಡು–ಜೈಲಿಗೆ ಹೋಗಿ ಅಪರಾಧಿಯಾಗುವುದು. ಅವನ ಬದುಕಿನ ಈ ಎರಡು ದಿಕ್ಕಿನ ಪಯಣಗಳು ಏರುಪೇರುಗಳಿಂದ ಕೂಡಿದ್ದು, ಊರಪಕ್ಕದ ಕೃಷ್ಣಾಹೊಳೆಯಂತೆ ಪ್ರವಾಹ ಮತ್ತು ಬತ್ತುವಿಕೆಗಳನ್ನು ನೆನಪಿಸುತ್ತದೆ.

'ಗ್ರಾಮಾಯಣ'ದ ಕೊನೆಯಲ್ಲಿ ಚಿಮಣಾಳ ಸಾವು ಕಂಡುಬರುತ್ತದೆ. ಪಡದಯ್ಯ ಗಂಡನಾಗಿ ಚಿಮಣಾಳನ್ನು ಕಾಪಾಡಬೇಕಾದವನೇ, ಲಿಂಗಪ್ಪನೊಂದಿಗೆ ಕೂಡಿಸುವ ಅನೈತಿಕ ಮಾರ್ಗ ಹಿಡಿಯುತ್ತಾನೆ. ಪಡದಯ್ಯ ಪರ ಊರಿಗೆ ಪಯಣ ಬೆಳೆಸಿದಾಗ, ಲಿಂಗಪ್ಪ ಚಿಮಣಾಳನ್ನು ಕೂಡಲು ಯತ್ನಿಸುವುದು ಅವಳ ಸಾವಿಗೆ ಕಾರಣವಾಗುತ್ತದೆ. ತಾನು ಮಾಡದ ತಪ್ಪಿಗೆ ಬಲಿಯಾಗುವ ದುರಂತ ಸ್ತ್ರೀಪಾತ್ರವಾಗಿ ಚಿಮಣಾ ಕಾಣಿಸಿಕೊಳ್ಳುವಳು. ಅವಳ ಸಾವಿನ ಚಿತ್ರಣ ಭೀಕರವಾಗಿದೆ: "ತೆರೆದ ಬಾಗಿಲಿನಿಂದಲೇ ಉರಿ, ಚಿಮಣಾಳ ಚೀರುವಿಕೆಯೊಡನೆ ಹೊರ ನುಗ್ಗಿತು. ಚಿಮಣಾಳ ಹೊಸ ಸೀರೆಯನ್ನು ದೀಪ ತನ್ನ ನಾಲಿಗೆಯನ್ನು ಬಾಚಿ ಕಬಳಿಸುತ್ತಿತ್ತು. ಲಿಂಗಪ್ಪ ಭಯದಿಂದ ತೆರೆದ ಬಾಯನ್ನು ಮುಚ್ಚಲೇ ಇಲ್ಲ. ಕಾಲು ಥರಥರ ನಡುಗುತ್ತಿದ್ದವು. ಕಾಲುಗಳಿಗೆ ನಿಲ್ಲಲೂ ತ್ರಾಣವಿರಲಿಲ್ಲ, ಓಡಿ ಹೋಗಲು ತ್ರಾಣವಿರಲಿಲ್ಲ. ಉರಿಯ ವೇಗಕ್ಕೋ ಅಥವಾ ಮರಣದ ಭೀತಿಗೋ ಚಿಮಣಾ ಹೊರಗೇ ಬಂದಳು. ಉರಿಯ ಸೆರಗು ತೀರ ತನ್ನ ಸಮೀಪಕ್ಕೆ ಬಂದದ್ದನ್ನು ನೋಡಿ ಲಿಂಗಪ್ಪ ಗೌಡ ಒಮ್ಮೆಲೇ ಹೌಹಾರಿದ. ಚಿಟ್ಟನೇ ಚೀರಿ ಹೊರಗೆ ಓಡಿದ"(ಪು.೪೦೨).

'ಬಿತ್ತಿ ಬೆಳೆದವರು' ಕಾದಂಬರಿಯಲ್ಲಿ ಒಂದು ದೊಡ್ಡ ಕುಟುಂಬ ಒಡೆದು ಇಬ್ಬರ ನಡುವೆ ದ್ವೇಷ ಮುಂದುವರೆಯುತ್ತದೆ. ತಮ್ಮಣ್ಣ ಮತ್ತು ಅಣ್ಣಾರಾಯನ ನಡುವಿನ ದ್ವೇಷ ಅನೇಕ ಅನೈತಿಕ ಘಟನೆಗಳಿಗೆ ಕಾರಣವಾಗುತ್ತದೆ. ಅಣ್ಣಾರಾಯನನ್ನು ಆರ್ಥಿಕವಾಗಿ ಕುಸಿಯುವಂತೆ ಮಾಡಲು ಹೋಗಿ ತಮ್ಮಣ್ಣರಾಯನೇ ನೈತಿಕವಾಗಿ ಕೆಳಕ್ಕೆ ಜಾರುವನು. ಸಂಗ್ಯಾನ ಮೂಲಕ ಬಣವಿಗೆ ಬೆಂಕಿ ಹಚ್ಚಿಸಿ ಅಣ್ಣರಾಯನ ಕಡೆಯವರನ್ನು ಜೈಲಿಗೆ ಕಳಿಸಲು ಹೋಗಿ ತಾನೇ ಸಿಕ್ಕಿ ಬೀಳುವನು. ಬೆಳೆದ ಬೆಳೆಯೂ ಅಣ್ಣಾರಾಯನ ಕೈಗೆ ಹೋಗಬಾರದೆಂದು ಸಂಗ್ಯಾನ ಮೂಲಕ ತಾನೇ ಸುಡಿಸುವನು. ಇದರ ಅಪಾದನೆಯನ್ನು ಅಣ್ಣಾರಾಯ ಮತ್ತು ಅವನ ಸಹಚರರ ಮೇಲೆ ಹೊರಿಸುವ ಅನೈತಿಕ ಮಾರ್ಗವನ್ನು ತುಳಿಯುವನು. ಮುಂದೆ ಸತ್ಯಾಸತ್ಯತೆ ತಿಳಿದು ಅಣ್ಣಾರಾಯನೆಡೆಗೆ ಚಲಿಸಿ ಕ್ಷಮೆ ಕೇಳುವನು. 'ಗ್ರಾಮಾಯಣ'ದಲ್ಲೂ ಪಡದಯ್ಯ ಕಲ್ಲನ ಮೂಲಕ ಜಿನ್ನಪ್ಪನ ಬಣವಿಗೆ ಬೆಂಕಿ ಹಾಕಿಸುವ ಪ್ರಸಂಗವು ಇದೇ ತೆರನಾದುದಾಗಿದೆ. ಈ ಮೇಲಿನ ಎರಡು ಸನ್ನಿವೇಶಗಳಲ್ಲಿ

ಪಯಣಗಳು ವ್ಯಕ್ತಿಗಳ ನಡುವೆ ದ್ವೇಷ ಹಾಗೂ ಬೆಂಕಿ ಹಾಕಿಸಿದವರೇ ಕೊನೆಗೆ ಶರಣಾಗುವ ಘಟನೆ ಮೂಲಕ ಸಾಗುತ್ತವೆ.

ತಮ್ಮಣ್ಣರಾಯನ ಮಗಳು ಕಮಲಾ ಗಿಡದಳ್ಳಿ ವಿಠಲಾಚಾರ್ಯರ ಮಗ ಕೃಷ್ಣಾಚಾರಿಯನ್ನು ಮದುವೆಯಾಗಿ ಮೋದನೂರಿನಿಂದ ಗಿಡದಳ್ಳಿಗೆ ಪಯಣ ಬೆಳೆಸುವಳು. ಅಣ್ಣಾರಾಯನ ಮೇಲಿನ ದ್ವೇಷದಿಂದ ಕಮಲಾಳಿಗೆ ತಮ್ಮಣ್ಣರಾಯನು ಎರಡನೇ ಮದುವೆಯನ್ನು ತಿರುಪತಿ ಯಾತ್ರೆಯ ನೆಪದಲ್ಲಿ ಮಾಡುವನು. ಕಮಲಾ ಗೋಪಾಳಾಚಾರಿಯರ ಅನೈತಿಕ ಸಂಬಂಧದಿಂದಾಗಿ ಕೃಷ್ಣಾಚಾರಿ ಆತ್ಮಹತ್ಯೆ ಮಾಡಿಕೊಳ್ಳುವನು. ಮಾಸ್ತಿಯವರ 'ಚೆನ್ನಬಸವ ನಾಯಕ' ಕಾದಂಬರಿಯಲ್ಲಿ ವೀರಮ್ಮಾಜಿಯ ಅನೈತಿಕ ಸಂಬಂಧದಿಂದ ರಾಜಕುಟುಂಬದಲ್ಲಿ ಮತ್ತು ರಾಜ್ಯದಲ್ಲಿ ಪ್ರಕ್ಷುಬ್ಧತೆ ಉಂಟಾಗುವುದನ್ನು ಇಲ್ಲಿ ನೆನೆಯಬಹುದು. ಗೋಪಾಳಾಚಾರಿಯೊಂದಿಗೆ ಸೇರಿ ಕಮಲಾ ಮಾವನ ತಿಜೋರಿಯನ್ನು ಲೂಟಿ ಮಾಡುತ್ತಾಳೆ. ಅದಕ್ಕೆ ಮುನ್ನ "ನಮಗೆ ಏನಾದರೂ ಮಾಡುವದಕ್ಕೆ ನಾಳಿನ ರಾತ್ರಿ ಒಂದೇ ಉಳಿದಿದೆ. ನಾಡದು ನಿನ್ನ ತಂದೆ ಅದನ್ನು ಟ್ರಕ್ಕಿನಲ್ಲಿ ಹೇರಿಸಿ ವಿಜಾಪುರಕ್ಕೆ ಸಾಗಿಸಿ ಕೋರ್ಟಿನಲ್ಲಿ ತೆರೆಸುವನು"(ಪು.೫೨೫) ಎಂದು ತಮ್ಮಣ್ಣರಾಯ ಕಮಲಾಗೆ ಹೇಳುವನು. ತಮ್ಮಣ್ಣರಾಯ ಅಣ್ಣಾರಾಯನ ಕಡೆಯವರಿಗೆ ಆಸ್ತಿ ದೊರೆಯಬಾರದೆಂದು ವಿಜಾಪುರದ ಕೋರ್ಟಿಗೆ ಹೋಗಲು ಪ್ರಯತ್ನಿಸುವರು. ಕಮಲ ಮುಂಚೆಯೇ ತಿಜೋರಿಯಲ್ಲಿನ ಎಲ್ಲಾ ಆಸ್ತಿಪತ್ರಗಳನ್ನೂ ಮನೆಗೆ ಕೊಂಡೊಯ್ಯುವಳು. ಇದುವೇ ಮಗ ಆನಂದನ ಸಾವಿಗೆ ಕಾರಣವಾಗುತ್ತದೆ. ಬಾಪೂ ಹೇಳಿದಂತೆ ಗೋಪಾಳಚಾರಿ ಮಗ ಆನಂದನ ಕುತ್ತಿಗೆಯ ಮೇಲೆ ಕಾಲನಿಟ್ಟು ಕೊಲ್ಲುತ್ತಾನೆ. ಕಮಲ ಕೋರ್ಟಿಗೆ ಸತ್ಯವನ್ನು ಹೇಳಿ ಗೋಪಾಳಾಚಾರಿಗೆ ಶಿಕ್ಷೆಯಾಗುವಂತೆ ಅಣ್ಣಾರಾಯನ ಬಿಡುಗಡೆಗೆಯಾಗುವಂತೆ ಮಾಡುವಳು. ಹೀಗೆ ಪಾತ್ರಗಳ ಹಾದರ ಕಳ್ಳತನ ಕೊಲೆಯಂತಹ ಅನೈತಿಕ ಚಲನೆಗಳು ವ್ಯಕ್ತಿ, ಕುಟುಂಬ, ಹಳ್ಳಿ, ಊರುಗಳ ಒಳಗೆ ಧನಾತ್ಮಕ ಅಥವಾ ಋಣಾತ್ಮಕ ಚಲನೆಗಳಿಗೆ ಕಾರಣವಾಗುತ್ತದೆ. ಈ ಚಲನೆಗಳು ಮೂರು ಊರುಗಳ ನಡುವೆ ಕುಟುಂಬದ ನಡುವಿನ ಸಂಘರ್ಷವು ಜನರ ಪಯಣಗಳಿಗೆ ಕಾರಣವಾಗುತ್ತದೆ. ಈ ಪಯಣಗಳು ಮೋದನೂರು ಗಿಡದಳ್ಳಿ ವಿಜಾಪುರಗಳ ನಡುವೆ ಆಗುತ್ತವೆ.

೬.೬. ಪಯಣ: ಆಗಮನ ಮತ್ತು ನಿರ್ಗಮನ

ಪಯಣ ಮಾಡುವಾಗಿನ ಸಂದರ್ಭದ ಆಗಮನ ಮತ್ತು ನಿರ್ಗಮನದ ಕ್ರಿಯೆಯ ಕುರಿತು ಪರಿಶೀಲಿಸುವುದು ಪ್ರಸ್ತುತ ಉಪ ಅಧ್ಯಾಯದ ಉದ್ದೇಶವಾಗಿದೆ. ಪಯಣ ಮಾಡುವುದಕ್ಕಿಂತ ಮುಂಚಿನ ಸಿದ್ಧತೆ, ಪಯಣ ಮಾಡುವ ಸಂದರ್ಭ, ಪಯಣದ ಕೊನೆಮುಟ್ಟುವಿಕೆಯ ಸನ್ನಿವೇಶಗಳು ಸಾಮಾನ್ಯವಾಗಿ ಪಯಣವನ್ನು ಕಥನಕ್ರಮದ ವಿನ್ಯಾಸವಾಗಿಸಿಕೊಂಡಿರುವ ಎಲ್ಲ ಕಾದಂಬರಿಗಳಲ್ಲೂ ಇವೆ. ಇದು ರಾವಬಹದ್ದೂರರ ಕೃತಿಯಲ್ಲೂ ಇವೆ. ಆದರೆ ವಿಶೇಷವೆಂದರೆ ವ್ಯಕ್ತಿಯು ಪಯಣ

ಭಾಗವಾಗಿ ಊರಿಗೆ ಆಗಮನ ಮಾಡುವ ಮತ್ತು ನಿರ್ಗಮನ ಮಾಡುವ ಸನ್ನಿವೇಶಗಳು ಸಹ ಇರುವುದು. ಈ ಆಗಮನ-ನಿರ್ಗಮನಗಳು ಕೇವಲ ದೈಹಿಕ ಚಲನೆಗಳಲ್ಲ. ಅವು ವ್ಯಕ್ತಿಯು ಬದುಕಿದ ಸಮಾಜ ಮತ್ತು ಕುಟುಂಬ ಬದುಕಿನ ಮೇಲೆ ಪರಿಣಾಮ ಉಂಟುಮಾಡುವ ಮಹತ್ವದ ಸಂಗತಿಗಳೂ ಹೌದು.

'ಗ್ರಾಮಾಯಣ'ದ ಆರಂಭದಲ್ಲಿ ಲಕ್ಷ್ಮೀಬಾಯಿಯು ಪಾದಳ್ಳಿಯಿಂದ ನಿರ್ಗಮನ ಮಾಡಿ ಇಂದುಪುರದ ಸಂಸ್ಥಾನಕ್ಕೆ ಪಯಣ ಬೆಳೆಸುವ ಸನ್ನಿವೇಶವಿದೆ. ಪಾದಳ್ಳಿಯ ಜನರಿಗೆ ಇಷ್ಟವಾಗುವುದಿಲ್ಲ. ಅವಳ ನಿರ್ಗಮನವು ಸಂಸ್ಥಾನದ ಕೀರ್ತಿಗೆ ಕಳಂಕವೆಂದು ಭಾವಿಸುವರು. ಲಕ್ಷ್ಮೀಬಾಯಿಯು ನವರಾತ್ರಿಯ ಉತ್ಸವಕ್ಕೆ ಇಂದುಪುರಕ್ಕೆ ಪಯಣ ಮಾಡುವ ಸಂದರ್ಭದ ವರ್ಣನೆ ಹೀಗಿದೆ. "ವರ್ಷದಲ್ಲಿ ನಾಲ್ಕಾರು ಸಾರೆ ಇಂದುಪುರಕ್ಕೆ ಹೋಗಿ ಬರುವುದು ನಡೆಯಿತು. ಈ ಸಾರೆ ನವರಾತ್ರಿಗೇ ಲಕ್ಷ್ಮೀಬಾಯಿ ಇಂದುಪುರಕ್ಕೆ ಹೋದವಳು ದೀಪಾವಳಿಯಾದರೂ ತಿರುಗಿ ಬರಲಿಲ್ಲ. ನವರಾತ್ರಿಯ ಉತ್ಸವದಲ್ಲಿ ಹತ್ತು ದಿನ ವಾಡೆಯಿಂದ ಭೋಜನ ವ್ಯವಸ್ಥೆ ನಡೆದು ಸಂಭ್ರಮದಲ್ಲಿ ಉತ್ಸವವಾಗುವುದು ಪರಂಪರೆಯಾಗಿತ್ತು. ಆದರೆ ಈ ಸಲ ವಾಡೆಯಲ್ಲಿ ಲಕ್ಷ್ಮೀಬಾಯಿಯೇ ಇಲ್ಲದ್ದರಿಂದ ಯಾರೋ ಏನೇನೋ ಮಾತಾಡಿದರು. ಜನರಿಗೆ ಲಕ್ಷ್ಮೀಬಾಯಿ ಬಗ್ಗೆ ಅಸಂತೃಪ್ತಿ ತಲೆದೋರಿತು"(ಪು.೪). ಲಕ್ಷ್ಮೀಬಾಯಿಯ ನಿರ್ಗಮನದ ಪಯಣಕ್ಕೆ ಪಾದಳ್ಳಿಯ ಜನರ ವಿರೋಧವಿದ್ದರೂ ಅದು ಜರುಗುತ್ತದೆ. ಮುಂದೆ ಲಕ್ಷ್ಮೀಬಾಯಿಯ ಈ ನಿರ್ಗಮನದ ಪಯಣವು ಪಾದಳ್ಳಿ ಸಂಸ್ಥಾನದ ಅಧಿಕಾರದಿಂದ ಅವಳನ್ನು ದೂರ ಕೂಡ ಮಾಡಿಬಿಡುತ್ತದೆ. ಜನರ ಮನಸ್ಸಿನಿಂದ ಕಾಲ ಕ್ರಮೇಣ ಲಕ್ಷ್ಮೀಬಾಯಿ ದೂರವಾಗಿ ಪುತಳಾಬಾಯಿ ಮತ್ತು ಬೇರೊಂದು ಊರಿನಿಂದ ಬಾಪೂಸಾಹೇಬನ ಆಗಮನಕ್ಕೆ ವೇದಿಕೆಯೊಂದನ್ನು ಕಲ್ಪಿಸುತ್ತದೆ. ಹೀಗೆ ಪಾತ್ರಗಳು ಒಂದು ಊರಿನಿಂದ ಹೊರಹೋಗುವ ಮತ್ತು ಒಳಬರುವ ಪಯಣದ ವಿಧಾನಗಳು, ಊರಿನ ವಿದ್ಯಮಾನಗಳ ಮೇಲೆ ಗಾಢವಾದ ಪ್ರಭಾವ ಬೀರುವುದನ್ನು ಕಾದಂಬರಿ ಚಿತ್ರಿಸುತ್ತ ಹೋಗುತ್ತದೆ.

ರಾಣೋಜಿರಾಯನ ಹಿರಿಯ ಹೆಂಡತಿ ಲಕ್ಷ್ಮೀಬಾಯಿ ಇಂದೂರಿನಲ್ಲಿ ದೀಪಾವಳಿ ಹಬ್ಬವನ್ನು ಮುಗಿಸಿಕೊಂಡು ಪಾದಳ್ಳಿಗೆ ಆಗಮಿಸಿದಾಗ ಹಳ್ಳಿಯ ವಿರೋಧವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಇಂದುಪುರ ಮತ್ತು ಪಾದಳ್ಳಿಯ ನಡುವಿನ ಪಯಣವು ಲಕ್ಷ್ಮೀಬಾಯಿಯ ಅಸ್ತಿತ್ವಕ್ಕೆ ಧಕ್ಕೆಯನ್ನು ತರುತ್ತದೆ. ಪಾದಳ್ಳಿಗೆ ಆಕೆ ಬಂದ ಸಂದರ್ಭದಲ್ಲಿ ಹುಲಿಬ್ಯಾಟಿ ಹಳಬರ ದಳವಾಯಿ ಆಕೆಯನ್ನು ವ್ಯಂಗ್ಯ ಮಾಡುತ್ತಾನೆ. ಅವನ ವ್ಯಂಗ್ಯದ ಹಿಂದೆ ಜನರ ಭಾವನೆಗೆ ಘಾಸಿ ಮಾಡಿ ಆಕೆ ನಿರ್ಗಮಿಸಿದ್ದ ಸಮುದಾಯದ ಸಿಟ್ಟುಕೂಡ ಇದೆ: "ಯವ್ವಾ, ಈಗ ವಾಡೇದ ನೆಪ್ಪಾತೇನು ನಿಮಗ? ಹಬ್ಬದಾಗ ವಾಡೆ ಹಾಳ ಗೆಡವಿ ಹೋಗಿ ಈಗ ಬಂದರ ಯಾರು ಕೇಳಬೇಕು? ದೇವರು ನಮ್ಮ ಮ್ಯಾಗ ಇದ್ದಾ ಅಂತ ಚಿಕ್ಕ ಅವ್ವಾ ಅವರು ನಾವು ಕರ್‍ಯಾಣಾ ಬಂದರು. ದೊಡ್ಡ ಹಬ್ಬದಾಗ ವಾಡೆದಾಗ ದೀಪಕ್ಕ ದಿಕ್ಕಿಲ್ಲಧಾಂಗ ಮಾಡಿದವರಿಗೆ ಇಲ್ಲೇನ್ ದಗದ? ಎಲ್ಲಿಗೆ ಹೋಗಿದ್ದೀರೋ ಅಲ್ಲೇ

ಹೋಗೂದಿನ್ನ"(ಪು.೫). ಲಕ್ಷ್ಮೀಬಾಯಿ ಊರಿಗೆ ಆಗಮಿಸುವುದಕ್ಕೆ ದಳವಾಯಿಯ ವಿರೋಧವು ಆಕೆಗೆ ನೋವುಂಟು ಮಾಡುತ್ತದೆ. ಇಲ್ಲಿ ವಾಡೇದ ಮೇಲಿರುವ ದಳವಾಯಿಯ ನಿಷ್ಠೆಯಿಲ್ಲದೆ. ಆ ನಿಷ್ಠೆಯೇ ಲಕ್ಷೀಬಾಯಿಯ ಮೇಲೆ ಕಟುವಾಗಲು ಕಾರಣವಾಗುತ್ತದೆ. ಊರ ಬಗ್ಗೆ ಕಾಳಜಿ ಇಡಬೇಕಾದ ಯಜಮಾನರೇ ತಮ್ಮ ಕರ್ತವ್ಯ ಮರೆಯುವುದು ಸಲ್ಲ ಎಂಬ ದನಿ ಇಲ್ಲಿ ಅಡಗಿದೆ. ಇದರಿಂದ ಲಕ್ಷ್ಮೀಬಾಯಿಯ ವರ್ಚಸ್ಸು ಕಳೆದುಹೋಗಿ ಆಕೆ ವಾಡೆಯ ಯಜಮಾನಿ ಪಟ್ಟವನ್ನು ಕಳೆದುಕೊಳ್ಳುವುದಕ್ಕೆ ನಾಂದಿ ಹಾಡುತ್ತದೆ. ಪಟ್ಟವನ್ನು ಕಳೆದುಕೊಂಡ ಬಳಿಕ ಲಕ್ಷ್ಮೀಬಾಯಿ ಪಾದಳ್ಳಿಯಿಂದ ಮಕ್ಕಳೊಂದಿಗೆ ಬಡೋದೆಗೆ ನಿರ್ಗಮಿಸುತ್ತಾಳೆ. ಆದರೆ ಪಾದಳ್ಳಿಯಲ್ಲಿ ಎಲ್ಲರೂ ತನಗೆ ಪ್ರತಿಕೂಲರಾಗಿರುವುದನ್ನು ಕಂಡು ಅವಳ ಮನಸ್ಸು ಮರುಗುತ್ತದೆ. ಅಂದು ಗೋಪಾಲ ಕೃಷ್ಣ ಗುಡಿ, ವಾಡೇಯ ದೇವರ ಮನೆಯ ಕಡೆಗೆ ಅವಳು ಮಾಡುವ ನಡಿಗೆಗಳು ಆಕೆಗೆ ಪಾದಳ್ಳಿಯ ಮೇಲಿರುವ ನಂಟನ್ನು ತಿಳಿಸುತ್ತವೆ. ಬಡೋದೆಗೆ ಪಯಣ ಮಾಡುವ ಮುನ್ನ ದೇವರ ದರ್ಶನ ಪಡೆದು, ಭಾವುಕವಾಗಿ ಆಕೆ ಪಾದಳ್ಳಿಯಲ್ಲಿ ಓಡಾಡುತ್ತಾಳೆ. ಆಕೆಯ ನಿರ್ಗಮನಕ್ಕೆ ಮುನ್ನ ನಡೆಯುವ ಈ ಚಟುವಟಿಕೆಗಳು ಊರಿಗೆ ವಿದಾಯ ಹೇಳುವ ಹೊತ್ತಿನ ನೋವು, ಸಂಕಟಗಳಾಗಿ ಪ್ರಕಟವಾಗುತ್ತವೆ. ದಾದಾ ಕೂಡ ಇದೇ ರೀತಿ ಮುಂದೆ ಪಾದಳ್ಳಿಗೆ ವಿಷಾದದಿಂದ ವಿದಾಯ ಹೇಳುವ ಸನ್ನಿವೇಶ ಬರುತ್ತದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕೊನೆಯಲ್ಲಿ ಗುತ್ತಿ-ತಿಮ್ಮಿಯೊಂದಿಗೆ ಸಿಂಬಾವಿಯಿಂದ ಮೇಗರವಳ್ಳಿ ಮೂಲಕ ತಮ್ಮ ಸ್ವಂತ ಸ್ಥಳವನ್ನು ಬಿಟ್ಟು ಕಾನೂರಿಗೆ ಹೋಗುವಾಗ ಇದೇ ರೀತಿಯ ಸಂಕಟಕ್ಕೆ ಒಳಪಡುವುದನ್ನು ನೆನೆಯಬಹುದು. 'ಕಾನೂರು ಹೆಗ್ಗಡಿತಿ'ಯಲ್ಲಿ ಚಂದ್ರೇಗೌಡರಲ್ಲಿ ಸಾಲಗಾರರಾಗಿದ್ದ ಅಣ್ಣಯ್ಯಗೌಡರು ತಮ್ಮ ಪ್ರೀತಿಯ ಮನೆಯನ್ನು ಬಿಟ್ಟು ಇದೇ ರೀತಿ ನಿರಾಶ್ರಿತರಾಗಿ ವಲಸೆ ಹೋಗುವುದನ್ನು ಕಾಣಬಹುದು. ಕಾದಂಬರಿಗಳು ವ್ಯಕ್ತಿ ಮನೆಯಿಂದ ಅಥವಾ ಊರಿನಿಂದ ಹೊರಟು ಮತ್ತೆ ಮನೆಗೆ ಅಥವಾ ಊರಿಗೆ ಮರಳುವ ಪ್ರಸಂಗಗಳಿಗಿಂತ, ಊರು ಅಥವಾ ಮನೆಯನ್ನು ಖಾಯಮ್ಮಾಗಿ ಬಿಡಬೇಕಾದ ವಿಷಾದಕರ ಸನ್ನಿವೇಶಗಳ ಬಗ್ಗೆ ಹೆಚ್ಚು ಭಾವನಾತ್ಮಕವಾಗಿ ಚಿತ್ರಣ ಮಾಡುತ್ತವೆ. ಯಾಕೆಂದರೆ ಪಯಣದಲ್ಲಿ ಇವು ಅತ್ಯಂತ ಸಂಕಟದ ಚಲನೆಗಳಾಗಿವೆ.

'ಗ್ರಾಮಾಯಣ' ಕಾದಂಬರಿಯ ಪ್ರಮುಖ ಪಾತ್ರಗಳಲ್ಲಿ ಒಂದಾದ ಪಡದಯ್ಯನು ಪಾದಳ್ಳಿಯ ಮೂಲ ನಿವಾಸಿಯಲ್ಲ. ಅಜರಾಣಿಯಿಂದ ಪಾದಳ್ಳಿಗೆ ಪಯಣ ಬೆಳೆಸಿದವನು. ಪಾದಳ್ಳಿಯ ಹಿರೇಮಠಕ್ಕೆ ಗುರುಪಾದ ಸ್ವಾಮಿಗಳ ನಂತರ ಬಂದ ಮಠಪತಿ. ಆದರೆ ಪಾದಳ್ಳಿಯ ಜನಜೀವನದ ಮೇಲೆ ಗಾಢಪ್ರಭಾವ ಬೀರುವ ವ್ಯಕ್ತಿಯಾಗುತ್ತಾನೆ. ಆತ ಪಾದಳ್ಳಿಗೆ ಆಗಮಿಸುವ ಮತ್ತು ನಿರ್ಗಮಿಸುವ ಸನ್ನಿವೇಶಗಳು ಎರಡು ಸಲ ಕಾದಂಬರಿಯಲ್ಲಿ ಬರುತ್ತವೆ. ಅವನ ಆಗಮನ ಮತ್ತು ನಿರ್ಗಮನಗಳು ಅಪಮಾನ ಮತ್ತು ಗೌರವದ ಜತೆ ತಳುಕು ಹಾಕಿಕೊಂಡಿವೆ. ಜಿನ್ನಪ್ಪನ ಬಣವಿಗೆ ಬೆಂಕಿ ಹಾಕಿಸಿದ ಪರಿಣಾಮವಾಗಿ ಆತ ಪಾದಳ್ಳಿಯಿಂದ ಬಹಿಷ್ಕಾರಕ್ಕೆ ಒಳಗಾಗುತ್ತಾನೆ. ಆತ ಪಾದಳ್ಳಿಯ ಅಶಾಂತಿಗೆ

ಕಾರಣಕರ್ತನಾಗಿ ಪಾದಳ್ಳಿಯಿಂದ ಅನಿವಾರ್ಯವಾಗಿ ನಿರ್ಗಮನ ಮಾಡಬೇಕಾಗುತ್ತದೆ. ಆಗ ನಿರ್ಗಮನದ ಪಯಣ ಕೈಗೊಂಡಾಗ "ಕೆಳಗೆ ನೆಲ ಸುಡುತ್ತಿತ್ತು. ಅಂಥ ಬಿಸಿಲಿನಲ್ಲಿಯೇ ನಡೆದ ಪಡದಪ್ಪನವರನ್ನು ಬೀಳ್ಕೊಡಲು ಕೂಡ ಒಬ್ಬರೂ ಬಂದಿರಲಿಲ್ಲ. ಅದು ನೆನಪಾಗಿಯೋ ಏನೋ ಪಡದಯ್ಯನವರು ಪಾದಳ್ಳಿಯ ಸೀಮೆಯಲ್ಲಿ ಒಂದು ಕ್ಷಣ ನಿಲ್ಲದಂತೆ ಪ್ರತಿಜ್ಞೆ ಮಾಡಿರುವರೆಂಬಂತೆ ಬೀಸುಗಾಲು ಹಾಕುತ್ತ ಸಾಗಿದ್ದರು" ಎಂದು ಕಾದಂಬರಿ ನಿರೂಪಿಸುತ್ತದೆ(ಪು.೨೧೦). ಪಾದಳ್ಳಿಯಿಂದ ಪಡದಯ್ಯನ ನಿರ್ಗಮನದಲ್ಲಿ ಊರಿನ ವಿರೋಧ ಒಂದೆಡೆ ಕಂಡರೆ, ಮತ್ತೊಂದೆಡೆ ಪ್ರಕೃತಿಯಲ್ಲಿನ ಬಿಸಿಲು ಮತ್ತು ಶಾಖದ ಮೂಲಕ ಪ್ರತಿಭಟಿಸುವಂತೆ ಕಾಣುತ್ತದೆ. ಬಾಪೂ ಸಾಹೇಬ, ಲಿಂಗಪ್ಪ ಮುಂತಾದವರ ಸಹಾಯ ದೊರೆಯದೆ ಕೊನೆಯಲ್ಲಿ ಒಬ್ಬಂಟಿಗನಾಗಿ ಪಾದಳ್ಳಿಯಿಂದ ಆತ ನಿರ್ಗಮಿಸುತ್ತಾನೆ. ಆಗಿನ ಸಂದರ್ಭದಲ್ಲಿ ನಿಸರ್ಗದ ವಾತಾವರಣ, ಊರಿನ ಮನೋಭಾವ ಹಾಗೂ ಪಡದಯ್ಯನ ಮನಸ್ಥಿತಿಗಳನ್ನು ಕಾದಂಬರಿ ಏಕೀಭವಿಸಿ ಚಿತ್ರಿಸುತ್ತದೆ.

ಇಂದುಪುರದ ಮಹಾರಾಜರು ಪಾದಳ್ಳಿಗೆ ಆಗಮಿಸುವ ಸನ್ನಿವೇಶವು 'ಗ್ರಾಮಾಯಣ'ದಲ್ಲಿ ಬಹಳ ಮಹತ್ವದ್ದಾಗಿದೆ. ಆಗ ಇಡೀ ಊರು ಸಂಭ್ರಮಿಸುತ್ತದೆ. ಮಹಾರಾಜರ ಈ ಆಗಮನವು ಊರ ಜನರಲ್ಲಿ ಹೊಸ ನಿರೀಕ್ಷೆಗಳನ್ನು ಹುಟ್ಟಿಸುತ್ತದೆ. ತಮ್ಮ ಪೂರ್ವಜರ ವಾಡೆಯನ್ನು ನೋಡಬೇಕೆಂಬ ತುಡಿತ ಮಹಾರಾಜರ ಆಗಮನದಲ್ಲಿ ಕಂಡರೆ, ಪಾದಳ್ಳಿಯ ಜನರಲ್ಲಿ ಮಹಾರಾಜರ ಆಗಮನದಿಂದ ಪಾದಳ್ಳಿಯ ಪರಿಸ್ಥಿತಿ ಸುಧಾರಿಸುವುದೆಂಬ ಆಶಾಭಾವ ಕಂಡುಬರುತ್ತದೆ. ಮಹಾರಾಜರು ನಾವೆಯ ಮೂಲಕ ನದಿ ದಾಟುವುದು ಊರಿಗೆ ಹೊಸದೊಂದು ಅನುಭೂತಿಯನ್ನೇ ತಂದಕೊಡುತ್ತದೆ. ಮಹಾರಾಜರೊಂದಿಗೆ ಆಂಗ್ಲ ಅಧಿಕಾರಿ ಅಥವಾ ಪ್ರಾಂತ ಸಾಹೇಬರು, ಮಾಮಲೇದಾರರು ಸಹ ಆಗಮಿಸುತ್ತಾರೆ. ರಾಜರ ಆಗಮನದ ಚಿತ್ರವು ಹೀಗಿದೆ: "ನಾವೆಯೊಳಗಿಂದಲೇ ಹೊತ್ತು ತಂದ ಕುದುರೆಯ ಗಾಡಿ ಮತ್ತೆ ಮಹಾರಾಜರ ಸಮ್ಮುಖಕ್ಕೆ ಬಂತು. ಆದರೆ ಮಹಾರಾಜರು ಅದರಲ್ಲಿ ಹೊರಡಲು ಒಪ್ಪಲಿಲ್ಲ. ಪಾದಾಚಾರಿಗಳಾಗಿಯೇ ತಮ್ಮ ಪೂರ್ವಜರ ವಾಡೆಯನ್ನು ಸೇರುವ ಆಸೆ ಅವರದಾಗಿತ್ತು"(ಪು.೨೭೦). ಅವರು ಪಾದಳ್ಳಿಗೆ ಕುದುರೆಯನ್ನು ಬಿಟ್ಟು ಕಾಲ್ನಡಿಗೆಯಲ್ಲಿ ಪ್ರವೇಶ ಮಾಡುವ ವಿಧಾನವು, ಅವರು ಊರಿನ ಜತೆ ಹೊಂದಿರುವ ಆದರಭಾವವನ್ನು ಸೂಚಿಸುತ್ತದೆ. ಆದರೆ ಅವರ ಜತೆ ಬಂದ ಅಧಿಕಾರ ವರ್ಗದ ಆಗಮನ ಪಾದಳ್ಳಿಯ ಜನರ ಬದುಕಿನಲ್ಲಿ ಭಾವನಾತ್ಮಕ ಚೈತನ್ಯವನ್ನುಂಟು ಮಾಡಿತೇ ಹೊರತು, ಅವರ ಜೀವನದ ವಾಸ್ತವಿಕ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ. ಮಹಾರಾಜರಿಗೆ ಪಾದಳ್ಳಿಯ ಜನರ ನಿರೀಕ್ಷೆಯ ಈಡೇರಿಕೆಗಿಂತ ತಮ್ಮ ಪೂರ್ವಜರ ನಾಡನ್ನು ನೋಡಬೇಕೆಂಬ ಕುತೂಹಲವಷ್ಟೇ ಕಂಡುಬರುತ್ತದೆ. ನಾವೆಯಿಂದ ಕೆಳಗಿಳಿದು ಜನರ ನೋವಿಗೆ ಸ್ಪಂದಿಸದೆ ಅವರು ವಾಡೆ ಕಡೆಗೆ ಚಲಿಸುವರು. ಮಹಾರಾಜರ ಆಗಮನವು ಕಷ್ಟದಲ್ಲಿದ್ದ ಪಾದಳ್ಳಿಯ ಕಷ್ಟಗಳನ್ನು ಹೆಚ್ಚಿಸುತ್ತದೆಯೇ ಹೊರತು ಕಡಿಮೆ ಮಾಡುವುದಿಲ್ಲ.

ಮಹಾರಾಜರು ಪಾದಳ್ಳಿಯಿಂದ ನಿರ್ಗಮಿಸುವಾಗಿನ ನಾವೆಯ ಪಯಣವೂ ಸ್ವಾರಸ್ಯಕರವಾಗಿದೆ. ಅವರ ಆಗಮನದ ಸಂದರ್ಭದಲ್ಲಿನ ಸಂಭ್ರಮ ನಿರ್ಗಮನದ ವೇಳೆಯಲ್ಲಿ ಕಾಣಿಸುವುದಿಲ್ಲ. ದಾದಾನೊಂದಿಗೆ ರಾಜರು ನಾವೆಯಲ್ಲಿ ಪ್ರಯಾಣಿಸುವ ಸನ್ನಿವೇಶದಲ್ಲಿ ಬರುವ ವರ್ಣನೆಯು ಕಾದಂಬರಿಯ ಕಥನದ ದೃಷ್ಟಿಯಿಂದ ಬಹಳ ಮಹತ್ವದ್ದಾಗಿದೆ. "ಯಾವ ಅಡೆತಡೆ ಇಲ್ಲದೆ ಬೀಸುವ ಗಾಳಿ ನಾವೆಯನ್ನು ಪ್ರವಾಹದ ಗುಂಟ ದೂರ ಸಾಗಿಸಬಹುದಿತ್ತು. ನದಿಯ ಪಾತ್ರದಲ್ಲಿ ಪ್ರವಾಹದ ಸೆಳೆವು ನಾವೆಯನ್ನು ಪೂರ್ವದಿಕ್ಕಿಗೆ ವೇಗದಿಂದ ಎಳೆದೊಯ್ಯುವಾಗ ಗಾಳಿಯ ಪರಿಣಾಮದಿಂದ ಅದರ ವೇಗ ಇನ್ನೂ ಹೆಚ್ಚಬಾರದೆಂಬ ಮುಂಜಾಗ್ರತೆಯಿಂದ ಮಹಾರಾಜರ ಪರಿವಾರದವರಲ್ಲಿ ಯಾರೂ ಎದ್ದು ನಿಲ್ಲುವ ಸಾಹಸ ಮಾಡಲಿಲ್ಲ"(ಪು.೩೧೧). ಇಲ್ಲಿ ನದಿಯ ಮೇಲಿನ ದೋಣಿಯ ಪಯಣ ದಾದಾನನ್ನು ಅವನ ತಂದೆ ಲಕ್ಷ್ಮಣನಿಂದ ದೂರವಾಗಿಸುತ್ತದೆ. ರಾಜರು ಪೂರ್ವಜರ ನಾಡನ್ನು ನೋಡಿದ ಸಂತೃಪ್ತಿಯೊಂದಿಗೆ ಹೊರಟರೆ, ಪಾದಳ್ಳಿಯ ಜನರು ಮಾತ್ರ ಯಾವುದೇ ಬದಲಾವಣೆಯ ನಿರೀಕ್ಷೆಯಿಲ್ಲದೆ ಯಥಾಪ್ರಕಾರದ ಜೀವನಕ್ಕೆ ಮರಳುವರು. ಪಯಣದ ನೆಲೆಯಲ್ಲಿ ಪಾತ್ರಗಳು ಪಾದಳ್ಳಿಯ ಒಳಗೆ ಹೊರಗೆ ಉಂಟುಮಾಡುವ ತಲ್ಲಣಗಳನ್ನು ಆರ್. ತಾರಿಣಿ ಶುಭದಾಯಿನಿಯವರು ಚರ್ಚಿಸುತ್ತ "ಇಡೀ ಕಾದಂಬರಿಯಲ್ಲಿ ಹೊರಗಿನವರು ಒಳಗಿನವರಾಗುವ, ಒಳಗಿನವರು ಹೊರಗಿನವರಾಗುವ ಚಲನೆಗಳಿವೆ. ಬಾಪೂ ಸಾಹೇಬ, ಪಡದಪ್ಪ, ಮಹಾರಾಜರು, ಲಿಂಗಪ್ಪ ಮುಂತಾದ ಹೊರಗಿನವರನ್ನು ಪಾದಳ್ಳಿ ತನ್ನೊಳಗೆ ಕರೆದುಕೊಳ್ಳುತ್ತದೆ. ಇಲ್ಲಿನವರಾದ ದಾದಾ, ಚಿಮಣಾ, ಸ್ವಾಮೀಜಿ ಮುಂತಾದವರು ಹೊರ ಹೋಗಬೇಕಾಗುತ್ತದೆ. ಆದರೆ ಹೋಗಿಬರುವ ಈ ಯಾವ ಕ್ರಿಯೆಗಳೂ ಏಕಮುಖಿಯಾದ ಚಲನೆಗಳಲ್ಲ. ಅವು ಜಂಗಮರೂಪದಲ್ಲಿವೆ" ಎಂದು ವ್ಯಾಖ್ಯಾನಿಸುತ್ತಾರೆ.[೫] ಹೀಗೆ ಪಾದಳ್ಳಿಗೆ ಅನೇಕರು ಬರುವ ಮತ್ತು ಹೋಗುವ ಪ್ರಕ್ರಿಯೆಯು, ಊರಿನ ಬದುಕಿನ ಮೇಲೆ ಬೀರಿದ ಪರಿಣಾಮಗಳು ಒಳಿತು ಕೆಡುಕಿನ ಎರಡೂ ನೆಲೆಗಳಲ್ಲಿ ಅರಳಿಕೊಳ್ಳುತ್ತವೆ.

'ಬಿತ್ತಿ ಬೆಳೆದವರು' ಕೃತಿಯಲ್ಲಿ ಊರಿಗೆ ವ್ಯಕ್ತಿಗಳ ಆಗಮನ ಮತ್ತು ನಿರ್ಗಮನದ ಪಯಣದ ಚಿತ್ರಣ ಅಷ್ಟು ಮುಖ್ಯವಾಗಿ ಕಂಡುಬರುವುದಿಲ್ಲ. ಅಣ್ಣಾರಾಯ ತನ್ನ ಭೂಮಿಯ ಹಕ್ಕಿಗಾಗಿ ತಮ್ಮಣ್ಣರಾಯನತ್ತ ಹೋಗುವ, ಸ್ವಾತಂತ್ರ್ಯದ ಚಳುವಳಿಯ ಸಂದರ್ಭದಲ್ಲಿ ಜೈಲು ಸೇರುವ ಪ್ರಸಂಗಗಳು ಇಲ್ಲಿವೆ. ಗೋಪಾಳಾಚಾರಿ, ಗಿಡದಳ್ಳಿ ವಿಠಲಾಚಾರಿ ಮತ್ತು ಕೃಷ್ಣಾಚಾರಿಯ ಓಡಾಟಗಳು ಇಲ್ಲಿ ಕಂಡುಬಂದರೂ ಮತ್ತೆ ಮತ್ತೆ ಕಾಡುವುದಿಲ್ಲ. ಅಣ್ಣಾರಾಯ, ತಮ್ಮಣ್ಣರಾಯ ಮತ್ತು ವಿಠಲಾಚಾರಿ ಮಾಡುವ ಕುಟುಂಬದೊಳಗಿನ ತಿರುಗಾಟಗಳು ಹಲವು ಏರಿಳಿತಗಳಿಗೆ ಕಾರಣವಾಗುತ್ತದೆ. ಒಟ್ಟಾರೆಯಾಗಿ ರಾವಬಹದ್ದೂರರ 'ಗ್ರಾಮಾಯಣ' ಮತ್ತು 'ಬಿತ್ತಿ ಬೆಳೆದವರು' ಕೃತಿಗಳಲ್ಲಿ ಪಯಣದ ಆಗಮನ ಮತ್ತು ನಿರ್ಗಮನದ ಮುಂಚಿನ ಮತ್ತು ನಂತರದ ಚಲನೆಗಳು ದೈಹಿಕ ಮತ್ತು ಮಾನಸಿಕವಾಗಿ ಹಲವು ನೆಲೆಗಳಲ್ಲಿ ವ್ಯಕ್ತಗೊಂಡಿರುವುದನ್ನು ಗಮನಿಸಬಹುದಾಗಿದೆ.

೬.೭. ಪಯಣ: ಕಥನತಂತ್ರ

ವಿಮರ್ಶಕರಾದ ಕುರ್ತಕೋಟಿಯವರು ಗ್ರಾಮಾಯಣದ ಮುನ್ನುಡಿಯಲ್ಲಿ ಈ ಮಾತುಗಳನ್ನು ಹೇಳುತ್ತಾರೆ: "ರಾವಬಹದ್ದೂರರ ಈ ಕೃತಿ ವಾಸ್ತವ ಮಾರ್ಗದಲ್ಲಿ ಒಂದು ಹೆಜ್ಜೆಯನ್ನಾದರೂ ಮುಂದಿಟ್ಟಿದೆಯೆನ್ನುವುದು ಸಂತೋಷದ ಸಂಗತಿ. ಅವರು ಆಯ್ದುಕೊಂಡ ಕಥಾವಸ್ತು ಬಹಳ ತೊಡಕಿನದು. ಹದಿನೆಂಟು ಜಾತಿಗಳ, ಅನೇಕ ಸ್ವಭಾವಗಳ, ಭಿನ್ನ ಭಿನ್ನ ಸಂಸ್ಕಾರಗಳ ನೂರಾರು ಭಾವ ಲಹರಿಗಳ ಕಲಬೆರಕೆ ಇವೆಲ್ಲವುಗಳನ್ನು ಮೈಗೂಡಿಸಿಕೊಂಡ ಕತೆ ಅನೇಕ ಗತಿಗಳಲ್ಲಿ ಮುಂದುವರಿಯುತ್ತದೆ. ಇದೆಲ್ಲದರ ಜೊತೆಗೆ ಪಾದಲ್ಳಿಯ ಜೀವನದ ದೈವ ರೇಖೆಯೆಂಬಂತೆ ಆಂತರಿಕ ಜೀವನ ಪ್ರವಾಹದ ಗತಿಯನ್ನೂ ಲೇಖಕರು ತೋರಿಸಿದ್ದಾರೆ."[೬]

ಈ ಮಾತು ಕಾದಂಬರಿಯ ವಸ್ತುವಿಗೆ ಮಾತ್ರ ಸಂಬಂಧ ಪಟ್ಟಿಲ್ಲ. ಅದರ ಕಥನ ತಂತ್ರಕ್ಕೂ ಸಂಬಂಧಪಟ್ಟಿದೆ. ರಾವಬಹದ್ದೂರರ 'ಗ್ರಾಮಾಯಣ' ಕಾದಂಬರಿ ಹೆಸರೇ ಸೂಚಿಸುವಂತೆ ಪಾದಳ್ಳಿ ಎಂಬ ಒಂದು ಊರಿನ ಕತೆ; 'ಬಿತ್ತಿ ಬೆಳೆದವರು' ಇನಾಂದಾರರ ಮನೆತನಕ್ಕೆ ಸೇರಿದ ಮೋದನೂರಿನ ಕತೆ. 'ಗ್ರಾಮಾಯಣ'ವು ಒಂದು ಹಳ್ಳಿ ಅವನತಿಯೆಡೆಗೆ ಸಾಗಿದ ವಸ್ತುವನ್ನು ಒಳಗೊಂಡಿದೆ. 'ಬಿತ್ತಿ ಬೆಳೆದವರು' ಕಾದಂಬರಿಯಲ್ಲಿ ವಿಭಕ್ತ ಕುಟುಂಬದಿಂದ ಅಣ್ಣ-ತಮ್ಮರ ನಡುವಿನ ದಾಯಾದಿತನ ಹೇಗೆ ಮನೆತನವನ್ನು ನಾಶಮಾಡಿತು ಎಂಬುದರ ಚಿತ್ರಣವಿದೆ. ಎರಡೂ ಕಾದಂಬರಿಗಳು ತಮ್ಮ ಕಟ್ಟುವಿಕೆಯಲ್ಲಿ ಪಯಣವನ್ನು ವಿನ್ಯಾಸವಾಗಿ ಬಳಸಿಕೊಂಡಿವೆ. 'ಗ್ರಾಮಾಯಣ'ದಲ್ಲಿ ಪಾದಳ್ಳಿಯನ್ನು ಇತಿಹಾಸದ ಕೊಂಡಿಯ ಜೊತೆ ಬೆಸೆಯುವ ಮೂಲಕ, ಪಾದಳ್ಳಿಯೂ ಸಾಗಿ ಬಂದಿರುವ ಪಲ್ಲಟಗಳನ್ನು ಹೇಳುವ ಕಥನತಂತ್ರವಿದೆ. "ವ್ಯಕ್ತಿಗಳ ಹೆಸರು ಕೂಡ ಅನೇಕ ಸಂದರ್ಭಗಳಲ್ಲಿ ರೂಪಾಂತರ ಹೊಂದುವುದನ್ನು ನೋಡುತ್ತಿರುವ ನಮಗೆ ಈ ಗ್ರಾಮದ ಹೆಸರು ಸಾವಿರ ವರ್ಷಗಳಿಂದ ಬದಲಾಗಿಲ್ಲವೆಂದು ಹೇಗೆ ಹೇಳಬೇಕು? ಹೆಸರು ಪರಶುರಾಮ ಕ್ಷೇತ್ರದಿಂದ ರಾಮಕ್ಷೇತ್ರ, ರಾಮನಹಳ್ಳಿ, ರಾಮಪಾದಳ್ಳಿಯಾಗಿ ಕೊನೆಗೆ ಪಾದಳ್ಳಿಯಾಯಿತು. ಬಹುಶಃ ನಾಡಿನ ಸಂಸ್ಕೃತಿಯ ಅವನತಿಯ ಇತಿಹಾಸ ಈ ಹೆಸರಿನ ಇತಿಹಾಸದಲ್ಲಿಯೂ ಪ್ರತಿಫಲಿಸಿರಬಹುದು" ಎಂದು ನಿರೂಪಣೆ ಶುರುವಾಗುತ್ತದೆ.[(ಪು.೨)] ಇಲ್ಲಿ ಕಾದಂಬರಿಯ ಆರಂಭದಲ್ಲೇ ಪಾದಳ್ಳಿಯ ರಾಮನ ಸ್ಥಳ ಪುರಾಣವನ್ನು ಪ್ರಸ್ತಾಪಿಸುವುದು ಆಕಸ್ಮಿಕವಿರಲಾರದು. ಪಾದಳ್ಳಿಯ ಸ್ಥಾಪನೆಯ ಈ ಕಥನವು ಬ್ರಾಹ್ಮಣ ಮತ್ತು ರಾಕ್ಷಸರ ನಡುವಿನ ಸಂಘರ್ಷವನ್ನು ಸೂಚಿಸುತ್ತದೆ. ಆಳುವ ಕೇಂದ್ರಗಳು ಮತ್ತು ಅವುಗಳ ಆಕ್ರಮಣಶೀಲ ಅನ್ಯೆತಿಕ ರಾಜಕಾರಣದ ಮೇಲೆ ನಿರ್ಮಿಸಿ ಸ್ಥಾಪಿಸಿದ ಸಮಾಜ, ಮುಂದೆ ಕೇಡಿನ ಪರಿಣಾಮಗಳನ್ನು ಎದುರಿಸಬೇಕಾದ ಅನಿವಾರ್ಯತೆಯ ಚಲನೆಯೊಂದನ್ನು ಕಾದಂಬರಿಯ ಕಥನತಂತ್ರದಲ್ಲಿ ಕಾಣಬಹುದು. ಕಾಲವು ಉರುಳಿದಂತೆ ಪಾದಳ್ಳಿಯಾಗಿ ಮಾರ್ಪಟ್ಟು ಸಾಗಿದ ಇತಿಹಾಸವನ್ನು ಹೇಳುವ ವಸ್ತುವಿನ ಚಲನೆಯಲ್ಲಿ ಬದಲಾವಣೆಯೆಂಬುದು ಸೃಷ್ಟಿಯ ನಿಯಮವೆಂಬುದನ್ನು ತೋರಿಸುತ್ತದೆ. ಒಂದು ಹಳ್ಳಿಹಳ್ಳಿಯಾಗಿ ಉಳಿಯದೆ ಕಾಲದ ಸೆಳೆತಕ್ಕೆ

ಸಿಕ್ಕು ಬೆಳವಣಿಗೆಯನ್ನು ಪಡೆಯುತ್ತಾ, ಇನ್ನೊಂದು ನೆಲೆಯನ್ನು ಸ್ಪರ್ಶಿಸುವ ಸೂಕ್ಷ್ಮ ಚಲನಶೀಲ ಪಲ್ಲಟಗಳನ್ನು ಕಥನವು ಅಭಿವ್ಯಕ್ತಿಸುತ್ತದೆ.

'ಗ್ರಾಮಾಯಣ'ದಲ್ಲಿನ ಕೃಷ್ಣಾನದಿಯ ತೀರ ಪಾದಳ್ಳಿಯ ಜನರ ಸ್ವಭಾವದ ಪ್ರತಿಬಿಂಬ ವೆಂಬಂತಿತ್ತು. ಮನೆ ಮನೆಯ ರಹಸ್ಯಗಳೆಲ್ಲಾ ಈ ನದಿಯ ದಡದಲ್ಲಿ ಬಯಲಿಗೆ ಬರುತ್ತಿದ್ದವು. ನದಿ ಎಲ್ಲಿಯೋ ಇದ್ದ ಮೆಕ್ಕಲು ಮಣ್ಣನ್ನು ತಂದು ದಡಕ್ಕೆ ಸಾಗಿಸಿದಂತೆ, ಪಾದಳ್ಳಿಯ ರಹಸ್ಯಗಳೆಲ್ಲ ನದಿಯ ಬಯಲಲ್ಲಿ ಹೊರಬರುತ್ತಿದ್ದವು. ಎಳ್ಳ-ಅಮವಾಸ್ಯೆಯ ದಿನವೂ ಬೆಳಗಿನಲ್ಲಿ ಎಂದಿನಂತೆ ಸ್ತ್ರೀ ಸಮುದಾಯ ನದಿಯ ಕಡೆ ನೀರು ತರಲು ಪಯಣ ಬೆಳೆಸಿದ್ದರು ಎಂಬ ಚಿತ್ರಣವು ಮೊದಲಿಗೆ ಬರುತ್ತದೆ. ಒಬ್ಬರಿಗೊಬ್ಬರು ಗ್ರಾಮ್ಯಭಾಷೆಯಲ್ಲಿ ಮನೆ ಮನೆಯ ಸುದ್ದಿ ಮಾತನಾಡುವ ಪ್ರಸಂಗ ಹೀಗಿದೆ: "ಅಲ್ಲ ತಾರೀ, ನಿನ್ನ ಗಂಡ ಹೊಸ ಸೀರಿ ತಂದಾನಂತ, ನಮಗ ತೋರಿಸಿದ್ದರ ಕಸಗೊಂಡು ಹೋಗುತ್ತಿದ್ದವೇ?"(ಪು.೧೭). ನಿಂಗವ್ವ ಮತ್ತು ಸಾಗವ್ವಳ ನಡುವೆ ನಡೆಯುವ ಸಂಭಾಷಣೆಯಲ್ಲಿ ವಿನೋದವಿದೆ. ಇದು ಜನ ಸಾಮಾನ್ಯರ ಜೀವನಪಥ ಚಲಿಸುತ್ತಿರುವ ಕ್ರಮವನ್ನು ಸಹ ಪ್ರಾದೇಶಿಕ ಭಾಷೆಯಲ್ಲಿ ಅಭಿವ್ಯಕ್ತಿಯಾಗಿದೆ. ವ್ಯಕ್ತಿ ವ್ಯಕ್ತಿಗಳ ನಡುವಿನ ಸಂಬಂಧ, ಸರಳ ಭಾಷೆ, ಹಾಸ್ಯ ಮನೋಭಾವ ಈ ಜೀವನಪಥದ ಸಹಜ ಲಯಗಳಾಗಿವೆ. ದೇವನೂರ ಮಹಾದೇವ ಅವರ 'ಕುಸುಮಬಾಲೆ' ಕಾದಂಬರಿಯಲ್ಲಿ ಜೋತೆಮ್ಮರ ಮೂಲಕ ಊರಿನ ವಿಷಯಗಳನ್ನು ಒಂದೆಡೆ ಚಲಿಸಿ ಚರ್ಚಿಸುವ ಸನ್ನಿವೇಶ ಕೂಡ ಇದೇ ನೆಲೆಯದು. ಸ್ತ್ರೀಯರ ಸಹಜ ಮಾತುಕತೆಯ ಮೂಲಕ ಹಳ್ಳಿಯ ಬದುಕಿನ ರಹಸ್ಯವನ್ನು ಹೊರಹಾಕುವ ಚಲನಶೀಲ ಕಥನತಂತ್ರ ಇಲ್ಲಿದೆ.

'ಗ್ರಾಮಾಯಣ'ದಲ್ಲಿ ದಾದಾ ಮತ್ತು ಲಾಮನ ನಡುವಿನ ಕುಸ್ತಿಗಾಗಿ ದಾದಾ ಜತ್ತಕ್ಕೆ ಪಯಣ ಬೆಳೆಸುವನು. ರಾಜಾಸಾಹೇಬರ ಖಾಸಾ ನೇತೃತ್ವದಲ್ಲಿ ಹೆಸರಾಂತ ಪೈಲವಾನರ ಕುಸ್ತಿಗಳನ್ನು ಅಲ್ಲಿ ಏರ್ಪಡಿಸಲಾಗುತ್ತದೆ. ಪಂಜಾಬಿನ ಪೈಲವಾನ ಲಾಮಾನೊಡನೆ ನಡೆದ ಕುಸ್ತಿಯಲ್ಲಿ ದಾದಾ ಗೆದ್ದಾಗ ನಡೆದ ಮಾತಿನ ಮುಖಾಮುಖಿಯಲ್ಲಿನ ಮರಾಠಿ ಭಾಷೆಯ ಪ್ರಯೋಗ ಹೀಗಿದೆ: "ಲಾಮಾ ನಾಹೀ ಪಡಲಾ ತ್ಯಾಚೀ ಪಾಠ ಜಮೀನಿಲಾ ಲಾಗಲಿನಾಹಿ. ಪುನಃ ಕುಸ್ತೀ ವ್ಹಾಯಿಲಾಚ ಪಾಹಿಜೆ"(ಪು.೩೭). ಲಾಮಾ-ದಾದಾನ ನಡುವೆ ಕುಸ್ತಿ ಮತ್ತೊಮ್ಮೆ ನಡೆಯಬೇಕೆಂಬ ವಾದಕ್ಕಿಂತ ಮರಾಠಿ ಭಾಷೆಯ ಪ್ರಯೋಗ ವಸ್ತುವಿನ ಚಲನೆಗೆ ಹೆಚ್ಚಿನ ಮಹತ್ವ ನೀಡಿದೆ. ಉತ್ತರ ಕರ್ನಾಟಕದಿಂದ ಸೊಲ್ಲಾಪುರ, ಫಂಡರಪುರಗಳಿಗೆ ದಾದಾ ಪಯಣ ಬೆಳೆಸಿ ಕುಸ್ತಿಯಾಡುವ ಸಂದರ್ಭದಲ್ಲಿ ಆ ಭಾಗದ ಜನರಾಡುವ ಭಾಷೆಯನ್ನು ಕಾದಂಬರಿ ಬಳಸಿಕೊಂಡಿದೆ. ಇದು ದಾದಾ ಮಾಡಿರುವ ಪಯಣದ ವಿವರಗಳಿಗೆ ವಾಸ್ತವಿಕತೆಯ ಬಲವನ್ನೂ ನೀಡುವ ಕಥನಕ್ರಮದ ತಂತ್ರವಾಗಿದೆ. ವ್ಯಕ್ತಿ ಊರಿಂದ ಊರಿಗೆ ಚಲಿಸಿದಂತೆಲ್ಲ ತನ್ನ ಪ್ರಾದೇಶಿಕ ಭಾಷೆಯ ಜೊತೆಗೆ ವ್ಯಕ್ತಿ ಹೋದ ಊರಿನ ಭಾಷೆಯನ್ನು ಸಂಭಾಷಣೆಯಲ್ಲಿ ಸೇರಿಸುವ ಮೂಲಕ ಕೃತಿ ವಾಸ್ತವವಾದಿ ಶೈಲಿಯನ್ನು ಕಾಪಾಡಿಕೊಂಡಿದೆ.

ಗೋಪಾಳಾಚಾರ್ಯರ ಪತ್ನಿಯ ಸಾವಿನ ಯಾತ್ರೆಯಲ್ಲಿ ಸುಮಂಗಲಿಯಾಗಿ ಅಲಂಕರಿಸುವ ಚಿತ್ರಣ ಹೀಗಿದೆ: "ಹಣೆ ತುಂಬ ಕುಂಕುಮ, ಹೂಮಾಲೆ, ಕಾಡಿಗೆ, ಕಾಲುಂಗರ ಪಿಲ್ಲೆಗಳಿಂದ ಅಲಂಕೃತಳಾಗಿ ಸಕಲ ಸೌಭಾಗ್ಯಗಳಿಂದೊಡಗೂಡಿ, ಕಂಕಣ ಕೈಯನ್ನು ಮೇಲೆ ಮಾಡಿಕೊಂಡು ಆಚಾರ್ಯರ ಪತ್ನಿ ಕೊನೆಯ ಯಾತ್ರೆಗೆ ಸಿದ್ಧಳಾಗಿದ್ದಳು"(ಪು.೩೮೯). ಶವಯಾತ್ರೆಯ ಈ ವರ್ಣನೆಗಳು ಸಾವಿನ ಪಯಣ ಹೊರಟಿರುವ ಜೀವವನ್ನು ಪ್ರೀತಿಯಿಂದ ಮಣ್ಣಿಗೆ ಕಳುಹಿಸಿಕೊಡುವ ಸಂಸ್ಕೃತಿಯ ಭಾಗವಾಗಿದೆ. ಇಲ್ಲಿ ಕಥನವು ಸಂಸ್ಕೃತ, ಕನ್ನಡ ಪದಗಳ ಮಿಶ್ರಣವನ್ನು ಕಥನಕ್ಕೆ ಬಳಸಿಕೊಂಡಿರುವುದು ಅರ್ಥಪೂರ್ಣವಾಗಿದೆ. ಹೀಗೆ ರಾವಬಹದ್ದೂರರ ಕಾದಂಬರಿಗಳು ದೈಹಿಕ ಪಯಣ, ಮಾನಸಿಕ ಪಯಣ, ಆಧ್ಯಾತ್ಮಿಕ ಪಯಣಗಳ ಹಾಗೆಯೇ ಸಾವಿನಂತಹ ಪಯಣಗಳನ್ನು ಬಳಸಿಕೊಳ್ಳುತ್ತ ಸಮಾಜದೊಳಗೆ ಕುಟುಂಬಗಳೊಳಗೆ ಸಂಭವಿಸಿದ ಬದಲಾವಣೆಗಳನ್ನು ಕಟ್ಟಿಕೊಡುತ್ತವೆ. ಮುಖ್ಯವೆಂದರೆ ಈ ಪಯಣಗಳು ಈ ಕಾದಂಬರಿಯ ಕಥೆಯ ಚೌಕಟ್ಟಿಗೆ ನಿಲುಗಡೆಯಾಗು ವಂತಹವಲ್ಲ. ಇವು ನಿರಂತರವಾಗಿ ಸಾಗುವಂತಹವು-ಕೃಷ್ಣಾಹೊಳೆಯಂತೆ. ಇದನ್ನ ಸ್ವತಃ ಲೇಖಕರ ಈ ಮಾತು ಧ್ವನಿಪೂರ್ಣವಾಗಿ ಸೂಚಿಸುತ್ತದೆ. "ಪಾದಳ್ಳಿಯ ಜನ ಸಮೂಹವೇ ಈ ಕಾದಂಬರಿಯ ನಾಯಕನೆಂದು ನಾನು ತಿಳಿದಿದ್ದೇನೆ. ಕೊನೆಯಲ್ಲಿ ಬರುವ ಪ್ರಳಯದ ಚಿತ್ರವೇ ಕೊನೆಯಲ್ಲ; ಅದರಲ್ಲಿಯೂ ಬರಲಿರುವ ಮನ್ವಂತರದ ಬೀಜಗಳು ಅಡಗಿವೆಯೆಂಬುದನ್ನು ವಾಚಕರು ಗಮನಿಸಬೇಕು."[೭]

ಮನ್ವಂತರ ಎನ್ನುವುದು ಬದಲಾವಣೆಯ ಪ್ರಕ್ರಿಯೆಯನ್ನು ಸೂಚಿಸುವ ಕಾಲದ ಕಲ್ಪನೆಯಾಗಿದೆ. ಅಲ್ಲಿಯ ತನಕ ಈ ಬದುಕು ಬದಲಾಗುತ್ತಲೇ ಚಲಿಸುತ್ತಲೇ ಇರುತ್ತದೆ ಎಂಬುದನ್ನು ಕಾದಂಬರಿ ಒಂದು ದರ್ಶನವಾಗಿ ಕಾಣಿಸುತ್ತದೆ.

ಕೊನೆಟಿಪ್ಪಣಿಗಳು

೧. ಆಮೂರ ಜಿ.ಎಸ್., 'ಕನ್ನಡ ಕಥನ ಸಾಹಿತ್ಯ: ಕಾದಂಬರಿ', ಪು.೨೧೦

೨. ಆಮೂರ ಜಿ.ಎಸ್., 'ಕೃತಿ ಪರೀಕ್ಷೆ', ಪು.೨೨೭

೩. ಆಮೂರ ಜಿ.ಎಸ್., 'ಕನ್ನಡ ಕಥನ ಸಾಹಿತ್ಯ:ಕಾದಂಬರಿ', ಪು.೨೧೦

೪. ತಾರಿಣಿ ಶುಭದಾಯಿನಿ ಆರ್., 'ಗಳಿಗೆ ಬಟ್ಟಲು', ಪು.೮೮

೫. ತಾರಿಣಿ ಶುಭದಾಯಿನಿ ಆರ್., 'ಗಳಿಗೆ ಬಟ್ಟಲು', ಪು.೯೨

೬. ಕುರ್ತಕೋಟಿ ಕೆ.ಡಿ., 'ಗ್ರಾಮಾಯಣ'(ಮುನ್ನುಡಿ), ಪು೧೬

೭. ರಾವಬಹದ್ದೂರ, 'ಗ್ರಾಮಾಯಣ'(ಮುನ್ನುಡಿ), ಪು.೧೯

ಅಧ್ಯಾಯ ಏಳು

ಪಯಣದ ಪರಿಕಲ್ಪನೆ: ಕಾದಂಬರಿಕಾರರ ವಿಶಿಷ್ಟತೆಗಳ ತೌಲನಿಕ ಚರ್ಚೆ

ಅಧ್ಯಾಯ ಏಳು

ಪಯಣದ ಪರಿಕಲ್ಪನೆ: ಕಾದಂಬರಿಕಾರರ ವಿಶಿಷ್ಟತೆಗಳ ತೌಲನಿಕ ಚರ್ಚೆ

೭.೧. ಪ್ರವೇಶ

ನಿರ್ದಿಷ್ಟ ಪರಿಕಲ್ಪನೆ ಅಥವಾ ಆಶಯವನ್ನು ಕಾದಂಬರಿಗಳು ಹೇಗೆ ಅಭಿವ್ಯಕ್ತಿ ಮಾಡಿವೆ ಎಂಬುದನ್ನು ಆಯಾ ಕಾದಂಬರಿಯನ್ನು ಇಟ್ಟುಕೊಂಡು ಚರ್ಚಿಸುವುದು ಒಂದು ವಿಧಾನವಾದರೆ, ತೌಲನಿಕವಾಗಿ ಚರ್ಚಿಸುವುದು ಇನ್ನೊಂದು ವಿಧಾನವಾಗಿದೆ. ಈ ತೌಲನಿಕ ಚರ್ಚೆಯಿಂದ ಪ್ರತಿ ಕಾದಂಬರಿಯ ಅಥವಾ ಕಾದಂಬರಿಕಾರರ ವಿಶಿಷ್ಟತೆ ಮತ್ತು ತಾತ್ವಿಕ ಧೋರಣೆ ಏನೆಂಬುದು ತಿಳಿಯುತ್ತದೆ. ಕಾದಂಬರಿಕಾರರು ಬೇರೆ ಬೇರೆ ಕಾಲಘಟ್ಟಕ್ಕೆ, ಪಂಥಗಳಿಗೆ ಸಂಬಂಧಿಸಿದ್ದರೆ, ಈ ಕಾಲಘಟ್ಟ ಮತ್ತು ಪಂಥಗಳು ಹೇಗೆ ಅವರ ಮೇಲೆ ಪ್ರಭಾವ ಬೀರಿವೆ ಎನ್ನುವುದು ತಿಳಿಯಲು ಸಹ ಇದರಿಂದ ಸಾಧ್ಯವಾಗುತ್ತದೆ. ಈ ಮೂಲಕ ಇಡೀ ಕಾದಂಬರಿ ಪರಂಪರೆಯೊಂದು ನಿರ್ದಿಷ್ಟ ಆಶಯವನ್ನು ಹೇಗೆ ನಿರ್ವಹಿಸಿದೆ ಎಂಬ ಚಿತ್ರವೂ ಸಿಗುತ್ತದೆ. ಕನ್ನಡದಲ್ಲಿ 'ಇಂದಿರಾಬಾಯಿ'ಯಿಂದ ಇತ್ತೀಚಿನ 'ಯಾನ'ದವರೆಗೂ ಕಾದಂಬರಿಯ ಪರಂಪರೆ ಹರಡಿದೆ. ಒಂದು ಶತಮಾನಕ್ಕೂ ಮಿಕ್ಕಿರುವ ಈ ಪರಂಪರೆಯನ್ನು ಆಶಯವನ್ನು ಇಟ್ಟುಕೊಂಡು ಪ್ರವೇಶಿದರೆ ಅಪರೂಪದ ನೋಟಗಳು ಸಿಗಬಹುದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ನವೋದಯ ಕಾಲಘಟ್ಟದ ಮಾಸ್ತಿ, ಕುವೆಂಪು, ಶಿವರಾಮ ಕಾರಂತ ಮತ್ತು ರಾವಬಹದ್ದೂರರ ಕಾದಂಬರಿಗಳಲ್ಲಿ ಪಯಣದ ಕಲ್ಪನೆ ಹೇಗೆ ಬಂದಿದೆ ಎಂಬುದನ್ನು ವಿಶ್ಲೇಷಣೆ ಮಾಡುವುದಕ್ಕೆ ಪ್ರಯತ್ನ ಮಾಡಲಾಗಿದೆ. ಈ ವಿಶ್ಲೇಷಣೆಯನ್ನು ಗಂಡು-ಹೆಣ್ಣು, ಅನುಭವ ಮತ್ತು ವ್ಯಕ್ತಿತ್ವ ನಿರ್ಮಾಣ, ಜೀವನ ಮೌಲ್ಯಗಳ ಶೋಧ, ಸಂಕೇತಗಳ ಬಳಕೆ, ಗ್ರಾಮ ಮತ್ತು ನಗರಗಳ ನಡುವಿನ ಅಂತರ್ ಚಲನೆ ಎಂಬ ನಾಲ್ಕು ಆಯಾಮಗಳಲ್ಲಿ ಚರ್ಚಿಸಲು ಯತ್ನಿಸಲಾಗಿದೆ.

೭.೨. ಪಯಣ: ಗಂಡು-ಹೆಣ್ಣಿನ ಸಂಬಂಧ

ಮಾಸ್ತಿ, ಕುವೆಂಪು, ಕಾರಂತ ಹಾಗೂ ರಾವಬಹದ್ದೂರ ಅವರ ಕಾದಂಬರಿಗಳಲ್ಲಿ ಚಿತ್ರಣಗೊಂಡಿರುವ ಪಯಣ ಮತ್ತು ಗಂಡು-ಹೆಣ್ಣಿನ ಸಂಬಂಧಗಳು ಎರಡು ಮೂರು ನೆಲೆಗಳಲ್ಲಿವೆ. ಮೊದಲನೆಯದಾಗಿ ಗಂಡು-ಹೆಣ್ಣುಗಳು ತಮ್ಮ ಜೀವನ ಸಂಗಾತಿಯ ಹುಡುಕಾಟದ ಭಾಗವಾಗಿ ಪಯಣ ಮಾಡುವುದು. ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಗುತ್ತಿ ಹೆಣ್ಣಿಗಾಗಿ ಪಯಣ ಮಾಡುವುದಿದೆ. ಕನ್ನಡ ಕಥನ ಸಾಹಿತ್ಯದಲ್ಲಿ ಗಂಡು ಹೆಣ್ಣನ್ನು ಪಡೆದುಕೊಳ್ಳುವುದಕ್ಕಾಗಿ ಮಾಡುವ ಪಯಣಗಳು ಸಾಮಾನ್ಯವಾಗಿವೆ. ಆದರೆ ಅನೇಕ ಪ್ರೇಮ ಪ್ರಕರಣಗಳಲ್ಲಿ ಗಂಡನ್ನು ಪಡೆದುಕೊಳ್ಳುವ ಸಲುವಾಗಿ ಹೆಣ್ಣು ಕೂಡ ಪಯಣ ಮಾಡುವುದುಂಟು. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಮದುಮಕ್ಕಳಾಗಿ ತಿಮ್ಮಿ ಹಾಗೂ ಚಿನ್ನಮ್ಮ ಅವರು ತಮ್ಮ ಜೀವನ ಸಂಗಾತಿಗಳನ್ನು ಪಡೆದುಕೊಳ್ಳಲು ಪಯಣ ಮಾಡುವರು. ಪುರುಷರು ಮಾಡುವ ಪಯಣಕ್ಕಿಂತ ಮಹಿಳೆ ಮಾಡುವ ಪಯಣವು ಎಷ್ಟೊಂದು ಜಟಿಲವಾಗಿರುತ್ತದೆ ಎಂಬುದನ್ನು ಈ ಪ್ರಕರಣಗಳು ಸೂಚಿಸುತ್ತವೆ. ಪಯಣವು ಗಂಡು-ಹೆಣ್ಣುಗಳ ವೈಯಕ್ತಿಕ ಸಂಬಂಧಕ್ಕೆ ಮಾತ್ರವಲ್ಲ, ಅವರನ್ನು ಒಳಗೊಂಡಿರುವ ಸಾಮಾಜಿಕ ವ್ಯವಸ್ಥೆಗಳ ಅಲ್ಲೋಲ ಕಲ್ಲೋಲಕ್ಕೂ ಕಾರಣವಾಗುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಗಂಡು ಪ್ರಣಯ ಪ್ರೀತಿಗಾಗಿ ಮಾಡುವ ಪಯಣಗಳು ಸಾಹಸವೆನಿಸಿದರೆ, ಮಹಿಳೆ ಮಾಡುವ ಪಯಣಗಳು ಸಾಮಾಜಿಕ ಕಟ್ಟುಪಾಡುಗಳ ಉಲ್ಲಂಘನೆ ಅನಿಸುತ್ತವೆ. ಆದ್ದರಿಂದಲೇ ಇಲ್ಲಿ ಮಹಿಳೆಯರು ಮಾಡುವ ಪಯಣಗಳು ಭೌತಿಕವಾಗಿ ಮಾತ್ರವಲ್ಲ, ಸಾಮಾಜಿಕವಾಗಿಯೂ ಸೀಮೋಲ್ಲಂಘನೆಗಳಾಗುತ್ತವೆ.

ಇಲ್ಲಿ ಗಂಡು-ಹೆಣ್ಣು ಮಾಡುವ ಪರಸ್ಪರ ಪಯಣವನ್ನು ಕುವೆಂಪು ಕಾದಂಬರಿಗಳು ಸಾಮಾಜಿಕ ಕಟ್ಟುಪಾಡುಗಳ ಉಲ್ಲಂಘನೆಗೆ ಮಾತ್ರವಲ್ಲದೆ, ಮಾನವರು ಸಹಜವಾದ ಕಾಮ ಮತ್ತು ಸಂತಾನೋತ್ಪತ್ತಿಗಾಗಿ ಮಾಡುವ ತುಡಿತ ಎಂದು ಸೂಚಿಸುತ್ತವೆ. ಗಂಡು ಹೆಣ್ಣುಗಳು ತಮ್ಮ ಮಿಲನಕ್ಕೆ ಅನೇಕ ಸಾಮಾಜಿಕ ಅಡೆತಡೆಗಳನ್ನು ಹಾದು ಹೋಗಬೇಕಿದೆ. ಗುತ್ತಿಯು ಸಾಮಾಜಿಕವಾಗಿ ಮಾತ್ರವಲ್ಲ, ಎರಡು ಮೇಲ್ವರ್ಗಗಳ ಸಂಘರ್ಷಗಳ ಒಳಗೆಯೂ ತಿಮ್ಮಿಯನ್ನು ಪಡೆಯಲು ಪಯಣ ಮಾಡಬೇಕಾಗಿದೆ. ಕೌಟುಂಬಿಕ ಕಲಹಗಳ ನಡುವೆ ನಿರ್ಮಾಣವಾಗಿರುವ ಗೋಡೆಗಳನ್ನು ಅವನು ದಾಟ ಬೇಕಾಗಿದೆ. ಹೀಗಾಗಿ ಇಲ್ಲಿ ಪಯಣವು ಅನೇಕ ಆಯಾಮಗಳನ್ನು ಒಳಗೊಂಡ ಸಂಗತಿಯಾಗುವುದು.

ಪ್ರೇಮಿಗಳಾದ ಗಂಡು-ಹೆಣ್ಣು ತಮ್ಮ ಪ್ರಣಯ ಸಾಹಸದಲ್ಲಿ ಮಾಡುವ ಪಯಣ ಹಾಗೂ ಅನುಭವಿಸುವ ಕಷ್ಟಗಳಿಗೆ ಮಾನವ ಸಮಾಜ ಕಾರಣವಾಗಿರುವಂತೆ, ಪ್ರಕೃತಿಯ ಗಾಳಿ, ಮಳೆ, ಬಿಸಿಲು, ಕತ್ತಲು, ಕಾಡು ಪ್ರಾಣಿಗಳೂ ಸವಾಲನ್ನು ಒಡ್ಡುತ್ತವೆ. ಇದನ್ನು ಕುವೆಂಪು ಕಾದಂಬರಿಗಳು

ಗಂಡು ಹೆಣ್ಣಿನ ಪಯಣದಲ್ಲಿ ಸಂಬಂಧಕ್ಕಾಗಿ ನಡೆಯುವ ಸಾಮಾಜಿಕ ಬಿಕ್ಕಟ್ಟುಗಳಿಗೂ, ನಿಸರ್ಗದಲ್ಲಿನ ಬಿಕ್ಕಟ್ಟುಗಳಿಗೂ ಇರುವ ವ್ಯತ್ಯಾಸಗಳನ್ನು ಕಾಣಿಸುವ ಮೂಲಕ ಚಿತ್ರಿಸುತ್ತವೆ. ಗುತ್ತಿಯಂತಹವರು ನಿಸರ್ಗದ ತೊಡಕುಗಳನ್ನು ಎದುರಿಸಬಹುದು ಆದರೆ ಸಾಮಾಜಿಕ ತೊಡಕುಗಳನ್ನು ಎದುರಿಸಲು ಬಹಳ ಕಷ್ಟ ಎಂಬುದನ್ನು ಈ ಕಾದಂಬರಿಗಳು ಸೂಚಿಸುತ್ತವೆ. ಪ್ರವೃತ್ತಿ ಸಹಜವಾಗಿ ಸೇರಬೇಕಾದ ಗಂಡು-ಹೆಣ್ಣುಗಳ ಸಂಬಂಧಕ್ಕೆ ನಿಸರ್ಗವು ತನ್ನ ಸಹಜ ಲಯದಲ್ಲಿ ಅಡೆತಡೆಯನ್ನು ಒಡ್ಡಿದರೆ, ಸಮಾಜ ಒಡ್ಡುವ ಅಡೆತಡೆಗಳು ಉದ್ದೇಶಪೂರ್ವಕವಾಗಿವೆ ಮತ್ತು ಅವಕ್ಕೆ ವರ್ಗ ಹಾಗೂ ಜಾತಿಗಳ ಆಯಾಮವಿದೆ. ನಿಸರ್ಗ ಒಡ್ಡುವ ಅಡೆತಡೆಗಳಿಗಿಂತ ಸಮಾಜ ಒಡ್ಡುವ ಅಡೆತಡೆಗಳು ಅತ್ಯಂತ ಕ್ರೂರವಾಗಿವೆ. ಮನುಷ್ಯ ಸಮಾಜವು ವರ್ಗದ, ಅಂತಸ್ತಿನ ಹಾಗೂ ಸ್ವಾರ್ಥದ ಕಾರಣಕ್ಕಾಗಿ ಗಂಡು ಹೆಣ್ಣಿನ ಮೇಲೆ ಒಡ್ಡಿರುವ ತೊಡಕುಗಳು ಪಯಣದ ಸಂದರ್ಭದಲ್ಲಿ ಇನ್ನೂ ಹೆಚ್ಚು ತೊಡಕಾಗಿವೆ ಎಂದು ಅವು ಸೂಚಿಸುತ್ತವೆ.

ಶಿವರಾಮ ಕಾರಂತರು ಗಂಡು-ಹೆಣ್ಣಿನ ಸಂಬಂಧಗಳನ್ನು ಚಿತ್ರಿಸುವಾಗ ಸಾಮಾಜಿಕ, ಆರ್ಥಿಕ ನೆಲೆಗಳಿಗಿಂತ ಮನುಷ್ಯನ ಸಣ್ಣತನ, ಅದರ ಕ್ಷುದ್ರತೆ, ಔದಾರ್ಯತೆಗಳ ಒತ್ತಾಸೆಯಲ್ಲಿ ಅವರ ಪಯಣವು ಹೇಗೆ ಬದಲಾಗುತ್ತಾ ಸಾಗುತ್ತದೆ ಎಂಬುದು ಮುಖ್ಯವಾಗುತ್ತದೆ. 'ಬೆಟ್ಟದ ಜೀವ' ಕಾದಂಬರಿಯ ನಿರೂಪಕ ಪಾತ್ರವಾದ ಶಿವರಾಮಯ್ಯನ ಪಯಣದಲ್ಲಿ ಯಶವಂತರಾಯನ ಮಗಳು ಮತ್ತು ಅಳಿಯ ನಂಜಯ್ಯನ ದಾಂಪತ್ಯ ಸಂಬಂಧವು ಒಂದು ಆದರ್ಶ ಮೌಲ್ಯವಾಗಿ ಕಂಡರೆ, ಯಶವಂತರಾಯರ ಹೆಂಡತಿ ಮತ್ತು ಆಕೆಯ ಪ್ರಿಯಕರನಾದ ವಕೀಲನ ನಡುವಿನ ಈ ಸಂಬಂಧ ಕ್ಷುದ್ರವೆಂಬಂತೆ ಕಾದಂಬರಿ ಕಾಣಿಸುತ್ತದೆ. ಗಂಡು ಹೆಣ್ಣಿನ ಸಂಬಂಧವನ್ನು ಸಮಾಜ ಮತ್ತು ನಿಸರ್ಗಗಳು ಒಡ್ಡುವ ತೊಡಕುಗಳ ಚೌಕಟ್ಟಿನಲ್ಲಿ ಕುವೆಂಪು ಪಯಣವನ್ನು ಇಟ್ಟರೆ, ಕಾರಂತರು ತಮ್ಮ ಕಾದಂಬರಿಗಳಲ್ಲಿ ಮನುಷ್ಯರ ಆಳದಲ್ಲಿರುವ ದ್ವೇಷಾಸೂಯೆಗಳ ಚೌಕಟ್ಟಿನಲ್ಲಿಟ್ಟು ನೋಡುವರು. 'ಬೆಟ್ಟದಜೀವ'ದ ನಿರೂಪಕನಿಗೆ ತನ್ನ ಪಯಣದಲ್ಲಿ ಗೋಪಾಲಯ್ಯ-ಶಂಕರಿ, ನಾರಾಯಣ-ಲಕ್ಷ್ಮಿ ಮಂತಾದ ಅನೇಕರ ದಾಂಪತ್ಯಗಳ ದರ್ಶನ ಆಗುತ್ತದೆ. ಪ್ರತಿ ದಾಂಪತ್ಯದಲ್ಲಿರುವ ಗಂಡು-ಹೆಣ್ಣಿನ ಸಂಬಂಧದ ಸ್ವರೂಪವನ್ನು ಕಾದಂಬರಿ ಚರ್ಚಿಸುತ್ತಾ ಹೋಗುತ್ತದೆ.

ಕಾರಂತರ ಕಾದಂಬರಿಗಳಲ್ಲಿ ನೈತಿಕತೆ, ಪ್ರಾಮಾಣಿಕತೆ, ಔದಾರ್ಯ ಮುಂತಾದ ಜೀವನ ಮೌಲ್ಯಗಳ ನೆಲೆಗಳಲ್ಲಿ ಪರಸ್ಪರ ಹಂಚಿಕೊಂಡು ಬದುಕುವ ಪಾತ್ರಗಳಾಗಿ ಮಂಜಯ್ಯ-ಜಲಜಾ, ಯಶವಂತರಾಯ-ರೀಮಾ ಬರುತ್ತಾರೆ. ಶಿವರಾಮಯ್ಯ ತನ್ನ ಪಯಣದ ಉದ್ದಕ್ಕೂ ಹಲವು ಬಗೆಯ ದಾಂಪತ್ಯಗಳನ್ನು ಕಾಣುವ ಮತ್ತು ಅವನ್ನು ಬೆಲೆಗಟ್ಟುವ ಕೆಲಸ ಮಾಡುತ್ತಾ ಹೋಗುವನು. ಆದರೆ ಪಯಣಕ್ಕೆ ಈ ಬಗೆಯಲ್ಲಿ ದಾಂಪತ್ಯ ಬೆಲೆಗಟ್ಟುವ ಕೆಲಸವನ್ನು ಗುತ್ತಿಯ ಮೂಲಕ ಕುವೆಂಪು ಕೂಡ ಮಾಡುವುದುಂಟು. ಆದರೂ ಇದು ಕಾರಂತರಲ್ಲಿರುವಷ್ಟು ಪ್ರಮಾಣದಲ್ಲಿ ಕಂಡುಬರುವುದಿಲ್ಲ. ಪಯಣಿಗನಾಗಿ ಪಾತ್ರವಹಿಸುವ ನಿರೂಪಕನಿಗೆ, ಬೇರೆಬೇರೆ ಗಂಡು ಹೆಣ್ಣಿನ

ಸಂಬಂಧಗಳ ದರ್ಶನವಾಗುತ್ತಾ ಹೋಗುವ ಹಾಗೇ, ಇದೇ ವೇಳೆಯಲ್ಲಿ ಪಯಣದ ಪಥ ಹಾಗೂ ಕಾದಂಬರಿಯ ಕಥನವು ಸಹ ಬಿಚ್ಚಿಕೊಳ್ಳುತ್ತ ಹೋಗುತ್ತದೆ.

ಇವರಿಬ್ಬರಿಗೆ ಹೋಲಿಸಿದರೆ, ಮಾಸ್ತಿಯವರಲ್ಲಿ ಗಂಡು-ಹೆಣ್ಣಿನ ಸಂಬಂಧಗಳು ಬಿರುಕು ಬಿಟ್ಟ ದಾಂಪತ್ಯಗಳಾಗಿ ಕಂಡುಬರುತ್ತವೆ. ಅವರಲ್ಲಿ ಆದರ್ಶ ದಾಂಪತ್ಯಗಳೇ ತುಂಬಾ ಕಡಿಮೆ, ಪತನಮುಖಿ ದಾಂಪತ್ಯಗಳೇ ಹೆಚ್ಚಾಗಿ ಕಂಡುಬರುತ್ತವೆ. ಅವರ ಕಾದಂಬರಿಗಳಲ್ಲಿ ವ್ಯಕ್ತಿಯ ನೈತಿಕ ಪತನವು ಆ ಕಾಲದ ಸಾಮಾಜಿಕ ಪತನವೂ ಹೌದು. ಸಂಬಂಧಪಟ್ಟ ವ್ಯಕ್ತಿ ಪ್ರತಿನಿಧಿಸುವ ರಾಜಕೀಯ ವ್ಯವಸ್ಥೆಯ ಪತನವೂ ಹೌದು. ಆದರ್ಶ ಮತ್ತು ಆದರ್ಶವಲ್ಲದ ದಾಂಪತ್ಯಗಳನ್ನು ಕುವೆಂಪು ಮುಖಾಮುಖಿಯಾಗಿಸದೆ ಪ್ರಕೃತಿಯೇ ಒಡ್ಡುವ ತೊಡಕುಗಳ ಮೂಲಕ ಚಿತ್ರಿಸಿದರೆ, ಶಿವರಾಮ ಕಾರಂತರು ಆದರ್ಶ ಹಾಗೂ ಕೆಟ್ಟ ವಿನ್ಯಾಸದ ದಾಂಪತ್ಯಗಳನ್ನು ಮುಖಾಮುಖಿಯಾಗಿಸಿ ಜೀವನದ ಶೋಧ ಮಾಡುತ್ತಾರೆ. ಆದರೆ ಮಾಸ್ತಿಯವರಿಗೆ ದಾಂಪತ್ಯಗಳ ಚಿತ್ರಣವು ವ್ಯವಸ್ಥೆಯ ದುರಂತವನ್ನು ಚಿತ್ರಿಸುವ ಭಾಗವಾಗಿವೆ. ಇದಕ್ಕೆ ಪೂರಕವಾಗಿ ಅವರು ದುರಂತಕ್ಕೀಡಾದ, ಅಧಃಪತನಕ್ಕೆ ಒಳಗಾದ ವ್ಯಕ್ತಿ ಮತ್ತು ರಾಜ್ಯಗಳನ್ನೇ ಕಾದಂಬರಿಗೆ ವಸ್ತುವಾಗಿಸಿಕೊಂಡಿದ್ದಾರೆ. ವೀರಮ್ಮಾಜಿ ಮತ್ತು ಅವಳ ಗಂಡನ ಸಂಬಂಧ ಮತ್ತು ದೇವಮ್ಮಾಜಿ-ಚಿಕವೀರ ರಾಜೇಂದ್ರರ ದಾಂಪತ್ಯ ಎರಡರಲ್ಲೂ ಬಿರುಕಿದೆ. ಈ ಪತನದ ವ್ಯವಸ್ಥೆಯನ್ನು ಚಿತ್ರಿಸುವುದಕ್ಕೋಸ್ಕರ ದಾಂಪತ್ಯಗಳನ್ನು ಮಾಸ್ತಿ ತರುವರು. ವ್ಯಕ್ತಿ ಮತ್ತು ವ್ಯವಸ್ಥೆಯ ಈ ಪತನಗಳ ಭಾಗವಾಗಿ ಅವರಲ್ಲಿ ಪಯಣದ ವಿವರಗಳು ಬರುತ್ತವೆ.

ರಾವಬಹದ್ದೂರರಲ್ಲಿ ಕೂಡ ಒಂದು ಊರಿನ ಪತನವನ್ನು ಚಿತ್ರಿಸುವಾಗ ಮತ್ತು ಆ ಪತನಕ್ಕೆ ಸಾಕ್ಷಿಪ್ರಜ್ಞೆಯಾಗಿರುವ ವ್ಯಕ್ತಿಯನ್ನು ಚಿತ್ರಿಸುವಾಗ, ಹೆಣ್ಣಿನ ಸಂಬಂಧಗಳನ್ನು ಮುಖಾಮುಖಿಯಾಗಿ ತರುವ ವಿನ್ಯಾಸವಿದೆ. ಪಡದಯ್ಯ-ಚಿಮಣಾ, ಬಾಪೂ-ರತ್ನ ಇವರ ಪತನಮುಖಿ ದಾಂಪತ್ಯಗಳನ್ನು ಆ ಊರಿನ ವ್ಯವಸ್ಥೆಯ ಪತನವನ್ನು ಜೋಡಣೆ ಮಾಡುವ ವಿಷಯದಲ್ಲಿ ರಾವಬಹದ್ದೂರರು ಮಾಸ್ತಿಯವರ ಸಮೀಪ ನಿಲ್ಲುತ್ತಾರೆ. ಮಾಸ್ತಿಯವರಲ್ಲಿ ದಾಂಪತ್ಯದ ಮತ್ತು ರಾಜ್ಯದ ಪತನ ಸಮೀಕರಣಗೊಳ್ಳುವ ಹಾಗೇ, ಮಠದ ಒಳಗಡೆ ನಡೆಯುವ ನೈತಿಕಪತನಗಳಿಗೆ ಗಂಡು ಹೆಣ್ಣಿನ ವಿಷಮ ಸಂಬಂಧಗಳನ್ನು ಕಲ್ಪಿಸಿ ರಾವಬಹದ್ದೂರರು ಬರೆಯುತ್ತಾರೆ. ರಾಜ್ಯದ ಪತನ ಮತ್ತು ರಾಜ್ಯವನ್ನು ಆಳುವ ಕುಟುಂಬದ ನಡುವಿನ ಗಂಡು-ಹೆಣ್ಣಿನ ಬಿರುಕುಳ್ಳ ಇವಕ್ಕೆ ಕಾದಂಬರಿಗಳು ಸಂಬಂಧ ಕಲ್ಪಿಸುತ್ತದೆ.

ಯಾವಾಗಲೂ ಜನಪದ ಕಾವ್ಯಗಳಲ್ಲಿ ಸಹ ಗಂಡು-ಹೆಣ್ಣಿನ ಸಂಬಂಧಗಳ ನಡುವೆ ಬರುವ ಬಿರುಕು ಅಥವಾ ನೈತಿಕತೆಯ ಪತನವೇ ಆ ರಾಜ್ಯದ ಪತನಕ್ಕೆ ಕಾರಣವಾಗುವ ವಿನ್ಯಾಸವಿದೆ. ಉದಾಹರಣೆಗೆ, ವಡ್ಡಾರಾಧನೆಯಲ್ಲಿ ಬರುವ 'ಕಾರ್ತಿಕ ಋಷಿ'ಯ ಕಥೆಯಲ್ಲಿ ತಂದೆ ಮತ್ತು

ಮಗಳ ಸಂಬಂಧ ಬರುತ್ತದೆ. 'ಕುಮಾರರಾಮನ ಸಾಂಗತ್ಯ'ದಲ್ಲಿ ಬರುವ ಕುಮಾರರಾಮನ ಕಥೆ ಮಲತಾಯಿ ಹಾಗೂ ಮಲಮಗನ ಸಂಬಂಧದ ಸೆಳೆತವಿದೆ. 'ಪಿರಿಯಾಪಟ್ಟಣದ ಕಾಳಗ'ದಲ್ಲಿನ ಲೈಂಗಿಕ ವಿಷಯದಲ್ಲಿ ದೊರೆಯಾದವನ ನೈತಿಕ ಪತನವೇ ಅವನ ಮತ್ತು ಅವನ ರಾಜ್ಯದ ಪತನಕ್ಕೆ ಕಾರಣವಾಗುತ್ತವೆ. ರಾಜಪ್ರಭುತ್ವಗಳು ನಾಶಗೊಳ್ಳುವ ವಸ್ತುವಿರುವ ಜನಪದ ಕಥನಗಳು ಗಂಡು-ಹೆಣ್ಣಿನ ನಡುವೆ ಉಂಟಾಗಿರುವ ಅನೈತಿಕ ಸಂಬಂಧಕ್ಕೆ ಸಂಬಂಧವನ್ನು ಕಲ್ಪಿಸುತ್ತವೆ. ಈ ಹಿನ್ನೆಲೆಯಲ್ಲಿ ಮಾಸ್ತಿ ಹೆಚ್ಚು ಜನಪದ ವಿಧಾನದ ಮನಸ್ಸುಳ್ಳವರೆಂದೆನಿಸುತ್ತದೆ. ರಾಜ್ಯದ ಪತನಕ್ಕೆ ಸಾಮಾಜಿಕ, ಆರ್ಥಿಕ, ರಾಜಕೀಯ ಕಾರಣಗಳಿಗಿಂತ ಒಬ್ಬ ವ್ಯಕ್ತಿಯ ನೈತಿಕಪತನ ಅಲ್ಲಿನ ಗಂಡು-ಹೆಣ್ಣಿನ ಸಂಬಂಧಗಳ ನಡುವಿನ ಬಿರುಕುಗಳೇ ಮುಖ್ಯವೆಂದು ಚಿತ್ರಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಪಯಣಗಳು ನೈತಿಕ ಅಧಃಪತನದ ಗಂಡು ಹೆಣ್ಣಿನ ಸಂಬಂಧಗಳೇ ಅವುಗಳ ಬೇರೆ ಬೇರೆ ಪಯಣಕ್ಕೆ ಅಥವಾ ಚಲನೆಗೆ ಕಾರಣವಾಗುತ್ತವೆ.

೭.೩. ಪಯಣ: ಅನುಭವ ಮತ್ತು ವ್ಯಕ್ತಿತ್ವ ನಿರ್ಮಾಣ

ಕಾದಂಬರಿಗಳಲ್ಲಿ ಪಯಣವು ಪಯಣಿಗರ ಅನುಭವದಲ್ಲಿ ಮತ್ತು ವ್ಯಕ್ತಿತ್ವದಲ್ಲಿ ಉಂಟಾಗುವ ಪಲ್ಲಟಗಳನ್ನು ಹೇಗೆ ಕಾಣಿಸುತ್ತದೆ ಎಂಬುದು ಮುಖ್ಯ ಸಂಗತಿಯಾಗಿದೆ. ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಪಯಣಿಗನಾಗಿರುವ ವ್ಯಕ್ತಿ ಹೊಸಹೊಸ ಅನುಭವಗಳಿಗೆ ತನ್ನನ್ನು ತೆರೆದುಕೊಳ್ಳುತ್ತ ಹೋಗುವನು. ಪಯಣಗಳ ಮೂಲಕ ತನ್ನ ಈ ಹಿಂದಿನ ಅನುಭವಗಳನ್ನು ಬಿಟ್ಟುಕೊಟ್ಟು ಹೊಸ ಅನುಭವ ಮತ್ತು ದೃಷ್ಟಿಕೋನಗಳನ್ನೂ ಪಡೆಯುತ್ತ ಹೋಗುವನು. ಕಾರಂತರ ಕೃತಿಗಳಲ್ಲಿ ಪಯಣದ ಮೂಲಕ ವ್ಯಕ್ತಿಗಳ ವ್ಯಕ್ತಿತ್ವ ಮಾಗುವ ಮತ್ತು ಬದಲಾಗುವ ಪ್ರಕ್ರಿಯೆಯನ್ನು ನೋಡಬಹುದು. ವ್ಯಕ್ತಿ ಹೊಸ ಹೊಸ ಅನುಭವಗಳಿಗೆ ಮುಖಾಮುಖಿಯಾಗುತ್ತಾ ಈ ಹಿಂದಿನ ಅನುಭವಗಳನ್ನು ವಿಸರ್ಜಿಸುತ್ತಾ ಹೊಸ ಅರಿವನ್ನು ಪಡೆದುಕೊಳ್ಳುವುದನ್ನು ಗಮನಿಸಬಹುದು. ಈ ಅರಿವಿನ ಮೂಲಕ ಆತ ತಾನು ಭೇಟಿ ಮಾಡುವ ಜನರಲ್ಲಿರುವ ಆದರ್ಶ ದಾಂಪತ್ಯ, ಕ್ರೌರ್ಯ, ಔದಾರ್ಯ ದೊಡ್ಡತನದ ಸಂಬಂಧಗಳನ್ನು ಬೆಲೆಗಟ್ಟುತ್ತ ಹೋಗುವನು. ಗಂಡ-ಹೆಂಡತಿ, ಅಪ್ಪ-ಮಗ, ಮುಂತಾದವರಲ್ಲಿ ಇರುವ ತಲೆಮಾರುಗಳ ಸಂಘರ್ಷ ಅವರ ಬದುಕಿನಲ್ಲಾಗುವ ಪಲ್ಲಟ, ಉಳಿವಿಗಾಗಿ ಜನ ಮಾಡುವ ಹೋರಾಟಗಳನ್ನು ಗಮನಿಸುತ್ತ ತಾನೂ ಬದಲಾಗುವನು. ಇದಕ್ಕೆ ಕಾರಣ ಕಾರಂತರ ಪ್ರಜ್ಞೆಯು ಕುವೆಂಪು ಅವರಿಗಿಂತ ಭಿನ್ನವಾಗಿರುವುದು. "ಕುವೆಂಪು 'ಕುಟೀಚಕ' ಪ್ರವೃತಿಯ ಸಾಹಿತಿ- ಸಾಧಕರಾಗಿದ್ದರೆ ಕಾರಂತರು 'ಬಹೂದಕ' ಪ್ರವೃತ್ತಿಯ ಸಾಹಿತಿ ಸಾಧಕರಾಗಿದ್ದರು. ಚುರುಕು ಚಟುವಟಿಕೆ, ಕ್ರಿಯಾಶೀಲತೆಯ ದೃಷ್ಟಿಯಿಂದ ನೋಡುವುದಾದರೆ ಕುವೆಂಪು ಅವರನ್ನೂ ಕಾರಂತರು ಮೀರಿಸಿದವರಾಗಿದ್ದರು."[೧] ಇಲ್ಲಿ ಜಿ.ಎಚ್.ನಾಯಕರು ಹೇಳುತ್ತಿರುವ ಚುರುಕುತನವು ಪ್ರತಿಭೆಗೆ ಸಂಬಂಧಿಸಿದ್ದಲ್ಲ. ತಿರುಗಾಟಕ್ಕೆ ಸಂಬಂಧಿಸಿದ್ದು ಎಂದು ತಿಳಿಯಬಹುದು.

ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಆರಂಭದಲ್ಲಿ ಪಯಣ ಮಾಡುವ ಸಿದ್ಧತೆಯಲ್ಲಿ ಕಾಣಿಸಿಕೊಳ್ಳುವ ಗುತ್ತಿ, ತನ್ನ ಪಯಣದುದ್ದಕ್ಕೂ ಹೊಸ ಹೊಸ ಅನಿರೀಕ್ಷಿತ ಅನುಭವಗಳಿಗೆ ಮುಖಾಮುಖಿಯಾಗುತ್ತಾನೆ. ಅವನ ಸಾಕುನಾಯಿ ಹುಲಿಯಾ ಕಣ್ಮರೆಯಾದ ಸಂದರ್ಭದಲ್ಲಿ ಆತ ತತ್ವಜ್ಞಾನಿಯಂತೆ ಚಿಂತಿಸುತ್ತಾನೆ. ಜೀವನದ ಹೋರಾಟದಲ್ಲಿ ತಿಮ್ಮಿಯನ್ನು ಪಡೆಯುವ ಸಲುವಾಗಿ, ಎರಡು ಫ್ಯೂಡಲ್ ಕುಟುಂಬಗಳ ನಡುವಣ ಸಂಘರ್ಷದೊಳಕ್ಕೆ ಸಿಕ್ಕಿ ನಲುಗುತ್ತಾನೆ. ತಾನು ಮಾಡುವ ಸುದೀರ್ಘವಾದ ಪಯಣದಲ್ಲಿ ಒಳ್ಳೆಯ ಮತ್ತು ಕೆಟ್ಟ ಅನುಭವಕ್ಕೆ ಒಳಗಾಗುತ್ತಾನೆ. ಇದರ ಜೊತೆಯಲ್ಲಿಯೇ ನಿಸರ್ಗದ ಜೊತೆಗಿನ ಅವನ ಸಂಬಂಧಗಳು ಹೊಸ ಅನುಭವಗಳಿಗೆ ಮತ್ತು ಅಂತಿಮವಾಗಿ ಅವನ ವ್ಯಕ್ತಿತ್ವದ ಬೆಳವಣಿಗೆಗೆ ಕಾರಣವಾಗುತ್ತವೆ. ರಾವಬಹದ್ದೂರರ 'ಗ್ರಾಮಾಯಣ' ಕೃತಿಯಲ್ಲಿ ಪುತಳಾಬಾಯಿ, ಬಾಳಾಚಾರ್ಯ, ಪಡದಯ್ಯ, ಗೌಡ, ದಾದಾ ಮುಂತಾದವರು ಪಯಣದಲ್ಲಿ ಬೇರೆಬೇರೆ ಅನುಭವಗಳಿಗೆ ತಮ್ಮನ್ನು ತಾವು ಒಡ್ಡಿಕೊಳ್ಳುತ್ತಾರೆ. ಇಲ್ಲಿ ಅವರ ದೈಹಿಕ ಪಯಣದ ಜತೆಯಲ್ಲೇ ಮಾನಸಿಕ ಪಯಣವೂ ಸಾಗುತ್ತದೆ. ಈ ಎರಡೂ ಬಗೆಯ ಪಯಣಗಳಿಗೆ ತಮ್ಮನ್ನು ತಾವು ಒಡ್ಡಿಕೊಂಡು ಅವರು ವ್ಯಕ್ತಿತ್ವದ ಮಾಗುವ ಕ್ರಿಯೆಗೆ ಒಳಪಡುವುದು ಕಂಡುಬರುತ್ತದೆ.

೭.೪. ಪಯಣ: ಜೀವನ ಮೌಲ್ಯಗಳ ಶೋಧ

ವ್ಯಕ್ತಿಯ ಪಯಣದಲ್ಲಿ ಮೌಲ್ಯಗಳ ಶೋಧ ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಮುಖ್ಯವಾಗಿ ಕಾಣುತ್ತದೆ. ಈ ಬಗೆಯ ಮೌಲ್ಯಶೋಧ ಕುವೆಂಪುರವರಲ್ಲಿ ಅಷ್ಟು ಮುಖ್ಯವಾಗಿ ಕಂಡುಬರುವುದಿಲ್ಲ. ಕುವೆಂಪು ಕಾದಂಬರಿಗಳಿಗೆ ವ್ಯಕ್ತಿಗಳ ಬದುಕಿನ ಮೌಲ್ಯಮಾಪನಕ್ಕಿಂತ ಆ ಬದುಕಿನ ಒತ್ತಡಗಳೇ ವ್ಯಕ್ತಿಗಳ ವರ್ತನೆಗಳನ್ನು ನಿಯಂತ್ರಿಸುವುದನ್ನು ಚಿತ್ರಿಸುವುದರಲ್ಲಿ ಆಸಕ್ತಿ. ಜನರ ವರ್ತನೆಗಳನ್ನು ಅದರ ಫಲವಾಗಿ ಸಂಭವಿಸುವ ಘಟನೆಗಳನ್ನು ತೆರೆದ ಮನಸ್ಸಿನಿಂದ ನೋಡಬೇಕೆಂಬ ನಿಲುವು ಅಲ್ಲಿ ಕಂಡುಬರುತ್ತದೆ. 'ಕಾನೂರು ಹೆಗ್ಗಡಿತಿ'ಯಲ್ಲಿ ಸುಬ್ಬಮ್ಮ ಸೇರೆಗಾರನ ದೈಹಿಕ ಸಂಗ ಮಾಡುವುದು ಅವಳ ನೈತಿಕತೆಯ ಪ್ರಶ್ನೆಯಾಗಿ ಕಾದಂಬರಿಗೆ ಮುಖ್ಯವಾಗುವುದಿಲ್ಲ. ಬದಲಾಗಿ ಮನುಷ್ಯನ ಒಳಗಿರುವ ಲೈಂಗಿಕ ತುಡಿತಗಳು ನೈಸರ್ಗಿಕವಾದವು. ಈ ಬಗೆಯ ಪ್ರವೃತ್ತಿಗಳನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ ಎಂಬ ನಿಲುವು ಅಲ್ಲಿ ಸೂಚನೆಯಾಗುತ್ತದೆ. ಅತ್ಯಂತ ದಟ್ಟವಾದ ಕಾಡಿನಲ್ಲಿ ನಡೆಯಬೇಕಾದ ಸನ್ನಿವೇಶವೇ ಏಕಾಂಗಿಯಾಗಿ ಧೈರ್ಯದಿಂದ ನಡೆಯುವ ಶಕ್ತಿಯನ್ನು ನಾಯಿಗುತ್ತಿಗೆ ತಂದುಕೊಟ್ಟಿದೆ. ಇದೊಂದು ಮೌಲ್ಯವೆಂದು ಕರೆಯುವುದು ಕಾದಂಬರಿಗೆ ಮುಖ್ಯವಾಗುವುದಿಲ್ಲ. ಬದಲಾಗಿ ಗುತ್ತಿಯ ಬದುಕಿನ ದುರ್ಭರವಾದ ಸನ್ನಿವೇಶಗಳ ಜತೆಯಲ್ಲಿ ಅವನು ದಲಿತನಾಗಿರುವ ಸಾಮಾಜಿಕ ಒತ್ತಡವೇ ಅವನಿಗೆ ಅನಿರೀಕ್ಷಿತ ಅಪಮಾನ ಮತ್ತು ಕಷ್ಟಗಳನ್ನು ಎದುರಿಸುವ ಶಕ್ತಿಯನ್ನು ತಂದುಕೊಟ್ಟಿದೆ ಎಂದು ಕಾದಂಬರಿ ಸೂಚಿಸುತ್ತದೆ. ಅವನಲ್ಲಿರುವ

ಪ್ರೇಮ-ಪ್ರಣಯದ ತುಡಿತಗಳು ಅವನೊಳಗೆ ಹುದುಗಿರುವ ಯೌವನಕ್ಕೆ ಸಂಬಂಧಿಸಿದ್ದಾಗಿವೆ. ಆದರೆ ಅವನ ಸಾಮಾಜಿಕ ಹಿನ್ನೆಲೆ, ದೈಹಿಕ ಸಾಮರ್ಥ್ಯ ಹಾಗೂ ನೈಸರ್ಗಿಕ ತುಡಿತಗಳು ಅವನಿಗೆ ಹೊಸ ಬಗೆಯ ಸಾಹಸದಲ್ಲಿ ತೊಡಗಲು ಬೇಕಾದ ಪಯಣಕ್ಕೆ ಪ್ರೇರಣೆ ಕೊಡುತ್ತವೆ. ಈ ನೆಲೆಯಲ್ಲಿ ಮನುಷ್ಯರ ಬದುಕು ಹೇಗೆ ಅವರು ಬದುಕುವ ಸನ್ನಿವೇಶದ ಒತ್ತಡಗಳಿಗೆ ಹಾಗೂ ಅವರ ಪ್ರವೃತ್ತಿಗಳಿಗೆ ಸಿಕ್ಕು ಬದಲಾಗುತ್ತಿದೆ ಎಂದು ಹೇಳುವುದು ಕಾದಂಬರಿಗೆ ಮುಖ್ಯವಾಗಿದೆ. ಆದರೆ ಅವರ ಕ್ರಿಯೆಗಳ ದಾಂಪತ್ಯದ ಮೌಲ್ಯವೇನು ಎಂದು ಕಾರಂತರಂತೆ ಬೆಲೆಕಟ್ಟಲು ಅದಕ್ಕೆ ಮುಖ್ಯವಾಗುವುದಿಲ್ಲ. ಕಾರಂತರಿಗೆ ಜನರ ಪಯಣದ ಒಂದು ಭಾಗವಾಗಿ ಮೌಲ್ಯಗಳ ಶೋಧ ಮುಖ್ಯವಾಗುತ್ತದೆ.

ಶಿವರಾಮ ಕಾರಂತರಿಗೂ ಮತ್ತು ಮಾಸ್ತಿಯವರಿಗೂ ವ್ಯಕ್ತಿಯ ಬದುಕಿನಲ್ಲಿ ನೈತಿಕ ಮೌಲ್ಯಗಳು ಮುಖ್ಯವಾಗುತ್ತವೆ. ಬೇರೆ ಬೇರೆ ಮನುಷ್ಯ ಸಂಬಂಧಗಳಾದ ತಂದೆ-ಮಗಳು, ರಾಜ-ಪ್ರಜೆ, ದಣಿ-ಸೇವಕ ಹಾಗೂ ಗೆಳೆಯರ ನಡುವಿನ ಸಂಬಂಧಗಳ ಹಿಂದಿರುವ ಮೌಲ್ಯಗಳನ್ನು ಶೋಧಿಸುವುದು ಅವರಲ್ಲಿ ಮುಖ್ಯವಾಗುತ್ತದೆ. ಕಾರಂತರಲ್ಲಿ ಉಪಕಾರ ಪ್ರಜ್ಞೆ ಮತ್ತು ವ್ಯಕ್ತಿನಿಷ್ಠೆ ಎಂಬುದು ಒಂದು ದೊಡ್ಡ ಮೌಲ್ಯವಾಗಿ ಪ್ರತಿಪಾದಿತವಾಗುತ್ತದೆ. ಈ ಬಗೆಯ ನಿಷ್ಠೆ ತೋರಿಸದವರು ಅವರಲ್ಲಿ ನೀಚರಾಗಿ ಕಂಡುಬರುತ್ತಾರೆ. 'ಅಳಿದಮೇಲೆ' ಕಾದಂಬರಿಯಲ್ಲಿ ಯಶವಂತರಾಯರಿಗೆ ನಿಷ್ಠೆ ತೋರಿಸುವ ಮತ್ತು ನಿಷ್ಠೆ ತೋರಿಸದ ವ್ಯಕ್ತಿಗಳು ಚಿತ್ರಣವಾಗುವ ಪರಿಯನ್ನು ಗಮನಿಸಬಹುದು. ವ್ಯಕ್ತಿಯಲ್ಲಿರುವ ಸಹಾಯಪ್ರಜ್ಞೆ ಇಲ್ಲಿ ದೊಡ್ಡಮೌಲ್ಯವಾಗಿ ಕಾಣುತ್ತದೆ. ಕುವೆಂಪು ಅವರಲ್ಲಿ ನಿಸರ್ಗ ಮತ್ತು ಸಾಮಾಜಿಕ ಒತ್ತಡಗಳೇ ಒಬ್ಬ ಮನುಷ್ಯನ ಬದುಕಿನಲ್ಲಿ ಬದಲಾವಣೆಯನ್ನು ತರುತ್ತವೆ. ಈ ಬದಲಾವಣೆಯನ್ನು ಮೌಲ್ಯಮಾಪನ ಮಾಡಬೇಕಾದದ್ದು ಮುಖ್ಯವಲ್ಲ, ಅರ್ಥ ಮಾಡಿಕೊಳ್ಳುವುದು ಮುಖ್ಯ. ಆದರೆ ಉಳಿದ ಮೂವರು ಕಾದಂಬರಿಕಾರರು ರಾಜ್ಯಕ್ಕೆ ಒಡೆಯರಿಗೆ ಹಾಗೂ ಜೀವನ ಸಂಗಾತಿಗೆ ನಿಷ್ಠವಾಗಿರುವುದು ಒಂದು ಮೌಲ್ಯವಾಗಿ ತರುತ್ತಾರೆ. ಕುವೆಂಪು ಅವರಿಗೆ ಹೋಲಿಸಿದರೆ, ಕಾರಂತ ಮಾಸ್ತಿ ಹಾಗೂ ರಾವಬಹದ್ದೂರರಲ್ಲಿ, ಪಯಣದ ಭಾಗವಾಗಿ ಬರುವ ಮೌಲ್ಯಮಾಪಕ ಪ್ರಜ್ಞೆಯನ್ನು ಹೆಚ್ಚು ಮುಖ್ಯವಾಗಿದೆ. ಈ ಮೌಲ್ಯನಿರ್ಣಯದ ಹಿನ್ನೆಲೆಯಲ್ಲಿ ಅಲ್ಲಿ ಪಯಣಗಳು ಬರುತ್ತಾ ಹೋಗಿವೆ.

೭.೫. ಪಯಣ: ಪ್ರತಿಮೆ, ಸಂಕೇತ ಹಾಗೂ ರೂಪಕಗಳು

ಕುವೆಂಪು ದಾರ್ಶನಿಕವಾಗಿ ಅದ್ವೈತಿಯಾಗಿರುವುದರಿಂದ ಲೋಕದ ಎಲ್ಲಾ ಜೀವಿಗಳ ಅಸ್ತಿತ್ವವನ್ನು ಮನ್ನಿಸುವ ನಿಲುವನ್ನು ತಾಳಿದವರು. ಈ ಜಗತ್ತಿನಲ್ಲಿ ಮನುಷ್ಯರು ಮಾತ್ರ ಮುಖ್ಯವಲ್ಲ, ಅವರ ಜೊತೆ ಕೀಟಗಳು, ಸಸ್ಯಗಳು, ಪ್ರಾಣಿಗಳು, ಪಕ್ಷಿಗಳು ಕೂಡ ಮುಖ್ಯವೆಂದು ಅವರ ದಾರ್ಶನಿಕತೆ ನಂಬಿದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಆರಂಭದಲ್ಲಿ ಅವರೇ

ಹೇಳಿರುವಂತೆ "ಇಲ್ಲಿ ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ; ಯಾವುದೂ ಯಃಕಶ್ಚಿತವಲ್ಲ!." ಹೀಗಾಗಿಯೇ ಅವರ ಕಾದಂಬರಿ ಮನುಷ್ಯ ಕೇಂದ್ರಿತ ಕಥನವಾಗದೇ ಒಂದು ಜೀವಿಕೇಂದ್ರಿತ ಕಥನವೂ ಆಗಿದೆ. ಇದಕ್ಕೆ ಹೋಲಿಸಿದರೆ. ಶಿವರಾಮ ಕಾರಂತರದು ಮನುಷ್ಯ ಕೇಂದ್ರಿತ ಕಥನ. 'ಬೆಟ್ಟದಜೀವ'ದಲ್ಲಿ ಕಾಡನ್ನು ಕಡಿದು ಗದ್ದೆ ಮಾಡುವುದು, ಹೊಳೆಯನ್ನು ತಡೆಗಟ್ಟಿ ನೀರನ್ನು ತಿರುಗಿಸುವುದು, ಹುಲಿಯನ್ನು ಬೇಟೆಯಾಡುವುದು ಮನುಷ್ಯರ ಸಾಹಸದ ಸಂಕೇತಗಳಾಗಿವೆ. ಆದರೆ ಕುವೆಂಪು ಕಾದಂಬರಿಗಳಲ್ಲಿ ಕಾಡು, ಹೊಳೆ, ಕೀಟ, ಪಕ್ಷಿಗಳ ಮನುಷ್ಯ ಬದುಕಿನ ಪಯಣದಲ್ಲಿ ಸಹ ಪಯಣಿಗರು. ಹೀಗಾಗಿಯೇ ಅವರು ಮನುಷ್ಯರ ಬದುಕಿನ ಪಯಣದಲ್ಲಿ ಸಂಗಾತಿಗಳಾಗಿ ಸಹಚರಿಗಳಾಗಿ ಪ್ರಾಣಿಗಳನ್ನು ಸಹ ಸಹಜವಾಗಿ ತರುತ್ತಾರೆ. ಮನುಷ್ಯರ ವರ್ತನೆಗಳನ್ನು ವಿವರಿಸಲು ಪ್ರಾಣಿ ಮತ್ತು ಕೀಟ ಜಗತ್ತಿನಿಂದ ರೂಪಕಗಳನ್ನು ತರುತ್ತಾರೆ. ಪ್ರಾಣಿ, ಪಕ್ಷಿ ಮತ್ತು ಕೀಟಗಳನ್ನು ಸಂಕೇತವಾಗಿ ತೆಗೆದುಕೊಂಡು ಬಂದು ಮನುಷ್ಯನ ಬದುಕಿನ ಪಯಣಕ್ಕೆ ಜೋಡಿಸುತ್ತಾರೆ. ಮನುಷ್ಯರ ಬಾಳ್ವೆಯಲ್ಲಿ ನಡೆಯುವ ಬೇರೆ ಬೇರೆ ಪಯಣದ ಅನುಭವಗಳನ್ನು ಹೇಳುವುದಕ್ಕೆ ಅವರ ಕಾದಂಬರಿಗಳು ಕೀಟ, ಪಕ್ಷಿ, ಪ್ರಾಣಿ, ಸಸ್ಯ ಲೋಕದಿಂದ ಸಂಕೇತಗಳನ್ನು ಜೋಡಿಸುತ್ತದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಓಡುಹುಳುವಿನ ಪ್ರಸಂಗದಲ್ಲಿ ಓಡುಹುಳುವಿನ ಬದುಕು ಗುತ್ತಿಯ ಬದುಕಿನಷ್ಟೆ ಮುಖ್ಯವೆಂಬ ನಂಬುಗೆಯಿದೆ. ಗುತ್ತಿ ತಿಮ್ಮಿಯನ್ನು ಪಡೆಯಲು ಮಾಡುವ ಪಯಣದಷ್ಟೆ ಓಡುಹುಳು ಸಗಣಿಯ ಉಂಡೆಯನ್ನು ತನ್ನ ಗೂಡಿಗೆ ಸಾಗಿಸುವುದಕ್ಕೆ ಮಾಡುವ ಪಯಣ ಮುಖ್ಯವಾಗಿದೆ. ಇಬ್ಬರದೂ ಪಯಣವೇ ಆಗಿದ್ದು, ಅವುಗಳ ಹಿಂದೆ ಕಾಮ ಮತ್ತು ಹಸಿವು ಮುಖ್ಯವಾಗಿದೆ. ಹೀಗೆ ಓಡುಹುಳು, ಕಾಡುಕೋಣ ಹಾಗೂ ನಾಯಿಗಳ ಪಯಣವು ಮಲೆನಾಡಿನ ಮನುಷ್ಯರ ಚಲನವಲನಗಳ ಜತೆ ಸೇರಿಕೊಂಡಿವೆ.

ಮಾನವ ಬದುಕಿನ ಪಯಣದಲ್ಲಿ ಇತರೆ ಜೀವಿಗಳು ಮಾತ್ರವಲ್ಲ, ಜಡವಸ್ತುಗಳೂ ಪಯಣ ಮಾಡುತ್ತವೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಜಡವಾದ ಉಂಗುರವು ಮಾಡುವ ಹಲವು ವಿನ್ಯಾಸದ ಪಯಣವನ್ನು ಗಮನಿಸಬೇಕು. ಈ ಚಿನ್ನದ ಆಭರಣವು ಮಾಡುವ ಪಯಣವು ಮನುಷ್ಯರ ಕ್ರೌರ್ಯ ಪ್ರೀತಿ ಉದಾರತೆಗಳಿಗೆ ಒಂದು ರೂಪಕವಾಗಿಯೂ ಕಾದಂಬರಿಯಲ್ಲಿ ಬರುತ್ತದೆ. ಜಡವಾದ ಉಂಗುರವು ಮನುಷ್ಯರ ಪಯಣದ ಭಾಗವಾಗಿ ತಾನೂ ಪಯಣಿಸುತ್ತದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಜಡವಸ್ತುವಾದ ಈ ಉಂಗುರವು ಚಲನೆಯ ಸಂಕೇತವಾಗಿ ಬರುತ್ತದೆ. ಅಕ್ರಮಾತಿಕ್ರಮದ ಪ್ರಣಯ ಪ್ರಪಂಚದ ಗೋಪ್ಯ ವಲಯಕ್ಕೆ ಸೇರಿದ ಈ ಉಂಗುರ ದೇವಯ್ಯ ಮತ್ತು ಕಾವೇರಿಯ ಸಂಬಂಧಕ್ಕೆ ಸಾಕ್ಷಿಯಾಗುತ್ತದೆ. ಈ ಉಂಗುರ ಹಲವು ವ್ಯಕ್ತಿಗಳನ್ನು ಕೈಯನ್ನು ಅಲಂಕರಿಸಿ ಹಲವು ಅನಿಷ್ಟಗಳಿಗೆ ಕಾರಣವಾಗಿದ್ದು ದೇವಯ್ಯನ ಮೂಲಕ ಕಾವೇರಿಗೆ ಬಂದು ಕಳುವಾಗಿ ಅವಳ ಸಾವಿಗೂ ಕಾರಣವಾಗುತ್ತದೆ. ಕಾಳಿದಾಸನ

'ಅಭಿಜ್ಞಾನ ಶಾಕುಂತಲ' ನಾಟಕದಲ್ಲಿ ಬರುವ ಶಕುಂತಲೆ ಮತ್ತು ದುಶ್ಯಂತರ ಭೇಟಿಗೆ ಸಾಕ್ಷಿಯಾಗಿ ಬರುವ ಉಂಗುರವು ಅವರಿಬ್ಬರ ಕಾಡು-ನಾಡಿನ ಪಯಣಗಳಿಗೆ ಪ್ರೇರಣೆ ಕೊಡುತ್ತದೆ. ದೋಣಿಯ ಪಯಣದಲ್ಲಿ ಶಕುಂತಲೆ ಕೈಯಿಂದ ನೀರಿನಲ್ಲಿ ಕಳೆದು ಹೋಗುವ ಉಂಗುರವು ಮೀನಿನ ಹೊಟ್ಟೆಯಲ್ಲಿ ಮತ್ತೆ ಸಿಕ್ಕು ಕಾಡಿನಿಂದ ನಾಡಿಗೆ ಪಯಣ ಮಾಡುತ್ತದೆ. ಆದರೆ ನಾಡು ಶಕುಂತಲೆಯನ್ನು ಉಂಗುರದ ಸಾಕ್ಷಿಯಿಲ್ಲದ ಕಾರಣದಿಂದ, ಅವಳ ಕಾಡಿನ ಯಾವ ನೆನಪುಗಳನ್ನೂ ಮನ್ನಿಸುವುದಿಲ್ಲ. ಅವಳು ನೆನಪಿನ ಮೂಲಕ ಗಂಡನ ಗುರುತನ್ನು ಹೇಳುವ ಪ್ರಯತ್ನ ವಿಫಲವಾಗುತ್ತದೆ. ಆಕೆ ತನ್ನ ಪ್ರಿಯಕರನನ್ನು ಪಡೆಯಲಾಗದೆ ಮತ್ತೆ ಕಾಡಿಗೆ ಪಯಣ ಮಾಡಬೇಕಾಗುತ್ತದೆ. ಇದೇ ತರಹ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲೂ ಉಂಗುರವು ದೇವಯ್ಯನ ಮೂಲಕ ಕಾವೇರಿಗೆ, ಕಾವೇರಿಯ ಮೂಲಕ ಸೇರೆಗಾರ ಚೀಂಕ್ರನಿಗೆ, ಸೇರೆಗಾರ ಚೀಂಕ್ರನಿಂದ ಕರ್ಮೀನ್ ಸಾಬಿಯ ಕೈಗೆ ಸಾಗಿ ಅನೇಕ ದುರಂತಗಳಿಗೆ ಕಾರಣವಾಗಿ ಪಯಣ ಮಾಡುತ್ತದೆ. ಕುವೆಂಪು ಈ ಬಗೆಯ ಪಯಣವನ್ನು ಒಂದು ಸಂಕೇತವಾಗಿ ಅದ್ಭುತವಾಗಿ ಬಳಸುವರು. ಆದರೆ ಮಾಸ್ತಿಯವರ ಕಾದಂಬರಿಗಳಲ್ಲಿ ಹೀಗೆ ವಸ್ತುಗಳು ಸಂಕೇತಗಳಾಗುವುದು ಮತ್ತು ಪಯಣಿಸುವುದು ಹೆಚ್ಚಾಗಿ ಕಾಣಬರುವುದಿಲ್ಲ.

ರಾವಬಹದ್ದೂರರ 'ಗ್ರಾಮಾಯಣ'ದಲ್ಲಿ ಕೃಷ್ಣಾ ನದಿಯ ಹರಿಯುವಿಕೆ ಮತ್ತ ಅದರ ಮೇಲಿನ ಮನುಷ್ಯರ ಪಯಣಗಳು ಎರಡೂ ಒಟ್ಟಿಗೇ ಬರುತ್ತವೆ. ಜನರು ನದಿಯಲ್ಲಿ ಈಜುವುದು, ದೋಣಿ ಇಲ್ಲವೇ ಕುದುರೆಯ ಮೂಲಕ ಅದನ್ನು ದಾಟುವುದು ಮಾಡುತ್ತಾರೆ. ನದಿ ತನ್ನ ಪಯಣದ ಪಥವನ್ನು ಬದಲಿಸಿ ಊರೊಳಗೆ ನುಗ್ಗಿ ಊರಿನ ನಾಶಕ್ಕೂ ಕಾರಣವಾಗುತ್ತದೆ. ಪೂರ್ಣಚಂದ್ರ ತೇಜಸ್ವಿಯವರ 'ಚಿದಂಬರ ರಹಸ್ಯ'ದಲ್ಲಿ ಕೇಡಿನ ಶಕ್ತಿಗಳಿರುವ ಊರು ಬೆಂಕಿಗೆ ಆಹುತಿಯಾಗುತ್ತದೆ. ಅದರಂತೆ ಇಲ್ಲಿ ಕೇಡಿನ ಊರಾಗಿರುವ ಪಾದಳ್ಳಿ ಜೀವನದ ಸರಳವಾದ ವಿವೇಕವನ್ನು ಮರೆತಿದ್ದು ರೋಗ ಮತ್ತು ಪ್ರವಾಹದ ಮೂಲಕ ಪತನಕ್ಕೆ ಒಳಗಾಗುತ್ತದೆ. ನಿಸರ್ಗದ ಮತ್ತು ಮನುಷ್ಯನ ಚಲನೆಗಳು ಒಟ್ಟೊಟ್ಟಿಗೆ ನಡೆಯುತ್ತವೆ ಹಾಗೂ ಅವು ಒಂದರಿಂದ ಒಂದು ಪ್ರೇರಣೆಯನ್ನು ಪಡೆಯುತ್ತಿವೆ ಎಂದು ಕುವೆಂಪು ಚಿತ್ರಿಸಿದರೆ, 'ಗ್ರಾಮಾಯಣ'ದಲ್ಲಿ ರಾವಬಹದ್ದೂರರು ನಾಶಕ್ಕೆ ಕರ್ಮ ಫಿಲಾಸಫಿ ಕೆಲಸ ಮಾಡಿದೆ ಎಂದು ಚಿತ್ರಿಸುತ್ತಾರೆ. ಇಲ್ಲಿ ಪಾದಳ್ಳಿಯ ಜೀವಂತಿಕೆಗೆ ಕಾರಣವಾಗಿರುವ ನದಿ ಊರಿನ ಸರ್ವನಾಶಕ್ಕೂ ಕಾರಣವಾಗುತ್ತದೆ. ಈ ಸರ್ವನಾಶವು ಅನೇಕರು ಊರನ್ನು ಬಿಟ್ಟು ಹೊರಹೋಗುವುದಕ್ಕೂ ಊರಿನ ಒಳಗೆ ಬರುವುದಕ್ಕೂ ಪ್ರೇರಣೆಯಾಗುತ್ತವೆ. ಹೊಳೆ ಮತ್ತು ಅದರ ಪಯಣವು ಇಡೀ ಕಾದಂಬರಿಯಲ್ಲಿ ದೊಡ್ಡ ಸಂಕೇತವಾಗುತ್ತದೆ.

ಶಿವರಾಮ ಕಾರಂತರಲ್ಲಿ ಬೆಟ್ಟ, ಪಕ್ಷಿ, ಪ್ರಾಣಿ, ಕೆಸರು, ಮಳೆಗಳು ಸಂಕೇತಗಳಾಗಿ ಮನುಷ್ಯ ಜೀವನದ ಪಯಣದೊಂದಿಗೆ ಸಂಬಂಧ ಪಡೆದುಕೊಳ್ಳುತ್ತವೆ. ಶಿವರಾಮಯ್ಯನ ಪಯಣದಲ್ಲಿ ಸಿಗುವ ಭಿನ್ನ ಭಿನ್ನ ಸಹಜ ವಿವರಗಳನ್ನು ಕಾದಂಬರಿಗಳು ದಾಖಲಿಸುತ್ತವೆ. ಉದಾಹರಣೆಗೆ

'ಬೆಟ್ಟದಜೀವ' ಮತ್ತು 'ಅಳಿದಮೇಲೆ' ಕಾದಂಬರಿಗಳಲ್ಲಿ ಬರುವ ಮನುಷ್ಯರ ನಡಿಗೆ, ಅವರ ಪಯಣಕ್ಕೆ ಒದಗಿ ಬರುವ ಎತ್ತಿನಬಂಡಿ, ರೈಲು, ಬಸ್ಸು ಇತ್ಯಾದಿ ವಾಹನಗಳು ಅವು ಕೆಟ್ಟು ನಿಲ್ಲುವುದು, ಅದರ ಪಯಣಿಕರು ಬಳಿಕ ಕಷ್ಟಪಟ್ಟು ನಡೆದು ಹೋಗುವುದು, ಅವರ ಪಯಣಕ್ಕೆ ಹರಿಯುವ ಹೊಳೆ ಅಡ್ಡಕಟ್ಟುವುದು, ದಾರಿಯಲ್ಲಿ ಆನೆಗಳು ಬರುವುದು ಇತ್ಯಾದಿ ವಿವರಗಳನ್ನು ಗಮನಿಸಬೇಕು. ಮನುಷ್ಯರ ಬದುಕಿನ ಚಲನೆಯ ವಿವಿಧ ಅವಸ್ಥೆಯನ್ನು ಬಣ್ಣಿಸಲು ಕಾರಂತರ ಕಾದಂಬರಿಗಳು ಇವನ್ನು ವಿವಿಧ ಸಂಕೇತಗಳಾಗಿ ದುಡಿಸಿಕೊಳ್ಳುತ್ತವೆ. ಮನುಷ್ಯರ ಬದುಕಿನಲ್ಲಿ ಎದುರಾಗುವ ಹಲವಾರು ಮಾನವೀಯ ಸಂಕಟಗಳಿಗೂ ಅವರು ಕೃಷಿಯಲ್ಲಿ ಎದುರಿಸುವ ಪ್ರಾಕೃತಿಕ ಸಂಕಟಗಳಿಗೂ ಇಲ್ಲಿ ನೇರ ಸಂಬಂಧವಿದೆ. ಲೋಕದಲ್ಲಿರುವ ಎಲ್ಲಾ ವಸ್ತುಗಳಲ್ಲೂ ಸಮಾನವಾದ ಚೈತನ್ಯವಿದೆ ಎಂಬ ಸಮಾಜವಾದಿ ದೃಷ್ಟಿಕೋನದಿಂದ ನೋಡುವಂತಹ ಸಂಕೇತಗಳು ಕುವೆಂಪು ಕಾದಂಬರಿಗಳಲ್ಲಿ ಇವೆ. ಅವರ ಕಾದಂಬರಿಗಳಲ್ಲಿ ಕೀಟ ಮತ್ತು ಪ್ರಾಣಿಗಳ ಪಯಣವು ಗುತ್ತಿಯ ಪಯಣದ ಭಾಗವಾಗಿ ಸಮೀಕರಣಗೊಳ್ಳುತ್ತದೆ. ಆದರೆ ಕಾರಂತರಲ್ಲಿ ಪಯಣಕ್ಕೆ ಕಾರಣವಾಗುವ ವಾಹನಗಳ ತೊಡಕುಗಳೇ ಮನುಷ್ಯರ ಬಾಳಿನ ತೊಡಕಿನ ಸಂಕೇತಗಳಾಗಿ ಕಂಡುಬರುತ್ತವೆ. ಮಾಸ್ತಿಯವರಿಗೆ ಮನುಷ್ಯರ ಬದುಕಿನ ಪಲ್ಲಟಗಳನ್ನು, ಪ್ರಾಕೃತಿಕವಾದ ಸಂಕೇತಗಳ ನೆಪದಲ್ಲಿ ಕಾಣಿಸುವುದಕ್ಕಿಂತ, ಮನುಷ್ಯರ ಚರಿತ್ರೆಯನ್ನು ಅದರ ನಗ್ನತೆಯಲ್ಲಿ ಚಿತ್ರಿಸುವುದೇ ಮುಖ್ಯ. ಇದನ್ನು ಅವರ ಕಾದಂಬರಿಗಳು ಕೊಲೆ, ಸಾವು, ಲೈಂಗಿಕ ಆಕ್ರಮಣದ ರೂಪದಲ್ಲಿ ಚಿತ್ರಿಸುತ್ತವೆ.

ಕಾದಂಬರಿ ಪ್ರಕಾರವು ಕವಿತೆಗಿಂತ ತುಂಬಾ ಭಿನ್ನವಾದದ್ದು. ಅದು ಚಿತ್ರಿಸಬಯಸುವ ಸಾಮಾಜಿಕ ಲೋಕ ಮತ್ತು ಭೌಗೋಳಿಕತೆಗಳು ಅಲ್ಲಿನ ಸಮೃದ್ಧ ವಿವರಗಳ ಮೂಲಕ ಒಳಗೆ ಬರುತ್ತವೆ. ಆ ವಿವರಗಳಲ್ಲೇ ಕೆಲವು ಸಂಕೇತಗಳಾಗಿ, ಉಪಮೆಗಳಾಗಿ ಸಾಂಕೇತಿಕ ರೂಪಾಂತರ ಪಡೆದು ಕಥೆಯಲ್ಲಿರುವ ಮನುಷ್ಯರ ಬದುಕಿನ ಅರ್ಥವನ್ನು ವಿಸ್ತರಿಸುತ್ತವೆ. ಸಾಮಾನ್ಯವಾಗಿ ಮನುಷ್ಯರು ತಮ್ಮ ಪರಿಸರದಲ್ಲಿ ಎದುರಾಗುವ ದೊಡ್ಡ ತೊಂದರೆಗಳಿಗೆ ಮುಖಾಮುಖಿ ಮಾಡದೆ, ಉಪಾಯಗಾರಿಕೆಯಿಂದ ಬದುಕಲು ಯತ್ನಿಸುವರು. ಆದರೆ ಕೆಲವು ವ್ಯಕ್ತಿಗಳಿಗೆ ಎಲ್ಲರೂ ಬದುಕುವ ಸಾಧಾರಣ ಜೀವನಕ್ರಮ ಇಷ್ಟವಾಗುವುದಿಲ್ಲ. ಅವರು ತಮ್ಮ ಸಾಹಸಿ ಪ್ರವೃತಿಯ ಮೂಲಕ ಬೇರೆಯವರಿಗಿಂತ ಭಿನ್ನವಾಗಿ ಬದುಕಬೇಕೆಂಬ ತುಡಿತವುಳ್ಳವರು. ವ್ಯಕ್ತಿ ಹತ್ತರಲ್ಲಿ ಒಬ್ಬನಾಗಿ ಬದುಕುವುದರಲ್ಲಿ ಯಾವುದೇ ಮಹತ್ವವಿಲ್ಲ. ಆದರೆ ಎಲ್ಲರಿಗಿಂತ ಭಿನ್ನವಾಗಿ ಬದುಕುವ ಸಾಹಸ ಪ್ರವೃತಿಯಲ್ಲಿ ಮಹತ್ವವಿದೆ. ನಿಸರ್ಗದ ಜೊತೆ ಹೊಂದಿಕೊಂಡು ಹೋಗುವಲ್ಲಿಯೂ ಸಾರ್ಥಕ ಬದುಕು ಇರಬಹುದು. ಆದರೆ ನಿಸರ್ಗದ ಭಾಗವಾಗಿರುವ ಬದುಕನ್ನು ಕುವೆಂಪು ಕಾದಂಬರಿಗಳು ಚಿತ್ರಿಸಿದರೆ, ನಿಸರ್ಗಕ್ಕೆ ಎದುರಾಗಿ ಅದನ್ನು ಪಳಗಿಸುತ್ತ, ಅದರಲ್ಲಿ ಸೋತರೂ ಪ್ರಯತ್ನದಲ್ಲೇ ಸಾರ್ಥಕತೆ ಇದೆ ಎಂದು ಕಾರಂತರ ಕಾದಂಬರಿಗಳು ಕಾಣಿಸುತ್ತವೆ.

ಕಾರಂತರ ಕಾದಂಬರಿಗಳಲ್ಲಿ ಹಳ್ಳಿಯಿಂದ ನಗರಕ್ಕೆ ಮಾಡುವ ಪಯಣಗಳಿರುವಂತೆ, ಗದ್ದೆಯಿಂದ ಮನೆಗೆ, ಕಾಡಿನಿಂದ ಮನೆಗೆ ಹಾಗೂ ಮನೆಯಿಂದ ಕಾಡಿಗೆ ಹೋಗುವ ಪುಟ್ಟ ಪಯಣಗಳೂ ಇವೆ. ಅವು ಬಾಳಿನ ದಾರ್ಶನಿಕ ನಿಲುವನ್ನು ಸೂಚಿಸುವ ಸಂಗತಿಗಳಾಗಿವೆ. 'ಗ್ರಾಮಾಯಣ'ದಲ್ಲಿ ಹೊಳೆಯ ಹರಿಯವಿಕೆಯು ನಿಸರ್ಗದ ಒಂದು ಸಾಕ್ಷಿ ಪ್ರಜ್ಞೆಯಾಗಿದ್ದರೆ, ಕಾರಂತರಲ್ಲಿ ಚಲಿಸದ ಬೆಟ್ಟವು ಮನುಷ್ಯರ ಬಾಳನ್ನು ಅಳೆಯುವ ನೈಸರ್ಗಿಕ ಸಂಕೇತವಾಗಿದೆ. ನಿಸರ್ಗದ ಜೊತೆ ಹೊಂದಿಕೊಂಡು ಹೋಗುವ ಹಾಗೂ ನಿಸರ್ಗದ ಎದುರಾಗಿ ಸೆಣಸುವ ಎರಡು ವಿಧಾನಗಳಿರುವಂತೆ, ನಿಸರ್ಗವನ್ನು ಒಂದು ಸಾಕ್ಷಿ ಪ್ರಜ್ಞೆಯಾಗಿಸಿಕೊಂಡು ಬದುಕುವ ಇನ್ನೊಂದು ವಿಧಾನವೂ ಇದೆ. ನಿಸರ್ಗವು ಕನ್ನಡ ಕಾದಂಬರಿಗಳಲ್ಲಿ ಹೀಗೆ ಅನೇಕ ಸಾಂಕೇತಿಕ ಆಯಾಮಗಳಲ್ಲಿ ಚಲನೆಗೆ ಒಳಪಟ್ಟಿದೆ. 'ಗ್ರಾಮಾಯಣ'ದಲ್ಲಿ ಬಾಳಾಚಾರ್ಯ ಮತ್ತು ದಾದಾ ನದಿಯ ಅಲೆಗಳಿಗೆ ವಿರುದ್ಧವಾಗಿ ಈಜುತ್ತ ಪಯಣ ಮಾಡುವುದು, ಅವರು ತಮ್ಮ ಊರಿನ ಕೇಡಿನ ಸಂಕೇತಗಳಾದ ಬಾಪೂ, ಪಡದಯ್ಯ, ಲಿಂಗಯ್ಯರ ವಿರುದ್ಧ ಹೋರಾಡುವ ಕ್ರಿಯೆಗೆ ಸಂಕೇತವೂ ಆಗಿಬಿಡುತ್ತದೆ.

೭.೬. ಗ್ರಾಮ-ನಗರ-ಮಹಾನಗರಗಳ ನಡುವಿನ ಅಂತರ್‌ಚಲನೆ

ನಾಗರಿಕತೆಯ ವಿಕಾಸದ ಕ್ರಮದಲ್ಲಿ ಕಾಡು-ಹಳ್ಳಿ-ಪಟ್ಟಣ-ನಗರ-ಮಹಾನಗರ ಇವು ಬೆಳೆದುಬಂದಿವೆ. ಆದರೆ ಈ ಜನವಸತಿಯ ಘಟಕಗಳ ನಡುವೆ ಅನೇಕ ಕಾರಣಗಳಿಗಾಗಿ ನಿರಂತರ ಅಂತರ್‌ಚಲನೆ ನಡೆಯುತ್ತಲೇ ಇದೆ. ಈ ಜನವಸತಿಯ ಘಟಕಗಳು ಮನುಷ್ಯರ ಜೀವನದಲ್ಲಿ ಪಯಣವನ್ನು ಹಲವು ಬಗೆಯಲ್ಲಿ ಪ್ರಚೋದಿಸಿವೆ. ಈ ಪ್ರಚೋದನೆಯು ವ್ಯಾಪಾರಕ್ಕಾಗಿ, ಮನರಂಜನೆಗಾಗಿ, ದುಡಿಮೆಗಾಗಿ, ಮನಶ್ಶಾಂತಿಗಾಗಿ ನಾನಾ ಕಾರಣಕ್ಕಾಗಿ ನಡೆದಿದೆ. ಈ ಕಾರಣದಿಂದ ಹುಟ್ಟಿದ ಚಲನೆಗಳ ಅಥವಾ ಪಯಣಗಳ ಪರಿಣಾಮಗಳು ಏಕರೂಪಿಯಾಗಿಲ್ಲ ಮತ್ತು ಬಹುರೂಪಿಯಾಗಿವೆ. ಹಳ್ಳಿ-ನಗರ-ಮಹಾನಗರಗಳ ನಡುವಿನ ಮನುಷ್ಯರ ಪಯಣಗಳ ಪ್ರಚೋದನೆ ಮತ್ತು ಪರಿಣಾಮಗಳ ಚಿತ್ರವನ್ನು ಕನ್ನಡ ಕಾದಂಬರಿಗಳು ಕಾಣಿಸಿರುವ ವಿಧಾನ ಏಕರೂಪಿಯಾಗಿಲ್ಲ. ಶಿವರಾಮ ಕಾರಂತರ ಎರಡೂ ಕಾದಂಬರಿಗಳಲ್ಲಿ ಕರಾವಳಿಯ ಪ್ರದೇಶದೊಳಗೆ, ಕರಾವಳಿಯಿಂದ ಅಕ್ಕಪಕ್ಕದ ಪ್ರದೇಶಗಳ ಒಳಗೆ ಮತ್ತು ಕರಾವಳಿಯಿಂದ ಹೊರ ರಾಜ್ಯಗಳಿಗೆ ಮನುಷ್ಯರು ಪಯಣ ಮಾಡುವ ಮೂರುಸ್ತರದ ವಿನ್ಯಾಸಗಳಿವೆ. 'ಅಳಿದಮೇಲೆ' ಕಾದಂಬರಿಯ ನಾಯಕ ಪಾತ್ರವಾದ ಯಶವಂತರಾಯರು ಬೆನಕನಹಳ್ಳಿ-ಪುತ್ತೂರು-ಮುಂಬೈಗೆ ಮಾಡುವ ಪಯಣವಿದೆ. ಯಶವಂತರಾಯರ ಹಣದ ವಿಲೇವಾರಿಗಾಗಿ ನಿರೂಪಕ ಪಾತ್ರವು ಮುಂಬೈ-ಪುತ್ತೂರು-ಕುಮಟೆ-ಬೆನಕನಹಳ್ಳಿಗೆ ಪಯಣ ಮಾಡುವ ಎರಡನೇ ವಿವ್ಯಾಸದ ಪಯಣವಿದೆ. ಈ ಎರಡೂ ವಿನ್ಯಾಸದ ಪಯಣಗಳ ಬಗ್ಗೆ ಕಾರಂತರ ಕಾದಂಬರಿಗಳು ತೋರಿರುವ ಸಂಕೀರ್ಣ ಧೋರಣೆ ಸ್ವಾರಸ್ಯಕರವಾಗಿದೆ.

ಯಾಕೆಂದರೆ ಈ ಪಯಣಗಳು ಆಯಾ ವರ್ಗ, ಜಾತಿಯವರ ಮೇಲೆ ಬೇರೆಬೇರೆ ಪರಿಣಾಮ ಬೀರುತ್ತ ಹೋಗುತ್ತವೆ.

ನಿದರ್ಶನಕ್ಕೆ ಹೇಳುವುದಾದರೆ, 'ಅಳಿದಮೇಲೆ' ಕಾದಂಬರಿಯ ಯಶವಂತರಾಯರಂತಹ ಉಳ್ಳವರಿಗೆ ಕುಮಟೆಯಿಂದ ಮುಂಬೈಯೆಡೆಗಿನ ಮಾಡುವ ಚಲನೆ ಬಿಡುಗಡೆಯಾಗಿದೆ. ತನಗೆ ಮಾನಸಿಕವಾಗಿ ಕಿರುಕುಳ ಕೊಡುವ ಜನರಿಂದ ಬಿಡುಗಡೆಯಾಗಿದೆ. ಆದರೆ 'ಬೆಟ್ಟದಜೀವ'ದಲ್ಲಿನ ಶಂಭು ತಂದೆ-ತಾಯಿಗೆ ಹಿಂಸೆ ನೀಡಿ ಮುಂಬೈಗೆ ಚಲನೆ ಅಥವಾ ಪಯಣ ಮಾಡಿದವನು. ಅವನಿಗೆ ಈ ಚಲನೆ ತನ್ನ ಪಾಪಪ್ರಜ್ಞೆಯಿಂದ ತಪ್ಪಿಸಿಕೊಳ್ಳುವ ನೆಪವಾಗಿದೆ. ಹಳ್ಳಿ ಮತ್ತು ಪಟ್ಟಣದ ಘಟಕಗಳು ಕೆಲವರ ಪಾಲಿಗೆ ಹಿಂಸೆಯ ತಾಣಗಳಾಗಿದ್ದರೆ, ಇಲ್ಲಿ ಕಥಾನಾಯಕನ ಏಕತಾನತೆ ಮತ್ತು ಬಿಡುಗಡೆಯ ಪಯಣಕ್ಕೆ ಮಹಾನಗರಗಳು ಕಾರಣವಾಗಿವೆ. ಯಶವಂತರಾಯರು ಗ್ರಾಮೀಣ ಮತ್ತು ಸಣ್ಣಪಟ್ಟಣಗಳಲ್ಲಿ ಮನುಷ್ಯ ಸಂಬಂಧದಲ್ಲಿ ಹುಟ್ಟುವ ಬಿರುಕು ಹಾಗೂ ಪತನಗಳಿಂದ ತಪ್ಪಿಸಿಕೊಂಡು ಆಜ್ಞಾತವಾಗಿ ಕಾಂಕ್ರೀಟ್ ನಗರಗಳೆಡೆಗೆ ಪಯಣಿಸುವರು. ಆದರೆ ಇದೇ ಮಹಾನಗರವು ಶಂಭುವಿನಂತಹ ಮತ್ತೊಬ್ಬ ತರುಣನಿಗೆ ಇನ್ನೊಂದು ಬಗೆಯ ಬಿಡುಗಡೆಯಾಗುತ್ತದೆ. ಕಾರಂತರ 'ಮರಳಿಮಣ್ಣಿಗೆ'ಯಲ್ಲಿ ಒಂದೇ ಕುಟುಂಬಕ್ಕೆ ಹಾಗೂ ಎರಡು ತಲೆಮಾರಿಗೆ ಸೇರಿದ ಲಚ್ಚ ಮತ್ತು ರಾಮ ಮಾಡುವ ಪಯಣಗಳ ಪರಿಣಾಮಗಳು ವಿರುದ್ಧ ದೆಸೆಯಲ್ಲಿವೆ. ಆದ್ದರಿಂದ ನಗರ ಹಳ್ಳಿಗಳ ನಡುವೆ ಮಾಡುವ ಪಯಣದ ಪರಿಣಾಮಗಳು, ಆಯಾ ವ್ಯಕ್ತಿಯ ಉದ್ದೇಶದಿಂದ ಭಿನ್ನಭಿನ್ನವಾಗುತ್ತವೆ.

ಕುವೆಂಪುರವರ 'ಕಾನೂರು ಹೆಗ್ಗಡಿತಿ'ಯಲ್ಲಿ ಹೂವಯ್ಯ ಊಳಿಗಮಾನ್ಯ ವ್ಯವಸ್ಥೆಯಿಂದ ನಗರಕ್ಕೆ ಹೋಗಿ ಶಿಕ್ಷಣ ಪಡೆದು ಹಳ್ಳಿಗೆ ಮರುಪಯಣ ಬೆಳಸಿ ಜ್ಞಾನ, ಮಾನವೀಯತೆ, ಜೀವಪರ ನಿಲುವನ್ನು ತೋರುವನು. ಆದರೆ ಇದೇ ಹೂವಯ್ಯನ ಜೊತೆಗೆ ಹೋಗಿ ವಿದ್ಯಾಭ್ಯಾಸ ಪಡೆದು ಬಂದ ರಾಮಯ್ಯನಲ್ಲಿ ಇಂತಹ ದೊಡ್ಡ ಆದರ್ಶಗಳು ಕಾಣುವುದಿಲ್ಲ. ಅಂದರೆ ಒಂದೇ ಸ್ಥಳಕ್ಕೆ ಒಂದೇ ಉದ್ದೇಶದಿಂದ ಇಬ್ಬರು ಮಾಡುವ ಪಯಣಗಳು ವಿಭಿನ್ನ ಪರಿಣಾಮ ತರುತ್ತವೆ ಎಂದು ಕಾದಂಬರಿಯಲ್ಲಿ ಕಾಣಿಸುತ್ತದೆ. ಮೈಸೂರು, ತೀರ್ಥಹಳ್ಳಿ, ಸಿಂಬಾವಿ, ಸೀತೂರು, ಮೇಗರವಳ್ಳಿ, ಬೆಟ್ಟಳ್ಳಿ, ಕೋಣೂರು, ಲಕ್ಕುಂದ, ಮುತ್ತಳ್ಳಿ, ಕಾನೂರು ಮುಂತಾದ ಊರುಗಳ ನಡುವೆ ಇಲ್ಲಿನ ಪಾತ್ರಗಳು ಚಲನೆ ಮಾಡುತ್ತವೆ. ನಗರದಿಂದ ಬಂದ ಬ್ರಿಟಿಷರು ಹಾಗೂ ಪಾದ್ರಿಗಳು ಮಾಡುವ ಪಯಣಗಳು ಕ್ರಿಶ್ಚಿಯಾನಿಟಿಯನ್ನು ಮತ್ತು ಶಿಕ್ಷಣವನ್ನು ತರುತ್ತವೆ. ಇದರ ಜತೆಗೆ ನಗರದಿಂದ ಬರುವ ಪೊಲೀಸು, ಅಧಿಕಾರಿಗಳು, ನಿಸರ್ಗದ ಜೊತೆ ಬದುಕುತ್ತಿರುವ ಮಲೆನಾಡಿನ ಜನರನ್ನು ಶೋಷಣೆಗೆ ಒಳಪಡಿಸುವ ಕಾನೂನುಗಳನ್ನು ತರುತ್ತಾರೆ. ಇದಕ್ಕೆ ಮಾರ್ಕನೆಂಬ ಅಧಿಕಾರಿ ಮೂಲಕ ಬಗನಿ ಹೆಂಡ ಇಳಿಸುವುದಕ್ಕೆ ವಿರುದ್ಧವಾಗಿರುವ ಕಾನೂನು ಮಲೆನಾಡಿಗೆ ಬರುತ್ತದೆ. ಪಾದ್ರಿಗಳ

ಮೂಲಕ ಕ್ರಿಶ್ಚಿಯಾನಿಟಿ ಹಾಗೂ ಶಿಕ್ಷಣ, ಪೊಲೀಸರ ಮೂಲಕ ಕಾನೂನು ಹಾಗೂ ಶಿಕ್ಷೆ ಹೀಗೆ ಹಲವಾರು ಸಂಗತಿಗಳ ಮಲೆನಾಡಿಗೆ ಪಯಣ ಮಾಡಿ ಬರುತ್ತವೆ.

ಯಾರು ಎಲ್ಲಿಂದ ಬಂದರು ಅಥವಾ ಎಲ್ಲಿಗೆ ಹೋದರು ಎನ್ನುವುದರ ಜತೆಗೆ, ಹಾಗೆ ಹೋದವರ ಸಾಮಾಜಿಕ ಹಿನ್ನೆಲೆ ಆಲೋಚನಕ್ರಮ, ಜೀವನ ಉದ್ದೇಶ ಮತ್ತು ಅಂತಸ್ತುಗಳು ಸಹ ಪಯಣದ ಪರಿಣಾಮಗಳನ್ನು ವಿಭಿನ್ನವಾಗಿಸುತ್ತವೆ. 'ಬೆಟ್ಟದಜೀವ'ದ ಆರಂಭದಲ್ಲಿನ ಶಿವರಾಮಯ್ಯನ ಪಯಣದಲ್ಲಿ ನಗರದವನೆಂಬ ಕಾರಣಕ್ಕಾಗಿಯೇ ಸಿಗುವ ಗೌರವ ಗೋಪಾಲಯ್ಯನ ಮನೆಯಲ್ಲಿನ ಆಶ್ರಯಕ್ಕೂ ಕಾರಣವಾಗುತ್ತದೆ. ಪಯಣದಲ್ಲಿ ಶಿವರಾಮಯ್ಯನಿಗೆ ಸಿಗಲಾಗದ ಜೀವನದ ಅನುಭವಗಳು ಕಾಟುಮೂಲೆಯಲ್ಲಿ ಗೋಪಾಲಯ್ಯನೊಂದಿಗಿನ ಚಲನೆಗಳಲ್ಲಿ ಸಿಗುತ್ತವೆ. ರಾವಬಹದ್ದೂರರ 'ಗ್ರಾಮಾಯಣ'ದಲ್ಲಿ ಬರುವ ಜಿನ್ನಪ್ಪ ದಾದಾನ ಮೇಲಿನ ಕೇಸಿನಿಂದ ಜಾಮೀನು ನೀಡಿ ಬಿಡಿಸಿಕೊಂಡು ಬರಲು ಸಂಗಡ ತಾಲ್ಲೂಕಿಗೆ ಹೋಗುವ ಪ್ರಸಂಗವಿದೆ. ಈ ಪ್ರಸಂಗದಲ್ಲಿ ಪಟ್ಟಣವು ಹಳ್ಳಿಗರಿಗೆ ಶೋಷಣೆ ಮಾಡುವ ಸರ್ಕಾರಿ ವ್ಯವಸ್ಥೆ ಇರುವ ಜಾಗವಾಗಿದೆ. ದಾದಾ ತಪ್ಪು ಮಾಡದಿದ್ದರೂ ಪಟ್ಟಣದಿಂದ ಬಂದ ಮಾಮಲೇದಾರ, ಅದೇ ಊರಿನ ಶೇಷಪ್ಪ ಮುಂತಾದವರು ತಮ್ಮ ಸ್ವಾರ್ಥಕ್ಕಾಗಿ ಕಾನೂನುಗಳ ಮೂಲಕ ಶೋಷಣೆ ಮಾಡುವುದಿದೆ. ಪಾದಳ್ಳಿ ಬರೋಡಯಿಂದ ದಾದಾ ಮಾಡುವ ಚಲನೆ ಅವನಿಗೆ ಗರಡಿಮನೆಯ ಪಟ್ಟವನ್ನು ತಂದುಕೊಟ್ಟರೆ, ಪಾದಳ್ಳಿಯ ಆಳುವ ವರ್ಗ ಅವನನ್ನು ಒಬ್ಬ ಪೋಲಿ ಹಾಗೂ ದುಷ್ಟನಂತೆ ಕಾಣುತ್ತದೆ. ಗ್ರಾಮ–ನಗರದ ನಡುವೆ ನಡೆಯುವ ಪಯಣಗಳು ಕೆಲವರಿಗೆ ಉಸಿರು ಕಟ್ಟುವ ಜಾಗದಿಂದ ಬಿಡುಗಡೆಯ ಕಡೆ ಚಲಿಸುವ ಆಯಾಮವನ್ನು ನೀಡಿದರೆ, ಕೆಲವರಿಗೆ ಒಳ್ಳೆಯ ಜೀವನಕ್ರಮದಿಂದ ಕೆಟ್ಟ ಜೀವನಕ್ರಮದ ಕಡೆಗೆ ಚಲಿಸುವ ಆಯಾಮ ಕೊಡುತ್ತವೆ. ಕೆಲವರ ಪಯಣಗಳ ಮೂಲಕ ನಗರಗಳು ವಿವೇಕವನ್ನು, ತಿಳುವಳಿಕೆಯನ್ನು, ಮನುಷ್ಯತ್ವವನ್ನು ಸೃಷ್ಟಿಮಾಡುವ ವಿದ್ಯಾಕೇಂದ್ರಗಳಾಗಿ ಕಂಡರೆ, ಮತ್ತೆ ಕೆಲವರ ಮೂಲಕ ಅವು ಅಲ್ಲಿನ ಕ್ರೂರವಾದ ಕಾನೂನುಗಳನ್ನು ಹೇರುವ ಜಾಲವಾಗಿ ಕಂಡುಬರುತ್ತವೆ.

ಕೊನೆ ಟಿಪ್ಪಣಿ

೧. ಲಕ್ಷ್ಮಣ ಕೊಡಸೆ(ಸಂ), 'ಕನ್ನಡ ವಿಮರ್ಶಾ ವಿವೇಕ', ಪು.೨೧೯

ಅಧ್ಯಾಯ ಎಂಟು

ಉಪಸಂಹಾರ

ಅಧ್ಯಾಯ ಎಂಟು

ಉಪಸಂಹಾರ

ಕನ್ನಡದ ಪ್ರಥಮ ಸಾಮಾಜಿಕ ಕಾದಂಬರಿ ಹುಟ್ಟಿ ಈ ವರ್ಷಕ್ಕೆ ಬಂದು ನೂರಾ ಹದಿನಾರು ವರ್ಷಗಳೇ ಆದವು. ಕನ್ನಡದ ಮೊದಲ ಕಾದಂಬರಿ 'ಇಂದಿರಾಬಾಯಿ'ಯಿಂದ (೧೮೯೯) ಇತ್ತೀಚೆಗೆ ಬಂದ 'ಯಾನ' ಕಾದಂಬರಿಯವರೆಗೂ ಕನ್ನಡ ಕಾದಂಬರಿಗಳ ಲೋಕ ವಿಸ್ತಾರವಾಗಿ ಬೆಳೆದಿದೆ. ಕನ್ನಡ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುವ ಮುಖ್ಯ ಆಶಯಗಳು ಯಾವುವು ಎಂದು ಒಂದೊಮ್ಮೆ ಪಟ್ಟಿ ಮಾಡಿದರೆ, ಬಹುಶಃ ಅತಿ ಹೆಚ್ಚಾಗಿ ಕಾಣಿಸಿಕೊಂಡ ಆಶಯ ಪಯಣವೇ ಇರಬೇಕು. 'ಇಂದಿರಾಬಾಯಿ'ಯಲ್ಲಿ ಸಮುದ್ರಯಾನ ಮಾಡುವ ಕಾರಣದಿಂದ ಬಹಿಷ್ಕಾರ ಹಾಕುವ ಘಟನೆ ನಡೆಯುತ್ತದೆ. ಹಾಗೇ ಬಹಿಷ್ಕಾರಕ್ಕೆ ಹೆದರದೆ ಪಯಣ ಮಾಡಿ ಇಂಗ್ಲೆಂಡಿಗೆ ಹೋಗಿ ಐ.ಸಿ.ಎಸ್. ಪಾಸ್ ಮಾಡಿ ಬಂದು, ಕಮಲಾಪುರದ ಅಸಿಸ್ಟೆಂಟ್ ಕಲೆಕ್ಟರ್ ಹುದ್ದೆಯನ್ನು ಭಾಸ್ಕರರಾಯನು ಅಲಂಕರಿಸುವನು. ಹೀಗೆ ಪಯಣ ಮತ್ತು ಅದರಿಂದ ಸಮಾಜದಲ್ಲಿಯೂ ವ್ಯಕ್ತಿಯ ಬಾಳಿನಲ್ಲೂ ಸಂಭವಿಸುವ ಬದಲಾವಣೆಗಳ ಚಿತ್ರಣದ ಮೂಲಕ ಕಾದಂಬರಿ ಮುಗಿಯುತ್ತದೆ. ಸಮುದ್ರಯಾನ ಮಾಡುವುದಕ್ಕೆ ಸಾಂಪ್ರದಾಯಿಕ ಸಮಾಜವು ನಿಷೇಧ ವಿಧಿಸಿದರೆ, ಆ ನಿಷೇಧವನ್ನು ಮೀರಿ ಕೆಲವು ಗಟ್ಟಿಗರು ಪಯಣ ಮಾಡಿ ಒಂದು ಹೊಸ ಬದುಕನ್ನು ಆರಂಭ ಮಾಡುವರು. ಅವರು ಹೊಸ ಮಾನವೀಯ ಆಲೋಚನ ಕ್ರಮದೊಂದಿಗೆ ಬದುಕನ್ನು ಆರಂಭಿಸುವರು. ಇದು ಈ ಕಾದಂಬರಿಯ ಮುಖ್ಯ ವಸ್ತುವಾಗಿದೆ. ಮೊದಲಘಟ್ಟದ ಈ ಕಾದಂಬರಿಯ ತುಂಬ ಪಯಣದ ವಿವರಗಳಿವೆ. ಇಂದಿರಾಗೆ ತೊಂದರೆ ಕೊಡುವ ಪಂಥರು ಬೇರೆ ಊರಿನಿಂದ ಬರುವರು. ಅವರಿಂದ ತನ್ನನ್ನು ಉಳಿಸಿಕೊಳ್ಳಲು ಇಂದಿರಾ ಇನ್ನೊಂದು ಜಾಗಕ್ಕೆ ಪಯಣ ಮಾಡುವಳು. ಹಾಗೆ ಹೊಸ ಜಾಗಕ್ಕೆ ಆಕೆ ಚಲಿಸಿದಾಗ ಅಲ್ಲಿ ಅವಳಿಗೆ ಅವಳನ್ನು ತಂದೆತಾಯಿಗಿಂತಲೂ ಪ್ರೀತಿಸುವ ಒಂದು ಕುಟುಂಬದ ರಕ್ಷಣೆ ಸಿಗುತ್ತದೆ. ಚಲನೆಗಳು ಮಾನವೀಯ ವಿಸ್ಮಯವೆನಿಸುವ ಸಂಬಂಧಗಳನ್ನು ಸೃಷ್ಟಿಸುವ ಕೆಲಸ ಮಾಡಬಲ್ಲವು.

ಎಸ್.ಎಲ್.ಭೈರಪ್ಪನವರ 'ಯಾನ'ದಲ್ಲಿಯೂ ಇದೇ ಬಗೆಯಲ್ಲಿ ಪಾತ್ರಗಳ ಪಯಣಕ್ಕೂ ಅವುಗಳ ಮಾನವೀಯ ಸಂಬಂಧಗಳಿಗೂ ಸಂಬಂಧವಿದೆ. ಕಾದಂಬರಿಯ ಹೆಸರು ಯಾನವು ಪಯಣವನ್ನೇ ಮುಖ್ಯ ಆಶಯವನ್ನಾಗಿ ಇಟ್ಟುಕೊಂಡಿದೆ. ಅದರ ವಸ್ತು ಭೂಲೋಕದಿಂದ ಇನ್ನೊಂದು ಗ್ರಹಕ್ಕೆ ಅಂತರಿಕ್ಷ ವಾಹನದಲ್ಲಿ ಪಯಣಿಸುವ ಗಂಡು-ಹೆಣ್ಣಿನ ನಡುವಿನ ದೈಹಿಕ ಮತ್ತು ಮಾನಸಿಕ ಸಂಬಂಧದ ಚಿತ್ರಣವಾಗಿದೆ. ಆಕಸ್ಮಿಕವೆಂಬಂತೆ 'ಇಂದಿರಾಬಾಯಿ' ಮತ್ತು 'ಯಾನ' ಎರಡರಲ್ಲೂ ಪಯಣದ ಭಾಗವಾಗಿ ಗಂಡು ಹೆಣ್ಣಿನ ಸಂಬಂಧಗಳಿವೆ. ಕನ್ನಡದ ಮೊದಲ ಮತ್ತು ಇತ್ತೀಚಿನ ಕಾದಂಬರಿಗಳು ಪಯಣದ ಆಶಯವನ್ನು ಹೇಗೆ ಆಧರಿಸಿವೆ ಎನ್ನುವುದು ಆಶ್ಚರ್ಯ ತರುತ್ತದೆ. ಇಡೀ ಕನ್ನಡ ಕಾದಂಬರಿ ಲೋಕವನ್ನು ಆವರಿಸಿಕೊಂಡಿರುವ ಮುಖ್ಯ ಆಶಯಗಳಲ್ಲಿ ಪಯಣವು ಒಂದಿರಬಹುದು ಎಂಬುದು ಇದರಿಂದ ಸೂಚಿತವಾಗುತ್ತದೆ.

ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ ಕಾದಂಬರಿಯು ಹುಟ್ಟಿದ್ದು ಪಾಶ್ಚಿಮಾತ್ಯ ಆಧುನಿಕತೆಯ ಪ್ರಭಾವದಿಂದ. ಪಾಶ್ಚಿಮಾತ್ಯ ಆಧುನಿಕ ಮೌಲ್ಯಗಳು ಭಾರತೀಯ ಸಾಂಪ್ರದಾಯಿಕ ಬದುಕಿನಲ್ಲಿ ಉಂಟುಮಾಡಿದ ಮೌಲ್ಯಪಲ್ಲಟ ಮತ್ತು ಹುಟ್ಟಿಸಿದ ಹೊಸ ವಿಚಾರಗಳು, ಇದಕ್ಕೆ ಮುಖ್ಯ ವಸ್ತುವಾದವು. ಹೀಗಾಗಿ ಕನ್ನಡ ಕಾದಂಬರಿಗಳು ಪಾಶ್ಚಿಮಾತ್ಯ ಆಧುನಿಕತೆಯ ಪ್ರವೇಶದಿಂದ ಭಾರತದ ಸಾಂಪ್ರದಾಯಿಕ ಸಮಾಜದಲ್ಲಿ ಉಂಟಾದ ತಳಮಳ ಸಂಭ್ರಮ ಹಾಗೂ ಮೌಲ್ಯ ಪಲ್ಲಟಗಳನ್ನು ಚಿತ್ರಿಸುವ ಕೆಲಸವನ್ನು ಮಾಡಿದವು. ಕಾದಂಬರಿಯ ಮುಖ್ಯಪಾತ್ರಗಳು ವಿದ್ಯಾಭ್ಯಾಸಕ್ಕಾಗಿ, ಉದ್ಯೋಗಕ್ಕಾಗಿ, ವ್ಯಾಪಾರಕ್ಕಾಗಿ ತಾವು ಹುಟ್ಟಿದ ಊರುಗಳಿಂದ ಬೇರೆಡೆಗೆ ಪಯಣ ಬೆಳೆಸುವ ಸನ್ನಿವೇಶಗಳು ಇಲ್ಲಿ ಸಹಜವಾಗಿವೆ; ಈ ಪಾತ್ರಗಳು ಮರಳಿ ಬರುವಾಗ ಹೊಸಮೌಲ್ಯಗಳನ್ನು ತಂದು ತಾವು ಹುಟ್ಟಿದ ಊರುಗಳಲ್ಲಿ ಸಂಚಲನ ಉಂಟುಮಾಡುತ್ತವೆ. 'ಕಾನೂರು ಹೆಗ್ಗಡಿತಿ'ಯ ಹೂವಯ್ಯ, 'ಮರಳಿ ಮಣ್ಣಿಗೆಯ' ಲಚ್ಚ, 'ಕುಸುಮಬಾಲೆ'ಯ ಚೆನ್ನ, 'ಭಾರತೀಪುರ'ದ ಜಗನ್ನಾಥ ಹೀಗೆ ನಿದರ್ಶನಗಳನ್ನು ಕೊಡಬಹುದು. ಈ ಪಾತ್ರಗಳ ಜತೆಗೆ ಆಧುನಿಕತೆಯ ಕುರುಹುಗಳಾದ ಯೂರೋಪಿಯನ್ ಪೋಲೀಸ್, ಕೋರ್ಟು, ಕಛೇರಿ, ಪಾದ್ರಿಗಳು, ಬಸ್ಸು, ಕಾಫಿ, ಬೈಸಿಕಲ್, ಕ್ರಾಪುಗಳು ಸ್ಥಳೀಯ ಜನರ ಆಲೋಚನ ಕ್ರಮ ಮತ್ತು ಮೌಲ್ಯಗಳಲ್ಲಿ ಪಲ್ಲಟವನ್ನುಂಟು ಮಾಡಿದ್ದನ್ನು ಕನ್ನಡ ಕಾದಂಬರಿಗಳು ಕಾಣಿಸಿವೆ. ಒಂದರ್ಥದಲ್ಲಿ ಕರ್ನಾಟಕದ ಸಮಾಜವೇ ತನ್ನ ಬದುಕಿನಲ್ಲಿ ಮಾಡಿದ ಆಂತರಿಕ ಪಯಣದ ಕಥನವಿದು.

ವಿಶೇಷವೆಂದರೆ, ಕನ್ನಡ ಕಾದಂಬರಿಗಳ ಸೃಷ್ಟಿಕ್ರಿಯೆಯ ಒಳಗಡೆಯೇ ಕಾದಂಬರಿಕಾರರ ಪಯಣದ ಆಯಾಮವಿರುವುದು. ತಾವು ಹುಟ್ಟಿ ಬೆಳೆದ ಊರು ಮತ್ತು ಅಲ್ಲಿ ಪಡೆದ ಅನುಭವಗಳನ್ನು ಅದೇ ಊರಿನಲ್ಲಿದ್ದು ಕಾದಂಬರಿಯನ್ನು ರಚಿಸಿದವರು ಬಹಳ ಕಡಿಮೆ; ಬದಲಿಗೆ ಹುಟ್ಟಿ ಬೆಳೆದ ಊರಿನಲ್ಲಿ ಪಡೆದ ಅನುಭವಗಳನ್ನು ಇನ್ನೊಂದು ಊರಿಗೆ ಹೋಗಿ ಅಲ್ಲಿ ನೆಲೆಸಿ ಅವನ್ನು ನೆನಪಿಗೆ ತಂದುಕೊಂಡು ಕಾದಂಬರಿ ರಚಿಸಿರುವ ನಿದರ್ಶನಗಳೇ ಹೆಚ್ಚು. ಶಿವರಾಮ ಕಾರಂತರ 'ಚೋಮನದುಡಿ', ಅನಂತಮೂರ್ತಿಯವರ 'ಸಂಸ್ಕಾರ', ಚಿತ್ತಾಲರ 'ಮೂರುದಾರಿಗಳು',

ನಾಗವೇಣಿಯವರ 'ಗಾಂಧಿಬಂದ', ಕುವೆಂಪುರವರ ಎರಡೂ ಕಾದಂಬರಿಗಳು, ಲೇಖಕರು ಇನ್ನೊಂದು ಊರಿನಲ್ಲಿದ್ದಾಗ ರಚಿಸಿದವಾಗಿವೆ. ಅಂದರೆ, ಕಾದಂಬರಿಯ ರಚನೆಯ ಹಿಂದೆ ಲೇಖಕರು ತಾವು ಹುಟ್ಟಿ ಬೆಳೆದ ಪರಿಸರದಿಂದ ಭೌತಿಕವಾಗಿ ದೂರಹೋಗಿ ಮಾನಸಿಕವಾದ ದೂರವನ್ನು ನಿರ್ಮಿಸಿಕೊಂಡು, ತಮ್ಮ ಬಾಲ್ಯಕಾಲದ ಅನುಭವ ಲೋಕಕ್ಕೆ ನೆನಪುಗಳ ಪಯಣ ಮಾಡಿ ಅವನ್ನು ಮರುಕಲ್ಪಿಸಿಕೊಂಡು ಬರೆದಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡದ ಆಯ್ದ ಕಾದಂಬರಿಗಳನ್ನು ಪಯಣದ ಪರಿಕಲ್ಪನೆಯ ಮೂಲಕ ವಿಶ್ಲೇಷಿಸಿದಾಗ ದಕ್ಕಿದ ಮುಖ್ಯ ಫಲಿತಗಳನ್ನು ಹೀಗೆ ವಿವರಿಸಬಹುದು:

೧. ಅಧ್ಯಯನಕ್ಕೆ ಆರಿಸಿಕೊಂಡಿರುವ ಕಾದಂಬರಿಗಳಲ್ಲಿ ಪಯಣದ ಪರಿಕಲ್ಪನೆ ಮೂಲತಃ ಮನುಷ್ಯರ ಪಯಣದ ಎಳೆಯಿಂದ ಶುರುವಾಗುತ್ತದೆ. ಆದರೂ ಅದು ಮುಂದೆ ನಿಸರ್ಗದ ವಿವರಗಳ ಜತೆ ಬೆಸೆದುಕೊಳ್ಳುತ್ತದೆ. ಕನ್ನಡ ಕಾದಂಬರಿಗಳ ವಿಶಿಷ್ಟತೆ ಇರುವುದೇ, ಮನುಷ್ಯರ ಪಯಣವನ್ನು ನಿಸರ್ಗದ ಜೊತೆಗೆ ಸಂಯೋಜನೆಗೊಳಿಸಿ ನೋಡುವುದರಲ್ಲಿ. ಹೀಗಾಗಿ ಮನುಷ್ಯರ ಪಯಣದ ಸ್ವರೂಪವನ್ನು ಅನೇಕ ಸಲ ನಿರ್ಧರಿಸುವುದು ನಿಸರ್ಗ. ಕೆಲವೊಮ್ಮೆ ವ್ಯಕ್ತಿಗಳ ಪಯಣದ ಗತಿಯನ್ನು ನಿರ್ಧರಿಸುವ ಮತ್ತು ತಡೆಯೊಡ್ಡುವ ಕೆಲಸವನ್ನು ಸಹ ನಿಸರ್ಗ ಮಾಡುತ್ತದೆ. ಪಯಣದ ವಿನ್ಯಾಸವು ಎಷ್ಟೇ ಮನುಷ್ಯ ಕೇಂದ್ರಿತವಾಗಿದ್ದರೂ, ಅದರ ಲಯ ಮತ್ತು ಗತಿಯನ್ನು ನಿರ್ಧರಿಸುವ ಶಕ್ತಿಗಳಲ್ಲಿ ನಿಸರ್ಗವು ಒಂದಾಗಿದೆ. ಈ ಸಂಗತಿ ಈ ಕಾದಂಬರಿಗಳ ವಿಶ್ಲೇಷಣೆಯಿಂದ ಅರಿವಿಗೆ ಬರುತ್ತದೆ.

೨. ಅಧ್ಯಯನಕ್ಕೆ ಆರಿಸಿಕೊಂಡಿರುವ ಕಾದಂಬರಿಗಳಲ್ಲಿ ಪಯಣದ ಒಂದು ಉದ್ದೇಶವು ಗಂಡು-ಹೆಣ್ಣಿನ ಸಂಬಂಧದ ಜೊತೆಗೂ ಕೂಡಿಕೊಂಡಿದೆ. ಇದು ಮನುಷ್ಯರ ಕಾಮ, ಪ್ರೇಮ ಮತ್ತು ಸಂತಾನ ಪಡೆಯುವ ಪ್ರವೃತ್ತಿ ಮತ್ತು ಜೈವಿಕ ಕ್ರಿಯೆಗಳ ಭಾಗವಾಗಿದೆ. ಕಾದಂಬರಿಗಳ ಪಾತ್ರಗಳು ಜೀವನ ಸಂಗಾತಿಯನ್ನು ಹುಡುಕಿಕೊಂಡು ಪಯಣವನ್ನು ಮಾಡುತ್ತವೆ. ವಿಶೇಷವೆಂದರೆ, ಹುಡುಕಾಟಕ್ಕಾಗಿ ಮಾಡುವ ಪಯಣವು, ಸಾಮಾಜಿಕವಾಗಿ ಅವರ ಮಿಲನಕ್ಕೆ ಅಡ್ಡಿಯಾಗಿರುವ ಅಡೆತಡೆಗಳನ್ನು ದಾಟುವುದಕ್ಕೆ ಮಾಡುವ ಸಾಹಸವೂ ಆಗುತ್ತದೆ. ಹೀಗಾಗಿ ಪಾತ್ರಗಳು ಮಾಡುವ ಈ ಸಾಹಸೀ ಪಯಣದ ವಿವರಗಳು, ಪರೋಕ್ಷವಾಗಿ ಭಾರತೀಯ ಸಮಾಜದ ಸ್ಥಗಿತತೆ ಹಾಗೂ ಚಲನಶೀಲತೆಯ ಸಂಕೀರ್ಣ ಚಿತ್ರವನ್ನು ಕೊಡುತ್ತವೆ. ಈ ಚಿತ್ರಗಳು ಹೆಚ್ಚಾಗಿ ಕುವೆಂಪು ಕಾದಂಬರಿಗಳಲ್ಲಿ ಇವೆ.

೩. ಪ್ರೇಮಿಗಳು ಮಾಡುವ ಪಯಣದಲ್ಲಿ ಗಂಡುಹೆಣ್ಣಿನ ಸಂಬಂಧಗಳು ವಿಕಾರ ಅಥವಾ ಆದರ್ಶಗಳ ರೂಪವನ್ನು ಪಡೆಯುವುದನ್ನು ಕಾದಂಬರಿಗಳು ಶೋಧಿಸುತ್ತವೆ. ಕಾದಂಬರಿಗಳಲ್ಲಿ ಬರುವ ನಿರೂಪಕ ಪಾತ್ರಗಳು ಕಥೆಯಲ್ಲಿ ಬರುವ ಗಂಡುಹೆಣ್ಣಿನ ವಿಶಿಷ್ಟ ಸಂಬಂಧಗಳನ್ನು ತಿಳಿಯುವ ಸಲುವಾಗಿಯೇ ಪಯಣ ಮಾಡುತ್ತವೆ. ಹೀಗೆ ನಿರೂಪಕರ ನೆಪದಲ್ಲಿ

ಕಾದಂಬರಿಗಳು ಗಂಡು ಹೆಣ್ಣಿನ ಸಂಬಂಧದ ಹಲವು ವಿನ್ಯಾಸಗಳನ್ನು ಶೋಧಿಸುತ್ತವೆ. ಈ ಶೋಧನೆಯ ವಿನ್ಯಾಸವು ಕಾರಂತರ ಕಾದಂಬರಿಗಳಲ್ಲಿ ವಿಶೇಷವಾಗಿ ಕಾಣುತ್ತದೆ.

೪. ಕಾದಂಬರಿಗಳಲ್ಲಿ ಪಯಣವು ಮುಖ್ಯ ಆಶಯವಾಗಿದ್ದು, ಪಯಣದ ಲೋಕಕ್ಕೆ ಸಂಬಂಧಿಸಿದ ಅನೇಕ ವಿವರಗಳು ಇದರ ಭಾಗವಾಗಿ ಬರುತ್ತವೆ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಲಿಸುವ ಕ್ರಿಯೆಯನ್ನು ಸರಳವಾಗಿ ಪಯಣವೆಂದು ಕರೆಯಬಹುದಾದರೆ, ಈ ಪ್ರಕ್ರಿಯೆಯಲ್ಲಿ ಬೇರೆಬೇರೆ ಘಟಕಗಳ ದೊಡ್ಡಲೋಕವೇ ಕಾದಂಬರಿಗಳಲ್ಲಿ ಚಿತ್ರಣಗೊಳ್ಳುತ್ತದೆ. ಈ ಲೋಕದಲ್ಲಿ ಪಯಣಕ್ಕಾಗಿ ಬಳಕೆಯಾಗುವ ದೋಣಿ, ಬಸ್ಸು ಸೈಕಲ್ಲು ಬಂಡಿ ಇತ್ಯಾದಿಗಳ ವಾಹನಗಳಿವೆ. ಪಯಣದಲ್ಲಿ ಪಥಿಕರು ದಾರಿತಪ್ಪಿದಾಗ ದಾರಿತೋರಿಸುವ ಮಾರ್ಗದರ್ಶಕರಿದ್ದಾರೆ. ಪಥಿಕರಿಗೆ ದಾರಿತೋರುವ ಮಾರ್ಗದರ್ಶಕರ ಈ ಪಾತ್ರಗಳು ತುಂಬಾ ವಿಶಿಷ್ಟವಾಗಿವೆ. ಯಾಕೆಂದರೆ, ಅಪರಿಚಿತವಾದ ದಾರಿಯಲ್ಲಿ ನಡೆಯುವವರಿಗೆ ಹಾದಿ ತೋರಿಸುವವರು, ಪಥಿಕರ ಹೊಸತಿಳುವಳಿಕೆಗೆ ಕಾರಣವಾಗುತ್ತಾರೆ. ಆದ್ದರಿಂದ ಕಾದಂಬರಿಗಳಲ್ಲಿ ಪಯಣವೆನ್ನುವುದು ಕೇವಲ ಪಥಿಕರಿಗೆ ಸೀಮಿತವಾದ ಕ್ರಿಯೆಯಲ್ಲ. ಅದು ಹಾದಿಯಲ್ಲಿ ಎದುರಾಗುವ ಅನೇಕ ಮಾರ್ಗದರ್ಶಕರ, ಪಯಣಕ್ಕೆ ಒದಗಿಬರುವ ವಾಹನಗಳ ಹಾಗೂ ಹಾದಿಯಲ್ಲಿ ಎದುರಾಗುವ ಅಡ್ಡಿ ತೊಡಕುಗಳ ಒಟ್ಟಾರೆ ಚಿತ್ರಣವೂ ಆಗಿದೆ. ಈ ಚಿತ್ರಣವು ವ್ಯಕ್ತಿಯ ಪಯಣವು ಕೇವಲ ಆ ವ್ಯಕ್ತಿಯದು ಮಾತ್ರವಾಗದೆ, ಅನೇಕರ ಪಯಣವಾಗುವ ಸಾಮೂಹಿಕ ಆಯಾಮವನ್ನು ಪಡೆಯುತ್ತದೆ. ವ್ಯಕ್ತಿಯ ಜೀವನವನ್ನು ಒಂದು ಪಯಣವೆಂಬ ರೂಪಕದಲ್ಲಿ ಗ್ರಹಿಸುವುದಾದರೆ, ಅದು ಮತ್ತೊಬ್ಬರ ನೆರವಿಲ್ಲದೆ ಅರ್ಥಪೂರ್ಣವಾಗುವುದಿಲ್ಲ ಎಂಬ ಜೀವನ ದರ್ಶನವನ್ನು ಸಹ ಇದು ಧ್ವನಿಸುತ್ತದೆ.

೫. ಪಯಣವು ಮೂಲತಃ ಭೌತಿಕವಾದುದಾದರೂ ಅದು ಪಥಿಕರಾದವರ ಅನುಭವ ಮತ್ತು ಆಲೋಚನೆಗಳಲ್ಲಿ ನಾಟಕೀಯ ಬದಲಾವಣೆಗೆ ಕಾರಣವಾಗುತ್ತದೆ. ಪಥಿಕರು ತಮ್ಮ ಪಯಣದ ಆರಂಭ ಘಟ್ಟದಲ್ಲಿ ಇಟ್ಟುಕೊಂಡಿದ್ದ ಅನೇಕ ಗ್ರಹಿಕೆಗಳು ಪಯಣದ ತುದಿಯಲ್ಲಿ ಪಲ್ಲಟಗೊಳ್ಳುತ್ತವೆ. ಅವರು ಬದುಕಿನ ಹೊಸ ಹೊಸ ಅನುಭವಗಳಿಗೆ ಸಾಕ್ಷಿಯಾಗಬೇಕಾಗುತ್ತದೆ. ಅವರ ಈ ಹೊಸ ಅನುಭವಗಳಿಂದ ಅವರ ಪೂರ್ವಗ್ರಹಿಕೆಗಳು ಬದಲಾಗುತ್ತ ಹೋಗುತ್ತವೆ. ಅಂತಿಮವಾಗಿ ಪಯಣವು ಪಯಣಿಗರ ದೃಷ್ಟಿಕೋನದಲ್ಲಿ ಪಲ್ಲಟ ತರುವಲ್ಲಿ ಮುಗಿಯುತ್ತದೆ. ಹೀಗಾಗಿ ಪಯಣವು ಭೌತಿಕವಾಗಿದ್ದರೂ ಅದೊಂದು ನಿಜವಾಗಿಯೂ ಮಾನಸಿಕವಾದ ಆಂತರಿಕವಾದ ಪಯಣವೂ ಆಗಿದೆ. ಕನ್ನಡ ಕಾದಂಬರಿಗಳಲ್ಲಿ ಪಯಣವು ನಿಜವಾಗಿಯೂ ಸಂಭವಿಸುವುದು ಆಂತರಿಕ ಬದಲಾವಣೆಯಾಗಿ. ಹೀಗಾಗಿ ಇಲ್ಲಿನ ಪಯಣಕ್ಕೆ ವ್ಯಕ್ತಿಗಳ ಅನುಭವ ಹಾಗೂ ಆಲೋಚನಾ ಲೋಕಗಳ ಜೊತೆಗೆ ಗಾಢವಾದ ಒಳಸಂಬಂಧವಿದೆ.

೬. ಪಯಣವು ಮೂರು ಮುಖ್ಯ ಮಜಲುಗಳನ್ನು ಒಳಗೊಂಡಿದೆ: ಪಯಣಕ್ಕೆ ಮಾಡಿಕೊಳ್ಳುವ ಸಿದ್ಧತೆ, ಕೈಗೊಳ್ಳುವ ಪಯಣ ಹಾಗೂ ಗುರಿ ಮುಟ್ಟುವುದು. ಇಲ್ಲಿನ ಕಾದಂಬರಿಗಳಲ್ಲಿ

ಪಯಣಿಗರು ಪಯಣಕ್ಕೆ ಮಾಡಿಕೊಳ್ಳುವ ಸಿದ್ಧತೆ ಮತ್ತು ಪಯಣದ ಪ್ರಕ್ರಿಯೆಗಳು ಗುರಿ ಮುಟ್ಟುವುದಕ್ಕಿಂತಲೂ ಮುಖ್ಯವಾಗಿವೆ. ಪಯಣಕ್ಕೆ ವ್ಯಕ್ತಿಗಳು ಮಾಡಿಕೊಳ್ಳುವ ಸಿದ್ಧತೆ, ಪಯಣದ ಪ್ರಕ್ರಿಯೆಯಲ್ಲಿ ಅವರು ಭೇಟಿಯಾಗುವ ವ್ಯಕ್ತಿಗಳು ಹಾಗೂ ಮುಖಾಮುಖಿಯಾಗುವ ಸನ್ನಿವೇಶಗಳು ಮೊದಲು ಇಟ್ಟುಕೊಂಡ ಗುರಿಗಿಂತ ಮುಖ್ಯವಾಗುತ್ತವೆ. ನಿರ್ದಿಷ್ಟ ಉದ್ದೇಶದಿಂದ ಆರಂಭವಾಗುವ ಪಯಣಕ್ಕೆ ಕ್ರಮೇಣ ಸೇರಿಕೊಳ್ಳುವ ಉಪಉದ್ದೇಶಗಳು ಮೂಲ ಪಯಣದ ಗುರಿಯನ್ನೇ ಬದಲಿಸುವಷ್ಟು ಬಲಿಷ್ಠವಾಗುತ್ತವೆ. ಹೀಗಾಗಿ ಕಾದಂಬರಿಗಳಲ್ಲಿ ಪಯಣವು ಸರಳ ರೇಖೆಯಾಗಿರುವುದಕ್ಕಿಂತ ಗೊಂಚಲಿನ ಹಾಗೆ ಬಹುರೂಪಿಯಾಗಿದೆ. ಈ ಮೂಲಕ ಕಾದಂಬರಿಗಳು ಸೂಚಿಸುವ ಜೀವನ ದರ್ಶನವೆಂದರೆ, ಮನುಷ್ಯರು ಮಾಡುವ ಪಯಣಗಳು ಉದ್ದೇಶಿತ ಗುರಿಯನ್ನು ಸಾಧಿಸುವುದಕ್ಕೆ ಮಾತ್ರ ರೂಪಿತಗೊಳ್ಳುವುದಿಲ್ಲ. ಅವು ತಮ್ಮ ಗುರಿಮುಟ್ಟುವ ನಡುವೆ ಉಪಪಯಣಗಳನ್ನು ಸೇರಿಸಿಕೊಂಡು ಮೂಲ ಪಯಣದ ವಿನ್ಯಾಸವನ್ನೇ ಬದಲಿಸಬಲ್ಲವು. ಅದರಿಂದ ಪಯಣದ ಸ್ವರೂಪವು ಯಾವಾಗಲೂ ನಿಶ್ಚಿತ ವಿನ್ಯಾಸದಲ್ಲಿ ಜರುಗದೆ, ನಡುವೆ ಬರುವ ಒತ್ತಡಗಳಿಗೆ ಅನುಗುಣವಾಗಿ ತನ್ನ ದಿಕ್ಕನ್ನು ಬದಲಿಸುತ್ತದೆ. ಈ ಬದಲಾವಣೆ ಅರ್ಥಪೂರ್ಣವಾಗಿದ್ದು ಒಟ್ಟಾರೆ ಪಯಣದ ಪರಿಕಲ್ಪನೆಯನ್ನು ಸಂಕೀರ್ಣಗೊಳಿಸುತ್ತದೆ.

೭. ಅಧ್ಯಯನಕ್ಕೆ ಆರಿಸಿಕೊಂಡಿರುವ ಕಾದಂಬರಿಗಳಲ್ಲಿ ಪಯಣ ಪರಿಕಲ್ಪನೆಯು ಆಯಾ ಲೇಖಕರ ತಾತ್ವಿಕ ನಂಬಿಕೆ, ಅನುಭವ ಲೋಕ, ಸಾಮಾಜಿಕ ಹಿನ್ನೆಲೆ ಮತ್ತು ಜೀವನದೃಷ್ಟಿಗಳ ನೆಲೆಯಿಂದ ಭಿನ್ನಸ್ವರೂಪ ಪಡೆಯುತ್ತದೆ. ಕಾರಂತರಿಗೆ ಪಯಣವು ಬಾಳಿನ ಸಾರ್ಥಕ ಮತ್ತು ಸಾರ್ಥಕವಲ್ಲದ ಬದುಕಿನ ಮಾದರಿಗಳನ್ನು ಶೋಧಿಸಲು ಒಂದು ನೆಪವಾಗಿದೆ; ಕುವೆಂಪು ಅವರಿಗೆ ಮನುಷ್ಯರ ವೈಯಕ್ತಿಕವಾದ ರಾಗಭಾವ ಮತ್ತು ಸಾಮಾಜಿಕ ಜಾತಿ ವರ್ಗ ಮುಂತಾದ ಅಡೆತಡೆಗಳ ಆಚೆ ಮನುಷ್ಯನ ಬಾಳು ರೂಪುಗೊಳ್ಳುವುದನ್ನು ಕಾಣಿಸುವುದಕ್ಕೆ ಅವಕಾಶವಾಗಿದೆ. ಕುವೆಂಪು ಪ್ರಕಾರ ಮಾನವ ನಿಯಂತ್ರಣದ ಆಚೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವ ನಿಸರ್ಗದ ಸ್ವಭಾವಕ್ಕೂ, ಮನುಷ್ಯರ ಬದುಕಿಗೂ ಸಂಬಂಧವಿದೆ. ಹೀಗಾಗಿ ಆದರ್ಶ ಜೀವನ ಯಾವುದು ಎಂಬುದರ ಹುಡುಕಾಟ ಅವರಿಗೆ ಅಷ್ಟು ಮುಖ್ಯವಾಗುವುದಿಲ್ಲ. ಹಲವು ಬಗೆಯ ಸಾಮಾಜಿಕ ಮತ್ತು ನೈಸರ್ಗಿಕ ನಿಯಂತ್ರಣಗಳ ಆಚೆ ಕೂಡ ಮನುಷ್ಯ ಬದುಕು ತನ್ನದೇ ಗತಿಯಲ್ಲಿ ಚಲಿಸುತ್ತದೆ ಎಂಬುದನ್ನು ಕಾಣಿಸುವುದು ಅವರಿಗೆ ಮುಖ್ಯವಾಗುತ್ತದೆ. ರಾವಬಹದ್ದೂರ ಹಾಗೂ ಮಾಸ್ತಿಯವರಲ್ಲಿ ಪಯಣದಿಂದ ಸಂಭವಿಸುವ ವೈಯಕ್ತಿಕ ಮತ್ತು ಸಾಮಾಜಿಕ ಅಧಃಪತನಗಳ ಪರಸ್ಪರ ಸಂಬಂಧ ಹೊಂದಿವೆ. ವ್ಯಕ್ತಿಯ ಪತನವು ಊರಿನ ಹಾಗೂ ರಾಜ್ಯದ ಅವನತಿಗೂ ಕಾರಣವಾಗುತ್ತದೆ. ಮನುಷ್ಯರ ಬಾಳ್ವೆಗಿಂತ ಒಂದು ನಾಡಿನ ಬಾಳ್ವೆಯನ್ನು ಚಿತ್ರಿಸುವುದು ಅವರಿಗೆ ಮುಖ್ಯ. ಹೀಗೆ ಪಯಣದ

ಪರಿಕಲ್ಪನೆಯನ್ನು ಈ ಕಾದಂಬರಿಗಳು ಒಳಗೊಂಡಿದ್ದರೂ, ಅವು ಪಯಣದ ಮೇಲೆ ತಳೆದ ತಾತ್ವಿಕ ಗ್ರಹಿಕೆ ಭಿನ್ನವಾಗಿದೆ.

೮. ಮನುಷ್ಯರ ಪಯಣಕ್ಕೆ ಅವರ ಆರ್ಥಿಕ, ಸಾಮಾಜಿಕ, ಧಾರ್ಮಿಕ, ಪ್ರಾದೇಶಿಕ ಹಿನ್ನೆಲೆಗಳು ಪರಿಣಾಮ ಬೀರುತ್ತವೆಯೆ? ಈ ಪ್ರಶ್ನೆಯನ್ನು ಕಾದಂಬರಿಗಳು ಪರಿಶೀಲನೆ ಮಾಡುತ್ತವೆ. ಈ ಕಾದಂಬರಿಗಳಲ್ಲಿ ದಲಿತರು, ಮಹಿಳೆಯರು, ಬಡವರು, ಶ್ರೀಮಂತರು, ವಯಸ್ಸಾದವರು, ಚಿಕ್ಕವರು ಪಯಣಿಸುವ ಚಿತ್ರಗಳಿವೆ; ವಿಭಿನ್ನ ವಯೋಮಾನದವರು ಹಾಗೂ ಸಾಮಾಜಿಕ ಹಿನ್ನೆಲೆಯಿರುವವರು ಪಯಣಿಸುವ ಸನ್ನಿವೇಶಗಳಿವೆ. ಆದರೆ ಪಯಣ ಮಾಡುವವರು ಯಾವ ಪ್ರದೇಶದಲ್ಲಿ, ಯಾವ ಉದ್ದೇಶಕ್ಕಾಗಿ ಪಯಣ ಮಾಡುತ್ತಿದ್ದಾರೆ ಮತ್ತು ಅವರ ಸಾಮಾಜಿಕ ಹಿನ್ನೆಲೆ ಯಾವುದು ಎಂಬುದರ ಮೇಲೆ ಅವರ ಪಯಣದ ಸ್ವರೂಪ ಬದಲಾಗುತ್ತದೆ. ಕಾದಂಬರಿಗಳಲ್ಲಿ ಸಾಮಾನ್ಯವಾಗಿ ಪಯಣ ಮಾಡುವವರು ಪುರುಷರೇ ಆಗಿದ್ದಾರೆ. ಮಹಿಳೆಯರು ಮಾಡುವ ಪಯಣಗಳಲ್ಲಿ ಮೇಲ್ವರ್ಗದ ಮಹಿಳೆಯರಿಗಿಂತ ಕೆಳವರ್ಗದ ಮಹಿಳೆಯರ ಪಾಲು ಹೆಚ್ಚಾಗಿ ಕಂಡುಬರುತ್ತವೆ. ಮನೆಯಿಂದ ಹೊರ ಜಗತ್ತಿನತ್ತ ಚಲಿಸುವ ಮುಕ್ತ ಅವಕಾಶವನ್ನು ಸಮಾಜವು ಪುರುಷರಿಗೆ ಕೊಟ್ಟಿರುವಂತೆ ಮಹಿಳೆಯರಿಗೆ ಕೊಟ್ಟಿಲ್ಲ ಎಂಬ ವಾಸ್ತವಿಕ ಸತ್ಯವನ್ನು ಕಾದಂಬರಿಗಳು ಪರೋಕ್ಷವಾಗಿ ಸೂಚಿಸುತ್ತವೆ. ಹೀಗಾಗಿ ಪಯಣದ ಸ್ವರೂಪ ಮತ್ತು ಗತಿಯನ್ನು ಪಯಣ ಮಾಡುವವರ ಪ್ರತಿಭೆ, ದೈಹಿಕಶಕ್ತಿ, ಬುದ್ಧಿವಂತಿಕೆಗಳು ಮಾತ್ರ ನಿರ್ಧರಿಸುವುದಿಲ್ಲ; ಅವರು ಸಾಮಾಜಿಕವಾಗಿ ಯಾವ ಹಿನ್ನೆಲೆಗೆ ಸೇರಿದವರು ಎಂಬುದು ಸಹ ಪಯಣದ ಗತಿಯನ್ನು ನಿರ್ಧರಿಸುತ್ತದೆ. ಈ ನಿಜವನ್ನು ಕಾದಂಬರಿಗಳು ಧ್ವನಿಸುತ್ತವೆ.

೯. ಕನ್ನಡ ಕಾವ್ಯದಲ್ಲಿ ಪಯಣವು ಅನೇಕ ರೂಪಕ ಹಾಗೂ ಪ್ರತಿಮೆಗಳಲ್ಲಿ ಪ್ರಕಟವಾಗಿದೆ. ಅದು ಮುಖ್ಯವಾಗಿ ಹಕ್ಕಿಯ ಪಯಣದ ರೂಪದಲ್ಲಿ ಪ್ರಕಟವಾಗಿದೆ. ಕಾಲವೆಂಬ ಕುದುರೆಯ ರೂಪದಲ್ಲಿ ಪ್ರಕಟವಾಗಿದೆ. ಇದರಂತೆ ಕನ್ನಡ ಕಾದಂಬರಿಗಳು ಸಹ ಪಯಣವನ್ನು ಒಂದು ರೂಪಕವಾಗಿ ಅಥವಾ ಸಂಕೇತವಾಗಿ ಇಟ್ಟುಕೊಂಡು ವ್ಯಕ್ತಿಗಳ ಅಥವಾ ಊರಿನ ಜೀವನಚರಿತ್ರೆಯನ್ನು ಕಾಣಿಸುತ್ತವೆ. ಕಾದಂಬರಿಗಳಲ್ಲಿ ಪಯಣವು ಪಕ್ಷಿ, ಹುಳು, ಹೊಳೆ, ಮಳೆ, ಪ್ರಾಣಿ ಇತ್ಯಾದಿ ಸಂಕೇತಗಳಲ್ಲಿ ಪ್ರಕಟವಾಗುತ್ತದೆ. ಹೊಳೆಗಳು ಊರಿನ ಮತ್ತು ವ್ಯಕ್ತಿಗಳ ಬಾಳಿನ ಪಯಣದ ವಿನ್ಯಾಸಗಳನ್ನು ಕಾಣಿಸುವ ರೂಪಕವಾಗುತ್ತವೆ. ಸ್ವತಃ ಹೊಳೆಯೂ ಹರಿಯುವ ಮೂಲಕ ಒಂದು ಪ್ರತಿಮೆಯಾಗುತ್ತದೆ. ಹೀಗೆ ಕಾದಂಬರಿಗಳಲ್ಲಿ ಪಯಣವು ಯಾಂತ್ರಿಕವಾಗಿ ವಿವರಗಳಲ್ಲಿ ಮಾತ್ರ ಚಿತ್ರಣವಾಗಿರದೆ, ರೂಪಕ, ಪ್ರತಿಮೆ, ಸಂಕೇತಗಳಲ್ಲಿ ಚಿತ್ರಣಗೊಳ್ಳುತ್ತಾ ಹೋಗುತ್ತದೆ. ಈ ಕಾರಣಕ್ಕಾಗಿಯೇ ಅದು ದಾರ್ಶನಿಕ ಆಯಾಮವನ್ನು ಪಡೆಯುತ್ತದೆ.

೧೦. ಕಾದಂಬರಿಗಳಲ್ಲಿ ಪಯಣವು ಮನುಷ್ಯರ ಆದರ್ಶ, ಔದಾರ್ಯ ಸಣ್ಣತನದ ಸ್ವಭಾವಗಳನ್ನು ಕಾಣಿಸುವ ನೆಪವಾಗಿ ಬರುವಂತೆ ವಿನ್ಯಾಸಗೊಂಡಿದೆ. ಇಲ್ಲಿನ ಮುಖ್ಯ ಆಯಾಮವೆಂದರೆ,

ಅಧಿಕಾರ ಮತ್ತು ಕ್ರೌರ್ಯವು ಪಯಣದ ಜೊತೆಗೆ ಜೋಡಣೆಗೊಂಡಿರುವುದು. ಹೊಸ ಮಾನವ ಸಂಬಂಧಗಳು ಪಯಣದ ಭಾಗವಾಗಿ ಅರಳಿಕೊಳ್ಳುವಷ್ಟೇ ಹೊಸ ಹಿಂಸೆ ಮತ್ತು ಕ್ರೌರ್ಯದ ಘಟನೆಗಳೂ ಪಯಣದ ಭಾಗವಾಗಿ ಕಾಣಿಸಿಕೊಳ್ಳುತ್ತವೆ. ಚಾರಿತ್ರಿಕ ಕಾದಂಬರಿಗಳಲ್ಲಿ ಅಧಿಕಾರ ಮತ್ತು ಅದನ್ನು ಗಳಿಸಿಕೊಳ್ಳುವ ಸಲುವಾಗಿ ಮಾಡುವ ಯುದ್ಧ, ಹಿಂಸೆಗಳು ಪಯಣದ ಜೊತೆಗೆ ಕಂಡುಬರುತ್ತವೆ. ಸಾಮಾಜಿಕ ವಸ್ತುವಿನ ಕಾದಂಬರಿಗಳಲ್ಲಿ ಸಹ ಪಯಣಕ್ಕೂ ಹಿಂಸೆಗೂ ಸಂಬಂಧ ಏರ್ಪಟ್ಟಿದೆ. ಇಲ್ಲಿ ಪಯಣವು ಬದುಕಿನ ವಿಕಾರ ಮತ್ತು ಆದರ್ಶ ಮುಖಗಳನ್ನು ಕಾಣಿಸುತ್ತದೆ. ಅತ್ಯುತ್ತಮ ಮಾನವ ಸಂಬಂಧಗಳನ್ನು ಹಾಗೂ ಕ್ರೌರ್ಯ, ಹಿಂಸೆ, ಅರಾಜಕತೆಗಳನ್ನು ಅದು ಕಾಣಿಸುತ್ತದೆ. ರಾಜಕೀಯ ಕಥನವುಳ್ಳ ಮಾಸ್ತಿಯವರ ಕಾದಂಬರಿಗಳಲ್ಲಿ ಪಯಣವು ಹೆಚ್ಚು ಹಿಂಸೆ, ಯುದ್ಧ ಮತ್ತು ಕ್ರೌರ್ಯಗಳಿಗೆ ಕಾರಣವಾಗಿದೆ.

೧೧. ಕಾದಂಬರಿಗಳಲ್ಲಿ ಚಿತ್ರಣಗೊಂಡಿರುವ ಪಯಣದ ವಿನ್ಯಾಸವು ಮುಖ್ಯವಾಗಿ ಮೂರು ಬಗೆಯಲ್ಲಿವೆ. ಒಂದನೆಯದು-ನಿರ್ದಿಷ್ಟ ಪ್ರದೇಶದ ಒಳಗೆ ಮಾಡುವ ಪಯಣ. ಎರಡನೆಯದು-ಹಳ್ಳಿಯಿಂದ ಪಟ್ಟಣಕ್ಕೆ ಮಾಡುವ ಪಯಣ. ಮೂರನೆಯದು-ಹಳ್ಳಿ ಮತ್ತು ಪಟ್ಟಣಗಳಿಂದ ಮಹಾನಗರಗಳಿಗೆ ಮಾಡುವ ಪಯಣ. ಮೊದಲನೆಯ ವಿನ್ಯಾಸದ ಪಯಣವು ಹೆಚ್ಚಾಗಿ ಮಲೆನಾಡು ಮತ್ತು ಘಟ್ಟ ಪ್ರದೇಶದ ಪರಿಸರದಲ್ಲಿ ಸಂಭವಿಸುತ್ತದೆ. ಗಾತ್ರದ ದೃಷ್ಟಿಯಿಂದ ಹಳ್ಳಿ-ಪಟ್ಟಣ-ನಗರ ವಿಭಿನ್ನ ಪ್ರಮಾಣದಲ್ಲಿರುವುದು ಒಂದು ಸಂಗತಿ; ಆದರೆ ಈ ಮೂರು ಸ್ತರಗಳು ವಿಭಿನ್ನ ಜೀವನ ದೃಷ್ಟಿಕೋನಗಳನ್ನು ಪ್ರತಿನಿಧಿಸುವ ತಾಣಗಳೂ ಆಗಿವೆ ಎನ್ನುವುದು ಮುಖ್ಯವಾಗಿದೆ. ಮೊದಲನೇ ವಿನ್ಯಾಸದಲ್ಲಿ ನಡೆಯುವ ಪಯಣಗಳು ಪಯಣಿಗರ ಜೀವನ ಮೌಲ್ಯಗಳನ್ನು ಪಲ್ಲಟಗೊಳಿಸುವುದಿಲ್ಲ. ಆದರೆ ನಗರಗಳಿಗೆ ಹೋಗುತ್ತಿದ್ದಂತೆ ವ್ಯಕ್ತಿಯ ಮಾನಸಿಕ, ಸಾಮಾಜಿಕ, ಆರ್ಥಿಕ ನೆಲೆಗಳಲ್ಲಿ ಬದಲಾವಣೆ ಯಾಗುತ್ತದೆ. ಕಾದಂಬರಿಗಳು ಈ ಮೂರೂ ಬಗೆಯ ಘಟಕಗಳ ಜೊತೆಗೆ ಮನುಷ್ಯರು ಮಾಡುವ ಚಲನೆಗಳನ್ನು ಚಿತ್ರಿಸುತ್ತವೆ; ಪಯಣದಲ್ಲಿ ಅವರ ಆಲೋಚನ ಕ್ರಮ ಹಾಗೂ ಜೀವನ ದರ್ಶನದಲ್ಲಿ ಉಂಟಾಗುವ ಇತ್ಯಾತ್ಮಕ ಮತ್ತು ನೇತ್ಯಾತ್ಮಕವಾದ ಪರಿಣಾಮಗಳನ್ನು ಕಾಣಿಸುತ್ತವೆ.

೧೨. ಕಾದಂಬರಿಗಳಲ್ಲಿ ಪಯಣದ ಪರಿಕಲ್ಪನೆಯು ಕೇವಲ ಊರಿನಿಂದ ಊರಿಗೆ ಜಾಗದಿಂದ ಜಾಗಕ್ಕೆ ಸ್ಥಳಾಂತರಗೊಳ್ಳುವ ಅಥವಾ ಚಲನೆ ಮಾಡುವ ಆಯಾಮವನ್ನು ಮಾತ್ರ ಹೊಂದಿಲ್ಲ. ಅದು ಕಾದಂಬರಿಯಲ್ಲಿ ವಿಶಿಷ್ಟವಾಗಿ ಮತ್ತು ಭಿನ್ನವಾಗಿ ಬದುಕುತ್ತಿರುವ ಜನರನ್ನು ಹಾಗೂ ಅವರು ರೂಢಿಸಿಕೊಂಡಿರುವ ಜೀವನದೃಷ್ಟಿಗಳನ್ನು ಕಾಣಿಸುವುದಕ್ಕಾಗಿ ಅಳವಡಿಕೆಯಾಗಿದೆ. ಪಯಣದ ಈ ವಿನ್ಯಾಸವು ನಮ್ಮ ಸಮಾಜದಲ್ಲಿ ನಡೆಯುವ ಹಲವು ಬಗೆಯ ಸಂಘರ್ಷಗಳನ್ನು

ಮುಖಾಮುಖಿ ಮಾಡುವ ವಿನ್ಯಾಸವನ್ನು ಹೊಂದಿದೆ. ಆ ಸಂಘರ್ಷಗಳು ಅಧಿಕಾರಕ್ಕಾಗಿ, ಹೆಣ್ಣಿಗಾಗಿ, ಎರಡು ತಲೆಮಾರುಗಳ ನಡುವಿನ ಮೌಲ್ಯಕ್ಕಾಗಿ, ವರ್ಗಕ್ಕಾಗಿ, ವೈಯಕ್ತಿಕ ಜಿದ್ದಿಗಾಗಿ ಮತ್ತು ಧಾರ್ಮಿಕ ಸಂಘರ್ಷಕ್ಕಾಗಿ ನಡೆಯುವಂತಹವು. ಕೆಲವು ಕಾದಂಬರಿಗಳಲ್ಲಿ ಧಾರ್ಮಿಕ ಸಂಘರ್ಷಗಳಲ್ಲಿ ಕ್ರೈಸ್ತ ಮತ್ತು ಸನಾತನ ಹಿಂದೂ ಧರ್ಮಗಳ ನಡುವಿನ ಸಂಘರ್ಷಗಳು ಬರುತ್ತವೆ. ಕೆಲವು ಕಾದಂಬರಿಗಳಲ್ಲಿ ಎರಡು ತಲೆಮಾರುಗಳ ನಡುವಿನ ಸಂಘರ್ಷಗಳು ಮುಖ್ಯವಾಗಿ ಬರುತ್ತವೆ. ಮತ್ತೆ ಕೆಲವು ಕಾದಂಬರಿಗಳಲ್ಲಿ ಜಾತಿ–ವರ್ಗಗಳ ನಡುವೆ ನಡೆಯುವ ಸಂಘರ್ಷಗಳು, ವ್ಯಕ್ತಿಗತ ನೆಲೆಯ ಸಂಘರ್ಷಗಳು, ಹಳ್ಳಿ ಮತ್ತು ನಗರಗಳ ನಡುವಿನ ಸಂಘರ್ಷಗಳು ಬರುತ್ತವೆ. ಈ ಮೂಲಕ ಕಾದಂಬರಿಗಳು ಪಯಣವನ್ನು ಒಂದು ತಂತ್ರವಾಗಿ ಸಮಾಜದಲ್ಲಿ ನಡೆಯುತ್ತಿರುವ ಹಲವು ಬಗೆಯ ಸಂಘರ್ಷಗಳನ್ನು ಕಟ್ಟಿಕೊಡುವ ಕೆಲಸ ಮಾಡುತ್ತವೆ. ಹೀಗಾಗಿ ಸಂಘರ್ಷವೆನ್ನುವುದು ಕೇವಲ ವ್ಯಕ್ತಿಯ ಪಯಣದ ಭಾಗವಾಗಿ ಮಾತ್ರವಲ್ಲ, ಸಮಾಜದ ವಿಶಾಲಭಿತ್ತಿಯ ಭಾಗವಾಗಿದೆ.

೧೩. ಕನ್ನಡ ಕಾದಂಬರಿಗಳಲ್ಲಿ ಮುಖ್ಯವಾದ ವಿನ್ಯಾಸ ಗ್ರಾಮ ಮತ್ತು ನಗರಗಳ ನಡುವಿನ ಸಂಚಲನ ಅಥವಾ ಪಯಣಗಳಲ್ಲಿದೆ. ಈ ಪಯಣದಲ್ಲಿ ಯಾರು ಪಯಣಿಸುತ್ತಿದ್ದಾರೆ, ಯಾಕಾಗಿ ಪಯಣಿಸುತ್ತಿದ್ದಾರೆ ಎಂಬ ಹಿನ್ನೆಲೆಯಿಂದ ಸಂಚಲನವು ನೇತ್ಯಾತ್ಮಕ ಮತ್ತು ಧನಾತ್ಮಕವಾಗುತ್ತದೆ. ಗ್ರಾಮ ಮತ್ತು ನಗರಗಳ ನಡುವಿನ ಚಲನೆಗಳಲ್ಲಿ ಎರಡು ಭಾಗಗಳಿವೆ. ಒಂದನೆಯದು–ಗ್ರಾಮೀಣ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಅಥವಾ ಮನೆತನಗಳ ನಡುವಿನ ಜಿದ್ದಾಜಿದ್ದಿನಲ್ಲಿ ಉಸಿರುಗಟ್ಟಿದವರು ಸ್ವತಂತ್ರವಾಗಿ ಬದುಕಲು ಗ್ರಾಮಗಳನ್ನು ಬಿಟ್ಟು ನಗರಗಳ ಕಡೆಗೆ ಚಲಿಸುವ ಆಯಾಮವಿದೆ. ಎರಡನೆಯದು–ಅಧಿಕಾರಶಾಹಿಯ ಸಂಕೇತವಾದ ಪೊಲೀಸು, ಕೋರ್ಟು, ತಾಲ್ಲೂಕು ಕಛೇರಿಗಳಿಗೆ ಸೇರಿದ ಜನ ಕಂದಾಯ ವಸೂಲಿಗಾಗಿ, ಹಳ್ಳಿಯವ್ಯಾಜ್ಯ ಮತ್ತು ಮೊಕದ್ದಮೆಗಳ ವಿಚಾರಣೆಗಳಿಗಾಗಿ ಗ್ರಾಮಗಳಿಗೆ ಬರುವುದು; ಇವೇ ಕೆಲಸಗಳಿಗಾಗಿ ಹಳ್ಳಿಯ ಜನ ಪಟ್ಟಣಗಳಿಗೆ ವಲಸೆ ಹೋಗುವ ಇನ್ನೊಂದು ಮಾದರಿಯೂ ಇದೆ. ಇದರಲ್ಲಿ ಅಧಿಕಾರಶಾಹಿಯ ಸಂಕೇತಗಳ ಸಾಂಸ್ಥಿಕ ಸಂಸ್ಥೆಗಳು ಪೊಲೀಸ್, ಕೋರ್ಟು, ಕಂದಾಯ ಇಲಾಖೆಯ ಅಧಿಕಾರಿಗಳು ಗ್ರಾಮೀಣ ಮುಗ್ಧ ಜನರನ್ನು ಶೋಷಣೆ ಮಾಡುವ ವಿನ್ಯಾಸವಿದೆ. ಹಳ್ಳಿಯ ಜನರು ಕಛೇರಿ, ಕೋರ್ಟು, ಕೇಸುಗಳ ಕಾರಣಕ್ಕಾಗಿ ಪಟ್ಟಣಗಳಿಗೆ ಮಾಡುವ ಚಲನೆಯಲ್ಲಿ ಅವರ ಅಸಹಾಯಕತೆ ಮತ್ತು ಶೋಷಣೆಗಳ ಆಯಾಮವೇ ಇದೆ. ಹೀಗೆ ಗ್ರಾಮ ಮತ್ತು ಪಟ್ಟಣಗಳ ನಡುವೆ, ಗ್ರಾಮ ಪಟ್ಟಣ ಹಾಗೂ ನಗರಗಳ ನಡುವೆ ನಡೆಯುವ ಪಯಣದ ವಿನ್ಯಾಸದಲ್ಲಿ ಬಿಡುಗಡೆಯ ಮತ್ತು ಬಂಧನದ ಎರಡೂ ಆಯಾಮಗಳಿವೆ. ಈ ಪ್ರಕ್ರಿಯೆಯಲ್ಲಿ ದಲಿತ ಪಾತ್ರಗಳು ಒಂದು ಬಗೆಯ ಬಿಡುಗಡೆಯನ್ನು ಪಡೆದರೆ, ಭೂಮಾಲೀಕರ ಮತ್ತು ಶ್ರೀಮಂತರ ಮಕ್ಕಳು ಇನ್ನೊಂದು

ಬಗೆಯ ಬಿಡುಗಡೆಯನ್ನು ಪಡೆಯುತ್ತಾರೆ. ಈ ಮೇಲಿನ ವ್ಯತ್ಯಾಸವು ಕನ್ನಡದ ಮೊದಲ ಮತ್ತು ಎರಡನೇ ಘಟ್ಟದ ಕಾದಂಬರಿಗಳ ನಾಯಕ ಪಾತ್ರಗಳ ಪಯಣದ ನಡುವಿನಲ್ಲಿದೆ.

೧೪. ಕಾದಂಬರಿಗಳಲ್ಲಿ ಪಯಣವು ಒಂದು ಆಶಯವಾಗಿ, ರೂಪಕವಾಗಿ ಜೀವನ ದರ್ಶನವಾಗಿ ಬಂದಿದೆ. ಹಾಗೆಯೇ ಇದೊಂದು ಕಥನ ತಂತ್ರವಾಗಿಯೂ ಬಂದಿದೆ. ಬಹಳಷ್ಟು ಕಾದಂಬರಿಗಳಲ್ಲಿ ಮುಖ್ಯಪಾತ್ರ ಇಲ್ಲವೇ ನಿರೂಪಕ ಪಾತ್ರದ ಪಯಣದ ಭಾಗವಾಗಿಯೇ ವ್ಯಕ್ತಿಯ ಕಥೆ ಒಂದು ಊರಿನ ಕಥೆಯಾಗಿ ಬಿಚ್ಚಿಕೊಳ್ಳುತ್ತದೆ. ಹೀಗಾಗಿ ಪಯಣವು ಕಾದಂಬರಿಗಳ ಕಥನವನ್ನು ಕಟ್ಟುವ ಕ್ರಿಯೆಯಲ್ಲಿ ಒಂದು ತಂತ್ರವಾಗಿ ಕೆಲಸ ಮಾಡಿದೆ. ಪಯಣ ಕಾದಂಬರಿಯ ಆಶಯಕ್ಕೆ ಸಂಬಂಧಿಸಿದೆ. ತಂತ್ರಗಾರಿಕೆಯು ಅದರ ರೂಪಕ್ಕೆ ಸಂಬಂಧಿಸಿದ್ದಾಗಿದೆ. ಹೀಗಾಗಿ ಪಯಣವು ಕಾದಂಬರಿಗಳಲ್ಲಿ ಕಥನವನ್ನು ಬಿಚ್ಚುವ, ಬೆಳೆಸುವ ಮತ್ತು ಅದನ್ನು ತಾರ್ಕಿಕ ಅಂತ್ಯಕ್ಕೆ ಕರೆದುಕೊಂಡು ಹೋಗಿ ಮುಟ್ಟಿಸುವ ಕೆಲಸವನ್ನು ಮಾಡುತ್ತದೆ.

೧೫. ಕನ್ನಡ ಕಾದಂಬರಿಗಳಲ್ಲಿ ಪಯಣವು ಸಮಾಜದಲ್ಲಿರುವ ವಿಭಿನ್ನ ವ್ಯಕ್ತಿತ್ವಗಳ, ದಾಂಪತ್ಯಗಳ, ಸಂಘರ್ಷಗಳ ದರ್ಶನ ಮಾಡಿಸುವ ಒಂದು ತಂತ್ರವಾಗಿಯೂ ಅಳವಡಿಕೆಯಾಗಿದೆ. ಹಾಗೆಯೇ ಪಯಣವು ಸಾಂಪ್ರದಾಯಿಕ ಸಮಾಜದ ವಿಭಿನ್ನ ಸಮುದಾಯಗಳ ಜೀವನ ಶೈಲಿ ಹಾಗೂ ಸಾಂಸ್ಕೃತಿಕ ಲೋಕಗಳನ್ನು ಕಾಣಿಸುವ ಕೆಲಸವನ್ನೂ ಮಾಡುತ್ತದೆ. ಇಲ್ಲಿ ನಗರ ಜೀವನ ಕ್ರಮವಿರುವ ಹಾಗೆ ಗ್ರಾಮ ಜೀವನದ ಕ್ರಮವೂ ಇದೆ. ಅಲ್ಲಿಯೇ ಭೂಮಾಲಿಕರ ಮತ್ತು ಜೀತಗಾರರ ಜೀವನ ಕ್ರಮಗಳಿವೆ. ರಂಗನಟಿಯರ, ರೈತಾಪಿಗಳ ಹಾಗೂ ವಕೀಲರ ಜೀವನ ಕ್ರಮಗಳಿವೆ. ಬೇರೆ ಬೇರೆ ಭಾಷೆ ಮತ್ತು ಪ್ರಾಂತ್ಯದ ಜನರ ಜೀವನಕ್ರಮಗಳು ಇವೆ. ಕೆಲವು ಕಾದಂಬರಿಗಳಲ್ಲಿ ಕರ್ನಾಟಕದ ಹೊರಗಡೆ ಕಥನಕ್ರಮ ಬಿಚ್ಚಿಕೊಳ್ಳುವುದರಿಂದ, ಹಲವು ಧಾರ್ಮಿಕ ಸಮುದಾಯಗಳ ಜೀವನಕ್ರಮ ಮತ್ತು ಆಲೋಚನ ಕ್ರಮಗಳನ್ನು ಸಹ ಕಾಣಿಸುವ ಕೆಲಸವನ್ನು ಪಯಣ ಮಾಡುತ್ತದೆ. ಈ ಹಲವು ಸಾಂಸ್ಕೃತಿಕ ಲೋಕದ ಘಟಕಗಳನ್ನು ಕೂಡಿಸುವ ದಾರವಾಗಿ ಪಯಣ ಕೆಲಸ ಮಾಡುತ್ತದೆ; ಪಯಣಿಗ ಮಾತ್ರ ಅವೆಲ್ಲವನ್ನೂ ಓದುಗರ ಗಮನಕ್ಕೆ ತರುವ ಕೆಲಸವನ್ನು ಮಾಡುತ್ತದೆ. ಭಾರತದ ಬಹು ಸಾಂಸ್ಕೃತಿಕ, ಭಾಷಿಕ ಏಕರೂಪಿಯಲ್ಲದ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ, ಜೀವನ ಕ್ರಮಗಳನ್ನು ಕಾಣಿಸುವ ಕೆಲಸವನ್ನು ಕಾದಂಬರಿಗಳು ಪಯಣದ ಭಾಗವಾಗಿ ಮಾಡುತ್ತವೆ. ಈ ಪ್ರಕ್ರಿಯೆಯಲ್ಲಿ ದಲಿತ, ಬ್ರಾಹ್ಮಣ, ಶೂದ್ರ, ಹಿಂದೂ, ಮುಸ್ಲಿಂ, ಪಾರ್ಸಿ ಸಮುದಾಯಗಳ ಜೀವನ ಕ್ರಮಗಳನ್ನು ಪಯಣವು ಕಾಣಿಸುತ್ತದೆ. ಈ ಮೂಲಕ ಭಾರತದ ಸಮಾಜ, ಬಹುಭಾಷಿಕವಾಗಿದೆ ಸಾಂಸ್ಕೃತಿಕವಾಗಿದೆ ಎಂಬುದನ್ನು ಕಾದಂಬರಿಗಳು ಸೂಚಿಸುತ್ತವೆ.

***

ಆಕರಸೂಚಿ

ಅ. ಮೂಲಗ್ರಂಥಗಳು

ಆ. ಪರಾಮರ್ಶನ ಗ್ರಂಥಗಳು

ಇ. ಅಪ್ರಕಟಿತ ಸಂಶೋಧನ ಗ್ರಂಥಗಳು

ಈ. ಪತ್ರಿಕೆಗಳು

ಉ. ಅಂತರ್ಜಾಲ ತಾಣಗಳು

ಆಕರಸೂಚಿ

ಅ. ಮೂಲ ಆಕರಗಳು

೧. ಕುವೆಂಪು(೧೯೩೭), ಕಾನೂರು ಹೆಗ್ಗಡಿತಿ, ಉದಯರವಿ ಪ್ರಕಾಶನ, ಮೈಸೂರು, ೨೦೦೬.

೨. ಕುವೆಂಪು(೧೯೬೭), ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೨೦೧೦

೩. ಮಾಸ್ತಿ ವೆಂಕಟೇಶ ಅಯ್ಯಂಗಾರ್(೧೯೪೯), ಚೆನ್ನಬಸವ ನಾಯಕ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್, ಬೆಂಗಳೂರು, ೨೦೦೯

೪. ಮಾಸ್ತಿ ವೆಂಕಟೇಶ ಅಯ್ಯಂಗಾರ್(೧೯೫೬), ಚಿಕವೀರ ರಾಜೇಂದ್ರ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್, ಬೆಂಗಳೂರು, ೨೦೦೭

೫. ರಾವಬಹದ್ದೂರ(೧೯೫೭), ಗ್ರಾಮಾಯಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೬. ರಾವಬಹದ್ದೂರ(೧೯೭೨), ಬಿತ್ತಿ ಬೆಳೆದವರು, ಪ್ರಥಮ ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ೧೯೮೩

೭. ಶಿವರಾಮ ಕಾರಂತ(೧೯೪೩), ಬೆಟ್ಟದಜೀವ, ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೦೬

೮. ಶಿವರಾಮ ಕಾರಂತ(೧೯೬೦), ಅಳಿದಮೇಲೆ, ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೦೬

ಆ. ಪರಾಮರ್ಶನ ಗ್ರಂಥಗಳು

೧. ಅನಂತಮೂರ್ತಿ ಯು.ಆರ್, ಪ್ರಜ್ಞೆ–ಪರಿಸರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೪

೨. ಅಮರೇಶ ನುಗಡೋಣಿ, ಗ್ರಾಮಾಯಣ: ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

೩. ಅರವಿಂದ ಮಾಲಗತ್ತಿ(ಸಂ.), **ಕುವೆಂಪು ಕೃತಿವಿಮರ್ಶೆ**, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ೨೦೦೬

೪. ಅವಧಾನಿ ಜಿ.ಎಸ್.(ಸಂ), **ಸಾಹಿತ್ಯ ವಿಮರ್ಶೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೨

೫. ಅಶೋಕ ಟಿ.ಪಿ., **ಸಾಹಿತ್ಯ ಸಂಪರ್ಕ**, ವಸಂತ ಪ್ರಕಾಶನ, ಬೆಂಗಳೂರು, ೨೦೧೧

೬. ಆಮೂರ ಜಿ.ಎಸ್., **ಕನ್ನಡ ಕಥನ ಸಾಹಿತ್ಯ: ಕಾದಂಬರಿ**, ಶ್ರೀಹರಿ ಪ್ರಕಾಶನ, ಧಾರವಾಡ, ೧೯೯೪

೭. ಆಹಿತಾನಲ(ಸಂ), **ಕುವೆಂಪು ಸಾಹಿತ್ಯ ಸಮೀಕ್ಷೆ**, ವಸಂತ ಪ್ರಕಾಶನ, ಬೆಂಗಳೂರು, ೨೦೦೪

೮. ಆಹಿತಾನಲ(ಸಂ), **ಕನ್ನಡದ ಮರ ಚೇತನ**, ಸಾಹಿತ್ಯಾಂಜಲಿ ಮತ್ತು ಅಭಿನವ, ಬೆಂಗಳೂರು, ೨೦೦೭

೯. ಕರುಣಾಕರ ಎನ್.ಶೆಟ್ಟಿ, **ಕಾರಂತ ಮತ್ತು ಪ್ರೇಮಚಂದ**, ಅಭಿಜ್ಞಾ ಪ್ರಕಾಶನ, ಮುಂಬಯಿ, ೨೦೦೩

೧೦. ಕುವೆಂಪು, **ನೆನಪಿನ ದೋಣಿಯಲ್ಲಿ**, ಉದಯರವಿ ಪ್ರಕಾಶನ, ಮೈಸೂರು, ೨೦೦೭

೧೧. ಕೃಷ್ಣಕುಮಾರ್ ಸಿ.ಪಿ., **ಆಯ್ದ ವಿಮರ್ಶ ಪ್ರಬಂಧಗಳು(ಕುವೆಂಪು ಸಾಹಿತ್ಯ ಕುರಿತು)**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧

೧೨. ಗುರುಪಾದ ಮರಿಗುದ್ದಿ, **ಕುವೆಂಪು ಕಾದಂಬರಿಗಳು ಸಾಂಸ್ಕೃತಿಕ ಅಧ್ಯಯನ**, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೮೯

೧೩. ಗುರುಪಾದ ಮರಿಗುದ್ದಿ, **ಕುವೆಂಪು ಕಾದಂಬರಿಗಳು**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪

೧೪. ಗೋಪಾಲಕೃಷ್ಣ ಅಡಿಗ, **ಸಮಗ್ರ ಕಾವ್ಯ**, ಸ್ವಪ್ನಬುಕ್ ಹೌಸ್, ಬೆಂಗಳೂರು, ೨೦೦೬

೧೫. ಚಂದ್ರಶೇಖರ ನಂಗಲಿ ವಿ., **ನೆಲ ಮುಟ್ಟುವ ಪ್ರೀತಿ**, ಮುದ್ದುಶ್ರೀ ಗ್ರಂಥಮಾಲೆ, ಬೆಂಗಳೂರು, ೨೦೦೭

೧೬. ಚಕ್ಕರೆ ಶಿವಶಂಕರ್(ಸಂ), **ಸಹ್ಯಾದ್ರಿಯ ಸೂರ್ಯ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೦

೧೭. ಜಯಪ್ರಕಾಶ್ ಮಾವಿನಕುಳಿ, **ಸಮಹಿತ**, ಸ್ಫಟಿಕ ಪ್ರಕಾಶನ, ಕೋಡಂಗಲ್ಲು, ಮೂಡಬಿದಿರೆ, ೧೯೯೭

೧೮. ಜಯಪ್ರಕಾಶ್ ಮಾವಿನಕುಳಿ, **ಕಾರಂತ ಯುಗಾಂತ**, ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು, ೧೯೯೯

೧೯. ತಾರಿಣಿ ಶುಭದಾಯಿನಿ ಆರ್., **ಗಳಿಗೆ ಬಟ್ಟಲು**, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೨

೨೦. ತಾಳ್ತಜೆ ವಸಂತಕುಮಾರ, **ಶಿವರಾಮ ಕಾರಂತ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೭

೨೧. ದೇಜಗೌ, **ಕುವೆಂಪು ದರ್ಶನ**, ಸಂಪುಟ–೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೨೨. ನಾಗ ಐತಾಳ(ಸಂ), **ಕಾರಂತರ ಚಿಂತನ: ಕಡಲಾಚೆಯ ಕನ್ನಡಿಗರಿಂದ**, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೦

೨೩. ನಾಗಭೂಷಣ ಡಿ.ಎಸ್, **ಅನೇಕ**, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೫

೨೪. ನಾಗಭೂಷಣ ಡಿ.ಎಸ್., **ಗಮನ**, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ೧೯೯೦

೨೫. ನಾಗರತ್ನಕುಮಾರಿ ಬಿ.ಎಸ್.(ಸಂ), **ಸಾಹಿತ್ಯ ವಿಮರ್ಶೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮

೨೬. ನಾಗರಾಜ್ ಡಿ.ಆರ್., **ಸಾಹಿತ್ಯ ಕಥನ**, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೬

೨೭. ನಾಯಕ ಜಿ.ಎಚ್.(ಸಂ), **ಶತಮಾನದ ಕನ್ನಡ ಸಾಹಿತ್ಯ**, ಶ್ರೀರಾಘವೇಂದ್ರ ಪ್ರಕಾಶನ, ಅಂಕೋಲ, ೨೦೦೦

೨೮. ನಾಯಕ ಜಿ.ಎಚ್., **ಕೃತಿ ಸಾಕ್ಷಿ**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೯

೨೯. ನಾರಾಯಣ ಕೆ.ವಿ., **ಬೇರು ಕಾಂಡ ಚಿಗುರು**, ವಿವೇಕ ಪ್ರಕಾಶನ, ಬೆಂಗಳೂರು, ೧೯೯೭

೩೦. ಪೊಲೀಸ್ ಪಾಟೀಲ ಬಿ.ಆರ್., **ಉದಯರವಿ**, ಗೋದಾವರಿ ಪ್ರಕಾಶನ, ಬಾಗಲಕೋಟ ಜಿಲ್ಲೆ, ೨೦೦೪

೩೧. ಪ್ರಭಾವತಿ ಎಸ್.ವಿ., ಹಾಗೂ ಪುಷ್ಪ ಎಚ್.ಎಲ್., **ಅವಲೋಕನ**, ಸುಮುಖ ಪ್ರಕಾಶನ, ಬೆಂಗಳೂರು, ೨೦೦೫

೩೨. ಬಸವರಾಜ ಕಲ್ಗುಡಿ, **ನಕ್ಷೆ–ನಕ್ಷತ್ರ**, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೯೯

೩೩. ಬಸವರಾಜು ಎಲ್., **ಬಸವಣ್ಣನವರ ವಚನಗಳು**, ಗೀತಾಬುಕ್ ಹೌಸ್, ಮೈಸೂರು, ೨೦೧೨

೩೪. ಬೋರಲಿಂಗಯ್ಯ ಎನ್., **ಕನ್ನಡ ಸಾಹಿತ್ಯ ಸಂದರ್ಭ ಮತ್ತು ಕುವೆಂಪು**, ದಾರಿದೀಪ ಪ್ರಕಾಶನ, ೨೦೦೫

೩೫. ಭಂಡಾರಿ ಆರ್.ವಿ., **ಕುವೆಂಪು: ದೃಷ್ಟಿ-ಸೃಷ್ಟಿ**, ಸುಮುಖ ಪ್ರಕಾಶನ, ಬೆಂಗಳೂರು, ೨೦೧೧

೩೬. ಮರುಳಯ್ಯ ಸಾ.ಶಿ., **ಕುವೆಂಪು ಸ್ವಪ್ನಲೋಕ**, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೩

೩೭. ಮಾಧವ ಕುಲಕರ್ಣಿ, **ಕಾರಂತರ ಕಾದಂಬರಿಗಳು: ವಿಮರ್ಶೆ**, ತನುಮನು ಪ್ರಕಾಶನ, ಮೈಸೂರು, ೨೦೦೧

೩೮. ಮಾವಿನಕೆರೆ ರಂಗನಾಥನ್, **ಶ್ರೀನಿವಾಸ**, ಪುರೋಗಾಮಿ ಸಾಹಿತ್ಯ ಸಂಘ, ಬೆಂಗಳೂರು, ೧೯೭೨

೩೯. ಮಾಸ್ತಿ ವೆಂಕಟೇಶ ಅಯ್ಯಂಗಾರ್, **ಭಾವ ೧**, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್, ೧೯೬೮

೪೦. ಮಾಸ್ತಿ ವೆಂಕಟೇಶ ಅಯ್ಯಂಗಾರ್, **ಭಾವ ೨**, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್, ೧೯೬೯

೪೧. ಮಾಸ್ತಿ ವೆಂಕಟೇಶ ಅಯ್ಯಂಗಾರ್, **ಭಾವ ೩**, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್, ೧೯೬೯

೪೨. ಮೂರ್ತಿ ಡಿ.ವಿ.ಕೆ., **ಜೀವನ ಮೌಲ್ಯಗಳು ಮತ್ತು ಸಾಹಿತ್ಯ**, ಡಿವಿಕೆ ಮೂರ್ತಿ, ಮೈಸೂರು, ೧೯೯೫

೪೩. ಮೂರ್ತಿರಾವ್ ಎ.ಎನ್., **ಶ್ರೀಮಾಸ್ತಿಯವರ ಕಥೆಗಳು**, ಕಾವ್ಯಾಲಯ ಪ್ರಕಾಶಕರು, ಮೈಸೂರು, ೧೯೯೯

೪೪. ರಹಮತ್ ತರೀಕೆರೆ, **ಕತ್ತಿಯಂಚಿನ ದಾರಿ**, ಅಭಿನವ ಪ್ರಕಾಶನ, ಬೆಂಗಳೂರು, ೨೦೧೦

೪೫. ರಹಮತ್ ತರೀಕೆರೆ, **ಕನ್ನಡ ಸಾಹಿತ್ಯ ವಾಗ್ವಾದಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨

೪೬. ರಾಮಚಂದ್ರ ಎಮ್., **ಕನ್ನಡದ ಆಸ್ತಿ**, ಡಾ.ಮಾಸ್ತಿ ಅಯ್ಯಂಗಾರ್ ಶತಮಾನೋತ್ಸವ ಸಮಿತಿ, ಬೆಂಗಳೂರು, ೧೯೯೨

೪೭. ಲಕ್ಷ್ಮಣ ಕೊಡಸೆ(ಸಂ), **ಕನ್ನಡ ವಿಮರ್ಶಾ ವಿವೇಕ**, ಸುಮುಖ ಪ್ರಕಾಶನ, ಬೆಂಗಳೂರು, ೨೦೦೮

೪೮. ಲಕ್ಷ್ಮೀಪತಿ ಕೋಲಾರ, **ಕಾಲುದಾರಿ**, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೨೦೦೧

೪೯. ವಿವಿಧ ಲೇಖಕರು, **ಕಾದಂಬರಿ ಕಣ್ಣಲ್ಲಿ ಕಾರಂತರು**, ಪ್ರತಿಭಾ ಯುವವೇದಿಕೆ, ಬೆಂಗಳೂರು, ೧೯೯೨

೫೦. ವಿವೇಕ ರೈ ಬಿ.ಎ.(ಸಂ), **ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮಂಗಳೂರು ವಿಶ್ವವಿದ್ಯಾಲಯ, ಮಂಗಳ ಗಂಗೋತ್ರಿ, ೧೯೮೭

೫೧. ವಿವೇಕ ರೈ ಬಿ.ಎ.(ಸಂ), **ಶತಮಾನದ ಕೊನೆಯಲ್ಲಿ ಶಿವರಾಮ ಕಾರಂತ**, ಮಂಗಳೂರು ವಿಶ್ವವಿದ್ಯಾಲಯ, ಮಂಗಳ ಗಂಗೋತ್ರಿ, ೨೦೦೨

೫೨. ವಿಷ್ಣುನಾಯ್ಕ, **ಪ್ರಮಾಣ**, ಶ್ರೀರಾಘವೇಂದ್ರ ಪ್ರಕಾಶನ, ಅಂಕೋಲಾ, ೧೯೯೯

೫೩. ವೆಂಕಟಾಚಲ ಶಾಸ್ತ್ರಿ ಟಿ.ವಿ., **ವಿಮರ್ಶೆಯ ಮಾರ್ಗ**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೯೨

೫೪. ಶಾಮರಾಯ ತ.ಸು., **ಉದ್ಯೋಗಪರ್ವ ಸಂಗ್ರಹ**, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೨೦೦೮

೫೫. ಶಿವರುದ್ರಪ್ಪ ಜಿ.ಎಸ್.,(ಸಂ) **ಮಾಸ್ತಿಯವರ ಸಾಹಿತ್ಯ ಒಂದು ಅಧ್ಯಯನ**, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೬

೫೫. ಶೇಷಗಿರಿರಾವ್ ಎಸ್.ಎಲ್., **ಕನ್ನಡ ಭಾರತಿ**, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೪

೫೬. ಸುಮತೀಂದ್ರ ನಾಡಿಗ, **ವಿಮರ್ಶೆಯ ದಾರಿಯಲ್ಲಿ**, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೯೭

೫೭. ಸುಮತೀಂದ್ರ ನಾಡಿಗ, **ಮೂರು ಸಾಹಿತ್ಯ ಚರಿತ್ರೆಗಳು**, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೯

೫೮. ಸುಮಿತ್ರಾಬಾಯಿ ಕೆ.(ಸಂ), **ಕನ್ನಡ ಸಾಹಿತ್ಯ: ಕುವೆಂಪು ಸಂಸ್ಕೃತಿ ಚಿಂತನೆ**, ಸ್ವಾಯತ್ತ ಯುವರಾಜ ಕಾಲೇಜು, ಮೈಸೂರು, ೨೦೦೬

೫೯. ಸೋಮಶೇಖರಯ್ಯ ಸಿ., **ಕಾರಂತರ ಜೀವಂತ ಪಾತ್ರಗಳು**, ಅಭಿನವ ಪ್ರಕಾಶನ, ಬೆಂಗಳೂರು, ೨೦೧೧

೬೦. ಹರಿದಾಸ ಭಟ್ಟ ಕು.ಶಿ.,(ಸಂ) **ಕಾರಂತ ಪ್ರಪಂಚ**, ಗೀತಾ ಬುಕ್ ಹೌಸ್, ಮೈಸೂರು, ೧೯೬೯

ಇ. ಅಪ್ರಕಟಿತ ಸಂಶೋಧನ ಗ್ರಂಥಗಳು

೧. ಅಂಬಿಕಾದೇವಿ ಎನ್., **ಕುವೆಂಪು ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು**, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾದ ಎಂ.ಫಿಲ್. ಪ್ರಬಂಧ, ೨೦೦೮

೨. ಅಶೋಕ್ ಕುಮಾರ ರಂಜೇರೆ, **ಮಾಸ್ತಿಯವರ ಸಣ್ಣಕತೆಗಳು: ಸಾಂಸ್ಕೃತಿಕ ಅಧ್ಯಯನ**, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾದ ಎಂ.ಫಿಲ್. ಪ್ರಬಂಧ, ೧೯೯೪

೩. ಚಂದ್ರು ಎಲ್.ಜೆ., **ಕುವೆಂಪುರವರ ಮಲೆಗಳಲ್ಲಿ ಮದುಮಗಳು ಒಂದು ಅಧ್ಯಯನ**, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾದ ಎಂ.ಫಿಲ್. ಪ್ರಬಂಧ, ೨೦೦೭

೪. ಪುಷ್ಪಲತಾ ಕೆ.ಟಿ., **ರಾವಬಹದ್ದೂರ ಗ್ರಾಮಾಯಣ**, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾದ ಎಂ.ಫಿಲ್. ಪ್ರಬಂಧ, ೨೦೦೯

೫. ಭೋಗರಾಜು, **ಕುವೆಂಪು ಕೃತಿಗಳಲ್ಲಿ ಪರಂಪರೆ ಮತ್ತು ಆಧುನಿಕತೆ ಒಂದು ಅಧ್ಯಯನ**, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾದ ಪಿಎಚ್.ಡಿ. ಪ್ರಬಂಧ, ೨೦೦೨

೬. ಮಲ್ಲಿನಾಥ ಎಸ್.ತಳವಾರ, **ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ-ಪ್ರಪಂಚ**, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾದ ಪಿಎಚ್.ಡಿ. ಪ್ರಬಂಧ, ೨೦೦೯

೭. ಶೆಲ್ವಿ ಎಂ., **ಕುವೆಂಪು ಹಾಗೂ ಶಿವರಾಮ ಕಾರಂತರ ಕಾದಂಬರಿಗಳಲ್ಲಿ ವಸಾಹತು ಪ್ರಜ್ಞೆ ಮತ್ತು ಸ್ಥಳೀಯತೆ**, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾದ ಪಿಎಚ್.ಡಿ. ಪ್ರಬಂಧ, ೨೦೧೨

೮. ಹರೀಶ ಎಚ್.ಎಸ್., **ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ವೈಚಾರಿಕತೆ**, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾದ ಪಿಎಚ್.ಡಿ. ಪ್ರಬಂಧ, ೨೦೧೦

ಈ. ಪತ್ರಿಕೆಗಳು

೧. ವಿಜಯಾ(ಸಂ), **ಅಂಕಣ**, ಮಾಸ್ತಿ ವಿಶೇಷಾಂಕ, ವಿ.ಪಿ.ಗೆಳೆಯರ ಬಳಗ ಪ್ರಕಟಣೆ, ಸಂಪುಟ-೭,ಸಂಚಿಕೆ-೬, ಬೆಂಗಳೂರು, ಜುಲೈ-ಆಗಸ್ಟ್ ೧೯೮೬

ಉ. ಅಂತರ್ಜಾಲ ತಾಣಗಳು

1. www.andhrabharati.com/dictionary

2. www.baraha.com/kannada/index.php

3. www.Hindicube.com/dictionary.aspx

4. www.sanskritdictionary.com

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ